ಬುಡಕಟ್ಟು ಮತ್ತು ಅಭಿವೃದ್ಧಿ

(ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ)

ಸಮಾಜಶಾಸ್ತ್ರ ವಿಷಯದಲ್ಲಿ ಪಿ.ಹೆಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಸಂಶೋಧನಾ ಮಹಾಪ್ರಬಂಧ

ಸಂಶೋಧಕರು
ನಾಗೇಶ್ ವೈ.ಎನ್.

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಸಹ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೬

“ಬುಡಕಟ್ಟು ಮತ್ತು ಅಭಿವೃದ್ಧಿ”

(ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ)

ಸಮಾಜಶಾಸ್ತ್ರ ವಿಷಯದಲ್ಲಿ ಪಿ.ಹೆಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಸಂಶೋಧನಾ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ನಾಗೇಶ್ ವೈ.ಎನ್.

ಮಾರ್ಗದರ್ಶಕರು
ಡಾ. ಸಿದ್ದಗಂಗಮ್ಮ
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ನಾಗೇಶ್ ವೈ.ಎನ್. ಅವರು ಸಮಾಜಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಬುಡಕಟ್ಟು ಮತ್ತು ಅಭಿವೃದ್ಧಿ" (ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ)** ಎಂಬ ಸಮಾಜಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 05-12-2016
ಸ್ಥಳ : ವಿದ್ಯಾರಣ್ಯ

(ಡಾ. ಸಿದ್ದಗಂಗಮ್ಮ)
ಮಾರ್ಗದರ್ಶಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬.

ಸಂಶೋಧಕರ ಘೋಷಣಾ ಪತ್ರ

"ಬುಡಕಟ್ಟು ಮತ್ತು ಅಭಿವೃದ್ಧಿ" (ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ") ಎಂಬ ಸಮಾಜಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಸಿದ್ದಗಂಗಮ್ಮ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 05-12-2016
ಸ್ಥಳ : ವಿದ್ಯಾರಣ್ಯ

(ನಾಗೇಶ್ ವೈ.ಎಸ್.)
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ಭೂಪಟ

ಕೋಷ್ಟಕಗಳು

ಲಂಬ ಚಿತ್ರಗಳು

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಪೀಠಿಕೆ

೧.೨. ಬುಡಕಟ್ಟು ಎಂಬ ಪದದ ಅರ್ಥ ಮತ್ತು ವ್ಯಾಖ್ಯೆಗಳು

೧.೩. ಬುಡಕಟ್ಟು ಮತ್ತು ಅಭಿವೃದ್ಧಿ ಪರಿಕಲ್ಪನೆಗಳು

೧.೪. ಸಮಸ್ಯೀಕರಣ

೧.೫. ಅಧ್ಯಯನದ ಉದ್ದೇಶಗಳು

೧.೬. ಸಂಶೋಧನ ವೈಧಾನಿಕತೆ

೧.೭. ಅಧ್ಯಯನದ ಮಹತ್ವ

೧.೮. ಅಧ್ಯಯನದ ಇತಿಮಿತಿಗಳು

ಅಧ್ಯಾಯ ಒಂದು

ಪ್ರಸ್ತಾವನೆ

ಪೀಠಿಕೆ

ಜಗತ್ತಿನಲ್ಲಿ ಬುಡಕಟ್ಟು ಸಮೂಹಗಳು ಎಲ್ಲಾ ದೇಶಗಳಲ್ಲಿಯೂ ವಿಶಿಷ್ಟವಾದ ಜೀವನ ನಿರ್ವಹಿಸಿಕೊಂಡು ಬರುತಿದ್ದಾರೆ. ಜಗತ್ತಿನಲ್ಲಿ ಅತಿ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ರಾಷ್ಟ್ರವೆಂದರೆ ಆಫ್ರಿಕಾ. ಈ ದೇಶವನ್ನು ಹೊರತುಪಡಿಸಿದರೆ, ಅತೀ ಹೆಚ್ಚು ಬುಡಕಟ್ಟು ಸಮೂಹಗಳನ್ನು ಹೊಂದಿರುವ ರಾಷ್ಟ್ರವೆಂದರೆ ಭಾರತ. ಭಾರತದಲ್ಲಿ ಬುಡಕಟ್ಟು ಜನರನ್ನು ದೇಶದ ಮೂಲ ನಿವಾಸಿಗಳೆಂದು ಗುರುತಿಸಲಾಗಿದೆ. ಅವರು ಭಾರತದ ಉದ್ದಗಲಕ್ಕೂ ಎಲ್ಲಾ ರಾಜ್ಯಗಳಲ್ಲಿಯೂ ಕಂಡು ಬರುತ್ತಾರೆ. ಶತಶತಮಾನಗಳಿಂದಲೂ ಬುಡಕಟ್ಟು ಜನರು ನೈಸರ್ಗಿಕ ಪರಿಸರವನ್ನು ಆಧರಿಸಿದ ಸರಳ ಜೀವನ ವಿಧಾನವನ್ನು ರೂಪಿಸಿಕೊಂಡು ಬದುಕುತ್ತಿದ್ದಾರೆ ಮತ್ತು ಅವರ ಭೌತಿಕ–ಸಾಮಾಜಿಕ ಪರಿಸರಕ್ಕೆ ಅನುಗುಣವಾದ ಸಾಂಸ್ಕೃತಿಕ ಕ್ರಮವನ್ನು ನಿರೂಪಿಸಿಕೊಂಡಿದ್ದಾರೆ. ಬುಡಕಟ್ಟು ಜನರ ಜೀವನ ಮತ್ತು ಆರ್ಥಿಕತೆಯು ಪ್ರಾಚೀನ ಸ್ವರೂಪದ್ದಾಗಿದೆ. ಪ್ರಾಚೀನ ಕಾಲದ ಸಾಹಿತ್ಯಿಕ ಆಧಾರಗಳಲ್ಲಿ ಮತ್ತು ರಾಮಾಯಣ ಮಹಾಭಾರತಗಳಲ್ಲಿ ಬುಡಕಟ್ಟು ಸಮೂಹಗಳ ಉಲ್ಲೇಖಗಳಿವೆ. ಭಾರತದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆಯು ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇ. ೮.೮ರಷ್ಟಿದೆ.

'ಪರಿಶಿಷ್ಟ ಬುಡಕಟ್ಟು', ಬುಡಕಟ್ಟು ಸಮುದಾಯಗಳು ಎಂದರೆ, ಸಂಚಾರಿ ಜನಾಂಗ, ಅರಣ್ಯ ವಾಸಿಗಳು, ಅನಾಗರಿಕರು, ಗಿರಿಜನರು. ಆದಿವಾಸಿಗಳು ಮೂಲನಿವಾಸಿಗಳು ಎಂದು ಕರೆಯಲಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತದ ಸಂವಿಧಾನವು ಇವರನ್ನು ಪರಿಶಿಷ್ಟ ಪಂಗಡಗಳೆಂದು ಕರೆದು ಕಾನೂನಿನ ಬೆಂಬಲ ಮತ್ತು ಆಶ್ರಯವನ್ನು ನೀಡಿರುತ್ತದೆ. ಸಂವಿಧಾನದ ೩೪೨ನೇ ಕಲಂನ ಪ್ರಕಾರ ಭಾರತದ ರಾಷ್ಟ್ರಪತಿಗಳವರು ಸಂವಿಧಾನಾತ್ಮಕ ಸೌಲಭ್ಯಗಳಿಗಾಗಿ ಸೂಚಿಸಲ್ಪಟ್ಟ ಆದಿವಾಸಿ ಸಮುದಾಯಗಳು ಹಾಗೂ ಸಮುದಾಯದ ಉಪಪಂಗಡಗಳನ್ನು ಪರಿಶಿಷ್ಟ ಬುಡಕಟ್ಟುಗಳು

ಎಂದು ಕರೆದಿದ್ದಾರೆ. ಸಂವಿಧಾನ ಜಾರಿಗೆ ಬಂದ ನಂತರದ ದಿನಗಳಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಅಥವಾ ಸ್ಥಳೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಇಂತಹ ಯಾವುದಾದರೂ ಸೌಲಭ್ಯವಂಚಿತ ಸಮುದಾಯ ಅಥವಾ ಜನಾಂಗಗಳನ್ನು ಗುರುತಿಸಿ ಅವುಗಳನ್ನು ಸಂವಿಧಾನದ ಅನುಸೂಚಿತ ಪಟ್ಟಿಯಲ್ಲಿ ಸೇರಿಸಲು ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡಿದರೆ ರಾಷ್ಟ್ರಪತಿಗಳು ಸಂವಿಧಾನ ೩೪೨ನೇ ಕಲಂನ ಪ್ರಕಾರ ತಮ್ಮ ಅಧಿಕಾರವನ್ನು ಚಲಾಯಿಸಿ ಅನುಸೂಚಿತ ಪಟ್ಟಿಗೆ ಸೇರಿಸುತ್ತಾರೆ. ಅಂತಹ ಸಮುದಾಯಗಳನ್ನೂ ಪರಿಶಿಷ್ಟ ಬುಡಕಟ್ಟು ಎಂದು ಕರೆಯಲಾಗುತ್ತದೆ. ಇದೇ ರೀತಿ ಅನುಸೂಚಿತ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿದ ಕರ್ನಾಟಕದ ೫೦ನೇ ಪರಿಶಿಷ್ಟ ಬುಡಕಟ್ಟೇ ಸಿದ್ದಿ ಜನಾಂಗೀಯ ಸಮೂಹ.

ಭಾರತದಲ್ಲಿ ಬುಡಕಟ್ಟುಗಳನ್ನು ಅವರು ನೆಲೆಸಿರುವ ಭೌಗೋಳಿಕ ಪ್ರದೇಶಗಳ ಆಧಾರದ ಮೇಲೆ ನಾಲ್ಕು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ–

೧. **ಈಶಾನ್ಯ ಭಾರತ–** ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ತ್ರಿಪುರ ಮತ್ತು ಮೇಘಾಲಯ.

೨. **ಪೂರ್ವ ಭಾರತ–** ಪಶ್ಚಿಮ ಬಂಗಾಳ, ಬಿಹಾರ ಮತ್ತು ಒಡಿಸ್ಸಾ.

೩. **ಮಧ್ಯ ಮತ್ತು ಪಶ್ಚಿಮ ಭಾರತ–** ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರದ ಕೆಲವು ಭಾಗಗಳು ಮತ್ತು ಆಂದ್ರಪ್ರದೇಶದ ಉತ್ತರಭಾಗ.

೪. **ದಕ್ಷಿಣ ಭಾರತ–** ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಆಂದ್ರಪ್ರದೇಶ.

"ಕರ್ನಾಟಕದಲ್ಲಿಯೂ ಬುಡಕಟ್ಟುಗಳ ಅಸ್ತಿತ್ವವು ಎಲ್ಲಾ ಜಿಲ್ಲೆಗಳಲ್ಲಿಯೂ ಕಂಡುಬರುತ್ತದೆ. ರಾಜ್ಯದಲ್ಲಿ ಬುಡಕಟ್ಟುಗಳ ಜನಸಂಖ್ಯೆಯು ೧೯೯೧ರಲ್ಲಿ ೧೯.೧೬ ಲಕ್ಷ ಜನಸಂಖ್ಯೆಯಿದ್ದು, ೨೦೦೧ರಲ್ಲಿ ಅವರ ಪ್ರಮಾಣ ೩೪.೬೪ ಲಕ್ಷಕ್ಕೆ ಏರಿಕೆಯಾಗಿದೆ. ಕರ್ನಾಟಕದಲ್ಲಿ ಹತ್ತು ವರ್ಷಗಳಲ್ಲಿ ಶೇ. ೮೦.೬ ಪ್ರಮಾಣದಲ್ಲಿ ಅವರ ಸಂಖ್ಯೆ ಹೆಚ್ಚಾಗಿದೆ."[೧] ಆದರೆ ಈ ಹೆಚ್ಚಳವು ಅವರ ಜನನ ಪ್ರಮಾಣದಿಂದಾದ ಹೆಚ್ಚಳವಲ್ಲ. ಬುಡಕಟ್ಟು ಜನಸಂಖ್ಯೆಯ ಬೆಳವಣಿಗೆ ದರದ ಹೆಚ್ಚಳವು ಇತರ ಸಮುದಾಯಗಳನ್ನು ಸಂವಿಧಾನದ ೩೪೨ನೇ ವಿಧಿಯ ಪ್ರಕಾರ ಬುಡಕಟ್ಟುಗಳ ಪಟ್ಟಿಗೆ ಸೇರಿಸಿರುವುದರಿಂದ ಈ ಪ್ರಮಾಣದಲ್ಲಿ ಹೆಚ್ಚಾಗಿದೆ.

ಅಭಿವೃದ್ಧಿಯ ವಿಷಯದಲ್ಲಿ ತಲೆಕೆಡಿಸಿಕೊಳ್ಳದೆ, ಸ್ವಯಂ ಪರಿಪೂರ್ಣ ಮತ್ತು ಪರಿಸರಸ್ನೇಹಿ ಜೀವನ ವಿಧಾನವನ್ನು ರೂಢಿಸಿಕೊಂಡು, ಸಾಂಸ್ಕೃತಿಕವಾಗಿ ವಿಶಿಷ್ಟ ಜೀವನ ನಡೆಸುತ್ತಿರುವ ಬುಡಕಟ್ಟುಗಳು ಜಗತ್ತಿನ ಎಲ್ಲಾ ಕಡೆಗಳಲ್ಲಿರುವಂತೆ ಕರ್ನಾಟಕದಲ್ಲಿಯೂ ಇವೆ. ಪ್ರಸ್ತುತ ಅಧ್ಯಯನವು**'ಬುಡಕಟ್ಟು ಮತ್ತು ಅಭಿವೃದ್ಧಿ'** ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗೀಯ ಬುಡಕಟ್ಟು ಸಮುದಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಈ ಸಮುದಾಯವು ಹೇಗೆ ಅಭಿವೃದ್ಧಿ ಹೊಂದುತ್ತಿದೆ

ಎನ್ನುವುದನ್ನು ಅರ್ಥಮಾಡಿಕೊಳ್ಳುವನಿಟ್ಟಿನಲ್ಲಿ ಕೇಂದ್ರೀಕೃತವಾಗಿದೆ. ಹಾಗೆಯೇ ಸಿದ್ದಿಯರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಉಂಟಾದ ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ಪರಿವರ್ತನೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಪೋರ್ಚುಗೀಸರು, ಡಚ್ಚರು ಮತ್ತು ಅರಬ್ಬರು, ಆಫ್ರಿಕಾದಿಂದ ಹಡಗಿನ ಮೂಲಕಭಾರತಕ್ಕೆ ಬಂದು, ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿ ಮಾರಾಟ ಮಾಡಿ ಗುಲಾಮರನ್ನಾಗಿಸಿಕೊಂಡ ಜನಾಂಗವೇ ಸಿದ್ದಿಗಳು. ಭಾರತಕ್ಕೆ ಬಂದ ನಂತರ ವ್ಯಾಪಾರಸ್ಥರು, ಜಮೀನುದಾರರು, ಆಡಳಿತಗಾರರು ಹೀಗೆ ಎಲ್ಲರಿಂದಲೂ ತುಳಿತಕ್ಕೆ ಒಳಗಾಗಿ, ದಾರುಣ ಸ್ಥಿತಿಯಲ್ಲಿ ಗೋವಾ, ಕರ್ನಾಟಕ, ಅಹಮ್ಮದ್‌ನಗರ ಮುಂತಾದ ಪ್ರದೇಶಗಳಲ್ಲಿ ಸಿದ್ದಿ ಜನರು ವಾಸಿಸುತ್ತಿದ್ದುದು ಕಂಡಬಂದಿದೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ೧೧ ತಾಲೂಕುಗಳಲ್ಲಿ ಮತ್ತು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕು ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕುಗಳಲ್ಲಿ ಸಿದ್ದಿ ಜನರು ಇಂದು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿದ್ದಾರೆ.

ಸಿದ್ದಿ ಜನಾಂಗದವರನ್ನು ಇತರ ಬುಡಕಟ್ಟು ಜನಾಂಗದವರೊಂದಿಗೆ ಹೋಲಿಸಿದರೆ ಇವರು ತಮ್ಮ ಕಾಲ ಮೇಲೆ ತಾವು ನಿಂತವರಲ್ಲ. ಒಬ್ಬರಿಂದ ಒಬ್ಬರಿಗೆ ಸರಕಿನಂತೆ ಮಾರಾಟವಾಗುತ್ತಾ ಕೇವಲ ಗುಲಾಮರಾಗಿ ಬದುಕಿದ ಇವರ ಹಿರಿಯರು ಇವರಿಗಾಗಿ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇದೀಗ ಕೂಲಿಯನ್ನಾದರೂ ಮಾಡಿ ಸ್ವತಂತ್ರ ಜೀವನ ನಡೆಸಿಕೊಂಡು, ನಾನು ನನ್ನ ಸಂಸಾರ ಎಂಬ ತೃಪ್ತಿಯಲ್ಲಾದರೂ ಇರುವ ಇಂದಿನ ಈ ಬದುಕೇ ಅವರ ಸುಸ್ಥಿತಿ ಎಂದು ಗುರುತಿಸಬಹುದು. ೨೦೦೩ರಲ್ಲಿ ಸಂವಿಧಾನದ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಲ್ಪಟ್ಟ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳ ಸಾಮಾಜಿಕ ಮತ್ತು ಆರ್ಥಿಕ ಬದುಕು ಪರಿವರ್ತನೆಯ ಹಾದಿಯಲ್ಲಿ ಸಾಗುತ್ತಿದೆಯೇ ಮತ್ತು ಅಭಿವೃದ್ಧಿಗೆ ಅಭಿಮುಖವಾಗಿ ಸಾಗುತ್ತಿದೆಯೇ ಎನ್ನುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಹವ್ಯಕ ಬ್ರಾಹ್ಮಣರು, ಹಸಲರು, ಗೌಳಿಗರು, ಗೊಂಡರು, ಕುಣಿಬಿಯವರು, ಕರಿವಕ್ಕಲಿಗರು, ಕುಮ್ರಿಗಳು, ಮರಾಠಿಗಳು ಮುಂತಾದ ಜನಾಂಗಗಳು ಇವೆ. ಈ ಜನಾಂಗಗಳಲ್ಲಿ ಸಂವಿಧಾನದ ೩೪೨ನೇ ವಿಧಿಯ ಪ್ರಕಾರ 'ಪರಿಶಿಷ್ಟ ಬುಡಕಟ್ಟು'ಗಳ ಪಟ್ಟಿಗೆ ಸೇರಿದ ೫೦ನೇ ಬುಡಕಟ್ಟು ಸಿದ್ದಿ ಜನಾಂಗದವರು.

ಸಿದ್ದಿಗಳು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಅಂಕೋಲ, ಹಳಿಯಾಳ, ಸೂಪ, ಮುಂಡಗೋಡು ಮುಂತಾದೆಡೆ ವಾಸವಾಗಿದ್ದು, ಸಾಮಾಜಿಕ, ಆರ್ಥಿಕ ಮತ್ತು ಜನಾಂಗೀಯ ಪ್ರತ್ಯೇಕತೆ ಭಾವನೆಯಿಂದ ಜೀವಿಸುತ್ತಿದ್ದಾರೆ. ಇದುವರೆಗೆ ಸಿದ್ದಿಗಳ ಬಗ್ಗೆ ಆಗಿರುವ ಸಂಶೋಧನೆಗಳು ಅವರ ಸಂಸ್ಕೃತಿ, ಭಾಷೆ ಮತ್ತು ಅವರ ಮೂಲಗಳ ಬಗೆಗಿನ ಅಧ್ಯಯನಕ್ಕೆ ಸೀಮಿತವಾಗಿವೆ. ಇನ್ನುಳಿದ ಕೆಲವು ಅಧ್ಯಯನಗಳು ಸರ್ಕಾರ ವಿವಿಧ ಯೋಜನೆಗಳ ಅವಧಿಯಲ್ಲಿ ಅನುಷ್ಠಾನ

ಗೊಳಿಸಿದ ಅಭಿವೃದ್ಧಿ ಕಾರ್ಯಗಳ ವಿಶ್ಲೇಷಣೆಗೆ ಮಾತ್ರವೇ ಸೀಮಿತವಾಗಿವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ, ವಿಶೇಷವಾಗಿ, ಸಿದ್ದಿಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಲ್ಲಾಗಿರುವ ಪರಿವರ್ತನೆಗಳು ಮತ್ತು ಅದಕ್ಕೆ ಕಾರಣವಾದ ಅಂಶಗಳ ಬಗ್ಗೆ ಗಮನಹರಿಸಲಾಗಿದೆ.

ಬುಡಕಟ್ಟುಗಳು ಅವರ ಹೆಸರೇ ಸೂಚಿಸಿರುವಂತೆ ಅವರು ಆದಿವಾಸಿಗಳು ಮತ್ತು ಮೂಲನಿವಾಸಿಗಳು. ಇತಿಹಾಸ ಪೂರ್ವ ಕಾಲದಿಂದಲೂ ಭಾರತ ಉಪಖಂಡದಲ್ಲಿ ಬುಡಕಟ್ಟುಗಳ ವಾಸಸ್ಥಾನಗಳನ್ನು ನಾವು ಕಾಣಬಹುದು. ಬಹುಶ ಪ್ರಬಲ ಮತ್ತು ಆಕ್ರಮಣಶೀಲ ನಿವಾಸಿಗಳಿಂದ ಈ ಜನರು ಅರಣ್ಯಕ್ಕೆ ತಳ್ಳಲ್ಪಟ್ಟಿರಬಹುದಾದ ಸಾಧ್ಯತೆಗಳಿವೆ. ಅಂತೆಯೇ ಸಿದ್ದಿಗಳನ್ನು ಪೋರ್ಚುಗೀಸರು ಮತ್ತು ಅರಬ್ಬರು ಸಾಮಾಜಿಕವಾಗಿ ಮೂಲೆಗುಂಪುಮಾಡಿ ಪರವಶ ಮಾಡಿ ಕೊಂಡು ಗುಲಾಮರನ್ನಾಗಿ ಮಾಡಿ ನರಕಕ್ಕೆ ತಳ್ಳಿದ್ದಾರೆ ಎಂದೂ ತಿಳಿದುಬರುತ್ತದೆ.

ಒಳಪಂಗಡ ವಿವಾಹ, ಉದ್ಯೋಗ ಕ್ರಮ, ಬೇಟೆ ಮತ್ತು ಆಹಾರ ಸಂಗ್ರಹಣಾ ಕ್ರಮಗಳ ಮೂಲಕ ತಮ್ಮ ವಿಶಿಷ್ಟ ಚಹರೆ ಮತ್ತು ಸಂಸ್ಕೃತಿಯನ್ನು ಸಿದ್ದಿಗಳಲ್ಲಿ ನಾವು ಕಾಣಬಹುದು. ಈ ಎಲ್ಲಾ ವಿಷಯಗಳ ಬಗೆಗೆ ಮತ್ತು ತಾವು ವಾಸಿಸುತ್ತಿರುವ ಪ್ರದೇಶದ ಸುತ್ತಲು ಇರುವ ಅರಣ್ಯದೊಂದಿಗೆ ಗಾಢವಾದ ಮತ್ತು ವೈಯುಕ್ತಿಕವಾಗಿ ಹೊಂದಿರುವ ಸಂಬಂಧಗಳ ಬಗೆಗೆ ಹಾಗೂ ಸರ್ಕಾರದ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಹೇಗೆ ಅವರ ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ಅಭಿವೃದ್ಧಿಯಾಗುತ್ತಿದೆ ಎನ್ನುವುದರ ಮೇಲೆ ಬೆಳಕು ಚೆಲ್ಲುವುದೇ ಈ ಸಂಶೋಧನ ಅಧ್ಯಯನದ ಮುಖ್ಯ ಧ್ಯೇಯವಾಗಿದೆ. ಏಕೆಂದರೆ ಪ್ರಪಂಚದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅಗ್ರಮಾನ್ಯ ಸ್ಥಾನದಲ್ಲಿರುವ ಭಾರತ ಸರ್ಕಾರದ ಪ್ರಮುಖ ಆಶಯವೆಂದರೆ ದೇಶದ ಉದ್ದಗಲಕ್ಕೂ ವಾಸಿಸುತ್ತಿರುವ ಎಲ್ಲಾ ಜನರೂ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲವನ್ನು ಪಡೆದುಕೊಳ್ಳುವಂತೆ ಮಾಡುವುದಾಗಿದೆ.

ಸ್ವಾತಂತ್ರ್ಯಾನಂತರ ಬುಡಕಟ್ಟುಗಳ ಸರ್ವಾಂಗೀಣ ಅಭಿವೃದ್ಧಿಯ ಹೆಸರಿನಲ್ಲಿ ಸರಕಾರಗಳು ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡಿದ್ದರೂ, ಅವರ ಜೀವನದ ಸ್ಥಿತಿಗತಿಗಳು ನಿರೀಕ್ಷಿತ ಮಟ್ಟದ ಉತ್ತಮ ಸ್ಥಿತಿಗೆ ಇನ್ನೂ ತಲುಪಿಲ್ಲ. ಆದ್ದರಿಂದ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ವೈಫಲ್ಯಕ್ಕೆ ಕಾರಣಗಳನ್ನು ತಿಳಿದುಕೊಳ್ಳಲು ಈ ಅಧ್ಯಯನ ಸಹಕಾರಿಯಾಗಿದೆ. ಸಿದ್ದಿ ಬುಡಕಟ್ಟು ಗುಲಾಮತನದಿಂದ ಇತ್ತೀಚೆಗೆ ಸ್ವಾತಂತ್ರ್ಯದ ಬದುಕನ್ನು ಪ್ರಾರಂಭಿಸಿರುವುದರಿಂದ, ಆಧುನೀಕರಣಕ್ಕೆ ಹೇಗೆ ಸ್ಪಂದಿಸುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲೂ ಈ ಅಧ್ಯಯನ ಅನುಕೂಲವಾಗಿದೆ. ಸ್ಥಳೀಯ ಸಾಮಾಜಿಕ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಸಿದ್ದಿಗಳಂತಹ ಇತರ ಸಣ್ಣ ಸಣ್ಣ ಬುಡಕಟ್ಟುಗಳ ಸ್ಥಾನಮಾನವನ್ನು ತಿಳಿದುಕೊಳ್ಳಲು ಮತ್ತು ಆಧುನಿಕ ಶಿಕ್ಷಣ ಮತ್ತು ಮಹಿಳಾ ಸಬಲೀಕರಣ ಪ್ರಕ್ರಿಯೆಗಳ ಪ್ರಯೋಜನಗಳಿಂದ ಬುಡಕಟ್ಟು ಮಹಿಳೆಯರ ಸ್ಥಾನಮಾನಗಳನ್ನು ಅರ್ಥಮಾಡಿ ಕೊಳ್ಳಲು ಇದು ಸಹಕಾರಿಯಾಗಿದೆ. ಅಲ್ಲದೇ ಭೂಸುಧಾರಣೆಯಂತಹ ಕಾರ್ಯಕ್ರಮಗಳಿಂದ ಬುಡಕಟ್ಟು ಜನರ ಜೀವನದಲ್ಲಾಗುತ್ತಿರುವ ಆರ್ಥಿಕ ಪರಿವರ್ತನೆಗಳನ್ನು ವಿಶ್ಲೇಷಣೆ ಮಾಡಲು

ಈ ಅಧ್ಯಯನದಿಂದ ಅನುಕೂಲವಾಗಿದೆ. ಬುಡಕಟ್ಟುಗಳು ಆಧುನಿಕ ಅಭಿವೃದ್ಧಿ ಕಾರ್ಯಕ್ರಮಗಳ ನಕಾರಾತ್ಮಕ ದುಷ್ಪರಿಣಾಮಗಳಿಂದ ನಲುಗಿದ್ದರೂ, ತಮ್ಮ ಚಹರೆಯನ್ನು ಉಳಿಸಿಕೊಂಡು ಸಹಜವಾಗಿ ಹೇಗೆ ಸಾಮಾಜಿಕ-ಆರ್ಥಿಕ ಪರಿವರ್ತನಾ ಪ್ರಕ್ರಿಯೆಯಲ್ಲಿ ಭಾಗಿಗಳಾಗಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಲಾಗಿದೆ. ಒಟ್ಟಾರೆ ಭಾರತದಂತಹ ಬಹುಸಂಸ್ಕೃತಿ, ಬಹುಭಾಷಾ ಮತ್ತು ಬಹು ಧರ್ಮೀಯ ಜನಾಂಗಳಿರುವ ರಾಷ್ಟ್ರದಲ್ಲಿ ಬುಡಕಟ್ಟು ಉಪಯೋಜನೆಗಳ ಪ್ರಯೋಜನಗಳನ್ನು ಪ್ರತಿಯೊಂದು ಬುಡಕಟ್ಟಿಗೂ ತಲುಪಿಸಬೇಕಾದ ಅಗತ್ಯತೆಯನ್ನು ತಾತ್ವಿಕವಾಗಿ ಯೋಚಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಈ ಅಧ್ಯಯನದ ಫಲಿತಗಳು ಮುಂದಿನ ಸಂಶೋಧಕರಿಗೆ, ಶೈಕ್ಷಣಿಕ ತಜ್ಞರಿಗೆ, ಆಡಳಿತಗಾರರಿಗೆ ಮತ್ತು ಬುಡಕಟ್ಟು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವವರಿಗೆ ದಿಕ್ಸೂಚಿಯಾಗುವಲ್ಲಿ ಸಹಕಾರಿಯಾಗಬಲ್ಲುದು.

೧.೨. ಬುಡಕಟ್ಟು ಎಂಬ ಪದದ ಅರ್ಥ ಮತ್ತು ವ್ಯಾಖ್ಯೆಗಳು

ಅರ್ಥ: ಮೇತ್ರಿ ಕೆ.ಎಂ. (೨೦೦೬), ಅವರು **"ಬುಡಕಟ್ಟು ನ್ಯಾಯ ವ್ಯವಸ್ಥೆ"** ಎಂಬ ಲೇಖನದಲ್ಲಿ 'ಬುಡಕಟ್ಟು' ಎಂಬ ಪದಕ್ಕೆ ಅರ್ಥ ವಿವರಣೆ ಕೊಡುವುದು ಅಷ್ಟು ಸುಲಭವಲ್ಲ. ಈ ಪದವನ್ನು ಜೀವವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಇತಿಹಾಸ ಕಾರರು ನಾನಾ ಅರ್ಥದಲ್ಲಿ ಬಳಸಿದ್ದಾರೆ. **ಕಿಟೆಲ್ಲರು** ತಮ್ಮ ಅರ್ಥಕೋಶದಲ್ಲಿ 'ಬುಡಕಟ್ಟು' ಎಂಬ ಶಬ್ದಕ್ಕೆ 'ಕುಟುಂಬ' ಹಾಗೂ 'ಕುಲ' ಎಂಬ ಅರ್ಥವನ್ನು ನೀಡಿದ್ದಾರೆ. ಬುಡಕಟ್ಟು ಎಂಬ ಪದವು ಆಂಗ್ಲ ಭಾಷೆಯ 'ಟ್ರೈಬ್' ಎಂಬ ಪದಕ್ಕೆ ಸಮಾನಾರ್ಥಕಪದವಾಗಿ ಬಳಸಲಾಗುತ್ತಿದೆ. ಇದು ಲ್ಯಾಟಿನ್ ಭಾಷೆಯ 'ಟ್ರೈಬಸ್' ಎಂಬ ಪದದಿಂದ ಉಗಮಗೊಂಡಿದೆ. ಗ್ರೀಸ್ ಮತ್ತು ರೋಮನ್ ಲೇಖಕರು ಲ್ಯಾಟಿಯಂ ಜಿಲ್ಲೆಯಲ್ಲಿ ನೆಲೆಸಿದ ಬುಡಕಟ್ಟಿನವರಿಗೆ ಪ್ರಥಮವಾಗಿ ಟ್ರೈಬ್ ಎಂಬ ಪದವನ್ನು ಬಳಸಿರುವುದು ಗೊತ್ತಾಗುತ್ತದೆ. ಸಮಾಜ ರಚನೆಯ ಮೂಲಕ್ಕೆ ಕುಟುಂಬ ಹಾಗೂ ರಕ್ತಸಂಬಂಧೀಯ ಕುಲಗಳು ಆಧಾರಸ್ತಂಭಗಳಾಗಿರುವುದರಿಂದ ಕುಟುಂಬ ಹಾಗೂ ರಕ್ತಸಂಬಂಧ ಹೊಂದಿದ ಕುಲಗಳ ಕೂಟಕ್ಕೆ ಕನ್ನಡದಲ್ಲಿ 'ಬುಡಕಟ್ಟು' ಎಂಬ ಪದ ಬಳಸುವುದು ಸಮಂಜಸವಾಗಿದೆ[೨] ಎಂದಿದ್ದಾರೆ.

ವ್ಯಾಖ್ಯೆಗಳು: ಬುಡಕಟ್ಟು ಪದದ ಅರ್ಥ ಮತ್ತು ಅದರ ವಿಸ್ತರಿತ ಅಂಶಗಳ ಬಗೆಗೆ ಬೆಳಕು ಚೆಲ್ಲುವ ಹಾಗೂ ಈ ಸಮುದಾಯವನ್ನು ಹೆಚ್ಚು ಆಳವಾಗಿ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಸಹಕರಿಸುವ ಪ್ರಮುಖ ವ್ಯಾಖ್ಯೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಎಲ್.ಪಿ. ವಿಧ್ಯಾರ್ಥಿ (೧೯೭೦) ಅವರು ಪ್ರಸ್ತಾಪಿಸುವಂತೆ' ಬುಡಕಟ್ಟು ಸಮುದಾಯ ಎಂಬುದು ಒಂದು ಸಾಮಾಜಿಕ ಸಮೂಹವಾಗಿದ್ದು, ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತ, ಸಾಮಾನ್ಯ ಹೆಸರು, ಸಾಮಾನ್ಯ ಸಂಸ್ಕೃತಿ, ಒಳ ಪಂಗಡ ಸಮೂಹ ವರ್ತನೆಗಳು, ಸಾಮಾನ್ಯ ನಿಯಂತ್ರಕಗಳು, ವಿಶಿಷ್ಟವಾದ ಸಾಮಾಜಿಕ ರಾಜಕೀಯ, ವ್ಯವಸ್ಥೆಗಳ ಅಸ್ತಿತ್ವ, ಸಮೂಹದ ನಾಯಕರುಗಳಲ್ಲಿ ಸಂಪೂರ್ಣ ನಂಬಿಕೆ ಮತ್ತು ವಿಶಿಷ್ಟವಾದ ತಮ್ಮ ಸ್ವಯಂ ಪರಿಪೂರ್ಣ ಆರ್ಥಿಕತೆಯನ್ನು ಹೊಂದಿರುತ್ತದೆ'[೩] ಎನ್ನುತ್ತಾರೆ.

ಪಿ. ಜಿ.ಕೃಷ್ಣನ್ (೧೯೮೫) ಅವರ ಪ್ರಕಾರ ‘ಬುಡಕಟ್ಟು ಸಮುದಾಯವೆಂದರೆ ಸರಳವಾದ ಮತ್ತು ಕ್ರಮಬದ್ಧವಾದ ಸಮೂಹವಾಗಿದ್ದು, ಸಮೂಹದ ಸದಸ್ಯರು ಸಾಮಾನ್ಯ ಭಾಷೆಯನ್ನು ಮಾತನಾಡುತ್ತ, ಸಾಮಾನ್ಯ ಉದ್ದೇಶಗಳಿಗೋಸ್ಕರ ಒಟ್ಟಾಗಿ ಕೂಡಿ ಕಾರ್ಯ ನಿರ್ವಹಿಸುವ ಒಂದು ಸರ್ಕಾರಿ ಸ್ವರೂಪದ ವ್ಯವಸ್ಥೆಯನ್ನು ಹೊಂದಿದ ಮತ್ತು ಒಂದೇ ಹೆಸರನ್ನು ಹೊಂದಿದ ಒಂದೇ ಭೌಗೋಳಿಕ ನೆಲೆಯಲ್ಲಿ ವಾಸಿಸುತ್ತಾ ಏಕರೂಪದ ಸಂಸ್ಕೃತಿ ಮತ್ತು ಜೀವನ ವಿಧಾನಗಳೊಂದಿಗೆ ಒಂದೇ ವಂಶಾವಳಿಯ ಸಂಪ್ರದಾಯಗಳನ್ನು ಹೊಂದಿರುವ ಸಮುದಾಯ’[೪] ಎಂದಿದ್ದಾರೆ.

ವಿ.ಬಿ. ಬರ್ಧನ್ (೧೯೭೩) ಹೇಳುವಂತೆ ‘ಬುಡಕಟ್ಟು ಸಮುದಾಯವೆಂದರೆ ಅಭಿವೃದ್ಧಿಯ ನಿರ್ಧಿಷ್ಟ ಕಾಲಘಟ್ಟದಲ್ಲಿನ ಸಾಮಾಜಿಕ ಸಾಂಸ್ಕೃತಿಕ ಘಟಕವಾಗಿದ್ದು, ಒಂದು ಸಾಂಸ್ಕೃತಿಕ ಮತ್ತು ಮಾನಸಿಕ ಅಂಶಗಳೊಂದಿಗಿನ ಒಳಪಂಗಡ ಸಮೂಹವಾಗಿದೆ.’[೫]

ಡಿ.ಎನ್. ಮಜುಂದಾರ್ (೧೯೪೪) ವಿವರಿಸುವಂತೆ ‘ಬುಡಕಟ್ಟು ಸಮುದಾಯ ಎಂದರೆ ಒಂದು ಸಾಮಾನ್ಯ ಹೆಸರನ್ನು ಹೊಂದಿ, ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದಲ್ಲಿದ್ದು, ಒಂದು ಭಾಷೆಯನ್ನು ಮಾತನಾಡುತ್ತ, ವಿವಾಹ ಮತ್ತು ಉದ್ಯೋಗ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಧಿಷ್ಟ ವಿಧಿ ನಿಷೇಧಗಳನ್ನು ಆಚರಿಸುತ್ತಿದ್ದು, ಅತ್ಯುತ್ತಮವಾದ ಕೊಡು–ತೆಗೆದುಕೊಳ್ಳುವ ಮತ್ತು ಪರಸ್ಪರ ಹೊಣೆಗಾರಿಕೆಗಳನ್ನು ಹೊಂದಿರುವ ಹಲವು ಕುಟುಂಬಗಳ ಅಥವಾ ಸಾಮಾನ್ಯ ಸಮುದಾಯಗಳ ಸಂಗ್ರಹವಾಗಿರುತ್ತದೆ.’[೬]

ಶಂಕರರಾವ್ ಚ.ನ. (೨೦೦೫) ಅವರು **“ಭಾರತೀಯ ಸಮಾಜ”(ಸಂರಚನೆ ಮತ್ತು ಪರಿವರ್ತನೆ)** ಎಂಬ ಪುಸ್ತಕದಲ್ಲಿ ಉಲ್ಲೇಖಿಸಿರುವಂತೆ ವಿವಿಧ ಲೇಖಕರು ಮತ್ತು ವಿದ್ವಾಂಸರು ಬುಡಕಟ್ಟು ಸಮುದಾಯ ಎಂಬ ಪದವನ್ನು ವಿಭಿನ್ನ ಅರ್ಥ ಮತ್ತು ರೂಪಗಳಲ್ಲಿ ಬಳಸಿದ್ದಾರೆ. **ಜಿ.ಎಸ್. ಘುರ್ಯೆ ಯವರು,** ‘ಹಿಂದುಳಿದ ಹಿಂದೂಗಳೆಂದು’, ದಾಸ್ ಮತ್ತು ದಾಸ್ ಅವರ ಪ್ರಕಾರ ‘ಸಂತ್ರಸ್ಥ ಮಾನವರೆಂದು’, ಮಹಾತ್ಮ ಗಾಂಧಿಜಿಯವರು ಹೇಳುವಂತೆ ‘ಗಿರಿಜನರು’ ಇತ್ಯಾದಿಯಾಗಿ ಈ ಸಮುದಾಯವನ್ನು ಗುರುತಿಸಿದ್ದಾರೆ. ಅಲ್ಲದೇ ಇವರನ್ನು ಅಬಾರಿಜಿನಲ್ಸ್, ಪ್ರಿಮಿಟಿವ್ ಟ್ರೈಬ್ಸ್, ಆದಿವಾಸಿಗಳು, ವನ್ಯಜಾತಿ ವನವಾಸಿ, ಆದಿಮ ಜಾತಿ, ಇತ್ಯಾದಿ ಹೆಸರುಗಳಿಂದಲೂ ಕರೆಯುತ್ತಾರೆ. ವೇದಗಳು, ಪುರಾಣಗಳು, ರಾಮಾಯಣ, ಮಹಾಭಾರತಗಳಂತಹ ಪ್ರಾಚೀನ ಭಾರತದ ಸಾಹಿತ್ಯಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ನಿಷಾದರು, ಆಭಾರರು, ಧಸ್ಯುಗಳು, ಎಂದು ಕರೆದಿರುವ ಉಲ್ಲೇಖಗಳಿವೆ.[೭]

ಬುಡಕಟ್ಟು ಎಂಬ ಪದವು ಭಾರತದ ಸಂವಿಧಾನದಲ್ಲಿ ಎಲ್ಲಿಯೂ ಸ್ಪಷ್ಟವಾಗಿ ವ್ಯಾಖ್ಯಾನ ಕ್ಕೊಳಪಟ್ಟಿಲ್ಲ. ಬುಡಕಟ್ಟು ಅಥವಾ ಬುಡಕಟ್ಟು ಸಮುದಾಯಗಳ ಭಾಗಗಳಾಗಿ ಪರಿಶಿಷ್ಟ ಬುಡಕಟ್ಟುಗಳು ಎಂಬ ಪದವನ್ನು ಸಂವಿಧಾನದಲ್ಲಿ ಬಳಸಲಾಗಿದೆ.

೧.೩. ಬುಡಕಟ್ಟು ಮತ್ತು ಅಭಿವೃದ್ಧಿ ಪರಿಕಲ್ಪನೆಗಳು

ಟ್ರೈಬ್ಸ್ ಅಥವಾ ಬುಡಕಟ್ಟು ಎಂಬ ಪದವು ಗ್ರೀಕ್‌ನ ನಗರ ರಾಜ್ಯಗಳು ಮತ್ತು ರೋಮನ್ ಸಾಮ್ರಾಜ್ಯ ಸ್ಥಾಪನೆಯ ಪೂರ್ವದಲ್ಲಿ ಉಗಮವಾಗಿವೆ ಎಂದು **ರಾಬರ್ಟ್‌ಜೆ. ಗ್ರೆಗೋರಿ (೧೯೩೩)** ಅವರು **'ಟ್ರೈಬ್ಸ್ ಅಂಡ್ ಟ್ರೈಬಲ್: ಆರಿಜಿನ್, ಯೂಸ್ ಅಂಡ್ ಫ್ಯೂಚರ್ ಆಫ್ ದಿ ಕಾನ್ಸೆಪ್ಟ್'** ಎಂಬ ಲೇಖನದಲ್ಲಿ ಹೇಳಿದ್ದಾರೆ. ಸಾಮಾನ್ಯ ಪೂರ್ವಜರಿಂದ ಕೂಡಿದ ವಂಶಾವಳಿಯನ್ನು ಗುರುತಿಸಿಕೊಳ್ಳುತ್ತಾ ಒಂದು ಸಮುದಾಯವನ್ನು ರೂಪಿಸಿಕೊಂಡಿರುವ ಜನರ ಸಮೂಹ ಎಂಬ ಅರ್ಥದಲ್ಲಿ ಟ್ರೈಬ್ ಎಂಬ ಪದವನ್ನು ಬಳಸಲಾಗಿದೆ.[೮]

ನಂತರದ ದಿನಗಳಲ್ಲಿ ಅದರ ಅರ್ಥ ಬೇರೆ ಬೇರೆ ರೀತಿಯಲ್ಲಿ ವಿಸ್ತರಿಸುತ್ತಾ ಹೋಗಿದೆ. ಉದಾಹರಣೆಗೆ ಸಾಮಾಜಿಕ ಸಂಘಟನೆಯ ವಿವಿಧ ವ್ಯವಸ್ಥೆಗಳು ಒಳಗೊಂಡಿರುವ ಅನೇಕ ಸ್ಥಳೀಯ ಹಳ್ಳಿಗಳು, ಜಿಲ್ಲೆಗಳು; ಪೀಳಿಗೆಗಳು ಅಥವಾ ಇತರ ಸಮೂಹಗಳು ಮತ್ತು ಸಾಮಾನ್ಯ ವಂಶಾವಳಿ, ಭಾಷೆ, ಸಂಸ್ಕೃತಿ ಹಾಗೂ ಹೆಸರುಗಳನ್ನು ಹೊಂದಿರುವ ಜನ ಸಮೂಹಗಳನ್ನು ಬುಡಕಟ್ಟು ಎಂಬ ಅರ್ಥದಲ್ಲಿ ಮೋರೀಸ್ ಅವರು ಬಳಸಿದ್ದಾರೆ ಎಂದು ರಾಬರ್ಟ್ ಗ್ರಿಗೋರಿ ಅವರು ಹೇಳಿದ್ದಾರೆ. ಇಂದು ಬುಡಕಟ್ಟು ಎಂದು ಗುರುತಿಸಿಕೊಳ್ಳುವ ಸಮೂಹಗಳ ಸಂಖ್ಯೆ ಅಪರಮಿತವಾಗಿವೆ.

ಬುಡಕಟ್ಟು ಸಮುದಾಯಗಳ ಬಗೆಗಿನ ಸಂಶೋಧನೆಗಳಿಂದ ತಿಳಿದುಬರುವುದೇನೆಂದರೆ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ವ್ಯವಸ್ಥೆಗಳು ಪ್ರಾರಂಭವಾದನಂತರ ಬುಡಕಟ್ಟು ಅಥವಾ ಟ್ರೈಬ್ ಎಂಬ ಪದ ವಿಶೇಷ ಅರ್ಥವನ್ನು ಪಡೆದುಕೊಂಡಿದೆ ಹಾಗೂ ಈ ಪದವು ಯೂರೋಪಿಯನ್ನರ ವಸಾಹತುಶಾಹಿ ಅವಧಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು.

ಫ್ರೈಡ್‌ರವರ ಪ್ರಕಾರ ಈಗಾಗಲೇ ಅಸ್ತಿತ್ವದಲ್ಲಿರುವ ರಾಜ್ಯ ಮತ್ತು ಸಂಘಟಿತ ಸಮಾಜಗಳ ವಿಶೇಷವಾದ ರಾಜಕೀಯ ಮತ್ತು ಆರ್ಥಿಕ ಒತ್ತಡಗಳಿಂದ ಉದ್ಭವಿಸಿರುವ ಉತ್ಪನ್ನಗಳೇ ಟ್ರೈಬ್ ಅಥವಾ ಬುಡಕಟ್ಟು ಎಂಬುದಾಗಿ ಅಭಿಪ್ರಾಯಪಡುತ್ತಾರೆ. ರಾಬರ್ಟ್ ಗ್ರಿಗೋರಿಯವರು ಮುಖ್ಯವಾಹಿನಿಯ ಜನರು ತಮ್ಮ ಜೀವನ ಪದ್ಧತಿ, ಜೀವನಶೈಲಿ ಮತ್ತು ಸಂಸ್ಕೃತಿಯೊಂದಿಗೆ ಅಧಿಕಾರದ ನಿಯಂತ್ರಣಕ್ಕೆ ಒಳಗಾಗಿರುತ್ತಾರೆ. ಮತ್ತೊಂದುಕಡೆ ಬುಡಕಟ್ಟು ಜನರು ಅರಣ್ಯ ದೊಂದಿಗಿನ ಸಂಬಂಧ, ರಕ್ತಸಂಬಂಧಿಗಳ ಅನುಬಂಧ, ಅದ್ವಿತೀಯ ಸಂಸ್ಕೃತಿ, ಕೆಲವು ಧಾರ್ಮಿಕ ನಂಬಿಕೆಗಳು ಬುಡಕಟ್ಟು ಜನರನ್ನು ಮುಖ್ಯವಾಹಿನಿಯ ಜನರಿಂದ ಪ್ರತ್ಯೇಕಗೊಳಿಸುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ.

ಹೆಚ್.ಡಿ. ಪ್ರಶಾಂತ್ (೨೦೦೬) ಅವರು **'ಬುಡಕಟ್ಟುಗಳ ಪರಿಕಲ್ಪನೆ: ಕೆಲವು ಟಿಪ್ಪಣಿಗಳು'** ಎಂಬ ಲೇಖನದಲ್ಲಿ ಮಾರ್ಗನ್ನರ ಬುಡಕಟ್ಟು ಪರಿಕಲ್ಪನೆ ಮತ್ತು ಡರ್ಖೀಮನ ಬಹುಶ್ರೇಣೀಕೃತ ಸಮಾಜ ಇವುಗಳೆರಡರ ಮೂಲವು ವಿಕಾಸವಾದಿ ದೃಷ್ಟಿಕೋನದಲ್ಲಿಯೇ ಅಡಗಿದೆ ಎಂದು ಹೇಳುತ್ತಾ, ಚಾರಿತ್ರಿಕ ಅನುಭವವು ಬುಡಕಟ್ಟು ಮತ್ತು ನಾಗರಿಕತೆಗಳ ಸಹಬಾಳ್ವೆಯನ್ನಲ್ಲದೆ,

ವಿಚ್ಛಿನ್ನತೆಯನ್ನು ಉಂಟುಮಾಡಿತು. ಆಧುನಿಕ ಕಾಲದಲ್ಲಿ ಪ್ರವೇಶಿಸಿದ ಪಾಶ್ಚಾತ್ಯ ಸಂಸ್ಕೃತಿಯು ಪ್ರತಿಯೊಂದು ನಿಶ್ಚಿತ ಜನಾಂಗ, ಭಾಷೆ ಮತ್ತು ಸಂಸ್ಕೃತಿಯಲ್ಲಿ ಬುಡಕಟ್ಟು ಮತ್ತು ನಾಗರಿಕತೆಗಳಿಗೆ ವಿರೋಧವಾಗಿ ನಿಂತಿತು ಎಂದು ಹೇಳಿ, ಸಹಮತವಲ್ಲದಿದ್ದರೂ ಶತಮಾನಗಳಿಂದ ಬುಡಕಟ್ಟು ಮತ್ತು ನಾಗರಿಕತೆಗಳು ಒಂದಾಗಿಯೇ ಇದ್ದವು, ಬುಡಕಟ್ಟನ್ನು ಜಾತಿಯಿಂದ ಪ್ರತ್ಯೇಕಿಸುವ ಯತ್ನವು ಭಾರತದಲ್ಲಿ ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ವ್ಯವಸ್ಥಿತವಾಗಿ ಆರಂಭವಾಯಿತು ಎಂದಿದ್ದಾರೆ. ಮುಂದುವರಿದು, ಇದೇ ಲೇಖನದಲ್ಲಿ ಭಾಷೆ ಚಾರಿತ್ರಿಕ ವಿವರಣೆ ಮತ್ತಿತರ ವಿಷಯಗಳ ಮೂಲದ ಹಿನ್ನೆಲೆಯಲ್ಲಿ ಬುಡಕಟ್ಟು ಪರಿಕಲ್ಪನೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ.[೯]

ಬುಡಕಟ್ಟುಗಳು ಕಡಿಮೆ ರಾಜಕೀಯ ಅಧಿಕಾರ ಮತ್ತು ಸಂಪನ್ಮೂಲಗಳು, ತಾಂತ್ರಿಕತೆ ಮತ್ತು ಇತರ ರೀತಿಯ ಅಧಿಕಾರಗಳ ಕೊರತೆಯಿಂದ ಅಧೀನ ಪಾತ್ರಗಳನ್ನು ನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಿದ್ದಿ ಜನಾಂಗೀಯ ಸಮುದಾಯವನ್ನು ಬುಡಕಟ್ಟು ಎಂದು ಪರಿಗಣಿಸ ಬಹುದಾಗಿದೆ. ಬಹಳ ಹಿಂದಿನಿಂದಲೂ ರಾಷ್ಟ್ರ, ರಾಜ್ಯಗಳು ರಾಜಕೀಯ ಅಧಿಕಾರದ ಹಿನ್ನೆಲೆಯಲ್ಲಿ ಈ ಸಮುದಾಯಗಳನ್ನು ಮುಖ್ಯವಾಹಿನಿಯಲ್ಲಿ ಭಾಗವಹಿಸದೇ ಹೊರಗುಳಿಯು ವಂತೆ ಮಾಡಿವೆ. ಟ್ರೈಬ್ ಅಥವಾ ಬುಡಕಟ್ಟು ಎಂಬ ಪದ ಅಂತಹ ಒಂದು ಹಣೆಪಟ್ಟಿ ಹೊಂದಿರುವ ಸಮೂಹಗಳನ್ನು ಪ್ರತಿನಿಧಿಸಲು ಬಳಸಲಾಗುತ್ತಿದೆ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯಸಿದ್ದಿ ಜನಾಂಗೀಯ ಸಮುದಾಯವು ಭಾರತದ ಮೂಲನಿವಾಸಿಗಳಲ್ಲದ್ದಿದ್ದರೂ, ಭಾರತದಲ್ಲಿ ತಮ್ಮದೇ ಆದ ಜನಾಂಗೀಯ ಮತ್ತು ಅನುವಂಶೀಯ ವೈಶಿಷ್ಟತೆಯನ್ನು ಈ ಸಮುದಾಯವು ಹೊಂದಿದೆ. ಭಾರತದ ಸಂವಿಧಾನದ ೩೪೨ನೇ ವಿಧಿಯ ಪ್ರಕಾರ ವಿಶೇಷವಾದ ಕೆಲವು ಜನಾಂಗ ಮತ್ತು ಸಮುದಾಯಗಳನ್ನು ಅವರ ರಾಜಕೀಯ ಪ್ರಾತಿನಿಧ್ಯಕ್ಕೋಸ್ಕರ ಮತ್ತು ಆರ್ಥಿಕ ಮತ್ತು ಸಾಮಾಜಿಕ ಯೋಗಕ್ಷೇಮಕ್ಕೋಸ್ಕರ ಅನುಸೂಚಿತ ಪಟ್ಟಿಗೆ ಸೇರಿಸಿ ಅಂತಹ ಸಮೂಹಗಳನ್ನು ರಾಷ್ಟ್ರೀಯ ಜೀವನದ ಮುಖ್ಯವಾಹಿನಿಗೆ ತರುವ ಉದ್ದೇಶವನ್ನಿಟ್ಟು ಕೊಂಡಿದ್ದು, ೨೦೦೩ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಆಫ್ರಿಕಾ ಮೂಲದ ಸಿದ್ದಿ ಜನಾಂಗೀಯ ಸಮುದಾಯವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದೆ. ಆದ್ದರಿಂದ ಈ ಜನಾಂಗೀಯ ಸಮುದಾಯವನ್ನು 'ಬುಡಕಟ್ಟು' ಎಂದು ಈ ಅಧ್ಯಯನದಲ್ಲಿ ಪರಿಗಣಿಸಿಕೊಳ್ಳಲಾಗಿದೆ.

ಅಭಿವೃದ್ಧಿ ಪರಿಕಲ್ಪನೆ

ಅಭಿವೃದ್ಧಿ ಎಂಬ ಪದವು ಮೇಲುನೋಟಕ್ಕೆ ಸರಳವಾಗಿದ್ದರೂ ಒಳಹೊಕ್ಕಂತೆ ಕ್ಲಿಷ್ಟವಾಗುತ್ತಾ ಸಾಗುವುದರಿಂದ ಅವರವರ ಭಾವಾರ್ಥಗಳಿಗೆ, ಅನುಭವದ ವಿಶಾಲತೆಗೆ ಅನುಗುಣವಾಗಿ ವಿಶ್ಲೇಷಿಸಲು ಆಸ್ಪದವಿರುವುದರಿಂದ ಈ ಅಧ್ಯಯನದಲ್ಲಿ 'ಬದಲಾವಣೆ' ಎಂಬ ಪದದ ಬದಲಾಗಿ 'ಅಭಿವೃದ್ಧಿ' ಎಂಬ ಪದವನ್ನು ಬಳಸಲಾಗಿದೆ. ಬದಲಾವಣೆ ಎಂಬ ಪರಿಕಲ್ಪನೆಯು ಸಮಾಜದಲ್ಲಾಗುವ ಒಳ್ಳೆಯ ಮತ್ತು ಕೆಟ್ಟ ಅಥವಾ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮ ಗಳೆರಡನ್ನೂ ಸೂಚಿಸುತ್ತದೆ. ಆದರೆ ಅಭಿವೃದ್ಧಿ ಎಂಬ ಪರಿಕಲ್ಪನೆಯು ಸಮಾಜದಲ್ಲುಂಟಾಗುವ ಸಕಾರಾತ್ಮಕ

ಬದಲಾವಣೆಗಳನ್ನು ಮಾತ್ರ ಸೂಚಿಸುವುದರಿಂದ ಸಿದ್ದಿ ಜನಾಂಗೀಯ ಸಮುದಾಯ ದಲ್ಲಾಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಅಭಿವೃದ್ಧಿ ಎಂಬ ಪದವನ್ನು ಉಪಯೋಗಿಸಿಕೊಳ್ಳಲಾಗಿದೆ.

ಬದಲಾವಣೆ ಎಂದರೆ ವಸ್ತು ಅಥವಾ ಸಮಾಜದ ಮೂಲ ಸ್ವರೂಪದಲ್ಲಿ ದೀರ್ಘ ಕಾಲದವರೆಗೆ ಒಂದೇ ರೀತಿಯಲ್ಲಿ ಇಲ್ಲದೇ ಇರುವಿಕೆ ಎಂದಾಗುತ್ತದೆ. ಸಮಾಜದ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವೇರಿಯಬಲ್ಸ್‌ಗಳಲ್ಲಿ ವ್ಯತ್ಯಾಸಗಳನ್ನುಂಟು ಮಾಡುತ್ತಾ ಉಂಟಾಗುವ ಬೆಳವಣಿಗೆಯ ಪ್ರಕ್ರಿಯೆಯೇ ಬದಲಾವಣೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬೆಳವಣಿಗೆಯು ಬದಲಾವಣೆ ಪ್ರಕ್ರಿಯೆಯ ಸಕಾರಾತ್ಮಕ ಮತ್ತು ಕಾರ್ಯಸಾಧುವಾಗುವಂತಹ ತಿಳುವಳಿಕೆಯಾಗಿದೆ. ಸಾಮಾಜಿಕ ಬದಲಾವಣೆ ಎಂಬ ಪದವು ಸಮಾಜದಲ್ಲಿ ಉಂಟಾಗುವ ಎಲ್ಲಾ ಬಗೆಯ ಏರಿಳಿತಗಳನ್ನು ಅರ್ಥಮಾಡಿಕೊಳ್ಳಲು ಬಳಸಲ್ಪಡುತ್ತಿದೆ. ಅಂದರೆ ಈ ಪದದ ಅರ್ಥವು ಎರಡು ಕಾಲ, ಖಂಡ ಅಥವಾ ಅವಧಿಗಳ ನಡುವೆ ಪರೀಕ್ಷಿಸಿ ನೋಡಿದಾಗ ವಿವಿಧ ಅಂಶಗಳಲ್ಲಿ ಕಂಡುಬರುವ ಅಂತರದಲ್ಲಿನ ಸಕಾರಾತ್ಮಕ ಮತ್ತು ನಕರಾತ್ಮಕ ದೃಷ್ಟಿಕೋನ ಗಳೆರಡನ್ನು ಒಳಗೊಂಡಿರುತ್ತದೆ. ಸಾಮಾಜಿಕ ಬಾಂಧವ್ಯ ಮತ್ತು ರಚನೆಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಗೆ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡನ್ನೂ ಸೇರಿಸಿ ಬದಲಾವಣೆ ಎನ್ನಬಹುದು.

ಸಾಮಾಜಿಕ ಬದಲಾವಣೆ, ಬೆಳವಣಿಗೆ ಮತ್ತು ಅಭಿವೃದ್ಧಿ ಎಂಬ ಪರಿಕಲ್ಪನೆಗಳು ಪರಸ್ಪರ ಅಂತರ್ ಸಂಬಂಧ ಹೊಂದಿವೆ. ಸಮಾಜ ವಿಜ್ಞಾನಗಳಲ್ಲಿ ಇವುಗಳನ್ನು ಹಾಗೆಯೇ ಉಪಯೋಗಿಸ ಲಾಗುತ್ತದೆ. ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಅಭಿವೃದ್ಧಿಗಳ ನಡುವೆ ಕೆಲವೊಂದು ವ್ಯತ್ಯಾಸಗಳನ್ನು ಗುರುತಿಸಬಹುದು. ಸಾಮಾಜಿಕ ಬದಲಾವಣೆಯು, ಮೌಲ್ಯಮುಕ್ತವಾದುದಾಗಿದೆ. ಅಂದರೆ, ಒಂದು ಸಮಾಜದ, ಜನಾಂಗದ ಅಥವಾ ಸಮುದಾಯದ ಜನರ ಜೀವನಶೈಲಿ, ಜೀವನ ಮಟ್ಟ ಮುಂತಾದವುಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ರೀತಿಯ ಯಾವುದೇ ವ್ಯತ್ಯಾಸ ಗಳುಂಟಾದರೂ ಅದನ್ನು ಸಾಮಾಜಿಕ ಬದಲಾವಣೆ ಎನ್ನುತ್ತೇವೆ. ಸಾಮಾಜಿಕ ಅಭಿವೃದ್ಧಿಯು ಮೌಲ್ಯಧಾರಿತವಾದ ಕಲ್ಪನೆಯಾಗಿದೆ ಮತ್ತು ವ್ಯಕ್ತಿಯ ಮನೋಗತಕ್ಕೆ ಅನ್ವಯವಾಗುತ್ತದೆ. ಸಾಮಾಜಿಕ ಅಭಿವೃದ್ಧಿಯು ಉದ್ದೇಶಿತ ಮಾರ್ಗಸೂಚಿ ಆಧರಿತವಾದ ಬದಲಾವಣೆಯನ್ನು ಸೂಚಿಸುತ್ತದೆ. ಆದರೂ ಈ ಎರಡೂ ಕಲ್ಪನೆಗಳು ಪರಸ್ಪರ ಸಂಬಂಧ ಹೊಂದಿವೆ.

ರಾಮು ಜಿ.ಎನ್. (೨೦೦೦) ಅವರು **"ಎಸ್ಸೇಸ್ ಇನ್ ದಿ ಸೋಷಿಯಲಾಜಿ ಆಫ್ ಡೆವಲಪ್‌ಮೆಂಟ್"** ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಡೇನಿಯಲ್ ಲರ್ನರ್ ಅವರ 'ದಿ ಪಾಸ್ಸಿಂಗ್ ಆಫ್ ದಿ ಟ್ರೆಡಿಷನಲ್ ಸೊಸೈಟಿ'ಯಲ್ಲಿ ಪ್ರಸ್ತಾಪಿಸಿರುವಂತೆ ಸಮೂಹ ಮಾಧ್ಯಮಗಳು ಸಮೂಹ ಮಾಧ್ಯಮಗಳು ಪಾಶ್ಚ್ಯಾತಿಕರಣ ಹಾಗೆಯೇ, ಆಧುನೀಕರಣಗಳ ಮೇಲೆ ಪರಿಣಾಮಕಾರಿ ನಿಯೋಗಗಳಾಗಿ ವ್ಯವಹರಿಸುತ್ತವೆಯೆ? ಎಂಬುದು. ಅರ್ಥಶಾಸ್ತ್ರಜ್ಞ ಎಡ್ವರ್ಡ ರುಸ್ಟೋವ್ ಅವರು ಯಾವುದೇ ಅಭಿವೃದ್ಧಿ ಹೊಂದು ತ್ತಿರುವ ಸಮಾಜದಲ್ಲಿ ಆರ್ಥಿಕ ಪರಿಸ್ಥಿತಿಗಳು ಮತ್ತು ಅವಶ್ಯಕತೆಗಳು

ಆರ್ಥಿಕ ಸಾಧ್ಯತೆಗಳ ಮೇಲೆ ಪ್ರಭಾವ ಬೀರುತ್ತವೆ ಎಂದು 'ದಿ ಸ್ಟೇಜಸ್ ಆಫ್ ಎಕನಾಮಿಕ್ ಗ್ರೂಪ್'ನಲ್ಲಿ ಹೇಳಿದ್ದಾರೆ. ಮೆರಿಯನ್ ಲೇವಿ, ಮಿರಾನ್ ವ್ವೀನರ್ಸ್, ಗೇಬ್ರೀಯಲ್ ಅಲ್ಮಾಂಡ್ ಇವರುಗಳೆಲ್ಲರೂ ಆಧುನೀಕರಣ ಪ್ರಕ್ರಿಯೆಯನ್ನು ಇದೇ ಚೌಕಟ್ಟಿನಲ್ಲಿ ಅಧ್ಯಯನ ಶಿಸ್ತುಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಬದಲಾವಣೆ ಪರಿಕಲ್ಪನೆಯನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸಿ ಆಧುನೀಕರಣದ ರೂಪದಲ್ಲಿ ಅಭಿವೃದ್ಧಿಯೆಂದು ವ್ಯಾಖ್ಯಾನಿಸಿದ್ದಾರೆ. ಇವರು ಆಧುನೀಕರಣವನ್ನು ಆರ್ಥಿಕ ಘಟಕಗಳ ಕಡೆಗಿನ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಾಗಿ ಅಭಿವೃದ್ಧಿಯನ್ನು ವ್ಯಾಖ್ಯಾನಿ ಸಿದ್ದಾರೆ. ಆದ್ದರಿಂದ, ಅಭಿವೃದ್ಧಿ ಪರಿಕಲ್ಪನೆಯು ಆಧುನೀಕರಣದ ವಿವಿಧ ರೂಪಗಳಲ್ಲಿ, ಅಭಿವೃದ್ಧಿಗೆ ತವಕಿಸುತ್ತಿರುವ ಸಮಾಜಗಳ ರಚನೆಯಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ. ಉದಾಹಾರಣೆಗೆ, ಉತ್ಪಾದನಾ ವಿಧಾನದಲ್ಲಿನ ಬದಲಾವಣೆ, ವೃತ್ತಿಗಳ ರಚನೆಯಲ್ಲಿನ ಬದಲಾವಣೆ, ಅನುಭೋಗ ಮತ್ತು ಹಂಚಿಕೆಯ ಕ್ರಮಗಳಲ್ಲಿನ ಬದಲಾವಣೆ ಮುಂತಾದವುಗಳು ಆಸ್ತಿ, ಕಾನೂನು, ಕುಟುಂಬ ಮತ್ತು ಧರ್ಮದಂತಹ ಪ್ರಮುಖ ಸಂಸ್ಥೆಗಳಲ್ಲಿ ಹೆಚ್ಚಿನ ಬದಲಾವಣೆಗಳನ್ನು ಉಂಟುಮಾಡುತ್ತವೆ[೧೦] ಎಂಬ ವಿವರಣೆ ಇದೆ. ಆದ್ದರಿಂದ ಈ ಅಧ್ಯಯನದಲ್ಲಿ 'ಬದಲಾವಣೆ' ಎಂಬ ಪರಿಕಲ್ಪನೆಯ ಬದಲಾಗಿ 'ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಬಳಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಸಮುದಾಯದಲ್ಲಿ ಆಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದು, ಇವುಗಳನ್ನು ಅರ್ಥಮಾಡಿಕೊಳ್ಳಲು ಈ ಪ್ರಬಂಧದಲ್ಲಿ 'ಬುಡಕಟ್ಟು ಮತ್ತು ಅಭಿವೃದ್ಧಿ' ಎಂಬ ಪರಿಕಲ್ಪನೆಗಳನ್ನು ಬಳಸಿಕೊಳ್ಳಲಾಗಿದೆ. ಸಾಮಾಜಿಕ ಬದಲಾವಣೆಯು ಬಹಳಷ್ಟು ವಿಧಗಳಲ್ಲಿ ಸಂಭವಿಸಬಹುದು; ಅವು ಒಂದೇ ದಿಕ್ಕಿನಲ್ಲಿ ಸಂಭವಿಸಬೇಕೆಂಬ ಯಾವುದೇ ನಿಯಮಗಳಿಲ್ಲ ಎಂದು ಸಾಮಾಜಿಕ ಬದಲಾವಣೆಯ ಬಹುದಿಶಾತ್ಮಕ ಸಿದ್ಧಾಂತಗಳು ವಾದಿಸುತ್ತವೆ. ಸಾಮಾಜಿಕ ಬದಲಾವಣೆಯ ಚಕ್ರೀಯ ಸಿದ್ಧಾಂತದ ಪ್ರಕಾರ ಸಮಾಜಗಳು ವಿಕಾಸದ ವಿವಿಧ ಹಂತಗಳನ್ನು ದಾಟಿ ಹೋಗುತ್ತವೆ. ಆದರೆ ಅವುಗಳು ಬದಲಾವಣೆಯ ಪರಿಪೂರ್ಣತೆಯ ಕೊನೆಯ ಹಂತ ತಲುಪುವುದರೊಂದಿಗೆ ಕೊನೆಗೊಳ್ಳದೇ, ಮತ್ತೆ ಮೊದಲಿನ ಹಂತಕ್ಕೆ ಹೋಗುತ್ತವೆ. ಪ್ರಾರಂಭಿಕ ಹಂತದಿಂದ ಮತ್ತೆ ಬದಲಾವಣೆಯ ಪ್ರಕ್ರಿಯೆ ನಡೆಯುತ್ತದೆ ಎಂದು ವಾದಿಸುತ್ತಾರೆ.

ಜರ್ಮನಿಯ ಚಿಂತಕ ಓಸ್ವಾಲ್ಡ್ ಸ್ಪೆಂಗ್ಲರ್ ಅವರು ಹೇಳಿರುವಂತೆ, 'ಪ್ರತಿಯೊಂದು ನಾಗರಿಕತೆಯು ಜೀವಿಗಳಂತೆ ಹುಟ್ಟು, ಪ್ರೌಢಿಮೆ, ವೃದ್ಧಾಪ್ಯ, ಸಾವು ಎಂಬ ಜೀವನದ ಚಕ್ರವನ್ನು ದಾಟಿ ಹೋಗುತ್ತವೆ' ಎಂದು **ಈರಣ್ಣ ಸಿ. ಮುಳಗುಂದ (೨೦೧೨)** ಅವರು **'ಸಾಮಾಜಿಕ ಸಂಸ್ಥೆಗಳು ಮತ್ತು ಪರಿವರ್ತನೆ'** ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.[೧೧]

ಓಸ್ವಾಲ್ಡ್ ಸ್ಪೆಂಗ್ಲರ್ ಅವರಿಗಿಂತ ಸುಸಂಘಟಿತವಾದ ಸಿದ್ಧಾಂತವನ್ನು ಅರ್ನಾಲ್ಡ್ ಟಾಯ್ನಬಿ ಯವರು 'ಎ ಸ್ಟಡಿ ಆಫ್ ಹಿಸ್ಟರಿ'ಯಲ್ಲಿ ನೀಡಿದ್ದಾರೆ. ಅರ್ನಾಲ್ಡ್ ಟಾಯ್ನಬಿಯವರ ಪ್ರಕಾರ ಪ್ರತಿಯೊಂದು ಸಮಾಜವು ಮೊದಲನೆಯದಾಗಿ ಪರಿಸರ ಮತ್ತು ಎರಡನೆಯದಾಗಿ ಆಂತರಿಕ

ಅಲ್ಲದೆ ಬಾಹ್ಯ ವೈರಿಗಳಿಂದ ಸವಾಲುಗಳನ್ನು ಎದುರಿಸುತ್ತವೆ. ಸಮಾಜವು ಈ ರೀತಿಯ ಸವಾಲುಗಳನ್ನು ಯಾವ ರೀತಿ ಎದುರಿಸುತ್ತದೆ ಎಂಬುದು ಅದರ ಭವಿಷ್ಯವನ್ನು ನಿರ್ಧರಿಸುತ್ತದೆ. ಯಾವ ಸಮಾಜ ಅಥವಾ ಸಮೂಹ ಈ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುತ್ತದೆಯೋ, ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ ಮತ್ತು ಯಾವುದು ಈ ಕಾರ್ಯದಲ್ಲಿ ವಿಫಲ ವಾಗುತ್ತದೆಯೋ ಅದು ವಿನಾಶದ ಅಂಚನ್ನು ತಲುಪುತ್ತದೆ ಮತ್ತು ಕಾಲಗತಿಯಲ್ಲಿ ಕಣ್ಮರೆ ಯಾಗುತ್ತದೆ. ಟಾಯ್ನಬಿಯವರ ಪ್ರಕಾರ, ಯಾವ ಸಮಾಜ ಮತ್ತು ನಾಗರಿಕತೆ ತನ್ನ ಕಾಲವು ಒಡ್ಡಿರುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುತ್ತದೆಯೋ ಅದು ಕಣ್ಮರೆಯಾಗುವುದಿಲ್ಲ. ಅವರ ಪ್ರಕಾರ ಇತಿಹಾಸವು ವಿನಾಶ ಮತ್ತು ಬೆಳವಣಿಗೆಯ ವಿವಿಧ ಚಕ್ರಗಳ ಸರಣಿಯನ್ನು ಹೊಂದಿದೆ. ಪ್ರತಿಯೊಂದು ಸಮಾಜ ಅಥವಾ ಸಮೂಹವೂ, ತಾನು ಮಾಡುವ ತಪ್ಪುಗಳು ಅವುಗಳಿಂದ ಕಲಿಯುವ ಪಾಠ ಮತ್ತು ಇತರರ ಅನುಭವಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಉಳ್ಳವರಾಗಿರುತ್ತಾರೆ?

ಅರ್ನಾಲ್ಡ್ ಟಾಯ್ನಬಿಯವರ ಈ ಸಿದ್ಧಾಂತದ ಪ್ರಕಾರ ಈ ಅಧ್ಯಯನದ ಸಮೂಹ ವಾಗಿರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗೀಯ ಸಮೂಹದ ಇತಿಹಾಸವನ್ನು ನೋಡಿದಾಗ, ಆಫ್ರಿಕಾದ ಕಾಡುಗಳಲ್ಲಿ ನಾಗರಿಕ ಸಮಾಜದ ಸಂಪರ್ಕವಿಲ್ಲದೇ, ಬದುಕುತ್ತಿದ್ದ ಇವರನ್ನು ಪೋರ್ಚುಗೀಸರು ಮತ್ತು ಅರಬ್ ವರ್ತಕರು ಪ್ರಾಣಿಗಳಂತೆ ಹಿಡಿದು, ಹಡಗಿನಲ್ಲಿ ತುಂಬಿಕೊಂಡು ಮಾನವ ವ್ಯಾಪಾರದ ಮೂಲಕ ಗುಲಾಮರನ್ನಾಗಿ ಮಾರಾಟ ಮಾಡಿದ್ದಾರೆ. ಹಾಗಾಗಿ, ಮಾನವ ಮಾರುಕಟ್ಟೆ ಅಥವಾ ಗುಲಾಮರ ವ್ಯಾಪಾರದಲ್ಲಿ ಸಿದ್ದಿ ಜನಾಂಗದವರು ಪ್ರಾಣಿ ಅಥವಾ ವಸ್ತುಗಳಂತೆ ವ್ಯಾಪಾರದ ಸರಕಾಗಿ, ಬಿಕರಿಯಾಗಿ, ಯಜಮಾನನ ಮನೆಯ ತೊತ್ತಿನ ಆಳಾಗಿ ತಮ್ಮ ಸ್ವಂತ ಅಸ್ತಿತ್ವವನ್ನೇ ಕಳೆದುಕೊಂಡಿದ್ದರು.

ಗುಲಾಮಗಿರಿಯಂತಹ ಅಮಾನುಷ ಪರಿಸ್ಥಿತಿಯಿಂದ ಹೇಗೋ ಗೋವಾದ ಕಡೆಯಿಂದ ತಪ್ಪಿಸಿಕೊಂಡು ಗುಲಾಮಿತನದ ಸವಾಲುಗಳನ್ನು ಎದುರಿಸಿ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳ ಕಾಡುಗಳಲ್ಲಿ ಗೆಡ್ಡೆ ಗೆಣಸು, ಹಣ್ಣು ಹಂಪಲು ಮತ್ತು ಪ್ರಾಣಿಗಳ ಮಾಂಸವನ್ನು ಸೇವಿಸುತ್ತಾ ಆದಿವಾಸಿಗಳಂತೆಯೇ ತಮ್ಮ ಬದುಕನ್ನು ಪ್ರಾರಂಭಿಸಿ, ಇಲ್ಲಿನ ಸಾಮಾಜಿಕ ಪರಿಸರದಲ್ಲಿ ತಮ್ಮ ಛಾಪನ್ನು ಮೂಡಿಸಿಕೊಂಡು ತಮ್ಮ ಹಿಂದಿನ ನಿಕೃಷ್ಟ ಬದುಕಿಗಿಂತ ಉತ್ತಮ ಸ್ಥಿತಿಯಲ್ಲಿರುವುದು ಕಂಡುಬಂದಿದೆ. ಓಸ್ವಾಲ್ಡ್ ಸ್ಪೆಂಗ್ಲರ್ ಅವರು ಹೇಳಿರುವಂತೆ, ಆಫ್ರಿಕಾದ ಕಾಡುಗಳಲ್ಲಿ ಪ್ರಾರಂಭವಾದ ಸಿದ್ದಿ ಜನಾಂಗೀಯ ಸಮೂಹದ ಬದುಕು ವಿವಿಧ ಕಾಲಘಟ್ಟಗಳಲ್ಲಿ ವ್ಯಾಪಾರದ ಸರಕುಗಳಾಗಿ, ಗುಲಾಮರಾಗಿ, ಪ್ರಾಣಿಗಳಂತೆ ಯಜಮಾನರ ಸೇವೆ ಸಲ್ಲಿಸುವ ನರಕ ಸದೃಶ್ಯ ಬದುಕಿನಿಂದ ತಪ್ಪಿಸಿಕೊಂಡು ಬಂದು ಭಾರತದ ಗುಜರಾತ್, ಹೈದರಾಬಾದ್ ಮುಂತಾದ ಕಡೆಗಳಲ್ಲಿಯಂತೆ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಬದುಕನ್ನು ಪುನಃ ಪ್ರಾರಂಭಿಸಿಕೊಂಡಿದ್ದಾರೆ.

ಅರ್ನಾಲ್ಡ್ ಟಾಯ್ನಬಿಯವರ ವಿಚಾರಗಳಂತೆ ಈ ಜನಾಂಗವು ಬಾಹ್ಯ ವೈರಿಗಳಿಂದ ಉಂಟಾಗಿದ್ದ ಸವಾಲುಗಳನ್ನು ಎದುರಿಸಿ, ಸ್ವತಂತ್ರ ಅಸ್ತಿತ್ವವನ್ನೂ ಹೊಂದದೆ, ಇಲ್ಲಿಗೆ ಬಂದು ಬದುಕನ್ನು

ಪ್ರಾರಂಭಿಸಿ, ಉತ್ತರ ಕನ್ನಡ ಜಿಲ್ಲೆಯ ಪ್ರಬಲ ಸಮೂಹವಾಗಿರುವ ಹವ್ಯಕ ಬ್ರಾಹ್ಮಣರ, ಕ್ರೈಸ್ತ ಮಿಷನರಿಗಳ ಮತ್ತು ಮುಸಲ್ಮಾನ ಸಮುದಾಯದ ಹಾಗೂ ಸ್ಥಳೀಯ ಇತರ ಬುಡಕಟ್ಟು ಸಮೂಹಗಳ ಸಂಪರ್ಕವನ್ನು ಪಡೆದುಕೊಂಡು, ಸಂಪರ್ಕಕ್ಕೆ ಬಂದ ಸಮೂಹದ ಧರ್ಮವನ್ನಾಚರಿಸುವ ಏಕೈಕ ಜನಾಂಗೀಯ ಸಮೂಹವಾಗಿದೆ. ಕಾಲವು ಒಡ್ಡಿದ ಸವಾಲುಗಳಿಗೆ ಹೆದರಿ ಕಣ್ಮರೆಯಾಗದೆ, ವಿವಿಧ ಕಾಲಘಟ್ಟಗಳಲ್ಲಿ ಪ್ರಕೃತಿಯಿಂದ ಮತ್ತು ಬಾಹ್ಯ ಸಮಾಜಗಳಿಂದ ಎದುರಾದ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಪುನಃ ತನ್ನ ಅಸ್ತಿತ್ವವನ್ನು ಇಲ್ಲಿ ಕಂಡುಕೊಂಡಿದೆ. ಇಂತಹ ಸವಾಲುಗಳನ್ನು ಎದುರಿಸಿ, ಇತರರಿಂದ ಕಲಿತ ಪಾಠ ಮತ್ತು ಅನುಭವಗಳಿಂದ ಭಾರತೀಯ ಸಮಾಜದಲ್ಲಿ ಹೇಗೆ ಬದುಕನ್ನು ಕಟ್ಟಿ ಕೊಂಡಿದೆ? ಸ್ಥಳೀಯ ಜನರೊಂದಿಗೆ ಬೆರೆತು ಸಮಾಜದ ಮುಖ್ಯವಾಹಿನಿಯಲ್ಲಿ ತನ್ನನ್ನು ತಾನು ಹೇಗೆ ಗುರುತಿಸಿಕೊಳ್ಳುತ್ತಿದೆ? ಮತ್ತು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿದ ನಂತರ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೇಗೆ ಬದಲಾವಣೆ ಹೊಂದುತ್ತಿದೆ? ಎನ್ನುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಮಿಲ್ಟನ್ ಸಿಂಗರ್ ಮತ್ತು ರಾಬರ್ಟ್ ರೆಡ್‌ಫೀಲ್ಡ್ (೧೯೫೧) ಅವರುಗಳು ಭಾರತದ ಮದ್ರಾಸ್ (ಈಗಿನ ಚೆನ್ನೈ) ನಗರದ ನಾಗರಿಕತೆಯ ಮೇಲೆ ಅಧ್ಯಯನ ಮಾಡುವಾಗ ಸಣ್ಣ ಸಂಪ್ರದಾಯ (ಲಿಟಲ್ ಟ್ರೆಡಿಷನ್) ಮತ್ತು ಪ್ರಮುಖ ಸಂಪ್ರದಾಯ(ಗ್ರೇಟ್ ಟ್ರೆಡಿಷನ್) ಎಂಬ ಅವಳಿ ಪರಿಕಲ್ಪನೆ ಗಳನ್ನು ಪರಿಚಯಿಸಿದ್ದಾರೆ. ರೆಡ್ ಫೀಲ್ಡ್ ಅವರು ನಾಗರಿಕತೆ ಅಥವಾ ಸಮಾಜವನ್ನು ಸಣ್ಣ ಮತ್ತು ಪ್ರಮುಖ ಸಂಪ್ರದಾಯ (ಮತ್ತು ಸಣ್ಣ ಮತ್ತು ಪ್ರಮುಖ) ಸಮುದಾಯಗಳ ಅಂತಃಕ್ರಿಯೆಯ ಐತಿಹಾಸಿಕ ರಚನೆಯನ್ನಾಗಿ ರೂಪಿಸಿದ್ದಾರೆ.[೨]

ರೆಡ್‌ಫೀಲ್ಡ್ ಅವರು ಸಂಪ್ರದಾಯಗಳ ಒಂದು ಸಾಮಾಜಿಕ ಸಂಘಟನೆಯ ಪರಿಕಲ್ಪನೆ ಯನ್ನು ಪರಿಚಯಿಸಿ ರ್‍ಯಾಡ್‌ಕ್ಲಿಫ್ ಬ್ರೌನ್ ಅವರ ಸಾಮಾಜಿಕ ಸಂಘಟನೆ ಮತ್ತು ಸಾಮಾಜಿಕ ರಚನೆಯವಿವಿಧ ಅಂಶಗಳ ಒಟ್ಟು ಗೂಡುವಿಕೆಯೊಂದಿಗೆ ಬೆಸೆದಿದ್ದಾರೆ. ಸಂಪ್ರದಾಯಗಳು ಎಂದರೆ, ಜನರ ಬಾಯಿಂದ ಬಾಯಿಗೆ ಉದಾಹರಣೆಗಳ ಮೂಲಕ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಣೆಯಾಗುವ ಮಾಹಿತಿಗಳು, ನಂಬಿಕೆಗಳು ಮತ್ತು ಪದ್ಧತಿಗಳು ಮತ್ತು ಆಚರಣೆಗಳೇ ಆಗಿವೆ. ಇನ್ನೊಂದು ರೀತಿಯಲ್ಲಿ ಒಂದು ಸಾಮಾಜಿಕ ಸಮೂಹದೊಂದಿಗೆ ಪಾರಂಪರಿಕವಾಗಿ ಬಂದಿರುವ ಆಚರಣೆಗಳು, ಅಭಿಪ್ರಾಯಗಳು ಮತ್ತು ಒಡಂಬಡಿಕೆಗಳನ್ನು ಸಂಪ್ರದಾಯ ಎಂದಿದ್ದಾರೆ.

ಅಂತಃಕ್ರಿಯಾತ್ಮಕ ಮತ್ತು ಸಮಾಜಿಕ–ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಗ್ರೇಟ್ ಟ್ರೆಡಿಷನ್ ಮತ್ತು ಲಿಟಲ್ ಟ್ರೆಡಿಷನ್ ಎಂಬ ಎರಡು ಪ್ರಕಾರಗಳಿರುತ್ತವೆ. ಗ್ರೇಟ್ ಟ್ರೆಡಿಷನ್ ಸಾಂಸ್ಕೃತಿಕ ಜ್ಞಾನ ವನ್ನು ವಿಶ್ಲೇಷಿಸುವ, ಅರ್ಥೈಸುವ ಮತ್ತು ಪ್ರತಿಬಿಂಬಿಸುವ ಸಾಮರ್ಥ್ಯವಿರುವ ಕೆಲವೇ ಜನ ಗಣ್ಯರ ಅಥವಾ ಅಕ್ಷರಸ್ಥರೊಂದಿಗೆ ಸೇರಿಕೊಂಡಿರುತ್ತದೆ. ಈ ಗ್ರೇಟ್ ಟ್ರೆಡಿಷನ್ ಜ್ಞಾನದ ಮಾರ್ಗದರ್ಶಕ ಬೆಳಕಾಗಿ ಕಾರ್ಯನಿರ್ವಹಿಸುವ ಸಮಷ್ಟಿಯಂತಿರುತ್ತದೆ. ಇದಕ್ಕೆ ವಿರುದ್ಧವಾಗಿ ಲಿಟಲ್ ಟ್ರೆಡಿಷನ್ ನಂಬಿಕೆಯ ಕ್ರಮಗಳು, ಸಂಸ್ಥೆಗಳು, ಗಾದೆ ಮಾತುಗಳು, ಒಗಟುಗಳು, ಕಥೆ, ಜಾನಪದ ಕಲೆ ದಂತಕಥೆಗಳು ಮುಂತಾದವುಗಳನ್ನು ಒಳಗೊಂಡಿರುತ್ತದೆ.

ರ್‍ಯಾಡ್‌ಕ್ಲಿಫ್ ಬ್ರೌನ್‌ರವರ ರಚನಾತ್ಮಕ ಕಾರ್ಯಾತ್ಮಕವಾದವು ಒಂದು ಸಮಾಜವನ್ನು ಸೈದ್ಧಾಂತಿಕವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸಾಮಾಜಿಕ ವ್ಯವಸ್ಥೆಗಳು ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವ ಸಾಮಾಜಿಕ ಸಾಧನಗಳಾಗಿವೆ. ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಅಭಿವೃದ್ಧಿ ಹೊಂದಲು ಸಾಮಾಜಿಕ ಜೀವನದಲ್ಲಿ ಸಮುದಾಯಕ್ಕೆ ಹಲವಾರು ಚಟುವಟಿಕೆಗಳಿವೆ. ಇವು ಜನರ ಅವಶ್ಯಕತೆಗಳನ್ನು ಪೂರೈಸುವ ಭರವಸೆ ನೀಡ ಬೇಕಾಗುತ್ತದೆ. ಬ್ರೌನ್ ಅವರ ರಚನಾತ್ಮಕ ಕಾರ್ಯಾತ್ಮಕ ವಿವರಣೆಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗದವರು ಗುಲಾಮಿತನದಿಂದ ಹೇಗೋ ತಪ್ಪಿಸಿಕೊಂಡು ಬಂದು ಇಲ್ಲಿ ಗ್ರೇಟ್ ಕಲ್ಚರಲ್ ಟ್ರೆಡಿಷನ್ನೊಂದಿಗೆ ಪ್ರತ್ಯೇಕವಾಗಿ ತನ್ನನ್ನು ಗುರುತಿಸಿಕೊಂಡು ಇಲ್ಲಿನ ಸಾಮಾಜಿಕ ರಚನೆ ಮತ್ತು ವ್ಯವಸ್ಥೆಗಳಲ್ಲಿ ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇತ್ತೀಚೆಗೆ ಸಾಮಾಜಿಕ ಆರ್ಥಿಕ ಬದಲಾವಣೆಯ ಪ್ರಕ್ರಿಯೆಗೆ ಹೇಗೆ ಒಳಪಡುತ್ತಿದೆ? ಎನ್ನುವುದನ್ನು ತಿಳಿದುಕೊಳ್ಳಲಾಗಿದೆ.

ಬುಡಕಟ್ಟು ಸಮಾಜಗಳು ಭಾರತದ ನಾಗರಿಕತೆಯ ಒಂದು ಆಯಾಮವಾಗಿವೆ. ಆದರೆ ಅವುಗಳು ಸಣ್ಣ ಸಂಪ್ರದಾಯದ ಭಾಗಗಳಾಗಿರದೆ, ಬುಡಕಟ್ಟು ಸಮೂಹಗಳು ಸ್ವಾಯತ್ತ ಸಾಮಾಜಿಕ ವ್ಯವಸ್ಥೆಗಳಾಗಿದ್ದವು. ಬುಡಕಟ್ಟು ಸಮೂಹಗಳನ್ನು ಸ್ವಾಯತ್ತ ಸಮೂಹಗಳೆಂದು ಏಕೆ ಕರೆಯುತ್ತೇವೆಂದರೆ, ಅವುಗಳ ನಿರಂತರ ಕಾರ್ಯ ಚಟುವಟಿಕೆಗಳಿಗೆ ಬೇರೆ ಮತ್ತೊಂದು ವ್ಯವಸ್ಥೆಯ ಅವಶ್ಯಕತೆ ಇರುವುದಿಲ್ಲವಾದ್ದರಿಂದ. ರ್‍ಯಾಡ್‌ಕ್ಲಿಫ್ ಬ್ರೌನ್‌ರವರ ರಚನಾತ್ಮಕ ಕಾರ್ಯಾತ್ಮಕ ವಾದವು ಸಾಮಾಜಿಕ ರಚನೆಯ ಮೇಲೆ ಬೆಳಕು ಚೆಲ್ಲುತ್ತದೆ. ಸಾಮಾಜಿಕ ರಚನೆಯು ಪ್ರತ್ಯೇಕ ಸ್ಥಿತಿಯನ್ನು ಒಳಗೊಂಡಿರುತ್ತದೆ. ಈ ವಸ್ತುಸ್ಥಿತಿ ಜೈವಿಕ ಮತ್ತು ನಿರವಯವ ರೂಪಗಳಿಗಿಂತ ಭಿನ್ನವಾಗಿರುತ್ತದೆ ಎಂದು ವಾದಿಸಿದ್ದಾರೆ. ಬ್ರೌನ್‌ರವರ ಪ್ರಕಾರ ಜನರು ಕೇವಲ ಸ್ಥಳಾಂತರಗೊಳ್ಳುತ್ತಾರೆ, ಸಾಮಾಜಿಕ ಪಾತ್ರಗಳನ್ನು ತಾತ್ಕಾಲಿಕವಾಗಿ ವಹಿಸಿಕೊಂಡಿರುತ್ತಾರೆ. ಇವರ ಪ್ರಕಾರ ಸಮಾಜದಲ್ಲಿ ಸಾಮಾಜಿಕ ಪಾತ್ರಗಳ ಒಟ್ಟಾರೆ ರಚನೆಯಲ್ಲಿ ಸಮೂಹಗಳ ಸ್ಥಿತಿಗೆ ವ್ಯಕ್ತಿಗಳು ಮಾತ್ರ ಮಹತ್ವವಾಗಿರುತ್ತಾರೆ.

ಭಾರತದ ಇತರ ಬುಡಕಟ್ಟು ಸಮುದಾಯಗಳಂತೆ ಯಾವುದೇ ಸ್ವಾಯತ್ತತೆಯ ಮನೋ ಭಾವನೆ, ಸ್ವತಂತ್ರ ಅಸ್ತಿತ್ವ ಏನನ್ನೂ ಹೊಂದದೇ, ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿ ಆಶ್ರಯ ಪಡೆದು ಇಲ್ಲಿನ ಮೂಲ ನಿವಾಸಿಗಳಾದ ಗೌಳಿ, ಕುಣಬಿ ಹಸಲ, ಹಾಲಕ್ಕಿ ಒಕ್ಕಲುಗಳಂತಹ ಬುಡಕಟ್ಟುಗಳೊಂದಿಗೆ ಹವ್ಯಕ ಬ್ರಾಹ್ಮಣರು ಮತ್ತು ಮರಾಠಿ ಸಮುದಾಯದವರ ಜೊತೆಯಲ್ಲಿ, ಬದುಕಿನ ಅವಶ್ಯಕತೆಗಳಿಗಾಗಿ ಕಾಡು ಮತ್ತು ಈ ಜನ ಸಮುದಾಯಗಳ ಮೇಲೆ ಅವಲಂಬಿತರಾಗಿ, ಗುಲಾಮರಾಗಿ, ಜೀತದಾಳುಗಳಾಗಿ, ಸೇವಕರಾಗಿ ಈ ಜಿಲ್ಲೆಯ ಸಾಮಾಜಿಕ ರಚನೆ ಮತ್ತು ವ್ಯವಸ್ಥೆಯಲ್ಲಿ ತನ್ನ ಬದುಕಿನ ಅಸ್ತಿತ್ವವನ್ನು ಸಿದ್ದಿ ಜನಾಂಗೀಯ ಸಮುದಾಯ ಇಂದಿಗೂ ಉಳಿಸಿಕೊಂಡಿದೆ.

ಪ್ರಸ್ತುತ ಅಧ್ಯಯನದಲ್ಲಿ ತಿಳಿದುಬಂದಿರುವುದೇನೆಂದರೆ, ಓಸ್ವಾಲ್ಡ್ ಸ್ಪೆಂಗ್ಲರ್ ಅವರ ವಿವರಣೆಯಂತೆ ಸಿದ್ದಿ ಜನಾಂಗವು ಹುಟ್ಟು, ಬೆಳವಣಿಗೆ, ಅಂತ್ಯ ಎಂಬ ಚಕ್ರೀಯ ಸಿದ್ಧಾಂತಕ್ಕೆ ಒಳಗಾಗಿ ಕಣ್ಮರೆಯಾಗದೆ,

ಆಫ್ರಿಕಾದಿಂದ ಅವರ ಅರಿವಿಗೇ ಇಲ್ಲದಂತೆ ಭಾರತಕ್ಕೆ ಬಂದು ಉತ್ತರ ಕನ್ನಡ ಜಿಲ್ಲೆಯ ಗ್ರೇಟ್ ಟ್ರೆಡೀಷನ್ನಿನ ಸಾಮಾಜಿಕ ರಚನೆಯ ಸಂಪರ್ಕ ಪಡೆದು ಇತರ ಸ್ಥಳೀಯ ಲಿಟಲ್ ಟ್ರೆಡೀಷನ್ ಸಮೂಹಗಳೊಂದಿಗೆ ಕಾರ್ಯಾತ್ಮಕ ಚಟುವಟಿಕೆಗಳೊಂದಿಗೆ ಈ ಭಾಗದ ಸಾಮಾಜಿಕ ರಚನೆಯ ಭಾಗವಾಗಿ ಬದುಕುತ್ತಿದ್ದಾರೆ. ಅಂತೆಯೇ ಆರ್ನಾಲ್ಡ್ ಟಾಯ್ನಬಿಯವರ ಸಾಮಾಜಿಕ ಬದಲಾಣೆಯ ಚಕ್ರೀಯ ಸಿದ್ಧಾಂತದ ಪ್ರಕಾರ ಕಾಲಘಟ್ಟದಲ್ಲಿ ಪರಿಸರ ಆಂತರಿಕ ಮತ್ತು ಬಾಹ್ಯ ವೈರಿಗಳಿಂದ ಎದುರಾದ ಸವಾಲು ಗಳನ್ನು ಯಶಸ್ವಿಯಾಗಿ ಎದುರಿಸಿ ತನ್ನ ಬದುಕನ್ನು ಕಟ್ಟಿಕೊಂಡಿದೆ, ಕಟ್ಟಿಕೊಳ್ಳುತ್ತಿದೆ– ಈ ಅಂಶಗಳನ್ನು ಪ್ರಸ್ತುತ ಅಧ್ಯಯನವೂ ಪ್ರತಿಫಲಿಸುತ್ತದೆ.

ಜಗತ್ತಿನ ವಿವಿಧ ಸಮಾಜಗಳು ನಿಧಾನವಾಗಿ ವಿವಿಧ ಜನಾಂಗ, ಭಾಷೆ ಹಾಗೂ ಸಂಸ್ಕೃತಿಗಳ ಮಿಶ್ರಣವಾಗಿ ಪರಿಣಮಿಸುತ್ತಿದೆ. ಇದು ಭಾರತದಲ್ಲಿ ಬಹಳ ಹಿಂದಿನಿಂದಲೇ ಕಾರ್ಯರೂಪದಲ್ಲಿದೆ. ಬಹುಸಂಸ್ಕೃತಿವಾದ ಹಾಗೂ ಬಹುಭಾಷಾವಾದಗಳು ಇಂದು ಜಾಗತೀಕರಣ ದಿಂದಾಗಿ ಯೂರೋಪಿನಲ್ಲಿ ಹಾಗೂ ಪಶ್ಚಿಮದ ಇತರ ದೇಶಗಳಲ್ಲಿ ವಾಸ್ತವ ವಾಗುತ್ತಿದೆ. ಈ ವಿವಿಧ ಜನಾಂಗ, ಧರ್ಮಗಳು, ಭಾಷೆಗಳು ಹಾಗೂ ಸಂಸ್ಕೃತಿಗಳು ಬಹಳ ಕಾಲ ಪ್ರತ್ಯೇಕವಾಗಿ ಉಳಿಯಲಾರವು, ಕಾಲಕ್ರಮೇಣ ಏಕೀಕರಣ ಪ್ರಕ್ರಿಯೆ ವಿವಿಧ ಸಮಾಜಗಳನ್ನು ಆವರಿಸುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಬಹುಸಂಸ್ಕೃತಿಯ ಸಮಾಜದೊಂದಿಗೆ ತನ್ನ ಸಾಮಾಜಿಕ, ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ವಿಲೀನಗೊಳಿಸಿ, ಈ ಸಮಾಜದ ಭಾಗವಾಗಿಯೇ ಕಾರ್ಯ ನಿರ್ವಹಿಸುತ್ತಿರುವುದು ಪ್ರಮುಖವಾಗಿ ಕಂಡುಬರುತ್ತಿದೆ.

ಬಾಪು ಹೆದ್ದೂರ ಶೆಟ್ಟಿ (೨೦೧೬) ಅವರು ಹೇಳಿರುವ ಹಾಗೆ, ಸಿದ್ದಿ ಜನಾಂಗವು ಬಹು ಸಂಸ್ಕೃತಿಗೆ ಪೂರಕವಾಗಿರುವ ಭಾರತೀಯ ಸಮಾಜದಲ್ಲಿ ಮೂರು ನಾಲ್ಕು ಶತಮಾನಗಳಿಂದ ಇಲ್ಲಿ ನೆಲೆಸಿ ಅಸ್ತಿತ್ವವನ್ನು ಪಡೆದುಕೊಂಡು ಇತ್ತೀಚಿಗೆ ಪರಿಶಿಷ್ಟ ಬುಡಕಟ್ಟು ಸಮುದಾಯಗಳಿಗೆ ಕೊಡುವ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಮತ್ತು ಯೋಜನೆಗಳಿಂದ ಈ ಜಿಲ್ಲೆಯ ವಿವಿಧ ಬುಡಕಟ್ಟು ಸಮುದಾಯಗಳು ಮತ್ತು ಪ್ರಬಲ ಜಾತಿಯ ಜನರೊಂದಿಗೆ ಬದುಕುತ್ತಿರುವುದು ಕಂಡುಬರುತ್ತದೆ.[೧೮] ಜಾಗತೀಕರಣದ ಈ ಸಂದರ್ಭದಲ್ಲಿ ಜಗತ್ತಿನಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುವಷ್ಟು ಅಭಿವೃದ್ಧಿ ಹೊಂದಿಲ್ಲವಾದರೂ ಸಾಮಾಜಿಕ ಆರ್ಥಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿರುವುದು ತಿಳಿದುಬರುತ್ತದೆ.

ಇತ್ತೀಚಿನ ವರ್ಷಗಳಲ್ಲಿ, ಭಾರತ ಮತ್ತು ಕರ್ನಾಟಕ ಸರ್ಕಾರಗಳು ಸಿದ್ದಿ ಬುಡಕಟ್ಟು ಜನರ ಗುಲಾಮಿತನವನ್ನು ಹೋಗಲಾಡಿಸಿ, ಅವರ ಪ್ರತ್ಯೇಕತೆಯ ಬದುಕಿನಿಂದ ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಲ್ಲಿ ತರಲು ಹಲವಾರು ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿವೆ. ಈ ಸಿದ್ದಿಗಳ ಮಕ್ಕಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಹೋಗುತ್ತಿರುವುದಲ್ಲದೇ, ಕೆಲವು ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಕ್ರೀಡಾ ಚಟುವಟಿಕೆಗಳಲ್ಲೂ

ವಿಭಿನ್ನ ಧಾರ್ಮಿಕ ಸಮುದಾಯಗಳ ಸದಸ್ಯತ್ವ ಪಡೆದಿದ್ದರೂ, ಅವರಿಗೆ ಧರ್ಮ ಮುಖ್ಯವಾಗದೇ, ಸಂಘಟಿತರಾಗಿ ಆರ್ಥಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಪ್ರಯತ್ನಿಸುತ್ತಿರುವುದರಿಂದಈ ಸಂಶೋಧನಾ ಪ್ರಬಂಧದ ಶೀರ್ಷಿಕೆಯಲ್ಲಿ ಬುಡಕಟ್ಟು ಮತ್ತು ಅಭಿವೃದ್ಧಿ ಎಂಬ ಪರಿಕಲ್ಪನೆಗಳನ್ನು ಬಳಸಿಕೊಳ್ಳಲಾಗಿದೆ.

ಅಭಿವೃದ್ಧಿಯೆಂಬ ಭ್ರಮೆ ಮನುಷ್ಯನನ್ನು ಹಿಡಿದಿದ್ದಾದರೂ ಹೇಗೆ? ನಾವು ಭೂಮಿಯ ಮೇಲೆ ಬಾಳಲು ಆರಂಭಿಸಿ ಲಕ್ಷಾಂತರ ವರ್ಷಗಳಾದರೂ, ನಾಗರಿಕತೆ ಹಂತಕ್ಕೆ ಬಂದದ್ದು ಇತ್ತೀಚಿಗಷ್ಟೆ. ನಾಗರಿಕತೆ ಹಳ್ಳಿ ಪಟ್ಟಣಗಳನ್ನು ನಿರ್ಮಿಸುವತನಕ ನಮಗಿದ್ದುದು ನಮ್ಮ ಮೂಲಭೂತ ಅವಶ್ಯಕತೆಗಳನ್ನು ತೀರಿಸಿಕೊಳ್ಳುವ ತವಕಗಳಷ್ಟೇ ಇದ್ದವು. ಇದು ಉಳಿದ ಪ್ರಾಣಿ ಹಾಗೂ ಪಕ್ಷಿ ವರ್ಗಗಳ ತವಕವೂ ಆಗಿತ್ತು. ಆಹಾರ, ವಸತಿ ಮತ್ತು ಸಂತಾನೋತ್ಪತ್ತಿ ಇವಿಷ್ಟೇ ಬದುಕುವ ಉದ್ದೇಶಗಳಾಗಿದ್ದವು. ಅದು ಯಾವ ಕಾರಣಕ್ಕೋ ಏನೋ? ಪ್ರಕೃತಿ ಮನುಷ್ಯನ ವಿಚಾರದಲ್ಲಿ ದಿನದಿಂದ ದಿನಕ್ಕೆ ವಿಕಾಸವನ್ನು ಬೇರೆ ಬೇರೆ ಪ್ರಾಣಿ ಪಕ್ಷಿಗಳಿಂದ ಬೇರ್ಪಡಿಸಿದಾಗ ನಾಗರಿಕ ಮಾನವನ ಸೃಷ್ಟಿಯಾಗುತ್ತದೆ. ಮನುಷ್ಯ ಗುಂಪಾಗಿ ಬೇಟೆಯಾಡುವುದನ್ನು ಕಲಿಯುತ್ತಾನೆ, ಮತ್ತೊಂದು ಹೆಜ್ಜೆ ಮುಂದೆ ಹೋಗಿ ವ್ಯವಸಾಯ ಮಾಡುವುದನ್ನು ಮನಗಾಣುತ್ತಾನೆ. ಮಂದಿರ–ಮಿನಾರ್‌ಗಳು, ಹಳ್ಳಿ–ನಗರಗಳು ನಿರ್ಮಾಣವಾಗುತ್ತವೆ. ಬೌದ್ಧಿಕ ಮತ್ತು ದೈಹಿಕ ಅವಶ್ಯಕತೆಗಳು ವಿಸ್ತಾರವಾಗುತ್ತಾ ಹೋಗುತ್ತವೆ. ಈಗ ಮನುಷ್ಯನು ಮೂಲಭೂತ ಅವಶ್ಯಕತೆಗಳಿಗಷ್ಟೇ ಬದುಕುವುದಿಲ್ಲ. ವಾಸ್ತವ ಮತ್ತು ಕಲ್ಪನೆಗಳ ನಡುವೆ ಉಯ್ಯಾಲೆಯ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಉಳಿದ ಪ್ರಾಣಿ ಪಕ್ಷಿಗಳು ಆಗಿನಿಂದಲೂ ಒಂದೇ ರೀತಿಯಲ್ಲಿವೆ.

ಈ ಅಧ್ಯಯನದ ವಸ್ತುವಾಗಿರುವ ಸಿದ್ದಿ ಜನಾಂಗೀಯ ಬುಡಕಟ್ಟು ಸಮುದಾಯದ ಪೂರ್ವಜರು ಆಫ್ರಿಕಾದ ಜಂಬೂದಾರಿ ದ್ವೀಪದಲ್ಲಿ ಮೂಲಭೂತ ಅವಶ್ಯಕತೆಗಳಿಗಷ್ಟೇ ಸೀಮಿತ ವಾಗಿದ್ದ ಬದುಕನ್ನು ನಡೆಸುತ್ತಾ ನೆಮ್ಮದಿ ಮತ್ತು ಸ್ವತಂತ್ರದ ಜೀವನವನ್ನು ನಡೆಸುತ್ತಿದ್ದರು. ಮತ್ತೊಂದೆಡೆ, ಮನುಷ್ಯನ ನಾಗರಿಕತೆ ಹೆಚ್ಚಾಗಿ ಬುದ್ಧಿಶಕ್ತಿ, ಸ್ವಾರ್ಥ ತುಂಬಿದ ಮನಸ್ಸುಗಳಿಂದ ನಾಗರಿಕರೆನಿಸಿಕೊಂಡವರು ಸಿದ್ದಿ ಜನರನ್ನು ೧೩ ಮತ್ತು ೧೪ನೇ ಶತಮಾನಗಳಲ್ಲಿ ಪ್ರಾಣಿ ಮತ್ತು ವಸ್ತುಗಳಂತೆ ಮಾರಾಟದ ಸರಕುಗಳಾಗಿ ಭಾರತ ಮತ್ತು ವಿಶ್ವದ ಇತರ ರಾಷ್ಟ್ರಗಳಿಗೆ ಗುಲಾಮರಾಗಿ ಮಾರಾಟವಾದರು. ಈ ಪ್ರಕ್ರಿಯೆಯಲ್ಲಿ ಪೋರ್ಚುಗೀಸರು, ಗುಜರಾತ್ ಮತ್ತು ಅರಬ್ ವರ್ತಕರು ಭಾರತಕ್ಕೆ ತಂದ ಈ ಜನರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಸಿದ್ದಿಗಳು ಭೂಮಾಲೀಕರು, ವರ್ತಕರುಗಳ ಮನೆಯಲ್ಲಿ ಪ್ರಾಣಿಗಳಿಗಿಂತ ಕೀಳಾಗಿ ನರಕಯಾತನೆಯ ಜೀವನವನ್ನು ಸಾಗಿಸುತ್ತಿದ್ದರು. ಹೇಗೋ, ಏನೋ ಗೋವಾದಿಂದ ತಮ್ಮ ಯಾತನಾಮಯ ಬದುಕಿನಿಂದ ತಪ್ಪಿಸಿಕೊಂಡು ಬಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆ, ಧಾರವಾಡಜಿಲ್ಲೆಯ ಕಲಘಟಗಿ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲುಕುಗಳಿಗೆ ಬಂದು ಪ್ರಾರಂಭದಲ್ಲಿ ಅಲೆಮಾರಿಗಳಾಗಿ ಕಾಡಿನಲ್ಲಿ ಬದುಕುತ್ತಿದ್ದರು. ಬೇಟೆಯಾಡುತ್ತ, ಹಣ್ಣು–ಹಂಪಲು, ಗೆಡ್ಡೆ–ಗಡಣಸುಗಳನ್ನೇ ಆಹಾರವನ್ನಾಗಿಸಿಕೊಂಡು ಬದುಕು

ನೋಡುತ್ತಿದ್ದರು. ಕ್ರಮೇಣ ಅಡಿಕೆ ತೋಟಗಳಲ್ಲಿ, ಭೂಮಾಲಿಕರ ಮನೆಯಲ್ಲಿ ಕೃಷಿಕಾರ್ಮಿಕರಾಗಿ ಕೃಷಿ ಕೌಶಲ್ಯವನ್ನೂ ಕಲಿಯುತ್ತಾ, ಸ್ವಂತ ಕೃಷಿಕರೂ ಆಗಿದ್ದಾರೆ. ಇತ್ತೀಚಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಾ ಶಿಕ್ಷಣ, ಆರೋಗ್ಯದ ವಿಚಾರಗಳಲ್ಲಿ ಸಕಾರಾತ್ಮಕವಾಗಿ ಜೀವನವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ವಿದ್ಯಾವಂತರಾಗಿ, ಪದವೀದರರಾಗಿ ಶಿಕ್ಷಕರು, ವಕೀಲರು, ಸಮಾಜಸೇವಕರು, ಧಾರ್ಮಿಕ ಮುಖಂಡರು ಆಗಿದ್ದಾರೆ. ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಇತರರಂತೆ ಸಮಾಜದ ಮುಖ್ಯವಾಹಿನಿಗೆ ಸೇರಲು ಅವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿರುವುದು ಅನುಕೂಲವಾಗಿದೆ. ಜನಾಂಗೀಯ ಸಮುದಾಯವಾಗಿರುವ ಸಿದ್ದಿ ಜನರು ಈಗ ಜೀವನ ಶೈಲಿಯನ್ನು ಸಮಾಜದ ಇತರರಂತೆ ಸುಧಾರಿಸಿಕೊಳ್ಳುತ್ತಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಅವರ ಜೀವನದಲ್ಲಾಗಿರುವ ಬದಲಾವಣೆಗಳು ಸಕಾರಾತ್ಮಕವೇ ಆಗಿವೆ. ಅವರಿಗೆ ಸ್ವಂತ ಅಸ್ತಿತ್ವವೇ ಇಲ್ಲದ ಅವರ ಹಿಂದಿನ ಬದುಕಿಗಿಂತ ಇಂದಿನ ಬದುಕೇ ಸಾವಿರಪಟ್ಟು ಉತ್ತಮವಾದುದಾಗಿದೆ. ಆದ್ದರಿಂದ, ಈ ಜನಾಂಗೀಯ ಸಮುದಾಯದಲ್ಲಾಗಿರುವ ಬದಲಾವಣೆಗಳೆಲ್ಲವೂ ಮೇಲ್ಮುಖ ಸಾಮಾಜಿಕ ಚಲನೆಗಳೇ ಆಗಿ ಅವರ ಜೀವನವನ್ನು ಸಕಾರಾತ್ಮಕವಾಗಿಸಿವೆ. ಆದ್ದರಿಂದ ಈ ಅಧ್ಯಯನದಲ್ಲಿ 'ಬದಲಾವಣೆ' ಎಂಬ ಪರಿಕಲ್ಪನೆಯ ಬದಲಾಗಿ 'ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಬಳಸಲಾಗಿದೆ.

೧.೪. ಸಮಸ್ಯೀಕರಣ

ಕರ್ನಾಟಕ ಅರಣ್ಯ ಇಲಾಖೆ, ಕಾರ್ಪೋರೇಟ್ ವಲಯ ಮತ್ತು ಭೂಮಾಲೀಕ ವರ್ಗ ಆಫ್ರಿಕಾಮೂಲದವರಾದ ಸಿದ್ದಿಯರ ಐಡೆಂಟಿಟಿ(ಅಸ್ಮಿತೆ) ಮತ್ತು ಸಮೀಕರಣಕ್ಕೆ ಹೊಸ ಚಾಲನೆ ಕೊಟ್ಟಿವೆ. ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಸಿದ್ದಿಗಳಿಗೆ ತುಂಬಾ ನಿಯಮಿತ ಪ್ರಮಾಣದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅವಕಾಶಗಳು ಇದ್ದವು. ಆದರೆ, ಬುಡಕಟ್ಟು ಸಮೂಹಗಳ ರಾಜಕೀಯ ಮತ್ತು ಸಾಮಾಜಿಕ ಒಡನಾಟಗಳು ೧೯೯೯ರಲ್ಲಿ ಭಾರತ ಸರ್ಕಾರದಲ್ಲಿ ಬುಡಕಟ್ಟು ವ್ಯವಹಾರಗಳ ಸಚಿವಾಲಯವನ್ನು ಸ್ಥಾಪಿಸುವಂತೆ ಮಾಡಿವೆ. ೨೦೦೬ರ ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ಅರಣ್ಯ ವಾಸಿಗಳ ಕಾಯಿದೆಯು ಸಿದ್ದಿ ಜನಾಂಗೀಯ ಸಮುದಾಯದ ಮೂಲಭೂತ ಸಮಸ್ಯೆಗಳನ್ನು ಕುರಿತು ಚರ್ಚಿಸಿವೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಅಧ್ಯಯನವು ಸಿದ್ದಿಗಳಲ್ಲಾಗಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಕಡೆಗೆ ಗಮನವನ್ನು ಕೇಂದ್ರೀಕರಿಸಿದೆ. ಇಲ್ಲಿ ಅಸ್ಮಿತೆ ಅಥವಾ ಐಡೆಂಟಿಟಿ ಎಂಬುದು ಒಂದು ಜನಾಂಗ, ಸಾಮಾಜಿಕ ವರ್ಗ, ರಾಷ್ಟ್ರ ಇತ್ಯಾದಿಗಳ ಸದಸ್ಯರಾಗಿ ತನ್ನನ್ನು ತಾನು ಅರ್ಥಮಾಡಿ ಕೊಳ್ಳುವ ವ್ಯಕ್ತಿಗಳನ್ನು ಪ್ರತಿನಿಧಿಸುತ್ತದೆ. ಸಮೀಕರಣ ಎಂಬ ಪದವು ವಿದೇಶಿ ಮೂಲದ ಸಮೂಹವು ಯಾವುದಾದರೂ ಕಾರಣದಿಂದ ಬೇರೆಡೆಗೆ ಬಂದು, ಬದುಕುತ್ತಿರುವ ಸಮಾಜದ ಸಮಾಜೋ–ಸಾಂಸ್ಕೃತಿಕ ಅಂಶಗಳಲ್ಲಿ ಸಮರಸಗೊಳ್ಳುವುದನ್ನು ಸೂಚಿಸುತ್ತದೆ.

ಸಿದ್ದಿಯರಿಗೆ ಸಂಬಂಧಿಸಿದಂತೆ **ಡೇವಿಡ್ ಎಲ್ ಸಿಲ್ಸ್** (೧೯೬೮) ಅವರು ಹೇಳಿರುವ ಹಾಗೆ “ಭಾರತದಲ್ಲಿ ವಸಾಹತು ಆಳ್ವಿಕೆ ಮತ್ತು ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಐಡೆಂಟಿಟಿ ಮತ್ತು ಸಮೀಕರಣದ ಅಂಶಗಳು ಪ್ರಾದೇಶಿಕ ಸಮಾಜಿಕ-ಸಾಂಸ್ಕೃತಿಕ ರಚನೆಯಲ್ಲಿ ಸೇರಿಕೊಳ್ಳುವ ಮತ್ತು ಹೊರಹೋಗುವಂತಹ ಘಟನೆಗಳು ನಡೆದವು”.[೧೫] ಈ ಹಿನ್ನೆಲೆಯಲ್ಲಿ, ಸಿದ್ದಿಯರು ಗುಲಾಮಿ ವ್ಯಾಪಾರದ ಮೂಲಕ ಭಾರತಕ್ಕೆ ಬಂದು ತಮ್ಮ ಗುಲಾಮಿತನದ ಬದುಕಿನಿಂದ ಸ್ವತಂತ್ರ್ಯ ಬದುಕನ್ನು ಹೇಗೆ ಕಟ್ಟಿಕೊಳ್ಳುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುತ್ತಿರುವುದು ಈ ಅಧ್ಯಯನದ ಮಹತ್ವದ ಅಂಶವಾಗಿದೆ.

೧೯೫೧ರಿಂದ ಇತ್ತೀಚಿನವರೆಗೂ ಬುಡಕಟ್ಟು ಸಮೂಹಗಳಿಗೆ ಸಿಗುವ ವಿಶೇಷ ಸವಲತ್ತುಗಳು ಸಿದ್ದಿಗಳಸಿಗುತ್ತಿರಲಿಲ್ಲ. ಆದರೆ ಈ ಸಮುದಾಯವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದ ನಂತರ ೧೦ನೇ ಪಂಚವಾರ್ಷಿಕ ಯೋಜನೆಯಿಂದ ಇವರಿಗೆ ಎಲ್ಲಾ ರೀತಿಯ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಲಾಭಗಳು ದೊರೆಯುತ್ತಿವೆ. ಈ ಸೌಲಭ್ಯಗಳನ್ನು ಬಳಸಿಕೊಂಡು ಎಷ್ಟರ ಮಟ್ಟಿಗೆ ಸಿದ್ದಿಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದು ವರಿಯುತ್ತಿದ್ದಾರೆ ಎನ್ನುವುದರ ಬಗ್ಗೆಯೂ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

ಪಿ.ಕೆ ಹಟ್ಟಿ (೨೦೦೨) ಅವರು **‘ಹಿಸ್ಟರಿ ಆಫ್ ಅರಬ್ಸ್’** ಎಂಬ ಪುಸ್ತಕದಲ್ಲಿ ಹೇಳಿರುವಂತೆ, ‘ಅಲೆಮಾರಿಗಳು ಒಂದು ಪ್ರಕಾರದ ಸಮುದಾಯವಾಗಿ ನಿನ್ನೆ ಹೇಗೆ ಇದ್ದರೋ, ಹಾಗೆಯೇ ಇಂದೂ ಇರುತ್ತಾರೆ ಮತ್ತು ನಾಳೆಯೂ ಇರುತ್ತಾರೆ. ’ಬುಡಕಟ್ಟು ಜನಾಂಗವಾಗಿ ಸಿದ್ದಿಗಳ ಸಾಂಸ್ಕೃತಿಕ ಕ್ರಮಗಳು ಹಾಗೆಯೇ ಇರುತ್ತವೆ; ವ್ಯತ್ಯಾಸಗಳು, ಪ್ರಗತಿ ಮತ್ತು ವಿಕಾಸಗಳ ನಿಯಮಗಳು ಅವರು ಒಪ್ಪಿಕೊಳ್ಳುವಂತಿರುವುದಿಲ್ಲ. ಸಿದ್ದಿ ಜನರು ಭಾರತಕ್ಕೆ ಬಂದಾಗ ಇಲ್ಲಿನ ನಿಯಮಗಳು ಅವರನ್ನು ಸಮಾನರೆಂದು ಒಪ್ಪಿಕೊಳ್ಳುವಂತಿರಲಿಲ್ಲ ಮತ್ತು ಭಾರತದ ಸಾಮಾಜಿಕ-ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸ್ಥಿತಿ ಭಿನ್ನವಾಗಿತ್ತು.[೧೬] ಇಂತಹ ಪರಿಸರದಲ್ಲಿ ಇವರು ಹೇಗೆ ಬದುಕನ್ನು ಕಟ್ಟಿಕೊಂಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದರಿಂದ ಈ ಅಧ್ಯಯನ ಮಹತ್ವವನ್ನು ಪಡೆದುಕೊಳ್ಳುತ್ತದೆ.

‘ಕಪ್ಪು ಮೈಬಣ್ಣದವರಾಗಿ ಸಿದ್ದಿಗಳು ಕೆಳಜಾತಿಯವರೊಂದಿಗೆ ಭಾರತೀಯ ಸಮಾಜದಲ್ಲಿ ಗುರುತಿಸಲ್ಪಟ್ಟರು. ಅವರ ಚರ್ಮದ ಬಣ್ಣದ ಜೊತೆಗೆ, ಶಾರೀರಿಕ ಲಕ್ಷಣಗಳು ಅವರನ್ನು ಭಾರತದ ಇತರ ಸಮುದಾಯಗಳಿಂದ ಪ್ರತ್ಯೇಕಿಸಿದೆ. ಧರ್ಮಾಧಾರಿತ ಚೌಕಟ್ಟಿನಲ್ಲಿ ಸಿದ್ದಿಗಳು ಸಮಾನಾಂತರವಾಗಿ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧಾರ್ಮಿಕ ಸಮೂಹಗಳಲ್ಲಿ ಮೂರು ವಿಭಾಗವಾಗಿ ಹಂಚಿಹೋಗಿದ್ದಾರೆ’ ಎಂದು **ಹೆನ್ರೀ ಜೆ. ಡ್ರೇವಾಲ್ (೨೦೦೪)** ಅವರು ಹೇಳುತ್ತಾರೆ. ಅವರ ಪ್ರಕಾರ ಸಿದ್ದಿಗಳು ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧಾರ್ಮಿಕ ರಚನೆಯ ಮುಖ್ಯವಾಹಿನಿಯ ಸಂಸ್ಕೃತಿ ಮತ್ತು ಇತರ ಮೌಲ್ಯಗಳನ್ನು ಸಂಪೂರ್ಣವಾಗಿ ಅಳವಡಿಸಿ ಕೊಳ್ಳುವುದಕ್ಕೂ ಮೊದಲೇ, ಅವರ ಮೈಬಣ್ಣ ಮತ್ತು ಬಡತನದ ಕಾರಣದಿಂದ ಮತ್ತು ವಿವಿಧ ಯಜಮಾನಿಕೆಯ ಶಕ್ತಿಗಳಿಂದಾಗಿ

ಬದುಕಿನಲ್ಲಿ ದುಸ್ಥಿತಿಯನ್ನು ಅನುಭವಿಸಿದವರು. ಸ್ವಂತ ಬಲದ ಮೇಲೆ ಭೌತಿಕ ಸಂಪನ್ಮೂಲಗಳನ್ನೂ ತಮ್ಮದನ್ನಾಗಿಸಿಕೊಳ್ಳುವ ಸಾಮರ್ಥ್ಯವನ್ನೂ ಅವರು ಹೊಂದಿರಲಿಲ್ಲ. ಇಂತಹ ಸಂದರ್ಭದಲ್ಲಿ ಸಿದ್ದಿಗಳು ಗುಲಾಮತನದಿಂದ ಹೊರಬರಲಾಗದೇ ತೊಳಲಾಡುತ್ತಿದ್ದರು. ಜಾತಿಯಾಧಾರಿತ ವೃತ್ತಿಗಳು, ಹೊಸ ಮಾದರಿಯ ಸಮಾಜಿಕ-ಮಾನಸಿಕ ತಾರತಮ್ಯಗಳ ಜೊತೆಗೆ, ಸಿದ್ದಿಯರು ಮೂರೂ ಧಾರ್ಮಿಕ ಸಮೂಹಗಳ ಜಾತಿ ಮತ್ತು ವರ್ಗ ತಾರತಮ್ಯಕ್ಕೆ ಒಳಗಾಗಿ ನಿಕೃಷ್ಟ ಜೀವನದಿಂದ ಹೇಗೆ ಮುಖ್ಯವಾಹಿನಿಗೆ ಬರುತ್ತಿದ್ದಾರೆ ಎನ್ನುವುದರ ಬಗ್ಗೆ ಅವರು ಬೆಳಕು ಚೆಲ್ಲುತ್ತಾರೆ.[೧೭] ಜಾತಿಯಾಧಾರಿತ ಭಾರತೀಯ ಸಮಾಜದಲ್ಲಿ ಸಿದ್ದಿಯರು ಸಾಮಾಜಿಕವಾಗಿ ಪ್ರತ್ಯೇಕತೆ ಭಾವನೆ, ಆರ್ಥಿಕ ಶೋಷಣೆ ಮತ್ತು ಕಡು ಬಡತನದ ಜೊತೆಗೆ ಜನಾಂಗೀಯವಾಗಿ ಪ್ರತ್ಯೇಕತೆಯಿಂದಲೂ ನರಳುತ್ತ ಹೇಗೆ ಬದುಕನ್ನು ಕಟ್ಟಿಕೊಂಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಬಿ.ಕೆ. ರಾಯ್ ಬರ್ಮನ್ (೧೯೯೩) ಅವರು, **'ಮಾರ್ಡನೈಜೇಶನ್ ಆಫ್ ಟ್ರೈಬಲ್ ಪೀಪಲ್ಸ್ ಇನ್ ಇಂಡಿಯನ್ ಬಾರ್ಡರ್ಸ್'** ಎಂಬ ಸಂಶೋಧನಾ ಲೇಖನದಲ್ಲಿ, ಭಾರತದ ಗಡಿಭಾಗಗಳ ಬುಡಕಟ್ಟು ಜನರ ಆಧುನೀಕರಣದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಬರ್ಮನ್ ಅವರ ಪ್ರಕಾರ ಬುಡಕಟ್ಟು ಜನರು ಬುಡಕಟ್ಟೇತರ ಜನರೊಂದಿಗೆ ಜೀವಿಸುತ್ತಿದ್ದರೂ ಕೆಲವೇ ಕೆಲವು ಅಂಶಗಳಲ್ಲಿ ಸಾಮಾನ್ಯ ಜೀವನ ಸಾಗಿಸುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ನಗರ ಪ್ರದೇಶದ ಬುಡಕಟ್ಟುಗಳ ಜನರು ಆಧುನಿಕ ತಂತ್ರಜ್ಞಾನ ಮತ್ತು ಕೌಶಲ್ಯವನ್ನು ಅಳವಡಿಸಿಕೊಂಡಿದ್ದರೂ, ಈಗಲೂ ತಮ್ಮ ಬುಡಕಟ್ಟು ಜಗತ್ತಿನ ಭಾವನೆಗಳನ್ನು ಉಳಿಸಿಕೊಂಡಿದ್ದಾರೆ. ಪ್ರಾರಂಭಿಕ ಕಾಲದಲ್ಲಿ ಪ್ರಾದೇಶಿಕವಾಗಿ ಬುಡಕಟ್ಟು ಜನರು ತಮ್ಮ ಕೆಳಮಟ್ಟದ ಆಶೋತ್ತರಗಳಿಂದಾಗಿ ತಾವು ಅಲ್ಪಸಂಖ್ಯಾತರು ಎಂದು ಭಾವಿಸಿರಲಿಲ್ಲ. ಆದರೆ, ಈಗ ರಾಜಕೀಯ ಮತ್ತು ಉದ್ಯೋಗಗಳ ಆಕಾಂಕ್ಷೆಗಳಿಂದಾಗಿ ಪ್ರಾದೇಶಿಕ ಮಟ್ಟದಲ್ಲಿ ಮತ್ತು ರಾಷ್ಟೀಯ ಮಟ್ಟದಲ್ಲಿ ಬುಡಕಟ್ಟು ಜನರು ತಾವು ಅಲ್ಪಸಂಖ್ಯಾತರು ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಇದು ನಿರ್ದಿಷ್ಟವಾಗಿ ಶಿಕ್ಷಣದ ಮೂಲಕ ಉಂಟಾಗುತ್ತಿರುವ ಆಧುನೀಕರಣದ ಪರಿಣಾಮವಾಗಿರಬಹುದು. ಆದಾಗ್ಯೂ, ಆ ಲೇಖನದಲ್ಲಿ ರಾಯ್ ಬರ್ಮನ್ ಅವರು ಬುಡಕಟ್ಟುಗಳ ಆಧುನೀಕರಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.[೧೮] ಇದೇ ಅಸಮಾಧಾನದ ಅಭಿಪ್ರಾಯಗಳೂ ಈ ಅಧ್ಯಯನದ ವಿಚಾರವಾಗಿ ಮಾತನಾಡುವ ಸಿದ್ದಿ ನಾಯಕರುಗಳೂ ವ್ಯಕ್ತಪಡಿಸಿದ್ದಾರೆ.

ಕೆ.ಜಿ. ಕರ್ಮಾಕರ (೨೦೦೨) ಅವರು ಇದಕ್ಕೆ ಪೂರಕವಾಗಿ, **'ದಿ ಸೈಲೆನ್ಸ್ಡ್ ಡ್ರಮ್ಸ್'** ಎಂಬ ಪುಸ್ತಕದಲ್ಲಿ ಹೇಳಿರುವಂತೆ ಬುಡಕಟ್ಟುಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಗ್ರಾಮೀಣ ರಸ್ತೆಗಳು, ಶಿಕ್ಷಣ, ಬುಡಕಟ್ಟು, ಮಾರುಕಟ್ಟೆ ಮತ್ತು ನಗರ ಮಾರುಕಟ್ಟೆಯನ್ನು ಜೋಡಿಸುವುದು, ಸಹಕಾರಕ್ರಿಯೆ, ಸಾರ್ವಜನಿಕ ವಿತರಣ ವ್ಯವಸ್ಥೆ, ವಾಣಿಜ್ಯ ಬ್ಯಾಂಕುಗಳು, ಕಾರ್ಮಿಕ ಸಂಘಟನೆ, ಉಳಿತಾಯ ಮತ್ತು ಸ್ವಸಹಾಯ ಗುಂಪುಗಳು, ಸಾಂಪ್ರದಾಯಿಕ ಬೆಳೆ ಪದ್ಧತಿಯಿಂದ ವಾಣಿಜ್ಯ ಬೆಳೆ ಪದ್ಧತಿಯ ಅಳವಡಿಕೆ, ವಾಣಿಜ್ಯಿಕ ಬುದ್ಧಿ ಸಾಮರ್ಥ್ಯದ ಸೃಷ್ಟಿ, ಅರಣ್ಯ ಉತ್ಪನ್ನಗಳ ಮುಕ್ತ

ವ್ಯಾಪಾರ, ಮೀಸಲಾತಿ ಸೌಲಭ್ಯ ಮುಂತಾದ ಅಂಶಗಳು ಕಾರಣೀಭೂತವಾದ ಅಂಶಗಳಾಗುತ್ತವೆ. ಜಾಗತೀಕರಣ ಪ್ರಕ್ರಿಯೆಯಿಂದ ಬುಡಕಟ್ಟು ಜನರಿಗೆ ಕರ್ಮಾಕರ ತಿಳಿಸಿರುವಂತೆ ಭೌತಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳು ಸೃಷ್ಟಿಯಾಗುತ್ತಿವೆಯೇ ಹೊರತು ಇದರಿಂದ ಬುಡಕಟ್ಟು ಸಮೂಹಗಳ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಾಧ್ಯವೇ ಎಂಬ ಪ್ರಶ್ನೆಗಳು ಉದ್ಭವಿಸುತ್ತಿವೆ.[೯]

ಹಿ.ಚಿ. ಬೋರಲಿಂಗಯ್ಯ (೧೯೯೩) ಅವರು **'ಸಿದ್ದಿಯರ ಸಂಸ್ಕೃತಿ'** ಎಂಬ ಪುಸ್ತಕದಲ್ಲಿ 'ಸಿದ್ದಿಯರ ಬದುಕು ಕಡು ಬಡತನವನ್ನು ಸಾರುವಂತದ್ದು, ಬಿದಿರಿನ ಹೊದಿಕೆಯ ಗೋಡೆಗೆ ಮಣ್ಣಿನ ಲೇಪನ, ಮೇಲೆ ಹುಲ್ಲಿನ ಸೂರು, ಒಂದು ಅಂಗಳ ಅದರ ಒಂದು ಮೂಲೆಯಲ್ಲಿ ಅಡಿಗೆ ಒಂದಿಷ್ಟು ಮಡಕೆ-ಕುಡಿಕೆ ಮತ್ತು ಬಿದಿರಿನ ಬುಟ್ಟಿ, ಇವೇ ಇವರ ಆಸ್ತಿ'[೨೦] ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಸಿದ್ದಿಗಳ ಜೀವನ ಮಟ್ಟದಲ್ಲಿ ಇತ್ತೀಚಿಗೆ ಆಗಿರುವ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ಸಹಕರಿಸುತ್ತದೆ.

ಟಿ.ಸಿ. ಪಾಲಾಕ್ಷಪ್ಪನವರು (೧೯೭೬) 'ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳು' ಎಂಬ ಪುಸ್ತಕದಲ್ಲಿ **'ಘರ್'** ಮತ್ತು 'ಬಿಡಾರ' ಎಂಬ ಕುಟುಂಬದ ಘಟಕಗಳು ಸಿದ್ದಿಯರಲ್ಲಿ ಕೌಟುಂಬಿಕ ಸಂಬಂಧಗಳನ್ನು ಸಧೃಡಗೊಳಿಸಿವೆ ಎಂದಿದ್ದಾರೆ.[೨೧] ಟಿ.ಸಿ. ಪಾಲಾಕ್ಷಪ್ಪ ಅವರು ಹೇಳಿರುವ ಸಿದ್ದಿಯರ ಕೌಟುಂಬಿಕ ಹಾಗೂ ಅವರ ನಡುವಿನ ಸಂಬಂಧಗಳಲ್ಲಿ ಹೇಗೆ ಬದಲಾವಣೆಗಳಾಗುತ್ತಿವೆ ಎನ್ನುವುದರ ಕಡೆಗೂ ಇಲ್ಲಿ ಗಮನಹರಿಸಲಾಗಿದೆ.

ಮೋಹಿನಿ ಪೂಜಾರಿ (೨೦೧೩) ಅವರು ಪ್ರೊ. ವಜ್ರಕುಮಾರ ಅಭಿನಂದನಾ ಪುರಸ್ಕಾರ ಸ್ವೀಕರಿಸಿ ಮಾತನಾಡುತ್ತಾ "ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಸಿದ್ದಿ ಜನಾಂಗಕ್ಕೆ ತಮ್ಮ ಹಕ್ಕು, ಸ್ವಾತಂತ್ರ್ಯ, ಸವಲತ್ತುಗಳು ಮತ್ತು ಸರಕಾರದ ಯೋಜನೆಗಳ ಬಗ್ಗೆ ಅರಿವು ಇರಲಿಲ್ಲ. ಕೇವಲ ಎರಡು ರೂಪಾಯಿಗಳಿಗೂ ಪರದಾಡುತ್ತ ಅವರು ಅಲೆಮಾರಿ ಜೀವನ ನಡೆಸುತ್ತಿದ್ದರು. ಕ್ರಮೇಣ ಬದಲಾದ ಕಾಲಮಾನದ ಪ್ರಭಾವದಿಂದ ಅವರು ಹಂತ ಹಂತವಾಗಿ ಅಭಿವೃದ್ಧಿ ಪಥದತ್ತ ಸಾಗಿದರು. ಈ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳು ಸರ್ಕಾರದ ಎಲ್ಲಾ ಸೌಲಭ್ಯಗಳನ್ನೂ ಅವರಿಗೆ ತಿಳಿಸಿ ಅವರು ಹೆಚ್ಚು ಸುಸಂಸ್ಕೃತರಾಗಲು ಸಹಕಾರ ನೀಡಿವೆ"[೨೨] ಎಂದಿದ್ದಾರೆ. ಅಂದರೆ ಇವರ ದೃಷ್ಟಿಯಲ್ಲಿ ಈ ಸಿದ್ದಿ ಜನರು ಅಭಿವೃದ್ದಿ ಹೊಂದಿದ್ದಾರೆಯೇ ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ.

'ಕರಾವಳಿ ಪ್ರದೇಶದ ಬಹುಸಂಖ್ಯಾತ ಬುಡಕಟ್ಟು ಸಮುದಾಯಗಳ ಜನರು, ಸಣ್ಣ ಮತ್ತು ಅತಿ ಸಣ್ಣ ರೈತರು ಮತ್ತು ಭೂರಹಿತ ಕೃಷಿ ಕಾರ್ಮಿಕರಿದ್ದಾರೆ. ಅವರ ಕೃಷಿ ಭೂಮಿಗೆ ನೀರಾವರಿ ಸೌಲಭ್ಯಗಳಿಲ್ಲ. ಆರ್ಥಿಕ ಹಿಡುವಳಿಗಳೂ ಆಗಿಲ್ಲ. ಇತರ ಜನಸಂಖ್ಯೆಗೆ ಹೋಲಿಸಿದರೆ ಮಾಸಿಕವಾಗಿ ಅವರ ತಲಾವಾರು ಖರ್ಚು ಮಾಡುವ ಸಾಮರ್ಥ್ಯವೂ ಕಡಿಮೆ. ಕಾಡುಗಳಲ್ಲಿ ವಾಸಿಸುತ್ತಿರುವ ಇವರಿಗೆ ಮೂಲಭೂತ ಸೌಲಭ್ಯಗಳ ಲಭ್ಯತೆಯೂ ಕಡಿಮೆ ಪ್ರಮಾಣದಲ್ಲಿದೆ. ಇತರ ಜನಸಮೂಹ

ಗಳೊಂದಿಗೆ ಹೋಲಿಸಿದಾಗ ಬುಡಕಟ್ಟು ಜನರು ಕರ್ನಾಟಕದ ಕರಾವಳಿಯಲ್ಲಿ ಹೆಚ್ಚು ಸಮಸ್ಯೆಗಳು ಮತ್ತು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ'[೨೩] ಎಂದು **ದುಗ್ಗಪ್ಪ ಕಜೆಕಾರ್** (೨೦೧೫) ತಮ್ಮ **'ಪ್ರಾಬ್ಲಮ್ಸ್ ಆಫ್ ಟ್ರೈಬಲ್ ಡೆವಲಪ್‌ಮೆಂಟ್ ಇನ್ ಕೋಸ್ಟಲ್ ಕರ್ನಾಟಕ'** ಎಂಬ ಸಂಶೋಧನಾ ಪ್ರಬಂಧದಲ್ಲಿ ಕಂಡುಕೊಂಡಿದ್ದಾರೆ. ಅದರಂತೆ ಈ ಅಧ್ಯಯನ ಕ್ಷೇತ್ರ ಮತ್ತು ಕರಾವಳಿ ಕರ್ನಾಟಕದ ಒಂದು ಜಿಲ್ಲೆಯಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಿಗಳು ವಾಸಿಸುವುದರಿಂದ ಅವರ ಸಮಸ್ಯೆಗಳು ಮತ್ತು ಕಷ್ಟಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಯನವು ಸಹಕಾರಿಯಾಗಿದೆ.

ಸಾಮಾಜಿಕ ಅಸಮಾನತೆ, ವರ್ಗ-ಅಸಮಾನತೆ ಪ್ರಧಾನವಾಗಿ ಎದ್ದು ಕಾಣುವ ಭಾರತ ದೇಶದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ, ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ಹಳ್ಳಿಗಳಿಗೆ ಶೌಚಾಲಯ ಕಟ್ಟಿಸಿ ಕೊಡುವುದು, ಸಾಕ್ಷರರಾಗಿರಿ ಎಂದು ಘೋಷಣೆ ಕೂಗುವುದು ಇದನ್ನೆ ಜನಸಮುದಾಯ ಅಭಿವೃದ್ಧಿ ಎಂದು ಪರಿಭಾವಿಸಿಕೊಂಡಂತೆ ಕಾಣುತ್ತದೆ. ಈ ಅಭಿವೃದ್ಧಿ ಎಂಬ ಸಂಕಥನವನ್ನು ಏಕಾಏಕಿಯಾಗಿ ಹೀಗೆ ಪರಿಭಾವಿಸುವ ಕ್ರಮ ಅಸಮಂಜಸ ವಾದದ್ದು. ಅಭಿವೃದ್ಧಿ ಯನ್ನು ಈ ಸಮಾಜ ಹುಟ್ಟು ಹಾಕಿರುವ ಅಸಮಾನತೆಯ ನೆಲೆಗಳ ಮೂಲಕ ನೋಡಿ ಗ್ರಹಿಸು ವುದು ಹೆಚ್ಚು ಸೂಕ್ತ[೨೪] ಎಂದು ಬುಡಕಟ್ಟು ಅಧ್ಯಯನ ಮಾಲೆ-೨ರಲ್ಲಿ **ಎ.ಎಸ್. ಪ್ರಭಾಕರ (೨೦೦೫)** ಅವರು ತಮ್ಮ ಅಧ್ಯಯನದಲ್ಲಿ ಅಭಿಪ್ರಾಯಪಡುತ್ತಾರೆ.

ನಿಜವಾಗಿಯೂ ಅಭಿವೃದ್ಧಿಯು ಸಮಸ್ಯೆಯಾಗಿರುವುದು ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕಾ ಪ್ರದೇಶದ ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿ ಎಂಬುದನ್ನು ಹೇಳಲೇಬೇಕಾದ ಅವಶ್ಯಕತೆಯಿಲ್ಲ[೨೫] ಎಂದು **ಟಿ.ಆರ್. ಚಂದ್ರಶೇಖರ್(೧೯೯೩)** ಅವರು **'ಅಭಿವೃದ್ಧಿ ಮೀಮಾಂಸೆ'**ಯಲ್ಲಿ ಹೇಳಿದ್ದಾರೆ. ವಸಹತುಶಾಹಿ ಧೋರಣೆಯಲ್ಲಿ ಆರ್ಥಿಕ ಅಭಿವೃದ್ಧಿಯನ್ನೇ ಅಭಿವೃದ್ಧಿ ಮಾನದಂಡವೆಂದು ಪರಿಗಣಿಸಲಾಗಿದೆ. ಅಮರ್ತ್ಯಸೇನರ 'ಮಾನವ ಅಭಿವೃದ್ಧಿ' ಎಂಬ ಮಾನದಂಡ ಮೂರನೇ ಜಗತ್ತಿನ ಅಭಿವೃದ್ಧಿಯ ಭ್ರಮೆಗಳನ್ನು ಬಯಲಿಗೆಳೆದಿವೆ. ಮೂರನೇ ಜಗತ್ತಿನ ದೇಶಗಳಲ್ಲಿ ಅಭಿವೃದ್ಧಿ ಎಂದರೆ ಬಂಡವಾಳದ ಅಭಿವೃದ್ಧಿ ಎಂದೇ ಆಗುತ್ತದೆ. ಅಂದರೆ ಒಂದು ಆರ್ಥಿಕತೆಯ ರಾಷ್ಟ್ರೀಯ ವರಮಾನದ ಪ್ರಮಾಣವು ಹೆಚ್ಚಾಗುವ ಪರಿಯನ್ನು ಅಭಿವೃದ್ಧಿ ಎಂದು ಭಾವಿಸಲಾಗುತ್ತದೆ[೨೬] ಎಂದು **ಟಿ.ಆರ್. ಚಂದ್ರಶೇಖರ್ (೨೦೦೬)** ಅವರು ಅಭಿವೃದ್ಧಿ ಅಧ್ಯಯನ ಪು. ೪ರಲ್ಲಿ ಹೇಳಿದ್ದಾರೆ.

ಬಹುತೇಕ ಕಡೆ ಬುಡಕಟ್ಟುಗಳು ಆಧುನಿಕತೆಯ ವೃತ್ತದೊಳಕ್ಕೆ ಬರಲು ಅನೇಕ ರೀತಿಯಲ್ಲಿ ಪ್ರಯತ್ನ ನಡೆಸುತ್ತಿರುವುದು ಕಂಡುಬರುತ್ತಿದೆ. ಜೊತೆಗೆ ನಾಡಿನ ಜನರು ಆಧುನಿಕತೆಯಿಂದಾಗಿ ಅವರಲ್ಲಿ ಹುಟ್ಟಿರುವ ಕೀಳರಿಮೆಯನ್ನು ಆದಷ್ಟು ನಿವಾರಿಸಿಕೊಳ್ಳಲೂ ಪ್ರಯತ್ನಿಸುತ್ತಿದ್ದಾರೆ. ಎಲ್ಲಿ ಮಾನವ ಸಂಪತ್ತಿಗೆ ಸಮಾನ ಗೌರವ, ಪ್ರೀತಿ, ಹಾಗೂ ಮನುಷ್ಯ ಸಂಬಂಧಗಳು ಸಾಧ್ಯವಾಗು ವುದಿಲ್ಲವೋ ಅಂತಲ್ಲಿ ಅಂಕಿ ಅಂಶಗಳು ಎಷ್ಟೇ ಎತ್ತರದ ಪ್ರಗತಿಯನ್ನು ವಿವರಿಸಿದರೂ ಅದು ಅಭಿವೃದ್ಧಿ ಎಂದಾಗುವುದಿಲ್ಲ'[೨೭] ಎಂದು **ಮೊಗಳ್ಳಿ ಗಣೇಶ (೨೦೦೫)** ಅವರು **'ದಲಿತರು ಮತ್ತು ಜಾಗತೀಕರಣ'** ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಎಂ. ಚಂದ್ರ ಪೂಜಾರಿ (೨೦೦೬) ಅವರು **'ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು'** ಎಂಬ ಲೇಖನದಲ್ಲಿ ಹೇಳಿರುವಂತೆ ಅಭಿವೃದ್ಧಿಯ ವ್ಯಾಖ್ಯಾನ ಬದಲಾದರೂ ಕೆಳವರ್ಗದ ಸ್ಥಿತಿ ಸುಧಾರಿಸು ವುದಿಲ್ಲ. ಅವರ ಸ್ಥಿತಿ ಸುಧಾರಣೆಯಾಗಬೇಕಾದರೆ ನಮ್ಮ ಮುಖ್ಯವಾಹಿನಿಯ ಸಾಮಾಜಿಕ ಮೌಲ್ಯ ಗಳಲ್ಲಿ ಮೂಲಭೂತ ಬದಲಾಣೆಗಳಾಗಬೇಕಾಗಿದೆ. ಪ್ರಸ್ತುತ ಈ ರೀತಿಯ ಮೌಲ್ಯಗಳಲ್ಲಿ ಜಾಗತೀಕರಣದ ಸಂದರ್ಭದಲ್ಲಿ ನೈತಿಕತೆಯ ಕೊರತೆ ಕಾಣುತ್ತಿದೆ. ಈ ಕೊರತೆಯನ್ನು ಸಾಮಾಜಿಕ ಮತ್ತು ರಾಜಕೀಯ ಒತ್ತಡಗಳಿಂದ ಮಾತ್ರ ಸರಿಪಡಿಸಲು ಸಾಧ್ಯ. ಅದಕ್ಕಾಗಿ ಬುಡಕಟ್ಟು ಮತ್ತು ಅಂಚಿನಲ್ಲಿರುವ ಜನರು ಸಂಘಟಿತ ಪ್ರಯತ್ನ ಮಾಡಬೇಕಾಗಿದೆ'[೫] ಎನ್ನುತ್ತಾರೆ. ಅವರು ಎತ್ತಿದ ಪ್ರಶ್ನೆಗಳಾದ ಸಿದ್ದಿ ಜನರು ಜಾಗತಿಕ ಸಂದರ್ಭದಲ್ಲಿ ನೈತಿಕತೆಯ ಕೊರತೆಯನ್ನು ಎದುರಿಸು ತ್ತಿದ್ದಾರೆಯೇ? ರಾಜಕೀಯ ಮತ್ತು ಸಾಮಾಜಿಕ ಒತ್ತಡಗಳು ಈ ಸಮುದಾಯದವರಿಗೆ ನೈತಿಕ ಬೆಂಬಲವನ್ನು ನೀಡುತ್ತಿವೆಯೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

೨೦ನೇ ಶತಮಾನದ ದ್ವಿತಿಯಾರ್ಧದಲ್ಲಿ ಅಳವಡಿಸಿಕೊಂಡಿರುವ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳು ಬುಡಕಟ್ಟುಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವಲ್ಲಿ ಸಂಪೂರ್ಣವಾಗಿ ಸಫಲವಾಗಿಲ್ಲ. ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರೂ ಸಹ ಬುಡಕಟ್ಟು ಗಳು ಹಲವಾರು ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಂದ ನರಳುತ್ತಿವೆ. ಆದ್ದರಿಂದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಗಳನ್ನು ಪರಿಶೀಲಿಸುವುದು ಅವಶ್ಯಕವಾಗಿದೆ. ಹಾಗೆಯೇ ಉತ್ತರಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಆಭಿವೃದ್ಧಿಯನ್ನು ಮಾನವ ಅಭಿವೃದ್ಧಿಯಲ್ಲಿ ಸಾಧಿಸಿರುವ ಅಂಶಗಳನ್ನು ಒಳಪಡಿಸಿಕೊಳ್ಳಬೇಕಿದೆ.

ಪ್ರಸ್ತುತ ಅಧ್ಯಯನದ ಸಮಸ್ಯೆಯೆಂದರೆ **ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಿದ್ದಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೇಲೆ, ಬುಡಕಟ್ಟು ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಮೈಕ್ರೋ ಲೆವೆಲ್ ಪರಿಣಾಮ** ಏನು? ಎನ್ನುವುದಾಗಿದೆ. ಇದುವರೆಗೂ ಭಾರತ ಮತ್ತು ಕರ್ನಾಟಕದಲ್ಲಿ ಬುಡಕಟ್ಟುಗಳ ಬಗ್ಗೆ ನಡೆದಿರುವ ಅಧ್ಯಯನಗಳು ಮಾನವಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಅಂಶಗಳ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿವೆ. ಪ್ರಸ್ತುತ ಅಧ್ಯಾಯನದಲ್ಲಿ ಸಿದ್ದಿಗಳ ಸಾಮಾಜಿಕ ಪರಿವರ್ತನೆ, ಮತ್ತು ಆರ್ಥಿಕ ಪರಿವರ್ತನೆಗಳ ವಿಶ್ಲೇಷಣೆಗೆ ಒತ್ತು ನೀಡಲು ಉದ್ದೇಶಿಸಲಾಗಿದೆ. ಹಾಗೆಯೇ ಕೆಳಗಿನ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸ ಲಾಗಿದೆ.

- ಸಿದ್ದಿ ಬುಡಕಟ್ಟುಗಳ ಅಭಿವೃದ್ಧಿಗೆ ಅನುಷ್ಠಾನಗೊಳಿಸಿರುವ ಯೋಜನೆಗಳಾವುವು?
- ಸಿದ್ದಿಗಳ ಪ್ರಸ್ತುತ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಹೇಗಿದೆ?

- ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ನಂತರ ಸಿದ್ದಿಗಳ ಜೀವನ ಸುಧಾರಿಸಿದೆಯೆ?
- ಸಿದ್ದಿಗಳ ಪ್ರಸ್ತುತ ಉದ್ಯೋಗ ಮತ್ತು ಆದಾಯದ ಮೂಲಗಳಾವುವು?

ಇಂತಹ ಹಲವಾರು ಪ್ರಶ್ನೆಗಳನ್ನು ಮುಂದ್ದಿಟ್ಟುಕೊಂಡು ಅವುಗಳಿಗೆ ಸೂಕ್ತ ಉತ್ತರಗಳನ್ನು ಕಂಡುಕೊಳ್ಳಲು ಅಧ್ಯಯನದ ಉದ್ದೇಶಗಳ ಮೂಲಕ ಪ್ರಯತ್ನಿಸಲಾಗಿದೆ.

ಈ ನಾಡಿಗೆ ಗುಲಾಮರಾಗಿ ಬಂದ ಸಿದ್ದಿಗಳು, ವಿವಿಧ ಕೆಲಸಗಳನ್ನು ಮಾಡತೊಡಗಿದರು. ಅವರು ಕೆಲಸಕ್ಕೆ ನೆಲೆನಿಂತ ಮನೆಯ ಒಡೆಯರ ಅಥವಾ ಪ್ರಭಾವಶಾಲಿ ವರ್ಗದ ಮತಧರ್ಮವನ್ನು ಸ್ವೀಕರಿಸಿ, ಅವರ ಜೀವನ ಕ್ರಮವನ್ನು ಅನುಸರಿಸಿ ತಾವು ಸ್ವೀಕರಿಸಿದ ಧಾರ್ಮಿಕ ಸಮೂಹದಲ್ಲಿ ತಮ್ಮ ಸ್ಥಾನಮಾನಗಳನ್ನು ಕಂಡುಕೊಂಡರು. ತಮ್ಮ ದೈಹಿಕ ನಿಲುವೊಂದನ್ನು ಬಿಟ್ಟರೆ ಉಳಿದ ಅಂಶಗಳಲ್ಲಿ ಸ್ಥಳೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಬೆರೆತು ಹೋಗಿದ್ದಾರೆ. ಇತ್ತೀಚೆಗೆ ಹಲವಾರು ಕಾರಣಗಳಿಂದ ದೈಹಿಕ ಲಕ್ಷಣಗಳಲ್ಲಿಯೂ ಬದಲಾವಣೆಗಳಾಗುತ್ತಿವೆ" ಎಂದು **ಎನ್.ಆರ್. ನಾಯಕ್ (೧೯೯೨)** ಅವರು ಉಲ್ಲೇಖಿಸುತ್ತಾರೆ. ಬಡತನದ ಬಾಳನ್ನು ಬದುಕುತ್ತಿರುವ ಸಿದ್ದಿ ಜನಾಂಗದ ಮಹಿಳೆಯರ ಮೇಲಿನ ಅನ್ಯರ ಅಕ್ರಮಣದಿಂದಾಗಿರಬಹುದು, ಸ್ತ್ರೀಯರ ಅಭಾವದಿಂದ ಸಿದ್ದಿ ಪುರುಷರು ಸ್ಥಳೀಯ ಕೆಳವರ್ಗದ ಮಹಿಳೆಯರನ್ನು ಸ್ವೀಕರಿಸಿದ್ದರಿಂದಾಗಿರಬಹುದು, ವರ್ಣಸಂಕರವಾಗಿ ಸ್ಥಳೀಯರಿಂದ ಭಿನ್ನವಾದ ಇವರ ಶಾರೀರಿಕ ನಿಲುವು ಕೂಡ ಬದಲಾಗುತ್ತಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗಳಲ್ಲಿ ಬೆರೆತು ಭಾರತೀಯ ಸರ್ವಧರ್ಮ ಸಿದ್ಧಾಂತವನ್ನು ಸಿದ್ದಿಗಳು ಆಚರಣೆಗೆ ಅಳವಡಿಸಿ ಕೊಂಡು ನಮಗೆಲ್ಲ ಮೇಲ್ಪಂಕ್ತಿ ಹಾಕಿದ್ದಾರೆ. ತೀರ ಹಿಂದುಳಿದ ಬುಡಕಟ್ಟಿಗೆ ಸೇರಿದ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ತೀರ ಹಿಂದುಳಿದಿರುವ ಇವರ ಅಭಿವೃದ್ಧಿಯ ವಿಚಾರದಲ್ಲಿ ಸರಕಾರ ಮುತುವರ್ಜಿವಹಿಸಿ ಇವರ ಕತ್ತಲಿನ ಬದುಕಿಗೆ ಬೆಳಕು ನೀಡುವುದು ಅವಶ್ಯಕವಾಗಿದೆ ಎಂದು ಎನ್.ಆರ್. ನಾಯಕ್ ಒತ್ತಾಯಪಡಿಸುತ್ತಾರೆ.

ಆರ್.ಎಸ್. ಹಿರೇಮಠ (೧೯೯೩) ಅವರು **'ಲೈಫ್ ಲಿವಿಂಗ್ ಆಂಡ್ ಲಾಂಗ್ವೇಜಸ್ ಆಫ್ ಸಿದ್ದಿಸ್ ಆಫ್ ನಾರ್ಥ್ ಕೆನರಾ'** ಎಂಬ ಸಂಶೋಧನ ಪ್ರಬಂದದಲ್ಲಿ ಹೇಳಿರುವಂತೆ, 'ಸಿದ್ದಿ ಸಮುದಾಯ ದಲ್ಲಿ ಹಿಂದು, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮೂಹಗಳಿಗೆ ಸೇರಿದ ಮೂರು ಧರ್ಮದ ಅನುಯಾಯಿಗಳಿದ್ದಾರೆ. ಈ ಮೂರು ಧರ್ಮಗಳ ಧಾರ್ಮಿಕ ಆಚರಣೆಗಳ ಹೊರತಾಗಿಯೂ, ಎಲ್ಲಾ ಸಿದ್ದಿಗಳಲ್ಲೂ, ಸ್ವರ್ಗ, ನರಕ ಮತ್ತು ಪುನರ್ಜನ್ಮ ಮುಂತಾದ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದಂತೆ ಕೆಲವು ಆಚರಣೆಗಳು ಸಾಮಾನ್ಯವಾಗಿ ಮೂರು ಧರ್ಮದ ಸಿದ್ದಿಗಳ ಆಚರಣೆಯಲ್ಲಿ ಕಂಡುಬರುತ್ತವೆ. ಸಿದ್ದಿಗಳ ಸಾಮಾಜಿಕ ಸಂಘಟನೆಗಳು ಇದೇ ಪ್ರದೇಶದ ನಡುವೆ ಉದ್ಭವಿಸುವ ಸಂಘಟನೆಗಳಗಿಂತ ಭಿನ್ನವಾಗಿದೆ. ಸಿದ್ದಿಗಳ ನಡುವೆ ಉದ್ಭವಿಸುವ ವಿವಾದಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ(ಕೌಟುಂಬಿಕ ವಿಚಾರಗಳೂ ಸೇರಿದಂತೆ), ಅವರದೇ ಆದ ವಿಚಾರಣಾ ವಿಧಾನಗಳನ್ನು ಅನುಸರಿಸುತ್ತಾರೆ'.[೩೦]

ಸಿದ್ದಿ ಬುಡಕಟ್ಟಿಗೆ ಸಂಬಂಧಿಸಿದ ಈ ಮೇಲಿನ ವಿವರಗಳಿಂದ ಪ್ರಸ್ತುತ ಅಧ್ಯಯನದಲ್ಲಿ ಉಂಟಾಗುವ ಸಂಶಯಗಳೆಂದರೆ, ಸಿದ್ದಿಯರು ವಿದೇಶಿ ಮೂಲದವರಾಗಿದ್ದು, ಸ್ವತಂತ್ರವಾದ ಬದುಕಿನ ಅವಕಾಶಗಳಿಂದಲೂ ವಂಚಿತರಾಗಿರುವ ಇವರ ಜೀವನವು ಸರ್ಕಾರ ಕೈಗೊಂಡ ಕಲ್ಯಾಣ ಯೋಜನೆಗಳು ಮತ್ತು ಬುಡಕಟ್ಟು ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನ ಪಡೆದು ಅಪೇಕ್ಷಣೀಯವಾದ ಪರಿವರ್ತನೆ ಹೊಂದುತ್ತಿದೆಯೇ? ಬದಲಾವಣೆ ಹೊಂದುತ್ತಿದ್ದರೆ, **ಎಂ.ಎನ್. ಶ್ರೀನಿವಾಸ್ (೧೯೭೨)** ಅವರು **'ರಿಲಿಜಿಯನ್ ಅಂಡ್ ಸೊಸಾಯಿಟಿ ಅಮಾಂಗ್ ದಿ ಕೂರ್ಗ್ಸ್ ಆಫ್ ಸೌತ್ ಇಂಡಿಯಾ'** ಎಂಬ ಗ್ರಂಥದಲ್ಲಿ ಪರಿಚಯಿಸಿರುವ ಭಾರತೀಯ ಸಮಾಜದ ಸಾಮಾಜಿಕ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕ ವಾಗಿರುವ ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣ ಪ್ರಕ್ರಿಯೆಗಳಿಗೆ ಒಳಗಾಗಿದ್ದಾರೆಯೇ? ಅಥವಾ 'ಸೋಶಿಯಲ್ ಚೇಂಜ್ ಇನ್ ಮಾಡರ್ನ್ ಇಂಡಿಯಾ' ಎಂಬ ಗ್ರಂಥದಲ್ಲಿ ತಿಳಿಸಿರುವಂತೆ ಸ್ಥಳೀಯ 'ಪ್ರಬಲ ಜಾತಿ'ಯ ಪ್ರಭಾವಕ್ಕೆ ಒಳಗಾಗಿ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಹೊಂದುತ್ತಿದೆಯೇ? ಅಥವಾ ಡೇನಿಯಲ್ ಲರ್ನರ್ ಅವರ ಆಧುನೀಕರಣ ಪರಿಕಲ್ಪನೆಯಂತೆ ಪರಿವರ್ತನಾ ಪ್ರಕ್ರಿಯೆಯಲ್ಲಿ ಭಾಗಿಗಳಾಗಿದ್ದಾರೆಯೇ? ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ.[೫]

ಹಾಗೆಯೇ ಶ್ರೇಷ್ಠ ಅರ್ಥಶಾಸ್ತ್ರಜ್ಞ ಮತ್ತು ಸಮಾಜಶಾಸ್ತ್ರಜ್ಞರೂ ಆಗಿರುವ ದಾರ್ಶನಿಕ ಕಾರ್ಲ್ ಮಾರ್ಕ್ಸ್ ಅವರ ವಿಚಾರದಂತೆ ಸಿದ್ದಿ ಸಮೂಹದ ಆರ್ಥಿಕ ಅಂಶಗಳು ಅವರ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಪ್ರಭಾವಿಸುತ್ತಿವೆಯೇ? ಅಥವಾ ಸಮಾಜಶಾಸ್ತ್ರದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಮ್ಯಾಕ್ಸ್ ವೆಬರ್ಅವರ ವಿಚಾರಗಳಂತೆ ಅವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳು ಸಿದ್ದಿ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಪ್ರಭಾವಿಸುತ್ತಿವೆಯೆ? ಎಂಬ ಪ್ರಶ್ನೆಗಳೂ ಮೂಡುತ್ತವೆ.

೧.೫. ಅಧ್ಯಯನದ ಉದ್ದೇಶಗಳು

೧. ಸಿದ್ದಿಗಳ ಪ್ರಸ್ತುತ ಸಾಮಾಜಿಕ ಪರಿವರ್ತನೆಯನ್ನು ಅಧ್ಯಯನ ಮಾಡಲು

- ಸಿದ್ದಿಗಳ ಸಾಮಾಜಿಕ ಏಣಿ-ಶ್ರೇಣಿಯಲ್ಲಿ ಉಂಟಾದ ಪರಿವರ್ತನೆ,
- ಸಿದ್ದಿಗಳ ಕುಟುಂಬದ ರಚನೆಯಲ್ಲಿ ಉಂಟಾದ ಪರಿವರ್ತನೆ
- ಮಹಿಳೆಯರ ಸ್ಥಾನಮಾನಗಳ ಬಗ್ಗೆ ಅಧ್ಯಯನ
- ಶಿಕ್ಷಣ, ಆರೋಗ್ಯ, ನೈರ್ಮಲ್ಯ ಕುರಿತಾದ ಸ್ಥಿತಿಗತಿಗಳ ಬಗ್ಗೆ ಅಧ್ಯಯನ

೨. ಸಿದ್ದಿಗಳ ಪ್ರಸ್ತುತ ಆರ್ಥಿಕ ಪರಿವರ್ತನೆ ಪ್ರಕ್ರಿಯೆಯನ್ನು ಅಧ್ಯಯನ ಮಾಡಲು ಸಿದ್ದಿಗಳ ಉದ್ಯೋಗ ಅಥವಾ ವೃತ್ತಿ, ಭೂ ಒಡೆತನ, ಆಸ್ತಿಯ ಒಡೆತನ, ಆದಾಯ ಮತ್ತು ವಸತಿ ಮುಂತಾದ ಅಂಶಗಳನ್ನು ಆಳವಾಗಿ ಅವಲೋಕಿಸುವುದು.

೩. ಸಿದ್ದಿ ಬುಡಕಟ್ಟಿನ ಸಾಮಾಜಿಕ-ಆರ್ಥಿಕ ಪರಿವರ್ತನೆಗೆ ಕಾರಣವಾಗಿರುವ ಅಂಶಗಳನ್ನು ಕಂಡುಕೊಳ್ಳುವುದು.

೪. ಸಾಮಾಜಿಕ-ಆರ್ಥಿಕ ಜೀವನದ ಪರಿವರ್ತನಾ ಪ್ರಕ್ರಿಯೆಯು ಹೇಗೆ ನಡೆಯುತ್ತಿದೆ ಎಂಬುದನ್ನು ಅಧ್ಯಯನ ಮಾಡುವುದು.

೧.೬. ಅಧ್ಯಯನದ ವೈಧಾನಿಕತೆ

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಮತ್ತು ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಲು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಯಲ್ಲಾಪುರ, ಅಂಕೋಲ ಮತ್ತು ಮುಂಡಗೋಡು ತಾಲುಕುಗಳಲ್ಲಿನ ವಿವಿಧ ಹಳ್ಳಿಗಳಲ್ಲಿ ಮಾಹಿತಿದಾರರನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ತಾಲೂಕುಗಳಲ್ಲಿ ಜಿಲ್ಲೆಯ ಇತರ ತಾಲೂಕುಗಳಿಗಿಂತ ಸಿದ್ದಿ ಜನಾಂಗದವರು ಹೆಚ್ಚಾಗಿ ನೆಲೆಸಿರುವ ಹಿನ್ನೆಲೆಯಲ್ಲಿ ಈ ಆಯ್ಕೆ ನಡೆದಿದೆ. ಹಳಿಯಾಳ ತಾಲೂಕಿನಲ್ಲಿ ಸಿದ್ದಿ ಜನರು ನೆಲೆಸಿರುವ ಜತಗಾ ಹೊಸೂರು, ತಟ್ಟಿಗೇರಿ, ಸಾಂಬ್ರಾಣಿ, ಕುಂಬಾರಕೊಪ್ಪ, ಗುಂಡೊಳ್ಳಿ, ಕಾಮ್ತಿಕೊಪ್ಪ, ಗಾಡಗೇರ, ಬಿದ್ರೊಳ್ಳಿ, ಮೊದಲಗೇರ, ಖಾಮಡೊಳ್ಳಿ, ಗೋಲೇಹಳ್ಳಿ, ತತ್ವಣಗಿ, ವಾಡ, ಭಾಗವತಿ ಮತ್ತು ಗರಡೊಳ್ಳಿ ಗ್ರಾಮಗಳಿಗೆ ಸೇರಿದ **೧೫೦ ಕುಟುಂಬಗಳನ್ನು**, ಯಲ್ಲಾಪುರ ತಾಲೂಕಿನಲ್ಲಿ ಸಿದ್ದಿ ಜನರು ನೆಲೆಸಿರುವ ಕಿರವತ್ತಿ, ಬೈಲಂದೂರು, ಹುಣಶೆಟ್ಟಿಕೊಪ್ಪ, ಕರಿವನಗುಂಡಿ, ನಂಡೊಳ್ಳಿ, ಮಾಗೋಡು, ವಂಡ್ರಮನೆ, ಕಬ್ಬಿನಗದೆ, ಮಳಲಗಾಂವ, ಗುಳ್ಳಾಪುರ, ಮಂಚೀಕೇರಿ, ಜಂಗಶೆಟ್ಟಿಕೊಪ್ಪ, ಹುಲಿಕಾಲ, ಕಣ್ಣಿಗೇರಿ, ಬಿಳಕಿ, ಲಂಬಿಬಾವಿ, ಜೇಡಿಗದ್ದಿ, ಭರಣಿ, ಮಾವಿನಕಟ್ಟೆ ಮತ್ತು ಉಮಚಗಿ ಗ್ರಾಮಗಳಿಗೆ ಸೇರಿದ **೧೪೫ ಕುಟುಂಬಗಳನ್ನು**, ಮುಂಡಗೋಡು ತಾಲೂಕಿನ ಮೈನಳ್ಳಿ, ಗುಂಜಾವತಿ, ಕೇಂದಲಗೇರಿ, ಉಗ್ಗಿನಕೇರಿ ಮತ್ತು ಕಾಲಾಗಾನಕೊಪ್ಪ ಗ್ರಾಮಗಳಲ್ಲಿ **೪೫ ಕುಟುಂಬಗಳನ್ನು** ಮತ್ತು ಅಂಕೋಲ ತಾಲೂಕಿನ ಹೆಗ್ಗಾರ ರಾಮನಗುಳಿ, ಸಾತನಬೈಲು, ಮಲಗಾಂವ, ಹೆಬ್ಬಾರಗೋಡ್, ಕಮ್ಮಾಣಿ ಕಲ್ಲೇಶ್ವರ, ಹಳವಳ್ಳಿ ಮತ್ತು ಕಳಸೂರು ಗ್ರಾಮಗಳಲ್ಲಿ **೫೦ ಕುಟುಂಬಗಳನ್ನು** 'ಪ್ರಾತಿನಿಧಿಕ ಮಾದರಿ'ಗಳನ್ನಾಗಿ ಆಯ್ಕೆ ಮಾಡಿಕೊಂಡು, ಪ್ರಶ್ನಾವಳಿ ಮತ್ತು ಸಂದರ್ಶನ ಅನುಸೂಚಿಗಳ ಜೊತೆಗೆ ಗುಂಪುಚರ್ಚೆ, ಸಾಂದರ್ಭಿಕ ಅವಲೋಕನ, ಅನೌಪಚಾರಿಕ ಸಂಭಾಷಣೆಗಳ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಹಳಿಯಾಳ ತಾಲೂಕಿನಲ್ಲಿ ಸಿದ್ದಿ ಜನರು ನೆಲೆಸಿರುವ ಜತಗಾ ಹೊಸೂರು ಗ್ರಾಮದ ೨೫ ಕುಟುಂಬಗಳ ಪೈಕಿ ೦೫ ಕುಟುಂಬಗಳನ್ನು, ತಟ್ಟೀಗೇರಿ ಗ್ರಾಮದ ೮೨ ಕುಟುಂಬಗಳ ಪೈಕಿ ೨೦ ಕುಟುಂಬಗಳನ್ನು, ಸಾಂಬ್ರಾಣಿ ಗ್ರಾಮದ ೫೦ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು, ಕುಂಬಾರ ಕೊಪ್ಪಲಿನ ೦೧ ಕುಟುಂಬವನ್ನು, ಗುಂಡೊಳ್ಳಿ ಗ್ರಾಮದ ೦೭ ಕುಟುಂಬಗಳ ಪೈಕಿ ೦೨ ಕುಟುಂಬಗಳನ್ನು, ಕಾಮ್ತಿಕೊಪ್ಪ ಗ್ರಾಮದ ೩೬ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು, ಗಾಡಗೇರ ಗ್ರಾಮದ ೩೨ ಕುಟುಂಬಗಳ ಪೈಕಿ ೦೭ ಕುಟುಂಬಗಳನ್ನು, ಬಿದ್ರೊಳ್ಳಿ ಗ್ರಾಮದ ೧೧ ಕುಟುಂಬಗಳ ಪೈಕಿ ೦೩ ಕುಟುಂಬಗಳನ್ನು, ಮೊದಲಗೇರ ಗ್ರಾಮದ ೦೩ ಕುಟುಂಬಗಳ ಪೈಕಿ

೦೧ ಕುಟುಂಬವನ್ನು, ಖಾಮಡೊಳ್ಳಿ ಗ್ರಾಮದಲ್ಲಿರುವ ಎರಡೂ ಕುಟುಂಬಗಳನ್ನು, ತತ್ತ್ರಣಗಿ ಗ್ರಾಮದ ೮೫ ಕುಟುಂಬಗಳ ಪೈಕಿ ೨೦ ಕುಟುಂಬಗಳನ್ನು, ಗೋಲೀಹಳ್ಳಿ ಗ್ರಾಮದ ೮೨ ಕುಟುಂಬಗಳ ಪೈಕಿ ೨೦ ಕುಟುಂಬಗಳನ್ನು, ವಾಡಾ ಗ್ರಾಮದ ೫೨ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು, ಭಾಗವತಿ ಗ್ರಾಮದ ೧೦೫ ಕುಟುಂಬಗಳ ಪೈಕಿ ೨೫ ಕುಟುಂಬಗಳನ್ನು, ಮತ್ತು ಗರಡೊಳ್ಳಿ ಗ್ರಾಮದ ೯೮ ಕುಟುಂಬಗಳ ಪೈಕಿ ೧೫ ಕುಟುಂಬಗಳನ್ನು ಸಂಧರ್ಬೋಚಿತ ವಾಗಿ ಯಾಧೃಚ್ಚಿಕ ಮತ್ತು ಉದ್ದೇಶಪೂರ್ವಕ ಎರಡೂ ವಿಧಾನಗಳಿಂದಲೂ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅದೇ ರೀತಿಯಲ್ಲಿ ಯಲ್ಲಾಪುರ ತಾಲೂಕಿನ ಕಿರುವತ್ತಿ ಗ್ರಾಮದಲ್ಲಿ ನೆಲೆಸಿರುವ ೪೮ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು, ಬೈಲಂದೂರು ಗ್ರಾಮದ ೪೮ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು, ಹುಣಶೆಟ್ಟಿಕೊಪ್ಪ ಗ್ರಾಮದ ೩೨ ಕುಟುಂಬಗಳ ಪೈಕಿ ೧೦ ಕುಟುಂಬ ಗಳನ್ನು, ಕುರುವಿನಕೊಪ್ಪ ಗ್ರಾಮದಲ್ಲಿನ ೦೩ ಕುಟುಂಬಗಳನ್ನು, ನಂದೊಳ್ಳಿ ಗ್ರಾಮದ ೧೦ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಮಾಗೋಡು ಗ್ರಾಮದ ೦೬ ಕುಟುಂಬಗಳ ಪೈಕಿ ೦೩ ಕುಟುಂಬಗಳನ್ನು, ವಂಡ್ರಮನೆ ಗ್ರಾಮದ ೦೫ ಕುಟುಂಬಗಳ ಪೈಕಿ ೦೨ ಕುಟುಂಬಗಳನ್ನು, ಕಬ್ಬಿನಗದ್ದೆ ಗ್ರಾಮದ ೧೧ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಮಳಲಗಾಂವ್ ಗ್ರಾಮದ ೦೬ ಕುಟುಂಬಗಳ ಪೈಕಿ ೦೨ ಕುಟುಂಬಗಳನ್ನು, ಗುಳ್ಳಾಪುರ ಗ್ರಾಮದ ೮೦ ಕುಟುಂಬಗಳ ಪೈಕಿ ೨೦ ಕುಟುಂಬಗಳನ್ನು, ಮಂಚೀಕೆರಿ ಗ್ರಾಮದ ೩೫ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು, ಜಂಗಶೆಟ್ಟಿಕೊಪ್ಪ ಗ್ರಾಮದ ೧೮ ಕುಟುಂಬಗಳ ಪೈಕಿ ೦೬ ಕುಟುಂಬಗಳನ್ನು, ಕಣ್ಣಿಗೇರಿ ಗ್ರಾಮದ ೦೭ ಕುಟುಂಬಗಳ ಪೈಕಿ ೦೩ ಕುಟುಂಬಗಳನ್ನು, ಬಿಳಕಿ ಗ್ರಾಮದ ೩೦ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು, ಹುಲಿಕಾಲ ಗ್ರಾಮದ ೦೮ ಕುಟುಂಬಗಳ ಪೈಕಿ ೦೩ ಕುಟುಂಬಗಳನ್ನು, ಲಿಂಬೀಭಾವಿ ಗ್ರಾಮದ ೧೫ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ನಂದೀಭಾವಿ ಗ್ರಾಮದ ೧೪ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಜೇಡಿಗದ್ದೆ ಗ್ರಾಮದ ೧೪ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಭರಣಿ ಗ್ರಾಮದ ೧೩ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಮಾವಿನಕಟ್ಟೆ ಗ್ರಾಮದ ೦೫ ಕುಟುಂಬಗಳ ಪೈಕಿ ೦೨ ಕುಟುಂಬಗಳನ್ನು, ಉಮಚಗಿ ಗ್ರಾಮದ ೦೪ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ಗುಡಂದೂರು ಗ್ರಾಮದ ೩೦ ಕುಟುಂಬಗಳ ಪೈಕಿ ೦೭ ಕುಟುಂಬಗಳನ್ನು, ತಾವರಕಟ್ಟೆ ಗ್ರಾಮದ ೩೦ ಕುಟುಂಬಗಳ ಪೈಕಿ೦೩೬ ಕುಟುಂಬಗಳನ್ನು, ಹಳ್ಳಿಗದ್ದೆ ಗ್ರಾಮದ ೩೦ ಕುಟುಂಬಗಳ ಪೈಕಿ ೦೭ ಕುಟುಂಬಗಳನ್ನು ಮತ್ತು ಉಚಗೇರಿ ಗ್ರಾಮದ ೨೫ ಕುಟುಂಬಗಳ ಪೈಕಿ ೦೫ ಕುಟುಂಬಗಳನ್ನು ಸಂಧರ್ಬೋಚಿತವಾಗಿ ಯಾಧೃಚ್ಚಿಕ ಮತ್ತು ಉದ್ದೇಶಪೂರ್ವಕ ಎರಡೂ ವಿಧಾನಗಳಿಂದಲೂ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾಗೆಯೇ, ಮುಂಡಗೋಡು ತಾಲೂಕಿನ ಮೈನಳ್ಳಿ ಗ್ರಾಮದ ೪೫ ಕುಟುಂಬಗಳ ಪೈಕಿ ೦೭ ಕುಟುಂಬಗಳನ್ನು, ಗುಂಜಾವತಿ ಗ್ರಾಮದ ೯೮ ಕುಟುಂಬಗಳ ಪೈಕಿ ೧೦ ಕುಟುಂಬಗಳನ್ನು,

ಕೆಂದಲಗೇರಿ ಗ್ರಾಮದ ೧೧೦ ಕುಟುಂಬಗಳ ಪೈಕಿ ೨೦ ಕುಟುಂಬಗಳನ್ನು ಮತ್ತು ಉಗ್ಗಿನಕೇರಿ ಗ್ರಾಮದ ೬೦ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು ಸಂಧರ್ಭೋಚಿತವಾಗಿ ಯಾಧೃಚ್ಚಿಕ ಮತ್ತು ಉದ್ದೇಶಪೂರ್ವಕ ಎರಡೂ ವಿಧಾನಗಳಿಂದಲೂ ಕುಟುಂಬಗಳನ್ನು ಆಯ್ಕೆ ಮಾಡಿ ಕೊಳ್ಳಲಾಗಿದೆ.

ಇದೇ ರೀತಿಯಲ್ಲಿ ಅಂಕೋಲ ತಾಲೂಕಿನ ಹೆಗ್ಗಾರ ಗ್ರಾಮದ ೧೮ ಕುಟುಂಬಗಳ ಪೈಕಿ ೦೪ ಕುಟುಂಬಗಳನ್ನು, ರಾಮನಹಳ್ಳಿ ಗ್ರಾಮದ ೦೭ ಕುಟುಂಬಗಳ ಪೈಕಿ ೦೩ ಕುಟುಂಬಗಳನ್ನು, ಶಾಂತನಬೈಲು ಗ್ರಾಮದ ೨೯ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು, ಮಲಗಾಂವ್ ಗ್ರಾಮದ ೪೦ ಕುಟು ಬಗಳ ಪೈಕಿ ೯೮ ಕುಟುಂಬಗಳನ್ನು, ಹೆಬ್ಬಾರಗೋಡು ಗ್ರಾಮದ ೩೦ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು ಕಮ್ಮಾಣಿ ಮತ್ತು ಕಲ್ಲೇಶ್ವರ ಗ್ರಾಗಳ ೪೭ ಕುಟುಂಬ ಗಳ ಪೈಕಿ ೧೦ ಕುಟುಂಬಗಳನ್ನು ಮತ್ತು ಹಳವಳ್ಳಿ ಗ್ರಾಮದ ೩೦ ಕುಟುಂಬಗಳ ಪೈಕಿ ೦೮ ಕುಟುಂಬಗಳನ್ನು ಸಂಧರ್ಭೋಚಿತವಾಗಿ ಯಾಧೃಚ್ಚಿಕ ಮತ್ತು ಉದ್ದೇಶಪೂರ್ವಕ ಎರಡೂ ವಿಧಾನ ಗಳಿಂದಲೂ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ **ಪ್ರಾಥಮಿಕ ಮತ್ತು ಅನುಷಂಗಿಕ ವಿಧಾನಗಳೆರಡರ** ಸಹಾಯವನ್ನು ಪಡೆದುಕೊಂಡು ಅಧ್ಯಯನಕ್ಕೆ ಬೇಕಾಗಿದ್ದ ಮಾಹಿತಿಗಳನ್ನು ಸಂಗ್ರಹಿಸಿರುವುದರಿಂದ, ಇದು ಒಂದು ಎಂಪಿರಿಕಲ್ ಅಧ್ಯಯನವಾಗಿದೆ. ಹಾಗೆಯೇ, ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳೆರಡನ್ನೂ ಇದು ಒಳಗೊಂಡಿದ್ದು ಹೆಚ್ಚು ವೈಜ್ಞಾನಿಕ ಸ್ವರೂಪವನ್ನು ಪಡೆದುಕೊಂಡಿದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮಾಧ್ಯಮಿಕ ಮೂಲಗಳಿಂದ ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ಅಂಕಿ ಅಂಶಗಳು ಮತ್ತು ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ಹಾಗೆಯೇ ಸಿದ್ದಿ ಬುಡಕಟ್ಟು ಸಮುದಾಯದ ಅಭಿವೃದ್ಧಿ ಪ್ರಕಿಯೆಯನ್ನು ತಿಳಿದುಕೊಳ್ಳಲು ಮಾನವ ಅಭಿವೃದ್ಧಿ ಸೂಚ್ಯಂಕ, ಮಾನವ ಬಡತನ ಸೂಚ್ಯಂಕ, ಮತ್ತು ಲಿಂಗತಾರತಮ್ಯ ಸೂಚ್ಯಂಕಗಳಂತಹ ರಚನಾತ್ಮಕವಾದ ಮಾನವ ಅಭಿವೃದ್ಧಿ ಸೂಚ್ಯಂಕ ವಿಧಾನಗಳ ಸಹಾಯದಿಂದ ಅಧ್ಯಯನ ಮಾಡಲಾಗಿದೆ. ಈ ಮೇಲೆ ತಿಳಿಸಿರುವ ಸೂಚ್ಯಂಕಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಬುಡಕಟ್ಟು ಜನರ ಅದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಜನರ ಸ್ಥಿತಿಗತಿ ಗಳನ್ನು ಅಧ್ಯಯನ ಮಾಡಲಾಗಿದೆ. ಇದಕ್ಕಾಗಿ ಸಮಾಜಶಾಸ್ತ್ರೀಯ ಸಂಶೋಧನಾ ವಿಧಾನಗಳಾದ ಸಂದರ್ಶನ, ಸಂದರ್ಶನ ಅನುಸೂಚಿ, ಪ್ರಶ್ನಾವಳಿ, ಗುಂಪು ಚರ್ಚೆ, ಅವಲೋಕನ, ಕುಟುಂಬ ಸಮೀಕ್ಷೆಗಳಂತಹ ವಿಧಾನಗಳ ಮೂಲಕ ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅಧ್ಯಯನ ವಿಧಾನದ ಸಂಪೂರ್ಣ ವಿವರವನ್ನು ಎರಡನೇ ಅಧ್ಯಾಯದಲ್ಲಿ ಕೊಡಲಾಗಿದೆ.

ಮುಂಚಿತವಾಗಿ, ಗ್ರಾಮ ಪಂಚಾಯತಿಗಳ ಮುಖ್ಯಸ್ಥರು ಮತ್ತು ಸದಸ್ಯರುಗಳು, ಸಂಬಂಧಪಟ್ಟ ತಾಲೂಕುಗಳ ತಹಶೀಲ್ದಾರರು, ಸಮಾಜಕಲ್ಯಾಣ ಅಧಿಕಾರಿಗಳು, ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಅಧಿಕಾರಿಗಳು(ಐ.ಟಿ.ಡಿ.ಪಿ.), ಕರ್ನಾಟಕ ಪರಿಶಿಷ್ಟ ಬುಡಕಟ್ಟುಗಳ

ಅಭಿವೃದ್ಧಿ ನಿಗಮದ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಕೆಲವು ಅಧಿಕಾರಿಗಳು ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳು ಮತ್ತು ಸಿದ್ದಿ ಸಮುದಾಯದ ಬಗ್ಗೆ ಮಾಹಿತಿ ಮತ್ತು ಅವರು ನೆಲೆಸಿರುವ ಪ್ರದೇಶಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಕಛೇರಿಗಳ ಅಧಿಕಾರಿಗಳನ್ನು ಸಂದರ್ಶಿಸಲಾಗಿದೆ. ಹಾಗೆಯೆ, ಸಿದ್ದಿ ಸಮುದಾಯದ ವಿವಿಧ ಸಂಘಟನೆಗಳ ಮುಖ್ಯಸ್ಥರುಗಳು, ಗ್ರೀನ್ ಇಂಡಿಯಾ ಟ್ರಸ್ಟ್, ಜೀವಿಕಾ ಟ್ರಸ್ಟ್, ಕಾರವಾರ ಜಿಲ್ಲಾ ಧರ್ಮ ಪ್ರಾಂತ್ಯ ಅಭಿವೃದ್ಧಿ ಪರಿಷತ್‌ಗಳಂತಹ ಸರಕಾರೇತರ ಸಂಸ್ಥೆಗಳ ಮುಖ್ಯಸ್ಥರು, ಸಂಯೋಜಕರು, ಹಾಗೂ ಕಾರ್ಯಕರ್ತರ ಸಹಾಯವನ್ನು ಪಡೆಯಲಾಗಿದೆ. ಜಿಲ್ಲಾ ಗೆಜೆಟಿಯರ್, ಕರ್ನಾಟಕ ಅಂಕಿ ಅಂಶಗಳ ಪಕ್ಷಿನೋಟ(ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು), ಉತ್ತರ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ಪಕ್ಷಿನೋಟ, ಕರ್ನಾಟಕ ರಾಜ್ಯ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿ ನಿಗಮದ ಕ್ರಿಯಾ ಯೋಜನೆಗಳು ಈ ಅಧ್ಯಯನಕ್ಕೆ ಸಾಕಷ್ಟು ಮಾಹಿತಿಗಳನ್ನು ಒದಗಿಸಿವೆ.

ಸಿದ್ದಿ ಬುಡಕಟ್ಟು ಜನರು ವಾಸಿಸುವ ಹಳ್ಳಿಗಳನ್ನು 'ಹಿಂದುಳಿದಿರುವವು' ಮತ್ತು 'ಅಭಿವೃದ್ಧಿ ಹೊಂದಿದ' ಮತ್ತು 'ಕಾಡಿನ ಒಳಗೆ ಇರುವ ಹಳ್ಳಿಗಳು' ಮತ್ತು 'ಪಟ್ಟಣಗಳಿಗೆ ಹತ್ತಿರವಿರುವ ಹಳ್ಳಿಗಳು' ಎಂಬಿತ್ಯಾದಿ ಮಾದರಿಯಲ್ಲಿ ಪರಿಗಣಿಸಿ, ಇಂತಹ ಎಲ್ಲಾ ರೀತಿಯ ಹಳ್ಳಿಗಳಿಂದಲೂ ಸಂದರ್ಶನಕ್ಕಾಗಿ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಹಳ್ಳಿಗಳಲ್ಲಿ ಆಯ್ಕೆಮಾಡಿ ಕೊಂಡ ಮಾಹಿತಿದಾರರನ್ನು ಸ್ಥಳೀಯ ಶಿಕ್ಷಕರು, ವಿದ್ಯಾರ್ಥಿಗಳು, ಸರಕಾರೇತರ ಸಂಸ್ಥೆ(ಎನ್.ಜಿ.ಓ) ಗಳ ಸಾಮಾಜಿಕ ಕಾರ್ಯಕರ್ತರು, ಪಂಚಾಯಿತಿ ಅಧಿಕಾರಿಗಳಂತಹ ಸಿದ್ದಿ ಬುಡಕಟ್ಟು ಕುಟುಂಬ ಗಳಿಗೆ ಆಪ್ತ ಪರಿಚಯಸ್ಥರ ಸಹಾಯದ ಮೂಲಕ ಸಂಪರ್ಕ ಸಾಧಿಸಿಕೊಂಡು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

'ಸಹಭಾಗಿ ಅವಲೋಕನ' ಮತ್ತು 'ಸಂದರ್ಶನ ತಂತ್ರ'ಗಳನ್ನು ಅಧ್ಯಯನದಲ್ಲಿ ಉಪಯೋಗಿಸ ಲಾಗಿದೆ. ಸಿದ್ದಿ ಸಮುದಾಯದ ಹಿಂದಿನ ಇತಿಹಾಸದ ಬಗ್ಗೆ, ಈ ಹಿಂದೆ ನಡೆಸಿರುವ ಅಧ್ಯಯನಗಳು, ಆಡಳಿತ ಮಂಡಳಿಗಳಲ್ಲಿರುವ ದಾಖಲೆಗಳು ಮತ್ತು ಸಮುದಾಯದ ಹಿರಿಯ ಸದಸ್ಯರುಗಳೊಂದಿಗೆ ಸಂದರ್ಶನ ಮಾಡುವ ಮೂಲಕ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

ಸಿದ್ದಿ ಬುಡಕಟ್ಟು ಸಮುದಾಯದ ಜೀವನದ ರೀತಿ-ನೀತಿಗಳು, ಹಬ್ಬ-ಹರಿದಿನ, ವಿವಾಹ, ನೃತ್ಯ, ಬೇಟೆಯ ಕ್ಷಿಪ್ರತೆ, ಬುಟ್ಟಿ ಮಾಡುವ ಕೆಲಸ, ಪೂಜೆ ಪುರಸ್ಕಾರ, ಗಿಡಮೂಲಿಕೆಗಳ ಸಂಗ್ರಹ ಮತ್ತು ಮಾರುಕಟ್ಟೆ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡಲು ಸಿದ್ದಿ ಸಮುದಾಯದ ಜನರು ಹೆಚ್ಚಾಗಿ ನೆಲೆಸಿರುವ ಯಲ್ಲಾಪುರ ತಾಲೂಕಿನ ಮಾಗೋಡು, ಭರಣಿ, ನಂದಿಬಾವಿ, ಗುಳ್ಳಾಪುರ ಮತ್ತು ಹಳಿಯಾಳ ತಾಲೂಕಿನ ತತ್ವಣಗಿ, ಕಾಮ್ರಿಕೊಪ್ಪ, ಗೊಳೆಹಳ್ಳಿ ಗ್ರಾಮಗಳಲ್ಲಿ ಸ್ವತಃ ವಾಸವಾಗಿದ್ದು, ಸಹಭಾಗಿ ಅವಲೋಕನದ ತಂತ್ರವನ್ನು ಅಳವಡಿಸಿಕೊಳ್ಳಲಾಗಿತ್ತು.

ಸಹಭಾಗಿತ್ವದ ಅವಲೋಕನದ ಮೂಲಕ ಮಾಹಿತಿಗಳನ್ನು ಸಂಗ್ರಹಿಸುವುದರ ಜೊತೆಗೆ ಪೂರ್ವ ಸಂಕೇತ(ಪ್ರೀ ಕೋಡೆಡ್) ಮತ್ತು ಮುಕ್ತ ಸಂಕೇತ(ಓಪನ್ ಕೋಡೆಡ್) ಸಂದರ್ಶನ ಅನುಸೂಚಿಗಳನ್ನು ರೂಪಿಸಿಕೊಂಡು ಕುಟುಂಬಗಳ ಹಿರಿಯರು, ಸಿದ್ದಿ ಸಮಾಜದ ಹಳ್ಳಿಗಳ ಮುಖ್ಯಸ್ಥರು, ಸ್ಥಳೀಯ ಮುಖಂಡರು ಮತ್ತು ಸಮುದಾಯದ ಬುದ್ಧಿವಂತ ಮತ್ತು ಹಿರಿಯ ವ್ಯಕ್ತಿಗಳನ್ನು ಸಂದರ್ಶಿಸಲಾಗಿದೆ.

ಕುಟುಂಬದ ಮುಖ್ಯಸ್ಥರಿಂದ ಸಂಗ್ರಹಿಸಿರುವ ಮಾಹಿತಿಯುಸಿದ್ದಿ ಬುಡಕಟ್ಟು ಸಮಾಜದಲ್ಲಿ ಇತ್ತೀಚಿಗೆ ವಿವಾಹ, ಕುಟುಂಬ, ಬುಡಕಟ್ಟು ಅಧಿಕಾರ, ಆರ್ಥಿಕ ಸಂಘಟನೆಗಳು, ಮಹಿಳೆಯರ ಸ್ಥಾನಮಾನ, ಧರ್ಮ, ಆಹಾರಭ್ಯಾಸ, ಉಡುಪು ಮತ್ತು ಶಿಕ್ಷಣದಂತಹ ವಿವಿಧ ಕ್ಷೇತ್ರಗಳಲ್ಲಿ ಉಂಟಾಗಿರುವ ಬದಲಾವಣೆಗಳ ಬಗೆಗೆ ಸಿದ್ದಿ ಬುಡಕಟ್ಟು ಜನರ ಮನೋಭಾವನೆಗಳು ಮತ್ತು ಆಲೋಚನೆಗಳನ್ನು ಒಳಗೊಂಡಿವೆ. ಈ ಮಾಹಿತಿಗಳು ಶಿಕ್ಷಣದ ಬಗೆಗೆಗಿನ ಅವರ ತಿಳುವಳಿಕೆ ಮತ್ತು ಅದರ ಬಗ್ಗೆ ಅವರಿಗಿರುವ ಹೆಬ್ಬಯಕೆ, ಉದ್ಯೋಗಾಕಾಂಕ್ಷೆ, ರಾಜಕೀಯ ಅರಿವು, ಆರೋಗ್ಯ ಮತ್ತು ಸಂಪರ್ಕ ಸಾಧನಗಳ ಬಗ್ಗೆ ಸಿದ್ದಿ ಜನರಿಗಿರುವ ಅರಿವು ಮತ್ತು ಸಾಂಪ್ರದಾಯಿಕ ಉದ್ಯೋಗಗಳು, ಧಾರ್ಮಿಕ ಸಂಸ್ಕಾರಗಳು ಮತ್ತು ಆಚರಣೆಗಳು, ಅವಿಭಕ್ತ ಕುಟುಂಬ, ಉಡುಪು, ಮಹಿಳೆಯರ ಸ್ಥಾನಮಾನ ಇತ್ಯಾದಿಗಳ ಬಗ್ಗೆ ಅವರ ಮನೋಭಾವನೆಗಳನ್ನು ಪರೀಕ್ಷಿಸಲು ಸಾಧ್ಯವಾಗಿದೆ.

ಸಿದ್ದಿ ಸಮುದಾಯದ ಹಿರಿಯ ಸದಸ್ಯರುಗಳಿಂದ ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಸಂದರ್ಶನ ಅನುಸೂಚಿಯು ಕನ್ನಡ ಭಾಷೆಯಲ್ಲಿದ್ದು, ಅದನ್ನು ಕನ್ನಡ ಭಾಷೆಯಲ್ಲಿಯೇ ಅನುಷ್ಠಾನಗೊಳಿಸಿ, ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಅಂತೆಯೇ, ಸಿದ್ದಿ ಸಮುದಾಯದ ಬಗೆಗಿನ ವಿವಿಧ ಅಂಶಗಳ ಬಗ್ಗೆ ಜ್ಞಾನವನ್ನು ಸಂಪಾದಿಸಲು ಗುಂಪು ಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಗುಂಪು ಚರ್ಚೆಗಳಲ್ಲಿ ಭಾಗವಹಿಸಿದ್ದ ಬಹುತೇಕ ಜನರು ಪ್ರಾಮಾಣಿಕವಾಗಿ ಮತ್ತು ಮುಕ್ತ ಮನಸ್ಸಿನಿಂದ ಮಾತನಾಡಿದರು ಮತ್ತು ಚರ್ಚೆಯ ಸಂದರ್ಭದಲ್ಲಿ ಅವರು ಸ್ಪಂದಿಸಿದ ರೀತಿಯನ್ನು ಗಮನಿಸಿದಾಗ, ಅದು ಅವರ ಜೀವನದ ಸ್ಥಿತಿಗತಿಗಳನ್ನು ಸಾಕ್ಷಾತ್ಕರಿಸುವಂತಿದ್ದವು. ಸಮುದಾಯದ ಸದಸ್ಯರುಗಳ ದೃಷ್ಟಿಕೋನ ಮತ್ತು ಅಭಿಪ್ರಾಯ ಗಳನ್ನು ಎಚ್ಚರಿಕೆಯಿಂದ ಟಿಪ್ಪಣಿ ಮಾಡಿಕೊಂಡು ಸಂಶೋಧನೆಯಲ್ಲಿ ಉಪಯೋಗಿಸಿ ಕೊಳ್ಳಲಾಗಿದೆ. ಗುಂಪು ಚರ್ಚೆಯಿಂದ ಅನುಕೂಲ ಮತ್ತು ಅನಾನುಕೂಲಗಳೆರಡೂ ಇವೆ. ಇದರಲ್ಲಿ ಭಾಗವಹಿಸಿದ್ದ ಸದಸ್ಯರುಗಳಲ್ಲಿ ಯಾರಾದರೂ ಒಬ್ಬರು ಅಥವಾ ಒಬ್ಬರಲ್ಲೊಬ್ಬರು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಿದ್ದರು. ಹಾಗೆಯೇ, ತಪ್ಪು ಅಥವಾ ಅಸ್ಪಷ್ಟ ಉತ್ತರಗಳನ್ನು ಯಾರಾದರೂ ನೀಡಿದರೆ, ತಕ್ಷಣ ಅದನ್ನು ಮತ್ತೊಬ್ಬರು ಸ್ಪಷ್ಟಪಡಿಸಿ ಸರಿಪಡಿಸುತ್ತಿದ್ದರು. ಇದು ಅನುಕೂಲವಾದರೆ, ಇನ್ನೂ, ಅನಾನುಕೂಲಕರ

ಅಂಶಗಳೆಂದರೆ, ಕೆಲವು ಜನರು ತಮ್ಮ ಅನಿಸಿಕೆಗಳನ್ನು ನೆರೆಹೊರೆಯವರು ಮತ್ತು ಸಂಬಂಧಿಕರ ಎದುರಿಗೆ ಮುಕ್ತವಾಗಿ ವ್ಯಕ್ತಪಡಿಸಲು ಸಂಕೋಚ ಪಡುತ್ತಿದ್ದುದಾಗಿತ್ತು.

ಮಾಹಿತಿಗಳ ಸಂಭವನೀಯತೆ, ಸ್ಪಷ್ಟತೆ, ಸಾಮರ್ಥ್ಯತೆ ಮತ್ತು ಪರಿಪೂರ್ಣತೆಗಳನ್ನು ಪರೀಕ್ಷಿಸಲು, ಹಳಿಯಾಳ ತಾಲೂಕಿನ ಗುಳೇಹಳ್ಳಿ, ಜತಗಾ ಹೊಸೂರು, ಕಾಮ್ತಿಕೊಪ್ಪ ಮತ್ತು ಯಲ್ಲಾಪುರ ತಾಲೂಕಿನ ಉಮಚಗಿ, ನಂದೀಭಾವಿ, ಕಿರುವತ್ತಿ ಮುಂತಾದ ಹಳ್ಳಿಗಳಲ್ಲಿ ಪ್ರಶ್ನಾವಳಿಯನ್ನು ಪೂರ್ವ ಪರೀಕ್ಷೆಗೆ ಒಳಪಡಿಸಲಾಗಿತ್ತು, ಇದರಿಂದ ಪ್ರಶ್ನಾವಳಿಯಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಸಹಾಯವಾಯಿತು. ಪೂರ್ವ ಪರೀಕ್ಷೆಯ ನಂತರ ಮಾರ್ಗದರ್ಶಕರೊಂದಿಗೆ ಚರ್ಚಿಸಿ ಪ್ರಶ್ನಾವಳಿಯನ್ನು ಸುಸಜ್ಜಿತಗೊಳಿಸಲಾಯಿತು.

ಸಂದರ್ಶನದಲ್ಲಿ ವಿಶ್ವಾಸಾರ್ಹತೆಯುಳ್ಳ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು ಅತ್ಯಂತ ಮಹತ್ವದ ಹೆಜ್ಜೆ. ಮಾಹಿತಿದಾರರು ಮತ್ತು ಸಂದರ್ಶಕರ ನಡುವೆ ಒಮ್ಮೆ ವಿಶ್ವಾಸದ ಸಂಬಂಧ ಏರ್ಪಟ್ಟರೆ, ಸಂದರ್ಶನ ಪ್ರಕ್ರಿಯೆಯು ಸುಲಲಿತವಾಗಿ ಸಾಗುತ್ತದೆ. ಸಿದ್ದಿ ಬುಡಕಟ್ಟು ಜನರು ವಿಭಿನ್ನವಾದ ಜನಾಂಗೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರಾಗಿರುವುದರಿಂದ ಹೆಚ್ಚಾಗಿ ಮಾತನಾಡದ ಮನೋಭಾವವುಳ್ಳರಾಗಿರುತ್ತಾರೆ. ಆದ್ದರಿಂದ, ವಿಶ್ವಾಸಾರ್ಹ ಸಂಬಂಧವನ್ನು ಏರ್ಪಡಿಸಿ ಕೊಳ್ಳುಲು ಪ್ರಾರಂಭದಲ್ಲಿ ಸ್ವಲ್ಪ ಕಷ್ಟವಾಯಿತು. ಅವರಲ್ಲಿರುವ ಕೀಳರಿಮೆಯ ಭಾವನೆ, ನಾಚಿಕೆ ಮತ್ತು ಅಂಜಿಕೆ ಸ್ವಭಾವವುಳ್ಳವರಾಗಿರುವುದರಿಂದ, ಅವರು ಅಪರಿಚಿತರೊಂದಿಗೆ ಮುಕ್ತವಾಗಿ ಮಾತನಾಡುವುದಿಲ್ಲ. ಸಂಶೋಧನೆಯಲ್ಲಿ ಸಮುದಾಯದ ಮುಖ್ಯಸ್ಥರು ಮತ್ತು ಅವರ ಪರಿಚಯಸ್ಥರ ಮೂಲಕ ಅವರ ವಿಶ್ವಾಸ ಗಳಿಸಿಕೊಂಡು ಸಂದರ್ಶಗಳನ್ನು ನಡೆಸಲಾಗಿದೆ. ನಿಮ್ಮಿಂದ ಸಂಗ್ರಹಿಸಿದ ಮಾಹಿತಿಗಳನ್ನು ಕೇವಲ ಅಧ್ಯಯನಕ್ಕಾಗಿ ಮಾತ್ರ ಬಳಸಲಾಗುತ್ತದೆ ಎಂದು ತಿಳಿಸಿ ಹೇಳಿ, ಮುಂದೆ ಪ್ರಸ್ತುತ ಸಂಶೋಧನೆಯಿಂದ ಹೊರಬೀಳುವ ಫಲಿತಗಳಿಂದ ಸರ್ಕಾರವು ಬುಡಕಟ್ಟು ಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಉಪಯೋಗವಾಗಬಲ್ಲುದು ಎಂದು ಹೇಳಿ ವಿಶ್ವಾಸದಿಂದ ಮಾಹಿತಿಗಳನ್ನು ಕಲೆಹಾಕಲಾಯಿತು.

ವ್ಯಕ್ತಿಗಳ ಸಂದರ್ಶನ, ಗುಂಪುಚರ್ಚೆ ಮತ್ತು ಸಹಭಾಗಿ ಅವಲೋಕನದ ವೇಳೆಯಲ್ಲಿ ಮಾಹಿತಿದಾರರೂ ಕೂಡ ಕನ್ನಡ ಭಾಷೆಯನ್ನು ಚೆನ್ನಾಗಿ ಮಾತನಾಡುತ್ತಿದ್ದುದರಿಂದ ಉತ್ತಮ ಸಂಬಂಧವನ್ನು ವೃದ್ಧಿಸಿಕೊಳ್ಳಲು ಅನುಕೂಲವಾಯಿತು, ಕೆಲವು ವೇಳೆ ಮಾಹಿತಿದಾರರು ಕಾಫಿ, ಟೀ, ಎಳೆನೀರು ಮತ್ತು ಊಟವನ್ನೂ ಕೊಟ್ಟು ಸತ್ಕರಿಸಿದ್ದಾರೆ.

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಪುಸ್ತಕಗಳು, ಜರ್ನಲ್‌ಗಳು, ವರದಿಗಳು, ಲೇಖನಗಳು, ಎನ್‌ಸೈಕ್ಲೋಪಿಡಿಯಾ, ಸಬ್ಜೆಕ್ಟ್ ಡಿಕ್ಷನರಿಗಳು, ಜನಗಣತಿಯ ವರದಿಗಳು, ಸಮಾಜಕಲ್ಯಾಣ ಇಲಾಖೆ, ಜಿಲ್ಲಾ ಗೆಜೆಟಿಯರ್ ಮತ್ತು ದಿನ ಪತ್ರಿಕೆ, ವಾರ ಪತ್ರಿಕೆ, ಮಾಸಿಕ ಪತ್ರಿಕೆ ಮತ್ತು ಸಾಮಾಜಿಕ ಸಂಶೋಧನೆಗಾಗಿಯೇ ಪ್ರಕಟವಾಗುವ ಅನೇಕ ಸಾಹಿತ್ಯಿಕ ಮೂಲಗಳಿಂದಲೂ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸ ಬೇಕಾಯಿತು. ಭಾಷೆಯಲ್ಲಿ ಯಾವುದೇ ಸಮಸ್ಯೆಯಿಲ್ಲದ್ದಿದ್ದರೂ ಕೆಲವು ಮಾಹಿತಿದಾರರು ಪ್ರಾಮಾಣಿಕ ವಾಗಿ ಮತ್ತು ಮುಕ್ತವಾಗಿ ಉತ್ತರ ನೀಡಲು ಇಷ್ಟಪಡುತ್ತಿರಲಿಲ್ಲ, ಕನ್ನಡ ಭಾಷೆಯ ಜ್ಞಾನ ಇಬ್ಬರಿಗೂ ಇದ್ದುದರಿಂದ ಸಂಪರ್ಕ ಮತ್ತು ಸಂವಹನದಲ್ಲಿ ಕೊರತೆ ಇಲ್ಲದುದರಿಂದ ಈ ಸಮಸ್ಯೆಯನ್ನು ಸುಲಭವಾಗಿ ನಿರ್ವಹಿಸಲಾಯಿತು.

ಕ್ಷೇತ್ರಕಾರ್ಯದಲ್ಲಿ ಎದುರಾಗಿದ್ದ ಮತ್ತೊಂದು ಸಮಸ್ಯೆಯೆಂದರೆ, ಸಿದ್ದಿ ಜನರು ನೆಲೆಸಿರುವ ಹಳ್ಳಿಗಳನ್ನು ಗುರುತಿಸುವುದಾಗಿತ್ತು. ಬಹುತೇಕ ಬುಡಕಟ್ಟು ನೆಲೆಗಳು ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳಲ್ಲಿ ಇರುತ್ತವೆ. ಕೆಲವು ಕುಟುಂಬಗಳು ದಟ್ಟ ಅರಣ್ಯದ ತಗ್ಗುಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಇತರ ಮೈದಾನ ಪ್ರದೇಶಗಳಲ್ಲಿ ಚದುರಿದಂತೆ ಮನೆ ಅಥವಾ ಗುಡಿಸಲು ಕಟ್ಟಿಕೊಂಡು ನೆಲೆಸಿರುತ್ತಾರೆ.

ಬುಡಕಟ್ಟು ಹಳ್ಳಿಗಳಿಗೆ ಹೋದನಂತರ ಮಾಹಿತಿದಾರರನ್ನು ಹುಡುಕುವುದು ಮತ್ತೊಂದು ಸಮಸ್ಯೆ. ಇದಕ್ಕಾಗಿ 'ಕೊಂಡಿ ಮಾದರಿ' ವಿಧಾನವನ್ನು ಅನುಸಕರಿಸಲಾಗಿದೆ(ಚೈನ್ ಸ್ಯಾಂಪಲ್ ಮೆಥಡ್). ಇದರ ಪ್ರಕಾರ ಒಬ್ಬರನ್ನು ಸಂದರ್ಶಿಸಿದ ನಂತರ, ಅವರ ಮೂಲಕವೇ ಮುಂದಿನ ಮಾಹಿತಿದಾರನೊಂದಿಗೆ ಸಂಪರ್ಕ ಮತ್ತು ಸಂಬಂಧವನ್ನೇರ್ಪಡಿಸಿಕೊಂಡು ವಿಶ್ವಾಸ ಸಾಧಿಸ ಲಾಗುತ್ತಿತ್ತು. ಪುನಃ ಎರಡನೇ ಮಾಹಿತಿದಾರನ ಮೂಲಕ ೩ನೇ ವ್ಯಕ್ತಿಯನ್ನು ಪರಿಚಯ ಮಾಡಿ ಕೊಂಡು ಸಂಬಂಧ ಸಾಧಿಸಿಕೊಂಡು ಮಾಹಿತಿದಾರ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದ ಸಮಯದಲ್ಲಿ ಎದುರಿಸಿದ ಮತ್ತೊಂದು ಸಮಸ್ಯೆಯೆಂದರೆ, ಅಕ್ಷರ ಜ್ಞಾನ ಇಲ್ಲದವರು ಸರಿಯಾಗಿ ಸ್ಪಂದಿಸದೇ ಇದ್ದುದು. ಅವರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸದೇ ಇರುತ್ತಿದ್ದರು. ಆದರೆ ಸಂದರ್ಶನದ ಉದ್ದೇಶವನ್ನು ಆಪ್ತಸಮಾಲೋಚನೆಯ ಮೂಲಕ ಅವರಿಗೆ ಮನವರಿಕೆ ಮಾಡಿಕೊಟ್ಟು ಸಂದರ್ಶನ ಮಾಡಲಾಗಿದೆ. ಕೆಲವು ಸಲ ನಿರುತ್ಸಾಹ ಗೊಂಡದ್ದೂ ಉಂಟು. ಕೆಲವು ವ್ಯಕ್ತಿಗಳು ಯಾವುದೇ ವಿಷಯಕ್ಕೂ ಉತ್ತರಿಸುವ ಒಲವು ತೋರಿಸುತ್ತಿರಲಿಲ್ಲ ಮತ್ತು ಇನ್ನೂ ಕೆಲವರು ನಮ್ಮ ಪ್ರಶ್ನೆಗಳಿಗೆ ಉತ್ತರಿಸಲು ಸ್ಪಷ್ಟವಾಗಿ ನಿರಾಕರಿಸುತ್ತಿದ್ದರು. ಇವುಗಳ ಜೊತೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಎದುರಿಸಿದ ಮತ್ತೊಂದು ಸಮಸ್ಯೆಯೆಂದರೆ, ಜೀವನೋಪಾಯಕ್ಕಾಗಿ ಕುಟುಂಬದ ಪುರುಷ ಮತ್ತು ಮಹಿಳಾ ಸದಸ್ಯರಿಬ್ಬರೂ ಮನೆಯಿಂದ ಹೊರಗೆ ಹೋಗುತ್ತಿದುದರಿಂದ, ಅವರ ಲಭ್ಯತೆ ಒಂದು ಸಮಸ್ಯೆಯಾಗಿ ಸಮಯದ ಅಪವ್ಯಯಕ್ಕೆ ಕಾರಣವಾಗುತಿತ್ತು. ಇಂತಹ ಸಂದರ್ಭದಲ್ಲಿ ಮಾಹಿತಿದಾರರ ಲಭ್ಯತೆಯನ್ನಾಧರಿಸಿ ಕುಟುಂಬದ ಯಜಮಾನ ಮತ್ತು ಹಿರಿಯ ವ್ಯಕ್ತಿಗಳಿಗೆ ಆದ್ಯತೆ ನೀಡಿ ಸಂದರ್ಶನದ ಮೂಲಕ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

ಕ್ಷೇತ್ರಕಾರ್ಯ ಮುಗಿದನಂತರ ಅಧ್ಯಯನದ ವಿವಿಧ ಉದ್ದೇಶಗಳು ಮತ್ತು ಅವಶ್ಯಕತೆಗಳಿಗನು ಗುಣವಾಗಿ, ಕೋಷ್ಟಕ ರೂಪಕ್ಕೆ ತಂದು ಪಟ್ಟಿ ಮಾಡಲಾಗಿದೆ. ಹಾಗೂ ಮಾಹಿತಿಗಳನ್ನು ವೈಜ್ಞಾನಿಕ ಸಂಶೋಧನಾ ನಿಯಮಗಳ ಪ್ರಕಾರ ತಯಾರಿಸಿದ್ದ ಸಂಕೇತ ವಿನ್ಯಾಸ(ಕೋಡ್ ಡಿಸೈನ್)ಗಳ ಸಹಾಯದಿಂದ ವಿನ್ಯಾಸಪುಟ(ಕೋಡ್‌ಶೀಟ್)ಕ್ಕೆ ವರ್ಗಾಹಿಸಲಾಗಿದೆ. ಪರಿಣಾಮಾತ್ಮಕ ವಾಗಿ ಪರೀಕ್ಷಿಸಿದ ಆವೃತ್ತಿ ಪಟ್ಟಿ ಮತ್ತು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಮಾಹಿತಿಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಯಿತು. ಶೇಕಡಾವಾರು, ಒಟ್ಟು ಮತ್ತು ಸರಾಸರಿ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡಲು ಕಂಪ್ಯೂಟರಿನ ಸಹಾಯ ಪಡೆಯಲಾಗಿದೆ, ದತ್ತಾಂಶಗಳನ್ನು ಸಂಖ್ಯಾತ್ಮಕವಾಗಿ ಪಟ್ಟೀಕರಣ ಮಾಡಿದ ಮಾಹಿತಿಗಳು, ಸಹಭಾಗಿತ್ವ ಅವಲೋಕನದ ಮೂಲಕ ಪಡೆದ ಮಾಹಿತಿಗಳು, ಗುಂಪು ಚರ್ಚೆ, ದಾಖಲೆಗಳ ಮೂಲಗಳು ಮತ್ತು ಸಾಹಿತ್ಯ ಪರಾಮರ್ಶೆಗಳ ವಿಶ್ಲೇಷಣೆಯ ಫಲಿತಗಳು, ಸೈದ್ಧಾಂತಿಕ ವಾಗಿ ಮತ್ತು ವಿಮರ್ಶಾತ್ಮಕವಾಗಿ ಅರ್ಥೈಸಲ್ಪಟ್ಟ ಫಲಿತಗಳು ಮತ್ತು ಅಧ್ಯಯನದ ಆಧಾರದ ಮೇಲೆ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೭. ಅಧ್ಯಯನದ ಮಹತ್ವ

ಸ್ವಾತಂತ್ರ್ಯಾನಂತರ ಬುಡಕಟ್ಟುಗಳ ಸರ್ವಾಂಗೀಣ ಅಭಿವೃದ್ಧಿಯ ಹೆಸರಿನಲ್ಲಿ ಸರಕಾರಗಳು ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡಿದ್ದರೂ, ಅವರ ಜೀವನದ ಸ್ಥಿತಿಗತಿಗಳು ಇನ್ನೂ ಉತ್ತಮವಾಗಿಲ್ಲ. ಆದ್ದರಿಂದ, ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ವೈಫಲ್ಯಕ್ಕೆ ಕಾರಣಗಳನ್ನು ತಿಳಿದುಕೊಳ್ಳಲೂ ಈ ಸಂಶೋಧನೆ ಸಹಾಯ ಮಾಡಿದೆ.

ಸಿದ್ದಿ ಬುಡಕಟ್ಟು ತಮ್ಮ ಗುಲಾಮಿತನದಿಂದ ಇತ್ತೀಚೆಗೆ ಸ್ವಾತಂತ್ರ್ಯದ ಬದುಕು ಪ್ರಾರಂಭಿಸಿರು ವುದರಿಂದ ಆಧುನೀಕರಣಕ್ಕೆ ಹೇಗೆ ಸ್ಪಂದಿಸುತ್ತಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಅನುಕೂಲ ವಾಗಿದೆ. ಸ್ಥಳೀಯ ಸಾಮಾಜಿಕ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಸಿದ್ದಿಯರಂತಹ ಇತರ ಸಣ್ಣ ಬುಡಕಟ್ಟುಗಳ ಸ್ಥಾನವನ್ನು ತಿಳಿದುಕೊಳ್ಳಲು ಸಹಾಯವಾಗಿದೆ. ಆಧುನಿಕ ಶಿಕ್ಷಣ ಮತ್ತು ಮಹಿಳಾ ಸಬಲೀಕರಣ ಪ್ರಕ್ರಿಯೆಗಳ ಪ್ರಯೋಜನದಿಂದ ಬುಡಕಟ್ಟು ಮಹಿಳೆಯರ ಸ್ಥಾನ-ಮಾನಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

ಭೂಸುಧಾರಣೆಯಂತಹ ಕಾರ್ಯಕ್ರಮಗಳಿಂದ ಬುಡಕಟ್ಟು ಜನರ ಆರ್ಥಿಕ ಪರಿವರ್ತನೆಗಳನ್ನು ವಿಶ್ಲೇಷಣೆ ಮಾಡಲು ಇದು ಸಹಕರಿಸಿದೆ. ಬುಡಕಟ್ಟುಗಳು ಆಧುನಿಕ ಅಭಿವೃದ್ಧಿ ಕಾರ್ಯಕ್ರಮಗಳ ನಕಾರಾತ್ಮಕ ದುಷ್ಪರಿಣಾಮಗಳಿದ್ದರೂ ತಮ್ಮ ಚಹರೆಯನ್ನು ಉಳಿಸಿಕೊಂಡು ಸಹಜವಾಗಿ ಹೇಗೆ ಸಾಮಾಜಿಕ ಆರ್ಥಿಕ ಪರಿವರ್ತನಾ ಪ್ರಕ್ರಿಯೆಯಲ್ಲಿ ಭಾಗಿಗಳಾಗುತ್ತಿದ್ದಾರೆ ಎನ್ನುವುದನ್ನು ತಿಳಿದು ಕೊಳ್ಳಲಾಗಿದೆ. ಒಟ್ಟಾರೆ ಭಾರತದಂತಹ ವೈವಿಧ್ಯಮಯ ರಾಷ್ಟ್ರದಲ್ಲಿ ಬುಡಕಟ್ಟು ಉಪಯೋಜನೆಗಳ ಪ್ರಯೋಜನಗಳನ್ನು ಪ್ರತಿಯೊಂದು ಬುಡಕಟ್ಟಿಗೂ ತಲುಪಿಸುವಲ್ಲಿ ಸಹಾಯ ಮಾಡುವ ಒಂದು ಪ್ರಮುಖ ಉದ್ದೇಶವೇ ಈ ಸಂಶೋಧನೆಯ ಮಹತ್ವದ ಅಂಶವಾಗಿದೆ. ಈ ಅಧ್ಯಯನವು ಸಿದ್ದಿ

ಬುಡಕಟ್ಟಿನ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ವಿಶ್ಲೇಷಿಸುವುದರಿಂದ ಮುಂದೆ ಅನುಷ್ಠಾನಗೊಳಿಸುವ ಅಭಿವೃದ್ಧಿ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಹಾಯವಾಗುತ್ತದೆ. ಈ ಅಧ್ಯಯನದ ಫಲಿತಗಳು ಸಂಶೋಧಕರಿಗೆ, ಶೈಕ್ಷಣಿಕ ತಜ್ಞರಿಗೆ, ಆಡಳಿತಗಾರರಿಗೆ ಮಾರ್ಗದರ್ಶಿ ಸೂತ್ರಗಳಾಗಬಹುದು.

೧.೮. ಅಧ್ಯಯನದ ಇತಿಮಿತಿಗಳು

ಎಲ್ಲಾ ಸಂಶೋಧನಾ ಅಧ್ಯಯನದಂತೆ, ಈ ಸಂಶೋಧನೆಯೂ ಇತಿಮಿತಿಗಳಿಂದ ಮುಕ್ತವಾಗಿಲ್ಲ, ಅವುಗಳಲ್ಲಿ ಕೆಲವು ಈ ಕೆಳಕಂಡಂತಿವೆ:

೧. ಅಧ್ಯಯನದ ಫಲಿತಗಳು ನಿಯಮಿತ ಬುಡಕಟ್ಟು ಮತ್ತು ಒಂದು ನಿರ್ದಿಷ್ಟ ಜಿಲ್ಲೆಯಿಂದ ಸಂಗ್ರಹಿಸಿದ ಮಾಹಿತಿಗಳನ್ನು ಆಧರಿಸಿರುವುದು.

೨. ಈ ಅಧ್ಯಯನದ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಯೆಂದರೆ ಮಾಹಿತಿ ಒದಗಿಸುವ ಸಿದ್ದಿ ಸಮುದಾಯದ ಜನರು ಕಾಡುಗಳಲ್ಲಿ ಸಂಪರ್ಕದ ಕೊರತೆಯಿರುವ ಪ್ರದೇಶಗಳಲ್ಲಿರುವುದರಿಂದ ಮಾಹಿತಿ ಸಂಗ್ರಹಿಸಲು ಹೆಚ್ಚು ಸಮಯ ತೆಗದುಕೊಂಡದ್ದು.

೩. ಮಾಹಿತಿ ನೀಡುವವರ ಅಲಭ್ಯತೆ.

೪. ಬುಡಕಟ್ಟು ಅಭಿವೃದ್ಧಿಯ ಅಧಿಕಾರಿಗಳು, ಅರಣ್ಯ ಇಲಾಖೆಯ ಸಿಬ್ಬಂದಿ, ಮುಂತಾದವರು ಅವಶ್ಯಕ ಮಾಹಿತಿ ಒದಗಿಸಲು ತೋರಿದ ಅಸಹಕಾರ.

ಕೊನೆಟಿಪ್ಪಣಿಗಳು

೧. ಅಂತರ್ಜಾಲ ಮಾಹಿತಿ www.population.co.in

೨. **ಮೈತ್ರಿ ಕೆ.ಎಂ., ೨೦೦೬, 'ಬುಡಕಟ್ಟು ನ್ಯಾಯ ವ್ಯವಸ್ಥೆ'**, ಎ.ಎಸ್.ಪ್ರಭಾಕರ, ಆದಿವಾಸಿ ಆಖ್ಯಾನ (ಸಂ) ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೩. **ವಿದ್ಯಾರ್ಥಿ ಎಲ್.ಪಿ., ೧೯೭೦, ಸೋಶಿಯೋ ಕಲ್ಚರಲ್ ಇಂಪ್ಲಿಕೇಷನ್ಸ್ ಆಫ್ ಇಂಡಸ್ಟ್ರಿಯಲೈಸೇಷನ್ ಇನ್ ಇಂಡಿಯ**, ಪ್ಲ್ಯಾನಿಂಗ್ ಕಮೀಷನ್ ಆಫ್ ಇಂಡಿಯ, ನ್ಯೂಡೆಲ್ಲಿ

೪. **ಕೃಷ್ಣನ್ ಪಿ.ಜಿ., ೧೯೮೫, ಕಾನ್ಸ್ಟಿಟ್ಯೂಷನಲ್ ಅಂಡ್ ಟ್ರೈಬಲ್ ವೆಲ್ಫೇರ್**, ಕೊಚ್ಚಿನ್ ಯೂನಿವರ್ಸಿಟಿ ಲಾ ರಿವ್ಯೂ, ವಾಲ್ಯೂಮ್ vil-ix ನಂ–೧ ಅಂಡ್ ೨ ಮಾರ್ಚ–ಜೂನ್

೫. **ಬರ್ಧನ್ ಎ.ಬಿ., ೧೯೭೩, ದಿ ಟ್ರೈಬಲ್ ಪ್ರಾಬ್ಲಮ್ಸ್ ಇನ್ ಇಂಡಿಯ**, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ ಪಬ್ಲಿಕೇಷನ್ಸ್, ನ್ಯೂಡೆಲ್ಲಿ

೬. ಮಜುಂದಾರ ಡಿ.ಎನ್., ೧೯೪೪, ರೇಸಸ್ ಅಂಡ್ ಕಲ್ಚರ್ಸ್ ಆಫ್ ಇಂಡಿಯ, ಏಷಿಯಾ ಪಬ್ಲಿಷಿಂಗ್ ಹೌಸ್, ದೆಲ್ಲಿ

೭. ಶಂಕರ್ ರಾವ್ ಚ.ನ., ೨೦೦೫, ಭಾರತೀಯ ಸಮಾಜ, (ಸಂರಚನೆ ಮತ್ತು ಪರಿವರ್ತನೆ), ಜೈ ಭಾರತ್ ಪ್ರಕಾಶನ, ಮಂಗಳೂರು

೮. ರಾಬರ್ಟ್ ಜೆ. ಗ್ರಿಗೋರಿ, ೧೯೩೩, "ಟ್ರೈಬ್ಸ್ ಅಂಡ್ ಟ್ರೈಬಲ್: ಆರಿಜಿನ್, ಯೂಸ್ ಅಂಡ್ ಫ್ಯೂಚರ್ ಆಫ್ ದಿ ಕಾನ್ಸೆಪ್ಟ್", ಆಕ್ಸಫರ್ಡ ಇಂಗ್ಲೀಷ್ ಡಿಕ್ಷನರಿ, ಪುಟ ೩೩೯.

೯. ಪ್ರಶಾಂತ ಹೆಚ್.ಡಿ., ೨೦೦೬, ಬುಡಕಟ್ಟು ಪರಿಕಲ್ಪನೆ ಕೆಲವು ಟಿಪ್ಪಣಿಗಳು, ಆದಿವಾಸಿ ಆಖ್ಯಾನ: ಸಮುದಾಯಗಳ ಅಧ್ಯಯನಕ್ಕೊಂದು ಆಕರ", ಸಂ: ಡಾ. ಎ.ಎಸ್. ಪ್ರಭಾಕರ

೧೦. ರಾಮು ಜಿ.ಎನ್., ೨೦೦೦, ಎಸ್ಸೇಸ್ ಇನ್ ದಿ ಸೋಶಿಯಾಲಜಿ ಆಫ್ ಡೆವಲಪ್‌ಮೆಂಟ್, ಶ್ರೀ ಡಿ ದೇವರಾಜ್ ಅರಸು ಉಪನ್ಯಾಸಗಳು, ಡಿಲೇವರ್ಡ್ ಬೈ, ಪ್ರಸಾರಾಂಗ ಯೂನಿವರ್ಸಿಟಿ ಆಫ್ ಮೈಸೂರು, ಇಂಡಿಯಾ.

೧೧. ಈರಣ್ಣ ಚ. ಮುಳಗುಂದ, ೨೦೧೨, ಸಮಾಜಶಾಸ್ತ್ರದ ಮೂಲ ತತ್ವಗಳು, ಸಾಮಾಜಿಕ ಸಂಸ್ಥೆಗಳು ಮತ್ತು ಪರಿವರ್ತನೆ, ಸೃಷ್ಠಿ ಪ್ರಕಾಶನ, ಧಾರವಾಡ

೧೨. ಮಿಲ್ಟನ್ ಸಿಂಗರ ಮತ್ತು ರೆಡ್ ಫಿಲ್ಡ್; ಎಡ್ವರ್ಡ್ ಸಿಲ್ಸ್ ೧೯೯೧, (ಸಂ), ರಿಮೆಂಬರಿಂಗ್ ದಿ ಯೂನಿವರ್ಸಿತಿ ಆಫ್ ಚಿಕಾಗೋ, (ಟೀಚರ್ಸ್, ಸೈಟಿಸ್ಟ್ ಅಂಡ್ ಸ್ಕಾಲರ್ಸ್) ಯೂನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್ಸ್ (ಲಿ), ಪುಟ–೪೨೧

೧೩. ಬಾಪು ಹೆದ್ದೂರ ಶೆಟ್ಟಿ, ೨೦೧೬, "ಜಾಗತೀಕರಣ ಒಂದು ಸವಾಲು, ಒಂದು ಅವಕಾಶ", ವಿಶ್ಲೇಷಣಾ ಅಂಕಣ, ಪ್ರಜಾವಾಣಿ ದಿನ ಪತ್ರಿಕೆ, ದಿನಾಂಕ: ೨–೪–೨೦೧೬, ಶನಿವಾರ.

೧೪. ಚಂದ್ರ ಪೂಜಾರಿ ಎಂ., ೨೦೦೬, "ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ: ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಯನ ಕ್ಕೊಂದು ಆಕರ", ಸಂ: ಡಾ. ಎ.ಎಸ್. ಪ್ರಭಾಕರ

೧೫. ಡೇವಿಡ್ ಎಲ್. ಸಿಲ್ಸ್, (ಸಂ), ೧೯೬೮, "ಇಂಟರ್ನ್ಯಾಷನಲ್ ಎನ್‌ಸೈಕ್ಲೋಪೀಡಿಯ ಆಫ್ ಸೋಶಿಯಲ್ ಸೈನ್ಸಸ್", ನ್ಯೂ ಯಾರ್ಕ್, ದಿ ಮ್ಯಕ್ಮಿಲನ್ ಕಂಪನಿ, ಪುಟ ೬೨.

೧೬. **ಹಟ್ಟಿ ಪಿ.ಕೆ., ೨೦೦೨, "ಹಿಸ್ಟರಿ ಆಫ್ ಅರಬ್ಸ್"**, ನ್ಯೂಯಾರ್ಕ್, ಪಾಲಗ್ರಾವ್, ಮ್ಯಾಖ್ಮಿಲನ್, ಪುಟ ೨.

೧೭. **ಹೆನ್ರಿ ಜೆ. ಡ್ರೇವಾಲ್, ೨೦೦೪, "ಅಲೈಯನ್ಸ್ ಅಂಡ್‌ಹೋಮ್ ಲ್ಯಾಡ್ಸ್"**, ಎಡ್ವರ್ಡ್ ಆಲ್ಪೆರ್ಸ್(ಸಂ), ಸಿದ್ದೀಸ್ ಅಂಡ್ ಸ್ಕಾಲರ್ಸ್; ಏಶೀಯಾನ್ ಆಫ್ರೀಕಾನ್ ಇಂಡಿಯನ್ಸ್, ರೈನ್‌ಬೋ ಪಬ್ಲಿಷರ್ಸ್ ಲಿಮಿಟೆಡ್, ನೋಯ್ಡಾ, ಪುಟ ೧೪೬

೧೮. **ರಾಯ್ ಭರ್ಮನ್ ಬಿ.ಕೆ., ೧೯೯೩, "ಮಾಡ್ರನೈಸೇಷನ್ ಆಫ್ ಟ್ರೈಬಲ್ ಪಿಪಲ್ ಆನ್ ಇಂಡಿಯಸ್ ಬಾರ್ಡರ್"** ಕೆ.ಎಸ್.ಮಾಥುರ್ (ಎಡಿಟೆಡ್), ಸ್ಟಡೀಸ್ ಇನ್ ಸೋಸಿಯಲ್ ಚೇಂಜ್.ಎತ್ನೋಗ್ರಾಫಿಕ್ ಅಂಡ್ ಫೋಕ್ ಕಲ್ಚರ್ ಸೊಸೈಟಿ, ಉತ್ತರ ಪ್ರದೇಶ

೧೯. **ಕರ್ಮಾಕರ ಕೆ.ಜಿ., ೨೦೦೨, "ದಿ ಸೈಲೆನ್ಸ್ಡ್ ಡ್ರಮ್ಸ್, ಏ ರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪಮೆಂಟ್"**, ನಾರ್ಥನ್ ಬುಕ್ ಸೆಂಟರ್, ನ್ಯೂಡೆಲ್ಲಿ

೨೦. **ಬೋರಲಿಂಗಯ್ಯ ಹಿ.ಚಿ., ೧೯೯೩, "ಉಪ ಸಂಸ್ಕೃತಿ ಅಧ್ಯಯನ ಮಾಲೆ"**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೧. **ಪಾಲಾಕ್ಷಪ್ಪ ಟಿ.ಸಿ., ೧೯೭೬, "ಸಿದ್ದೀಸ್ ಆಫ್ ನಾರ್ಥ್ ಕೆನರ"**, ಸ್ಟರ್ಲಿಂಗ್ ಪಬ್ಲಿಕೇಷನ್ ನ್ಯೂಡೆಲ್ಲಿ

೨೨. **ಮೋಹಿನಿ ಪೂಜಾರಿ, ೨೦೧೩, "ಬದಲಾವಣೆಯ ಹಂತದಲ್ಲಿ ಬುಡಕಟ್ಟು ಜನತೆ"**, ಪ್ರಜಾವಾಣಿ ದಿನಪತ್ರಿಕೆ, ಸಾಮಾಜಿಕ ವರದಿ, ದಿನಾಂಕ: ೨೭-೦೧-೨೦೧೩, ಭಾನುವಾರ, ಪುಟ ೨.

೨೩. **ದುಗ್ಗಪ್ಪ ಕಜೇಕಾರ್, ೨೦೧೫, "ಪ್ರಾಬ್ಲಮ್ಸ್ ಆಫ್ ಟ್ರೈಬಲ್ ಡೆವಲಪ್‌ಮೆಂಟ್ ಇನ್ ಕೋಸ್ಟಲ್ ಕರ್ನಾಟಕ"**, "ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಇಂಟರ್‌ಡಿಸಿಪ್ಲೀನರಿ ಅಂಡ್ ಮಲ್ಟಿಡಿಸಿಪ್ಲೀನರಿ ಸ್ಟಡೀಸ್", (ಐ.ಜೆ.ಐ.ಎಮ್.ಎಸ್), ವಾಲ್ಯೂಂ-೨, ನಂ ೬೮-೭೪.

೨೪. **ಪ್ರಭಾಕರ ಎ.ಎಸ್., ೨೦೦೫, "ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು"**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೫. **ಚಂದ್ರಶೇಖರ ಟಿ.ಆರ್., ೧೯೯೩, "ಅಭಿವೃದ್ಧಿ ಮೀಮಾಂಸೆ"**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೬. **ಚಂದ್ರಶೇಖರ ಟಿ.ಆರ್., ೨೦೦೬, "ಅಭಿವೃದ್ಧಿ ಅಧ್ಯಯನ"**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂಪುಟ-೪, ಜನವರಿ-ಜೂನ್

೨೭. **ಮೊಗಳ್ಳಿ ಗಣೇಶ, ೨೦೦೫, "ದಲಿತರು ಮತ್ತು ಜಾಗತೀಕರಣ"**, ಪುಟ-೩, ಎ.ಎಸ್.ಪ್ರಭಾಕರ, "ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. **ಚಂದ್ರ ಪೂಜಾರಿ ಎಂ., ೨೦೦೬, "ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು: ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಯನಕ್ಕೊಂದು ಆಕರ"**, ಸಂ; ಎ.ಎಸ್ ಪ್ರಭಾಕರ.

೨೯. **ನಾಯಕ್ ಎನ್.ಆರ್., ೧೯೯೨, "ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ"**, ಜಾನಪದ ಪ್ರಕಾಶನ, ಹೊನ್ನಾವರ.

೩೦. **ಹಿರೇಮಠ ಆರ್.ಎಸ್., ೧೯೯೩, "ಲೈಫ್ ಲಿವಿಂಗ್ ಆಂಡ್ ಲಾಂಗ್ವೇಜಸ್ ಆಫ್ ಸಿದ್ದಿಸ್ ಆಫ್ ನಾರ್ಥ ಕೆನರಾ"**, ಕರ್ನಾಟಕ ವಿಶ್ವವಿದ್ಯಾಲಯ ಸಂಶೋಧನಾ ಪ್ರಬಂಧ.

೩೧. **ಶ್ರೀನಿವಾಸ ಎಂ.ಎನ್. ೧೯೭೨, ಸೋಶಿಯಲ್ ಚೇಂಜ್ ಇನ್ ಮಾರ್ಡನ್ ಇಂಡಿಯ**, ಓರಿಯೆಂಟ್ ಬ್ಲಾಕ್ ಸ್ವಾನ್ ಪ್ರೈವೇಟ್ ಲಿಮಿಟೆಡ್.

ಅಧ್ಯಾಯ ಎರಡು

ಸಾಹಿತ್ಯ ಪರಾಮರ್ಶೆ

ಅಧ್ಯಾಯ ಎರಡು

ಸಾಹಿತ್ಯ ಪರಾಮರ್ಶೆ

ಭಾರತದ ಬುಡಕಟ್ಟು ಸಮಾಜವು ನಿಸರ್ಗ ಮತ್ತು ಜನಸಂಖ್ಯೆಯ ವೈವಿಧ್ಯತೆಯಿಂದ ಕೂಡಿರುವ ಅದ್ವಿತೀಯ ಸಮಾಜವಾಗಿದೆ. ಅರಣ್ಯ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಬಡತನ, ಆರೋಗ್ಯ, ಅನಕ್ಷರತೆಯಂತಹ ಸಮಸ್ಯೆಗಳಿಂದ ಮುಕ್ತರಾಗಲು ಮತ್ತು ಅವರ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರಕಾರ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಬೃಹತ್ ಮೊತ್ತದ ಬಂಡವಾಳವನ್ನು ವಿನಿಯೋಗಿಸುತ್ತಿದೆ. ಇದರ ಜೊತೆಗೆ ಹಲವಾರು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸರಕಾರಗಳು ಅನುಷ್ಠಾನಗೊಳಿಸುತ್ತಿವೆ. ಕೆಲವು ಬುಡಕಟ್ಟುಗಳು ತಮ್ಮ ಅರಣ್ಯ ಸಂಸ್ಕೃತಿಯೊಂದಿಗೆ ಒಂದೆಡೆ ನೆಲೆನಿಂತು ಕೃಷಿ ಮಾಡುವ ಕೌಶಲ್ಯ ಮತ್ತು ಪ್ರೇರಣೆಯನ್ನು ಹೊಂದಿಲ್ಲದಿರುವುದರ ಪರಿಣಾಮವಾಗಿ ಅವರ ಭೂಮಿಯಲ್ಲಿ ಅವರೇ ಪರಕೀಯರಾಗಿದ್ದಾರೆ. ಇದರಿಂದ ಬುಡಕಟ್ಟೇತರ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುತ್ತಿದೆ. ಭಾರತದಲ್ಲಿ ಬುಡಕಟ್ಟುಗಳ ಆರ್ಥಿಕತೆ, ಭೂಮಿಯ ಅನ್ಯಕ್ರಾಂತತೆ, ಸಾಮಾಜಿಕ-ಆರ್ಥಿಕ ಅಭಿವೃದ್ಧಿ, ಬುಡಕಟ್ಟು ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಹಲವಾರು ಅಧ್ಯಯನಗಳಾಗಿವೆ. ಬುಡಕಟ್ಟುಗಳ ಮೇಲಿನ ಅಧ್ಯಯನವನ್ನು ಮಾನವಶಾಸ್ತ್ರಜ್ಞರು ಸಮಾಜಶಾಸ್ತ್ರಜ್ಞರು, ಸಂಶೋಧನಾರ್ಥಿಗಳು ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಇದೆ.

ಮಾನವಕುಲ ಸಂಬಂಧಿ ಅಧ್ಯಯನ ವಿಧಾನವು ಒಂದು ಹೊಸ ಅಧ್ಯಯನ ಕ್ರಮವಾಗಿದೆ. ಇದು ಬ್ರಿಟೀಷರ ಅವಧಿಯಲ್ಲಿ **ವೇರಿಯರ್ ಎಲ್ವಿನ್** ಅವರಿಂದ(**೧೯೪೩**) ಪ್ರತಿಪಾದಿಲ್ಪಟ್ಟ ಒಂದು ಸಿದ್ಧಾಂತವಾಗಿದೆ. ಅವರು ಬುಡಕಟ್ಟುಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿಯೇ ಪ್ರತ್ಯೇಕವಾಗಿರಿಸಿ ಅಭಿವೃದ್ಧಿ ಪಡಿಸಬೇಕು ಎಂದು ಸಲಹೆ ನೀಡಿದ್ದರು. ಎಲ್ವಿನ್ ಸಿದ್ಧಾಂತವು ಸಾಮಾಜಿಕ ಮಾನವಶಾಸ್ತ್ರದಲ್ಲಿ **'ಪಬ್ಲಿಕ್** ಪಾರ್ಕ ಥಿಯರಿ' ಎಂದು ಗುರುತಿಸಲ್ಪಟ್ಟಿತು. ಈ ಸಿದ್ಧಾಂತದ ಪ್ರಮುಖ ಅಂಶವೆಂದರೆ

ಬುಡಕಟ್ಟು ಜನರು ಅರಣ್ಯವಾಸಿಗಳು ನಾಗರೀಕರೆನಿಸಿ ಕೊಂಡವರಿಂದ ಸಂಪರ್ಕವಿಲ್ಲದೇ ಇದ್ದವರು. ಅವರು ವಾಸಿಸುವ ಅರಣ್ಯ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬೇಕು. ಬುಡಕಟ್ಟೇತರ ಜನರಿಗೆ ಸರ್ಕಾರದ ಪೂರ್ವಾನು ಮತಿಯಿಲ್ಲದೇ ಸೂಚಿತ ಬುಡಕಟ್ಟು ಪ್ರದೇಶಗಳಿಗೆ ಪ್ರವೇಶಿಸದಂತೆ ನೋಡಿಕೊಳ್ಳಬೇಕು ಎಂದು ಈ ಪಬ್ಲಿಕ್ ಪಾರ್ಕ್ ಸಿದ್ದಾಂತದಲ್ಲಿ ಅವರು ಸಲಹೆ ನೀಡಿದ್ದರು.[೧] ಈ ವ್ಯವಸ್ಥೆಯು ಬುಡಕಟ್ಟುಗಳನ್ನು ಪ್ರತ್ಯೇಕವಾಗಿರಿಸುವ ಭರವಸೆ ನೀಡಿತ್ತು.

ಜಿ.ಎಸ್. ಘುರ್ಯೆ (೧೯೪೩) ಅವರು, ಪಬ್ಲಿಕ್ ಪಾರ್ಕ್ ಸಿದ್ಧಾಂತವನ್ನು ವಿರೋಧಿಸುತ್ತ, ಬುಡಕಟ್ಟು ಜನರು ಹಿಂದುಳಿದ ಹಿಂದುಗಳಾಗಿದ್ದಾರೆ. ಅವರನ್ನು ಹಿಂದು ಸಮಾಜದಿಂದ ದೂರವಿಟ್ಟು ನೋಡಬಾರದು ಎಂದು ವಾದಿಸಿದ್ದಾರೆ.[೨]

ಘುರ್ಯೆಯವರ ವಾದವನ್ನು ಉಲ್ಲೇಖಿಸಿ **ಡಿ.ಎನ್. ಮಜುಂದಾರ್ (೧೯೪೪)** ಅವರು ಬುಡಕಟ್ಟುಗಳ ಅಭಿವೃದ್ಧಿ ನೀತಿಯನ್ನು ಸ್ವಲ್ಪ ಭಿನ್ನವಾಗಿ ತೆಗೆದುಕೊಂಡಿದ್ದಾರೆ. ಬುಡಕಟ್ಟುಗಳ ಸಾಂಸ್ಕೃತಿಕ ಚಹರೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳಬೇಕು, ಅವರ ಪ್ರತ್ಯೇಕ ಅಸ್ತಿತ್ವಕ್ಕೆ ಧಕ್ಕೆ ಉಂಟಾದರೆ ಬುಡಕಟ್ಟುಗಳು ತಮ್ಮ ಕುಲಸಂಬಂಧಿ ಅನನ್ಯತೆ ಅಥವಾ ಚಹರೆಯನ್ನು ಕಳೆದುಕೊಳ್ಳುತ್ತಾರೆ. ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಅವರ ಜೀವನವನ್ನು ಉತ್ತಮ ಪಡಿಸಲು ಬುಡಕಟ್ಟು ಅಭಿವೃದ್ಧಿಯ ಕ್ರಮದಲ್ಲಿ 'ಸೆಲೆಕ್ಟಡ್ ಇಂಟಿಗ್ರೇಷನ್' ಇರಬೇಕೆಂದು ಸಲಹೆ ನೀಡಿದ್ದಾರೆ.[೩] ನಾಗರಿಕತೆಯ ಎಲ್ಲಾ ಅಂಶಗಳನ್ನು ಬುಡಕಟ್ಟುಗಳ ಪ್ರದೇಶಕ್ಕೆ ಬಿಡದೆ ಕೇವಲ ಬುಡಕಟ್ಟುಗಳ ಜೀವನಕ್ಕೆ ಉಪಯುಕ್ತವಾಗುವಂತಹ ಅಂಶಗಳಿಗೆ ಮಾತ್ರ ಅವಕಾಶ ಮಾಡಿಕೊಡ ಬೇಕೆಂದು ಅವರು ವಾದ ಮಾಡಿದ್ದಾರೆ. ಬುಡಕಟ್ಟು ಅಭಿವೃದ್ಧಿಯ ಇಂತಹ ನೀತಿಯ ಬುಡಕಟ್ಟು ಗಳನ್ನು ನಗರ ಜೀವನದಿಂದ ದೂರ ಇರಿಸುತ್ತದೆ ಎಂದಿದ್ದಾರೆ.

'ಉತ್ತರ ಕನ್ನಡದ ಸಿದ್ದಿಗಳು ಆಫ್ರಿಕಾದ ನೀಗ್ರೋ ಮೂಲದವರು. ಅವರನ್ನು ಬಂದರುಗಳಲ್ಲಿ, ಮಾರುಕಟ್ಟೆಯ ಜನನಿಬಿಡ ಸ್ಥಳಗಳಲ್ಲಿ ಬಿಳಿ ತೊಗಲಿನ ಆಸೆಬರುಕರು ಪ್ರಾಣಿಗಳಂತೆ ಹರಾಜು ಹಾಕುತ್ತಿದ್ದರು. ಅವರ ಎಸ್ಟೇಟುಗಳಲ್ಲಿ ಜೀತಕ್ಕೆ ಆಫ್ರಿಕಾದ ಹಲವು ಬುಡಕಟ್ಟುಗಳು ಹರಾಜುಗಳ ಮೂಲಕ ಕೊಳ್ಳಲ್ಪಟ್ಟವು. ಹೀಗಾಗಿ ಈ ಯೂರೋಪಿಯನ್ ವಸಾಹತುಶಾಹಿಯ ಪ್ರಭುತ್ವವನ್ನು ನಾವು ಅರ್ಥ ಮಾಡಿಕೊಳ್ಳದೇ, ಇವತ್ತಿನ ಗಿರಿಜನರ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.[೪] **'ಕಾಡು ಕಾಂಕ್ರೀಟ್ ಮತ್ತು ಜನಪದ'** ಎಂಬ ಪುಸ್ತಕದಲ್ಲಿ **ಹಿ.ಚಿ. ಬೋರಲಿಂಗಯ್ಯ**ನವರು(೧೯೯೫) ಇವುಗಳನ್ನು ಪ್ರಸ್ತಾಪಿಸಿದ್ದಾರೆ.

ಬುಡಕಟ್ಟು ಅಭಿವೃದ್ಧಿ ಎಂಬುದು ಕಾರ್ಯಕ್ರಮವಲ್ಲ. ಅದು ಒಂದು ನೀತಿ. ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಿರುವ ಕ್ರಮದಂತೆ, ಬುಡಕಟ್ಟು ಅಭಿವೃದ್ಧಿಗೆ ಒಂದು ನೀತಿ ಸ್ಪಷ್ಟವಾಗಿಲ್ಲ. ಏಕೆಂದರೆ, ಇಡೀ ರಾಷ್ಟ್ರದ ಅಭಿವೃದ್ಧಿಯಲ್ಲಿ ಬುಡಕಟ್ಟುಗಳು ಅಂತರ್ಗತ ಭಾಗವೇ ಆಗುತ್ತವೆ. ಆದ್ದರಿಂದ ಅವುಗಳ ಅಭಿವೃದ್ಧಿಯನ್ನು ಪ್ರತ್ಯೇಕವಾಗಿ ಪರಿಭಾವಿಸಿಕೊಳ್ಳುವ ಪ್ರಮೇಯ ಉದ್ಭವಿಸುವುದೇ

ಇಲ್ಲ. ಆದರೆ ಇಲ್ಲಿ ಉದ್ಭವಿಸುವ ಸಮಸ್ಯೆಯೆಂದರೆ, ಬುಡಕಟ್ಟು ಸಮುದಾಯಗಳು ಭಾರತೀಯ ಸಮಾಜದಲ್ಲಿ ವಿಶಿಷ್ಟ ಸಮೂಹಗಳಾಗಿವೆ. ಆದ್ದರಿಂದ ಅವು ರಾಷ್ಟ್ರದ ಅಂತರ್ಗತ ಭಾಗವಾಗಿದ್ದರೂ, ಅವುಗಳನ್ನು ಮುಖ್ಯವಾಹಿನಿಗೆ ತರಲು ಪ್ರತ್ಯೇಕ ಅಭಿವೃದ್ಧಿ ಕಾರ್ಯಕ್ರಮಗಳಿವೆ. ಅವುಗಳ ಅವಶ್ಯಕತೆಯೂ ಇದೆ. ಅಭಿವೃದ್ಧಿಯೊಂದಿಗೆ ಅಥವಾ ಅಭಿವೃದ್ಧಿಯ ನಂತರ ಅವು ಮುಖ್ಯವಾಹಿನಿಯಲ್ಲಿ ಲೀನವಾಗುವ ಪ್ರಶ್ನೆ ಉದ್ಭವಿಸುತ್ತದೆ[೫] ಎಂದು **ಟಿ.ಆರ್. ಚಂದ್ರಶೇಖರ** ಅವರು (೨೦೦೬) **'ಬುಡಕಟ್ಟು ಅಭಿವೃದ್ಧಿ-ಕೆಲವು ಟಿಪ್ಪಣಿಗಳು'** ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ನಾಗರಿಕ ಮತ್ತು ಬುಡಕಟ್ಟು ಸಮಾಜ ಎಂಬ ನುಡಿಗಳನ್ನು ಶ್ರೇಣೀಕೃತವಾಗಿ ಬಳಸಲಾಗುತ್ತದೆ ಎಂಬುದು ಸತ್ಯ. ಆದರೆ ನಾಗರಿಕರು ಮತ್ತು ಪ್ರಜೆ ಎಂಬ ಈ ಪದಗಳು ಅರ್ಥ ಮತ್ತು ವ್ಯಾಪ್ತಿಗಳಲ್ಲಿನ ವ್ಯತ್ಯಾಸಗಳನ್ನು ಅಭಿವೃದ್ಧಿ ಮತ್ತು ಬುಡಕಟ್ಟು ಅಭಿವೃದ್ಧಿಯ ಕಲ್ಪನೆಗಳೊಂದಿಗೆ ಸಂಬಂಧ ಕಲ್ಪಿಸಿ ಪ್ರತ್ಯೇಕಿಸುವುದು ಸರಿಯಲ್ಲ. ನಾಗರಿಕರು ಎಂದರೆ ಅಕ್ಷರಸ್ಥರು, ಶಿಕ್ಷಣ ಪಡೆದವರು, ವೃತ್ತಿ ಪರಿಣಿತರು. ಅವರು ಒಂದು ಸಾಮಾಜಿಕ ಗುಂಪಿಗೆ ಸೇರೆದವರಾಗಿರುತ್ತಾರೆ. ಬುಡಕಟ್ಟು ಈ ಗುಣಗಳಿಗೆಲ್ಲಾ ವಿರುದ್ಧವಾದ ಕುಲಸಂಬಂಧಿ ಗುಣಗಳಿಂದ ಕೂಡಿರುವುದರಿಂದ ಈ ಸಮುದಾಯಕ್ಕೆ ಪ್ರಾಮುಖ್ಯತೆ ಇರುತ್ತದೆ. ಆದರೆ ಈ ಕಾರಣಕ್ಕಾಗಿ ಬುಡಕಟ್ಟು ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಅವುಗಳ ಅವಶ್ಯಕತೆ ಮತ್ತು ಪರಿಸ್ಥಿತಿಗಳಿಗನು ಗುಣವಾಗಿ ಚಿಂತಿಸಿ ಕ್ರಮ ಕೈಗೊಳ್ಳಬೇಕಾತ್ತದೆ ಎಂದು ಅದೇ ಟಿಪ್ಪಣಿಯಲ್ಲಿ ಟಿ.ಆರ್. ಚಂದ್ರಶೇಖರ್ ಹೇಳಿರುವುದು ಸಮಂಜಸವಾಗಿದೆ. ಬುಡಕಟ್ಟು ಅಭಿವೃದ್ಧಿ ಒಂದು ರಾಷ್ಟ್ರ ಪ್ರಭುತ್ವದೊಳಗೆ ಇರುವ ಬುಡಕಟ್ಟು ಜನರ ಸ್ವಾಯತ್ತವಾದಿ ಅಭಿವೃದ್ಧಿ ಎಂದು ಅರ್ಥೈಸಬಹುದಾಗಿದೆ. ರಾಷ್ಟ್ರಪ್ರಭುತ್ವ, ಅಭಿವೃದ್ಧಿ ಮೀಮಾಂಸೆ ಮತ್ತು ಆಧುನೀಕರಣಗಳು, ಜಾಗತೀಕರಣದ ಪ್ರವಾಹದಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಅಳಿಸಿ ಹೋಗಬಾರದು ಎಂಬುದು ಎಷ್ಟು ಮುಖ್ಯವೋ, ಅವುಗಳು ರಾಷ್ಟ್ರ ಪ್ರಭುತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾಗಿದೆ ಎಂದು ಬುಡಕಟ್ಟು ಅಭಿವೃದ್ಧಿ- ಕೆಲವು ಟಿಪ್ಪಣಿಗಳು, ಇದರಲ್ಲಿ **ಟಿ.ಆರ್. ಚಂದ್ರಶೇಖರ್** ಹೇಳಿದ್ದಾರೆ.

ಅಮಿತ್ ಭಾವಿಸ್ಕರ್ ಅವರು (೧೯೯೮) ನರ್ಮದ ಕಣಿವೆಯ ಅವರ ಅಧ್ಯಯನದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಪರಿಸರವನ್ನು ತಿಂದುಹಾಕುವ ಮತ್ತು ನಾಶಪಡಿಸುವುದರ ಬಗ್ಗೆ ಅಧ್ಯಯನ ಮಾಡಿದ್ದಾರೆ. ನರ್ಮದ ಕಣಿವೆಯಲ್ಲಿ ಅಭಿವೃದ್ಧಿಯ ಮೇಲಿನ ಬುಡಕಟ್ಟು ಜನರ ಘರ್ಷಣೆಯನ್ನು ಸಕಾರಾತ್ಮಕವಾಗಿ ಗ್ರಹಿಸಲು ವಿಫಲವಾಗಿದೆ ಎಂದು ವಾದಿಸಿದ್ದಾರೆ. ಬುಡಕಟ್ಟು ಜನರ ಜ್ಞಾನಮೂಲದ ಪರಿಸ್ಥಿತಿಯೊಂದಿಗೆ ಇಂತಹ ಸಂಶೋಧನೆಯಲ್ಲಿ ಪಾಸಿಟೀವಿಸಂ ಸಂಘರ್ಷದಲ್ಲಿರುತ್ತದೆ ಎಂದು ಹೇಳಿದ್ದಾರೆ.[೬]

ಭಾವಿಸ್ಕರ್‌ರವರ ವಾದದ ಪ್ರಕಾರ ವಿಮರ್ಶಾತ್ಮಕ ಶೋಧನೆಯ ವಿಧಾನವು ಒಪ್ಪತಕ್ಕದೆಂದು ತಿಳಿಯಲು ಎರಡು ಪ್ರಮುಖ ಅಂಶಗಳಿರುತ್ತವೆ ೧. ತಾವು ಜೀವಿಸುತ್ತಿರುವ ಜೀವನದ ಬಗೆಗೆ

ಬುಡಕಟ್ಟು ಜನರು ಹೊಂದಿರುವ ದೃಷ್ಟಿಕೋನ ೨. ಸಂಶೋಧಕನು ತನ್ನ ಅಧ್ಯಯನ ವಸ್ತುವಿನಿಂದ ಜೀವನದ ಅರ್ಥದ ಬಗ್ಗೆ ನೀಡುವ ವ್ಯಾಖ್ಯಾನದ ದೃಷ್ಟಿಕೋನ. ಇಲ್ಲಿ ಸಂಶೋಧಕನ ಪಾತ್ರ ಮಹತ್ವವೆಂದು ಕಂಡುಬರುತ್ತದೆ.[೬] ಸಂಶೋಧಕನು ಬುಡಕಟ್ಟು ಜನರ ಜೀವನದ ಬಗೆಗೆ ನೀಡುವ ವ್ಯಾಖ್ಯಾನವು ಅವನ ಮೌಲ್ಯಗಳು ಮತ್ತು ಆದರ್ಶಗಳನ್ನು ಅವಲಂಬಿಸಿರುತ್ತದೆ. ಪ್ರಾಯಶಃ ಬುಡಕಟ್ಟುಗಳ ಅಧೀಕೃತ ದೃಷ್ಟಿಕೋನವು ವಿವರಣೆಗೆ ಬಾರದೇ ಇರಬಹುದು ಅಥವಾ ಸಂಶೋಧಕರಿಂದ ಸೂಕ್ತವಾದ ಅವರ ಜೀವನದ ವಿವರಗಳು ಪ್ರತಿಪಾದನೆಯಾಗದೆಯೇ ಇರಬಹುದು ಎಂಬ ಅಭಿಪ್ರಾಯವಿದೆ.

ಡಾ. ಆರ್.ಬಿ. ಕುಮಾರ್ ಅವರು (೨೦೦೬) ಕರ್ನಾಟಕದ ಮುದ್ದೆ ಕಮ್ಮಾರ ಸಮುದಾಯದ ತಮ್ಮ ಅಧ್ಯಯನದಲ್ಲಿ ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಪ್ರಮುಖ ಮೂರು ಸಮಸ್ಯೆಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ೧. ನಿಜವಾದ ಆದಿವಾಸಿಗಳು ಪರಿಶಿಷ್ಟ ಬುಡಕಟ್ಟು ಸಮುದಾಯವೆಂದು ಪರಿಗಣಿತವಾಗದೇ ಇರುವುದು. ೨. ಅನುಸೂಚಿತ ಪಟ್ಟಿಗೆ ಸೇರಿಯೂ ಸೌಲಭ್ಯ ವಂಚಿತವಾಗಿರುವುದು. ೩. ಬುಡಕಟ್ಟು ಸಮುದಾಯಕ್ಕೆ ಸೇರದ ಸಮುದಾಯಗಳು ರಾಜಕೀಯ ಪ್ರಾಬಲ್ಯದಿಂದ ಪರಿಶಿಷ್ಟ ಪಟ್ಟಿಗೆ ನುಸುಳುವ ಯತ್ನ ನಡೆಸಿರುವುದು. ಕುಮಾರ್‌ರವರು ಗುರುತಿಸಿರುವ ಈ ಸಮಸ್ಯೆಗಳನ್ನು ಎಲ್ಲ ಬುಡಕಟ್ಟುಗಳೂ ಎದುರಿಸುತ್ತಿವೆ.[೮] ಇಂತಹ ಸಂದರ್ಭದಲ್ಲಿ ಸರ್ಕಾರ ಮತ್ತು ಅಧಿಕಾರಿಗಳು ಬುಡಕಟ್ಟುಗಳ ಮನೋಭಾವನೆಗೆ ಸ್ಪಂದಿಸಬೇಕು. ಆಧುನಿಕ ಒತ್ತಡಗಳಲ್ಲಿ ನಲುಗಿ ಹೋಗಿರುವ ಬುಡಕಟ್ಟುಗಳಿಗೆ ಇಂದು ಜಾಗತೀಕರಣದ ಭೀತಿ ಇನ್ನೂ ಆಳವಾಗಿ ಹೆದರಿಸುತ್ತಿದೆ. ಇಂತಹ ಹಲವು ಸಮಸ್ಯೆಗಳಿಂದ ಬುಡಕಟ್ಟು ಸಮುದಾಯಗಳನ್ನು ಕಾಪಾಡುವ ಕೆಲಸ ಸರ್ಕಾರ ಮತ್ತು ಪ್ರಜ್ಞಾವಂತರು ಹಾಗೂ ಸಾರ್ವಜನಿಕರಿಂದ ಆಗಬೇಕಾಗಿದೆ.

ಪ್ರಥಮ ಬಾರಿಗೆ ಬುಡಕಟ್ಟು ಆರ್ಥಿಕತೆಯ ಬಗ್ಗೆ ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡಿದ್ದವರೆಂದರೆ **ಡಿ.ಡಿ. ನಾಗ್** ಮತ್ತು **ಆರ್.ಪಿ. ಸಕ್ಸೆನಾ** (೧೯೫೮) ಅವರು ಮಧ್ಯಪ್ರದೇಶದ ಭೈಗಾ ಬುಡಕಟ್ಟು ಸಮುದಾಯದ ಆರ್ಥಿಕ ಮೂಲಗಳ ಮೇಲೆ ಒತ್ತು ಕೊಟ್ಟು, ಸಾಮಾನ್ಯ ಆರ್ಥಿಕ ಸಿದ್ಧಾಂತಗಳ ಆದಾರದ ಮೇಲೆ ಆ ರಾಜ್ಯದ ಮಾರಿಫ್ಲ, ಬಿಲಾಸಪುರ ಮತ್ತು ಬಾಲಗಾಟ ಪ್ರದೇಶಗಳಲ್ಲಿನ ಭೈಗಾ ಸಮುದಾಯವನ್ನು ಅಧ್ಯಯನ ಮಾಡಿದ್ದಾರೆ. **ಸಕ್ಸೇನಾ** ಅವರು ಕೂಡಾ ನಾಗ್ ಅವರಂತೆಯೇ ಮದ್ಯಪ್ರದೇಶದಲ್ಲಿನ ಪಶ್ಚಿಮ ಗುಡ್ಡಗಾಡು ಪ್ರದೇಶದ ಬುಡಕಟ್ಟುಗಳನ್ನು ಅಧ್ಯಯನ ಮಾಡಿ ಅಲ್ಲಿ ಐದು ಬುಡಕಟ್ಟು ಸಮುದಾಯಗಳ ಆರ್ಥಿಕತೆಯನ್ನು ಪ್ರಸ್ತುತ ಪಡಿಸಿದ್ದಾರೆ.[೯] ಈ ಎರಡು ಅಧ್ಯಯನಗಳೂ ಆಯಾ ಕ್ಷೇತ್ರದ ಬುಡಕಟ್ಟುಗಳ ಸಮಾಜಿಕ-ಆರ್ಥಿಕ ಅಂಶವನ್ನು ಹೊರತುಪಡಿಸಿ ಆರ್ಥಿಕತೆಗಷ್ಟೆ ಒತ್ತು ನೀಡಿದ್ದಾರೆ.

ವರ್ಮ (೧೯೫೫–೧೯೬೦) ಅವರು ಕೆಲವು **ಬುಡಕಟ್ಟುಗಳ ಸಾಮಾಜಿಕ-ಆರ್ಥಿಕ ಸಂಘಟನೆ**ಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಇವರು ಬುಡಕಟ್ಟು ಜನರ ಜೀವನ ಗರ್ಭಧಾರಣೆ ಮತ್ತು ಜನನ ಪ್ರೌಢಾವಸ್ಥೆ, ವಿಧವಾ ಪುನರ್‌ವಿವಾಹ, ಸಮಾಜದಲ್ಲಿ ಮಹಿಳೆಯರ ಸ್ಥಾನ, ಧರ್ಮದ ಗ್ರಾಮೀಣ

ಪರಿಷತ್ತು ಮತ್ತು ರಾಜಕೀಯ ಸಂಸ್ಥೆಗಳ ಬಗ್ಗೆ ವಿವಿಧ ಹಂತಗಳಲ್ಲಿ ಪರೀಕ್ಷೆ ನಡೆಸಿದ್ದಾರೆ. ವರ್ಮ ಅವರು ಸನರಿಯ ಪಹರಿಹಾನ್ ಮತ್ತು ಕನಮಬಾಗ್ ಬುಡಕಟ್ಟುಗಳ ಸಾಮಾಜಿಕ-ಸಾಂಸ್ಕೃತಿ ಸಂಘಟನೆಗಳ ಬಗ್ಗೆ ಗ್ರಂಥದಲ್ಲಿ ಚರ್ಚಿಸಿದ್ದಾರೆ.[೧೦] ವರ್ಮ ಅವರು ಬುಟಕಟ್ಟುಗಳ ಜೀವನ, ಗರ್ಭಾವಸ್ಥೆ ಮತ್ತು ಜನನ, ಪ್ರೌಢಾವಸ್ಥೆ, ವಿಧವೆಯರ ಪುನರ್ವಿವಾಹ, ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ, ಮತಧರ್ಮ, ಗ್ರಾಮ ಪರಿಷತ್ತು ಮತ್ತು ಸಾರ್ವಜನಿಕ ಸಂಸ್ಥೆಗಳ ಬಗ್ಗೆಯೂ ಚರ್ಚಿಸಿದ್ಧಾರೆ.

ಎನ್.ಎನ್. ವ್ಯಾಸ (೧೯೬೭) ಅವರು ತಮ್ಮ **'ಕಸ್ಟಮ್ಸ ಅಂಡ್ ಟ್ರೆಡಿಷನ್ಸ್ ಆಫ್ ಸಮ್ ಇಂಡಿಯನ್ ಟ್ರೈಬ್ಸ್'**, ಎಂಬ ಸಂಶೋಧನಾ ಅಧ್ಯಯನದಲ್ಲಿ ರಾಜಸ್ಥಾನ, ಆಂಧ್ರಪ್ರದೇಶ, ಪಂಜಾಬ್ ಮತ್ತು ಗುಜರಾತ್ ರಾಜ್ಯಗಳ ಬನಿಯಾ ಬುಡಕಟ್ಟಿನ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಐತಿಹಾಸಿಕವಾಗಿ ಪ್ರಸ್ತುತಪಡಿಸಿದ್ದಾರೆ. ವಿವಿಧ ರಾಜ್ಯಗಳಲ್ಲಿರುವ ಬನಿಯಾಗಳ ಸಂಪ್ರದಾಯ ಮತ್ತು ಆಚರಣೆಗಳಲ್ಲಿನ ಭಿನ್ನತೆಗಳನ್ನು ಗುರುತಿಸಿದ್ದಾರೆ.[೧೧] ಈ ಅಧ್ಯಯನವು ಭಾರತದ ಬುಡಕಟ್ಟುಗಳ ತೌಲನಿಕ ಹಿನ್ನೆಲೆಯನ್ನು ಒದಗಿಸುವ ಒಂದು ಉತ್ತಮ ಗ್ರಂಥವಾಗಿದೆ.

ಜಗನ್ನಾಥ ಪಾಂಡೆಯವರ (೧೯೮೧) **'ಟ್ರೈಬಲ್ ಪೆಸೆಂಟ್ರ ಡೈನಾಮಿಕ್ಸ್ ಆಫ್ ಡೆವಲಪ್ ಮೆಂಟ್'** ಎಂಬ ಸಂಶೋಧನಾ ಪ್ರಬಂಧದಲ್ಲಿ ಜಗನ್ನಾಥ ಪಾಂಡೆಯವರು ಒರಿಸ್ಸಾದ ಬುಡಕಟ್ಟು ಹಳ್ಳಿಗಳಲ್ಲಿನ ವರ್ಗಗಳು ಮತ್ತು ವರ್ಗ ಸಂಬಂಧಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಪಾಂಡೆಯವರು ಬುಡಕಟ್ಟು ಹಳ್ಳಿಗಳ ಲಕ್ಷಣಗಳನ್ನು ವಿಶ್ಲೇಷಿಸುತ್ತ, ಊಳಿಗಮಾನ್ಯ ಸಂಬಂಧಗಳು ಮತ್ತು ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆ ಆಗುತ್ತಿರುವ ವಿಚಾರಗಳನ್ನು ಹೊರತಂದಿದ್ದಾರೆ.[೧೨]

'ಸ್ಟ್ರಾಟಫಿಕೇಷನ್ ಅಮಾಂಗ್ ಇಂಡಿಯನ್ ಟ್ರೈಬ್ಸ್' ಎಂಬ ಸಂಶೋಧನಾ ಪ್ರಬಂಧದಲ್ಲಿ **ಪ್ರದೀಪ್ ಕುಮಾರ್ ಬೋಸ್** (೧೯೮೧) ಅವರು, ಭಾರತದ ಬುಡಕಟ್ಟುಗಳಲ್ಲಿ ಜಾತಿ ಏಣಿ-ಶ್ರೇಣಿ, ಅಥವಾ ಪವಿತ್ರ-ಅಪವಿತ್ರತೆ ಎಂಬ ಏಣಿ-ಶ್ರೇಣಿ, ಅಥವಾ ವರ್ಗಗಳ ಸಾಮಾಜಿಕ ಸ್ತರ ವಿನ್ಯಾಸವನ್ನು ಅವಲೋಕಿಸಿ ಅದರ ಪ್ರಸ್ತುತತೆಯನ್ನು ಪ್ರಶ್ನಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರದೀಪ್ ಕುಮಾರ್ ಅವರು ಗುಜರಾತಿನ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಬುಡಕಟ್ಟು ಜನಸಂಖ್ಯೆಯು ಆಧುನಿಕ ಮಾರುಕಟ್ಟೆ ಮತ್ತು ಉತ್ಪಾದನಾ ವ್ಯವಸ್ಥೆಗಳು, ಮತ್ತು ಆಧುನಿಕ ರಾಜಕೀಯ ವ್ಯವಸ್ಥೆಯ ಒಳಗೆ ಅವರು ಹೊಂದಿಕೊಳ್ಳುತ್ತಿರುವುದು ಮತ್ತು ಉದ್ಯೋಗ ಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುವುದನ್ನು ತೋರಿಸಿದ್ದಾರೆ ಮತ್ತು ಶ್ರೀಮಂತ ರೈತರು, ಮಧ್ಯಮ ರೈತರು, ಬಡರೈತರು, ಮತ್ತು ಭೂರಹಿತ ಕೃಷಿಕಾರ್ಮಿಕರು ಎಂಬ ನಾಲ್ಕು ವರ್ಗಗಳು ಅಸ್ತಿತ್ವವಿರುವುದನ್ನು ಸ್ಪಷ್ಟಪಡಿಸಿದ್ದಾರೆ.[೧೩]

'ಎಲೈಟ್ ಇನ್ ಇಂಡಿಯನ್ ಸೊಸೈಟಿ' ಎಂಬ ತಮ್ಮ ಸಂಶೊಂಧನಾ ಗ್ರಂಥದಲ್ಲಿ **ರೇಣುಕಾ ಪಮಾಚೆ** (೧೯೮೪) ಅವರು, ಬಿಲ್ ಬುಡಕಟ್ಟು ಸಮುದಾಯದಲ್ಲಿ ರಾಜಕೀಯ ಅಂಶಗಳು ಮತ್ತು ಗಣ್ಯನಾಯಕರು ಉದಯಿಸುತ್ತಿರುವುದರ ಬಗ್ಗೆ ಅಧ್ಯಯನ ಮಾಡಿದ್ದಾರೆ; ಬಿಲ್ ಸಮುದಾಯದ

ರಾಜಕೀಯ ವ್ಯವಸ್ಥೆಯ ಮೇಲೆ ಆಧುನಿಕ ರಾಜಕೀಯದ ಪ್ರಭಾವವನ್ನು ವಿವರಿಸಿದ್ದರೂ, ಅವರ ಸಂಶೋಧನೆಯಲ್ಲಿ ಎಲ್ಲಿಯೂ ಬುಡಕಟ್ಟುಗಳ ಸಾಮಾಜಿಕ-ಆರ್ಥಿಕ ಅಂಶಗಳ ಬಗ್ಗೆ ಗಮನ ಹರಿಸಿಲ್ಲದಿರುವುದು ಕಂಡುಬಂದಿದೆ.[೧೪]

ಅಲೋಕ ಕುಮಾರ್ (೧೯೮೬) ಅವರ **'ಟ್ರೈಬಲ್ ಕಲ್ಚರ್ ಅಂಡ್ ಎಕಾನಮಿ'** ಎಂಬ ಪುಸ್ತಕದಲ್ಲಿ, ಪ್ರಾದೇಶಿಕ ಭೌಗೋಳಿಕ ಅಂಶಗಳ ಅಡಿಯಲ್ಲಿ ಬಿಹಾರದ ಮಲ-ಪಹರಿಯಾ ಬುಡಕಟ್ಟಿನ ಸಾಮಾಜಿಕ ಸಾಂಸ್ಕೃತಿಕ ಸಂಘಟನೆ ಮತ್ತು ಆರ್ಥಿಕ ರಚನೆಗಳನ್ನು ವಿಶ್ಲೇಷಣೆಮಾಡಿ ಅವುಗಳಿಗೆ ವ್ಯಾಖ್ಯಾನ ನೀಡುವ ಪ್ರಯತ್ನವನ್ನು ಅಲೋಕ ಕುಮಾರ್ ಮಾಡಿದ್ದಾರೆ. ಆದಾಯ ಖರ್ಚುಗಳ ಕ್ರಮ, ಕುಟುಂಬದ ಗಾತ್ರ ಮುಂತಾದ ಅಂಶಗಳಿಂದ ಭೂಮಿಯ ಉಪಯೋಗದ ಬಗ್ಗೆ ಅವರು ಅಧ್ಯಯನ ಮಾಡಿದ್ದಾರೆ. ಈ ಸಂಶೋಧನಾ ಪ್ರಬಂಧವು ಮಲ-ಪಹರಿಯಾ ಬುಡಕಟ್ಟಿನ ಉಡುಪು, ಧಾರ್ಮಿಕ ಕ್ರಿಯಾ ವಿಧಿಗಳು, ಪದ್ಧತಿಗಳು, ಬೇಟೆ, ಕೃಷಿ ಉಪಕರಣಗಳು, ಮತ್ತು ಸಂಗೀತ ಸಲಕರಣೆಗಳಿಗೆ ಸಂಬಂಧಿಸಿದಂತೆ ಸ್ವಾಭಾವಿಕವಾದ ಸುಳಿವುಗಳನ್ನು ನೀಡುತ್ತದೆ. ಕೊನೆಯಲ್ಲಿ ಸಂಶೋಧಕರು ಬುಡಕಟ್ಟುಗಳ ವಾಸದ ನೆಲೆಗಳಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಶೀಘ್ರವಾಗಿ ನಿರ್ಮಿಸಿ ಕೊಡುವ ಅವಶ್ಯಕತೆಗಳ ಬಗ್ಗೆ ಮನವರಿಕೆ ಮಾಡಿದ್ದಾರೆ.[೧೫]

'ಟ್ರೈಬಲ್ ವುಮೆನ್ ವಿಕ್ಟಿಮ್ಸಾ ಆಫ್ ಡೆವಲಪ್‌ಮೆಂಟ ಪ್ರೊಸ್ಸೆಸ್' ಎಂಬ ತಮ್ಮ ಸಂಶೋಧನಾ ಪದರಬಂಧದಲ್ಲಿ **ಗೀತಾ ಮೆನನ್ (೧೯೮೮)** ಅವರು, ಸಾಮಾನ್ಯ ಆಸ್ತಿ, ಸಂಪನ್ಮೂಲಗಳ ನಷ್ಟ ಮತ್ತು ಪರಿಣಾಮಗಳು ಬುಡಕಟ್ಟು ಮಹಿಳೆಯರ ಮೇಲೆ ತೀವ್ರವಾಗಿ ಆಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬುಡಕಟ್ಟು ಮಹಿಳೆಯರ ಕಷ್ಟಗಳು ಹೆಚ್ಚಾಗುತ್ತಿವೆ ಹಾಗೂ ಸಾಮಾನ್ಯ ಆಸ್ತಿ ಮತ್ತು ಸಂಪನ್ಮೂಲಗಳಲ್ಲಿನ ಬುಡಕಟ್ಟುಗಳ ಸಾಂಪ್ರದಾಯಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವುದರಿಂದ ಬಹುಸಂಖ್ಯಾತ ಬುಡಕಟ್ಟು ಮಹಿಳೆಯರು ಅಭಿವೃಧ್ಧಿ ಪ್ರಕ್ರಿಯೆಯ ಬಲಿಪಶುಗಳಾಗುತ್ತಿದ್ದಾರೆ ಎನ್ನುವ ಸತ್ಯವನ್ನು ಹೊರಗೆಡವಿದ್ದಾರೆ.[೧೬] ಆದರೆ ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರು ಕುಟುಂಬ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಎಂತಹ ಸ್ಥಾನಮಾನ ಹೊಂದಿದ್ದಾರೆ ಎನ್ನುವುದರ ಬಗ್ಗೆ ಗಮನ ಹರಿಸದಿರುವುದು ಕಂಡುಬಂದಿದೆ.

ಎಸ್. ರಮಾಮಣಿ (೧೯೮೮) ಅವರ **'ಟ್ರೈಬಲ್ ಎಕಾನಮಿ, ಪ್ರಾಬ್ಲಮ್ ಅಂಡ್ ಪ್ರಾಸ್ಪೆಕ್ಟಸ್'** ಎಂಬ ಅಧ್ಯಯನದಲ್ಲಿ ಬುಡಕಟ್ಟುಗಳು ಮತ್ತು ಬುಡಕಟ್ಟೇತರ ಸಮೂಹಗಳ ನಡುವಿನ ಸಾಮಾಜಿಕ ವ್ಯತ್ಯಾಸಗಳನ್ನು ಸಾದರಪಡಿಸಿ, ಈ ವ್ಯತ್ಯಾಸ ಅಥವಾ ಅಂತರವನ್ನು ಕಡಿಮೆ ಮಾಡಲು ರಕ್ಷಣಾತ್ಮಕ ಮತ್ತು ಉನ್ನತೀಕರಣದ ಸುಧಾರಣಾ ಕ್ರಮಗಳು ಅವಶ್ಯಕ ಎಂದಿದ್ದಾರೆ.[೧೭]

'ಟ್ರೈಬಲ್ಸ್ ಆಫ್ ಇಂಡಿಯಾ, ದಿ ಸ್ಟ್ರಗಲ್ ಫಾರ್ ಸರವೈವಲ್' ಎಂಬ ಸಂಶೋಧನಾ ಪ್ರಬಂಧದಲ್ಲಿ **ಕ್ರಿಸ್ಟೋಫರ್ ವಾಸ್ ಫ್ಯೂರರ್, ಹರ್ನೆಂಡರ್ಫ (೧೯೮೮)** ಅವರು ಅರುಣಾಚಲ ಪ್ರದೇಶದ ಅಪತಾನಿಸ್ ಮತ್ತು ಆಂಧ್ರಪ್ರದೇಶದ ಗೊಂಡ ಬುಡಕಟ್ಟುಗಳನ್ನು ಉದಾಹಾರಣೆಯಾಗಿ

ತೆಗೆದುಕೊಂಡು ಬುಡಕಟ್ಟುಗಳ ಸಾಂಪ್ರದಾಯಕ ವ್ಯವಸ್ಥೆಯ ಅಸಂಘಟಿತ ಕ್ರಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ವಿಫಲತೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಸಂಶೋಧನೆಯ ಫಲಿತದಂತೆ ಮೇಲಿನ ಎರಡೂ ಬುಡಕಟ್ಟುಗಳು ಪ್ರಸ್ತುತ ಪ್ರಪಂಚದಲ್ಲಿ ವಿರುದ್ಧ ದಿಕ್ಕಿನಲ್ಲಿ ನಿಂತಿವೆ. ಅಪ-ತಾನಿಸ್ ಬುಡಕಟ್ಟು ಮೇಲ್ಮುಖವಾಗಿ ಅಭಿವೃದ್ಧಿ ಹೊಂದುತ್ತಿದ್ದರೆ, ಗೊಂಡ ಬುಡಕಟ್ಟು ಜನರು ಹಿನ್ನೆಡೆ ಅನುಭವಿಸುತ್ತಿದ್ದಾರೆ. ಅರುಣಾಚಲ ಪ್ರದೇಶದ ಅಪ-ತಾನಿಗಳು ತಮ್ಮ ಸಾಂಪ್ರದಾಹಿಕ ಚಹರೆಯನ್ನು ಉಳಿಸಿಕೊಂಡು ಅಭಿವೃದ್ಧಿ ಮತ್ತು ಸಮಗ್ರತೆಯನ್ನು ಸಾಧಿಸಿದ್ದಾರೆ. ಆದರೆ ಗೊಂಡಾಗಳಿಗೆ ಇದು ಸಾಧ್ಯವಾಗಿಲ್ಲ[೧೮] ಎಂದಿದ್ದಾರೆ.

ರಮಾಕಾಂತ ಪ್ರಸಾದ (೧೯೮೮) ಅವರ ಸಂಶೋಧನಾ ಪ್ರಬಂಧವಾದ **'ಎ ಕೇಸ್ ಸ್ಟಡಿ ಆಫ್ ಕಲ್ಚರಲ್ ಎಕಾಲಜಿ ಅಂಡ್ ಟ್ರೈಬಲ್ ಡೈನಾಮಿಕ್ಸ್'**ದಲ್ಲಿ ಅತಿ ಕಡಿಮೆ ಜನಸಂಖ್ಯೆಯುಳ್ಳ ಮತ್ತು ವಿಭಿನ್ನ ಪರಿಸರದ ನೆಲೆಗಳಲ್ಲಿ ಬದುಕುತ್ತಿರುವ ಬಿಹಾರದ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಈ ಸಂಶೋಧನಾ ಪ್ರಬಂಧವು ವಿವಿಧ ಪರಿಸರದ ನೆಲೆಗಳಲ್ಲಿನ ವ್ಯತ್ಯಾಸಗಳಿಂದ ಒಂದೇ ಸಂಸ್ಕೃತಿಯಲ್ಲಿನ ವೈವಿಧ್ಯತೆಗಳನ್ನು ಚಿತ್ರಿಸಿದೆ ಮತ್ತು ಒಂದು ಸಣ್ಣ ಬುಡಕಟ್ಟು ತನ್ನದೇ ಆದ ಸಮಾಜಿಕ- ಪರಿಸರದ ಪರಿಸ್ಥಿತಿಗಳನ್ನು ಹೇಗೆ ಎದುರಿಸುತ್ತಿವೆ ಎನ್ನುವುದನ್ನು ಚಿತ್ರಿಸಿದೆ. ಇಂತಹ ಸಣ್ಣ ಬುಡಕಟ್ಟುಗಳ ಬಗೆಗಿನ ಅಧ್ಯಯನಗಳು ಬುಡಕಟ್ಟುಗಳ ಸಮಸ್ಯೆಗಳು ಮತ್ತು ದೃಷ್ಟಿಕೋನಗಳು ಮತ್ತು ಅಭಿವೃದ್ಧಿಯ ಕಿರುನೋಟ ಹಾಗೂ ಇಂತಹ ಅಂಚಿನ ಅಲ್ಪಸಂಖ್ಯಾತ ಬುಡಕಟ್ಟುಗಳ ಸಂರಕ್ಷಣಾತ್ಮಕ ಕ್ರಮಗಳ ಬಗ್ಗೆ ಸೂಕ್ತ ಮಾಹಿತಿ ಒದಗಿಸಿದೆ.[೧೯]

ಬುದ್ಧದೇವ ಚೌಧರಿ (೧೯೯೦) ಅವರ ಸಂಶೋಧನಾ ಪ್ರಬಂಧವಾದ **'ಟ್ರೈಬಲ್ ಟ್ರಾನ್ಸಫಾರ್ ಮೇಶನ್ ಇನ್ ಇಂಡಿಯಾ'** ಇದರಲ್ಲಿ ಬುದ್ಧದೇವ ಅವರು ಬುಡಕಟ್ಟುಗಳ ಬದಲಾಗುತ್ತಿರುವ ಚಿತ್ರಣ ಮತ್ತು ಬುಡಕಟ್ಟುಗಳ ಆರ್ಥಿಕತೆ, ಕೃಷಿ, ರಾಜಕೀಯ, ಕುಲಸಂಬಂಧಿ ವಿಷಯಗಳು, ಪರಿಸರ, ಶಿಕ್ಷಣ, ತಂತ್ರಜ್ಞಾನದ ರೂಪಾಂತರ, ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳು, ಧಾರ್ಮಿಕ ನಂಬಿಕೆಗಳು ಮತ್ತು ಕ್ರಿಯಾವಿಧಿಗಳಿಗೆ ಸಂಬಂಧಿಸಿದ ವಿಷಯಗಳ ವೈವಿಧ್ಯತೆಯ ಅಂಶಗಳನ್ನು, ಅವರ ಸಮಸ್ಯೆಗಳು ಮತ್ತು ಪರಿಹಾರ ಮಾದರಿಗಳೆರಡರೊಂದಿಗೆ ಸಮಗ್ರ ಮಾಹಿತಿ ನೀಡಿದ್ದಾರೆ. ಇದರಲ್ಲಿ ಸಂಶೋಧಕರು ಭಾರತದಲ್ಲಿನ ಬುಡಕಟ್ಟುಗಳ ಪರಿಸ್ಥಿತಿಯಲ್ಲಿನ ಸೂಕ್ಷ್ಮ ಮತ್ತು ಸಮಗ್ರ ಹಂತದ ಪರಿವರ್ತನೆಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಂದ ವಿವರಿಸಿದ್ದಾರೆ.[೨೦]

'ಟ್ರೈಬಲ್ ಸೆಲ್ಫ್ ಇಮೇಜ್ ಅಂಡ್ ಐಡೆಂಟಿಫಿಕೇಷನ್' ಎಂಬ ಸಂಶೋಧನಾ ಪ್ರಬಂಧದಲ್ಲಿ **ಕೆ.ಎನ್. ಸಹಾಯ್ (೧೯೭೭)** ಅವರು ಹೇಳಿರುವಂತೆ 'ಹಿಂದೂಧರ್ಮ, ಕ್ರೈಸ್ತಧರ್ಮ, ಶಿಕ್ಷಣ ಮತ್ತು ರಾಜಕೀಯದಂತಹ ಅನೇಕ ಸಂಗತಿಗಳು ಮತ್ತು ಶಕ್ತಿಗಳು, ಅವುಗಳ ಕಾರ್ಯಾಚರಣೆ ಮತ್ತು ಪ್ರಭಾವದಿಂದ ಬುಡಕಟ್ಟುಗಳ ಸ್ವಂತ ಮತ್ತು ಪ್ರತ್ಯೇಕ ಚಹರೆಗಳಲ್ಲಿ ಗಣನೀಯವಾದ ಮಾರ್ಪಾಡುಗಳು ಉಂಟಾಗಿವೆ. ಇದಕ್ಕೆ ಐತಿಹಾಸಿಕ ಪ್ರಕ್ರಿಯೆಗಳೂ ಸಹ ಪ್ರಭಾವ ಬೀರಿವೆ"[೨೧]

ಕೆ.ಎಸ್ ಸಹಾಯ್ ಅವರ ಸಂಶೋಧನೆಯ ಫಲಿತಗಳಂತೆಯೇ ಈ ಅಧ್ಯಯನದಲ್ಲಿರುವ ಸಿದ್ದಿ ಜನಾಂಗದವರೂ, ಧರ್ಮ, ಶಿಕ್ಷಣ ಮತ್ತು ರಾಜಕೀಯದಂತಹ ಅನೇಕ ಸಂಗತಿಗಳು ಮತ್ತು ಶಕ್ತಿಗಳು, ಅವುಗಳ ಕಾರ್ಯಾಚರಣೆ ಮತ್ತು ಪ್ರಭಾವದಿಂದ ಸ್ವಂತ ಮತ್ತು ಪ್ರತ್ಯೇಕ ಚಹರೆಗಳಲ್ಲಿ ಗಣನೀಯವಾದ ಮಾರ್ಪಾಡುಗಳು ಉಂಟಾಗಿವೆ. ಇದಕ್ಕೆ ಐತಿಹಾಸಿಕ ಪ್ರಕ್ರಿಯೆಗಳೂ ಸಹ ಪ್ರಭಾವ ಬೀರಿವೆ

ಜೆ.ಡಿ.ಮೆಹ್ರಾ (೧೯೭೭) ಅವರು ತಮ್ಮ **'ದಿ ವರ್ಲ್ಡ್ ವ್ಯು ಆಫ್ ಟ್ರೈಬ್'** ಎಂಬ ಲೇಖನದಲ್ಲಿ ಬುಡಕಟ್ಟುಗಳು ಜಗತ್ತನ್ನು ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳ ದೃಷ್ಟಿಯಲ್ಲಿ ವೀಕ್ಷಿಸುತ್ತದೆ ಎಂದಿದ್ದಾರೆ. ಆದ್ದರಿಂದ ಬುಡಕಟ್ಟು ಅಭಿವೃದ್ಧಿಯನ್ನು ಕೇವಲ ಭೌತಿಕ ಮೂಲಭೂತ ಸೌಕರ್ಯಗಳ ದೃಷ್ಟಿಯಿಂದ ಮಾತ್ರ ನೋಡದೆ ಅವರ ಮಾನಸಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳ ಅಡಿಯಲ್ಲಿ ಪರಿಗಣಿಸಬೇಕಾಗುತ್ತದೆ ಎನ್ನುತ್ತಾರೆ.[೨]

ಜೆ.ಡಿ ಮೆಹ್ರಾ ಅವರ ಅಭಿಪ್ರಾಯವನ್ನಯ ಭಾಗಶಃ ಒಪ್ಪಿ, ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರನ್ನು ಇಲ್ಲಿಯ ಸ್ಥಳೀಯರು ಮನುಷ್ಯ ಮನುಷ್ಯರ ಸಂಬಂಧಗಳಿಂದ ನೋಡದೆ, ಅವರ ಸೈಹಿಕ ಲಕ್ಷಣಗಳ ಆದಾರದ ಮೇಲೆ ಸಿದ್ದಿಯರು ಜನಾಂಗೀಯ ಹೊರಗಣತನದಿಂದ ನರಳುವಂತೆ ಮಾಡುತ್ತಿದ್ದಾರೆ.

ಬಿಂದೊ. ಸಿ. ಅಗರ್‌ವಾಲ್ (೧೯೭೭) ಅವರು ತಮ್ಮ **'ಇಂಟರ್‍ಯಾಕ್ಷನ್ ಬಿಟ್ವೀನ್ ಟ್ರೈಬ್ ಅಂಡ್ ನಾನ್ ಟ್ರೈಬ್'** ಪ್ರಬಂಧದಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಸಮುದಾಯಗಳ ಅಂತಃಕ್ರಿಯೆಯು ಸಾಮಾಜಿಕ-ಸಾಂಸ್ಕೃತಿಕ ಪ್ರಕ್ರಿಯೆಯಾಗಿದೆ ಎಂದು ಹೇಳಿದ್ದಾರೆ. ಜನಸಂಖ್ಯಾತ್ಮಕ, ಮಾನಸಿಕ ಮತ್ತು ಕಾರ್ಯಾತ್ಮಕ ಅಂಶಗಳು ಈ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಸೈದ್ಧಾಂತಿಕವಾಗಿ ಪ್ರತಿಯೊಂದು ಬುಡಕಟ್ಟು ಇತರ ಬುಡಕಟ್ಟುಗಳನ್ನು ತಮ್ಮದಲ್ಲದ ಸಮೂಹವೆಂದು ಪರಿಗಣಿಸುತ್ತದೆ. ಸ್ಥಾನೀಯ ಅಧ್ಯಾಯ ಕ್ರಮವು ಬುಡಕಟ್ಟುಗಳನ್ನು ವರ್ಗೀಕರಿಸಲು ಮತ್ತು ಬುಡಕಟ್ಟೇತರ ಸಮೂಹಗಳ ವಿಶ್ಲೇಷಣೆ, ವರ್ಣನೆ ಮತ್ತು ಅಂತರವಲಂಬನೆಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಬುಡಕಟ್ಟು ಮತ್ತು ಬುಡಕಟ್ಟೇತರ ಸಮುದಾಯಗಳ ನಡುವಿನ ಅಂತಃ ಕ್ರಿಯೆಗಳ ವಿಶ್ಲೇಷಣೆಯು ಬುಡಕಟ್ಟುಗಳು ಮತ್ತು ವಿವಿಧ ಸಮುದಾಯಗಳ ನಡುವಿನ ಸಂಬಂಧದಲ್ಲಿನ ವ್ಯತ್ಯಾಸವನ್ನು ತೋರಿಸುತ್ತದೆ. ಆದಾಗ್ಯೂ, ಪ್ರದೇಶದಿಂದ ಪ್ರದೇಶಕ್ಕೆ ಈ ರೀತಿಯ ಸಂಬಂಧಗಳು ಭಿನ್ನವಾಗಿರುತ್ತವೆ. ಈಶಾನ್ಯ ಭಾರತದಲ್ಲಿ ಸಾಮಾನ್ಯವಾಗಿ ಬುಡಕಟ್ಟು-ಬುಡಕಟ್ಟೇತರ ಸಮುದಾಯಗಳ ಅಂತಃಕ್ರಿಯೆಯ ಕ್ರಮವು ಸಂಘರ್ಷಾತ್ಮಕ ಅಥವಾ ಸ್ಪರ್ಧಾತ್ಮಕವಾಗಿರುತ್ತದೆ ಎಂದು ತೋರುತ್ತದೆ. ಸಬ್ ಹಿಮಾಲಯನ್ ಪ್ರದೇಶದಲ್ಲಿ ಅಂತಃಕ್ರಿಯೆಯ ಕ್ರಮವು ಸಹಕಾರದಿಂದಾಗಿಯೇ ಸಂಪರ್ಕದ ಹೆಚ್ಚಳವಾಗಿದೆ. ಆದಾಗ್ಯೂ, ಬುಡಕಟ್ಟುಗಳು ಅಂತಃಕ್ರಿಯೆಯ ಪ್ರತಿಕ್ರಿಯೆಯಲ್ಲಿದ್ದರೂ ಬುಡಕಟ್ಟೇತರ ಸಮುದಾಯಗಳಿಗಿಂತ ಕೆಳಗಿನ ಅಂತಸ್ತಿನವರೆಂದು ಒಪ್ಪಿಕೊಂಡಿವೆ. ಪಶ್ಚಿಮ ಭಾರತದಲ್ಲಿ ಬುಡಕಟ್ಟುಗಳು ಮತ್ತು ಬುಡಕಟ್ಟೇತರ ಸಮುದಾಯಗಳ ನಡುವಿನ ಅಂತಃಕ್ರಿಯೆಯು ಸ್ವಾತಂತ್ರ್ಯ ಪೂರ್ವದಲ್ಲಿ

ಸಂಘರ್ಷಾತ್ಮಕವಾಗಿತ್ತು. ಸ್ವಾತಂತ್ರ್ಯ ನಂತರ ಅವರ ಅಂತಃಕ್ರಿಯೆಯು ಸಹಕಾರದಿಂದ ಕೂಡಿರುವುದೆಂದು ತೋರುತ್ತದೆ. ಮಧ್ಯ ಮತ್ತು ಪೂರ್ವಭಾರತದಲ್ಲಿ ಈ ಪ್ರಕ್ರಿಯೆ ಸಹಕಾರ ರಹಿತ ಸ್ಪರ್ಧೆಗೆ ಮತ್ತು ಸಂಘರ್ಷಕ್ಕೆ ಒತ್ತು ನೀಡಿದೆ. ಒರಿಸ್ಸಾದ ಹಳ್ಳಿಗಳಲ್ಲಿ ಅಂತಃಕ್ರಿಯೆಯ ಸಹಕಾರದ ಮೇಲಿದ್ದು, ಕೈಗಾರಿಕಾ ಪ್ರದೇಶಗಳಲ್ಲಿ ಸ್ಪರ್ಧಾತ್ಮಕವಾಗಿದೆ. ಬಿಹಾರದ ಕೆಲವು ಭಾಗಗಳಲ್ಲಿ ಸಂಘರ್ಷಾತ್ಮಕವಾಗಿರುತ್ತವೆ. ದಕ್ಷಿಣ ಭಾರತದಲ್ಲಿ ಬುಡಕಟ್ಟುಗಳು ಮತ್ತು ಬುಡಕಟ್ಟೇತರ ಸಮೂಹಗಳ ನಡುವಿನ ಅಂತಃಕ್ರಿಯೆಯು ಮುಖ್ಯವಾಹಿನಿಯಲ್ಲಿರುವ ಬುಡಕಟ್ಟೇತರ ಸಮುದಾಯಗಳಿಂದ ಶೋಷಣಾತ್ಮಕವಾಗಿರುತ್ತದೆ. ಆದಾಗ್ಯೂ, ಸಹಕಾರವು ಅನಿವಾರ್ಯವಾಗಿ ಸಾಮಾನ್ಯ ನಿಯಮವಾಗಿರುತ್ತದೆ. ತಾರ್ಕಿಕ ವಿಶ್ಲೇಷಣೆಯು ತೋರಿಸುವಂತೆ ಭಾರತೀಯ ನಾಗರಿಕತೆಯಲ್ಲಿ ಯಾವುದೇ ಕಾಲದಲ್ಲಿ ಬುಡಕಟ್ಟುಗಳು ಬುಡಕಟ್ಟೇತರ ಸಮುದಾಯಗಳಿಂದ ಸಂಪೂರ್ಣವಾಗಿ ಪ್ರತ್ಯೇಕವಾಗಿಲ್ಲ.[೨೩] ಬುಡಕಟ್ಟುಗಳು ಅಂತಃ ಕ್ರಿಯೆಯಲ್ಲಿ ತೊಡಗಿದ್ದು, ನಿರಂತರವಾಗಿ ಅದನ್ನು ಮುಂದುವರಿಸಿಕೊಂಡು ಬಂದಿವೆ. ವಿವಿಧ ಪ್ರದೇಶ ಮತ್ತು ವಿಭಾಗಗಳಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಸಮುದಾಯಗಳ ನಡುವಿನ ಅಂತಃಕ್ರಿಯೆಯಲ್ಲಿ ಸಾಮಾಜಿಕ ಆರ್ಥಿಕ ಅಂತರವಲಂಬನೆಯು ಅಧಿಕವಾಗಿರುವುದು ಕಂಡುಬರುತ್ತದೆ.

'ಸ್ಟೇಟಸ್ ಆಫ್ ಟ್ರೈಬಲ್ಸ್ ಇನ್ ಇಂಡಿಯಾ ಅನ್ ಅನಾಲಿಸೀಸ್' ಎಂಬ ಲೇಖನದಲ್ಲಿ **ಅನುಪಮಾ ಹಜಾರ (೨೦೧೦)** ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ನಿರ್ಣಯಕೈಗೊಳ್ಳುವ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿ ಸ್ಥಳೀಯ ಜನರಿಗೆ ನೀಡುತ್ತಿಲ್ಲ; ಸರ್ಕಾರವೇ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದರೂ ನಿರ್ಣಯ ತೆಗೆದುಕೊಳ್ಳುವ ಅಧಿಕಾರವನ್ನು ತುಳಿತಕ್ಕೊಳಗಾದ ಸಮುದಾಯಕ್ಕೆ ನೀಡುತ್ತಿಲ್ಲ; ಸ್ಥಳೀಯ ಪ್ರಭಾವಿ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಇದರ ಮೇಲೆ ಪ್ರಭಾವ ಬೀರುತ್ತಿದೆ. ಪಾರದರ್ಶಕ ಕ್ರಮದಿಂದ ಔಪಚಾರಿಕವಾಗಿ ಪ್ರಜಾಸತ್ತಾತ್ಮಕ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣದೊಂದಿಗೆ ರಾಜಕೀಯ ಮತ್ತು ತಾಂತ್ರಿಕ ಅಂಶಗಳ ಆಧಾರದ ಮೇಲೆ ಅವರ ಹಕ್ಕನ್ನು ಚಲಾಯಿಸಲು ಅವಕಾಶ ಕಲ್ಪಿಸಬೇಕು. ಬುಡಕಟ್ಟು ಜನರು ಇತರ ಸಂಘಟನೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ನಾಗರಿಕ ಸಮಾಜದ ನೆಟ್‌ವರ್ಕ್‌ನೊಂದಿಗೆ ಸಹಭಾಗಿತ್ವ ಸಾಧಿಸಬೇಕು. ಅವುಗಳ ಮೂಲಕ ಬುಡಕಟ್ಟು ಜನರ ಹಕ್ಕುಗಳ ಬಗೆಗಿನ ಮತ್ತು ಸಾಮಾಜಿಕ ನ್ಯಾಯಕ್ಕಾಗಿರುವ ಅವರ ಕೂಗನ್ನು ಹೋರಾಟದ ಧ್ವನಿಯಾಗಿ ಪರಿವರ್ತಿಸಿ, ರಾಜಕೀಯ ನೀತಿಗಳು ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಪ್ರತಿನಿಧಿಸುವಂತಾಗುತ್ತವೆ ಮತ್ತು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರವು ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಡುತ್ತಾರೆ.[೨೪]

ರಾಜು ನಾರಾಯಣಸ್ವಾಮಿ (೨೦೧೦) ಅವರ **'ಟ್ರೈಬಲ್ ಎಜುಕೇಷನ್ ಅಸ್ ಎ ಟೂಲ್ ಫಾರ್ ರೂರಲ್ ಟ್ರಾನ್ಸ್‌ಫಾರಮೇಷನ್–ಎ ಕೇಸ್ ಸ್ಟಡಿ ಆಫ್ ಪನಿಯಾಸ್ ಇನ್ ವಾಯ್‌ನಾಡು'** ಎಂಬ ಸಂಶೋಧನಾ ಪ್ರಬಂಧದಲ್ಲಿ ವ್ಯಕ್ತವಾಗಿರುವಂತೆ, ಕೇರಳದಲ್ಲಿ ಶಿಕ್ಷಣವು ಪರಿಶಿಷ್ಟ ಬುಡಕಟ್ಟು

ಜನರಿಗೆ ಸಂಬಂಧಿಸಿದಂತೆ ಪಕ್ಷಪಾತದಿಂದ ಕೂಡಿದೆ. ಆದಾಗ್ಯೂ ಪರಿಶಿಷ್ಟ ಬುಡಕಟ್ಟಿನ ಕೆಲವು ವಿದ್ಯಾರ್ಥಿಗಳು ಶಿಕ್ಷಣದಿಂದ ಲಾಭ ಪಡೆದಿದ್ದಾರೆ. ಅವರು ಸಮುದಾಯದ ಕೆನೆ ಪದರವನ್ನು ಮಾತ್ರ ಪ್ರತಿನಿಧಿಸುತ್ತಾರೆಯೇ ವಿನಃ ಇಡೀ ಸಮುದಾಯವನಲ್ಲ. ಕಡಿಮೆ ಶಿಕ್ಷಣವನ್ನು ಪಡೆದ ಪೋಷಕರು, ಕಡಿಮೆ ಆದಾಯದ ಕುಟುಂಬಗಳು ಕಡಿಮೆ ಪ್ರಮಾಣದಲ್ಲಿ ಶಿಕ್ಷಣದ ಲಾಭ ಪಡೆದುಕೊಳ್ಳುತ್ತಿವೆ. ಆದ್ದರಿಂದ ಬುಡಕಟ್ಟು ಪ್ರದೇಶಕ್ಕೆ ಪ್ರತ್ಯೇಕ ವಿಕೇಂದ್ರೀಕೃತವಾದ ಶೈಕ್ಷಣಿಕ ವ್ಯವಸ್ಥೆಯನ್ನು ಜಾರಿಗೊಳಿಸಬೇಕಾದ ಅವಶ್ಯಕತೆ ಇದೆ. ಬುಡಕಟ್ಟು ಪ್ರದೇಶಗಳಲ್ಲಿ ಭೌಗೋಳಿಕ ಅಂಶ, ಸಂಪರ್ಕ ಮತ್ತು ಸಂವಹನ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಇರುವ ಶೈಕ್ಷಣಿಕ ಆಡಳಿತ ವ್ಯವಸ್ಥೆಯನ್ನು ಪುನರ್‌ರಚಿಸಬೇಕಾಗಿದೆ. ಪ್ರಸ್ತುತ ಆದಿವಾಸಿ ಶಿಕ್ಷಣ ವ್ಯವಸ್ಥೆಯು ಯೋಜನಾಬದ್ಧವಾಗಿಲ್ಲ. ಆದಾಗ್ಯೂ, ಸರ್ಕಾರ ಮಕ್ಕಳನ್ನೂ ಪ್ರಾಥಮಿಕ ಶಾಲೆಗೆ ನೋಂದಣಿ ಮಾಡುವಲ್ಲಿ ಯಶಸ್ವಿಯಾಗಿದೆ. ಶಿಕ್ಷಣ ವ್ಯವಸ್ಥೆಯು ಆದಿವಾಸಿಗಳ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ. ತರಬೇತಿ ಹೊಂದಿದ ಶಿಕ್ಷಕರ ಕೊರತೆ, ಓದುವ ಸಾಮಗ್ರಿಗಳ ಕೊರತೆ, ಕಳಪೆ ಮೂಲಭೂತ ಸೌಲಭ್ಯಗಳು ಮುಂತಾದವು ಈ ಸಮಸ್ಯೆಗಳಿಗೆ ಕಾರಣಗಳಾಗಿವೆ. ಶಿಕ್ಷಣ ವ್ಯವಸ್ಥೆಯು ಜ್ಞಾನಾಧಾರಿತ, ಕೌಶಲ್ಯಪೂರಿತ, ಆರ್ಥಿಕ ಮತ್ತು ಗ್ರಾಮೀಣ ಕೃಷಿ ಆಧಾರಿತ ಆರ್ಥಿಕತೆಗೆ ಹೊಂದಿಕೊಳ್ಳುವಂತಿರಬೇಕು[೨೮] ಎಂದು ವಿವರಿಸುತ್ತದೆ.

ಸುಮನ್ ಪಮೇಚ (೨೦೧೦) ಅವರ **'ಹೆಲ್ತ್ ಇಶ್ಯೂಸ್ ಆಫ್ ಟ್ರೈಬ್ಸ್ ಇನ್ ರಾಜಾಸ್ಥಾನ್'** ಎಂಬ ಪ್ರಬಂಧದಲ್ಲಿ ಸಾಮಾಜಿಕ ಅಭಿವೃದ್ಧಿಯ ಮಟ್ಟ ಮತ್ತು ವಿವಿಧ ಸೌಲಭ್ಯಗಳ ಲಭ್ಯತೆಯು ಮರಣದರವನ್ನು ಕಡಿಮೆ ಮಾಡುತ್ತದೆ. ಉತ್ತಮ ಆರೋಗ್ಯವನ್ನು ಬೆಂಬಲಿಸುವ ಆರೋಗ್ಯ ಸೌಲಭ್ಯಗಳು ಜನರ ಆರೋಗ್ಯದ ಮೇಲೆ ಪ್ರಭಾವ ಬೀರುತ್ತವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸೌಲಭ್ಯದ ನಿಯಮಗಳು, ದಾದಿಯರ ಸೇವೆ, ಎದೆ ಹಾಲನ್ನು ಕುಡಿಸುವುದು ಮತ್ತು ಬಿಡಿಸುವುದರ ಬಗೆಗಿನ ಮಾತೃತ್ವದ ಶಿಕ್ಷಣ ಮತ್ತು ಇತರ ಕಾಯಿಲೆಗಳ ಬಗ್ಗೆ ಮುಂಜಾಗೃತ ಶಿಕ್ಷಣ ಲಭ್ಯವಿರುವ ಕಡೆ ಮರಣ ದರ ಕಡಿಮೆ ಇದೆ. ಈ ಬುಡಕಟ್ಟು ಸಮುದಾಯಗಳಿಗೆ ಆರೋಗ್ಯ ಯೋಜನೆಗಳನ್ನು ರೂಪಿಸುವಾಗ, ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವುಗಳ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ನಿರೂಪಣೆ ಮತ್ತು ಅನುಷ್ಠಾನಗೊಂಡರೆ ಹೆಚ್ಚು ಪರಿಣಾಮಕಾರಿ ಪ್ರತಿಫಲಗಳು ಲಭ್ಯವಾಗುತ್ತದೆ ಎಂದು ಹೇಳಿದ್ದಾರೆ.[೨೯]

ಬುಡಕಟ್ಟು ಜನರಿಗೆ ವರ್ತಮಾನದ ತಮ್ಮ ಸ್ಥಿತಿಗತಿಯ ಕುರಿತು ಆಧುನಿಕ ಆಕ್ರಮಣಗಳ ಬಗ್ಗೆ ಭಯವಿದೆಯೇ ವಿನಃ ತಮ್ಮ ಅನನ್ಯತೆಯ ಕುರಿತು ಭಯ ಅವರಿಗೆ ಅಷ್ಟಾಗಿ ಕಾಡಿದಂತಿಲ್ಲ. ವಿಜ್ಞಾನದ ಅವಿಷ್ಕಾರಗಳಾದ ರೇಡಿಯೋ, ಟಿ.ವಿ. ಸಿನಿಮಾಗಳ ಕುರಿತು ಅವರಿಗೆ ವಿಚಿತ್ರ ಮೋಹವಿದೆ. ಅವುಗಳನ್ನು ಹೊಂದಲು ಅವರು ತವಕಿಸುತ್ತಾರೆ. ಹೀಗೆ ಆಧುನಿಕತೆಯ ಜೊತೆಗೆ ಅನುಸಂಧಾನ ನಡೆಸಲು ಅವರು ಸಿದ್ಧರಿದ್ದಾರೆ. ಹಲವು ಕಡೆ ಅನುಸಂಧಾನ ನಡೆದು ಅವರು ತಮ್ಮ ವೈವಿದ್ಯತೆಯನ್ನು ಕಾಪಾಡಿಕೊಂಡಿದ್ದಾರೆ. ನಮ್ಮ ಅಭಿವೃದ್ಧಿ ಯೋಜನೆಗಳು ಅವರನ್ನು

ನಾಗರಿಕರನ್ನಾಗಿ ಮಾಡುತ್ತವೆಯೇ ಹೊರತು ಅವರ ಸಾಂಸ್ಕೃತಿಕ ಅನನ್ಯತೆ ಮತ್ತು ಬಹುತ್ವಗಳನ್ನು ನಾಶ ಮಾಡುವುದಿಲ್ಲ ಎಂದು ವಿ.ಪಿ. ನಾವಡ ಅವರು **‘ಒಂದು ಸೊಲ್ಲು ನೂರು ಸ್ವರ’** ಎಂಬ ಪುಸ್ತಕದ ಪುಟ-೧೩೭ರಲ್ಲಿ ಹೇಳಿದ್ದಾರೆ ಎಂದು **ಡಾ. ಎ.ಎಸ್ ಪ್ರಭಾಕರ (೨೦೦೦)** ಹೇಳಿದ್ದಾರೆ. ‘ಕೈಗಾರೀಕರಣದ ಆಧುನಿಕ ಸವಾಲುಗಳಿಗೆ ಪ್ರತಿಕ್ರಿಯಿಸಲಾಗದಂತಹ ಸ್ಥಿತಿಯಲ್ಲಿ ನಮ್ಮ ಬುಡಕಟ್ಟುಗಳಿವೆ. ಸಿದ್ದಿಗಳಾಗಲಿ, ಹಕ್ಕಿಪಕ್ಕಿಗಳಾಗಲಿ, ಜೇನುಕುರುಬರಾಗಲಿ, ಹಸಲರಾಗಲಿ, ಯಂತ್ರ ನಾಗರಿಕತೆಯ ಮುಂದೆ ನಿಸ್ಸಂದೇಹವಾಗಿ ಕೈಚಲ್ಲಿದ್ದಾರೆ’[೨೭] ಎಂದೂ ಅಭಿಪ್ರಾಯಿಸಿದ್ದಾರೆ.

ಬುಡಕಟ್ಟುಗಳು ತಾವಾಗಿಯೇ ನಾಡಿನ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸೇರ್ಪಡೆಯಾಗಲು ಅಡ್ಡಿಯಾಗುವುದು ಅವರ ಸಾಂಘಿಕ ಇಚ್ಛಾಶಕ್ತಿಯ ಕೊರತೆಯಿಂದಾಗಿ. ಇದಕ್ಕೆ ನೇರವಾಗಿ ಅವರನ್ನೇ ಆರೋಪಿಸಿದರೆ ಸಮಸ್ಯೆಯನ್ನು ಒಮ್ಮುಖವಾಗಿ ಅರ್ಥಮಾಡಿಕೊಂಡಂತಾಗುತ್ತದೆ. ಆಧುನಿಕರಣ ಮತ್ತು ಕೈಗಾರೀಕರಣಗಳು ಬುಡಕಟ್ಟುಗಳನ್ನು ವರ್ತಮಾನದಲ್ಲಿ ದನಿಯಿಲ್ಲ ದಂತಾಗಿಸಿವೆ. ಬುಡಕಟ್ಟುಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗುವವರು ವ್ಯವಧಾನದಿಂದ ಆದಿವಾಸಿಗಳ ಅಂತರಂಗ ವನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕಾಗುತ್ತದೆ. ಆಧುನಿಕ ನಾಗರಿಕತೆಯ ಅಹಂ ಅನ್ನು ಬದಿಗಿಟ್ಟು, ಬುಡಕಟ್ಟಿನ ತಲ್ಲಣಗಳನ್ನು ಮಾನವೀಯ ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ತಾಂತ್ರಿಕ ಜಗತ್ತು ತಾನು ಉತ್ಪಾದನೆಯಲ್ಲಿ ಸಾಧಿಸಿರುವ ವೇಗದಿಂದ ಇಂದು ಬುಡಕಟ್ಟುಗಳನ್ನು ಅಣಕಿಸಬಹುದು. ಆದರೆ ಆದಿವಾಸಿಗಳು ಕೌಶಲ್ಯದಿಂದ ತಮ್ಮ ಪರ್ಯಾಯವನ್ನು ತಾವೇ ಕಾಯ್ದುಕೊಂಡಿದ್ದಾರೆ. ನಾಗರಿಕತೆಯ ಸೊಕ್ಕಿನಿಂದ ಆಧುನಿಕತೆ ತನ್ನೆಲ್ಲಾ ವೇಗದಿಂದ ಮುಂದಿರಬಹುದು. ವರ್ತಮಾನದಲ್ಲಿ ನಾಗರಿಕರೆಂದು ಕರೆದುಕೊಳ್ಳುವವರ ಬಿಕ್ಕಟ್ಟುಗಳಿಗೆ ಈ ಆದಿವಾಸಿಗಳ ಸ್ಮೃತಿಗಳಲ್ಲಿ ಉತ್ತರಗಳಿವೆ.

ಬುಡಕಟ್ಟುಗಳ ಅಭಿವೃದ್ಧಿಯನ್ನು ಒಂದು ಆದರ್ಶದ ನಡೆಯ ಮೂಲಕ ಮಾತ್ರ ಸಾಧಿಸ ಬಹುದು. ಅವು ಅಸಂಘಟಿತ, ದನಿಯಿಲ್ಲದ, ಮುಗ್ಧ ಪರಿಸರದಲ್ಲಿರುವ ಅಮಾಯಕ ಸಮುದಾಯ ಗಳು. ಅವು ಈ ಆಧುನಿಕ ಯಂತ್ರ ನಾಗರಿಕತೆಯ ಚರಿತ್ರೆಯಲ್ಲಿ ಮಗುವಿನಂತೆ ದಿಕ್ಕುತಪ್ಪಿವೆ. ಕೈ ಹಿಡಿದು ಕರೆದುಕೊಂಡು ಕನಸುಗಳನ್ನು ತುಂಬುವ ಯೋಜನೆಗಳು ರೂಪುಗೊಳ್ಳಬೇಕು. ಈ ವೇಗದ ಬದುಕಿನೊಂದಿಗೆ ಅವರ ಅನುಸಂಧಾನ ತೀವ್ರಗತಿಯಲ್ಲಿ ನಡೆಯಬೇಕು. ಈ ಅನುಸಂಧಾನ ಅವರ ಸಾಂಸ್ಕೃತಿಕ ನೆಲೆಗಳನ್ನು ಇಲ್ಲವಾಗಿಸುವಂತಿದ್ದರೆ, ಅದಕ್ಕೆ ಆತಂಕ ಪಡಬೇಕಿಲ್ಲ. ಒಂದು ಸಮುದಾಯದ ನಿಕೃಷ್ಟ ಬದುಕು ಹಸನಾಗುವಲ್ಲಿ ಅವರ ಸಾಂಸ್ಕೃತಿಕ ಆಯಾಮ ಇಲ್ಲವಾಗುತ್ತದೆ ಎಂದಾದರೆ ಅದು ಉಳಿಯದಿದ್ದರೂ ಚಿಂತೆಯಿಲ್ಲ. ವ್ಯವಸ್ಥೆ ರೂಪಿಸಿದ ಯೋಜನೆಗಳು ಹೊಟ್ಟೆಗಿಲ್ಲದೇ ಜೀತದಿಂದ ಬಸವಳಿದ ಶೂನ್ಯ ಕವಿದ ಬುಡಕಟ್ಟು ಸಮುದಾಯಗಳ ಕಣ್ಣುಗಳಲ್ಲಿ ಭರವಸೆಗಳನ್ನು ಮೂಡಿಸಬೇಕಿದೆ. ಉತ್ಪಾದನಾ ವ್ಯವಸ್ಥೆಯಲ್ಲಿ ಪರಿಷ್ಕರಣೆಗಳಾಗಿ ಬಂಡವಾಳ ಪೂರ್ವ ಸಾಮಾಜಿಕ ಸಂಸ್ಥೆಗಳು ಮತ್ತು ಉತ್ಪಾದನಾ ಸಂಬಂಧಗಳು ನಾಶವಾದವೋ, ಅಲ್ಲಿಂದ ಖಾಸಗಿ ಆಸ್ತಿ ಮತ್ತು ಕುಟುಂಬಗಳ ಉಗಮವಾಯಿತು. ಇವೆರಡನ್ನು ಕಾಯಲು ಪ್ರಭುತ್ವ ಮತ್ತು ರಾಷ್ಟ್ರಪ್ರಭುತ್ವ ಹುಟ್ಟಿಕೊಂಡವು. ಅಂದಿನಿಂದಲೇ ಈ ಭೂಮಿಯ ಮೇಲಿನ ನಿಸರ್ಗದತ್ತ ಮೌಲ್ಯಗಳ ಪತನವು ಆರಂಭವಾಯಿತು.

ಪತನವಾಗುತ್ತಿರುವ ಮೌಲ್ಯಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಬೇಕಾಗಿದೆ[೨೮] ಎಂದು **'ಸರಕಾರ ಮತ್ತು ಬುಡಕಟ್ಟುಗಳು'** ಎಂಬ ಸಂಶೋಧನಾ ಲೇಖನದಲ್ಲಿ **ಎ.ಎಸ್. ಪ್ರಭಾಕರ (೨೦೦೬)** ಹೇಳಿದ್ದಾರೆ.

ಅರಣ್ಯ ಇಲಾಖೆಯ ಗಿರಿಜನ ವಿರೋಧಿ ಕಾಯ್ದೆಯ ಮೂಲಕ ನಾವು ಅವರ ಘನತೆ ಮತ್ತು ಮರ್ಯಾದೆಯನ್ನು ಕಿತ್ತುಕೊಳ್ಳುತ್ತಿದ್ದೇವೆ. ಅವರಿಗೆ ವಿರೋಧಿಯಾಗಿರುವಂತಹ ಈಗಿನ ಕಾನೂನು, ಕೇಂದ್ರ ಸರ್ಕಾರದ ಒಂದು ನಕಲು ನೀತಿ. ಇವತ್ತು ಗಿರಿಜನರು ಕಾಡುಮೃಗಗಳಿಗೆ ಹೆದರುತ್ತಿಲ್ಲ; ಅರಣ್ಯದ ಅಧಿಕಾರಿಗಳಿಗೆ ಹೆದರುತ್ತಿದ್ದಾರೆ[೨೯] ಎಂದು **'ಸದನದಲ್ಲಿ ಸಿದ್ದಲಿಂಗಯ್ಯ'** ಎಂಬ ಪುಸ್ತಕದಲ್ಲಿ **ದೊಡ್ಡ ಹುಲ್ಲೂರ್ ರುಕ್ಮೋಜಿ (೧೯೯೩)** ಅವರು ಪ್ರಸ್ತಾಪಿಸಿದ್ದಾರೆ.

ಆಧುನಿಕ ಜಗತ್ತಿನಲ್ಲಿ ಅದೂ ಪ್ರಜಾಪ್ರಭುತ್ವವಿರುವ ಭಾರತದಂತಹ ದೇಶದಲ್ಲಿ ಸಂಪತ್ತಿನ ಅಸಮಾನ ಹಂಚಿಕೆಯಿಂದ ವರ್ಗ ವೈರುಧ್ಯಗಳು ಇನ್ನೂ ಹೆಚ್ಚುತ್ತಿವೆ. ಬುಡಕಟ್ಟು ಸಮುದಾಯಗಳು ಇಂದು ಸರ್ಕಾರದ ಅನುಕಂಪವಿಲ್ಲದೆ 'ತಾಯಿ' ಮನಸ್ಸಿನ ಉಪಯುಕ್ತ ಯೋಜನೆಗಳನ್ನು ನಿರೀಕ್ಷಿಸುತ್ತವೆ. ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಈ ಸಮುದಾಯಗಳು ಇನ್ನೂ ನೂರು ವರ್ಷಗಳಷ್ಟು ಹಿಂದಿವೆ[೩೦] ಎಂದು **ಎ.ಎಸ್. ಪ್ರಭಾಕರ (೨೦೦೬)** ಹೇಳಿದ್ದಾರೆ.

ಸಿ.ಟಿ. ಕುರಿಯನ್ (೨೦೧೧) ಅವರು **'ಎನ್‌ಲಾರ್ಜಿಂಗ್ ದಿ ಕಾನ್ಸೆಪ್ಟ್ ಆಪ್ ಡೆವಲಪ್ಮೆಂಟ್'** ಎಂಬ ಲೇಖನದಲ್ಲಿ ಅಮರ್ತ್ಯಸೇನ್ ಅವರ 'ಡೆವಲಪ್‌ಮೆಂಟ್ ಅಸ್ ಫ್ರೀಡಮ್' ಪುಸ್ತಕವನ್ನು ಪರಾಮರ್ಶಿಸುತ್ತ ಹೇಳಿರುವಂತೆ, ಅಭಿವೃದ್ಧಿಯಲ್ಲಿ ಆಭಿವೃದ್ಧಿಯ ವಸ್ತುವೆಂದರೆ ಆರ್ಥಿಕ ಪ್ರಗತಿ ಮತ್ತು ಬಡತನ, ಪ್ರಜಾಪ್ರಭುತ್ವ ಮತ್ತು ಆಡಳಿತ ಕ್ರಮ, ನ್ಯಾಯ ಮತ್ತು ಸಮಾನತೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಆಡಳಿತ ಕ್ರಮ, ವ್ಯಕ್ತಿ ಸ್ವಾತಂತ್ಯ ಮತ್ತು ಸಮಾಜಕಲ್ಯಾಣಗಳ ವ್ಯಾಖ್ಯಾನಗಳ ಮೇಲಿನ ಸಮಕಾಲೀನ ಸ್ವತಂತ್ರ್ಯ ವ್ಯಾಖ್ಯಾನಗಳಾಗಿವೆ. ಇಲ್ಲಿ ಸೇನ್ ಅವರ ವಿಚಾರಗಳು ೨೦ನೆಯ ಶತಮಾನದ ದ್ವಿತಿಯಾರ್ಧದ ನಂತರದ ಸಾರ್ವಜನಿಕ ಗಮನಗಳ ಮೇಲೆ ಕೇಂದ್ರೀಕರಿ ಸಲ್ಪಟ್ಟಿದೆ. ಸಮರ್ಪಕವಾಗಿ ಪರೀಕ್ಷಿಸದೇ ಇರುವ ಅಭಿಪ್ರಾಯಗಳನ್ನು ಮತ್ತು ಮೂಡನಂಬಿಕೆಗಳನ್ನು ಸೇನ್ ಅವರು ವೈಚಾರಿಕ ವಾದಗಳು ಮತ್ತು ವಸ್ತುನಿಷ್ಠ ಸಾಕ್ಷಿಗಳ ಮೂಲಕ ತಿರಸ್ಕರಿಸಿದ್ದಾರೆ. ಉದಾಹರಣೆಗೆ ಬರಗಾಲದ ಕಾರಣದಿಂದ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿತ್ತು ಎನ್ನುವುದು ದುರ್ಬಲ ವರ್ಗಗಳ ಜನರನ್ನು ಸದೃಢರನ್ನಾಗಿ ಮಾಡಲು ಬಯಸದ ಜನಸಂಖ್ಯೆಯ ಒಂದು ಭಾಗದ ವಿಫಲತೆಯಿಂದ ಸಂಭವಿಸುತ್ತದೆ ಎಂದಿದ್ದಾರೆ.[೩೧]

'ಬುಡಕಟ್ಟು ಚಿಂತನೆ ತಿರುವಿನಲ್ಲಿ' ಎಂಬ ಲೇಖನದಲ್ಲಿ **ಹಿ.ಶಿ. ರಾಮಚಂದ್ರೇಗೌಡ(೧೯೯೬)** ಹೇಳಿರುವಂತೆ, 'ಒಂಟಿ ಬಡುಕ ಆಲೋಚನೆ ಹೊರಗಿನಿಂದ ನಿಂತು ನೋಡುವ ಚಿಂತನೆಗಳಿಂದ ಕೂಡಿದ ಅಭಿವೃದ್ಧಿ ಎಂಬ ಅಮಲಿನ ಹೇರಿಕೆ ಇಂತಹ ದೃಢ ಪೂರ್ವಶ್ರುತ ಮನೋಭಾವನೆಗಳಿಂದ ಹೊರ ಬರದ ಹೊರತು ಬುಡಕಟ್ಟು ಸಮುದಾಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಬುಡಕಟ್ಟುಗಳ ಅಧ್ಯಯನದ ವಿಧಿವಿಧಾನಗಳು, ಸಾಂಸ್ಕೃತಿಕ ಸ್ವಾಯತ್ತತೆ, ಐತಿಹಾಸಿಕ ಸಂಭವನೀಯತೆ,

ಸಾಂಸ್ಕೃತಿಕ ಅಖಂಡತೆ, ರಾಷ್ಟ್ರಪ್ರಭುತ್ವದ ಚಿಂತನೆ ಮತ್ತು ಅಭಿವೃದ್ಧಿ ಮೀಮಾಂಸೆಗಳ ಮಾನ್ಯತೆಯಿಂದ ನೋಡುವುದರ ಮೂಲಕ ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ.'[೩೨] ಇಂತಹ ಚಿಂತನೆಗಳಿಂದ ಕೂಡಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬುಡಕಟ್ಟುಗಳು ಸ್ವೀಕರಿಸುತ್ತವೆ.

'ದಿ ಸೈಲೆನ್ಸ್ಡ್ ಡ್ರಮ್ಸ್' ಎಂಬ ಗ್ರಂಥದಲ್ಲಿ **ಕೆ.ಜಿ.ಕರ್ಮಾಕರ್ (೨೦೦೨)** ಅವರು ತಿಳಿಸಿರುವಂತೆ, 'ವಿವಿಧ ಆರ್ಥಿಕ ವಲಯಗಳಲ್ಲಿ ಸರ್ಕಾರದಿಂದ ಕಾರ್ಯಗತ ಮಾಡುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದ ಬುಡಕಟ್ಟು ಸಮಾಜದಲ್ಲಿ ಬದಲಾವಣೆಗಳಾಗಿವೆ ಮತ್ತು ಒಪ್ಪಿತ ಚೌಕಟ್ಟಿಗೆ ಮೂರ್ತರೂಪ ಕೊಡುವ ಹಾಗೆ ಬುಡಕಟ್ಟು ಸಮುದಾಯಗಳು ನಿಧಾನವಾಗಿ ಬದಲಾವಣೆಗೆ ಹೊಂದಿಕೊಳ್ಳುತ್ತಿವೆ. ಯಾವುದೇ ಬದಲಾವಣೆಯು ಬುಡಕಟ್ಟು ಜನರ ಸಾಮಾಜಿಕ ನೀತಿಗೆ ಅನುಗುಣವಾಗುವಂತಿರದಿದ್ದರೆ ಅಂತವುಗಳು ಸಮುದಾಯದಿಂದಲೇ ತಿರಸ್ಕರಿಸಲ್ಪಡುತ್ತದೆ'.[೩೩]

'ಸೋಶಿಯಲ್ ಮೂವಮೆಂಟ್ಸ್ ಅಮಾಂಗ್ ದಿ ಟ್ರೈಬ್ಸ್ ಆಫ್ ಇಂಡಿಯಾ' ಎಂಬ ಸಂಶೋಧನಾ ಪ್ರಬಂಧದಲ್ಲಿ **ಗೋಪಾಲ್ ಭಾರಾದ್ವಾಜ್ (೧೯೭೭)** ಅವರ ಅಭಿಪ್ರಾಯದಂತೆ, ನಕ್ಸಲರ ಚಳುವಳಿಯಂತಹ ಇತ್ತೀಚಿನ ಬುಡಕಟ್ಟುಗಳ ಅಶಾಂತಿಗೆ ಪ್ರಮುಖ ಕಾರಣಗಳೆಂದರೆ, ಸಾಮಾಜಿಕ ಮೂಲಭೂತ ಸೌಕರ್ಯಗಳ ಕೊರತೆ, ಕೆಳಹಂತದಲ್ಲಿ ದಕ್ಷ ಆಡಳಿತದ ಕೊರತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನಾತ್ಮಕವಾಗಿ ಬುಡಕಟ್ಟುಗಳ ಜನರ ಸಂರಕ್ಷಣಾ ಕಾರ್ಯಗಳನ್ನು ಅನುಷ್ಠಾನಗೊಳಿಸದೇ ಇರುವುದು. ಪೋಲಿಸರ ಉದಾಸೀನತೆ, ಅಧಿಕಾರಿಗಳ ಶೋಷಣಾತ್ಮಕ ನಡವಳಿಕೆ, ಅವರ ಭೂಮಿ ಮತ್ತು ಅರಣ್ಯಗಳ ಮೇಲಿನ ಹಕ್ಕಿಗೆ ರಕ್ಷಣೆ ಇಲ್ಲ ದಿರುವುದು, ಅವರ ಭೂಮಿಯ ಕಾನೂನು ಬಾಹಿರ ಅತಿಕ್ರಮಣ ಮತ್ತು ಬುಡಕಟ್ಟು ನಾಯಕರುಗಳೇ ಸ್ವಾರ್ಥಿಗಳಾಗಿ ಅವರ ಬಂಧುಗಳನ್ನೇ ಶೋಷಣೆ ಮಾಡುವ ಪ್ರವೃತ್ತಿ' ಎಂಬ ಅಂಶಗಳನ್ನು ಗುರುತಿಸಿದ್ದಾರೆ.[೩೪]

ಹಾಗೆಯೇ, ದೂರದರ್ಶನದ ವಾಹಿನಿಯೊಂದರ ಸಂದರ್ಶನದಲ್ಲಿ ನರ್ಮದಾ ಬಚಾವ್ ಆಂದೋಲನದ ನಾಯಕಿ ಮೇಧಾ ಪಾಟ್ಕರ್ ದೂರದರ್ಶನದ ಸಂದರ್ಶನದಲ್ಲಿ ಹೇಳಿದ ಹಾಗೆ, ಜಾಗತಿಕರಣ ಮತ್ತು ಉದಾರಿಕರಣದ ಸಂದರ್ಭದಲ್ಲಿ ಪ್ರಭುತ್ವವೇ ಖಾಸಗೀಕರಣಗೊಂಡಿದ್ದು ಸಂಪನ್ಮೂಲಗಳು ಮತ್ತು ಪೋಲಿಸ್ ವ್ಯವಸ್ಥೆಯನ್ನು ಬಂಡವಾಳಶಾಹಿಗಳ ಪರವಾಗಿ ಬಳಸುತ್ತಿರುವಾಗ; ಚಂದ್ರಪೂಜಾರಿಯವರು ಹೇಳಿದ ಹಾಗೆ ಬುಡಕಟ್ಟು ಜನರು ಸಂಘಟನಾತ್ಮಕ ವಾಗಿ ಚಳುವಳಿ ಮಾಡಿದರೆ ಅವರ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಾಧ್ಯವೇ? ಅಥವಾ, **ಗೋಪಾಲ್ ಭಾರಾದ್ವಾಜ್ (೧೯೭೭)** ಅವರ ಸಂಶೋಧನಾ ಫಲಿತಗಳಲ್ಲಿ ಬಂದಿರುವ ಅಂಶಗಳೊಂದಿಗೆ ಬುಡಕಟ್ಟುಗಳು ಸಂಘಟಿತರಾಗಲು ಸಾಧ್ಯವೇ? ಪ್ರಭುತ್ವದ ವಿರುದ್ಧ ಹೋರಾಡಿ ಹೊಸ ಕಾನೂನುಗಳನ್ನು ರೂಪಿಸುವಂತೆ ಸರ್ಕಾರದ ಮೇಲೆ ಪ್ರಭಾವ ಬೀರುವಷ್ಟು ಸದೃಢ ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟುಗಳಿವೆಯೇ? ಎಂಬ ಪ್ರಶ್ನೆಗಳು ಉಂಟಾಗುತ್ತವೆ.

'ದಿ ಪ್ರೋಸೆಸ್ ಬೆಟ್ರೇಯ್ಸ್ ದಿ ಸ್ಪಿರಿಟ್- ಫಾರೆಸ್ಟ್ ರೈಟ್ಸ್ ಆಕ್ಟ್ ಬೆಂಗಾಳ್' ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ **ಸೌರೀಶ್ ಜಾ (೨೦೧೦)** ಅವರು ಪ್ರಸ್ತುತ ಅಸ್ತಿತ್ವದಲ್ಲಿರುವ ಆಡಳಿತಾತ್ಮಕ ಘಟಕಗಳಿಗೂ ಮತ್ತು ೨೦೦೬ರಲ್ಲಿ ಬುಡಕಟ್ಟುಗಳ ಅರಣ್ಯ ಮತ್ತು ಭೂಮಿಯ ಹಕ್ಕುಗಳನ್ನು ರಕ್ಷಿಸಲು ಜಾರಿಗೆ ತಂದಿರುವ, ಪರಿಶಿಷ್ಟ ಬುಡಕಟ್ಟುಗಳ ಮತ್ತು ಸಾಂಪ್ರದಾಯಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಸಂರಕ್ಷಣಾ) ಅಧಿನಿಯಮದಲ್ಲಿ ಸೂಚಿಸಿರುವ ಅನುಷ್ಠಾನದ ಘಟಕಗಳಿಗೂ ಪಶ್ಚಿಮ ಬಂಗಾಳದಲ್ಲಿ ಗೊಂದಲವುಂಟಾಗಿ ಕಾಯಿದೆ ಅನುಪಯುಕ್ತವಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೩೫]

ಹಾಗೆಯೇ **ಡಿ.ಜೆ. ನರೇಂದ್ರ ಬಾಂಡ್ಲಾ ಮತ್ತು ಎನ್. ಸುಧಾಕರ್ ರಾವ್(೨೦೧೦)** ಅವರು **'ರೆಸಿಟೆನ್ಸ್ ಅಗೆನೆಸ್ಟ್ ಪಾಲಾವರಂ ಡ್ಯಾಮ್'** ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ 'ಅಭಿವೃದ್ಧಿ ಕಾರ್ಯಕ್ರಮಗಳು ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಬಹಳ ವರ್ಷಗಳಿಂದ ಬದುಕನ್ನು ಕಟ್ಟಿಕೊಂಡಿರುವ ಭೂಮಿ ಮತ್ತು ಅರಣ್ಯಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಬುಡಕಟ್ಟುಗಳ ನಂಬಿಕೆಗಳಿಗೆ, ಆಚರಣೆಗಳಿಗೆ ಮೂಲ ಅಂಶಗಳಾಗಿರುವ ಇವು, ಅವರ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಏಕಮುಖ ದೃಷ್ಟಿಕೋನವುಳ್ಳ ಅಭಿವೃದ್ಧಿ ಕಾರ್ಯಕ್ರಮಗಳು ಬುಡಕಟ್ಟು ಸಂಸ್ಕೃತಿ, ನಂಬಿಕೆ ಮತ್ತು ಆಚರಣೆಗಳಿಗೆ ಮಾರಕವಾಗಿ ಪರಿಣಮಿಸುತ್ತಿವೆ ಎಂದಿದ್ದಾರೆ. ಹಾಗಾಗಿ ಬುಡಕಟ್ಟುಗಳಿಗೆ ಸಂಬಂಧಿಸಿದ ಕಾಯಿದೆ ಮತ್ತು ಸ್ಥಳೀಯ ಆಡಳಿತ ಘಟಕಗಳಲ್ಲಿ ಸಮನ್ವಯತೆ ಸಾಧಿಸಿ, ಕೇವಲ ಪ್ರಭುತ್ವದ ಏಕಮುಕತೆಯ ಅಂಶದ ಕಾಯಿದೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ರೂಪಿಸುವಾಗ ಬುಡಕಟ್ಟುಗಳ ಸಹಭಾಗಿತ್ವದೊಂದಿಗೆ ಬುಡಕಟ್ಟು ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು, ಅವರ ಎಲ್ಲ ಆಚಾರ, ವಿಚಾರ ಮತ್ತು ಜೀವನವನ್ನು ಆಧುನಿಕರಿಸಬೇಕಾದ ಅವಶ್ಯಕತೆ ಇದೆ. ಬೃಹತ್ ಪ್ರಮಾಣದ ಅಭಿವೃದ್ಧಿ ಯೋಜನೆಗಳಿಂದ ಯಾವುದೇ ರೀತಿಯ ಲಾಭವನ್ನು ಪಡೆಯದ ಇವರು, ತಮ್ಮ ಪಾರಂಪರಿಕ ಜೀವನವನ್ನು ಬಿಟ್ಟು ಸಂತ್ರಸ್ಥರಾಗಿ, ಸರ್ಕಾರ ಕೊಟ್ಟ ಪರಿಹಾರವನ್ನು ಪಡೆದುಕೊಂಡು ಮತ್ತೊಮ್ಮೆ ಬದುಕನ್ನು ಕಟ್ಟಿಕೊಳ್ಳ ಬೇಕಾಗಿರುವುದು ಅನಿವಾರ್ಯವಾಗುತ್ತಿದೆ.[೩೬] ಅಂದರೆ ಇಲ್ಲಿ ಬೃಹತ್ ಪ್ರಮಾಣದ ಏಕಮುಖ ದೃಷ್ಟಿಕೋನದ ಅಭಿವೃದ್ಧಿ ಕಾರ್ಯಕ್ರಮಗಳಿಂದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ಪ್ರಗತಿಯನ್ನು ಅಪೇಕ್ಷಣೀಯವಾಗಿ ಸಾಧಿಸಲು ಸಾಧ್ಯವಾಗಿದೆಯೇ? ಎಂಬ ವಿಚಾರ ಹುಟ್ಟಿಕೊಳ್ಳುತ್ತಿದೆ.

ವೇರಿಯರ್ ಎಲ್ವಿನ್ (೧೯೬೩) ಅವರು ತಮ್ಮ **'ಮಾನವ ಪ್ರೇಮಶಾಸ್ತ್ರ'**ದಲ್ಲಿ ಹೇಳಿರುವಂತೆ, ಆದಿವಾಸಿಗಳಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡಬೇಕು ಮತ್ತು ನಾಗರಿಕತೆಯ ಪ್ರಭಾವದಿಂದ ನಶಿಸುತ್ತಿರುವ ಅವರ ಸಂತೋಷದ ಜೀವನವನ್ನು ಸಂರಕ್ಷಿಸಬೇಕು. ಬುಡಕಟ್ಟು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗುವವರು, ನಾಗರಿಕರು, ಸಂಶೋಧಕರು, ಬುಡಕಟ್ಟು ಜನರಿಗೆ ಮಾರ್ಗ ದರ್ಶಕರೂ ಶಿಕ್ಷಕರು, ವೈದ್ಯರು, ಆಗಿ ಶ್ರಮಿಸಬೇಕು. ಮಕ್ಕಳಂತೆ ಅವರನ್ನು ಪ್ರೀತಿ ವಾತ್ಸಲ್ಯಗಳಿಂದ

ಕಾಣಬೇಕು.[೨೩] ಇದು ಎಲ್ವಿನ್ ಅವರ ಪ್ರತ್ಯೇಕತೆಯ ಸಿದ್ಧಾಂತವನ್ನು ಪ್ರತಿಪಾದಿಸಿದರೆ ಇದರಿಂದಲೂ ಬುಡಕಟ್ಟು ಜನರ ಸಾಮಾಜಿಕ ಆರ್ಥಿಕ ಪರಿವರ್ತನೆಗಳನ್ನು ಸಕಾರಾತ್ಮಕವಾಗಿ ಸಾಧಿಸಲು ಸಾಧ್ಯವಾಗುವುದಿಲ್ಲ. ಅಂತೆಯೇ ಪ್ರತ್ಯೇಕತೆ ತತ್ವ ಮತ್ತು ಪುನರ್ವಸತಿ ತತ್ವಗಳಿಂದಲೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬುಡಕಟ್ಟು ಜನರ ಸಹಭಾಗಿತ್ವವಿಲ್ಲದೇ ಅನುಷ್ಠಾನಗೊಳಿಸಲಾಗುವುದಿಲ್ಲ. ಅಂದರೆ **ಆರ್. ಇಂದಿರಾ (೨೦೦೬)** ಅವರು **'ಬುಡಕಟ್ಟು ಅಭಿವೃದ್ಧಿ ಸಾಧ್ಯವಾಗದ ಸಾರ್ವತ್ರಿಕ ಮಾದರಿ'** ಎಂಬ ಸಂಶೋಧನಾ ಲೇಖನದಲ್ಲಿ ಹೇಳಿರುವಂತೆ, ಪ್ರತ್ಯೇಕತೆ ಮತ್ತು ಸಮೀಕರಣ ಇವೆರಡನ್ನೂ ಹೊರತುಪಡಿಸಿದ ಆಲೋಚನೆಗಳೊಂದಿಗೆ, ಬುಡಕಟ್ಟು ಸಮುದಾಯಗಳ ಪರಂಪರೆಗಳನ್ನು, ಮೌಲ್ಯಗಳನ್ನು ಹಾಗೂ ಆಲೋಚನೆಗಳನ್ನು ಗುರುತಿಸಿ ಸಂರಕ್ಷಿಸುವಂತಹ ವ್ಯವಸ್ಥೆಯನ್ನು ಮೊದಲು ಮಾಡಿ, ಅವರಿಂದ ಕಲಿಯುವುದೇನಿದೆ ಎನ್ನುವುದನ್ನು ಬಿಟ್ಟು ಅವರಿಂದ ಏನನ್ನು ಕಲಿಯಬಹುದು ಎಂದು ಯೋಚಿಸುವುದು ಔಚಿತ್ಯ.[೨೪] ಈ ಹಿನ್ನೆಲೆಯಲ್ಲಿ ನೋಡಿದಾಗ, ನೆಹರು ಅವರ ಆದಿವಾಸಿ ಪಂಚಶೀಲ ತತ್ವಗಳ ಮೂಲಕ ನಮ್ಮ ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಯನ್ನು ಬುಡಕಟ್ಟು ಸಮೂಹಗಳು ಅಪೇಕ್ಷಿಸಿದ ರೀತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

'ಪ್ಯಾಟ್ರನ್ಸ್ ಆಫ್ ಇಂಟರ್ ಟ್ರೈಬಲ್ ರಿಲೇಷನ್ಸ್' ಎಂಬ ಸಂಶೋಧನಾ ಪ್ರಬಂಧದಲ್ಲಿ **ಪ್ರಮೋದ್ ಕುಮಾರ್ ಮಿಶ್ರಾ (೧೯೯೭)** ಅವರು ಹೇಳಿರುವಂತೆ, ಬುಡಕಟ್ಟುಗಳನ್ನು ನೆರೆ ಹೊರೆಯ ಇತರ ಜನಸಂಖ್ಯೆಯಿಂದ ಪ್ರತ್ಯೇಕವಾಗಿರಿಸಿ ಅಧ್ಯಯನ ಮಾಡುವ ಕ್ರಮ ಹೊಸದಲ್ಲ. ವಿವಿಧ ಸಮೂಹಗಳ ಮತ್ತು ಬುಡಕಟ್ಟುಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವಾಗ, ಸಂಬಂಧಗಳ ರಚನೆಯಲ್ಲಿ ಒಂದು ಪ್ರಾದೇಶಿಕ ಸಂಬಂಧಗಳ ಕ್ರಮ ಸೃಷ್ಟಿಯಾಗಿರುವುದು ಕಂಡುಬರುತ್ತದೆ. ಸಂಬಂಧಗಳ ಇಂತಹ ಪ್ರಾದೇಶಿಕ ಕ್ರಮಗಳಿಂದಾಗುತ್ತಿರುವ ಪರಿಣಾಮಗಳೇನೆಂದರೆ, ಭಾರತದ ನಾಗರಿಕತೆಯೊಂದಿಗೆ, ವಿಶೇಷವಾಗಿ ಜಾತಿಪದ್ಧತಿಯೊಂದಿಗೆ ಹಲವಾರು ಶೋಷಣಾತ್ಮಕ ಅಂಶಗಳು ಕಂಡುಬರುತ್ತಿವೆ. ವಿವಿಧ ಬುಡಕಟ್ಟುಗಳ ನಡುವಿನ ಸಂಬಂಧಗಳಿಂದ, ಎಲ್ಲಾ ಬುಡಕಟ್ಟುಗಳಲ್ಲೂ ಗಣ್ಯರ ಹೊಸ ಗುಂಪು ಹುಟ್ಟಿಕೊಂಡಿರುವುದು ಕಂಡುಬರುತ್ತದೆ. ಈ ಹೊಸ ಗಣ್ಯರು ಅವರ ಸಾಂಪ್ರದಾಯಕ ನಾಯಕತ್ವದ ನಿಯಮಗಳಿಗಿಂತ ಭಿನ್ನವಾಗಿರುತ್ತಾರೆ ಮತ್ತು ತಮ್ಮ ಸ್ವಂತ ಸಮೂಹದಲ್ಲೆ ಅನ್ಯಕ್ರಾಂತರಾಗುತ್ತಿದ್ದಾರೆ.[೨೫] ಪ್ರಸ್ತುತ ಅಧ್ಯಯನದಲ್ಲಿ ಈ ಮೇಲಿನ ವಿಚಾರಗಳಿಂದ ಉಂಟಾಗುವ ಸಂಶಯಗಳೆಂದರೆ, ಅಂತರ್ ಬುಡಕಟ್ಟುಗಳ ಸಂಬಂಧದಿಂದ ಅವರ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗೆ ಪೂರಕವಾಗಿರುತ್ತದೆಯೆ? ಎಂಬುದಾಗಿದೆ.

ಬೇಹೂರಾ (೧೯೮೨) ಅವರು 'ಕನ್‌ಸ್ಟ್ರೇಂಟ್ಸ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ' ಎಂಬ ಸಂಶೋಧನಾ ಪ್ರಬಂಧದಲ್ಲಿ ಬುಡಕಟ್ಟು ಶಿಕ್ಷಣವನ್ನು ಆಂತರಿಕ ಮತ್ತು ಬಾಹ್ಯ ಎಂಬ ಎರಡು ದೃಷ್ಟಿಕೋನಗಳಲ್ಲಿ ವಿವರಿಸಿದ್ದಾರೆ. ಆಂತರಿಕ ದೃಷ್ಟಿಕೋನದಲ್ಲಿ ತರಗತಿಯ ಕೊಠಡಿಯ ಒಳಗೆ ಪಠ್ಯ, ಪಠ್ಯಪುಸ್ತಕದಲ್ಲಿನ ಭಾಷಾ ಮಾಧ್ಯಮ. ಬೋಧನ ವಿಧಾನಗಳು ಪ್ರಮುಖ

ಪಾತ್ರವಹಿಸುತ್ತವೆ. ಬಾಹ್ಯ ದೃಷ್ಟಿಕೋನದಲ್ಲಿ, ಪರಿಸರದ ಅಂಶಗಳು ಪೋಷಕರ ಸಾಮಾಜಿಕ ಸ್ಥಿತಿಗತಿಗಳು, ಪೋಷಕರ ಪ್ರೇರಣೆ, ಮುಂತಾದವು ನಿರ್ಣಾಯಕ ಪಾತ್ರವಹಿಸುತ್ತವೆ ಎಂದಿದ್ದಾರೆ.[೪೦]

ರೌಟ್ಸ್ ಅವರು (೧೯೮೯)ರಲ್ಲಿ ನಡೆಸಿರುವ **'ಡೈಮೆನ್‌ಷನ್ಸ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ'** ಎಂಬ ಅಧ್ಯಯನದಲ್ಲಿ 'ಬುಡಕಟ್ಟು ಮಕ್ಕಳಲ್ಲಿ ಶೈಕ್ಷಣಿಕ ಸಾಧನೆ ಕಡಿಮೆ ಮಟ್ಟದ್ದಾಗಿರುತ್ತದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ, ಅನುವಂಶೀಯ ಸಖ್ಯತೆಯ ಕೊರತೆ, ಸಾಂಸ್ಕೃತಿಕ ಬಿಕ್ಕಟ್ಟು, ಭಾಷಾ ಸಮಸ್ಯೆ, ಅತಿ ಹಿಂದುಳಿದ ಶೈಕ್ಷಣಿಕ ಹಿನ್ನೆಲೆ ಮತ್ತು ಅವರ ಸಾಮಾಜಿಕ ಬದುಕಿನ ಆಶೋತ್ತರಗಳು ಕೆಳಮಟ್ಟದಲ್ಲಿ ಇರುವುದೇ ಆಗಿದೆ ಎಂದಿದ್ದಾರೆ.[೪೧] ಈ ಅಧ್ಯಯನಗಳ ಆಧಾರದ ಮೇಲೆ ಪ್ರಸ್ತುತ ಸಂಶೋಧನಾ ವಿಷಯದಲ್ಲಿ ವಿದೇಶಿ ಮೂಲದ ಸಿದ್ದಿಗಳ ಶಿಕ್ಷಣಕ್ಕೆ ಭಾಷೆ ಮಾಧ್ಯಮ ಸಮಸ್ಯೆಯಾಗಿಲ್ಲವೆ? ಪೋಷಕರ ಸಾಮಾಜಿಕ ಪರಿಸ್ಥಿತಿ ಮತ್ತು ಪ್ರೇರಣೆ ಉತ್ತಮವಾಗಿದೆಯೇ? ನೆರೆಹೊರೆ ಮತ್ತು ಪರಿಸರದ ಅಂಶಗಳು ಹೇಗಿವೆ? ಅವುಗಳನ್ನು ಸಿದ್ದಿಗಳು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ ಮತ್ತು ಸರ್ಕಾರದ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಸಿದ್ದಿಗಳ ಸಾಮಾಜಿಕ ಆರ್ಥಿಕ ಸುಧಾರಣೆಗೆ ಸಹಾಯಕವಾಗಿದೆ ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ.

'ದಿ ಸೈಲೆನ್ಸ್ಡ್ ಡ್ರಮ್ಸ್' ಎಂಬ ಪುಸ್ತಕದಲ್ಲಿ **ಕೆ.ಜಿ. ಕರ್ಮಾಕರ (೨೦೦೨)** ಹೇಳಿರುವಂತೆ ಬುಡಕಟ್ಟುಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಗ್ರಾಮೀಣ ರಸ್ತೆಗಳು, ಶಿಕ್ಷಣ, ಬುಡಕಟ್ಟು ಮಾರುಕಟ್ಟೆ ಮತ್ತು ನಗರ ಮಾರುಕಟ್ಟೆಯನ್ನು ಜೋಡಿಸುವುದು, ಸಹಕಾರ ಕ್ರಿಯೆ, ಸಾರ್ವಜನಿಕ ವಿತರಣ ವ್ಯವಸ್ಥೆ, ವಾಣಿಜ್ಯ ಬ್ಯಾಂಕುಗಳು, ಕಾರ್ಮಿಕ ಸಂಘಟನೆ, ಉಳಿತಾಯ ಮತ್ತು ಸ್ವ-ಸಹಾಯ ಗುಂಪುಗಳು, ಸಾಂಪ್ರದಾಯಕ ಬೆಳೆ ಪದ್ಧತಿಯಿಂದ ವಾಣಿಜ್ಯ ಬೆಳೆ ಪದ್ಧತಿಯ ಅಳವಡಿಕೆ, ವಾಣಿಜ್ಯಿಕ ಬುದ್ಧಿ ಸಾಮಾರ್ಥ್ಯದ ಸೃಷ್ಟಿ, ಅರಣ್ಯ ಉತ್ಪನ್ನಗಳ ಮುಕ್ತ ವ್ಯಾಪಾರ, ಮೀಸಲಾತಿ ಸೌಲಭ್ಯ ಮುಂತಾದ ಅಂಶಗಳು ಕಾರಣೀಭೂತವಾದ ಅಂಶಗಳಾಗುತ್ತವೆ. ಜಾಗತೀಕರಣ ಪ್ರಕ್ರಿಯೆಯಿಂದ ಬುಡಕಟ್ಟು ಜನರಿಗೆ ಕರ್ಮಾಕರ ತಿಳಿಸಿರುವಂತೆ ಭೌತಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳು ಸೃಷ್ಟಿಯಾಗುತ್ತಿವೆಯೇ? ಇದರಿಂದ ಬುಡಕಟ್ಟು ಸಮೂಹಗಳ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಾದ್ಯವೇ?[೪೨] ಎಂಬ ಪ್ರಶ್ನೆಗಳು ಉದ್ಭವಿಸುತ್ತಿವೆ.

ಈ ನಾಡಿಗೆ ಗುಲಾಮರಾಗಿ ಬಂದ ಸಿದ್ದಿಗಳು, ಅವರು ಕೆಲಸಕ್ಕೆ ನೆಲೆನಿಂತ ಮನೆಯ ಒಡೆಯರ ಅಥವಾ ಪ್ರಭಾವಶಾಲಿ ವರ್ಗದ ಮತಧರ್ಮವನ್ನು ಸ್ವೀಕರಿಸಿ, ಅವರ ಜೀವನಕ್ರಮವನ್ನು ಅನುಸರಿಸಿದರೆ ತಾವು ಸ್ವೀಕರಿಸಿದ ಧಾರ್ಮಿಕ ಸಮೂಹದಲ್ಲಿ ತಮ್ಮ ಸ್ಥಾನಮಾನಗಳನ್ನು ಕಂಡು ಕೊಂಡರು. ತಮ್ಮ ದೈಹಿಕ ನಿಲುವೊಂದನ್ನು ಬಿಟ್ಟರೆ ಉಳಿದ ಅಂಶಗಳಲ್ಲಿ ಸ್ಥಳೀಯ ಸಮಾಜಿಕ ವ್ಯವಸ್ಥೆಯಲ್ಲಿ ಬೆರೆತು ಹೋಗಿದ್ದಾರೆ. ಇತ್ತೀಚೆಗೆ ಹಲವಾರು ಕಾರಣಗಳಿಂದ ದೈಹಿಕ ಲಕ್ಷಣಗಳಲ್ಲಿಯೂ ಬದಲಾವಣೆಗಳಾಗುತ್ತಿವೆ[೪೩] ಎಂದು **ಎನ್.ಆರ್. ನಾಯಕ್ (೧೯೯೨)** ತಿಳಿಸಿದ್ದಾರೆ. ಬಡತನದ ಬಾಳನ್ನು ಬದುಕುತ್ತಿರುವ ಸಿದ್ದಿ ಜನಾಂಗದ ಮಹಿಳೆಯರ ಮೇಲಿನ ಅನ್ಯರ ಅಕ್ರಮಣದಿಂದಾಗಿರ

ಬಹುದು, ಸ್ತ್ರೀಯರ ಅಭಾವದಿಂದ ಸಿದ್ದಿ ಪುರುಷರು ಸ್ಥಳೀಯ ಕೆಳವರ್ಗದ ಮಹಿಳೆಯರನ್ನು ಸ್ವೀಕರಿಸಿದ್ದರಿಂದಾಗಿರಬಹುದು, ವರ್ಣಸಂಕರವಾಗಿ ಸ್ಥಳೀಯರಿಂದ ಭಿನ್ನವಾದ ಇವರ ಶಾರೀರಿಕ ನಿಲುವು ಕೂಡ ಬದಲಾಗುತ್ತಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗಳಲ್ಲಿ ಬೆರೆತು ಭಾರತೀಯ ಸರ್ವಧರ್ಮ ಸಿದ್ಧಾಂತವನ್ನು ಸಿದ್ದಿಯರು ಆಚರಣೆಗೆ ಅಳವಡಿಸಿಕೊಂಡು ನಮಗೆಲ್ಲ ಮೇಲ್ಪಂಕ್ತಿ ಹಾಕಿದ್ದಾರೆ. ತೀರ ಹಿಂದುಳಿದ ಬುಡಕಟ್ಟಗೆ ಸೇರಿದ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ತೀರ ಹಿಂದುಳಿದಿರುವ ಇವರ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರ ಮುತುವರ್ಜಿ ವಹಿಸಿ ಇವರ ಕತ್ತಲಿನ ಬದುಕಿಗೆ ಬೆಳಕು ನೀಡುವುದು ಅವಶ್ಯಕವಾಗಿದೆ ಎಂದು **ಎನ್.ಆರ್. ನಾಯಕ್** ಅವರು **"ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ"** ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿತ **ಹಿ.ಚಿ. ಬೋರಲಿಂಗಯ್ಯನವರು (೧೯೯೩) 'ಸಿದ್ದಿಯರ ಸಂಸ್ಕೃತಿ'** ಎಂಬ ಪುಸ್ತಕದಲ್ಲಿ 'ಸಿದ್ದಿಯರ ಬದುಕು ಕಡು ಬಡತನವನ್ನು ಸಾರುವಂತದ್ದು, ಬಿದಿರಿನ ಹೊದಿಕೆಯ ಗೋಡೆಗೆ ಮಣ್ಣಿನ ಲೇಪನ, ಮೇಲೆ ಹುಲ್ಲಿನ ಸೂರು, ಒಂದು ಅಂಗಳ ಅದರ ಒಂದು ಮೂಲೆಯಲ್ಲಿ ಅಡಿಗೆ ಒಲೆ, ಒಂದಿಷ್ಟು ಮಡಿಕೆ-ಕುಡಿಕೆ ಮತ್ತು ಬಿದಿರಿನ ಬುಟ್ಟಿ, ಇವೇ ಇವರ ಆಸ್ತಿ'[೪೪] ಎಂದಿದ್ದಾರೆ. ಸ್ಟೆರ್ಲಿಂಗ್ ಪಬ್ಲಿಕೇಷನ್ ಅವರು ಪ್ರಕಟಿಸಿರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರು ಎಂಬ ಪುಸ್ತಕದಲ್ಲಿ **ಟಿ.ಸಿ. ಪಾಲಾಕ್ಷಪ್ಪ (೧೯೭೬)** ಅವರು ಘರ್ ಮತ್ತು ಬಿಡಾರ ಎಂಬ ಕುಟುಂಬದ ಘಟಕಗಳು ಅವರಲ್ಲಿ ಕೌಟುಂಬಿಕ ಸಂಬಂಧಗಳನ್ನು ಸಧೃಡಗೊಳಿಸಿವೆ ಎಂದಿದ್ದಾರೆ.[೪೫]

ಡಾ. ಆರ್.ಎಸ್. ಹಿರೇಮಠ (೧೯೯೩) ಅವರು **'ಲೈಫ್ ಲಿವಿಂಗ್ ಆಂಡ್ ಲಾಂಗ್ವೇಜಸ್ ಆಫ್ ಸಿದ್ದಿಸ್ ಆಫ್ ನಾರ್ಥ ಕೆನರಾ'** ಎಂಬ ಸಂಶೋಧನಾ ಪ್ರಬಂಧದಲ್ಲಿ ಹೇಳಿರುವಂತೆ, ಸಿದ್ದಿ ಸಮುದಾಯದಲ್ಲಿ ಹಿಂದು, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮೂಹಗಳಿಗೆ ಸೇರಿದ ಮೂರು ಧರ್ಮದ ಅನುಯಾಯಿಗಳಿದ್ದಾರೆ. ಈ ಮೂರು ಧರ್ಮಗಳ ಧಾರ್ಮಿಕ ಆಚರಣೆಗಳ ಹೊರತಾಗಿಯೂ, ಎಲ್ಲಾ ಸಿದ್ದಿಗಳಲ್ಲೂ, ಸ್ವರ್ಗ, ನರಕ ಮತ್ತು ಪುನರ್ಜನ್ಮ ಮುಂತಾದ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದಂತೆ. ಕೆಲವು ಆಚರಣೆಗಳು ಸಾಮಾನ್ಯವಾಗಿ ಮೂರು ಧರ್ಮ ಸಿದ್ದಿಗಳ ಆಚರಣೆಯಲ್ಲಿ ಕಂಡುಬರುತ್ತವೆ. ಸಿದ್ದಿಗಳ ಸಾಮಾಜಿಕ ಸಂಘಟನೆಗಳು ಇದೇ ಪ್ರದೇಶದ ನಡುವೆ ಉದ್ಭವಿಸುವ ಸಂಘಟನೆಗಳಗಿಂತ ಭಿನ್ನವಾಗಿದೆ. ಸಿದ್ದಿಗಳ ನಡುವೆ ಉದ್ಭವಿಸುವ ವಿವಾದಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ(ಕೌಟುಂಬಿಕ ವಿಚಾರಗಳೂ ಸೇರಿದಂತೆ), ಅವರದೇ ಆದ ವಿಚಾರಣಾ ವಿಧಾನಗಳನ್ನು ಅನುಸರಿಸುತ್ತಾರೆ.[೪೬]

ಅದರಂತೆಯೇ **ಎಸ್.ಎಲ್. ಜೋಶಿ (೧೯೯೦)** ಅವರು ದಕ್ಷಿಣ ರಾಜಸ್ಥಾನದ ಭಿಲ್ ಬುಡಕಟ್ಟಿನ ಮೇಲೆ ಅಧ್ಯಯನ ಮಾಡಿದ್ದಾರೆ. ಇದರಲ್ಲಿ ಅವರು ಪ್ರಾಚೀನ ಭಾರತದ ಬುಡಕಟ್ಟುಗಳು ಸಮಾಜದಲ್ಲಿ ಗುಂಪುಗಳಾಗಿ ಸಂರಚನೆಗೊಂಡಿರಲಿಲ್ಲ. ಅವರು ಅವರ ಸಮಷ್ಠಿ ಆಸ್ಮಿತೆಯ ಯಾವುದೇ ಉತ್ತರಾದಾಯಿತ್ವ ಇಲ್ಲದಿದ್ದಾಗ್ಯೂ, ಸರ್ವ ಜೀವನತತ್ವದ ಲಕ್ಷಣವುಳ್ಳ ಗ್ರಾಮೀಣ ಜೀವನವನ್ನು ನಡೆಸುತ್ತಿದ್ದರು. ಹೆಚ್ಚು ಕಡಿಮೆ ಅವರು ವರ್ಗರಹಿತ ಮತ್ತು ರಾಜ್ಯ ರಹಿತ

ಸಮಾಜವನ್ನು ಹೊಂದಿದ್ದರು ಎಂದು ಹೇಳಿದ್ದಾರೆ.[೪೭] ಅಂದರೆ ಜೋಶಿಯವರ ಪ್ರಕಾರ ಬುಡಕಟ್ಟು ಜನರಿಂದಲೇ ಆಧುನಿಕ ನಾಗರಿಕ ಸಮಾಜ ಸಾಮಾಜಿಕ ನ್ಯಾಯದ ಪಾಠವನ್ನು ಕಲಿಯ ಬೇಕಾಗುತ್ತದೆಯೇ? ಎಂಬ ಪ್ರಶ್ನೆ ಉಂಟಾಗುತ್ತದೆ.

ನಿರ್ಮಲ್ಸೇನ್ ಗುಪ್ತಾ (೧೯೯೦) ಅವರ ಅಧ್ಯಯನದ ವಿಚಾರಗಳು ಜೋಶಿಯವರ ವಿಚಾರಗಳಿಗೆ ವಿರುದ್ಧವಾಗಿವೆ. ಗುಪ್ತಾ ಅವರ ಅಧ್ಯಯನವು ಕೈಗಾರೀಕರಣದ ಪ್ರಭಾವ ಬುಡಕಟ್ಟುಗಳ ಮೇಲೆ ಹೇಗೆ ಆಗಿದೆ ಎನ್ನುವ ವಿಚಾರಗಳಿಗೆ ಸಂಬಂಧಪಟ್ಟಿದೆ. ಬ್ರಿಟೀಷರ ಕಾಲದ ತೀವ್ರವಾದ ಕೈಗಾರಿಕೀಕರಣ ದಿಂದಾಗಿ ಮತ್ತು ಸ್ವಾತಂತ್ರ ಬಂದಾಗಿನಿಂದ ಬುಡಕಟ್ಟುಗಳ ಸಮಸ್ಯೆಗಳು ಬೇರೆ ದಿಕ್ಕಿನತ್ತ ಹೊರಟಿವೆ. ಬಹುಸಂಖ್ಯೆಯ ಬುಡಕಟ್ಟು ಜನರು ಸಮೃದ್ಧ ನೈಸರ್ಗಿಕ ಸಂಪನ್ಮೂಲ ಹೊಂದಿರುವ ಅರಣ್ಯ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದ್ದಾರೆ. ಸಂಪನ್ಮೂಲಾಧಾರಿತ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಬುಡಕಟ್ಟುಗಳ ಸ್ಥಳಾಂತರ ಅನಿವಾರ್ಯವಾಗಿದೆ.[೪೮]

ರೋಡಾಲ್ಫ್ ಹೆರಾಡಿಯಾ (೧೯೯೫) ಅವರ ದೃಷ್ಟಿಯನ್ನು ಪರಿಶೀಲಿಸಿದಾಗ, ಬುಡಕಟ್ಟು ಅಭಿವೃದ್ಧಿಯ ಇಬ್ಬಗೆಯ ನೀತಿಯು ಬುಡಕಟ್ಟುಗಳನ್ನು ಸಮಸ್ಯೆಗೆ ತಳ್ಳುತ್ತಿದೆ. ಬುಡಕಟ್ಟುಗಳ ಸಮಗ್ರತೆಯು ಕೇವಲ ಅವರ ಸಾಂಸ್ಕೃತಿಕ ಏಕಸ್ವಾಮ್ಯಕ್ಕೆ ಸಜ್ಜುಗೊಳ್ಳುವಿಕೆಯ ಅವಶ್ಯಕತೆಯನ್ನು ಮಾತ್ರ ಹೊಂದಿರದೆ, ಅವರ ಅಲ್ಪಸಂಖ್ಯಾತ ಸ್ಥಾನಮಾನಗಳನ್ನು ಪರಿಹರಿಸುವುದೂ ಅವಶ್ಯಕವಾಗಿರುತ್ತದೆ. ಅಂದರೆ ಅವರು ತಮ್ಮ ಸ್ವಂತ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಇದಕ್ಕೋಸ್ಕರ ಬುಡಕಟ್ಟು ಜನರಲ್ಲಿ ಶಿಕ್ಷಣವು ಪ್ರಮುಖ ಪಾತ್ರವಹಿಸುತ್ತಿದೆ ಎಂದಿದ್ದಾರೆ.[೪೯]

ಪಿ.ಸುಧಾಕರರೆಡ್ಡಿ (೧೯೯೫) ಅವರು ತಮ್ಮ ಸಮಗ್ರ ಅಧ್ಯಯನದಲ್ಲಿ ಸ್ಥಳಾಂತರಗೊಂಡ ಪರಿಶಿಷ್ಟ ಬುಡಕಟ್ಟುಗಳಲ್ಲಿ ಸಂಭವಿಸುವ ಸ್ಥಳಾಂತರ ಪ್ರಕ್ರಿಯೆ ಮತ್ತು ಅವರ ಸಮಸ್ಯೆಗಳು, ಪುನರ್ವಸತಿ ಮತ್ತು ಸಮಾಜಿಕ–ಸಾಂಸ್ಕೃತಿಕ ಬದಲಾವಣೆಗಳನ್ನು ಕುರಿತು ಚರ್ಚಿಸಿದ್ದಾರೆ. ಆಂಧ್ರ ಪ್ರದೇಶದ ಶ್ರೀಹರಿಕೋಟದಲ್ಲಿ ಭಾರತ ಸರ್ಕಾರದ ಬಾಹ್ಯಾಕಾಶ ಸಂಶೋಧನ ಸಂಸ್ಥೆಯವರು ಸ್ಥಾಪಿಸಿದ ರಾಕೆಟ್ ಲಾಂಚಿಂಗ್ ಸ್ಟೇಷನ್ನಿನಿಂದ ಸ್ಥಳಾಂತರಗೊಂಡ ಯನದಿ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದಲ್ಲಿ ರೆಡ್ಡಿಯವರು ಯನದಿ ಬುಡಕಟ್ಟಿನ ಸಾಂಪ್ರದಾಯಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬಲೆಗಳು ಮತ್ತು ಅವುಗಳ ಮುಂದುವರಿಕೆ ಮತ್ತು ಪರಿಸರ, ಸಮಾಜ ಮತ್ತು ಸಂಸ್ಕೃತಿಗಳಲ್ಲಿನ ಬದಲಾವಣೆಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಇವರು ಪುನರ್ವಸತಿ ಕಾರ್ಯಕ್ರಮಗಳು ಮತ್ತು ಅದರ ಪರಿಣಾಮದ ಸಂಗತಿಗಳು ಮತ್ತು ಬಲವಂತದ ವಲಸೆಯ ಹಿಂದಿನ ಒತ್ತಡಗಳು, ಹೊಸ ಪರಿಸರಕ್ಕೆ ಯನದಿಗಳ ಹೊಂದಿಕೊಳ್ಳುವಿಕೆ ಯನ್ನು ಪುನರ್ವಸತಿ ಕೇಂದ್ರಗಳ ಹೊರಗಡೆ ನಿಂತು ವಿಶ್ಲೇಷಣೆ ಮಾಡಿದ್ದಾರೆ. ಇವರು ಯನದಿ ಬುಡಕಟ್ಟಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ಪ್ರಕ್ರಿಯೆಯ ನಿರಂತರತೆಯ ಕ್ರಮ ಮತ್ತು ಆ ಪ್ರಕ್ರಿಯೆಯನ್ನು ವಿವರಿಸಿದ್ದಾರೆ.[೫೦]

ಇದಕ್ಕೆ ಪೂರಕವಾಗಿ **ಭುಜೇಂದ್ರನಾಥ ಪಾಂಡೆ (೧೯೯೬)** ಅವರು ಸರ್ೋರ ಬುಡಕಟ್ಟಿನ ವ್ಯಕ್ತಿತ್ವದ ಹೊಂದಾಣಿಕೆ ಮಾನಸಿಕ ಆರೋಗ್ಯ, ಮನೋಭಾವನೆ ಮತ್ತು ಶೈಕ್ಷಣಿಕ ಸಾಧನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ತುಂಬಾ ಆಳವಾದ ವಿಶ್ಲೇಷಣೆಯನ್ನು ಹೊಂದಿರುವುದರಿಂದ ಈ ಪುಸ್ತಕವು ಬುಡಕಟ್ಟು ಸಮೂಹಗಳ ಸಾಧಕ-ಬಾಧಕಗಳನ್ನು ತಿಳಿದುಕೊಳ್ಳಲು ಶಿಕ್ಷಕರಿಗೆ ಮತ್ತು ನೀತಿ ನಿಯಮಗಳನ್ನು ರೂಪಿಸುವವರೆಗೆ ವಾಸ್ತವಿಕ ಮತ್ತು ಪ್ರಾಯೋಗಿಕ ಸಲಹೆಗಳನ್ನು ನೀಡುತ್ತದೆ.[೫೧] ಆದ್ದರಿಂದ ಈ ಅಧ್ಯಯನದ ಫಲಿತಗಳನ್ನು ನೀತಿ ನಿರೂಪಕರು ಬುಡಕಟ್ಟು ಜನರ ಶಿಕ್ಷಣ ಮತ್ತು ಅಭಿವೃದ್ಧಿಯಲ್ಲಿ ಸ್ಪಷ್ಟವಾಗಿ ಅನ್ವಯಿಸಿಕೊಳ್ಳಬಹುದು.

ಎ.ಕೆ. ಪಾಂಡೆ (೧೯೯೭) ಅವರು ಸಂಶೋಧಕರ ಚಿಂತನೆಗಳನ್ನು ಉತ್ತೇಜನಗೊಳಿಸು ವಂತಹ ತಮ್ಮ ಅಧ್ಯಯನದಲ್ಲಿ ಪಾಶ್ಚಿಮಾತ್ಯ ಸಂಶೋಧಕರ ಮತ್ತು ಸಾಂಪ್ರದಾಯಕ ವಿದ್ವಾಂಸರ ಒಲವುಗಳಿಗೆ ಮಹತ್ವದ ತಿದ್ದುಪಡಿಗಳನ್ನು ಪ್ರತಿಪಾದಿಸಿದ್ದಾರೆ. ಅವರು ಅಭಿವೃದ್ಧಿ ಹೊಂದದೇ ಇರುವವರು ಸಮಸ್ಯೆಗಳು, ಅಧಿಕಾರರಹಿತ ಸಂಸ್ಕಲತಿ ಮತ್ತು ಒಡತನದ ಸಂಸ್ಕಲತಿಯನ್ನು ಭಾರತೀಯ ಸಮಾಜದ ಬುಡಕಟ್ಟುಗಳಲ್ಲಿ ಯಶಸ್ವಿಯಾಗಿ ಶೋಧಿಸಲು ಪ್ರಯತ್ನಿಸಿದ್ದಾರೆ.[೫೨]

ಇದಕ್ಕೆ ಪೂರಕವಾಗಿ **ಎಸ್.ಸಿ. ಸಕ್ಸೆನಾ** ಅವರು (೨೦೧೧) **'ಬುಡಕಟ್ಟು ಜನರ ಹಕ್ಕುಗಳು'** ಎಂಬ ತಮ್ಮ ಸಂಶೋಧನ ಲೇಖನದಲ್ಲಿ ಬುಡಕಟ್ಟುಗಳ ಹಿಂದುಳಿದಿರುವಿಕೆಗೆ ಅನಕ್ಷರತೆ ಮತ್ತು ಬಡತನದ ಜೊತೆಗೆ ಇತರ ಕಾರಣಗಳೂ ಇವೆ ಎಂದಿದ್ದಾರೆ. ಐತಿಹಾಸಿಕವಾಗಿ ಬುಡಕಟ್ಟು ಜನರು ಪ್ರತ್ಯೇಕ ಜೀವನ ನಡೆಸುತ್ತ ತಮ್ಮದೇ ಆದ ಸಂಸ್ಕೃತಿ, ಆರ್ಥಿಕ ವ್ಯವಸ್ಥೆ, ಆಚಾರ-ವಿಚಾರಗಳನ್ನು ಹೊಂದಿದ್ದಾರೆ. ಆದರೆ ಅವರ ಬದುಕು ದುಸ್ತರವಾಗಿದೆ. ಇದಕ್ಕೆ ಕೇವಲ ಬಡತನ ಮತ್ತು ಅನಕ್ಷರತೆ ಮಾತ್ರ ಕಾರಣವಾಗಿರದೆ, ಅಭಿವೃದ್ಧಿ ಪ್ರಕ್ರಿಯೆಯೂ ಬುಡಕಟ್ಟು ಪ್ರದೇಶಗಳಲ್ಲಿ ಹಲವಾರು ಬದಲಾವಣೆಗಳನ್ನು ತಂದಿದೆ ಎಂದಿದ್ದಾರೆ. ಅಂದರೆ, ಪ್ರಕೃತಿಯೊಂದಿಗೆ ತುಳುಕು ಹಾಕಿಕೊಂಡಿದ್ದ ಇವರ ಜೀವನೋಪಾಯ ವಿಧಾನಗಳು, ತಲೆಮಾರುಗಳಿಂದ ಬಂದ ಅವಿನಾಭಾವ ಸಂಬಂಧಗಳು ಸಡಿಲವಾಗತೊಡಗಿದವು. ಬಡತನದ ಅಂಚಿನಲ್ಲಿರುವ ಬುಡಕಟ್ಟುಗಳ ಏಳಿಗೆಗಾಗಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮತ್ತು ನೌಕರರು ನಿಸ್ವಾರ್ಥ ಮತ್ತು ಅರ್ಪಣಾ ಮನೋಭಾವದಿಂದ ಕೆಲಸ ಮಾಡುವುದು ಅವಶ್ಯಕವಾಗಿದೆ ಮತ್ತು ಸಕ್ಸೇನಾ ಅವರು ಇದಕ್ಕಾಗಿ ಒಂದು ಉಸ್ತುವಾರಿ ಸಲಹಾ ಸಮಿತಿಯನ್ನು ರಚಿಸಬೇಕೆಂದು ಸಲಹೆ ನೀಡಿದ್ದಾರೆ.[೫೩]

ಸಿ.ಎಂ. ಲಕ್ಷ್ಮಣ ಅವರು (೨೦೧೦) ತಿಳಿಸಿರುವಂತೆ ಸಂವಿಧಾನದ ೪೬ನೇ ವಿಧಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳನ್ನು ಸಮಾಜದ ದುರ್ಬಲ ವರ್ಗಗಳೆಂದು ಪರಿಗಣಿಸಿದ್ದು, ಅವರನ್ನು ಶೋಷಣೆಯಿಂದ ರಕ್ಷಿಸಿ ಅವರ ಶೈಕ್ಷಣಿಕ ಮತ್ತು ಆರ್ಥಿಕ ಆಸಕ್ತಿಗಳನ್ನು ಕಾಪಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನರ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ೬೮ ವರ್ಷ ಸ್ವಾತಂತ್ರವನ್ನು ಅನುಭವಿಸಿ ೨೧ನೇ ಶತಮಾನಕ್ಕೆ ಕಾಲಿಟ್ಟಿರುವ ಈ ಸಮಯದಲ್ಲಿ ದೇಶದಲ್ಲಿನ ಪ್ರತಿಯೊಂದು ಸಮುದಾಯ, ಪ್ರದೇಶ

ಮತ್ತು ಮತಧರ್ಮಗಳ ಸಮಗ್ರ ಅಭಿವೃದ್ಧಿಯನ್ನು ನಿಷ್ಪಕ್ಷಪಾತವಾಗಿ ಸಾಧಿಸುವ ಕಡೆಗೆ ಎಚ್ಚರಿಕೆಯ ಹೆಜ್ಜೆ ಇಡಬೇಕಾಗಿದೆ[೫೪] ಎಂದು ಸಿ.ಎಂ. ಲಕ್ಷ್ಮಣ ಅವರು ಅಭಿಪ್ರಾಯಪಟ್ಟಿದ್ದಾರೆ.

ಡಾ. ಬಾಲಸುಬ್ರಮಣ್ಯಂ (೨೦೧೧) ಬುಡಕಟ್ಟು ಸಮುದಾಯಗಳು ಎಷ್ಟೇ ಬಡವರಾಗಿರಲಿ ಬರೀ ಪಡೆದುಕೊಳ್ಳುವುದನ್ನು ಇಚ್ಛಿಸುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರಿಗೆ ಸಹಾಯ ಬೇಡವೆಂದಲ್ಲ. ಅಭಿವೃದ್ಧಿಯ ಹೆಸರಲ್ಲಿ ನಾವು ಅವರಿಗೆ ಕೊಡುವ ನೆರವು ಅವರ ಆತ್ಮಗೌರವವನ್ನು ತಗ್ಗಿಸುವಂತಿರಬಾರದು. ಪ್ರೀತಿ ಮತ್ತು ಸಹಭಾಗಿತ್ವದ ಮೂಲಕವಷ್ಟೇ ಅವರ ಜೀವನದಲ್ಲಿ ಸಕಾರಾತ್ಮಕವಾದ ಬದಲಾವಣೆ ತರಲು ಸಾಧ್ಯ. ಬಡವರೆಂದ ಮಾತ್ರಕ್ಕೆ ಕೇವಲ ಅಂಕಿ ಸಂಖ್ಯೆಯಿಂದ ಅವರನ್ನು ಅಳೆಯಬಾರದು. ದಾನಕ್ಕಿಂತ ಹೆಚ್ಚಾಗಿ ಅವರಿಗೆ ಬೇಕಾಗಿರುವುದು ಅವಕಾಶ, ಕರುಣೆ ತೋರುವುದಕ್ಕಿಂತ ಅವರನ್ನು ಅರ್ಥಮಾಡಿಕೊಳ್ಳಬೇಕಿದೆ. ದಾನ ಮಾಡುವುದು ದೊಡ್ಡಸ್ಥಿಕೆಯಲ್ಲ.[೫೫] ಅದು ಅವರ ಸೇವೆ ಮಾಡಲು ನಮಗೆ ಸಿಕ್ಕ ಅವಕಾಶ ಎಂದು ತಿಳಿದು ಕೆಲಸ ಮಾಡಬೇಕು ಎಂದು ಅಹಂ ಇಲ್ಲದ ಸೇವೆ ಜಡಿಯ ಕಲಿಸಿದ ಪಾಠ ಎಂಬ ಸಂಶೋಧನಾ ಲೇಖನದಲ್ಲಿ ತಿಳಿಸಿದ್ದಾರೆ. ಡಾ. ಬಾಲಸುಬ್ರಮಣ್ಯಂ ಅವರ ಅಭಿಪ್ರಾಯದಂತೆ ಸಿದ್ದಿ ಜನರೂ ಕೂಡ ಗುಲಾಮಿತನದಿಂದ ಮುಕ್ತರಾದ ಮೇಲೆ ಯಾರ ಮುಲಾಜಿಗೂ ಒಳಗಾಗದೇ ಸ್ವಾಭಿಮಾನದಿಂದ ಬದುಕುವುದನ್ನು ಕಲಿತುಕೊಳ್ಳುತ್ತಿದ್ದಾರೆ.

ಪುನಃ ಇದಕ್ಕೆ ಪೂರಕವಾಗಿ **ಡಾ. ಬಾಲಸುಬ್ರಮಣ್ಯಂ** (೨೦೧೧) ಅವರು **'ಜ್ಞಾನವೆಂಬ ಬೆಣ್ಣೆಯ ಹಿಡಿದು ಕಲಿಕೆ ಎಂಬ ತುಪ್ಪ ಅರಸುತ್ತ'** ಎಂಬ ಲೇಖನದಲ್ಲಿ ತಿಳಿಸಿರುವಂತೆ ನಮ್ಮನ್ನು ನಾವು ಎಲ್ಲಾ ಗೊತ್ತಿರುವ ಬೃಹಸ್ಪತಿಗಳು ಎಂದು ಭಾವಿಸಿಕೊಂಡು ಇರುವುದೇ ಹಳ್ಳಿಗರು ಮತ್ತು ಆದಿವಾಸಿಗಳಂತಹ ಜನರಿಗೆ ಸಹಾಯ ಮಾಡಲು ಎಂಬ ಭ್ರಮೆಯಲ್ಲಿರುತ್ತೇವೆ. ಆದರೆ ಬುಡಕಟ್ಟು ಸಮುದಾಯಗಳಲ್ಲಿ ಅಗಾಧವಾದ ಜ್ಞಾನ ಮತ್ತು ಅರಿವಿನ ಸಂಪತ್ತು ಇದೆ. ಕೇವಲ ವಿಜ್ಞಾನಿಗಳಿಂದ ಪ್ರಯೋಗಾಲಯಗಳಲ್ಲಿ ಸಾಬೀತಾದವುಗಳನ್ನು ಮಾತ್ರ ವೈಜ್ಞಾನಿಕ ಎಂದು ಪರಿಗಣಿಸಿರುವ ನಾವು (ನಾಗರಿಕ ಜನ) ದಿನನಿತ್ಯ ಶೋಧಿಸುತ್ತ ಈಗಾಗಲೇ ಕಂಡುಕೊಂಡಿರುವ ಸಂಗತಿಗಳನ್ನು ಸಾಂಪ್ರದಾಯಕವಾದ ಬುಡಕಟ್ಟು ಸಮುದಾಯಗಳ ಸ್ಥಾನಗಳೊಂದಿಗೆ ಸಂಯೋಜಿಸಿ ನೋಡಲು ಮುಂದಾದರೆ ಇವೆರಡರ ಲಾಭವು ಎರಡೂ ರೀತಿಯ ಸಮುದಾಯಗಳಿಗೂ ದಕ್ಕುತ್ತದೆ ಎನ್ನುವುದನ್ನು ತಿಳಿಸುತ್ತ ಬುಡಕಟ್ಟು ಜನರ ಪ್ರತಿಭೆಗಳಿಗೂ ಬೆಲೆ ಕೊಟ್ಟಾಗ ಮಾತ್ರ ಆ ಸಮುದಾಯಗಳಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೫೬]

ಅಂತೆಯೆ **ಕೆ.ಎಚ್. ಓಬಳೇಶ್ (೨೦೧೧) 'ಅಕ್ಷರ ದೀಪ ಅರಸುತ್ತ'** ಸೋಲಿಗ ಮಕ್ಕಳ ಕಲಿಕೆ ವ್ಯಥೆ ಕಥೆ (ಪ್ರಜಾವಾಣಿ) ಎಂಬ ಲೇಖನದಲ್ಲಿ ಬುಡಕಟ್ಟು ಜನರ ಸಾಂಪ್ರದಾಯಕ ಬದುಕಿನ ರೀತಿ ಹಾಗೂ ಬಾಹ್ಯ ಪ್ರಪಂಚದ ನಡುವೆ ಸಂಗಮ ಪ್ರಕ್ರಿಯೆ ನಡೆದಿರುವುದೇ ಕಡಿಮೆ. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳ ಮಕ್ಕಳಿಗೆ ನಾಡಿನ ಶಾಲೆಯ ಮೆಟ್ಟಿಲು ತುಳಿಯುವುದು ದುಸ್ತರವಾಗಿದೆ ಎಂಬು ಓಬಳೇಶ್ ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಬುಡಕಟ್ಟು ಮಕ್ಕಳಿಗೆ ಕಲಿಸಬೇಕಾಗಿರುವುದು ಅವರ ಸುತ್ತಲಿನ ಪರಿಸರ ಹಾಗೂ ಅದರೊಂದಿಗೆ ಒಡನಾಡುವ ವಿಧಾನ.

ಆದರೆ ಇತ್ತೀಚಿನ ಸಂಶೋಧನೆಗಳೂ ತಿಳಿಸುತ್ತಿರುವ ಪ್ರಕಾರ ಅವರಲ್ಲಿನ ಪರಂಪರಾಗತ ಜ್ಞಾನ ಅಳಿಸಿ ಹೋಗುವ ಹಂತ ಮುಟ್ಟಿದೆ. ಆದ್ದರಿಂದ ಅರಣ್ಯವಾಸಿಗಳ ಮಕ್ಕಳಿಗೆ ಹೊರ ಪ್ರಪಂಚದ ಬಗೆಗೆ ಸಂವೇದನೆ ಹೆಚ್ಚಿಸಬೇಕು, ಅದರೊಂದಿಗೆ ಅವರ ಪಾರಂಪರಿಕ ಜ್ಞಾನವನ್ನು ಸಂರಕ್ಷಣೆ ಮಾಡಬೇಕು.[೫೭] ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಪ್ರಯತ್ನಗಳು ನಡೆಯಬೇಕಿದೆ. ಬುಡಕಟ್ಟು ಮಕ್ಕಳಿಗೆ ಮನಸ್ಸು, ಹೃದಯ ಹಾಗೂ ಕೈಗಳ ಮೂಲಕ ವಿದ್ಯೆ ಕಲಿಸುವ ವ್ಯವಸ್ಥೆ ಆಗಬೇಕು. ಸರ್ಕಾರ ಇಂತಹ ಶಿಕ್ಷಣ ನೀತಿ ರೂಪಿಸುವುದೇ? ಎನ್ನುವುದು ಈಗ ನಮ್ಮ ಮುಂದಿರುವ ಪ್ರಶ್ನೆ.

'ಬುಡಕಟ್ಟು ಸಮುದಾಯಗಳು ಕೇವಲ ಔಪಚಾರಿಕ ಶಿಕ್ಷಣದಿಂದ ಮಾತ್ರ ಪರಿವರ್ತನೆ ಹೊಂದುವುದಿಲ್ಲ. ಅವರ ಅವಶ್ಯಕತೆಗಳು, ಅನಿವಾರ್ಯತೆಗಳು ಮತ್ತು ಅನಿರೀಕ್ಷಿತವಾಗಿ ಬರುವ ಅವಕಾಶಗಳನ್ನು ಉಪಯೋಗಿಸಿಕೊಂಡು ಬದುಕನ್ನು ಕಟ್ಟಿಕೊಳ್ಳುತ್ತವೆ' ಎಂಬ ಅಂಶ **ಡಾ. ಕೆ.ಎಂ. ಮೇತ್ರಿ** (೨೦೧೧) ಅವರ **ಡುಂಗ್ರಿ ಗರಾಸಿಯಾ ಬುಡಕಟ್ಟಿನ ಅಧ್ಯಯನ**ದಿಂದ ತಿಳಿದು ಬರುತ್ತದೆ. ಗೋಸಾಯಿ ಶಿಷ್ಯರು ದವಸ-ಧಾನ್ಯಗಳನ್ನು ಹೊತ್ತುಕೊಂಡು ಹೋಗುವಾಗ ಡುಂಗ್ರಿ ಗರಾಸಿಯರ ಕೆಲವರನ್ನು ಭೇಟಿಯಾದರು. ಗೋಸಾಯಿ ಶಿಷ್ಯರು ಅವರಿಗೆ ಅಲ್ಪ ಸ್ವಲ್ಪ ದವಸ-ಧಾನ್ಯಗಳನ್ನು ಕೊಟ್ಟು ತಮ್ಮ ದವಸ-ಧಾನ್ಯಗಳನ್ನು ಹೊರಲು ಅವರ ಬಳಿ ಇಟ್ಟು ಕೊಳ್ಳುತ್ತಿದ್ದರು. ಆ ಸಮಯ ದಲ್ಲಿ ಡುಂಗ್ರಿ ಗರಾಸಿಯಾಗಳಿಗೆ ಕಾವಿಬಟ್ಟೆ ತೊಡಿಸಿ, ತಲೆಗೆ ಕಾವಿ ಬಟ್ಟೆ ಸುತ್ತಿ, ಕೊರಳಿಗೆ ಮಾಲೆ ಹಾಕಿ ಹೊರೆ ಹೊರಿಸಿಕೊಂಡು ಇಡೀ ಪ್ರದೇಶವನ್ನು ಸುತ್ತಿ ದವಸ-ಧಾನ್ಯಗಳನ್ನು ಸಂಗ್ರಹಿಸಿಕೊಂಡು ಹೋಗುವಾಗ ಡುಂಗ್ರಿ ಗರಾಸಿಯಾರನ್ನು ಅವರು ಕೊಟ್ಟ ಬಟ್ಟೆಯೊಂದಿಗೆ ಅಲ್ಲಿಯೇ ಬಿಟ್ಟು ಹೋಗುತ್ತಿದ್ದರು. ಡುಂಗ್ರಿ ಗರಾಸಿಯರು ಅದೇ ಬಟ್ಟೆಯನ್ನು ಧರಿಸಿಕೊಂಡು ಗೋಸಾಯಿ ಗುರುಗಳ ಹೆಸರು ಹೇಳಿಕೊಂಡು ಧಾರ್ಮಿಕ ಭಿಕ್ಷಾಟನೆ ಮಾಡಲು ಪ್ರಾರಂಭಿಸಿದರು ಮತ್ತು ಅದನ್ನೇ ಹೊಟ್ಟೆಪಾಡಿನ ಕಾಯಕವನ್ನಾಗಿಸಿಕೊಂಡು ಜೀವನ ವಿಧಾನವನ್ನು ಬದಲಾಯಿಸಿಕೊಂಡಿದ್ದಾರೆ ಎಂದು ಮೇತ್ರಿಯವರು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.[೫೮] -

ಡಾ. ಬಾಲಸುಬ್ರಹ್ಮಣ್ಯಂ (೨೦೧೧) ಅವರು **'ನನಗೆ ಬೇಕಾದ ಒಣ ಕಟ್ಟಿಗೆ ಸಿಗುವುದೇ'** ಎಂಬ ಲೇಖನದಲ್ಲಿ ಉಲ್ಲೇಖಿಸಿದ ಅಮರ್ತ್ಯಸೇನ್ ಅವರ 'ಡೆವಲಪ್‌ಮೆಂಟ್ ಆಸ್ ಫ್ರೀಡಮ್' ಎಂಬ ಪುಸ್ತಕದಲ್ಲಿ, 'ತಮಗೆ ಯಾವುದೆ ಮೌಲ್ಯಯುತ ಎನಿಸುತ್ತದೆಯೋ ಅದನ್ನು ಆಯ್ಕೆ ಮಾಡಿ ಕೊಳ್ಳುವ ಜನರ ಸ್ವಾತಂತ್ರ್ಯದ ಬಗ್ಗೆ' ಪ್ರಸ್ತಾಪಿಸಿದ್ದಾರೆ. ಈ ನಿಟ್ಟಿನಲ್ಲಿ ಒಕ್ಕಲೆಬ್ಬಿಸುವ ಸಂದರ್ಭದಲ್ಲಿ ಬುಡಕಟ್ಟು ಜನರು ಎತ್ತುವ ಪ್ರಶ್ನೆಗಳಿಗೆ ಸಾಕಷ್ಟು ಅರ್ಥ ಇರುತ್ತದೆ. ಅಲ್ಲದೆ ಆ ಪ್ರಶ್ನೆಗೆಳಿಗೆ ಉತ್ತರ ಕೊಡುವುದು ನಾಗರಿಕ ಸರ್ಕಾರಕ್ಕೆ ಸವಾಲಿನ ಕೆಲಸವಾಗುತ್ತದೆ. ಅಭಿವೃದ್ಧಿಯನ್ನು ಕೇವಲ ಆರ್ಥಿಕತೆ ಮತ್ತು ಅಳತೆಯ ಮಾನದಂಡಗಳಿಂದ ಅರ್ಥೈಸುವ ಸರ್ಕಾರಕ್ಕೆ ಧ್ವನಿಯಿಲ್ಲದ ಬುಡಕಟ್ಟು ಜನರ ಪ್ರಶ್ನೆ ಅರ್ಥವಾಗುವುದಾದರೂ ಹೇಗೆ? ಎಂಬ ಪ್ರಶ್ನೆಯನ್ನು ಡಾ.ಬಾಲಸುಬ್ರಹ್ಮಣ್ಯಂ ಅವರು ಎತ್ತಿದ್ದಾರೆ.[೫೯] ಹಾಗಿದ್ದರೆ, ಅಭಿವೃದ್ಧಿಯು ಬಹುಜನ ಕಲ್ಯಾಣ ಮತ್ತು ಸ್ವಾತಂತ್ರ್ಯವಾದವನ್ನು

ಮೀರಿದ್ದು ಎಂಬುದನ್ನು ಅರ್ಥಮಾಡಿಕೊಳ್ಳಲು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವವರಿಗೆ ಸಾಧ್ಯವಾಗುವುದಿಲ್ಲವೇ? ಹಾಗೆ ಅಮರ್ತ್ಯಸೇನ್ ಪ್ರತಿಪಾದಿಸಿದ ಅಭಿವೃದ್ಧಿಯ ಪರಿಕಲ್ಪನೆಯನ್ನು ಯೋಜನೆಗಳಲ್ಲಿ ಅಳವಡಿಸಿ ಕೊಂಡು ಅನುಷ್ಠಾನಗೊಳಿಸುವುದರ ಮೂಲಕ ಬುಡಕಟ್ಟು ಸಮಾಜದಲ್ಲಿ ಸಕಾರಾತ್ಮಕವಾದ ಬದಲಾವಣೆಗಳನ್ನು ತರಲು ಆಗುವುದಿಲ್ಲವೆ? ಇಂತಹದೊಂದು ಪರಿಕಲ್ಪನೆ ಕಾರ್ಯರೂಪಕ್ಕೆ ಇಳಿದರೆ ಮಾತ್ರ ಅಭಿವೃದ್ಧಿ ಎಂಬುದು ಸಾಂದರ್ಭಿಕ ಪ್ರಸ್ತುತತೆ ಪಡೆದುಕೊಂಡು, ಉಂಟಾಗುವ ಬದಲಾವಣೆಗಳು ಸಾಂಸ್ಕೃತಿಕವಾಗಿಯೂ ಅರ್ಥಪೂರ್ಣವಾಗುತ್ತವೆ.

ಪ್ರೊ. ಸಿ ಪಾರ್ವತಮ್ಮ (೨೦೦೭) ಅವರು ಆಡಳಿತಶಾಹಿಯ ಮೂಲಕ ಬುಡಕಟ್ಟು ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಇರಾದೆ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಇರಲಿಲ್ಲ. ಆಡಳಿತ ನಡೆಸುವುದರ ಜೊತೆಗೆ, ಕಾನೂನು ಮತ್ತು ನಿಯಮಗಳನ್ನು ಪಾಲಿಸುತ್ತಾ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಕಾರಣವಾಗಬೇಕೆಂದು ಅಧಿಕಾರಶಾಹಿಯು ನಿರೀಕ್ಷಿಸಿದ್ದು ಸ್ವತಂತ್ರ್ಯ ಭಾರತದ ವೈಶಿಷ್ಟ್ಯವಾಗಿದೆ. ಆದರೆ ಅಧಿಕಾರಶಾಹಿಯು ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಿಂದ ಜನರ ನಂಬಿಕೆಗೆ ದ್ರೋಹ ಮಾಡಿದೆ. ಇದರಿಂದ ಬಡವರು ಮತ್ತು ಬುಡಕಟ್ಟು ಜನರ ಅಭಿವೃದ್ಧಿಗೆ ಕೈಗೊಳ್ಳಲಾದ ಪಂಚವಾರ್ಷಿಕ ಯೋಜನೆಗಳಲ್ಲಿನ ಕ್ರಮಗಳೂ ವಿಫಲವಾಗಿವೆ. ಅವ್ಯವಹಾರ ಆಲಸ್ಯದ ಜೊತೆಗೆ ಹೊಸ ಹೊಸ ಗುಂಪುಗಳು ಸರ್ಕಾರದ ಮೇಲೆ ಒತ್ತಡ ತಂದು ಬುಡಕಟ್ಟು ಗುಂಪಿಗೆ ತಮ್ಮ ಸಮೂಹವನ್ನು ಸೇರಿರಬೇಕೆಂದು ಮತ್ತು ಸಂವಿಧಾನಾತ್ಮಕ ಸವಲತ್ತುಗಳನ್ನು ಕೊಡಬೇಕೆಂದು ಹೋರಾಡುತ್ತಿವೆ. ಇದರಿಂದ ಮೀಸಲಾತಿ ನಿಯಮ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದೆ. ಸಂವಿಧಾನಾತ್ಮಕ ಸೌಲಭ್ಯಗಳನ್ನು ಬುಡಕಟ್ಟು ಜನರಿಗೆ ನೀಡಲಾಗುತ್ತಿದ್ದು, ಈ ಸೌಲಭ್ಯಗಳು ನಿಜವಾಗಿ ದುರ್ಬಲರಾದವರಿಗೆ ತಲುಪುತ್ತಲೇ ಇಲ್ಲ.[೬೦] ಆಯಾ ಸಮುದಾಯಗಳಲ್ಲಿ ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲರಾದವರು ಎಲ್ಲಾ ಸೌಲಭ್ಯಗಳನ್ನು ತಾವೇ ಲಪಟಾಯಿಸುತ್ತಿರುವುದು ನಿಜವಾಗಿರುವಾಗ, ಸರ್ಕಾರದ ಸವಲತ್ತುಗಳನ್ನು ನಿಜವಾಗಿ ತಲುಪಬೇಕಾದವರಿಗೆ ತಲುಪುವ ಹಾಗೆ ಮಾಡಲು ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ? ಎಂಬ ಪ್ರಶ್ನೆ ಎದುರಾಗುತ್ತದೆ. ಅಂತೆಯೇ ಇಂತಹ ಪರಿಸ್ಥಿತಿಯಲ್ಲಿ ಬುಡಕಟ್ಟು ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರುವುದಾದರೂ ಹೇಗೆ? ಎಂಬುದಕ್ಕೆ ಉತ್ತರವೆಂಬಂತೆ **ಎಂ. ಚಂದ್ರ ಪೂಜಾರಿಯವರು (೨೦೧೨)** ಭೂಮಿ ಅಥವಾ ಸಂಪತ್ತನ್ನು ಹಂಚಿ ಸಮಾನತೆಯ ಬದಲಾವಣೆಯನ್ನು ತರುವುದು ಕಷ್ಟದ ಕೆಲಸ; ಆದರೆ ಸಮಾಜದ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಕೊಟ್ಟು ಮಾನಸನ್ಮಾನದಿಂದ ಬದುಕಲು ಅವಕಾಶ ಮಾಡಿಕೊಡುವುದು ಕಷ್ಟದ ಕೆಲಸವಲ್ಲ. ಆದರೆ ಇಲ್ಲೂ ರಾಜಕೀಯ ತನ್ನ ವಿಫಲತೆಯನ್ನು ಮೆರೆದಿದೆ ಎಂದು ಹೇಳುವ ಮೂಲಕ ಪಾರ್ವತಮ್ಮನವರ ಪ್ರಶ್ನೆಗಳಿಗೆ ಉತ್ತರವೆಂಬಂತೆ ತಮ್ಮ 'ನೂರು ಕವಲು ನೂರಾರು ಒಲವು' ಎಂಬ ಲೇಖನದಲ್ಲಿ ಹೇಳಿದ್ದಾರೆ.[೬೧]

ಎಂ. ಚಂದ್ರ ಪೂಜಾರಿ (೨೦೧೧) ಅವರ **'ನೂರು ಕವಲು ನೂರಾರು ಒಲವು'** ಎಂಬ ಲೇಖನದಲ್ಲಿ ಬಾಲಸುಬ್ರಮಣ್ಯಂ ಅವರ ವಿವರಗಳಿಗೆ ಪೂರಕವಾಗಿ ಅಭಿವೃದ್ಧಿ ಎಂದರೇನು? ಸ್ಥಳೀಯ ಪರಿಸರಕ್ಕೆ ಪೂರಕವಾದ ಅಭಿವೃದ್ಧಿ ಯಾವುದು? ಯಾವ ಬಗೆಯ ಆರೋಗ್ಯ? ಯಾವ ಶಿಕ್ಷಣ? ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಲು ಇಲ್ಲಿ ಅವಕಾಶವೇ ಇಲ್ಲ. ಈ ಎಲ್ಲ ಪ್ರಶ್ನೆ ಗಳನ್ನು ಮತ್ತು ಅವುಗಳ ಉತ್ತರವನ್ನು ಮೇಲುಸ್ತರದ ಸರ್ಕಾರ ಮತ್ತು ಅಧಿಕಾರಿಗಳು ತೀರ್ಮಾನಿಸುತ್ತಾರೆ. ಅಸಾಮಾನ್ಯರ ಪಾತ್ರ ಏನಿದ್ದರೂ ಮೇಲಿನಸ್ಥರದಲ್ಲಿ ತೀರ್ಮಾನಗೊಳ್ಳುವ ಚೌಕಟ್ಟಿನಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸುವುದಕ್ಕೆ ಸೀಮಿತ. ಇಲ್ಲಿ ಅಭಿವೃದ್ಧಿಯನ್ನು ಕೂಡ ಸೀಮಿತವಾಗಿ ವ್ಯಾಖ್ಯಾನಿಸಲಾಗಿದೆ. ಸಮಾಜದ ವಿವಿಧ ವರ್ಗಗಳಿಗೆ ಅವರವರ ಅವಶ್ಯಕತೆ ಗಳಿಗನುಸಾರವಾಗಿ ಜೀವನ ಸಾಗಿಸಲು ಪೂರಕವಾದ ಸವಲತ್ತುಗಳನ್ನು ಪೂರೈಕೆ ಮಾಡುವುದಕ್ಕೆ ಅಭಿವೃದ್ಧಿ ಎಂದುಕೊಂಡಿದ್ದಾರೆ. ಆದರೆ ೧೯೯೩ರ ಸಂವಿಧಾನದ ೭೩ನೇ ಮತ್ತು ೭೪ನೇ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳಿಗೆ ಹೊಸ ಜೀವನ ನೀಡಿವೆ. ಸಂವಿಧಾನ ಸೂಚಿಸಿರುವ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ ತಳ ವರ್ಗಗಳು ತಮ್ಮ ಬದುಕನ್ನು ಪ್ರಭಾವಿಸುವ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬಹುದು ಎಂದಿದ್ದಾರೆ.[೨] ಆದರೆ **ಸಿ. ಪಾರ್ವತಮ್ಮ** (೨೦೦೭) ಅವರು ಹೇಳಿರುವಂತೆ ಎಷ್ಟೇ ಶಾಸನೀಯ ಕ್ರಮಗಳನ್ನು ಕೈಗೊಂಡರೂ ಅಧಿಕಾರಶಾಹಿಗಳ ಮೇಲೆ ಸಮಾಜ ಮತ್ತು ಸಂವಿಧಾನ ಇಟ್ಟಿದ್ದ ಭರವಸೆ ಈಗ ಮಣ್ಣುಪಾಲಾಗಿದೆ. ಕೃಷಿ, ಸಹಕಾರ, ಗ್ರಾಮ ಪಂಚಾಯಿತಿ ಮತ್ತಿತರ ಸಮುದಾಯ ಅಭಿವೃದ್ಧಿ ಯೋಜನೆಗಳು ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರಗಳಂತಹ ಅನಿಷ್ಟಗಳನ್ನು ಹೆಚ್ಚಿಸಿರುವಾಗ, ಚಂದ್ರ ಪೂಜಾರಿಯವರ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ತಳಮಟ್ಟದ ಜನರು ಎಷ್ಟರ ಮಟ್ಟಿಗೆ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚಿಸಬೇಕಾಗುತ್ತದೆ.[೩]

ಇದಕ್ಕೆ ಪೂರಕವಾಗಿ **ಕೆ.ಜಿ. ಕರ್ಮಾಕರ್** (೨೦೦೨) ಅವರು, ರಾಷ್ಟ್ರದ ಜನಸಂಖ್ಯೆಯಲ್ಲಿನ ಬುಡಕಟ್ಟು ಸಮೂಹಗಳ ಬಹುಸಂಖ್ಯಾತ ಜನರು ದುರ್ಗಮವಾದ ಬೆಟ್ಟಗುಡ್ಡಗಳಲ್ಲಿ ವಾಸಿಸು ತ್ತಿದ್ದಾರೆ. ಒಂದು ಕಡೆ ನಿಸರ್ಗ ಸಹಜವಾದ ಪ್ರತ್ಯೇಕತೆಯು ಅವರನ್ನು ಅಭಿವೃದ್ಧಿಯ ಪ್ರತಿಫಲಗಳಿಂದ ದೂರವಿಟ್ಟಿದ್ದರೆ, ಮತ್ತೊಂದು ಕಡೆ ಅವರು ಸಮಾಜದ ಮುಖ್ಯವಾಹಿನಿಯ ಸಾಮಾಜಿಕ, ಸಾಂಸ್ಕೃತಿಕ, ಮತ್ತು ಆರ್ಥಿಕ ರಂಗಗಳಿಂದಲೂ ದೂರ ಉಳಿದಿವೆ. ಅವರ ಪ್ರಮುಖ ಸಮಸ್ಯೆಗಳೆಂದರೆ ಅಜ್ಞಾನ, ಅನಕ್ಷರತೆ, ಸಂಪ್ರದಾಯಕ ನಂಬಿಕೆಗಳಿಗೆ ಅಂಟಿಕೊಂಡಿರುವಿಕೆ, ಬಡತನ, ಅನಾನುಕೂಲಕರ ಭೌಗೋಳಿಕತೆ ಮತ್ತು ಸಂಪರ್ಕದ ಕೊರತೆಗಳಿಂದಲೂ ಬುಡಕಟ್ಟು ಸಮುದಾಯಗಳು ಸಕಾರಾತ್ಮಕವಾದ ಬದಲಾವಣೆಗೆ ಒಳಗಾಗುತ್ತಿಲ್ಲ ಎಂದು ಹೇಳಿರುವುದು, ಬುಡಕಟ್ಟು ಸಮುದಾಯಗಳು ಪ್ರಸ್ತುತ ಹೇಗೆ ಬದಲಾವಣೆ ಹೊಂದಲು ಸಾಧ್ಯ? ಮತ್ತು ಎಂತಹ ಆರ್ಥಿಕ ಮತ್ತು ಸಾಮಾಜಿಕ ಸಾಂಸ್ಕೃತಿಕ ಬದಲಾವಣೆ ಆ ಸಮುದಾಯಗಳಲ್ಲಿ ನಡೆಯುತ್ತಿದೆ? ಎನ್ನುವ ಪ್ರಶ್ನೆಗಳನ್ನು ಅವಲೋಕಿಸಲಾಗಿದೆ.[೪]

ಹಾಗೆಯೇ **ಚಂದ್ರಪೂಜಾರಿ (೨೦೦೬)** ಅವರು ಬುಡಕಟ್ಟು ಅಭಿವೃದ್ಧಿ ಎಂಬುದು ತುಂಬಾ ಸಂಕೀರ್ಣವಾದ ಸಮಸ್ಯೆಯಾಗಿ ನಮ್ಮ ಮುಂದೆ ಇದೆ. ಅವರನ್ನು ಉದ್ಧಾರ ಮಾಡುವ ಕಾರ್ಯಕ್ರಮಗಳು ನಿಜವಾಗಿ ಅವರನ್ನು ಉದ್ಧಾರ ಮಾಡುತ್ತಿಲ್ಲ. ಬದಲಿಗೆ ಶೋಷಣೆ ಮಾಡುತ್ತಿವೆ. ಜೊತೆಗೆ ಚಾರಿತ್ರಿಕವಾಗಿ ಅವರು ರೂಪಿಸಿಕೊಂಡು ಬಂದ ಬದುಕಿಗೆ ಅನುಗುಣವಾಗಿ ಬದುಕಲು ಅಸಾಧ್ಯವಾದ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳುವ ಮೂಲಕ ಬುಡಕಟ್ಟು ಸಮೂಹಗಳ ಸಕಾರಾತ್ಮಕ ಬದಲಾವಣೆಯ ಬವಣೆಯನ್ನು ವಿವರಿಸಿದ್ದಾರೆ.[೬೫] ಬುಡಕಟ್ಟು ಅಭಿವೃದ್ಧಿಗೆ ಪೂರಕವಾಗಿ **ಭಾಗ್ಯಲಕ್ಷ್ಮಿ ಮಹಾಪಾತ್ರ** (೨೦೧೧) ಅವರು ತಮ್ಮ **'ಡೆವಲಪ್‌ಮೆಂಟ್ ಆಫ್ ಎ ಪ್ರಿಮಿಟೀವ್ ಟ್ರೈಬ್ ಎ ಸ್ಟಡಿ ಆಫ್ ಡಿಡಾಯ್ಸ್'** ಎಂಬ ಸಂಶೋಧನಾ ಗ್ರಂಥದಲ್ಲಿ ಒರಿಸ್ಸಾದ ಮಲಕಾನಗರಿ ಜಿಲ್ಲೆಯ ಪೂರ್ವ ಘಟ್ಟಡಾಲ್ಲೆ ಬಾಲಿಮೇಲ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ನಿರ್ಮಾಣವಾದ ನಂತರ ಮಚ್ಕುಂದ್ ನದಿಯ ಕಣಿವೆ ಮತ್ತು ಕೊಂದಕಂಬೇರು ಪರ್ವತ ಪ್ರದೇಶಗಳಲ್ಲಿ ಅರೆ ಅಲೆಮಾರಿ ಜೀವನ ನಡೆಸುತ್ತಿರುವ ಡಿಡಾಯ್ಸ್ ಬುಡಕಟ್ಟು ಸಮೂಹದ ಜನರ ಜೀವನದಲ್ಲಾಗುತ್ತಿರುವ ಬದಲಾವಣೆ, ಅವರ ಜೀವನದ ಮೇಲೆ ಬಾಲ ಮೇಲ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಅನುಷ್ಠಾನದಿಂದ ಆಗಿರುವ ಪ್ರಭಾವವನ್ನು ವಿವರಿಸಿದ್ದಾರೆ.[೬೬] ೧೯೬೭ರಿಂದ ಡಿಡಾಯ್ ಬುಡಕಟ್ಟು ಜನರ ಹೇಳಿಗೆಗಾಗಿ ಅವರ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಡಿಡಾಯ್ ಡೆವಲಪ್‌ಮೆಂಟ್ ಏಜೆನ್ಸೀಸ್ ಸ್ಥಾಪನೆ ಅದರ ಕಾರ್ಯವೈಖರಿಯಿಂದ ಆ ಸಮೂಹದಲ್ಲಾಗಿರುವ ಆರ್ಥಿಕ, ಸಾಮಾಜಿಕ ಮತ್ತು ಜೀವನದ ಇತರ ಕ್ಷೇತ್ರಗಳಲ್ಲಾಗಿರುವ ಬದಲಾವಣೆಗಳನ್ನು ವಿವರಿಸಿ, ಆ ಸಮುದಾಯಕ್ಕೆ ಸಾಕಷ್ಟು ಅನುಕೂಲಗಳಾಗಿವೆ ಎಂದು ಹೇಳಿರುವುದರಿಂದ, ಸಿ. ಪಾರ್ವತಮ್ಮನವರು ಮತ್ತು ಚಂದ್ರಪೂಜಾರಿ ಅವರು ವ್ಯಕ್ತಪಡಿಸಿರುವ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ಬಗೆಗಿನ ಆತಂಕಕ್ಕೆ ಪ್ರಾದೇಶಿಕವಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆದ ಲೋಪವೇ ಕಾರಣವಾಗಿರಬಹುದೇನೋ? ಎಂಬ ಅನುಮಾನ ಉಂಟಾಗುತ್ತದೆ.

ಆದರೆ **ಡಾ. ಬಾಲಸುಬ್ರಮ್ಮಣ್ಯಂ (೨೦೧೩)** ಅವರು **'ಯಾವುದು ಸಮಸ್ಯೆ? ಎಲ್ಲಿದೆ ಪರಿಹಾರ?'** ಎಂಬ ತಮ್ಮ ಲೇಖನದಲ್ಲಿ, ಅಭಿವೃದ್ಧಿಯನ್ನು ಜಾರಿಗೆ ತರುವಾಗ ನಾವು ಹಲವಾರು ಬಾರಿ ಸಮಸ್ಯೆಗಳನ್ನು ನಮ್ಮ ನೈಪುಣ್ಯ ಮತ್ತು ಸಾಮರ್ಥ್ಯವನ್ನು ಆಧರಿಸಿ ಸಂಕುಚಿತ ದೃಷ್ಟಿಕೋನದಿಂದಷ್ಟೆ ನೋಡುತ್ತೇವೆ. ನಮಗೆ ಅಭಿವೃದ್ಧಿ ಎಂದರೆ ಏನಿದ್ದರೂ ಶಿಕ್ಷಣ, ಆರೋಗ್ಯ, ಜೀವನೋಪಾಯ, ನೀರು, ನೈರ್ಮಲ್ಯ ಇತ್ಯಾದಿಗಳನ್ನು ಒದಗಿಸುವುದಷ್ಟೇ ಆಗಿರುತ್ತದೆ. ಕೇವಲ ಜನರ ದೈಹಿಕ ಅಗತ್ಯಗಳನ್ನು ಪೂರೈಸುವಷ್ಟಕ್ಕೆ ನಮ್ಮ ಅರಿವನ್ನು ಸೀಮಿತಗೊಳಿಸಿಕೊಂಡು ಬಿಡುವ ನಾವು ಅವರ ಅಂತರಾಳ, ಮನಸ್ಸು ಮತ್ತು ಆತ್ಮದ ಅಗತ್ಯಗಳನ್ನು ಅರಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ಬಡವರಿಗೆ ಮೂಲ ಸೌಕರ್ಯ ಒದಗಿಸುವುದನ್ನೆ ಸರ್ಕಾರಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸಹ ಹೆಮ್ಮೆ ಎಂದುಕೊಳ್ಳುತ್ತವೆ. ನಮ್ಮ ಬಳಿ ಏನಿದೆ ಮತ್ತು ನಾವು ಅವರಿಗೆ ಏನು ಮಾಡಬಹುದು, ಎಂಬುದನ್ನು ಮಾತ್ರ ಯೋಚಿಸಿ, ನಾವು ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಹೊರಡುತ್ತೇವೆ. ಹೀಗೆ ಮಾಡುವಾಗ ಜನ ಹೆಚ್ಚಾಗಿ ಏನು ಬೇಕು ಎಂದು ಕೊಂಡಿರುತ್ತಾರೋ ಅದಕ್ಕಿಂತ ಹೆಚ್ಚಾಗಿ

ನಾವು ಅವರಿಗೆ ಏನು ಕೊಡಬೇಕು ಎಂದುಕೊಂಡಿರುತ್ತೇವೆಯೋ ಅದಷ್ಟೇ ಮುಖ್ಯವಾಗಿಬಿಡುತ್ತದೆ ಎಂದು ತಿಳಿಸಿದ್ದಾರೆ.[೬]

ಬಾಲಸುಬ್ರಮ್ಮಣ್ಯಂ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ **ಎನ್.ಎ. ರವೀಂದ್ರ (೨೦೧೩)** ಅವರು ದೇವರಿಗೆ ಹೆದರುವಿಕೆ, ಅಂಧಾನುಕರಣೆ ಮತ್ತು ಮೌಢ್ಯಗಳಿಂದಾಗಿ ಬುಡಕಟ್ಟು ಸಮುದಾಯಗಳಲ್ಲಿ ಅನಿಷ್ಟ ಆಚರಣೆಗಳು ಆಚರಿಸಲ್ಪಡುತ್ತಿವೆ. ಕಾಡುಗೊಲ್ಲ ಮಹಿಳೆಯರ ಜೈವಿಕ ಸಹಜವಾದ ಋತುಮತಿ, ಮಾಸಿಕ ಸ್ರಾವ ಮತ್ತು ಹೆರಿಗೆಯ ನಂತರ ಬಾಣಂತನದ ಕಾಲಗಳಲ್ಲಿ ಮನೆಯಿಂದ ಹೊರಗೆ ಇಂತಿಷ್ಟು ದಿನ ಎಂದು ನಿಗದಿಪಡಿಸಿ ಪ್ರತ್ಯೇಕವಾದ ಚಪ್ಪರದಡಿಯಲ್ಲಿ ಇರಿಸುವ ಸಂಪ್ರದಾಯಕ ಆಚರಣೆಯಿದೆ. ಇಂತಹ ಆಚರಣೆಗಳು ಗೊಲ್ಲರ ಹಟ್ಟಿಗಳಲ್ಲಿ ಈಗಲೂ ನೆಡೆಯುತ್ತಿವೆ. ಇತ್ತೀಚೆಗೆ ಸರ್ಕಾರದವರು ಇಂತಹ ಸಂದರ್ಭದಲ್ಲಿ ಮಹಿಳೆಯರ ವಾಸಕ್ಕಾಗಿ ವಾಸಗೃಹಗಳನ್ನು ಕೆಲವು ಹಟ್ಟಿಗಳಲ್ಲಿ ನಿರ್ಮಿಸಿದ್ದಾರೆ. ಸರ್ಕಾರದ ಇಂತಹ ಕ್ರಮದಿಂದಾಗಿ ಮೌಢ್ಯತೆಯ ಆಚರಣೆಗೆ ಬೆಂಬಲ ಸಿಕ್ಕಂತಾಗಿದೆ. ರವಿಂದ್ರ ಅವರ ಈ ಸಂಶೋಧನಾ ಲೇಖನದ ಫಲಿತತೆಯಿಂದ ತಿಳಿದುಬರುವಂತೆ, ಸರ್ಕಾರ ಮೌಢ್ಯತೆಯನ್ನು ಬೆಂಬಲಿಸುವುದರ ಬದಲು, ನಿಜವಾಗಿಯೂ ಮಹಿಳೆಯರಿಗೆ ಬೇಕಾಗಿರುವ ಆರೋಗ್ಯ ಪರಿಸರಗಳ ಬಗೆಗಿನ ಕಾಳಜಿಗಳ ಬಗ್ಗೆ ಅರಿವನ್ನು ಮೂಡಿಸುವುದೇ ಹೊರತು, ಮೌಢ್ಯದ ವಸತಿ ಗೃಹಗಳಲ್ಲ. ಋತುಮತಿ, ಋತುಸ್ರಾವ ಮತ್ತು ಬಾಣಂತನಗಳ ಮಹತ್ವ, ಒಳಿತು ಕೆಡುಕುಗಳ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ.[೭]

ಪ್ರಸ್ತುತ ಸಂಶೋಧಕರ ಮತ್ತು ಚಿಂತಕರ ಅಭಿಪ್ರಾಯಗಳು ಏನೇ ಇದ್ದರೂ ಬುಡಕಟ್ಟು ಸಮುದಾಯಗಳು ಸಾಮಾಜಿಕ ಆರ್ಥಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಾಗುತ್ತಿರುವುದು ಸತ್ಯ ಸಂಗತಿ. ಇದರ ವೇಗವನ್ನು ಹೆಚ್ಚಿಸಲು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯನ್ನು ತೀವ್ರಗೊಳಿಸಲು, ವನವಾಸಿ, ಹಾಗೂ ಬುಡಕಟ್ಟು ಅಭಿವೃದ್ಧಿಗೆ ಕಾಲಬದ್ಧ ಯೋಜನೆಯನ್ನು ರೂಪಿಸುವಂತೆ ಪಶ್ಚಿಮಘಟ್ಟ ಕಾರ್ಯಪಡೆಯ ಅಧ್ಯಕ್ಷರಾದ ಅನಂತ ಹೆಗಡೆ ಆಶೀಸರ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಈ ಕೆಳಕಂಡ ವಿಶಿಷ್ಟ ಅಂಶಗಳನ್ನು ಶಿಪಾರಸ್ಸು ಮಾಡಿದೆ.

- ಅಂದಾಜು ಮೂರುಲಕ್ಷ ವನವಾಸಿ/ಬುಡಕಟ್ಟು ಜನಾಂಗದವರು ಪಶ್ಚಿಮಘಟ್ಟದಲ್ಲಿ ವಾಸವಾಗಿದ್ದು ಶಿಕ್ಷಣ, ಆರೋಗ್ಯ ಸೇರಿ ಮೂಲಸೌಕರ್ಯ ಒದಗಿಸುವುದು.
- ಅರಣ್ಯ ಇಲಾಖೆಯ ಕೆಳಹಂತದ ಸಿಬ್ಬಂದಿ ನೇಮಕದಲ್ಲಿ ವನವಾಸಿ ಬುಡಕಟ್ಟು ಜನಾಂಗದವರನ್ನು ಪರಿಗಣಿಸಲು ಸರಕಾರಿ ಆದೇಶ ಹೊರಡಿಸುವುದು.
- ಪಶ್ಚಿಮಘಟ್ಟದ ಜಿಲ್ಲೆಗಳಲ್ಲಿ ಟ್ರೈಬಲ್ ಅಧಿಕಾರಿ ನೇಮಕ ಬಾಕಿಯಿದ್ದು ಶೀಘ್ರ ನೇಮಕ ಮಾಡಬೇಕು.

- ವನವಾಸಿಗಳು/ಬುಡಕಟ್ಟು ಸಮುದಾಯಗಳು ಹೆಚ್ಚು ಇರುವ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ವನವಾಸಿ ಕ್ರೀಡಾ ಶಾಲೆ ತೆರೆಯಬೇಕು.
- ಮಲೆನಾಡು ಗಿಡ್ಡ ಜಾನುವಾರು ತಳಿ ರಕ್ಷಣೆ, ಸಂತತಿ ಅಭಿವೃದ್ಧಿ ನೀತಿ ರೂಪಿಸುವಂತೆ ಪಶುಸಂಗೋಪನಾ ಇಲಾಖೆ, ಪಶುವೈದ್ಯ ವಿಶ್ವವಿದ್ಯಾಲಯಕ್ಕೆ ಸೂಚಿಸಬೇಕು.
- ಮಲೆನಾಡಿನಲ್ಲಿ ಉಪ ಬೆಳೆಯಾಗಿ ಬಾಳೆ ಬೆಳೆಯಲು ಆಯ-ವ್ಯಯದಲ್ಲಿ ಸಹಾಯಧನ ನೀಡಬೇಕು.

ಇಂತಹ ಸಲಹೆ, ಸೂಚನೆ ಶಿಫಾರಸುಗಳು ಕೇವಲ ಕಾಗದದ ಮೇಲೆ ಉಳಿಯದೇ ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಬೇಕಾದರೆ, ಅಭಿವೃದ್ಧಿ ಎಂಬುದನ್ನು ಸಂಸ್ಥೆಯೊಂದು ಹೇಗೆ ಗ್ರಹಿಸುತ್ತದೆ ಮತ್ತು ಯಾವ ರೀತಿ ಅದರ ಮೌಲ್ಯ ನಿರ್ಧರಿಸುತ್ತದೆ ಎಂದು ನೋಡದೇ, ನಾವು ಕೆಲಸ ಮಾಡುವ ಸಮುದಾಯದ ಜನರ ದೃಷ್ಟಿಕೋನದಿಂದ ಅದನ್ನು ನೋಡಬೇಕಾಗುತ್ತದೆ. ಬುಡಕಟ್ಟು ಸಮುದಾಯಗಳ ಮೇಲೆ ಏನನ್ನೂ ಬಲವಂತವಾಗಿ ಹೇರದಂತೆ ನಿರ್ಬಂಧವಿರಬೇಕು. ಅವರಲ್ಲಿ ಇರುವ ಜ್ಞಾನವನ್ನು ಗೌರವಿಸಿ ಅವರನ್ನು ಸಮಭಾಗಿಗಳು ಎಂದು ಪರಿಗಣಿಸಿ, ಅವರ ಸಮಸ್ಯೆಗಳನ್ನು ಅವರೇ ಬಗೆಹರಿಸಿಕೊಳ್ಳುವ ರೀತಿಯಲ್ಲಿ ಅವರನ್ನು ಸಬಲರನ್ನಾಗಿ ಮಾಡಿದಾಗ ಮಾತ್ರ ಪ್ರಜಾಸತ್ತಾತ್ಮಕವಾದ ಹಾಗೂ ಅರ್ಥಪೂರ್ಣವಾದ ಅಭಿವೃದ್ಧಿಯನ್ನು ಸಾಧಿಸಿದಂತೆ ಆಗುತ್ತದೆ.

‘ಟ್ರೈಬಲ್ ಎಕಾನಮಿ ಇನ್ ಗುಜರಾತ್’ ಎಂಬ ಸಂಶೋಧನಾ ಪ್ರಬಂಧದಲ್ಲಿ **ಮಿಮಲ್ ಪಾ (೧೯೬೯)** ಅವರು, ಅಖಿಲ ಭಾರತ ಗ್ರಾಮೀಣ ಅಭಿವೃದ್ಧಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಇನ್ವೆಸ್ಟ್‌ಮೆಂಟ್ ಸಮೀಕ್ಷೆಯ ಆಧಾರದ ಮೇಲೆ ಗುಜರಾತಿನ ಬುಡಕಟ್ಟು ಆರ್ಥಿಕತೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಫಲಿತಗಳಲ್ಲಿ ಹೊರ ಹೊಮ್ಮಿರುವ ಪ್ರಮುಖ ಅಂಶಗಳೆಂದರೆ-ವೃತ್ತಿಗಳಲ್ಲಿ ವೈವಿಧ್ಯತೆ ಉಂಟಾಗುತ್ತಿರುವುದು, ಬುಡಕಟ್ಟಿನ ಬಹುಸಂಖ್ಯೆಯ ಜನರು ಕೃಷಿಯಲ್ಲಿ ಮುಂದುವರಿದಿರುವುದು, ಕೃಷಿಯನ್ನು ಆಧುನೀಕರಿಸಲು ಸ್ವಲ್ಪ ಮಟ್ಟಿನ ಬಂಡವಾಳ ಹೂಡಿಕೆ, ಉತ್ಪಾದನೆಯಲ್ಲಿ ಸ್ವಲ್ಪಮಟ್ಟಿನ ಹೆಚ್ಚಳ, ಮತ್ತು ಅನೇಕ ಜನರು ಹಣಕಾಸಿನ ವ್ಯವಹಾರಕ್ಕೆ ಸಾಂಪ್ರದಾಯಕ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನೇ ಅವಲಂಬಿ ಸಿರುವುದು ಇತ್ಯಾದಿಗಳು.[೯]

‘ಸೋಶಿಯೋ-ಕಲ್ಚರಲ್ ಇಂಪ್ಲಿಕೇಷನ್ ಆಫ್ ಇಂಡಸ್ಟ್ರಿಯಲೈಸೇಷನ್ ಇನ್ ಇಂಡಿಯಾ’ ಎಂಬ ಸಂಶೋಧನಾ ಪ್ರಬಂಧದಲ್ಲಿ **ಎಲ್.ಪಿ. ವಿಧ್ಯಾರ್ಥಿ(೧೯೭೦)** ಅವರು, ಬೃಹತ್ ಪ್ರಮಾಣದ ಕೈಗಾರಿಕೀಕರಣಕ್ಕಾಗಿ ಚೊಟನಾಗಪುರ ಪ್ರದೇಶದಲ್ಲಿ ಸಂಭವಿಸಿದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯನ್ನು ವಿವರಿಸಿದ್ದಾರೆ.[೧೦]

‘ಸ್ಟಡೀಸ್ ಇನ್ ಸೋಶಿಯಲ್ ಚೇಂಜ್ ಎತ್ನೋಗ್ರಾಫಿಕ್ ಅಂಡ್ ಫೋಕ್ ಕಲ್ಚರಲ್ ಸೊಸೈಟಿ’ ಎಂಬ ಗ್ರಂಥದಲ್ಲಿ **ಬಿ.ಕೆ. ರಾಯ್ ಬರ್ಮನ್ (೧೯೭೩)** ಅವರು, ಮಾಡ್ರನೈಸೆಷೆನ್ ಆಫ್ ಟ್ರೈಬಲ್ ಪೀಪಲ್ಸ್ ಇನ್ ಇಂಡಿಯನ್ ಬಾರ್ಡರ್ಸ್, ಎಂಬ ಸಂಶೋಧನಾ ಲೇಖನದಲ್ಲಿ,

ಭಾರತದ ಗಡಿಭಾಗಗಳ ಬುಡಕಟ್ಟು ಜನರ ಆಧುನೀಕರಣದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಬರ್ಮನ್ ಅವರ ಪ್ರಕಾರ ಬುಡಕಟ್ಟು ಜನರು ಬುಡಕಟ್ಟೇತರ ಜನರರೊಂದಿಗೆ ಜೀವಿಸುತ್ತಿದ್ದರೂ, ಕೆಲವೇ ಕೆಲವು ಅಂಶಗಳಲ್ಲಿ ಸಾಮಾನ್ಯ ಜೀವನ ಸಾಗಿಸುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ನಗರ ಪ್ರದೇಶದ ಬುಡಕಟ್ಟುಗಳ ಜನರು ಆಧುನಿಕ ತಂತ್ರಜ್ಞಾನವನ್ನು ಕೌಶಲ್ಯವನ್ನು ಅಳವಡಿಸಿ ಕೊಂಡಿದ್ದರೂ, ಈಗಲೂ ತಮ್ಮ ಬುಡಕಟ್ಟು ಜಗತ್ತಿನ ಭಾವನೆಗಳನ್ನು ಉಳಿಸಿಕೊಂಡಿದ್ದಾರೆ. ಪ್ರಾರಂಭಿಕ ಕಾಲದಲ್ಲಿ ಪ್ರಾದೇಶಿಕವಾಗಿ ಬುಡಕಟ್ಟು ಜನರು ತಮ್ಮ ಕೆಳಮಟ್ಟದ ಆಶೋತ್ತರಗಳಿಂದಾಗಿ ತಾವು ಅಲ್ಪಸಂಖ್ಯಾತರು ಎಂದು ಭಾವಿಸಿರಲಿಲ್ಲ. ಅದರೆ, ಈಗ ರಾಜಕೀಯ ಮತ್ತು ಉದ್ಯೋಗಗಳ ಆಕಾಂಕ್ಷೆಗಳಿಂದಾಗಿ ಪ್ರಾದೇಶಿಕ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಬುಡಕಟ್ಟು ಜನರು ತಾವು ಅಲ್ಪಸಂಖ್ಯಾತರು ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಇದು ನಿರ್ದಿಷ್ಟವಾಗಿ ಶಿಕ್ಷಣದ ಮೂಲಕ ಉಂಟಾಗುತ್ತಿರುವ ಆಧುನೀಕರಣದ ಪರಿಣಾಮವಾಗಿರಬಹುದು. ಆದಾಗ್ಯೂ, ಈ ಲೇಖನದಲ್ಲಿ ರಾಯ್ ಬರ್ಮನ್ ಅವರು ಬುಡಕಟ್ಟುಗಳ ಆಧುನೀಕರಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.[೬೧]

ಡೀನ್ ಜೋರಸ್ (೧೯೭೩) ಅವರು ತಮ್ಮ **'ಸೋಶಿಯಲೈಸೇಷನ್ ಆಫ್ ಪೊಲಿಟಿಕ್ಸ್'** ಎಂಬ ಸಂಶೋಧನಾ ಪ್ರಬಂಧದಲ್ಲಿ ಬುಡಕಟ್ಟುಗಳ ರಾಜಕೀಯ ಸಾಮಾಜೀಕರಣ ಮತ್ತು ಸಮೀಕರಣ ಪ್ರಕ್ರಿಯೆಗಳ ನಡುವಿನ ಸಂಬಂಧ ಮತ್ತು ಬುಡಕಟ್ಟುಗಳ ರಾಜಕೀಯ ಸಾಮಾಜೀ ಕರಣದ ಮೇಲೆ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಗಳ ಬಗ್ಗೆ ಹೆಚ್ಚು ಒತ್ತು ನೀಡಿ ಅಧ್ಯಯನ ಮಾಡಿದ್ದಾರೆ. ಡೀನ್ ಜೋರಸ್ ಅವರು ಬುಡಕಟ್ಟು ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿ ಬುಡಕಟ್ಟು ಜನರ ರಾಜಕೀಯ ಸಾಮಾಜೀಕರಣ ಪ್ರಕ್ರಿಯೆಯನ್ನು ವಿಶ್ಲೇಷಿಸಿದ್ದಾರೆ.[೬೨] ಇದೇ ಹಿನ್ನೆಲೆಯಲ್ಲಿ **'ಅಕಲ್ಚರೇಷನ್ ಅಂಡ್ ಇಂಟಿಗ್ರೇಷನ್ ಇನ್ ಟ್ರೈಬಲ್ ಲೈಫ್'** ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ **ಪಿ.ಆರ್.ಜಿ. ಮಾಥೂರ್ (೧೯೭೭)** ಅವರು ರಾಜಕೀಯ ಸಂಸ್ಕೃತಿಯ ಸೃಷ್ಟಿ ಮತ್ತು ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಲ್ಲಿ ಸಮೀಕರಣ ಗೊಳ್ಳುವುದು ಈ ಎರಡೂ ಒಂದೇ ಪ್ರಕ್ರಿಯೆಯ ಬೇರೆ ಬೇರೆ ಭಾಗಗಳಾಗಿವೆ ಮತ್ತು ಬುಡಕಟ್ಟು ಸಮುದಾಯಗಳು ರಾಜಕೀಯ ಸಾಮಾಜೀಕರಣವನ್ನು ಸಾಧಿಸದ ಹೊರತು ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಲ್ಲಿ ಸಮೀಕರಣಗೊಳ್ಳುವುದು ಸಾಧ್ಯವಿಲ್ಲ ಎಂದಿದ್ದಾರೆ.[೬೩] ಬುಡಕಟ್ಟುಗಳು ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಲ್ಲಿ ಸಮೀಕರಣಗೊಳ್ಳುವುದಕ್ಕೆ ಮೊದಲು ರಾಜಕೀಯ ಸಾಮಾಜೀಕರಣ ಗೊಳ್ಳವುದು ಅತ್ಯಂತ ಅವಶ್ಯಕ ಡೀನ್ ಜೋರಸ್ ಮತ್ತು ಪಿ.ಆರ್.ಜಿ ಮಾಥೂರ್ ಅವರು ಹೇಳಿರುವ ಹಾಗೆ ಬುಡಕಟ್ಟು ಜನರ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೆ ಬುಡಕಟ್ಟು ಕಲ್ಯಾಣ ಕಾರ್ಯ ಕ್ರಮಗಳ ಮತ್ತು ರಾಜಕೀಯ ಸಾಮಾಜೀಕರಣದ ಪ್ರೇರಣೆ ಮತ್ತು ಉದ್ದೇಶಗಳು ಪ್ರಮುಖವಾಗಿರುತ್ತವೆ.

'ಟ್ರೈಬಲ್ ಲೈಫ್ ಇನ್ ಇಂಡಿಯಾ' ಎಂಬ ಸಂಶೋಧನಾ ಪ್ರಬಂಧದಲ್ಲಿ, **ಬೋಸ್ ನಿರ್ಮಲ್ ಕುಮಾರ್ (೧೯೭೭)** ಅವರು ಬುಡಕಟ್ಟುಗಳ ಸಾಮಾಜಿಕ ಜೀವನದ ಬಗ್ಗೆ ಹೇಳುತ್ತ,

ಬುಡಕಟ್ಟುಗಳು ಅವರ ಸಾಮಾಜಿಕ ವ್ಯವಸ್ಥೆಯಲ್ಲಿ ಇತರರಿಗಿಂತ ಭಿನ್ನವಾಗಿದ್ದಾರೆ ಎಂದು ಹೇಳಿದ್ದಾರೆ. ಅವರು ತಮ್ಮ ವೈವಾಹಿಕ ನಿಯಮಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಅವರದೇ ಆದ ಸಮೂಹದ ಒಳಗೆ ವಿವಾಹ ಸಂಬಂಧ ಬೆಳೆಸುತ್ತಾರೆ ಮತ್ತು ಕೆಲವು ವೇಳೆ ಆಂತರಿಕ ಮತ್ತು ಬಾಹ್ಯ ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ಬುಡಕಟ್ಟಿನ ಮುಖ್ಯಸ್ಥ ಅಥವಾ ರಾಜಕೀಯ ನಾಯಕರಿಂದ ಮಾರ್ಗದರ್ಶನ ಪಡೆಯುತ್ತಾರೆ. ಮತ್ತೊಂದು ರೀತಿಯಲ್ಲಿ ಬುಡಕಟ್ಟಿಗೆ ಸೇರಿದವರು ವಿಶೇಷ ಸೌಲಭ್ಯಕ್ಕಾಗಿ 'ಪರಿಶಿಷ್ಟ ಬುಡಕಟ್ಟು' ಎಂಬ ಸಮೂಹದ ಹೆಸರಿನೊಂದಿಗೆ ವಿಭಿನ್ನ ಸಮುದಾಯವನ್ನೇ ರೂಪಿಸಿಕೊಂಡಿದ್ದಾರೆ ಹಾಗೂ ಅವರು ಸ್ವಲ್ಪ ಸಮಯದಲ್ಲೇ ಭಾರತದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನದ ಮುಖ್ಯವಾಹಿನಿಗೆ ಬರುತ್ತಾರೆ ಎಂದು ಚರ್ಚಿಸಿದ್ದಾರೆ.[೭೪]

'ಪ್ರೊಸೆಸ್ ಆಫ್ ಟ್ರೈಬಲ್ ಯೂನಿಫಿಕೇಷನ್ ಆಂಡ್ ಇಂಟಗ್ರೇಷನ್' ಎಂಬ ಸಂಶೋಧನಾ ಗ್ರಂಥದಲ್ಲಿ **ಎಸ್.ಎಲ್. ಜೋಶಿ (೧೯೭೮)** ಅವರು 'ಬುಡಕಟ್ಟು ಜನರು ರಾಜಕೀಯ ಸಾಮಾಜೀಕರಣದ ಪರಿಣಾಮವಾಗಿ ವಿಶಾಲವಾದ ಸಮಾಜದಲ್ಲಿ ಸಮೀಕರಣಗೊಳ್ಳುತ್ತಿದ್ದಾರೆ. ಅವರು ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಸಂಸ್ಥೆಗಳು ಮತ್ತು ಮೌಲ್ಯಗಳೊಂದಿಗೆ ಗುರುತಿಸಿಕೊಳ್ಳುವ ಬಗ್ಗೆ ಅರಿವುಳ್ಳವರಾಗಿದ್ದಾರೆ; ಹಾಗೆಯೇ ಬುಡಕಟ್ಟುಗಳ ಆರ್ಥಿಕ ಅಂಶಗಳನ್ನು ಬುಡಕಟ್ಟೇತರರು ಗಣನೆಗೆ ತೆಗೆದುಕೊಳ್ಳದಿರುವುದನ್ನೂ ಅಧ್ಯಯನದಲ್ಲಿ ಗುರುತಿಸಿದ್ದಾರೆ.[೭೫]

ಗೋಪಾಲ್ ರಾವ್ ಎನ್. (೧೯೭೮) ಅವರು ತಮ್ಮ **'ಲ್ಯಾಂಡ್ ಆಲಿನೇಷನ್–ಎ ಮಿನೇಸ್ ಆಫ್ ಟ್ರೈಬಲ್ ಎಕಾನಮಿ'** ಎಂಬ ಸಂಶೋಧನಾ ಪ್ರಬಂಧದಲ್ಲಿ ಬುಡಕಟ್ಟು ಜನರ ಭೂಮಿಯು ಬುಡಕಟ್ಟೇತರರಿಗೆ ವರ್ಗಾವಣೆಯಾಗುತ್ತಿರುವ ಪ್ರಕ್ರಿಯೆಯನ್ನು ಅಧ್ಯಯನ ಮಾಡಿದ್ದಾರೆ. ಇವರ ಈ ಅಧ್ಯಯನದಿಂದ ಹೊರ ಹೊಮ್ಮಿರುವ ಅಂಶಗಳೆಂದರೆ– ಲೇವಾದೇವಿದಾರರು ಅವರಿಗೆ ಕೃಷಿ ಚಟುವಟಿಕೆಗಳಿಗಾಗಿ ಮತ್ತು ಇತರ ವೆಚ್ಚಗಳಿಗಾಗಿ ಹಣಕಾಸು ನೆರವು ನೀಡಿ, ಅವರ ಭೂಮಿಯನ್ನು ಅಡಮಾನ್ ಮಾಡಿಕೊಂಡು ಕೊನೆಗೆ ಆ ಭೂಮಿಯನ್ನು ತಮ್ಮದನ್ನಾಗಿಸಿಕೊಳ್ಳುತ್ತಿರುವುದು ಬೆಳಕಿಗೆ ಬಂದಿದೆ ಎಂಬುದನ್ನು ಹೊರಗೆಡವಿದ್ದಾರೆ.[೭೬]

'ಜರ್ನಲ್ ಆಫ್ ಸೋಶಿಯಲ್ ರೀಸರ್ಚ'ನ ೨೩ನೇ ಸಂಪುಟದಲ್ಲಿ **ಬಿ.ಕೆ. ರಾಯ್ ಬರ್ಮನ್ (೧೯೭೯)** ಅವರ 'ಸಮ್ ಡೈಮೆನ್ಶನ್ಸ್ ಆಫ್ ಟ್ರಾನ್ಸಫಾರಮೇಷನ್ ಆಫ್ ಟ್ರೈಬಲ್ ಸ್ಟಡೀಸ್ ಇನ್ ಇಂಡಿಯ' ಎಂಬ ಸಂಶೋಧನಾ ಪ್ರಬಂಧದಲ್ಲಿ ರಾಯ್ ಬರ್ಮನ್‌ರವರು ಬುಡಕಟ್ಟುಗಳ ಸಮೀಕರಣ ಪ್ರಕ್ರಿಯೆಯ ಬಗ್ಗೆ ಚರ್ಚಿಸುತ್ತ ಬುಡಕಟ್ಟುಗಳ ಸಮೀಕರಣ ಪ್ರಕ್ರಿಯೆಯು, ಸ್ವತಂತ್ರ ಆಲೋಚನೆ, ಜನತಂತ್ರಾಧರಿತ ಜೀವನ ಶೈಲಿ, ಧರ್ಮನಿರಪೇಕ್ಷತೆ ಮತ್ತು ಯೋಜಿತ ಆರ್ಥಿಕತೆ ಎಂಬ ನಾಲ್ಕು ಅಂಶಗಳಿಗೆ ಸಂಬಂಧಿಸಿದೆ. ಬುಡಕಟ್ಟುಗಳು ಮುಖ್ಯವಾಹಿನಿಯಲ್ಲಿ ವಿಲೀನವಾಗಲು ಈ ಮೇಲಿನ ಅಂಶಗಳು ಅವಶ್ಯಕ ಎಂದಿದ್ದಾರೆ.[೭೭]

ದೇವೇಂದ್ರ ಠಾಕೂರ್ (೧೯೮೬) ಅವರ **'ಸೋಶಿಯೋ ಎಕನಾಮಿಕ್ ಡೆವಲಪಮೆಂಟ್ ಆಫ್ ಟ್ರೈಬ್ಸ್ ಇನ್ ಇಂಡಿಯಾ'** ಎಂಬ ಸಂಶೋಧನಾ ಪ್ರಬಂಧದಲ್ಲಿ ಠಾಕೂರ್‌ರವರು ಬಿಹಾರದ ಸಂತಾಲ ಬುಡಕಟ್ಟಿನ ಸಮಾಜಿಕ–ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಅವಧಿಯಲ್ಲಿ ಸಂತಾಲರು ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಹೇಗೆ ಸ್ಪಂದಿಸುತ್ತಾರೆ ಎನ್ನುವುದನ್ನು ಚಿತ್ರಿಸಿದ್ದಾರೆ.[೫೮]

ಎಲ್.ಸಿ. ಮೊಹಂತಿ (೧೯೮೯) ಅವರ **'ಅನ್ ಅನಾಲಿಸೀಸ್ ಆಫ್ ದಿ ಇಂಪ್ರೂವ್ಡ್ ಎಕಾನಾಮಿಕ್ ಲೈಫ್ ಆಪ್ ಟ್ರೈಬಲ್ಸ್ ಆಫ್ ಒರಿಸ್ಸಾ ಅಂಡ್ ದಿ ವೇ ಟುವರ್ಡ್ಸ ಇಂಟಿಗ್ರೇಷನ್'** ಎಂಬ ಸಂಶೋಧನಾ ಪ್ರಬಂಧವನ್ನು ದೀಪ್ ಮತ್ತು ದೀಪ್ ಪಬ್ಲಿಷರ್ಸ್ ಪ್ರಕಟಿಸಿದ್ದಾರೆ. ಇದರಲ್ಲಿ ಮೊಹಂತಿಯವರು, ಬುಡಕಟ್ಟು ಸಮೂಹಗಳು ಎಷ್ಟರ ಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ ಮತ್ತು ಬೃಹತ್ ಭಾರತೀಯ ಸಮಾಜದಲ್ಲಿ ಸಮೀಕರಣಗೊಳ್ಳುತ್ತಿದ್ದಾರೆ ಎನ್ನುವುದು ಗಮನಿಸಬೇಕಾದ ಅಂಶ ಎಂದು ಹೇಳಿದ್ದಾರೆ. ಬುಡಕಟ್ಟು ಜನರಿಗೆ ಅವರ ಬುದ್ಧಿವಂತಿಕೆಯನ್ನು ರುಜವಾತುಪಡಿಸಲು ಸ್ವಾತಂತ್ರ್ಯ ನೀಡಬೇಕು ಇದು ಬುಡಕಟ್ಟುಗಳ ಸಮಗ್ರತೆಗೆ ಸಹಾಯ ಮಾಡುತ್ತದೆ ಎಂದಿದ್ದಾರೆ.[೫೯]

ನಿರ್ಮಲ್ ಸೇನ್ ಗುಪ್ತಾ (೧೯೯೦) ಅವರ **'ದಿ ಸೋಶಿಯಲ್ ಅಂಡ್ ಎಕಾನಾಮಿಕ್ ಬೇಸಿಸ್ ಆಫ್ ಕರೆಂಟ್ ಟ್ರೈಬಲ್ ಮೂವ್‌ಮೆಂಟ್'** ಎಂಬ ಸಂಶೋಧನಾ ಪ್ರಬಂಧದಲ್ಲಿ ಹೇಳಿರುವಂತೆ, ತೀವ್ರವಾದ ಕೈಗಾರಿಕೀಕರಣ ಪ್ರಕ್ರಿಯೆಯು ಬುಡಕಟ್ಟುಗಳ ಸಮಸ್ಯೆಗಳಿಗೆ ಹೊಸ ಆಯಾಮಗಳನ್ನು ಒದಗಿಸಿದೆ. ಬುಡಕಟ್ಟುಗಳ ಬಹುಸಂಖ್ಯೆಯ ಜನರು ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳೊಂದಿಗಿರುವ ಪ್ರಕೃತಿಯ ಮಡಿಲಿನಲ್ಲಿ ಕೇಂದ್ರೀಕೃತವಾಗಿದ್ದಾರೆ. ಅಂತಹ ಪ್ರದೇಶಗಳಲ್ಲಿನ ಸಂಪನ್ಮೂಲಗಳನ್ನಾಧರಿಸಿ, ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ ಅನಿವಾರ್ಯವಾಗಿ ಬುಡಕಟ್ಟುಗಳನ್ನು ಸ್ಥಳಾಂತರಗೊಳ್ಳುವಂತೆ ಮಾಡಬೇಕಾಗುತ್ತದೆ ಎಂದಿದ್ದಾರೆ.[೬೦]

ಮಧುಸೂದನ ತ್ರಿವೇದಿ (೧೯೯೧) ಅವರ **'ಎಂಟರ್‌ಪ್ರಿನಿಯರ್‌ಶಿಪ್ ಅಮಾಂಗ್ ಟ್ರೈಬಲ್ಸ್'** ಎಂಬ ಸಂಶೋಧನಾ ಪ್ರಬಂಧದಲ್ಲಿ ತ್ರಿವೇದಿಯವರು ಬುಡಕಟ್ಟುಗಳ ಉದ್ಯಮಶೀಲತೆಯ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಅವರ ಪ್ರಕಾರ ಉದ್ಯಮಶೀಲತೆಯು ಬುಡಕಟ್ಟುಗಳಿಗೆ ಒಂದು ಅಸಂಪ್ರದಾಯ ಬದ್ಧ ಕಾರ್ಯಸಾಹಸವಾಗಿದೆ. ಅಭಿವೃದ್ಧಿಯ ಪಥದಲ್ಲಿ ಇವರು ಹೊಸ ಬೆಳೆಗಳನ್ನು ಬೆಳೆಯ ತೊಡಗುತ್ತಿದ್ದಾರೆ. ಅವರ ಕೃಷಿ ಆಚರಣೆಗಳಲ್ಲಾಗುತ್ತಿರುವ ವಾಣಿಜ್ಯೀಕರಣದ ಆರ್ಥಿಕ ರೂಪಾಂತರವು ಬಂಡವಾಳಶಾಹಿ ಆರ್ಥಿಕತೆಯತ್ತ ಅವರನ್ನು ಕೊಂಡೊಯ್ಯುತ್ತಿದೆ. ಬಂಡವಾಳ ಶಾಹಿ ಪದ್ಧತಿಯು ಬುಡಕಟ್ಟುಗಳಲ್ಲಿ ವರ್ಗಸ್ತರೀಕರಣವನ್ನುಂಟು ಮಾಡುತ್ತಿದೆ ಎನ್ನುತ್ತಾರೆ. ಈ ಸಂಶೋಧನೆಯು ಬುಡಕಟ್ಟುಗಳಲ್ಲಿ ಬಂಡವಾಳವಾದದ ಉಗಮ ಮತ್ತು ವರ್ಗ ಸಮೂಹಗಳ ಉದಯದಿಂದ ಬುಡಕಟ್ಟುಗಳ ಮೇಲಾಗುತ್ತಿರುವ ಸಾಮಾಜಿಕ ಪರಿಣಾಮಗಳ ಮೇಲೆ ಬೆಳಕು ಚೆಲ್ಲುತ್ತದೆ.[೬೧]

ತರುಣ್ ಬಿಖಾಶ್ ಸುಕಾಯ್ (೨೦೧೦) ಅವರ **'ಟ್ರೈಬಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ: ಆನ್ ಓವರ್ ವ್ಯೂ'** ಎಂಬ ಪ್ರಬಂಧದಲ್ಲಿ ಹೇಳಿರುವಂತೆ, ಬುಡಕಟ್ಟು ಸಮುದಾಯದ ಅಭಿವೃದ್ಧಿ ತೀವ್ರವಾಗಿ ಆಗಬೇಕಾದರೆ ಬುಡಕಟ್ಟುಗಳ ಭೌಗೋಳಿಕ ಮತ್ತು ಜನಸಂಖ್ಯಾತ್ಮಕ ವಿಚಾರಗಳಲ್ಲಿನ ಸಮಸ್ಯೆಗಳಿಗೆ ಪರಿಶ್ರಮಪೂರ್ಣ ಕ್ರಮಗಳ ಮೂಲಕ ಅಭಿವೃದ್ಧಿಯ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಕೆಲವು ಅಭಿವೃದ್ಧಿ ಯೋಜನೆಗಳು, ನೀತಿಗಳು ಮತ್ತು ಕಾರ್ಯಕ್ರಮಗಳ ಸಹಾಯದಿಂದ ಪರಿಶಿಷ್ಟ ಬುಡಕಟ್ಟುಗಳ ಸಾಮಾಜಿಕ ಅಂತಸ್ತನ್ನು ಉತ್ತಮಗೊಳಿಸಲಾಗುತ್ತಿದೆ. ಆದರೆ ಇತರ ಸಮುದಾಯಗಳಂತೆ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಇನ್ನೂ ಪ್ರಾಮಾಣಿಕ ಪ್ರಯತ್ನದ ಅವಶ್ಯಕತೆ ಇದೆ. ಬುಡಕಟ್ಟೇತರ ಜನರಿಂದ ಬುಡಕಟ್ಟು ಜನರ ಭೂಮಿಯನ್ನು ಅವರಿಗೆ ಉಳಿಸಿಕೊಡಬೇಕಾಗಿದೆ. ೧೯೮೦ರ ಅರಣ್ಯ ಸಂರಕ್ಷಣಾ ನೀತಿಯ ರಾಷ್ಟ್ರೀಯ ಕಾಯಿದೆಯನ್ನು ಪುನರ್ ಪರಾಮರ್ಶಿಸಬೇಕಾಗಿದೆ. ಶುದ್ಧ ಕುಡಿಯುವ ನೀರು ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು; ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದ ಸಂತ್ರಸ್ಥರಾದವರಿಗೆ ಪರಿಣಾಮ ಕಾರಿಯಾಗಿ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವುದು; ಪ್ರಸ್ತುತ ಇರುವ ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಖಾಸಗಿ ಲೇವಾದಾರರು ಮತ್ತು ವ್ಯಾಪಾರಸ್ಥರ ದುಷ್ಟ ಚಟುವಟಿಕೆಗಳನ್ನು ಅಡಗಿಸಬೇಕು. ಸಮಾಜದ ಬೆಳವಣಿಗೆಯಲ್ಲಿ ಮಹಿಳೆಯರು ಮಹತ್ವದ ಪಾತ್ರ ನಿರ್ವಹಿಸುತ್ತಿರುವುದರಿಂದ ಅವರ ಪ್ರತಿಭೆ ಮತ್ತು ಕೌಶಲ್ಯಗಳನ್ನು ಉನ್ನತಿಗೊಳಿಸುವ ಮೂಲಕ ಬುಡಕಟ್ಟು ಮಹಿಳೆಯರಲ್ಲಿ ಸಬಲೀಕರಣ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ಸ್ವಾತಂತ್ರ್ಯ ನಂತರ ಭೂಮಿ ಮತ್ತು ಅರಣ್ಯಗಳ ಮೇಲಿನ ಬುಡಕಟ್ಟು ಜನರ ಹಕ್ಕುಗಳನ್ನು ಸಂರಕ್ಷಿಸಲು ಸರಕಾರ ಹಲವಾರು ನಿಯಮಗಳ ಮೂಲಕ ಒತ್ತು ಕೊಡುತ್ತಿದೆ. ಆದರೆ ವಾಸ್ತವಿಕವಾಗಿ ಬುಡಕಟ್ಟು ಸಮುದಾಯವು ಭೂಮಿ, ಅರಣ್ಯ ಮತ್ತು ನದಿಗಳಂತಹ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ತಮ್ಮ ಸಾಂಪ್ರದಾಯಿಕ ಹಕ್ಕುಗಳಿಂದ ನಿರಂತರವಾಗಿ ಪರಾಧೀನತೆಗೆ ಒಳಗಾಗುತ್ತಿದೆ. ಇದರಿಂದ ಅವರ ಮೂಲ ಅಸ್ತಿತ್ವವೇ ನಾಶ ವಾಗುತ್ತಿದೆ. ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸಾಮರಸ್ಯದ ಆಧಾರದ ಮೇಲೆ ಸರ್ಕಾರವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಆದರೆ ಭಾರತದಲ್ಲಿ ಬುಡಕಟ್ಟು ಜನರ ಅಭಿವೃದ್ಧಿ ಇನ್ನೂ ಸಮರ್ಪಕವಾಗಿಲ್ಲ ಎಂದು ಹೇಳುತ್ತಾರೆ.[೮೨]

'ಟ್ರೈಬಲ್ ಡಿಸ್‌ಪ್ಲೇಸ್‌ಮೆಂಟ್, ದೆರ್ ರೈಟ್ ಟು ಲೈವ್‌ಲೀವುಡ್ ಕೆನ್ ನಾಟ್ ಬಿ ಡಿಸ್ಟರ್ಬ್ಡ್' ಇದರಲ್ಲಿ **ದೂರ್ಜತಿ ಮುಖರ್ಜಿ** (೨೦೧೦) ಅವರು ಉಲ್ಲೇಖಿಸಿರುವಂತೆ, '೧೯೫೦ರಿಂದೀಚೆಗೆ ಬೃಹತ್ ಯೋಜನೆಗಳ ಅನುಷ್ಠಾನದಿಂದ ೮೫.೩೯ ಲಕ್ಷ ಬುಡಕಟ್ಟು ಜನರು ಸ್ಥಳಾಂತರಗೊಂಡಿದ್ದಾರೆ. ಭಾರತದಲ್ಲಿ ಒಟ್ಟು ಸ್ಥಳಾಂತರಗೊಂಡ ಜನರಲ್ಲಿ ಶೇ. ೫೫ರಷ್ಟು ಜನರು ಬುಡಕಟ್ಟು ಸಮುದಾಯ ದವರಾಗಿದ್ದಾರೆ. ೧೯೮೦ರಿಂದ ೯.೮ ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯನ್ನು ೧೧,೨೮೭ ವಿಧದ ಯೋಜನೆಗಳಾಗಿ ಉಪಯೋಗಿಸಿಕೊಳ್ಳಲಾಗಿದೆ.[೮೩] ಒರಿಸ್ಸಾದಲ್ಲಿ ಶೇ. ೫೪-೫೫ರಷ್ಟು ಬುಡಕಟ್ಟು ಜನರಿಗೆ ಸೇರಿದ ಭೂಮಿ ಬುಡಕಟ್ಟೇತರ ಪಾಲಾಗಿದೆ'. ರಾಷ್ಟ್ರೀಯ ಸಲಹಾ ಮಂಡಳಿ(National

Advisory Board)ಯ ಸದಸ್ಯರಾದ ಎನ್.ಸಿ. ಸಕ್ಸೇನಾರವರ ಮಾಹಿತಿಯನ್ನು ಈ ಲೇಖನದಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಪ್ರಸ್ತುತ ಸ್ಥಿತಿಗತಿಯನ್ನು ಗಮನಿಸಿದಾಗ, ಯಾವ ಸ್ಥಳದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಮತ್ತು ಆ ಪ್ರದೇಶದಲ್ಲಿನ ಬುಡಕಟ್ಟು ಸಮೂಹಗಳನ್ನು ಒಳಗೊಂಡ ನಾಗರಿಕ ಸಮಾಜದ ಸಂಘಟನೆಗಳ ಅವಶ್ಯಕತೆ ಇದ್ದರೆ, ಅವುಗಳ ಸಹಭಾಗಿತ್ವವನ್ನು ಒಳಪಡಿಸಿಕೊಂಡು, ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಭ್ರಷ್ಟಾಚಾರ ರಹಿತ ಮತ್ತು ಕೆಳಮಟ್ಟದಲ್ಲಿ ಅನುಷ್ಠಾನಗೊಳಿಸ ಬಹುದಾದಂತಹ ಯೋಜನೆಗಳನ್ನು ರೂಪಿಸುವ ಅವಶ್ಯಕತೆ ಇದೆ.

'ಎ ಡೋರ್ ಕ್ಲೋಸಿಂಗ್ ಫಾರ್ ಆದಿವಾಸೀಸ್' ಎಂಬ ಸಂಶೋಧನಾ ಕೃತಿಯಲ್ಲಿ **ಪ್ರತಿಮಾ ನಾಗವಂಶಿ (೨೦೧೦)** ಯವರು ಶೋಧಿಸಿರುವಂತೆ, 'ಪ್ರಮುಖ ವಿಷಯವಾಗಿರುವ ಬುಡಕಟ್ಟು ಜನರ ಸಂರಕ್ಷಣಾತ್ಮಕ ವ್ಯವಸಾಯದ ಜೊತೆಗೆ, ಜನರಿಗೆ ಉದ್ಯೋಗಗಳನ್ನು ಸರಿದೂಗುವಂತೆ ಮಾಡುವುದು ಸರ್ಕಾರಕ್ಕೆ ಸಂಬಂಧಿಸಿದ ವಿಚಾರ. ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಸಾಲ ಸೌಲಭ್ಯಕ್ಕೆ ಸಂಬಂಧಿಸಿದಂತೆ ಆದಿವಾಸಿಗಳ ವ್ಯವಸಾಯದ ಆಧುನಿಕ ತಾಂತ್ರಿಕ ಜ್ಞಾನವನ್ನು ಪೂರೈಸುವುದು ಸರ್ಕಾರದ ಜವಾಬ್ದಾರಿ. ಪ್ರಾಥಮಿಕವಾಗಿ ಅರಣ್ಯದ ಅಲೆಮಾರಿ ಆಹಾರ ಸಂಗ್ರಹಣೆ ಮತ್ತು ಮಧ್ಯಂತರ ಬೇಸಾಯ ಮಾಡುವ ಬುಡಕಟ್ಟುಗಳಿಗೆ ವಿಶಿಷ್ಟ ಕ್ರಮದ ಮೂಲಕ ಅಭಿವೃದ್ಧಿ ಸೌಲಭ್ಯ ಒದಗಿಸುವಲ್ಲಿ ಇತರ ಸಮುದಾಯಗಳೊಂದಿಗೆ ಹೋಲಿಸಿದಾಗ, ಬುಡಕಟ್ಟು ಸಮುದಾಯಗಳಿಗೆ ತಾರತಮ್ಯವಾಗುತ್ತಿದೆ. ಇದನ್ನು ನಿವಾರಿಸಬೇಕು. ಬುಡಕಟ್ಟು ಜನರ ಪ್ರಮುಖ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವ ಕಡೆಗೆ ಗಮನಹರಿಸ ಬೇಕಾಗಿದೆ. ಇದರಿಂದ ಬುಡಕಟ್ಟು ಸಮುದಾಯಗಳ ಜೀವನದ ಸುಧಾರಣೆಗಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲ ಸಕಾರಾತ್ಮಕವಾಗಿರುವಂತೆ ಶ್ರಮಿಸಬೇಕಾಗಿದೆ' ಎಂದು ಅಭಿಪ್ರಾಯಪಡುತ್ತಾರೆ.[೮೪]

'ನ್ಯೂ ಆಸ್ಪೆಕ್ಟ್ ಫಾರ್ ಎಕನಾಮಿಕ್ ಸಸ್‌ಟೈನಬಿಲಿಟಿ ಅಮಾಂಗ್ ದಿ ಟ್ರೈಬ್' ಎಂಬ ಸಂಶೋಧನಾ ಪ್ರಬಂಧದಲ್ಲಿನ **ತಾಂಕೇಶ ಜೋಶಿ** ಮತ್ತು **ಮುಕ್ತೇಶ್ ಜೋಶಿ (೨೦೧೦)** ಯವರ ಅಭಿಪ್ರಾಯದಂತೆ, ಬುಡಕಟ್ಟು ಯುವಕ ಯುವತಿಯರು 'ಪ್ರವಾಸಿಗರಿಗೆ ಮಾರ್ಗದರ್ಶನ ನೀಡುವರು ಮತ್ತು ಅವರು ಪ್ರವಾಸೋದ್ಯಮ ಉದ್ದಿಮೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದಾರೆ. ಬುಡಕಟ್ಟು ಯುವಕ ಯುವತಿಯರು ಪರಿಸರ ಪ್ರವಾಸೋದ್ಯಮ ಮಾರ್ಗದರ್ಶಕರಾಗಿ ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸಲು ಅವರಿಗೆ ತರಬೇತಿಯ ಅವಶ್ಯಕತೆ ಇದೆ. ಪರಿಸರ ಪ್ರವಾಸೋದ್ಯಮಕ್ಕೆ ಮಾರ್ಗದರ್ಶಕರ ನೇಮಕ ಮತ್ತು ತರಬೇತಿಗೆ ವಿಶೇಷ ಕ್ರಮ ಅನುಸರಿಸಬೇಕು. ಪರಿಸರ ಪ್ರವಾಸೋದ್ಯಮವು ಪ್ರಾದೇಶಿಕ ಅಭಿವೃದ್ಧ್ಯಾತ್ಮಕ ಉದ್ಯೋಗ, ನಿಸರ್ಗ ಸಂಪತ್ತು, ಜನಾಂಗದ ಮತ್ತು ಪರಿಸರ ಸಂರಕ್ಷಣೆಗೂ ಸಹಾಯಕವಾಗುತ್ತದೆ. ಬುಡಕಟ್ಟು ಜನರು ಸ್ಥಳೀಯ ಪರಿಸರ ಮತ್ತು ಪ್ರವಾಸಿ ಕ್ರೀಡೆಗಳ ಬಗ್ಗೆ ತಿಳುವಳಿಕೆಯುಳ್ಳವರಾಗಿರುತ್ತಾರೆ.[೮೫] ಆದ್ದರಿಂದ ಈ ಅಧ್ಯಯನದ ಫಲಿತಗಳಿಂದ ರಾಷ್ಟ್ರೀಯ ಉದ್ಯಾನಗಳಲ್ಲಿ ಬುಡಕಟ್ಟು ಯುವಕರಿಗೆ ಪ್ರವಾಸೋದ್ಯಮದ ಮಾರ್ಗದರ್ಶಕರಾಗಿ ತರಬೇತಿಗೊಳಿಸಿದರೆ ಸಾಮಾಜಿಕ ಪರಿವರ್ತಗಳಿಗೆ ಅನುಕೂಲವಾಗುತ್ತದೆ.

ಕೆ.ಜಿ. ಕರ್ಮಾಕರ (೨೦೦೨) ಅವರು **'ದಿ ಸೈಲೆನ್ಸ್ ಡ್ರಮ್ಸ್' (ಎ ರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪ್‌ಮೆಂಟ್)** ಎಂಬ ಪುಸ್ತಕದಲ್ಲಿ ಹೇಳಿರುವಂತೆ: 'ನೈಸರ್ಗಿಕ ಸಂಪನ್ಮೂಲಗಳ, ತರಬೇತಿ ಪಡೆದ ಮಾನವ ಸಂಪನ್ಮೂಲದ, ಬಂಡವಾಳ ಮತ್ತು ತಂತ್ರಜ್ಞಾನಗಳ ವಿಸ್ತರಿಸುವಿಕೆಯ ಮತ್ತು ದ್ವಿಗುಣಗೊಳ್ಳುತ್ತಿರುವ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಅವುಗಳನ್ನು ಹೇಗೆ ಉಪಯೋಗಿಸಿ ಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವ ಉನ್ನತವಾದ ಜೀವನಮಟ್ಟ ಮತ್ತು ಜೀವನವನ್ನು ಸಾಂಪ್ರದಾಯಕತೆಯಿಂದ ಆಧುನಿಕತೆಗೆ ಪರಿವರ್ತಿಸುವಂತೆ ಮಾಡಿ ಅದನ್ನು ಕ್ರಮಬದ್ಧವಾಗಿ ಸಜ್ಜುಗೊಳಿಸುವುದೇ ಅಭಿವೃದ್ಧಿ. ಕೈಗಾರೀಕರಣ ಮತ್ತು ಆಧುನೀಕರಣ ಗಳನ್ನು ಸಾಮಾನ್ಯವಾಗಿ ಪರಾಮರ್ಶಿಸುವುದೇ ಅಭಿವೃದ್ಧಿಯ ಅವಶ್ಯಕತೆ. ಅಭಿವೃದ್ಧಿ ಎನ್ನುವುದು ಬಹುದಿಶಾನುವರ್ತಿಯ ಪ್ರಕ್ರಿಯೆ ಮತ್ತು ಪರಿಕಲ್ಪನೆಯಾಗಿದೆ.[೬೬] ಸಾಮಾನ್ಯವಾಗಿ ಅಭಿವೃದ್ಧಿಯು ಅಪೇಕ್ಷಣೀಯವಾದ ಬದಲಾವಣೆಯ ಅಂಶವಾಗಿದೆ. ಸರ್ಕಾರದ ಕ್ರಿಯೆಗಳಿಂದ ಪ್ರಭಾವಿತವಾದ ಮತ್ತು ವಿಸ್ತೃತವಾಗಿ ಯೋಜನೆ ಆಡಳಿತಾತ್ಮಕವಾಗಿ ಅನುಷ್ಠಾನಗೊಳಿಸುವುದಾಗುತ್ತದೆ. ಹೀಗೆ ಅಭಿವೃದ್ಧಿಯ ಪರಿಕಲ್ಪನೆಯು ಬದಲಾವಣೆಯ ಅಂಶ, ಯೋಜನೆ ಮತ್ತು ಭವಿಷ್ಯದಲ್ಲಿ ಪ್ರತಿಫಲಗಳನ್ನು ಪಡೆಯುವ ಅಂಶ. ಯೋಜಿತ ಗುರಿಗಳ ಸಾಧನೆಗೋಸ್ಕರ ಸರ್ಕಾರದ ಪ್ರಾಮಾಣಿಕ ಪ್ರಯತ್ನ ಮತ್ತು ಒಳಗೊಳ್ಳುವಿಕೆ, ಜನರು ತಮ್ಮ ಆಶೋತ್ತರಗಳನ್ನು ತೃಪ್ತಿಪಡಿಸಿಕೊಳ್ಳಲು ಅವರನ್ನು ಪ್ರೋತ್ಸಾಹಿಸುವ ಆರ್ಥಿಕ ಅವಕಾಶಗಳು, ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಸೌಲಭ್ಯಗಳು, ಪಾರದರ್ಶಕ ಭರವಸೆಗಳು ಮತ್ತು ರಚನಾತ್ಮಕ ಭದ್ರತೆಗಳನ್ನು ಒಳಗೊಂಡು ನಿರ್ದಿಷ್ಟ ಮತ್ತು ನಿರ್ಣಾಯಕ ಸಾಂಸ್ಥಿಕ ಸ್ವಾತಂತ್ರ್ಯಗಳ ನಡುವಿನ ಅಂತರ್ ಸಂಪರ್ಕಗಳು ಮತ್ತು ಅವುಗಳ ಪಾತ್ರಗಳ ಆಧಾರದ ಮೇಲೆ ಅಭಿವೃದ್ಧಿಯ ಪರಿಕಲ್ಪನೆಯನ್ನು ಅರ್ಥೈಸಬೇಕಾಗಿದೆ. ರಾಜ್ಯ, ಮಾರುಕಟ್ಟೆ, ಕಾನೂನು ವ್ಯವಸ್ಥೆ, ರಾಜಕೀಯ ಪಕ್ಷಗಳು, ಮಾಧ್ಯಮಗಳು, ಸಾರ್ವಜನಿಕ ಆಸಕ್ತ ಸಮೂಹಗಳು, ಸಾರ್ವಜನಿಕ ಸಂಘಟನೆಗಳು, ಇಂತಹ ಸಾಂಸ್ಥಿಕ ವ್ಯವಸ್ಥೆಗಳನ್ನು ಒಳಗೊಂಡ ಸಾಮಾಜಿಕ ವ್ಯವಸ್ಥೆಯು ವ್ಯಕ್ತಿಗಳ ಮತ್ತು ಸಮುದಾಯಗಳ ನಿಜವಾದ ಸ್ವಾತಂತ್ರ್ಯವನ್ನು ವಿಸ್ತರಿಸುವ ಮತ್ತು ಅರ್ಹ ಭರವಸೆಗಳನ್ನು ನೀಡುತ್ತಿರುವುದರ ಬಗ್ಗೆ ಸಂಶೋಧನೆಗಳು ನಡೆಯಬೇಕಾಗಿದೆ.

ಅರ್ಥಶಾಸ್ತ್ರದ ಮೇಲಿನ ಸಾಂಪ್ರದಾಯಕ ಬರಹಗಾರರಾದ ಆಡಂ ಸ್ಮಿತ್, ಕಾರ್ಲ್‌ಮಾರ್ಕ್ಸ್, ಜೆ.ಎಸ್.ಮಿಲ್ ಮುಂತಾದವರು ಅಭಿಪ್ರಾಯಪಟ್ಟಿರುವಂತೆ, ಆರ್ಥಿಕ ಅಭಿವೃದ್ಧಿಯೇ ಅಂತಿಮವಲ್ಲ. ಇದು ಉನ್ನತ ಉದ್ದೇಶಗಳಿಗೆ ಸಾಧನ ಮಾತ್ರ ಎಂಬುದು ಹೊಸ ತತ್ವವಲ್ಲ. ಆರ್ಥಿಕ ಬೆಳವಣಿಗೆಯ ಅವಶ್ಯಕತೆಗಳಿಂದ ಸ್ವಾತಂತ್ರ್ಯದ ಕಡೆಗೆ ಸಾಗುವಂತಹ ಒಂದು ಪ್ರಕ್ರಿಯೆಯೇ ಅಭಿವೃದ್ಧಿ. ಅಭಿವೃದ್ಧಿಯ ಮೇಲಿನ ವಿಶ್ವಸಂಸ್ಥೆಯ ಇತ್ತೀಚಿನ ಪ್ರಕಟಣೆಗಳು, ಭಾರತದ ಪಂಚವಾರ್ಷಿಕ ಯೋಜನೆಗಳ ದಾಖಲೆಗಳೂ ಇದೆ ಅಭಿಪ್ರಾಯವನ್ನು ಹೇಳುತ್ತಿವೆ.

ಅಭಿವೃದ್ಧಿಯ ಪ್ರಮುಖ ಉದ್ದೇಶ ರಾಷ್ಟ್ರೀಯ ಮತ್ತು ತಲಾ ಆದಾಯವನ್ನು ಹೆಚ್ಚಿಸುವುದು. ಜನರ ಜೀವನವನ್ನು ಉತ್ತಮಪಡಿಸುವುದು ಮತ್ತು ನ್ಯಾಯ, ಸ್ವಾತಂತ್ರ್ಯ, ಸಮಾನತೆಗಳನ್ನು ಜನರು

ಪಡೆಯುವಂತೆ ಮಾಡುವುದು ಆಗಿರಬೇಕು. ಈ ಸಮಕಾಲಿನ ಪರಿಸ್ಥಿತಿಯಲ್ಲಿ ಅಭಿವೃದ್ಧಿಯ ಪ್ರಶ್ನೆಯು ಸಂಪತ್ತು ಮತ್ತು ಆದಾಯದ ಸಮಾನ ಹಂಚಿಕೆ, ಮಾನವ ಸಂಪನ್ಮೂಲದ ಸಮರ್ಪಕ ಸದುಪಯೋಗ, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ, ಮಾನವ ಮತ್ತು ನೈಸರ್ಗಿಕ ಪರಿಸರದ ಸಂರಕ್ಷಣೆ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತದೆ.

‘ಅಭಿವೃದ್ಧಿ ಮೀಮಾಂಸೆ’ ಎಂಬ ಪುಸ್ತಕದಲ್ಲಿ, **ಟಿ.ಆರ್. ಚಂದ್ರಶೇಖರ್**(೧೯೯೩) ಅವರು ಹೇಳಿರುವಂತೆ, ‘ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಕ್ರಿಯೆಯಲ್ಲ. ಸಾಮಾಜಿಕ–ಸಾಂಸ್ಕೃತಿಕ–ರಾಜಕೀಯ ನೆಲೆಗಳಿಂದ ಅಭಿವೃದ್ಧಿಯನ್ನು ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಮಾರುಕಟ್ಟೆ ವ್ಯವಸ್ಥೆ ಅದೆಷ್ಟೇ ದಕ್ಷವಾಗಿರಲಿ, ಸಮರ್ಥವಾಗಿರಲಿ, ಇಂದು ಸರ್ಕಾರದ ಸಹಾಯವಿಲ್ಲದೆ ಅಭಿವೃದ್ಧಿ ನಿರ್ವಹಿಸುವುದು ಸಾಧ್ಯವಿಲ್ಲ. ಸಾರ್ವಜನಿಕ ಒತ್ತಡವನ್ನು ಕಡೆಗಣಿಸುವಂತಿಲ್ಲ.[೮೭] ಅಭಿವೃದ್ಧಿಶೀಲ ಆರ್ಥಿಕತೆಗಳು ಮಾರುಕಟ್ಟೆ ಪರವಾದ ಆರ್ಥಿಕ ನೀತಿ ಹಾಗೂ ಸಾರ್ವಜನಿಕ ವಲಯ ಸರ್ಕಾರದ ಪರವಾದ ಆರ್ಥಿಕ ಅಂಶಗಳನ್ನು ಸೂಕ್ತವಾಗಿ ಸಮನ್ವಯಗೊಳಿಸಿಕೊಳ್ಳುವ ಅವಶ್ಯಕತೆ ಇದೆ.

ಅಂತೆಯೇ **‘ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು’** ಎಂಬ ಲೇಖನದಲ್ಲಿ **ಎಂ. ಚಂದ್ರ ಪೂಜಾರಿ**(೨೦೦೬) ಅವರು ಹೇಳಿರುವಂತೆ, ‘ಪ್ರತಿಯೊಂದು ಸಮುದಾಯವೂ ಇತರ ಸಮುದಾಯ ಗಳೊಂದಿಗೆ ಒಂದಲ್ಲ ಒಂದು ರೀತಿಯ ಸಂಬಂಧ ಮತ್ತು ಸಂಪರ್ಕವನ್ನು ಹೊಂದಿರುತ್ತವೆ. ಈ ಸಂಬಂಧಗಳು ಪ್ರತಿ ಸಮುದಾಯದ ಜೀವನ ವಿಧಾನವನ್ನು, ಆಲೋಚನಾ ಕ್ರಮಗಳನ್ನು ಮತ್ತು ಸುಖದ ಕಲ್ಪನೆಯನ್ನು ಪ್ರಭಾವಿಸುತ್ತವೆ. ಬುಡಕಟ್ಟುಗಳ ಉದಾಹರಣೆ ತೆಗೆದುಕೊಂಡರೆ, ಹಿಂದಿನ ರೀತಿಯಲ್ಲಿ ಅರಣ್ಯ ಅವರ ಮೂಲಭೂತ ಅವಶ್ಯಕತೆಗಳನ್ನು ಈಗ ಪೂರೈಸುತ್ತಿಲ್ಲ. ಮೂಲಭೂತ ಅವಶ್ಯಕತೆಗಳ ಪೂರೈಕೆಗಾಗಿ ಹೊರಗಿನ ಲೋಕದೊಂದಿಗೆ ಸಂಪರ್ಕ ಹೊಂದುವುದು ಅನಿವಾರ್ಯ. ಹೀಗೆ ಮತ್ತೊಂದು ಲೋಕದ ಸಂಪರ್ಕ ಬುಡಕಟ್ಟುಗಳ ಬದುಕಿನ ಕ್ರಮಗಳನ್ನು ಬದಲಾಯಿಸುತ್ತದೆ’.[೮೮]

ಈ ಮೇಲಿನ ಚಿಂತಕರುಗಳ ವಿಚಾರಗಳಿಂದ ಪ್ರಸ್ತುತ ಅಧ್ಯಯನದಲ್ಲಿ ಕೈಗೊಂಡಿರುವ ಬುಡಕಟ್ಟುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಉದ್ಭವವಾಗುವ ಸಮಸ್ಯೆ ಏನೆಂದರೆ ಪರಮಾಧಿ ಕಾರದ ಹೆಸರಿನಲ್ಲಿ ಈ ದೇಶದ ಪ್ರಭುತ್ವಕ್ಕೆ, ಎಲ್ಲಾ ಸಂಪನ್ಮೂಲಗಳ ಮೇಲೂ ಪರಮಾಧಿಕಾರ ಇದ್ದಾಗ, ಅದನ್ನು ಅತ್ಯಂತ ನಿರ್ಗತಿಕ ಮತ್ತು ಬಡವರ ಪರವಾಗಿ ಬಳಸುವುದು ಪ್ರಭುತ್ವ ಅಥವಾ ಸರ್ಕಾರದ ಕರ್ತವ್ಯ. ಆದರೆ ಜಾಗತಿಕರಣ ಮತ್ತು ಉದಾರಿಕರಣದ ಸಂದರ್ಭದಲ್ಲಿ ಸರ್ಕಾರವು ಖಾಸಗೀಕರಣಗೊಂಡಿದ್ದು, ಸಂಪನ್ಮೂಲಗಳನ್ನು ಮತ್ತು ಪೊಲೀಸ್ ಅಧಿಕಾರವನ್ನು ಕಾರ್ಪೊರೇಟ್ ಉದ್ಯಮ ವಲಯಗಳ ಪರವಾಗಿ ಬಳಸುತ್ತ ಅವರ ಏಜೆಂಟರಂತೆ ಕಾರ್ಯ ನಿರ್ವಹಿಸುತ್ತಿರುವಾಗ, ಅಮಾಯಕ ಬುಡಕಟ್ಟು ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಅಪೇಕ್ಷಣೀಯವಾದ ರೀತಿಯಲ್ಲಿ ಪರಿವರ್ತನೆ ಮಾಡುವುದು ಹೇಗೆ? ಅಥವಾ ಪರಿವರ್ತನೆ ಆಗುತ್ತದೆಯೇ? ಆಗಿದ್ದರೆ ಅದರ ಕಾರಣ ಮತ್ತು ಪರಿಣಾಮಗಳು ಹೇಗಿವೆ? ಎಂಬ ಪ್ರಶ್ನೆಗಳು ಉಂಟಾಗುತ್ತವೆ.

ಚಂದ್ರ ಪೂಜಾರಿ ಅವರ ವಿಚಾರಗಳಿಗೆ ಪೂರಕವಾಗಿ ಪರಿಸರವಾದಿ ಮತ್ತು ನರ್ಮದಾ ಬಚಾವ್ ಆಂದೋಲನದ ನಾಯಕಿ **ಮೇಧಾ ಪಾಟ್ಕರ್** ಇತ್ತೀಚೆಗೆ ದೂರದರ್ಶನ ವಾಹಿನಿ ಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಭಾರತದ ಪ್ರಭುತ್ವದ ಬಗ್ಗೆ ಹೀಗೆ ಹೇಳಿದ್ದಾರೆ: 'ಪರಮಾಧಿಕಾರದ ಹೆಸರಿನಲ್ಲಿ ಈ ದೇಶದ ಪ್ರಭುತ್ವಕ್ಕೆ, ಈ ದೇಶದ ಎಲ್ಲಾ ಸಂಪನ್ಮೂಲಗಳ ಮೇಲೆ ಪರಮಾಧಿಕಾರ ಇದ್ದಾಗ, ಅದನ್ನು ಅತ್ಯಂತ ನಿರ್ಲಕ್ಷಿತ ಸಮುದಾಯಗಳ ಪರವಾಗಿ ಬಳಸುವುದು ಅದರ ಕರ್ತವ್ಯ. ಆದರೆ ಜಾಗತಿಕರಣ ಮತ್ತು ಉದಾರಿಕರಣದ ಸಂದರ್ಭದಲ್ಲಿ ಪ್ರಭುತ್ವ ಖಾಸಗೀಕರಣ ಗೊಂಡಿದ್ದು, ಸಂಪನ್ಮೂಲಗಳನ್ನು ಮತ್ತು ಪೋಲಿಸ್ ಅಧಿಕಾರವನ್ನು ಕಾರ್ಪೋರೇಟ್ ಉದ್ಯಮಪತಿಗಳ ಪರವಾಗಿ ಬಳಸುತ್ತ ಅವರ ಏಜೆಂಟ್ ಆಗಿಬಿಟ್ಟಿದೆ'.

'ಟ್ರೈಬಲ್ ರೈಟ್ಸ್ ಅಂಡ್ ಡಿಸ್ಪ್ಯಾಪಸನ್ ಅಂಟ್ ದಿ ಸ್ಟೇಟ್ ಆಫ್ ಒರಿಸ್ಸಾ' ಎಂಬ ಸಂಶೋಧನಾ ಪ್ರಬಂಧದಲ್ಲಿ **ಜಗನ್ನಾಥ ಅಂಬಾಗುಡಿಯ (೨೦೧೦)** ಅವರ ಫಲಿತಗಳು ಹೇಳುವಂತೆ, ಭೂಮಿಯ ಮೇಲಿನ ಜನರ ಹಕ್ಕುಗಳನ್ನು ಸಂರಕ್ಷಿಸುವ ಕಾಯಿದೆಗಳು ಸರಕಾರ ಗಳಿಂದ ರೂಪಿಸಲ್ಪಡುತ್ತವೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಸರ್ಕಾರಿ ಅಧಿಕಾರಿಗಳೊಂದಿಗೆ ಅನೈತಿಕವಾಗಿ ಸೇರಿಕೊಂಡು ಬುಡಕಟ್ಟು ಜನರಿಗೆ ಮೋಸ ಮಾಡುವುದು ಅನುಭವದ ಸಂಗತಿಯಾಗಿದೆ. ಭಾರತ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಮಿತಿಮೀರಿದ ಶಾಸನಾತ್ಮಕ ಕ್ರಮಗಳ ಅನುಷ್ಠಾನವು, ಬುಡಕಟ್ಟು ಜನರು ಭೂಮಿಯೊಂದಿಗೆ ಹೊಂದಿರುವ ಸಂಬಂಧಕ್ಕೆ ಧಕ್ಕೆಯಾಗಿದೆ.[೯] ಇದರಿಂದ ವೇದ್ಯವಾಗುವುದೇನೆಂದರೆ ಇನ್ನು ಮುಂದೆ ಹೊಸ ಕಾಯಿದೆಗಳನ್ನು ರೂಪಿಸುವುದರ ಬದಲು ಪ್ರಸ್ತುತ ಅಸ್ತಿತ್ವದಲ್ಲಿರುವ ಕಾರ್ಯ ಕ್ರಮಗಳನ್ನು ಪ್ರತಿಯೊಂದು ಬುಡಕಟ್ಟು ಸಮೂಹಕ್ಕೂ ತಲುಪುವಂತೆ ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣ ವಾಗಿ ಅನುಷ್ಠಾನಗೊಳಿಸುವಂತೆ ಮಾಡುವುದು ರಾಜ್ಯ ಸರ್ಕಾರಗಳ ಸವಾಲು ಮಾತ್ರವಾಗಿರದೆ ಇಂತಹ ಸಂಶೋಧನಾ ಅಧ್ಯಯನಗಳ ಹೊಣೆಗಾರಿಯೂ ಆಗಬೇಕಾಗುತ್ತದೆ.

ಶ್ರೀ ರಮಾಕಾಂತ್ ಪ್ರಸಾದ್ (೧೯೮೮) ಅವರು ಬಿಹಾರದ ಸಣ್ಣ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿ ಅವುಗಳು ವಿವಿಧ ಪರಿಸರಗಳಲ್ಲಿ ನೆಲೆಸಿ ಜೀವಿಸುತ್ತಿರುವ ಬಗ್ಗೆ ಮತ್ತು ಜನಸಂಖ್ಯೆಯ ಬಗ್ಗೆ ವಿವರಿಸಿದ್ದಾರೆ. ವಿವಿಧ ಪರಿಸರದ ನೆಲೆಯೊಳಗೆ ಒಂದು ಸಣ್ಣ ಬುಡಕಟ್ಟು ಒಂದೇ ಸಾಂಸ್ಕೃತಿಕ ಪರಿಧಿಯೊಳಗೆ ವೈವಿಧ್ಯತೆಯನ್ನು ಹೊಂದಿರುವುದನ್ನು ಗುರುತಿಸಿದ್ದಾರೆ. ಈ ಪುಸ್ತಕದಲ್ಲಿ ಪಭಾಯಿಯಾ ಎಂಬ ಹೆಸರಿನ ಬುಡಕಟ್ಟು ಜನರ ಜೀವನವನ್ನು ಸಮಗ್ರವಾಗಿ ಚಿತ್ರಿಸಿದ್ದಾರೆ.[೧೦] ಒಂದು ಸಣ್ಣ ಬುಡಕಟ್ಟು ಸಮೂಹ ತನ್ನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಗಳಲ್ಲಿ ಹೇಗೆ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಹಾಯಕ ವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಅವರು ಎಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಭಾರತದಲ್ಲಿ ಇಂತಹ ಸಣ್ಣ ಬುಡಕಟ್ಟುಗಳ ಸಮಸ್ಯೆಗಳು ಮತ್ತು ಅವುಗಳ ಸಮಗ್ರ ವಿವರಣೆ ಮತ್ತು ಅವರ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ನೀಲ ನಕಾಶೆಗಳನ್ನು ಒದಗಿಸುತ್ತದೆ.

ಇದಕ್ಕೆ ಪೂರಕವಾಗಿ **ಎಲ್.ಸಿ. ಮೊಹಂತಿ (೧೯೮೯)** ಅವರು, 'ಬುಡಕಟ್ಟು ಜನರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ಬದಲಾಯಿಕೊಳ್ಳುತ್ತಿದ್ದಾರೆ ಮತ್ತು ಭಾರತದ ಸಮಗ್ರ ಜೀವನದ ಮುಖ್ಯವಾಹಿನಿಯಲ್ಲಿ ಹೇಗೆ ಮತ್ತು ಎಷ್ಟು ಪ್ರಮಾಣದಲ್ಲಿ ಸಮೀಕರಣಗೊಳ್ಳುತ್ತಿದ್ದಾರೆ ಎನ್ನುವುದನ್ನು ಮೌಲ್ಯಮಾಪನ ಮಾಡಬೇಕಾಗಿರುವುದು ಜರೂರಾಗಿ ಆಗಬೇಕಾಗಿರುವ ಕೆಲಸ ಎಂದಿದ್ದಾರೆ' ಮತ್ತು ಬುಡಕಟ್ಟು ಜನರಿಗೆ ಅವರ ಮೇಧಾವಿತನವನ್ನು ಪ್ರಕಟಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದರೆ ಅವರ ಜೀವನ ಶೈಲಿಯು ಉತ್ತಮ ರೀತಿಯಲ್ಲಿ ಪರಿವರ್ತನೆಯಾಗಲು ಸಹಾಯಕ ವಾಗುತ್ತದೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ.[೯೧]

ಇದಕ್ಕೆ ಪೂರಕವಾಗಿ **ಮಧುಸೂದನ್ ತ್ರಿವೇದಿ (೧೯೯೦)** ಅವರು ಬುಡಕಟ್ಟು ಸಮೂಹಗಳಲ್ಲಿನ ಉದ್ಯಮಶೀಲತೆಗೆ ಸಂಬಂಧಿಸಿದಂತೆ ಕೆಲವು ದೃಷ್ಟಿಕೋನಗಳನ್ನು ವ್ಯಕ್ತಪಡಿಸಿದ್ದಾರೆ. ಇವರು ರಾಜಸ್ಥಾನದ ಭಿಲ್ ಬುಡಕಟ್ಟನ್ನು ಅಧ್ಯಯನ ಮಾಡಿದ್ದಾರೆ. ಅವರ ಪ್ರಕಾರ ಉದ್ಯಮಶೀಲತೆಯು ಬುಡಕಟ್ಟು ಜನರಿಗೆ ಸಾಂಪ್ರದಾಯಕವಲ್ಲದ ಕಾರ್ಯವಾಗಿರುತ್ತದೆ. ಅಭಿವೃದ್ಧಿಯ ಪಥದಲ್ಲಿ ಅವರು ಹೊಸ ಪ್ರತಿಫಲಗಳನ್ನು ತೆಗೆದುಕೊಂಡು ತಮ್ಮ ಕೃಷಿ ಚಟುವಟಿಕೆಗಳನ್ನು ವಾಣಿಜ್ಯೀಕರಣ ಮತ್ತು ಯಾಂತ್ರೀಕರಣಕ್ಕೆ ಒಳಪಡಿಸಿಕೊಳ್ಳಬೇಕಾಗಿದೆ. ಬುಡಕಟ್ಟು ಜನರು ಒಳಗಾಗುತ್ತಿರುವ ಈ ಆರ್ಥಿಕ ಪರಿವರ್ತನೆಯಿಂದ ಅವರು ಬಂಡವಾಳಶಾಹಿ ಆರ್ಥಿಕತೆಗೆ ಒಳಗಾಗುತ್ತಿದ್ದಾರೆ. ಬಂಡವಾಳ ವಾದವು ಬುಡಕಟ್ಟುಗಳಲ್ಲಿ ವರ್ಗ ಅಸಮಾನತೆಯನ್ನು ಸೃಷ್ಟಿಸುತ್ತಿದೆ. ತ್ರಿವೇದಿಯವರು ಈ ಪುಸ್ತಕದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಬಂಡವಾಳಶಾಹಿಯ ಉಗಮ ಮತ್ತು ವರ್ಗ ರಚನೆಯ ಮೇಲಿನ ಸಾಮಾಜಿಕ ಪರಿಣಾಮಗಳ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದ್ದಾರೆ.[೯೨]

ಇದಕ್ಕನುಗುಣವಾಗಿ **ಬುದ್ಧದೇವ ಚೌದಾದಿ (೧೯೯೨)** ಅವರು ಬುಡಕಟ್ಟು ಆರ್ಥಿಕತೆಗೆ ಸಂಬಂಧಿಸಿದ ವೈವಿಧ್ಯಮಯವಾದ ಅಂಶಗಳು ಮತ್ತು ಬದಲಾಗುತ್ತಿರುವ ಬುಡಕಟ್ಟು ಜನರ ಜೀವನದ ಸಮಗ್ರ ಚಿತ್ರಣವನ್ನು ಸೆರೆಹಿಡಿದಿದ್ದಾರೆ. ವ್ಯವಸಾಯ, ರಾಜಕೀಯ, ಕುಲಸಂಬಂಧಗಳು, ಪರಿಸರ, ಶಿಕ್ಷಣ, ತಾಂತ್ರಿಕ ಪರಿವರ್ತನೆ, ಸಾಮಾಜಿಕ-ರಾಜಕೀಯ ಚಳುವಳಿಗಳು, ಧಾರ್ಮಿಕ ನಂಬಿಕೆಗಳು, ಸ್ಥಳೀಯ ನಂಬಿಕೆಗಳ ಆಚರಣೆಗಳು ಮತ್ತು ಇನ್ನೂ ಇತರೆ ಸ್ಪಷ್ಟವಾದ ವಿಚಾರಗಳನ್ನು ಚಿಕಿತ್ಸಕ ಮತ್ತು ಪರಿಹಾರಾತ್ಮಕ ಮಾದರಿಗಳೆರಡರಲ್ಲೂ ವಿವರಿಸಿದ್ದಾರೆ.[೯೩]

ಎಸ್.ಜಿ. ದೇಗಾಂವಕರ್ (೧೯೯೪) ಅವರು ಭಾರತದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ನಡೆಸಿರುವ ಪ್ರಯತ್ನಗಳ ಉಗಮ ಮತ್ತು ಬೆಳವಣಿಗೆಯನ್ನು ಗುರುತಿಸಿದ್ದಾರೆ. ಇದರ ಜೊತೆಗೆ ಬುಡಕಟ್ಟು ಅಭಿವೃದ್ಧಿಯ ವಿವಿಧ ಕ್ರಮಗಳನ್ನು ಪರೀಕ್ಷಿಸುವುದರ ಮೂಲಕ ಕಳೆದ ಹಲವಾರು ವರ್ಷಗಳ ಯೋಜನೆಗಳ ಅವಧಿಯಲ್ಲಿ ಅಳವಡಿಸಿಕೊಂಡಿದ್ದ ಆಡಳಿತಾತ್ಮಕ ರಚನೆ ಮತ್ತು ಸಂಘಟನಾ ತಂತ್ರಗಳನ್ನು ನಮೂದಿಸಿದ್ದಾರೆ. ಬುಡಕಟ್ಟು ಅಭಿವೃದ್ಧಿಗಾಗಿ ಯೋಜನೆಗಳ ಅವಧಿಯಲ್ಲಿ ಮಾಡಲಾದ ಖರ್ಚು ವೆಚ್ಚ ಮತ್ತು ನೀಡಿದ್ದ ಪ್ರಾಶಸ್ತ್ಯಗಳನ್ನು ಸಹ ಗುರುತಿಸಿದ್ದಾರೆ. ಬುಡಕಟ್ಟು ಉಪಯೋಜನೆಯ ತಂತ್ರ ಮತ್ತು ಅದರ ಅನುಷ್ಠಾನದ ಪ್ರಕ್ರಿಯೆಯನ್ನು ವಿಸ್ತೃತವಾಗಿ ಪರಿಶೀಲಿಸಿದ್ದಾರೆ.

ಬುಡಕಟ್ಟು ಅಭಿವೃದ್ಧಿಯಲ್ಲಿ ಅಳವಡಿಸಿಕೊಂಡಿದ್ದ ವೈಯಕ್ತಿಕ ನೀತಿಗಳನ್ನು ಗುರುತಿಸಿ ಅವುಗಳಿಗೆ ವಿಶೇಷವಾದ ಮತ್ತು ವಿಮರ್ಶಾತ್ಮಕ ಅಧ್ಯಯನವಾಗಿದೆ.

ಎಸ್.ಎನ್. ತ್ರಿವೇದಿ (೧೯೯೯) ಅವರು ಕೈಗೊಂಡ ಅಧ್ಯಯನವು ನೀತಿ ನಿಯಮಗಳ ಆಯ್ಕೆಗಳೊಂದಿಗೆ ಬುಡಕಟ್ಟುಗಳ ವಿವಿಧ ವಿಷಯಗಳು ಮತ್ತು ಸಮಸ್ಯೆಗಳಿಗೆ ಸಂಬಂಧಿಸದೇ ಬುಡಕಟ್ಟು ಜನರ ಆರ್ಥಿಕ ಸಮಸ್ಯೆಗಳನ್ನು ಉಪಶಮನಗೊಳಿಸುವಲ್ಲಿ ಹಣಕಾಸು ಸಂಸ್ಥೆಗಳು ಮತ್ತು ಸಹಕಾರಿವಲಯದ ಪಾತ್ರ, ಬಡತನ ನಿರ್ಮೂಲನೆಯಲ್ಲಿ ಯೋಜನೆಗಳು ಮತ್ತು ಅಭಿವೃದ್ಧಿ ಯೋಜನೆಗಳ ಪರಿಣಾಮಗಳು ಇತ್ಯಾದಿಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಮಾನವಿಕ ಮಾಹಿತಿಗಳು ಮತ್ತು ಸಮೀಕ್ಷೆಯ ಮೂಲಕ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿರುವ ದತ್ತಾಂಶಗಳ ಆಧಾರದ ಮೇಲೆ ಈ ಅಧ್ಯಯನದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿನ ಹಿಂದುಳಿದಿರುವಿಕೆಯ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಅವಶ್ಯಕವಾಗಿರುವ ಬುಡಕಟ್ಟುಗಳ ಸಮಸ್ಯೆಗಳ ಮತ್ತು ಯೋಜನೆಗಳ ದೃಷ್ಟಿಕೋನಗಳನ್ನು ಮೌಲ್ಯಮಾಪನ ಮಾಡಿ ವಿಶ್ಲೇಷಣೆ ಮಾಡಿದ್ದಾರೆ.[೧೫]

ಪಿ.ಸಿ. ಜೈನ್ (೧೯೯೯) ಅವರು ರಾಜಾಸ್ಥಾನದ ಭಿಲ್ ಮತ್ತು ಮೀನಾ ಸಮುದಾಯಗಳ ತಮ್ಮ ಅಧ್ಯಯನದಲ್ಲಿ ಅವುಗಳ ಸೂಕ್ಷ್ಮವಾದ ಜ್ಞಾನವನ್ನು ನೀಡಿದ್ದಾರೆ. ಈ ಅಧ್ಯಯನದ ಪ್ರಮುಖ ಉದ್ದೇಶವೇ ಎರಡೂ ಬುಡಕಟ್ಟು ಸಮುದಾಯಗಳು ಸಾಧಿಸಿರುವ ಅಭಿವೃದ್ಧಿಯನ್ನು ಅಧ್ಯಯನ ಮಾಡುವುದಾಗಿತ್ತು. ಅವರ ಪ್ರಕಾರ ಅಭಿವೃದ್ಧಿ ಅಥವಾ ಬದಲಾವಣೆಯು ಅನೇಕ ಮೂಲಗಳದ್ದಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ಸರ್ಕಾರವು ಸಂವಿಧಾನದ ನೆಲೆಯಲ್ಲಿ ಬುಡಕಟ್ಟು ಜನರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದ ಇತರ ಬುಡಕಟ್ಟು ಸಮೂಹಗಳ ಹಾಗೆ ಅಭಿವೃದ್ಧಿಪಡಿಸಲು ಬದ್ಧವಾಗಿರಬೇಕಾಗುತ್ತದೆ ಎಂದಿದ್ದಾರೆ.[೧೬]

ಭಕ್ಷಿ ಮತ್ತು ಕಿರಣ್ ಬಾಲು (೨೦೦೦) ಅವರು ಮಾಡಿರುವ ಭಾರತ ಉಪಖಂಡದ ವಿವಿಧ ವಲಯಗಳಲ್ಲಿ ನೆಲೆಸಿರುವ ವಿವಿದ ಬುಡಕಟ್ಟುಗಳ ಸಾಮಾಜಿಕ–ಆರ್ಥಿಕ ಸ್ಥಾನಮಾನಗಳನ್ನು ವಿವರವಾಗಿ ಪ್ರಸ್ತುತಪಡಿಸಿದ್ದಾರೆ. ಇವರುಗಳ ಪ್ರಕಾರ ಬುಡಕಟ್ಟುಗಳ ಜೀವನ ಶೈಲಿ, ಪದ್ಧತಿಗಳು ಮತ್ತು ಸಂಪ್ರದಾಯಗಳು ನಮ್ಮ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಇತರ ಜನಸಂಖ್ಯೆಗಿಂತ ತುಂಬಾ ಭಿನ್ನವಾಗಿರುತ್ತದೆ. ವಾಸ್ತವಿಕವಾಗಿ ಅವರು ಅವರದೇ ಆದ ಪ್ರಪಂಚದಲ್ಲಿ ಬದುಕುತ್ತಿದ್ದಾರೆ. ಅವರ ಸಾಮಾಜಿಕ ಹಿಂದುಳಿದಿರುವಿಕೆಯನ್ನು ವಿವಿಧ ಮಟ್ಟಗಳಲ್ಲಿ ಅಳತೆ ಮಾಡಲಾಗುತ್ತದೆ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ಒದಗಿಸಲು, ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಮತ್ತು ಅವರ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಹಲವಾರು ಯೋಜನೆಗಳನ್ನು ಆರಂಭಿಸಲಾಗಿದೆ. ಇದರಿಂದ ಬುಡಕಟ್ಟು ಜನರ ಸಾಂಪ್ರಾದಾಯಕ ಜೀವನದಲ್ಲಿ ಬದಲಾವಣೆಗಳಾಗಿ ಆಧುನೀಕರಣಗೊಳ್ಳುತ್ತಿದ್ದಾರೆ[೧೭] ಎಂದು ಈ ಅಧ್ಯಯನದಲ್ಲಿ ವಿವರಿಸಿದ್ದಾರೆ. ಇವರ ವಿವರಣೆಯಂತೆ ಸಿದ್ದಿ ಜನಾಂಗದವರೂ ಕೂಡ ಅವರದೇ ಆದ ಪ್ರಪಂಚದಲ್ಲಿ ಬದುಕುತ್ತಿದ್ದರೂ ಈಗ ಸಹ ಬದಲಾವಣೆಯನ್ನೂ ಬಯಸುತ್ತಿದ್ದಾರೆ.

ಇದಕ್ಕೆ ವಿರುದ್ಧವಾಗಿ **ಪ್ರಕಾಶ್ ಚಂದ್ರ ಮೇಹ್ತ** (೨೦೦೦) ಅವರು ೨೦ನೇ ಶತಮಾನದಲ್ಲಿ ಅನುಷ್ಠಾನಕ್ಕೆ ತಂದಿರುವ ಬುಡಕಟ್ಟು ಅಭಿವೃದ್ಧಿಯ ಎಲ್ಲಾ ಕ್ರಮಗಳನ್ನು ಪರಾಮರ್ಶಿಸಿದ್ದಾರೆ. ಮೆಹ್ತಾರವರ ಪ್ರಕಾರ ಬುಡಕಟ್ಟು ಜನರ ಜೀವನಾಧಾರಿತ ಕನಿಷ್ಠ ಮೂಲ ಅವಶ್ಯಕತೆಗಳನ್ನು ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ. ೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಬ್ರಿಟಿಷರು ಮತ್ತು ಸ್ಥಳೀಯ ಆಡಳಿತಗಾರರ ಅಧಿಕಾರಕ್ಕೆ ಒಳಪಟ್ಟಿದ್ದರು. ಬ್ರಿಟಿಷರು ಮತ್ತು ಸ್ಥಳೀಯ ಅಧಿಕಾರಸ್ಥರು ಬುಡಕಟ್ಟು ಜನರ ಅವಶ್ಯಕತೆಗಳ ಪೂರೈಕೆ ಮತ್ತು ಅವರ ಕಲ್ಯಾಣದ ಬಗ್ಗೆ ತಲೆಕೆಡಿಸಿ ಕೊಳ್ಳುತ್ತಿರಲಿಲ್ಲ. ಆದ್ದರಿಂದ ೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಬುಡಕಟ್ಟು ಜನರು ಆಡಳಿತಗಾರರಿಂದಲೂ ಶೋಷಣೆಗೆ ಒಳಗಾಗಿದ್ದಾರೆ.[೯೮]

ಎಸ್. ಶ್ರೀಕಾಂತ್ ಅವರು (೨೦೧೧) 'ಮೂಲನಿವಾಸಿಗಳ ಹಕ್ಕು ಪತ್ರ' ಎಂಬ ಕರ್ನಾಟಕದ ಬುಡಕಟ್ಟುಗಳ ತಮ್ಮ ಸಂಶೋಧನಾ ಲೇಖನದಲ್ಲಿ ಸರ್ಕಾರ ಮೂಲನಿವಾಸಿಗಳಿಗೆ ಶೀಘ್ರವಾಗಿ ಅವರವರ ಪಾರಂಪರಿಕ ಪಿತ್ರಾರ್ಜಿತ ಅರಣ್ಯಗಳ ಮೇಲಿನ ಹಕ್ಕನ್ನು ಗೌರವಿಸಿ ಗ್ರಾಮ ಸಭೆಗಳ ಠರಾವಿನ ಆಧಾರದ ಮೇಲೆ ಕೂಡಲೇ ಹಕ್ಕು ಪತ್ರಗಳನ್ನು ವಿತರಿಸುವಂತೆ, ಜಿಲ್ಲಾ ಅರಣ್ಯ ಹಕ್ಕುಗಳ ಸಮಿತಿಗೆ ಕಟ್ಟುನಿಟ್ಟಾಗಿ ಸೂಚನೆಯನ್ನು ನೀಡಿ ಅವರ ಬಾಳು ಹಸನಾಗುವಂತೆ ನೋಡಿಕೊಳ್ಳಬೇಕಾಗಿದೆ ಎಂದಿದ್ದಾರೆ. ಶ್ರೀಕಾಂತ್ ಅವರ ಅಧ್ಯಯನದ ಫಲಿತಗಳಂತೆ ಈಗಲಾದರೂ ಸರ್ಕಾರ ಬುಡಕಟ್ಟುಗಳಿಗೆ ಶೀಘ್ರವಾಗಿ ಅವರವರ ಪಿತ್ರಾರ್ಜಿತ ಅರಣ್ಯಗಳ ಮೇಲಿನ ಹಕ್ಕನ್ನು ಗೌರವಿಸಿ ಗ್ರಾಮಸಭೆಗಳ ಠರಾವಿನ ಆಧಾರದ ಮೇಲೆ ಹಕ್ಕು ಪತ್ರಗಳನ್ನು ನೀಡುವುದು ತುರ್ತಾಗಿ ಆಗಬೇಕಾದ ಕೆಲಸವಾಗಿದೆ[೯೯] ಎಂದಿದ್ದಾರೆ.

ಎಂ. ಗುರುಲಿಂಗಯ್ಯ (೨೦೦೬) ಅವರು, **'ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ ಸಮಾಜ ಶಾಸ್ತ್ರೀಯ ದೃಷ್ಟಿಕೋನ'** ಎಂಬ ತಮ್ಮ ಸಂಶೋಧನಾ ಲೇಖನವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಮತ್ತು ಬಯಲು ಸೀಮೆಯ ಕಾಡುಗೊಲ್ಲ ಬುಡಕಟ್ಟು ಸಮುದಾಯಗಳ ಅಧ್ಯಯನದಲ್ಲಿ ಅವರ ಅನಕ್ಷರತೆ ಮತ್ತು ಬಡತನವೇ ಬುಡಕಟ್ಟು ಸಮುದಾಯಗಳ ಹಿಂದುಳಿದಿರು ವಿಕೆಗೆ ಮತ್ತು ಇತರ ಎಲ್ಲಾ ಸಮಸ್ಯೆಗಳಿಗೆ ಮೂಲ ಎಂದಿದ್ದಾರೆ. ಬುಡಕಟ್ಟುಗಳ ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸಲು ಅವರಿಗೆ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದು, ಭೂರಹಿತ ಬುಡಕಟ್ಟು ಜನರಿಗೆ ಭೂಮಿಯನ್ನು ಕೊಡುವುದು, ಅವರು ಪಾರಂಪರಿಕವಾಗಿ ಅನುಭವಿಸುತ್ತ ಬಂದಿರುವ ಭೂಮಿಯ ಹಕ್ಕನ್ನು ಗೌರವಿಸಿ ದಾಖಲೆ ಪತ್ರಗಳನ್ನು ಒದಗಿಸಿಕೊಡುವುದು ಅತ್ಯಾವಶ್ಯಕವಾಗಿ ಆಗಬೇಕಾದ ಕೆಲಸ ಎಂದಿದ್ದಾರೆ.[೧೦೦]

ಅನಂತಕೃಷ್ಣ ಅಯ್ಯರ್ (೧೯೦೯) ಅವರು **'ದಿ ಕೋಚಿನ್ ಟ್ರೈಬ್ಸ್ ಆಂಡ ಕಾಸ್ಟ್'** ಎಂಬ ಸಂಶೋಧನಾ ಪುಸ್ತಕದಲ್ಲಿ ದುಸ್ಥಿತಿಗೆ ಬಂದಿದ್ದ ಅಥವಾ ಅಳಿವಿನ ಹಂಚಿನಲ್ಲಿದ್ದ ಗುಡ್ಡಗಾಡು ಬುಡಕಟ್ಟುಗಳ ಮೇಲೆ ಕೇಂದ್ರೀಕರಿಸಿ ಅಧ್ಯಯನ ಮಾಡಿದ್ದಾರೆ ಮೂರು ಸಂಪುಟಗಳಲ್ಲಿ ಪ್ರಕಟಿಸಿರುವ

ಇದರಲ್ಲಿ ತಿರುವಾಂಕೂರ್ ಪ್ರಾಂತ್ಯದ ಬುಡಕಟ್ಟುಗಳು ಮತ್ತು ಕೇರಳದ ಗುಡ್ಡಗಾಡು ಬುಡಕಟ್ಟುಗಳನ್ನು ದ್ರಾವಿಡ ಪೂರ್ವ ಜನಾಂಗವೆಂದು ವಿವರಿಸಿದ್ದಾರೆ.[೧೦೧]

ಅಯ್ಯರ್ ಅವರ ವಿಚಾರಗಳ ಮುಂದುವರಿದ ಭಾಗವೆಂಬಂತೆ **ಲೋಗನ್ ವೆಲಿಯಮ್ಸ್ (೧೯೫೧)** ರವರು ಮಲಬಾರಿನ ಮೂಲನಿವಾಸಿಗಳು ಮತ್ತು ಅಸ್ಪೃಶ್ಯ ವರ್ಗಗಳಲ್ಲಿ ಪ್ರಭಾವಶಾಲಿಗಳಾಗಿರುವ 'ಅದಿಮ' ವ್ಯವಸ್ಥೆಯನ್ನು ಗುರುತಿಸಿದ್ದಾರೆ. ವಿಲಿಯಮ್ಸ್‌ರವರು ಊಳಿಗಮಾನ್ಯದ ಭೂ ಮಾಲೀಕರು ಅದಿಮ ಜನಾಂಗದವರನ್ನು ಶೋಷಣಾತ್ಮಕ ಮನೋಭಾವನೆಯಿಂದ ಕಾಣುತ್ತಿದ್ದರು. ಲೋಗನ್ ವಿಲಿಯಮ್ಸ್‌ರವರ ಈ ಬೌದ್ಧಿಕ ಕಾರ್ಯವು ಆ ಕಾಲದ ಮಲಬಾರಿನ ಫ್ಯೂಡಲ್ ಭೂಮಾಲಿಕರ ಶೋಷಣಾತ್ಮಕ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿದೆ.[೧೦೨]

ಬದಲಾದ ಸಾಮಾಜಿಕ ಸನ್ನಿವೇಷದಲ್ಲಿ **ಅಯ್ಯಪ್ಪನ್** ಅವರು **(೧೯೪೪)** ಕೇರಳದ ವಿಧ ಬುಡಕಟ್ಟುಗಳ ಮೇಲೆ ವ್ಯವಸ್ಥಿತವಾದ ಅನೇಕ ಅಧ್ಯಯನಗಳನ್ನು ನಡೆಸಿದ್ದಾರೆ. ಮಲಬಾರಿನ ನಯದಿಸ್ ಬುಡಕಟ್ಟಿನ ಅಧ್ಯಯನ ಇರುಳ ಬುಡಕಟ್ಟುಗಳ ಮೇಲೆ ಮಾಡಿರುವ ಅಧ್ಯಯನಗಳು ಪ್ರಮುಖವಾದವುಗಳಾಗಿವೆ. ಇದರ ಫಲಿತಗಳು ಈ ಸಮುದಾಯಗಳ ಸಾಮಾಜಿಕ–ಆರ್ಥಿಕ ಅಂಶಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ.[೧೦೩]

ಪಿ.ಆರ್.ಜಿ. ಮಾಥುರ್ (೧೯೭೧) ಅವರ ಕೇರಳದ ಸಾಮಾಜಿಕ ಮತ್ತು ಬಹುಭಾಷಾ ಜ್ಞಾನವನ್ನು ಗುರುತಿಸಿದ್ದಾರೆ. ಮೌಲ್ಯಯುತವಾದ ಸಂಖ್ಯಾತ್ಮಕ ಮಾಹಿತಿಗಳನ್ನು ಕೊಡುವುದರ ಜೊತೆಗೆ ಮಾಥುರ್‌ರವರು, ಬುಡಕಟ್ಟು ಸಮೂಹಗಳು ಎದುರಿಸುತ್ತಿರುವ ಭೂ–ಪರಾಧೀನತೆ, ಜೀತಪದ್ಧತಿ, ಋಣಭಾರತ್ವ, ಮಹಿಳೆಯರ ಸ್ಥಾನಮಾನ ಇತ್ಯಾದಿ ಪ್ರಮುಖ ಸಮಸ್ಯೆಗಳನ್ನು ವಿವರಿಸಿದ್ದಾರೆ. ಈ ಪುಸ್ತಕದಲ್ಲಿ ಬುಡಕಟ್ಟು ಸಂಘಟನೆಗಳ ಆಪಾದನೆ ಮತ್ತು ಅವರ ಮೇಲಿನ ನಕ್ಸಲ್ ಚಳುವಳಿಯ ಪ್ರಭಾವದಂತಹ ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.[೧೦೪]

ಎಂ. ಕನ್ನಮನ್ ಅವರು (೧೯೮೨) **'ಟ್ರೈಬಲ್ ಎಕಾನಮಿ ಆಫ್ ಕೇರಳ ಆನ್ ಇಂಟ್ರಾರೀಜನಲ್ ಅನಾಲಿಸೀಸ್'** ಎಂಬ ಸಂಶೋಧನಾ ಗ್ರಂಥದಲ್ಲಿ ಕೇರಳದ ಗುಡ್ಡಗಾಡು ಬುಡಕಟ್ಟುಗಳ ಸಮಾಜಿಕ–ಆರ್ಥಿಕ ಅಭಿವೃದ್ಧಿಯ ಮಟ್ಟದಲ್ಲಿ ಅಂತರ್ ಪ್ರಾದೇಶಿಕ ವೈವಿಧ್ಯತೆಗಳನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ.[೧೦೫]

ಕೆ.ಜಿ. ಕರ್ಮಾಕರ್ (೨೦೦೧) ಅವರು **'ದಿ ಸೈಲೆನ್ಸ್ಡ್ ಡ್ರಮ್ಸ್' (ಎ.ಎರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪ್‌ಮೆಂಟ್)** ಎಂಬ ಪುಸ್ತಕದ ಮೂರು ಭಾಗಗಳಲ್ಲಿ ಬುಡಕಟ್ಟು ಜನರ ಜೀವನದ ಸಮಗ್ರ ಚಿತ್ರಣವನ್ನು ನೀಡಿದ್ದಾರೆ. ಭಾಗ ೧ರಲ್ಲಿ ಬುಡಕಟ್ಟು ಜನರ ಜೀವನ ವಿಧಾನ, ಆರ್ಥಿಕ ವಿಶ್ಲೇಷಣೆ, ಬುಡಕಟ್ಟು ಜನರ ಆರ್ಥಿಕ ಪರಿಸ್ಥಿತಿಯ ಶೋಷಣೆ, ಸುಸ್ಥಿರ ಅಭಿವೃದ್ಧಿ ಮತ್ತು ಬುಡಕಟ್ಟು ಸೃಜನಶೀಲತೆ ಮತ್ತು ಬದಲಾವಣೆ, ನಿಯಂತ್ರಣಾತ್ಮಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಾರಂಭ, ಅರಣ್ಯ ಕಾಯಿದೆಗಳು ಮತ್ತು ಬುಡಕಟ್ಟು ಜನರ ಹಕ್ಕುಗಳು ಬುಡಕಟ್ಟು ಪ್ರದೇಶಗಳ

ಮಾರುಕಟ್ಟೆ ಮತ್ತು ಬುಡಕಟ್ಟು ಆರ್ಥಿಕತೆಯಲ್ಲಿ ಮಹಿಳೆಯರ ಪಾತ್ರ ಮುಂತಾದ ವಿಷಯಗಳ ಬಗ್ಗೆ ವಸ್ತುನಿಷ್ಠ ಅಧ್ಯಯನ ಫಲಿತಗಳನ್ನು ಒದಗಿಸಿದ್ದಾರೆ. ಭಾಗ ೨ರಲ್ಲಿ ಬುಡಕಟ್ಟು ಜನರ ಆರ್ಥಿಕ ಚಟುವಟಿಕೆಗಳು, ಅರಣ್ಯದ ಉಪ ಉತ್ಪನ್ನಗಳ ಸಂಗ್ರಹ ಮತ್ತು ಸಂಸ್ಕರಣೆ, ಬುಡಕಟ್ಟು ಜನರ ಕರಕುಶಲ ಕೌಶಲ್ಯ ಮತ್ತು ಔಷಧಿ ಸಸ್ಯಗಳ ಉಪಯೋಗಗಳ ಬಗ್ಗೆ ವಿದ್ವತ್ಪೂರ್ಣವಾದ ಮಾಹಿತಿಗಳು ಇವರ ಅಧ್ಯಯನದಿಂದ ಹೊರಬಂದಿವೆ. ಮತ್ತು ಭಾಗ ೩ರಲ್ಲಿ ಬುಡಕಟ್ಟು ಜನರಿಗಿರುವ ಸುಸ್ಥಿರ ಅಭಿವೃದ್ಧಿಗಾಗಿನ ಚೌಕಟ್ಟನ್ನು, ಆಹಾರ ಭದ್ರತೆ, ಬುಡಕಟ್ಟು ಸ್ವ-ಸಹಾಯ ಗುಂಪುಗಳು, ಬುಡಕಟ್ಟುಗಳ ಸಮುದಾಯಗಳ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಬಗೆಗಿನ ಮಾಹಿತಿಯನ್ನು ಒದಗಿಸಿದ್ದಾರೆ.[೧೦೬]

ಒಟ್ಟಾರೆ ಕರ್ಮಾಕರ್ ಅವರು ಬುಡಕಟ್ಟು ಆರ್ಥಿಕ ಅಭಿವೃದ್ಧಿಯು ಅವರ ಜೀವನದ ಸಮಗ್ರ ಮತ್ತು ಸಕಾರಾತ್ಮಕ ಬದಲಾವಣೆಯೊಂದನ್ನು ಮತ್ತು ಇಡೀ ಸಮುದಾಯದ ಅವಶ್ಯಕತೆ ಗಳನ್ನು ತಿಳಿದುಕೊಂಡು ಬದಲಾವಣೆ ತರುವಂತಿದ್ದರೆ ಮಾತ್ರ ಅದು ವಸ್ತುನಿಷ್ಠ ಮತ್ತು ಸತ್ಯಸ್ವರೂಪದ ಅಭಿವೃದ್ಧಿಯಾಗುತ್ತದೆ ಎಂದಿದ್ದಾರೆ. ಬುಡಕಟ್ಟುಗಳ ಪರಿಮಿತಿಯಲ್ಲಿ ಅಭಿವೃದ್ಧಿಯು ವೈಯಕ್ತಿಕ ಮತ್ತು ಸಮಷ್ಟಿ ಅಂತಸ್ತಿನ ಪ್ರಗತಿ ಮತ್ತು ವಿಸ್ತರಣೆಯಲ್ಲಿ ಆಸಕ್ತಿ ಉಳ್ಳದ್ದಾಗಿರಬೇಕು. ಬುಡಕಟ್ಟು ಸಮುದಾಯಗಳಲ್ಲಿ ಬದಲಾವಣೆಯ ಗಾಳಿಯು ಸಮುದಾಯದ ಒಳಗಿನಿಂದಲೇ ಬೀಸಬೇಕೆ ಹೊರತು ಎನ್.ಜಿ.ಒ, ಸರ್ಕಾರ ಅಥವಾ ಧಾರ್ಮಿಕ ಸಂಸ್ಥೆಗಳಂತಹ ಹೊರಗಿನ ಶಕ್ತಿಗಳಿಂದ ಒತ್ತಾಯಪೂರ್ವಕವಾಗಿ ಹೇರಬಾರದು. ಬುಡಕಟ್ಟು ಜನರು ತಮ್ಮದೇ ಆದ ಮಾರ್ಗದಲ್ಲಿ ಅವರ ಅವಶ್ಯಕತೆಗಳ ಪೂರೈಕೆಗಾಗಿ ಕಾರ್ಯಪ್ರವೃತ್ತರಾಗುವ ಸಾಮರ್ಥ್ಯ ಪಡೆದು ಕೊಳ್ಳಬೇಕು. ಪ್ರಗತಿಯ ಕೊರತೆ ಅಥವಾ ನಿಶ್ಚಲ ಸ್ಥಿತಿಯಿಂದಾಗಿ ಯಾವುದೇ ಸಮಾಜವು ನಾಶವಾಗಬಹುದು ಮತ್ತು ಬುಡಕಟ್ಟು ಸಮಾಜವನ್ನು ಇಂತಹ ಅಪಾಯದಿಂದ ಪಾರುಮಾಡ ಬೇಕಾದ ಅಗತ್ಯತೆಯ ಬಗ್ಗೆ ಈ ಗ್ರಂಥದಲ್ಲಿ ಚರ್ಚಿಸಿದ್ದಾರೆ.

ಡಾ. ಎಲ್. ಶ್ರೀನಿವಾಸ್ (೨೦೧೦) ಅವರು **'ಬುಂಡೆಬೆಸ್ತ ಸಮುದಾಯ: ಒಂದು ಅಲೆಮಾರಿ ಜನಾಂಗ'** ಎಂಬ ಸಂಶೋಧನ ಪ್ರಬಂಧದಲ್ಲಿ ಬುಂಡೆಬೆಸ್ತ ಸಮುದಾಯದಲ್ಲಾಗಿರುವ ಸಾಮಾಜಿಕ ಆರ್ಥಿಕ, ಪರಿವರ್ತನೆಗಳನ್ನು ಗುರುತಿಸಿದ್ದಾರೆ. ಶ್ರೀನಿವಾಸ್ ಅವರು ತಿಳಿಸಿರುವಂತೆ ಬುಂಡೆಬೆಸ್ತ ಸಮುದಾಯದವರ ಮೂಲ ಕಸುಬು ಮೀನು ಹಿಡಿದು ಮಾರಾಟ ಮಾಡುವುದಾಗಿತ್ತು. ಅದನ್ನು ಬಿಟ್ಟು ಬೇರೆ ಕಸುಬು ಅಥವಾ ಉದ್ಯೋಗವನ್ನು ಮಾಡಿದರೆ ಅದು ಪಾಪದ ಕೆಲಸ ವೆಂದು ಪರಿಗಣಿಸುತ್ತಿದ್ದರು. ಶ್ರೀನಿವಾಸರವರ ಅಧ್ಯಯನದಿಂದ ತಿಳಿದುಬಂದಿರುವಂತೆ, ಈ ಸಮುದಾಯದವರು ಇತ್ತೀಚೆಗೆ ಇತರ ನಾಗರಿಕರಂತೆ ಜೀವನ ನಡೆಸುವ ರೀತಿಯನ್ನು ರೂಢಿಸಿಕೊಂಡಿದ್ದಾರೆ. ಅವರು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಸ್ಥಿತ್ಯಂತರಗೊಂಡಿದ್ದಾರೆ. ಕೂಲಿಕಾರ್ಮಿಕರಾಗಿ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ. ಅಲೆಮಾರಿಗಳಾಗಿದ್ದ ಇವರು ಒಂದೆ ಕಡೆ ನೆಲೆಸುವುದನ್ನು ರೂಢಿಸಿ ಕೊಂಡಿರುವುದರಿಂದ, ಈ ಸಮುದಾಯದ

ಮಕ್ಕಳು ಶಾಲೆಗೆ ಹೋಗುತ್ತಿರುವುದು ಕಂಡುಬರುತ್ತಿದ್ದು ಮುಂದೆ ಸರ್ಕಾರದ ನೆರವಿನಿಂದ ಉತ್ತಮ ಜೀವನ ಸಾಗಿಸುವಂತಾಗುತ್ತಾರೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.[೧೦೭] ಇದಕ್ಕೆ ಪೂರಕವಾಗಿ ಸಿದ್ದಿ ಜನಾಂಗದವರೂ ಕೂಡ ಬುಂಡೇಬಡಸ್ತ ಸಮುದಾಯದವರ ಹಾಗೆ ಅಲೆಮಾರಿಗಳಲ್ಲದಿದ್ದರೂ, ವಿದೇಶೀ ಮೂಲದ ಗುಲಾಮರಾಗಿದ್ದರಿಂದ, ಭಾರತದಲ್ಲಿ ಅವರದೇ ಆದ ಕುಲ ಕಸುಬು ಎನ್ನುವುದು ಇರಲಿಲ್ಲ. ಗುಲಾಮಿ ಪದ್ಧತಿಯಿಂದ ತಪ್ಪಿಸಿಕೊಂಡು ಗೋವಾದಿಂದ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಿಗೆ ಬಂದು ನೆಲೆಸಿ ಕಾಡುಗಳಲ್ಲಿ ಬದುಕಿ ಸ್ಥಳೀಯರ ಆಶ್ರಯ ಪಡೆದು ಕೂಲಿ ಮಾಡಿ ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹಗಳ ಮೂಲಕ ಜೀವಿಸುತ್ತಿದ್ದರು.

ಕೋಮಲ್ ಸಿಂಗ್ (೨೦೧೧) ಅವರು ತಮ್ಮ **'ಎಕಾನಮಿ ಆಫ್ ಪ್ರಿಮಿಟೀವ್ ಟ್ರೈಬಲ್ ವಿಲೇಜ್ ಇನ್ ಮಣಿಪುರ'** ಎಂಬ ಸಂಶೋಧನಾ ಗ್ರಂಥದಲ್ಲಿ ಮಣಿಪುರ ರಾಜ್ಯದ ಬುಡಕಟ್ಟು ಗ್ರಾಮಗಳ ಆರ್ಥಿಕ ರಚನೆಯನ್ನು ವಿವರಿಸುತ್ತ, ಹಳ್ಳಿ, ಬುಡಕಟ್ಟು ಮತ್ತು ಬುಡಕಟ್ಟು ಸಮೂಹಗಳು ಎಂಬ ಮೂಲಭೂತ ಕಲ್ಪನೆಗಳಿಗೆ ಅರ್ಥ ವಿವರಣೆ ನೀಡಲು ಪ್ರಯತ್ನಿಸಿದ್ದಾರೆ. ಅವರು ಭೂ ಒಡೆತನ, ಗ್ರಾಮೀಣ ಆದಾಯಕ್ಕೆ ಹೋಲಿಕೆ ಮಾಡುತ್ತ ಹಳ್ಳಿಯ ಜನರ ಆರೋಗ್ಯ, ಶಿಕ್ಷಣ, ಜನಸಂಖ್ಯೆ ಮತ್ತು ಅನುಭೋಗ ಕ್ರಮಗಳಿಗೆ ಸಂಬಂಧಿಸಿದಂತೆ ಕೃಷಿಯಲ್ಲಿ ಗ್ರಾಮೀಣ ಮಹಿಳೆಯರ ಪಾತ್ರವನ್ನು ವಿವರಿಸಿದ್ದಾರೆ.[೧೦೮] ಗ್ರಾಮೀಣ ಆರ್ಥಿಕ ರಚನೆಯಲ್ಲಿ ಜಾಗತಿಕರಣ ಮತ್ತು ಮಾರುಕಟ್ಟೆ ಆರ್ಥಿಕ ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ಸಾಮಾಜಿಕ ಬಂಡವಾಳ(ಸೋಶಿಯಲ್ ಕ್ಯಾಪಿಟಲ್)ದ ಪಾತ್ರ ಮತ್ತು ಭೌತಿಕ ಮೂಲಭೂತ ಸೌಲಭ್ಯಗಳು ಮತ್ತು ಮಾನವ ಸಂಪನ್ಮೂಲ ಗಳಂತಹ ಪ್ರಮುಖ ಅಂಶಗಳಿಗೆ ಒತ್ತು ಕೊಟ್ಟಿರುವುದು ಈಗಲೂ ಬುಡಕಟ್ಟು ಸಮುದಾಯಗಳ ಹಿಂದುಳಿದಿರುವಿಕೆಗೆ ಇಂತಹ ಅಂಶಗಳು ಕಾರಣವಾಗಿವೆ ಎನ್ನುವುದನ್ನು ಅರ್ಥಮಾಡಿ ಕೊಳ್ಳಬಹುದಾಗಿದೆ.

ಎಂ. ಚಂದ್ರ ಪೂಜಾರಿ (೨೦೧೩) ಅವರು ಬಡವರು ತಮ್ಮ ಸಮಸ್ಯೆಯನ್ನು ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ, ವೇದಿಕೆಗಳಲ್ಲಿ ನಿಂತು ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದು ಕಷ್ಟವಾಗುತ್ತದೆ. ಈ ಕಾರಣದಿಂದ ಬಡವರು ತಮ್ಮ ಬದುಕನ್ನು ಪ್ರಭಾವಿಸುವ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅಡ್ಡಿಯಾಗುತ್ತದೆ. ಅಂದರೆ ಇದು ಅವರ ರಾಜಕೀಯ ಅಸ್ತಿತ್ವವನ್ನು ಅಲ್ಲಗಳೆಯುತ್ತದೆ ಎಂದು ಹೇಳಿದ್ದಾರೆ. ಚಂದ್ರ ಪೂಜಾರಿಯವರ ಈ ಅಭಿಪ್ರಾಯದ ಪ್ರಕಾರ ಸಿದ್ದಿ ಬುಡಕಟ್ಟು ಸಮುದಾಯಕ್ಕೆ ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನ ಲಭಿಸಿದ ನಂತರ ತಮ್ಮ ಮತದಾನದ ಹಕ್ಕನ್ನು ಬಂಡವಾಳ ಮಾಡಿಕೊಂಡು ಸಂಘಟಿತ ರಾಗುತ್ತಿದ್ದಾರೆ. ಪ್ರಚಲಿತ ಕುಲಗೆಟ್ಟ ಚುನಾವಣಾ ವ್ಯವಸ್ಥೆಯಲ್ಲಿ ಸಿದ್ದಿ ಸಮುದಾಯವು ತನ್ನ ರಾಜಕೀಯ ಹಕ್ಕನ್ನು ಆರ್ಥಿಕ ಹಕ್ಕಿನೊಂದಿಗೆ ವಿನಿಮಯ ಮಾಡಿಕೊಳ್ಳುತ್ತ, ತನ್ನ ರಾಜಕೀಯ ಹಕ್ಕನ್ನು ರಾಜಕೀಯ ಪಕ್ಷಗಳಿಗೆ ಅಥವಾ ವ್ಯಕ್ತಿಗಳಿಗೆ ಒತ್ತೆ ಇಡುತ್ತಿದೆಯೇನೋ? ಎಂಬ ಅನುಮಾನ ಉಂಟಾಗುತ್ತದೆ.

ಮುಂದುವರಿದು, ಪೂಜಾರಿ ಅವರು ಅದೇ ಲೇಖನದಲ್ಲಿ ಹಕ್ಕುಗಳನ್ನು ರೂಪಿಸಿದ ಕೂಡಲೇ ಸಾಮಾಜಿಕ ಬದಲಾವಣೆ ಆಗುತ್ತದೆ ಎಂದು ತಿಳಿಯುವುದು ಸರಿಯಲ್ಲ. ಈಗಾಗಲೇ ಇರುವ

ಶಿಕ್ಷಣ, ಉದ್ಯೋಗ ಮತ್ತು ಸಂಘಟನೆಯ ಹಕ್ಕುಗಳು ಉದ್ದೇಶಿತ ರೂಪದಲ್ಲಿ ಕಾರ್ಯಗತಗೊಳ್ಳುತ್ತಿಲ್ಲ. ಇದಕ್ಕೆ ಬಹು ಮುಖ್ಯ ಕಾರಣ, ಇವುಗಳಿಗೆ ಸಾಮಾಜಿಕ ಹಾಗೂ ರಾಜಕೀಯ ಒಪ್ಪಿಗೆ ಇಲ್ಲದಿರುವುದು ಎಂದು ಹೇಳಿದ್ದಾರೆ.[೧೯] ಪ್ರಸ್ತುತ ನಾನು ಅಧ್ಯಯನ ಮಾಡುತ್ತಿರುವ ಸಿದ್ದಿ ಸಮುದಾಯಕ್ಕೆ ಸಂಬಂಧಿಸಿದಂತೆ ಚಂದ್ರ ಪೂಜಾರಿಯವರ ಮೇಲಿನ ಮಾತು ಅಕ್ಷರಶಃ ಸತ್ಯವಾದುದಾಗಿದೆ. ಸಾಮಾಜಿಕವಾಗಿ ಉತ್ತರ ಕನ್ನಡ ಜಿಲ್ಲೆಯ ಇತರ ಬುಡಕಟ್ಟು ಜನರು, ಹವ್ಯಕ ಬ್ರಾಹ್ಮಣರು ಮತ್ತು ಮರಾಠರು ಸಿದ್ದಿ ಬುಡಕಟ್ಟು ಜನರನ್ನು ಅಸಮಾನತೆ, ಅಸಡ್ಡೆ ಮತ್ತು ತಾರತಮ್ಯತೆಯಿಂದ ಕಾಣುತ್ತಿದ್ದಾರೆ. ಆದ್ದರಿಂದ ಲ್ಯಾಂಪ್ಸ್‌ನಂತಹ ಸಂಘಟನೆಗಳ ಮೂಲಕ ಆರ್ಥಿಕ ಹಕ್ಕನ್ನು ಪಡೆಯಲು ಅವರು ತಮ್ಮ ರಾಜಕೀಯ ಹಕ್ಕನ್ನು ಆರ್ಥಿಕ ಹಕ್ಕಿನೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ ಎಂಬ ಅನುಮಾನ ಬರುತ್ತದೆ.

ಕೊನೆಟಿಪ್ಪಣಿಗಳು

೧. **ವೇರಿಯರ್ ಎಲ್ವಿನ್, ೧೯೪೩, "ದಿ ಅಬೊರಿಜಿನಲ್ಸ್ ಆಕ್ಸ್‌ಫರ್ಡ ಯೂನಿವರ್ಸಿಟಿ"**, ನ್ಯೂಡೆಲ್ಲಿ.

೨. **ಘುರ್ಯೆ ಜಿ.ಎಸ್., ೧೯೪೩, "ದಿ ಟ್ರೈಬಲ್ಸ್ ಅಂಡ್ ದೇರ್ ಕಲ್ಚರ್"**, ಗೋಖಲೆ ಇನ್ಸಿಟ್ಯೂಟ್ ಆಫ್ ಪೊಲಿಟಿಕ್ಸ ಅಂಡ್ ಎಕಾನಮಿಕ್ಸ, ಪೂನಾ.

೩. **ಮಜುಂದಾರ್ ಡಿ.ಎನ್., ೧೯೪೪, "ರೇಸಸ್ ಅಂಡ್ ಕಲ್ಚರ್ಸ ಆಫ್ ಇಂಡಿಯಾ"**, ಏಶಿಯ ಪಬ್ಲಿಷಿಂಗ್ ಹೌಸ್, ಡೆಲ್ಲಿ.

೪. **ಬೋರಲಿಂಗಯ್ಯ ಹಿ.ಚಿ., ೧೯೯೫, "ಕಾಡು, ಕಾಂಕ್ರೀಟ್ ಮತ್ತು ಜನಪದ"**, ಅನ್ ಎತ್ನೋಲಜಿ ಆಫ್ ಕ್ರಿಟಿಕಲ್ ಟಕಲ್ಸ್ ಅಬೌಟ್ ಫೋಕ್ಲೋರ್, ನೇಚರ್ ಅಂಡ್ ಟ್ರೈಬಲ್ ಕಲ್ಚರ್, ಅಕ್ಷರ ಪ್ರಕಾಶನ, ನೀನಾಸಂ, ಹೆಗ್ಗೋಡು, ದ್ವಿತೀಯ ಸಂಪುಟ ಸ್ವಪ್ನ ಬುಕ್ ಹೌಸ್ ಬೆಂಗಳೂರು

೫. **ಚಂದ್ರಶೇಖರ ಟಿ.ಆರ್., ೨೦೦೬, "ಬುಡಕಟ್ಟು ಅಭಿವೃದ್ಧಿ ಕೆಲವು ಟಿಪ್ಪಣಿಗಳು"**, ಆದಿವಾಸಿ ಆಖ್ಯಾನ (ಸಂ), ಎ.ಎಸ್. ಪ್ರಭಾಕರ. ಸಿದ್ದಾರ್ಥ ಪ್ರಕಾಶನ, ಹೊಸಪೇಟೆ

೬. **ಅವಿಥ ಭಾವಿಸ್ಕರ್, ೧೯೯೮, "ಇನ್ ದಿ ಜೆಲ್ಲಿ ಆಫ್ ರಿವರ್"**, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

೭. ಅದೇ, ಪು.

೮. **ಕುಮಾರ್ ಆರ್.ಬಿ., ೨೦೦೬, “ಬುಡಕಟ್ಟು ಸಮುದಾಯಗಳ ಸಮಸ್ಯೆಗಳು ಕೆಲವು ವಿಚಾರಗಳು”,** ಅಭಿವೃದ್ಧಿ ಅಧ್ಯಯನ ಜರ್ನಲ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜನವರಿ–ಜೂನ್.

೯. **ನಾಗ್ ಡಿ.ಡಿ., ೧೯೫೮, “ಬೈಗ ಎಕಾನಮಿ ಆಫ್ ಮಧ್ಯಪ್ರದೇಶ್”,** ಎಂ.ಕೆ. ಪಬ್ಲಿಕೇಶನ್, ನ್ಯೂಡೆಲ್ಲಿ.

೧೦. **ವರ್ಮ ಪಿ., ೧೯೬೦, “ಸೋಶಿಯೋ ಕಲ್ಚರಲ್ ಆರ್ಗನೈಸೆಷನ್ಸ್ ಆಫ್ ಟ್ರೈಬಲ್ಸ್”,** ಮೆಟ್ರೋ ಪಬ್ಲಿಷರ್ಸ್, ರಾಜಸ್ತಾನ.

೧೧. **ಎನ್.ಎನ್. ವ್ಯಾಸ, ೧೯೬೨, “ಕಸ್ಟಮ್ಸ ಅಂಡ್ ಟ್ರೆಡಿಷನ್ಸ್ ಆಫ್ ಸಮ್ ಇಂಡಿಯನ್ ಟ್ರೈಬ್ಸ್”,** ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

೧೨. **ಜಗನ್ನಾಥ ಪಾಂಡೆ, ೧೯೮೧, “ಟ್ರೈಬಲ್ ಪೆಸೆಂಟ್ರ ಡೈನಾಮಿಕ್ಸ್ ಆಫ್ ಡೆವಲಪ್ಮೆಂಟ್”,** ಇಂಟರ್ ಇಂಡಿಯ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

೧೩. **ಪ್ರದೀಪ್ ಕುಮಾರ ಬೋಸ್, ೧೯೮೧, “ಸ್ಟ್ರಾಟಿಫಿಕೇಷನ್ ಅಮಾಂಗ ಇಂಡಿಯನ್ ಟ್ರೈಬ್ಸ್”,** ಕುರುಕ್ಷೇತ್ರ ನಿಯತಕಾಲಿಕೆ, ಏಪ್ರಿಲ್, ೧೪

೧೪. **ರೇಣುಕ ಪೆಮೇಚೆ, ೧೯೮೪, “ಎಲೈಟ್ ಇನಿಂಡಿಯನ್ ಸೊಸಾಯಿಟಿ”,** ಪ್ರಿಂಟ್ ವೆಲ್ ಪಬ್ಲಿಕೇಷನ್ಸ್, ಜೈಪುರ

೧೫. **ಅಲೋಕ ಕುಮಾರ್, ೧೯೮೬, “ಟ್ರೈಬಲ್ ಕಲ್ಚರ್ ಅಂಡ್ ಎಕಾನಮಿ”,** ಇಂಟರ್ ಇಂಡಿಯ ಪಬ್ಲಿಕೇಷನ್, ಡೆಲ್ಲಿ,

೧೬. **ಗೀತ ಮೆನನ್, ೧೯೮೭, “ಟ್ರೈಬಲ್ ವುಮೆನ್: ವಿಕ್ಟಿಮ್ಸ್ ಆಫ್ ಡೆವಲಪ್ಮೆಂಟ್ ಪ್ರೋಸಸ್”,** ಸೋಶಿಯಲ್ ಆಕ್ಷನ್ ಜರ್ನಲ್, ಅಕ್ಟೋಬರ್.

೧೭. **ರಮಾಮಣಿ ಎಸ್., ೧೯೮೮, “ಟ್ರೈಬಲ್ ಎಕಾನಮಿ ಪ್ರಾಬ್ಲಮ್ಸ ಅಂಡ್ ಪ್ರಾಸ್ಪೆಕ್ಟಸ್”,** ಕಾಫ್ ಪಬ್ಲಿಕಾಷನ್ಸ್, ಅಲಹಾಬಾದ್.

೧೮. **ಕ್ರಿಸ್ಟೋಫರ್ ಆಂಡ್ ಫ್ಯೂರಸ್ ಹರ್ನೆಂಡ್ರಾಫ್, ಎಂ. ಕೆ., ೧೯೮೮, “ಟ್ರೈಬ್ಸ್ ಆಫ್ ಇಂಡಿಯ: ದಿ ಸ್ಟ್ರಗಲ್ ಫಾರ್ ಸರ್ವೈವಲ್ ಪಬ್ಲಿಕೇಶನ್ಸ್”,** ರಾಜಸ್ತಾನ.

೧೯. **ರಮಾಕಾಂತ ಪ್ರಸಾದ, ೧೯೮೮, “ಕೇಸ್ ಸ್ಟಡಿ ಆಫ್ ಕಲ್ಚರಲ್ ಎಕಾಲಜಿ ಅಂಡ್ ಟ್ರೈಬಲ್ ಡೈನಾಮಿಕ್ಸ್”,** ಜೆ. ಕೆ. ಪಬ್ಲಿಷರ್ಸ್, ಆಂಧ್ರ ಪ್ರದೇಶ.

೨೦. **ಭುದ್ದದೇವ್ ಚತುರ್ವೇದಿ, ೧೯೯೦, “ಟ್ರೈಬಲ್ ಟ್ರಾನ್ಸಫಾರ್ಮೇಷನ್ ಇಂಡಿಯ”,** ಸಂ–೫, ಇಂಟರ್ ಇಂಡಿಯ ಪಬ್ಲಿಕೇಷನ್, ನ್ಯೂಡೆಲ್ಲಿ.

೨೧. ಸಂಜಯ್ ಕೆ.ಎನ್., ೧೯೭೭, "ಟ್ರೈಬಲ್ ಸೆಲ್ಫ್ ಇಮೇಜ್ ಅಂಡ್ ಐಡೆಂಟಿಫಿಕೇಷನ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ, (ಎಡಿಟೆಡ್), ಎಸ್.ಸಿ ದುಬೆ, ವಿಕಾಸ್ ಪಬ್ಲಿಶಿಂಗ್ ಹೌಸ್, ಡೆಲ್ಲಿ.

೨೨. ಮೇಹ್ತ್ರ ಜೆ.ಡಿ., ೧೯೭೭, "ದಿ ವರ್ಲ್ಡ್ ವ್ಯೂ ಆಫ್ ಇಂಡಿಯನ್ ಟ್ರೈಬ್ಸ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ.

೨೩. ಬಿಂದೊ ಸಿ. ಅಗರ್ವಾಲ್, ೧೯೭೭, "ಇಂಟರ್ಯಾಕ್ಷನ್ ಬಿಟ್ವೀನ್ ಟ್ರೈಬ್ಸ್ ಅಂಡ್ ನಾನ್ ಟ್ರೈಬ್ಸ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ.

೨೪. ಅನುಪಮ ಹಜಾ, ೨೦೧೦, "ಸ್ಟೇಟಸ್ ಆಫ್ ಟ್ರಬಲ್ಸ್ ಇನ್ ಇಂಡಿಯ", ಕುರುಕ್ಷೇತ್ರ, ನವೆಂಬರ್.

೨೫. ರಾಜು ನಾರಾಯಣಸ್ವಾಮಿ, ೨೦೧೦, "ಟ್ರೈಬಲ್ ಎಜುಕೇಷನ್ ಆಸ್ ಎ ಟೂಲ್ ಫಾರ್ ರೂರಲ್ ಟ್ರಾನ್ಸಫಾರ್ಮೇಷನ್", ಎ ಕೇಸ್ ಸ್ಟಡಿ ಆಫ್ ಪನಿಯಾಸ್ ಇನ್ ವಯಾನಾಡ್, ಕುರುಕ್ಷೇತ್ರ, ನವೆಂಬರ್.

೨೬. ಸುಮನ್ ಪಮೇಚ, ೨೦೧೦, "ಹೆಲ್ತ್ ಇಶ್ಯೂಸ್ ಆಫ್ ಟ್ರೈಬಲ್ಸ್ ಇನ್ ರಾಜಸ್ತಾನ", ನವೆಂಬರ್.

೨೭. ಪ್ರಭಾಕರ ಎ..ಎಸ್., ೨೦೦೦, "ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು", ಬುಡಕಟ್ಟು ಅಧ್ಯಯನ ಮಾಲೆ–೨ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ಪುಟ–೧೪೬.

೨೮. ಪ್ರಭಾಕರ ಎ.ಎಸ್., ೨೦೦೬, "ಸರಕಾರ ಮತ್ತು ಬುಡಕಟ್ಟುಗಳು", ಆದಿವಾಸಿ ಆಖ್ಯಾನ (ಸಂ)

೨೯. ದೊಡ್ಡ ಹುಲ್ಲೂರು, ೧೯೯೩, "ರುಕ್ಮೋಜಿ ಸದನದಲ್ಲಿ ಸಿದ್ದಲಿಂಗಯ್ಯ", ಪುಟ ೫೩

೩೦. ಪ್ರಭಾಕರ, ೨೦೦೦, "ಬುಡಕಟ್ಟು ಬದುಕಿನ ಸ್ಥಿತ್ಯಾಂತರಗಳ", ಬುಡಕಟ್ಟು ಅಧ್ಯಯನ ಮಾಲೆ–೨ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ಪುಟ–೧೯೭

೩೧. ಕುರಿಯನ್ ಸಿ.ಟಿ, "ಎನ್ಲಾರ್ಜಿಂಗ್ ದಿ ಕಾನ್ಸೆಪ್ಟ್ ಆಫ್ ಡೆವಲಪಮೇಂಟ್", ಅಂತರ್ಜಾಲದ ಮಾಹಿತಿ – http://www.frontline.in/static/html/fl1702/17020750.htm

೩೨. ರಾಮಚಂದ್ರ ಗೌಡ ಹಿ.ಶಿ., ೧೯೯೬, "ಬುಡಕಟ್ಟು ಚಿಂತನೆ ತಿರುವಿನಲ್ಲಿ",

೩೩. ಕರ್ಮಾಕರ ಕೆ.ಜಿ., ೨೦೦೨, "ದಿ ಸೈಲೆನ್ಸ್ಡ್ ಡ್ರಮ್ಸ್"(ಎ ರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪಮೆಂಟ್,) ನಾರ್ಥನ್ ಬುಕ್ ಸೆಂಟರ್, ನ್ಯೂಡೆಲ್ಲಿ.

೩೪. **ಗೋಪಾಲ್ ಭಾರದ್ವಾಜ, ೧೯೭೭, "ಸೋಶಿಯಲ್ ಮೂವಮೆಂಟ್ಸ್ ಅಮಾಂಗ್ ದಿ ಟ್ರೈಬಲ್ಸ್ ಆಫ್ ಇಂಡಿಯ"**, ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ, (ಸಂ) ಎಸ್. ಸಿ. ದುಬೆ., ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

೩೫. **ಸೌರೀಶ್, ೨೦೧೦, "ಪ್ರೋಸಸ್ ಆಫ್ ಬೆಟ್ರೇಸ್ ದಿ ಸ್ಪಿರಿಟ್ ಆಫ್ ಫಾರುಸ್ಟ್ ರೈಟ್ಸ್ ಆಕ್ಟ್ ಇನ್ ಬೆಂಗಾಲ್"**, ಈ.ಪಿ. ಡಬ್ಲ್ಯೂ, ಅಗಸ್ಟ್.

೩೬. **ನರೇಂದ್ರ ಬರೆಲಾ, ೨೦೧೦, "ರೆಸಿಸ್ಟೆನ್ಸ್ ಅಗೆನೆಸ್ಟ್ ಪಾಲಾವರಂ ಡ್ಯಾಂ"**, ಈ.ಪಿ. ಡಬ್ಲ್ಯೂ ಅಗಸ್ಟ್

೩೭. **ವೇರಿಯರ್ ಎಲ್ವಿನ್, ೧೯೬೩, "ಎ ಡೀಲ್ ಫಾರ್ ಟ್ರೈಬಲ್ ಇಂಡಿಯಾ"**, ಇಂಟರ್ ಇಂಡಿಯಾ ಪಬ್ಲಿಕೇಷನ್ಸ್, ಬಾಂಬೆ.

೩೮. **ಇಂದಿರಾ ಆರ್., ೨೦೦೬, "ಬುಡಕಟ್ಟು ಅಭಿವೃದ್ಧಿ ಸಾಧ್ಯವಾಗದ ಸಾರ್ವತ್ರಿಕ ಮಾದರಿ"**, ಆದಿವಾಸಿ ಆಖ್ಯಾನ, (ಸಂ), ಎ.ಎಸ್. ಪ್ರಭಾಕರ.

೩೯. **ಪ್ರಮೋದ್ ಕುಮಾರ್ ಮಿಶ್ರ, ೧೯೯೭, "ಪ್ಯಾಟ್ರನ್ಸ್ ಆಫ್ ಇಂಟರ್ ಟ್ರೈಬಲ್ ರಿಲೇಷನ್ಸ್"**, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

೪೦. **ಬೇಹೂರ್, ೧೯೮೨, "ಕಸ್ಟೈನ್ಸ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ"**, ಸೀರಿಯಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

೪೧. **ರೌಟ್ಸ್, ೨೦೦೨, "ಡೈಮೆನ್ಷನ್ಸ್ ಆಫ್ ಟ್ರೈಬಲ್ ಎಜಿಕೇಷನ್ ಇನ್ ಓರಿಸ್ಸಾ"**, ಸೀರಿಯಲ್ ಪಬ್ಲಿಕೇಷನ್, ಡೆಲ್ಲಿ.

೪೨. **ಕರ್ಮಾಕರ ಕೆ.ಜಿ., ೨೦೦೨, "ದಿ ಸೈಲೆನ್ಸ್ಡ ಡ್ರಮ್ಸ್"**,

೪೩. **ನಾಯಕ್ ಎನ್.ಆರ್., ೧೯೯೨, "ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ"**, ಜಾನಪದ ಪ್ರಕಾಶನ, ಹೊನ್ನಾವರ.

೪೪. **ಬೋರಲಿಂಗಯ್ಯ ಹಿ.ಚಿ., ೧೯೯೩, "ಸಿದ್ದಿಯರ ಸಂಸ್ಕೃತಿ"**, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೪೫. **ಪಾಲಾಕ್ಷಪ್ಪ ಟಿ., ೧೯೭೬, "ಸಿದ್ದೀಸ್ ಆಫ್ ನಾರ್ಥ ಕೆನರ"**, ಸ್ಟೆರ್ಲಿಂಗ್ ಪಬ್ಲಿಕೇಷನ್ ನ್ಯೂಡೆಲ್ಲಿ.

೪೬. **ಹಿರೇಮಠ ಆರ್.ಎಸ್., ೧೯೯೩, "ಲೈಫ್, ಲಿವಿಂಗ್ ಅಂಡ್ ಲಾಂಗ್ವೇಜಸ್ ಆಫ್ ಸಿದ್ದೀಸ್ ಆಫ್ ನಾರ್ಥ ಕೆನರ"**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೭. **ದೋಷಿ ಎಲ್.ಸಿ., ೧೯೯೦, "ಟ್ರೈಬಲ್ಸ್ ಎಥ್ನಿಸಿಟಿ ಆಂಡ್ ಕ್ಲಾಸ್ ಇಂಟಿಗ್ರೇಷನ್"**, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ.

೪೮. **ನಿರ್ಮಲ್ ಸೇನ್ ಗುಪ್ತ, ೧೯೯೦, "ದಿ ಸೋಶಿಯಲ್ ಆಂಡ್ ಎಕನಾಮಿಕ್ ಬೇಸಿಸ್ ಆಫ್ ಕರೆಂಟ್ ಟ್ರೈಬಲ್ ಮೂಮೆಂಟ್"**, ಸೋಶಿಯಲ್ ಆಕ್ಷನ್, ಅಕ್ಟೋಬರ್.

೪೯. **ರೋಡಾಲ್ಫ ಹೆರೇಡಿಯಾ, ೧೯೯೫, "ಟ್ರೈಬಲ್ ಎಜುಕೇಷನ್ ನೀಡ್ ಫಾರ್ ಲಿಟರೇಟೀವ್ ಪೆಡಾಗಗಿಆಫ್ ಸೋಶಿಯಲ್ ಟ್ರಾನ್ಸ್ ಫಾರ್‌ಮೇಷನ್"**, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಏಪ್ರಿಲ್.

೫೦. **ಸುಧಾಕರ್ ರೆಡ್ಡಿ ಪಿ., ೧೯೯೫, "ಡಿಸ್‌ಪ್ಲೇಸ್ಮೆಂಟ್ ಪಾಪ್ಯೂಲೇಷನ್ ಆಂಡ್ ಸೋಶಿಯಲ್ ಚೇಂಜ್"**, ದೀಪ್ ಆಂಡ್ ದೀಪ್ ಪಬ್ಲಿಕೇಷನ್, ನ್ಯೂಡೆಲ್ಲಿ.

೫೧. **ಭುಜೇಂದ್ರನಾಥ ಪಾಂಡೆ, ೧೯೯೬, "ಟ್ರೈಬಲ್ ಎಜುಕೇಷನ್"**, ಎ.ಪಿ.ಎಸ್. ಪಬ್ಲಿಶಿಂಗ್ ಕಾರ್ಪೊರೇಷನ್, ನ್ಯೂಡೆಲ್ಲಿ.

೫೨. **ಪಾಂಡೆ ಎ.ಕೆ, ೧೯೯೭, "ಟ್ರೈಬಲ್ ಸೊಸೈಟಿ ಇನ್ ಇಂಡಿಯಾ"**, ಮೊನಾರ್ಕ್ ಪಬ್ಲಿಕೇಷನ್ ಪ್ರೈ. ಲಿ. ನ್ಯೂಡೆಲ್ಲಿ.

೫೩. **ಸಕ್ಸೇನ್ ಎಸ್.ಸಿ., (ಅನುವಾದ) ಲಾಸ್ಸ್ ಬಿ., ೨೦೧೧, "ಬುಡಕಟು ಜನರ ಹಕ್ಕುಗಳು"**, ಯೋಜನ ನಿಯತಕಾಲಿಕೆ, ಯೋಜನಾ ಕನ್ನಡ ಪ್ರಕಾಶನ ವಿಭಾಗ, ಕೋರಮಂಗಲ, ಬೆಂಗಳೂರು ಏಪ್ರಿಲ್.

೫೪. **ಲಕ್ಷ್ಮಣ ಸಿ.ಎಂ., ೨೦೧೦, "ಭಾರತದ ಬುಡಕಟ್ಟು ಸಮುದಾಯ ಮತ್ತು ಸಾಮಾಜಿಕ ಬದಲಾವಣೆ: ಒಂದು ವಿಶ್ಲೇಷಣೆ"**, ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, (ಸಂ) ಡಾ. ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೫. **ಬಾಲಸುಬ್ರಮಣ್ಯಂ ಆರ್., ೨೦೧೧, "ಅಹಂ ಇಲ್ಲದೆ ಸೇವೆ-ಜಡಿಯ ಕಲಿಸಿದ ಪಾಠ"**, ಪ್ರಜಾವಾಣಿ ದಿನಪತ್ರಿಕೆ, ದಿ: ೧೮-೧೦-೨೦೧೧

೫೬. **ಬಾಲಸುಬ್ರಮಣ್ಯಂ ಆರ್., ೨೦೧೧, "ಜ್ಞಾನವೆಂಬ ಬೆಣ್ಣೆಯ ಹಿಡಿದು ಕಲಿಯೆಂಬ ತುಪ್ಪ ಅರಸುತ್ತ"**, ಪ್ರಜಾವಾಣಿ ದಿನಪತ್ರಿಕೆ, ದಿ: ೧-೧೧-೨೦೧೧

೫೭. **ಓಬಳೇಶ್ ಕೆ.ಎಚ್., ೨೦೧೧, "ಅಕ್ಷರ ದೀಪ ಅರಸುತ್ತ"**, ಸೋಲಿಗ ಮಕ್ಕಳ ಕಲಿಕೆ ವ್ಯಥೆ-ಕಥೆ, ಪ್ರಜಾವಾಣಿ.

೫೮. **ಮೇತ್ರಿ ಕೆ.ಎಂ., ೨೦೧೧, "ಡುಂಗ್ರಿ ಗರಾಸಿಯಾ ಬುಡಕಟ್ಟು"** ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, (ಸಂ) ಡಾ. ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೯. **ಬಾಲಸುಬ್ರಮಣ್ಯಂ ಆರ್., ೨೦೧೧, "ನನಗೆ ಬೇಕಾದ ಒಣ ಕಟ್ಟಿಗೆ ಸಿಗುವುದೇ"**, ಪ್ರಜಾವಾಣಿ ದಿನಪತ್ರಿಕೆ, ದಿ: ೨೧-೫-೨೦೧೧.

೬೦. **ಪಾರ್ವತಮ್ಮ ಸಿ., ೨೦೦೭, "ಆದಿವಾಸಿ ಸಮುದಾಯಗಳ ಅಭಿವೃದ್ಧಿ"**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. **ಚಂದ್ರ ಪೂಜಾರಿ ಎಂ., ೨೦೧೨, ಅಭಿವೃದ್ಧಿ ಮತ್ತು ಬಡತನ**, ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ, ದಿನಾಂಕ:೩೦-೧೧-೨೦೧೨

೬೨. **ಚಂದ್ರ ಪೂಜಾರಿ ಎಂ., ೨೦೧೧, "ನೂರು ಕವಲು ನೂರಾರು ಒಲವು"**, ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ನವೆಂಬರ್.

೬೩. **ಪಾರ್ವತಮ್ಮ ಸಿ., ೨೦೦೭, "ಆದಿವಾಸಿ ಸಮುದಾಯಗಳ ಅಭಿವೃದ್ಧಿ"**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. **ಕರ್ಮಕರ್ ಕೆ.ಜಿ., ೨೦೦೨, "ದಿ ಸೈಲೆನ್ಸ್‌ಡ್ರಮ್ಸ್- ದಿ ವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪ್‌ಮೆಂಟ್"**, ನಾರ್ಥರ್ನ್ ಬುಕ್ ಸೆಂಟರ್, ನ್ಯೂ ಡೆಲ್ಲಿ, ೨೦೦೨.

೬೫. **ಚಂದ್ರ ಪೂಜಾರಿ ಎಂ., ೨೦೦೬, "ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ"**, ಅಭಿವೃದ್ಧಿ ವ್ಯಾಖ್ಯಾನ (ಸಂ), ಡಾ. ಎ.ಎಸ್. ಪ್ರಭಾಕರ್, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

೬೬. **ಭಾಗ್ಯಲಕ್ಷ್ಮೀ ಮಹಾಪಾತ್ರ, ೨೦೧೧, "ಡೆವಲಪ್‌ಮೆಂಟ್ ಆಫ್ ಎ ಪ್ರಿಮಿಟೀವ್ ಟ್ರೈಬ್- ಎ ಸ್ಟಡಿ ಆಫ್ ಡಿಡಾಯ್ಸ್"**, ಕಾನ್ಸೆಫ್ಟ್ ಪಬ್ಲಿಷಿಂಗ್ ಕಂಪನಿ (ಪ್ರೈ) ಲಿಮಿಟೆಡ್, ನ್ಯೂಡೆಲ್ಲಿ

೬೭. **ಬಾಲಸುಬ್ರಮ್ಮಣ್ಯಂ, ೨೦೧೩, "ಯಾವುದು ಸಮಸ್ಯೆ? ಎಲ್ಲಿದೆ ಪರಿಹಾರ"?** ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ ದಿನಾಂಕ:-೦೧-೦೧-೨೦೧೩.

೬೮. **ರವೀಂದ್ರ ಎನ್.ವಿ., ೨೦೧೩, "ಶೋಚನೀಯ ಸ್ಥಿತಿಯಲ್ಲಿ ಕಾಡಿಗೊಲ್ಲ ಮಹಿಳೆಯರು"**, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ, ದಿನಾಂಕ:-೦೨-೦೧-೨೦೧೩

೧೯. ವಿಮಲ ಶಾ, ೧೯೬೯, "ಟ್ರೈಬಲ್ ಎಕಾನಮಿ ಇನ್ ಗುಜರಾತ್", ವೆಲ್‌ಪ್ರಿಟ್ ಪಬ್ಲಿಕೇಶನ್, ಜೈಪುರ.

೨೦. ವಿದ್ಯಾರ್ಥಿ ಎಲ್.ಪಿ., ೧೯೭೦, "ಸೋಶಿಯೋ-ಕಲಚ್ರಲ್ ಇಂಪ್ಲಿಕೇಷನ್ ಆಫ್ ಇಂಥಸ್ಟ್ರಿಯಲೈಸೆಷನ್ ಇನ್ ಇಂಡಿಯ", ಪ್ಲ್ಯಾನಿಂಗ್ ಕಮೀಷನ್, ನ್ಯೂಡೆಲ್ಲಿ.

೨೧. ರಾಯ್ ಭರ್ಮನ್ ಬಿ.ಕೆ., ೧೯೭೩, ಕೆ.ಎಸ್. ಮಾಥೂರ್, (ಎಡಿಟೆಡ್), "ಮಾಡ್ರನೈಸೆಷನ ಆಫ್ ಟ್ರೈಬಲ್ ಪಿಪಲ್ ಆನ್ ಇಂಡಿಯನ್ ಬಾರ್ಡರ್ ಸ್ಟಡೀಸ್ ಇನ್‌ಸೋಸಿಯಲ್ ಚೇಂಜ್", ಎತ್ನೋಗ್ರಾಫಿಕ್ ಅಂಡ್ ಫೋಕ್‌ಕಲ್ಚರ್ ಸೊಸೈಟಿ.

೨೨. ಡೀನ್ ಜೋರಸ್, ೧೯೭೩, "ಸೋಶಿಯಲೈಸೇಷನ್ ಆಫ್ ಪೊಲಿಟಿಕ್ಸ್", ಹಿಗ್ಗಿನ್ ಬೋತೆಮ್ ಪಬ್ಲಕೇಷನ್, ಮೆಡ್ರಾಸ್.

೨೩. ಮಾಥೂರ್ ಪಿ.ಆರ್.ಜಿ., ೧೯೭೭ "ಅಕೌಂಟ್ರೇಷನ್ ಅಂಡ್ ಇಂಟಗ್ರೇಷನ್ ಇನ್ ಟ್ರೈಬಲ್ ಲೈಫ್", ಇಂಟರ್ ಇಂಡಿಯಾ ಪಬ್ಲಿಷರ್ಸ್ ನ್ಯೂಡೆಲ್ಲಿ.

೨೪. ನಿರ್ಮಲ ಕುಮಾರ ಬೋಸ್, ೧೯೭೭, "ಟ್ರೈಬಲ್ ಲೈಫ್ ಇನ್ ಇಂಡಿಯ", ನ್ಯಾಷನಲ್ ಬುಕ್ ಟ್ರಸ್ಟ್, ನ್ಯೂಡೆಲ್ಲಿ.

೨೫. ಜೋಶಿ ಎಸ್.ಎಲ್., ೧೯೭೮, "ಪ್ರೋಸಸ್ ಆಫ್ ಟ್ರೈಬಲ್ ಯೂನಿಫಿಕೇಷನ್ ಅಂಡ್ ಇಂಟಗ್ರೇಷನ್", ಕಾನ್ಸೆಪ್ಟ್ ಪಬ್ಲಿಶಿಂಗ್ ಕಂಪನಿ, ನ್ಯೂಡೆಲ್ಲಿ.

೨೬. ಗೋಪಾಲ ರಾವ್ ಎನ್, ೧೯೭೯, "ಲ್ಯಾಂಡ್ ಅಲೀನೇಷನ್ ಏ ಮಿನೆನ್ಸ್ ಆಫ್ ಟ್ರೈಬಲ್ ಎಕಾನಮಿ", ಟ್ರೈಬ್ ಸಂಪುಟ ೧೦, ನಂ-೪.

೨೭. ರಾಯ್ ಭರ್ಮನಿ ಬಿ.ಕೆ., ೧೯೭೯, "ಸಮ್ ಡೈಮೆನಷನ್ ಆಫ್ ಟ್ರಾನ್ಸಫಾರ್ಮೇಷನ್ ಆಫ್ ಟ್ರೈಬಲ್ ಸ್ಟಡೀಸ್ ಇನ್ ಇಂಡಿಯ", ಜರ್ನಲ್ ಆಫ್ ಸೋಷಿಯಲ್ ರೀಸರ್ಚ ಸಂಪುಟ-೨೩, ನಂ-೩.

೨೮. ದೇವೇಂದ್ರ ಠಾಕೂರ್, ೧೯೮೬, "ಸೋಶಿಯೊ – ಎಕಾನಾಮಿಕ್ ಡೆವಲಪ್ಮೆಂಟ್ ಆಫ್ ಟ್ರೈಬಲ್ ಇನ್ ಇಂಡಿಯ, ದೀಪ್ ಅಂಡ್ ದೀಪ್ ಪಬ್ಲಿಷರ್ಸ್, ನ್ಯೂಡೆಲ್ಲಿ.

೨೯. ಎಲ್.ಸಿ. ಮೋಹಂತಿ, ೧೯೮೯, "ಅನ್ ಅನಾಲಿಸಿಸ್ ಆಫ್ ದಿ ಇಂಪ್ರೂವ್ಡ್ ಎಕಾನಮಿಕ್ ಲೈಫ್ ಆಫ್ ಟ್ರೈಬಲ್ಸ್ ಅಂಡ್ ದಿ ವೇ ಟುವರ್ಡ್ಸ್ ಇಂಟಗ್ರೇಷನ್", ದೀಪ್ ಅಂಡ್ ದೀಪ್ ಪಬ್ಲಿಷರ್ಸ್.

೮೦. ನಿರ್ಮಲ್ ಸೇನ್ ಗುಪ್ತ, ೧೯೯೦, "ದಿ ಸೋಶಿಯಲ್ ಅಂಡ್ ಎಕನಾಮಿಕ್ ಬೇಸಿಸ್ ಆಫ್ ಕರೆಂಟ್ ಟ್ರೈಬಲ್ ಮೂವ್ಮೆಂಟ್", ಜರ್ನಲ್ ಆಫ್ ಸೋಶಿಯಲ್ ಆಕ್ಷನ್, ಅಕ್ಟೋಬರ್.

೮೧. ಮಧುಸೂದನ್ ತ್ರಿವೇದಿ, ೧೯೯೧, "ಎಂಟರ್‌ಪ್ರಿನಿವರ್ಶಿಪ್ ಅಮಾಂಗ್ ಟ್ರೈಬಲ್ಸ್", ಪ್ರಿಂಟ್ ವೆಲ್ ಪಬ್ಲಿಕೇಷನ್, ಜೈಪುರ.

೮೨. ತರುಣ್ ಭಿಕಶ್ ಸುಕಾಯ್, ೨೦೧೦, "ಟ್ರೈಬಲ್ ಡೆವಲಪಮೆಂಟ್ ಇನ್ ಇಂಡಿಯ", ವನ್ ಓವರ್ ವ್ಯೂ, ಕುರುಕ್ಷೇತ್ರ, ನವೆಂಬರ್.

೮೩. ಧೂರ್ಜತಿ ಮುಖರ್ಜಿ, ೨೦೧೦, "ಟ್ರೈಬಲ್ ಡಿಸ್‌ಪ್ಲೇಸ್‌ಮೆಂಟ್, ದೇರ್ ರೈಟ್ಸ್ ಟು ಲೈವ್ಲಿವುಡ್ ಕೆನ್ ನಾಟ್ ಬಿ ಡೀನೇಯ್ಡ್", ಕುರುಕ್ಷೇತ್ರ, ನವೆಂಬರ್.

೮೪. ಪ್ರತಿಮಾ ನಾಗವಂಶಿ, ೨೦೧೦, "ಡೋರ್ ಕ್ಲೋಸಿಂಗ್ ಫಾರ್ ಆದಿವಾಸಿ ಫಾರ್ಮರ್ಸ್", ಕುರುಕ್ಷೇತ್ರ, ನವೆಂಬರ್.

೮೫. ತಾಂಕೇಶ್ ಜೋಶಿ ಅಂಡ್ ಮುಕ್ತೇಶ್ ಜೋಶಿ, ೨೦೧೦, "ಏ ನ್ಯೂ ಆಸ್ಪೆಕ್ಟ್ ಫಾರ್ ಎಕಾನಾಮಿಕ್ ಸಸ್ಟೈನೇಬಿಲಿಟಿ ಅಮಾಂಗ್ ದಿ ಟ್ರೈಬ್ಸ್ ಆಫ್ ಛತ್ತಿಸಘಡ", ಕುರುಕ್ಷೇತ್ರ, ನವೆಂಬರ್.

೮೬. ಕರ್ಮಾಕರ ಕೆ.ಜಿ., ೨೦೦೨, "ದಿ ಸೈಲೆನ್ಸ್ಡ ಡ್ರಮ್ಸ್, ಏ ರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪಮೆಂಟ್", ನಾರ್ಥನ್ ಬುಕ್ ಸೆಂಟರ್, ನ್ಯೂಡೆಲ್ಲಿ.

೮೭. ಚಂದ್ರಶೇಖರ ಟಿ.ಆರ್., ೧೯೯೩, "ಅಭಿವೃದ್ಧಿ ಮೀಮಾಂಸೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೮. ಚಂದ್ರ ಪೂಜಾರಿ ಎಂ., ೨೦೦೬, "ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು", ಆದಿವಾಸಿ ಆಖ್ಯಾನ (ಸಂ) ಎ. ಎಸ್. ಪ್ರಭಾಕರ.

೮೯. ಜಗನ್ನಾಥ್ ಅಂಬುಗುಡಿಯಾ, ೨೦೧೦, "ಟ್ರೈಬಲ್ ರೈಟ್ಸ್ ಡಿಸ್ಪೊಸೇಷನ್ ಅಂಡ್ ದಿ ಸ್ಟೇಟ್ ಆಫ್ ಒರಿಸ್ಸಾ", ಇ.ಪಿ ಡಬ್ಲ್ಯೂ, ಅಗಸ್ಟ್

೯೦. ರಮಾಕಾಂತ ಪ್ರಸಾದ್, ೧೯೮೮, "ದಿ ಕೇಶ ಸ್ಟಾಡಿ ಆಫ್ ಕಲ್ಚರಲ್ ಎಕಾಲಜಿ ಆಂಡ್ ಟ್ರೈಬಲ್ ಆಂಡ್ ಟ್ರೈಬಲ್ ಡೈನಾಮಿಕ್ಸ್", ಜೆ.ಕೆ. ಪಬ್ಲಿಷರ್ಸ್ ಆಂಧ್ರ ಪ್ರದೇಶ.

೯೧. ಮೊಹಂತಿ ಎಲ್.ಸಿ., ೧೮೮೯, "ಆನ್ ಅನಾಲಿಸಿಸ್ ಆಫ್ ಇಂಪ್ರೀವ್ಡ್ ಎಕಾನಮಿಕ ಲೈಫ್ ಆಫ ಓರಿಸ್ಸಾ ಆಂಡ್ ವೇ ಟುವರ್ಡ್ಸ್ ಇಂಟಿಗ್ರೇಷನ್", ದೀಪ ಆಂಡ್ ದೀಪ್ ಪಬ್ಲಿಕೇಷನ್ ನ್ಯೂಡೆಲ್ಲಿ.

೯೨. ಮದುಸೂಧನ್ ತ್ರಿವೇದಿ, ೧೯೯೦, "ಎಂಟರ್‌ಪ್ರಿನಿವರ್ಶಿಪ್ ಅಮಾಂಗ್ ಟ್ರೈಬಲ್ಸ್", ಪ್ರಿಟ್ವೆಲ್ ಪಬ್ಲಿಷರ್ಸ್, ಜೈಪುರ.

೯೩. ಬುದ್ಧದೇವ್ ಚೌದಾದಿ, (ಸಂ)., ೧೯೯೦, "ಟ್ರೈಬಲ್ ಟ್ರಾನ್ಸಫಾರ್ಮೇಶನ್ ಇನ್ ಇಂಡಿಯಾ" ಸಂ (೫) ಇಂಟರ್ ಇಂಡಿಯಾ ಪಬ್ಲಿಕೇಷನ್, ನ್ಯೂಡೆಲ್ಲಿ.

೯೪. ದೇಗಾಂವಕರ್ ಎಸ್.ಜಿ., ೧೯೯೪, "ಆಡ್ಮಿನಿಸ್ಟ್ರೇಷನ್ ಆಂಡ್ ಡೆವಲಪ್‌ಮೆಂಟ್ಸ್", ಕಾನ್ಸೆಪ್ಟ್ ಪಬ್ಲಿಕೇಷನ್, ನ್ಯೂಡೆಲ್ಲಿ.

೯೫. ತ್ರಿವೇದಿ ಎಸ್.ಎನ್., ೧೯೯೯, "ಟ್ರೈಬಲ್ಸ್ ಇನ್ ಟ್ರಾನ್ಸಿಷನ್", ಡಿಸ್ಕವರಿ ಪಬ್ಲಿಕೇಷನ್ ಹೌಸ್, ನ್ಯೂಡೆಲ್ಲಿ.

೯೬. ಜೈನ್ ಪಿ.ಸಿ., ೧೯೯೯, "ಪ್ಲಾನ್ಡ್ ಡೆವಲಪಮೆಂಟ್ ಅಮಾಂಗ್ ಟ್ರೈಬಲ್ಸ್", ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ.

೯೭. ಭಕ್ಷಿ ಎಸ್.ಆರ್., ಕಿರಣ್ ಬಾಲ್, ೧೯೯೫, "ಸೋಶಿಯಲ್ ಆಂಡ್ ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಶೆಡ್ಯೂಲ್ಡ್ ಟ್ರೈಬ್ಸ್", ದೀಪ ಆಂಡ್ ದೀಪ್ ಪಬ್ಲಿಕೇಷನ್, ನ್ಯೂಡೆಲ್ಲಿ.

೯೮. ಪ್ರಕಾಶ ಚಂದ್ರ ಮೆಹ್ತ, ೨೦೦೦, "ಟ್ರೈಬಲ್ ಡೆವಲಪಮೆಂಟ್ ಇನ್ ಟ್ವಂಟಿಯತ್ ಸೆಂಚುರಿ", ಶಿವಾ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್, ಉದಯಪುರ.

೯೯. ಶ್ರೀಕಾಂತ್ ಎಸ್., ೨೦೧೧, "ಮೂಲನಿವಾಸಿಗಳ ಹಕ್ಕು ಪತ್ರ", ಯೋಜನಾ ನಿಯತಕಾಲಿಕೆ ಯೋಜನಾ ಕನ್ನಡ ಪ್ರಕಾಶನ ವಿಭಾಗ, ಕೋರಮಂಗಲ, ಬೆಂಗಳೂರು, ಏಪ್ರಿಲ್.

೧೦೦. ಗುರುಲಿಂಗಯ್ಯ ಎಂ., ೨೦೦೬, "ಬುಡಕಟ್ಟು ಸಮಸ್ಯೆ ಮತ್ತು ಅಭಿವೃದ್ಧಿ ಸಮಾಜಶಾಸ್ತ್ರೀಯ ದೃಷ್ಟಿಕೋನ", ಅಭಿವೃದ್ಧಿ ಅಧ್ಯಯನ ಜರ್ನಲ್, ಜನವರಿ-ಜೂನ್.

೧೦೧. ಅನಂತ ಕೃಷ್ಣ ಅಯ್ಯರ್ ಎಲ್.ಎ., ೧೯೦೯, "ದಿ ಕೊಚ್ಚಿನ್ ಟ್ರೈಬ್ಸ್ ಆಂಡ್ ಕಾಸ್ಟ್", ಸಂ. ೫, ಹಗ್ಗಿನ್ಸ್ ಬೋಥಮ್ಸ್, ಮದ್ರಾಸ್.

೧೦೨. ಲೋಗನ್ಸ್ ವಿಲಿಯಮ್ಸ್, ೧೯೫೧, "ಮಲಬಾರ್ ಮ್ಯಾನ್ಯೂಯಲ್", ಸಂಪುಟ-೧

೧೦೩. ಅಯ್ಯಪ್ಪನ್, ೧೯೬೫, "ಎ ಸೋಶಿಯಲ್ ರೆವಲ್ಯೂಷನ್ ಇನ್ ಕೇರಳ ವಿಲೇಜ್", ಏಷಿಯನ್ ಪಬ್ಲಿಷಿಂಗ್ ಹೌಸ್, ಬಾಂಬೆ.

೧೦೪. ಮಾಥುರ್ ಪಿ.ಆರ್.ಜಿ., ೧೯೭೧, "ಟ್ರೈಬಲ್ ಸಿಚುವಿಷನ್ ಇನ್ ಕೇರಳ", ಕೇರಳ ಹಿಸ್ಟಾರಿಕಲ್ ಸೊಸೈಟಿ, ತ್ರಿವೇಂಡ್ರಂ.

೧೦೫. **ಕನ್ನಮನ್ ಎಂ., ೧೯೮೨, "ಟ್ರೈಬಲ್ ಎಕಾನಮಿ ಆಫ್ ಕೇರಳ ಆನ್ ಇಂಟ್ರಾ ರಿಜನಲ್ ಅನಾಲಿಸೀಸ್"**, ಎಂ.ಫಿಲ್ ಥೀಸೀಸ್ ಸಬ್ಮಿಟೇಡ್ ಟು ಜೆ.ಎನ್.ಯು, ನ್ಯೂಡೆಲ್ಲಿ.

೧೦೬. **ಕರ್ಮಕರ್ ಕೆ.ಜಿ., ೨೦೦೨, "ದಿ ಸೈಲೆನ್ಸ್ಡ್ ಡ್ರಮ್ಸ್" (ಎ ರಿವಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಪ್‌ಮೆಂಟ್)**, ಜನಾರ್ಧನ್ ಬುಕ್ ಸೆಂಟರ್, ನ್ಯೂಡೆಲ್ಲಿ.

೧೦೭. **ಶ್ರೀನಿವಾಸ್ ಎಲ್., ೨೦೧೦, "ಬುಂಡೇಬೆ ಸಮುದಾಯ ಒಂದು ಅಲೆಮಾರಿ ಜನಾಂಗ"**, ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು (ಸಂ) ಡಾ. ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೮. **ಕೋಮಲ್ ಸಿಂಗ್, ೨೦೧೧, "ಎಕಾನಮಿ ಆಫ್ ಟ್ರೈಬಲ್ ವಿಲ್ಲೇಜ್ ಇನ್ ಮಣಿಪುರ"**, ಕಾನ್ಸೆಫ್ಟ್ ಪಬ್ಲಿಷಿಂಗ್ ಕಂಪನಿ (ಪ್ರೈ) ಲಿಮಿಟೆಡ್, ನ್ಯೂಡೆಲ್ಲಿ.

೧೦೯. **ಚಂದ್ರ ಪೂಜಾರಿ ಎಂ., ೨೦೧೩, ಪರ್ಯಾಯ ಸಮಾಜ ವಿಜ್ಞಾನಗಳ ಪರಿಕಲ್ಪನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಾಯ ಮೂರು

ಭಾರತದ ಸಂವಿಧಾನ, ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಅಧ್ಯಾಯ ಮೂರು

ಭಾರತದ ಸಂವಿಧಾನ, ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಭಾರತೀಯ ಸಂವಿಧಾನ ಮತ್ತು ಬುಡಕಟ್ಟುಗಳು

ಭಾರತದ ಸಂವಿಧಾನದ ೧೪ನೇ ವಿಧಿಯ ಪ್ರಕಾರ ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ವಿವಿಧ ದುರ್ಬಲ ವರ್ಗಗಳ ವಿಶೇಷ ಅವಶ್ಯಕತೆಗಳನ್ನು ಗುರುತಿಸಿ, ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಭರವಸೆಯನ್ನು ಕೊಟ್ಟಿರುವುದು ಮಾತ್ರವಲ್ಲದೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಮುಂದುವರಿಕೆಗಾಗಿ, ಮತ್ತು ನಿಶ್ಚಯಾತ್ಮಕ ತಾರತಮ್ಯವನ್ನು ಹೋಗಲಾಡಿಸಬೇಕೆಂದು ರಾಜ್ಯ ಅಥವಾ ಸರ್ಕಾರಕ್ಕೆ ಆದೇಶಿಸುತ್ತದೆ. ಸಂವಿಧಾನದ ೧೫ (೪) ಮತ್ತು ೧೬ (೪)ನೇ ವಿಧಿಗಳ ಪ್ರಕಾರ ಸರ್ಕಾರದ ಸೇವೆಗಳಲ್ಲಿ ಯಾವುದಾದರು ಸಮುದಾಯದ ಪ್ರಾತಿನಿಧ್ಯ ಸಮರ್ಪಕವಾಗಿಲ್ಲದಿದ್ದರೆ ಅಂತಹ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಹುದ್ದೆಗಳಲ್ಲಿ ಮತ್ತು ನೇರ ನೇಮಕಾತಿಗಳಲ್ಲಿ ವಿಶೇಷ ಮೀಸಲಾತಿ ಒದಗಿಸಿಕೊಡಲು ಅವಕಾಶ ಮಾಡಿಕೊಟ್ಟಿದೆ. ೧೭ನೇ ವಿಧಿಯು ಅಸ್ಪೃಶ್ಯತೆಯ ಆಚರಣೆಯನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿ ಅಸ್ಪೃಶ್ಯತೆಯ ಆಚರಣೆಯನ್ನು ಕಡ್ಡಾಯವಾಗಿ ನಿಷೇಧಿಸಿದೆ.

೪೬ನೇ ವಿಧಿಯ ದುರ್ಬಲ ವರ್ಗಗಳ ಮತ್ತು ವಿಶೇಷವಾಗಿ ಪರಿಶಿಷ್ಟ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಆಸಕ್ತಿವಹಿಸಿ ಉನ್ನತೀಕರಿಸಬೇಕು ಮತ್ತು ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ರಕ್ಷಿಸಬೇಕೆಂದು ರಾಜ್ಯಕ್ಕೆ ನಿರ್ದೇಶಿಸಿದೆ. ೨೪೪ನೇ ವಿಧಿಯು ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕಾಗಿ ಅನುಸೂಚಿತ ಪ್ರದೇಶಗಳಲ್ಲಿ ಆಡಳಿತವನ್ನು ಗುಣಾತ್ಮಕವಾಗಿ ಸುಧಾರಿಸಬೇಕೆಂದು ಆದೇಶಿದೆ. ೨೭೫ನೇ ವಿಧಿಯು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗಾಗಿ ಹಣಕಾಸಿನ ವಿಶೇಷ ನೆರವನ್ನು ಒದಗಿಸಿದೆ. ೩೩೦, ೩೩೨, ಮತ್ತು ೩೩೫ನೇ ವಿಧಿಗಳ ಪ್ರಕಾರ ಜನಪ್ರತಿನಿಧಿ ಸಭೆಗಳಾಗಿರುವ ಪಾರ್ಲಿಮೆಂಟ್,

ರಾಜ್ಯಗಳ ವಿಧಾನಸಭೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾನಗಳಲ್ಲಿ ಮೀಸಲಿರಿಸಲಾಗಿದೆ. ೨೪೦ನೇ ವಿಧಿಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಆಯೋಗವನ್ನು ನೇಮಕ ಮಾಡಲು ಮತ್ತು ೨೪೨ನೇ ವಿಧಿಯ ಪ್ರಕಾರ ಅಂತಹ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟುಗಳೆಂದು ಪರಿಗಣಿಸುವ ಅಧಿಕಾರವನ್ನು ಒದಗಿಸಿದೆ.

ಸಂವಿಧಾನದ ೫ನೇ ಅನುಸೂಚಿಯ ೨೪೪ (೧)ನೇ ವಿಧಿಯು ಆಸ್ಸಾಂ, ಮಿಜೋರಾಂ ಮತ್ತು ಮೇಘಾಲಯ ರಾಜ್ಯಗಳನ್ನು ಹೊರತುಪಡಿಸಿ ಇತರ ಎಲ್ಲಾ ರಾಜ್ಯಗಳ ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬುಡಕಟ್ಟು ಸಲಹಾ ಪರಿಷತ್ತನ್ನು ನೇಮಕಮಾಡಿ ಅನುಸೂಚಿತ ಪ್ರದೇಶಗಳ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯಗಳ ರಾಜ್ಯಪಾಲರು ರಾಷ್ಟ್ರಾಧ್ಯಕ್ಷರಿಗೆ ವಾರ್ಷಿಕ ವರದಿಯನ್ನು ಸಲ್ಲಿಸಬೇಕಾಗುತ್ತದೆ. ಇದು ಯಾವುದೇ ರಾಜ್ಯದ ಅನುಸೂಚಿತ ಪ್ರದೇಶ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಡಳಿತದ ನಿಯಂತ್ರಣಕ್ಕೆ ಸಂಬಂಧ ಪಟ್ಟಂತೆಯೂ ಕೂಡ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಬೇಕೆಂದು ನಿರ್ದೇಶಿಸುತ್ತದೆ.

ಸಂವಿಧಾನದ ಆರನೇ ಅನುಸೂಚಿಯ ೨೪೪(೨)ರ ಪ್ರಕಾರ ಆಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳು ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದೆ ಮತ್ತು ಈ ರಾಜ್ಯಗಳಲ್ಲಿನ ಕೆಲವು ಬುಡಕಟ್ಟು ಪ್ರದೇಶಗಳನ್ನು ಸ್ವಾಯತ್ತ ವಲಯಗಳು, ಜಿಲ್ಲಾ ಸಮಿತಿ ಮತ್ತು ವಲಯಗಳನ್ನು ಒಳಗೊಂಡ ಪ್ರದೇಶಗಳೆಂದು ಗುರುತಿಸಿದೆ. ಈ ಸ್ವಾಯತ್ತ ಜಿಲ್ಲಾ ಸಲಹಾ ಸಮಿತಿ ಮತ್ತು ವಲಯ ಸಮಿತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಶಾಸನಾತ್ಮಕ ಮತ್ತು ಕಾರ್ಯ ನಿರ್ವಾಹಣಾತ್ಮಕ ಅಧಿಕಾರವನ್ನು ಒದಗಿಸಿದೆ. ಬುಡಕಟ್ಟು ಜನರು ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡಲು ಸಂವಿಧಾನದ ೭೩ನೇ ತಿದ್ದುಪಡಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಪರಿಶಿಷ್ಟ ಅನುಸೂಚಿತ ಪ್ರದೇಶಗಳಿಗೂ ಎಕ್ಸ್‌ಟೇನಶನ್ ಟು ದಿ ಶೇಡ್ಯೂಲ್ಡ್ ಏರಿಯಾ ಆಕ್ಟ್ ೧೯೯೬ ಇದರ ಪ್ರಕಾರ ವಿಶೇಷ ಅವಕಾಶಗಳನ್ನು ಒದಗಿಸಿಕೊಡಲಾಗಿದೆ.

೩.೨. ಬುಡಕಟ್ಟು ಕಲ್ಯಾಣದ ಸ್ವತಂತ್ರ್ಯ ಇಲಾಖೆ

ಬ್ರಿಟೀಷರ ವಸಹಾತುಶಾಹಿ ನೀತಿಯಿಂದ ಬುಡಕಟ್ಟು ಸಮುದಾಯಗಳು ಅಂಚಿಗೆ ತಳ್ಳಲ್ಪಟ್ಟವು. ಬ್ರಿಟೀಷರು, ಜಮೀನುದಾರರು ಅರಣ್ಯ ಮತ್ತು ಭೂಮಿಯನ್ನು ಆಕ್ರಮಿಸಿ ಬುಡಕಟ್ಟು ಜನರಿಗೆ ಮೋಸ ಮಾಡಿ, ಅವರನ್ನು ಶೋಷಿಸಿ ಭೂಮಿ ಮತ್ತು ಅವರ ಆರ್ಥಿಕ ಚಟುವಟಿಕೆಗಳನ್ನು ವಾಣಿಜ್ಯೀಕರಣಗೊಳಿಸಿದರು. ಇದರಿಂದ ಅರಣ್ಯಗಳು ಸಾಗುವಳಿ ಪ್ರದೇಶಗಳಾಗಿ, ಕಾಫಿ, ಟೀ, ರಬ್ಬರ್‌ಗಳಂತಹ ತೋಟದ ವಾಣಿಜ್ಯ ಬೆಳೆಗಳನ್ನು ಬೆಳೆಯತೊಡಗಿದರು. ಅರಣ್ಯದ ಮರದ ಸಂಪತ್ತನ್ನು ಲೂಟಿ ಮಾಡಲು ಕಾಂಟ್ರಾಕ್ಟರ್‌ಗಳಿಗೆ ಅವಕಾಶ ನೀಡಲಾಯಿತು. ಬುಡಕಟ್ಟು ಜನರ ಸಾಂಸ್ಕೃತಿಕ ಸ್ವಾಯತ್ತತೆಯ ಬದುಕನ್ನು ಅರ್ಥ ಮಾಡಿಕೊಳ್ಳದೆ ಮುಖ್ಯವಾಹಿನಿಯನ್ನು

ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜಕೀಯ ನಾಯಕರು ಮತ್ತು ಅಧಿಕಾರಿ ವರ್ಗ ತಮ್ಮದೇ ಸರಿ ಎಂದು ಭಾವಿಸಿಕೊಂಡು ಬುಡಕಟ್ಟು ಜನರ ಬದುಕಿನಲ್ಲಿ ಲಗ್ಗೆಯಿಟ್ಟಿದ್ದಾರೆ. ಇದರ ಪರಿಣಾಮವಾಗಿ ಬುಡಕಟ್ಟು ಜನರು ನಿರ್ಗತಿಕರಾದರು. ದೇಶವನ್ನಾಳಿದ ಮುಸಲ್ಮಾನರಾಗಲಿ, ಬ್ರಿಟೀಷರಾಗಲಿ ಇವರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಿಲ್ಲ. ಕರ್ನಾಟಕದಲ್ಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಬುಡಕಟ್ಟುಗಳ ಬಡತನ ರೇಖೆಯ ಪ್ರಮಾಣವು ಶೇ. ೨೩.೫ರಷ್ಟಿದೆ. ನಗರ ಬುಡಕಟ್ಟುಗಳ ಬಡತನ ರೇಖೆಯ ಪ್ರಮಾಣವು ಶೇ. ೫೦.೬ರಷ್ಟಿದೆ. ವಾಸ್ತವಿಕವಾಗಿ ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆಯ ಶೇ. ೪೫ ರಿಂದ ೬೦ರಷ್ಟು ಜನರು ಗ್ರಾಮೀಣ ಬುಡಕಟ್ಟು ಜನರಾಗಿದ್ದಾರೆ ಮತ್ತು ಶೇ. ೮೦ರಷ್ಟು ಬುಡಕಟ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂಬುದನ್ನು ಕರ್ನಾಟಕ ಮಾನವ ಅಭಿವೃದ್ಧಿ ವರದಿಯ ಆಧಾರದ ಮೇಲೆ ಅರಿಯಬಹುದಾಗಿದೆ.

೩.೩. ಸ್ವಾತಂತ್ರ್ಯನಂತರದ ಪ್ರಯತ್ನಗಳು

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಸಂವಿಧಾನ ರಚನಾಕಾರರು ಎರಡು ಮಾನದಂಡಗಳಿಂದ ಪರಿಶಿಷ್ಟ ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದಾರೆ.

೧. ಬುಡಕಟ್ಟು ಜನರಿಗೆ ಇತರ ಸಮುದಾಯಗಳಿಂದಾಗುವ ದೌರ್ಜನ್ಯಗಳನ್ನು ತಪ್ಪಿಸಿ ಅವರನ್ನು ಸಂರಕ್ಷಿಸುವುದು.

೨. ಅವರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುವಂತಹ ವಿಶೇಷ ಕಾರ್ಯಕ್ರಮಗಳನ್ನು ಸಂವಿಧಾನಾತ್ಮಕವಾಗಿ ರೂಪಿಸಿ ಜಾರಿಗೊಳಿಸುವುದು. ಇದಕ್ಕಾಗಿ ಸಂವಿಧಾನದಲ್ಲಿ ವಿವಿಧ ವಿಧಿಗಳನ್ನು ಸೇರಿಸಿ ಅನುಷ್ಠಾನಗೊಳಿಸಲಾಗುತ್ತದೆ ಮತ್ತು ಸಂರಕ್ಷಣೋಪಾಯಗಳಾಗಿ ಆರ್ಥಿಕ ರಕ್ಷಣೋಪಾಯಗಳು ಸಾಮಾಜಿಕ ರಕ್ಷಣೋಪಾಯಗಳು, ಶೈಕ್ಷಣಿಕ ರಕ್ಷಣೋಪಾಯಗಳು, ರಾಜಕೀಯ ರಕ್ಷಣೋಪಾಯಗಳು ಸೇವಾ ರಕ್ಷಣೋಪಾಯಗಳು ಮತ್ತು ಸಂವಿಧಾನದ ೨೭೫(೫), ೩೩೪(೮)ರ ಅಡಿಯಲ್ಲಿ ವಿಶೇಷ ರಕ್ಷಣೋಪಾಯಗಳನ್ನು ಅಳವಡಿಸಿಕೊಳ್ಳಲಾಗಿದೆ.

೩.೪. ಸರಕಾರದ ವಿವಿಧ ಸಮಿತಿಗಳು ಮತ್ತು ಶಿಫಾರಸ್ಸುಗಳು

ಬ್ರಿಟಿಷರ ಅವಧಿಯಲ್ಲಿ ಬುಡಕಟ್ಟು ಸಮುದಾಯಗಳು ದಬ್ಬಾಳಿಕೆ ಮತ್ತು ಅತಿಕ್ರಮಣಕ್ಕೆ ಒಳಗಾಗಿದ್ದವು. ಸ್ವಾತಂತ್ರ್ಯ ನಂತರವೂ ಭಾರತದಲ್ಲಿ ಬ್ರಿಟಿಷ್ ವಸಾಹತು ಆಡಳಿತದಿಂದ ಪಡೆದ ಸಂಕೀರ್ಣವಾದ ಬುಡಕಟ್ಟು ಸಮಸ್ಯೆಗಳು ಹಾಗೆಯೇ ಮುಂದುವರೆದವು. ಸ್ವತಂತ್ರ್ಯ ಭಾರತದ ಸಂವಿಧಾನ ರಚನಾಕಾರರು ಸಾಮಾಜಿಕ ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಗಾಗಿ ತುಳಿತಕ್ಕೆ ಒಳಗಾದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಎರಡು ಮಾನದಂಡಗಳನ್ನು ನಿಗದಿಪಡಿಸಿ ಕ್ರಮ ಕೈಗೊಂಡಿದ್ದಾರೆ. ಒಂದನೆಯದು ಬುಡಕಟ್ಟು ಜನರನ್ನು ಇತರ ಸಮುದಾಯಗಳಿಂದಾಗುವ ದೌರ್ಜನ್ಯಗಳಿಂದ ರಕ್ಷಿಸುವುದು. ಎರಡನೆಯದು ಅವರ

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕರಿಸುವುದು. ಇದಕ್ಕಾಗಿ ಸಂವಿಧಾನದ ೧೫(೪), ೧೬(೪), ೧೯ (೫) ೪೦, ೩೩೦, ೩೩೨, ೩೩೫, ೩೪೨ ಮುಂತಾದ ವಿಧಿಗಳಲ್ಲಿ ಬುಡಕಟ್ಟು ಸಮುದಾಯಗಳಿಗೆ ವಿಶೇಷ ಪ್ರಾತಿನಿಧ್ಯ ನೀಡಲಾಗಿದೆ.

ಅಂತೆಯೇ ಒಂದರಿಂದ ೧೧ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟುಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಮತ್ತು ಪ್ರತ್ಯೇಕ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಬುಡಕಟ್ಟುಗಳ ಶಿಕ್ಷಣ, ಆರೋಗ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡುವ ಮೂಲಕ ಅವರ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಶ್ರಮಿಸುತ್ತಿದ್ದಾರೆ. ಭಾರತ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳು ಬುಡಕಟ್ಟು ಜನರಿಗಾಗಿ ಉದ್ಯೋಗ ಮತ್ತು ಆದಾಯದ ಮೂಲಗಳನ್ನು ಸೃಷ್ಟಿಸುವಂತಹ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (I.R.D.P.A), ಜವಾಹರ್ ರೋಜಗಾರ್ ಯೋಜನೆ (JRY), ಪ್ರಧಾನಮಂತ್ರಿ ಉದ್ಯೋಗ ಭರವಸೆ ಯೋಜನೆ, ಗ್ರಾಮೀಣ ಯುವ ಜನತೆಗೆ ಸ್ವಯಂ ಉದ್ಯೋಗ ಭರವಸೆ ಯೋಜನೆ, ವಸತಿ ಶಾಲೆಗಳ ಸ್ಥಾಪನೆ ಮತ್ತು ಉಚಿತ ಶಿಕ್ಷಣ ನೀಡುವ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳು, ಆರೋಗ್ಯ ಯೋಜನೆಗಳು, ಕೃಷಿಗೆ ಸಂಬಂಧಿಸಿದ ವಿಶೇಷ ಯೋಜನೆಗಳು, ಇಂತಹ ಯೋಜನೆಗಳ ಜೊತೆಗೆ ಬುಡಕಟ್ಟು ಉಪಯೋಜನೆಗಳ (TSP) ಮೂಲಕ ಪ್ರತಿಯೊಂದು ಬುಡಕಟ್ಟು ಸಮೂಹವು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉನ್ನತಿ ಸಾಧಿಸಲು, ಮತ್ತು ಅವರ ಸಾಂಪ್ರದಾಯಕ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ಸಂವಿಧಾನದಲ್ಲಿ ವಿಶೇಷ ಅವಕಾಶಗಳನ್ನು ನೀಡಲಾಗಿದೆ.

ಮೇಲಿನ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ವಿವಿಧ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಅಧ್ಯಯನ ಮಾಡಿ, ಮೌಲ್ಯಮಾಪನ ಮಾಡಿ ಕಾಲ ಕಾಲಕ್ಕೆ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡಲು, ಪ್ರಥಮ ಪಂಚವಾರ್ಷಿಕ ಯೋಜನೆಯ ನಂತರ ೧೯೫೬ರಲ್ಲಿ ವೇರಿಯರ್ ಎಲ್ವಿನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು ಈ ಸಮಿತಿಯು ಬುಡಕಟ್ಟು ಅಭಿವೃದ್ದಿಗೆ ವಿವಿದೋದ್ದೇಶ ಯೋಜನೆಗಳನ್ನು ರೂಪಿಸಲು ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನು ವಿಂಗಡಣೆ ಮಾಡಲು, ೧೫೦ರಿಂದ ೨೦೦ ಚದರ ಮೈಲಿ ವ್ಯಾಪ್ತಿಗೆ ಒಂದರಂತೆ ವಿಸ್ತರಿಸಿ ಅಭಿವೃದ್ಧಿ ಕ್ಷೇತ್ರಗಳ ರಚನೆಗೆ ಶಿಫಾರಸ್ಸು ಮಾಡಿತ್ತು, ಇದರಿಂದ ಸಂಪೂರ್ಣ ಬುಡಕಟ್ಟು ಅಭಿವೃದ್ಧಿಯತ್ತ ಒತ್ತು ನೀಡಿ, ಶಿಕ್ಷಣ, ಆರೋಗ್ಯ, ಆರ್ಥಿಕ ಮತ್ತು ಸಂಪರ್ಕ ಸೌಲಭ್ಯಗಳನ್ನು ಅಭಿವೃದ್ಧಿಯ ಗುರಿಯಾಗಿಸಿಕೊಳ್ಳಲಾಗಿತ್ತು.

ಪುನಃ ೧೯೬೦ರಲ್ಲಿ ಬುಡಕಟ್ಟು ಅಭಿವೃದ್ಧಿ ಯೋಜನೆಗಳ ದಕ್ಷತೆ ಮತ್ತು ಪ್ರಾಮುಖ್ಯತೆಯನ್ನು ಪುನರಾವಲೋಕನ ಮಾಡಲು, ಪರಿಶಿಷ್ಟ ಬುಡಕಟ್ಟುಗಳ ಮತ್ತು ಅನುಸೂಚಿತ ಕ್ಷೇತ್ರಗಳ ರಾಷ್ಟ್ರೀಯ ಆಯೋಗವನ್ನು **ಶ್ರೀ ದೇಬಾರ್** ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಇದು ೧೯೬೧ನೇ ಅಕ್ಟೋಬರ್‌ನಲ್ಲಿ ವರದಿ ಸಲ್ಲಿಸಿದೆ. ಈ ವರದಿಯ ಶಿಫಾರಸ್ಸಿನಲ್ಲಿ ಬುಡಕಟ್ಟು ಅಭಿವೃದ್ಧಿಯು ನಿಧಾನವಾಗಿ ಸಾಗುತ್ತಿದೆ. ಬಂಡವಾಳ ಹೂಡಿಕೆ ಮತ್ತು ಬುಡಕಟ್ಟು ಜನರ ರಕ್ಷಣೋಪಾಯಗಳಲ್ಲಿ

ನ್ಯೂನತೆಯಿದೆ. ಸರ್ಕಾರ ಕೂಡಲೇ ಗಮನಹರಿಸಿ ಅವರ ಸಮಗ್ರ ಅಭಿವೃದ್ಧಿಗೆ ನಿಯಮಗಳನ್ನು ರೂಪಿಸಿ, ಶೇ. ೫೦ಕ್ಕಿಂತ ಹೆಚ್ಚಾಗಿ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಅಭಿವೃದ್ಧಿ ಕ್ಷೇತ್ರಗಳನ್ನು ವಿಸ್ತರಿಸಬೇಕೆಂದಿತು. ಅದರಂತೆ ಕೇಂದ್ರ ಸರ್ಕಾರ ೩ನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಶೇ. ೪೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಸುಮಾರು ೫೦೦ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನು ಸ್ಥಾಪಿಸಿತು.

ನಂತರ ೧೯೬೯ರಲ್ಲಿ ಬುಡಕಟ್ಟುಗಳ ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳ ಪರಿಶೀಲನೆಗಾಗಿ **ಶಿಲುಅಹೋ** ಅವರ ನೇತೃತ್ವದಲ್ಲಿ ಬಂದು ಸಮಿತಿಯನ್ನು ನೇಮಿಸಲಾಯಿತು. ಇದರಲ್ಲಿ ದೇಬಾರ್ ಆಯೋಗದ ಶಿಫಾರಸ್ಸುಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲು ಸೂಚಿಸಲಾಯಿತು. ಬುಡಕಟ್ಟು ಕ್ಷೇತ್ರಾಭಿವೃದ್ಧಿ ಯೋಜನೆಯನ್ನು ನಿಲ್ಲಿಸುವಂತೆ ಸಲಹೆ ನೀಡಿತು. ಬುಡಕಟ್ಟುಗಳ ಸಮಸ್ಯೆಗಳಿಗೆ ಅವರ ಸಾಲಬಾಧೆ, ಭೂ ಅತಿಕ್ರಮಣ, ಆರ್ಥಿಕ ಹಿಂದುಳಿದಿರುವಿಕೆ ಮತ್ತು ಅಸಮರ್ಪಕ ಸಂಪರ್ಕ ವ್ಯವಸ್ಥೆಗಳೇ ಕಾರಣವೆಂದು ಗುರುತಿಸಿ, ಕೂಡಲೇ ಈ ಸಮಸ್ಯೆಗಳನ್ನು ಬಗೆಹರಿಸಲು ಗಿರಿಜನರ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಸಲಹೆ ನೀಡಲಾಯಿತು.

೧೯೭೨ರಲ್ಲಿ ಭಾರತ ಸರ್ಕಾರದ ಸಮಾಜ ಕಲ್ಯಾಣ ಮಂತ್ರಾಲಯವು ಬುಡಕಟ್ಟು ಅಭಿವೃದ್ಧಿಗೆ ತ್ವರಿತ ಚಾಲನೆ ನೀಡಲು ಎಸ್.ಸಿ. ದುಬೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ವರದಿಯ ಮುಖ್ಯಾಂಶಗಳು ಈ ಮುಂದಿನಂತಿವೆ;

೧. ಬುಡಕಟ್ಟು ಜನರನ್ನು ಅವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ತರುವುದು.

೨. ಅವರ ಜೀವನದ ಸಂರಕ್ಷಣೆಯೊಂದಿಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ನ್ಯಾಯ ಒದಗಿಸುವುದು

೩. ಬುಡಕಟ್ಟು ಉಪಯೋಜನೆಗಳನ್ನು ರಚಿಸುವುದು. ಭಾರತ ಸರ್ಕಾರ ಜಾರಿಗೊಳಿಸಿದ ಎಲ್ಲಾ ಯೋಜನೆಗಳಲ್ಲಿ ಬುಡಕಟ್ಟು ಜನರಿಗೆ ಹೆಚ್ಚು ಉಪಯುಕ್ತವಾದ ಯೋಜನೆಯೆಂದರೆ ಬುಡಕಟ್ಟು ಉಪಯೋಜನೆಯಾಗಿದೆ. ಬುಡಕಟ್ಟು ಉಪಯೋಜನೆ ಎಂದರೆ ಬುಡಕಟ್ಟುಗಳ ಸಮಗ್ರ ಅಭಿವೃದ್ಧಿಗೆ ರಚಿಸುವ ಮುಖ್ಯ ಯೋಜನೆಯ ಒಂದು ಉಪಯೋಜನೆಯಾಗಿದೆ.

೧೯೭೪ರಲ್ಲಿ ಪ್ರೊ. ಎಲ್.ಪಿ. ವಿದ್ಯಾರ್ಥಿ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಕ ಮಾಡಿದ ಭಾರತ ಸರ್ಕಾರ ಬುಡಕಟ್ಟುಗಳ ಹಿಂದುಳಿದಿರುವಿಕೆಯ ಕಾರಣಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ಸೂಚಿಸಿತು. ಈ ಸಮಿತಿಯ ವರದಿಯು ಬುಡಕಟ್ಟು ಜನರ ಹಿಂದುಳಿದಿರುವಿಕೆಗೆ ಅವರ ಆದಿಮ ಕೃಷಿ ಪದ್ಧತಿ, ಭೂ ಅತಿಕ್ರಮಣ, ಋಣಬಾರ, ಕೈಗಾರೀಕರಣ ಮತ್ತು ಅಭಿವೃದ್ಧಿ ಯೋಜನೆಗಳ ವಿರೋಧಾತ್ಮಕ ಪರಿಣಾಮ, ಅನಕ್ಷರತೆ, ಅನಾರೋಗ್ಯ ಮತ್ತು ಪೌಷ್ಠಿಕ ಆಹಾರದ ಕೊರತೆಯಂತಹ ಸಮಸ್ಯೆಗಳನ್ನು ಗುರುತಿಸಿ ಬುಡಕಟ್ಟು ಜನರಲ್ಲಿ ಹಿಂದುಳಿದ

ಬುಡಕಟ್ಟುಗಳಿಗಾಗುತ್ತಿರುವ ಅನ್ಯಾಯವನ್ನು ತೋರ್ಪಡಿಸುವುದರೊಂದಿಗೆ ಬುಡಕಟ್ಟುಗಳ ಕೃಷಿ ಸುಧಾರಣೆ, ಭೂ ಅತಿಕ್ರಮಣದಿಂದ ರಕ್ಷಣೆ, ಋಣಬಾರ ಮುಕ್ತಿಗೆ ಕ್ರಮ, ಶಿಕ್ಷಣ, ಕೈಗಾರೀಕರಣ ಮತ್ತು ಅಭಿವೃದ್ಧಿ ಯೋಜನೆಗಳಿಂದ ಉಂಟಾಗುತ್ತಿರುವ ವಿರೋಧಾತ್ಮಕ ಪರಿಣಾಮಗಳಿಂದ ರಕ್ಷಣೆ ಮತ್ತು ಸೂಕ್ತ ಪುನರ್ವಸತಿ, ಆರೋಗ್ಯ ಸುಧಾರಣೆ ಮತ್ತು ಪೌಷ್ಟಿಕ ಆಹಾರ ಪೂರೈಕೆಗೆ ಹೆಚ್ಚು ಒತ್ತನ್ನು ಕೊಡಲು ಶಿಪಾರಸ್ಸು ಮಾಡಿದೆ.

೨೦೦೩ರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪರಿಶಿಷ್ಟ ವಲಯಗಳ ಕಾರ್ಯವೈಖರಿಯ ಪರಾಮರ್ಶಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗದ ಮಾಜಿ ಅಧ್ಯಕ್ಷರಾದ ಶ್ರೀ ದಿಲೀಪ್ ಸಿಂಗ್ ಭುರಿಯಾ ಅವರ ಅಧ್ಯಕ್ಷತೆಯಲ್ಲಿ ೧೭ ಸದಸ್ಯರುಗಳನ್ನು ಒಳಗೊಂಡ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ವಲಯಗಳ ರಾಷ್ಟ್ರೀಯ ಆಯೋಗವನ್ನು ರಚಿಸಿತು. ಈ ಆಯೋಗವು ಹಿಂದಿನ ಅಭಿವೃದ್ಧಿ ಕಾರ್ಯಗಳ ಪರಾಮರ್ಶೆ ಮತ್ತು ವಿಶ್ಲೇಷಣೆ ಮಾಡಿ ಉಪಯುಕ್ತ ಸಲಹೆಗಳನ್ನು ನೀಡಿದೆ.

ಈ ಎಲ್ಲಾ ಬುಡಕಟ್ಟು ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅವರ ರಕ್ಷಣೆ ಮತ್ತು ಕಲ್ಯಾಣಕ್ಕಾಗಿ ಜಾರಿಗೊಳಿಸಲಾಗಿದೆ. ಅಂತೆಯೇ ೨೦೦೬ರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಮತ್ತು ಸಾಂಪ್ರದಾಯಕ ಅರಣ್ಯ ವಾಸಿಗಳ ಹಕ್ಕುಗಳ ಸಂರಕ್ಷಣ ಅಧಿನಿಯಮವನ್ನು ಜಾರಿಗೆ ತಂದಿದೆ. ಈ ಎಲ್ಲಾ ಕಾರ್ಯಕ್ರಮಗಳು ಪ್ರಾರಂಭದಲ್ಲಿ ಗೃಹ ಮಂತ್ರಾಲಯದ ಉಸ್ತುವಾರಿಯಲ್ಲಿ ನಡೆಯುತ್ತಿದ್ದವು. ೧೯೭೦ರಲ್ಲಿ ಈ ಕಾರ್ಯಕ್ಕಾಗಿ ಸಮಾಜ ಕಲ್ಯಾಣ ಮಂತ್ರಾಲಯವಾಗಿ ವಿಂಗಡನೆ ಮಾಡಲಾಯಿತು. ಪುನಃ ೧೯೯೯ರಲ್ಲಿ ಬುಡಕಟ್ಟು ಅಭಿವೃದ್ಧಿಗೆ ಒತ್ತು ನೀಡಲು ಬುಡಕಟ್ಟು ವ್ಯವಹಾರಗಳ ಮಂತ್ರಾಲಯವಾಗಿ ಕೇಂದ್ರ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯಿಂದ ವಿಭಜಿಸಿದೆ.

೧. ವೇರಿಯರ್ ಎಲ್ವಿನ್ ಸಮಿತಿ

೧೯೫೬ರಲ್ಲಿ ಭಾರತ ಸರ್ಕಾರವು ಎಲ್ವಿನ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿ ಬುಡಕಟ್ಟು ಅಭಿವೃದ್ಧಿ ಮತ್ತು ಅವರ ಜೀವನ ಶೈಲಿಯನ್ನು ಬದಲಾವಣೆ ಮಾಡಲು ಏನು ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಆದೇಶಿಸಿತ್ತು. ಎಲ್ವಿನ್ ಅವರು ಬುಡಕಟ್ಟು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಪ್ರತ್ಯೇಕತೆಯ ನೀತಿಯ ಪ್ರತಿಪಾದಕ ರಾಗಿದ್ದರು. ಈ ಸಮೂಹಗಳ ಜನರನ್ನು ಸಮಾಜದ ನಾಗರಿಕ ಜನರಿಂದ ದೂರ ಇಟ್ಟು ಅವರ ಜೀವನವನ್ನು ಸುಧಾರಿಸಬೇಕೆಂದು ಸಲಹೆ ಶಿಫಾರಸ್ಸು ಮಾಡಿದ್ದರು. ಅದರಂತೆ ಬುಡಕಟ್ಟು ಪ್ರದೇಶಗಳ ವಿವಿಧೋದ್ದೇಶ ಯೋಜನೆಗಳನ್ನು ಬದಲಾವಣೆ ಮಾಡಿ ಬುಡಕಟ್ಟು ಪ್ರದೇಶಗಳನ್ನು ಅಭಿವೃದ್ಧಿ ಕ್ಷೇತ್ರಗಳಾಗಿ ವಿಂಗಡಣೆ ಮಾಡಬೇಕೆಂದು ಸಲಹೆ ನೀಡಿದ್ದರಿಂದ ೧೯೫೭ರಲ್ಲಿ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನು ವಿಂಗಡಣೆ ಮಾಡಲಾಯಿತು. ೧೫೦ರಿಂದ ೨೦೦ ಚದರ ಮೈಲಿ ವ್ಯಾಪ್ತಿಗೆ ಒಂದರಂತೆ ವಿಸ್ತರಿಸಿ, ಅಭಿವೃದ್ಧಿ ಕ್ಷೇತ್ರಗಳನ್ನು ರಚನೆ ಮಾಡಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದರು. ಇದರ ಪ್ರಕಾರ ಬುಡಕಟ್ಟು ಸಮುದಾಯಗಳ ಜೀವನವನ್ನು

ಸಮಗ್ರವಾಗಿ ಅಭಿವೃದ್ಧಿಯತ್ತ ಕೊಂಡೊಯ್ಯಬೇಕೆಂಬ ಉದ್ದೇಶದಿಂದ ಶಿಕ್ಷಣ ಆರೋಗ್ಯ, ಆರ್ಥಿಕ ಅವಕಾಶಗಳ ಸೃಷ್ಟಿ ಮತ್ತು ಸಂಪರ್ಕ ಮತ್ತು ಸಾರಿಗೆ ವ್ಯವಸ್ಥೆಗಳ ಸಹಾಯದಿಂದ ಅವರ ಜೀವನವನ್ನು ಉತ್ತಮಪಡಿಸಲು ಎಲ್ವಿನ್ ಸಮಿತಿಯ ವರದಿಯು ಸೂಚಿಸಿದೆ.

೨. ದೇಬಾರ್ ಆಯೋಗ (೧೯೬೦)

೧೯೬೦ರಲ್ಲಿ ಬುಡಕಟ್ಟು ಸಮೂಹಗಳ ಅಭಿವೃದ್ಧಿ ಯೋಜನೆಗಳ ದಕ್ಷತೆ ಮತ್ತು ಪ್ರಾಮುಖ್ಯತೆಯನ್ನು ಪುನರಾವಲೋಕನ ಮಾಡಲು ಒಂದನೇ ಪರಿಶಿಷ್ಟ ಬುಡಕಟ್ಟು ಮತ್ತು ಅನುಸೂಚಿತ ಕ್ಷೇತ್ರಗಳ ರಾಷ್ಟ್ರೀಯ ಆಯೋಗವನ್ನು ಪ್ರೊ. ದೇಬಾರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ೧೯೬೧ ಅಕ್ಟೋಬರ್‌ನಲ್ಲಿ ಆಯೋಗವು ವರದಿಯನ್ನು ಸಲ್ಲಿಸಿತು. ವರದಿಯ ಮುಖ್ಯಾಂಶಗಳು ಈ ಮುಂದಿನಂತಿವೆ.

೧. ಬುಡಕಟ್ಟು ಅಭಿವೃದ್ಧಿಯು ತುಂಬ ನಿಧಾನಗತಿಯಲ್ಲಿ ಸಾಗುತ್ತಿದೆ ಇದನ್ನು ಚುರುಕುಗೊಳಿಸಬೇಕು.

೨. ಬುಡಕಟ್ಟು ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮತ್ತು ಬುಡಕಟ್ಟು ರಕ್ಷಣೋಪಾಯಗಳು ನ್ಯೂನತೆಯಿಂದ ಕೂಡಿವೆ. ಅವುಗಳನ್ನು ಶೀಘ್ರವಾಗಿ ಸರಿಪಡಿಸಬೇಕು.

ಸರ್ಕಾರ ಕೂಡಲೆ ಗಮನಹರಿಸಿ ಬುಡಕಟ್ಟು ಸಮೂಹಗಳ ಸಮಗ್ರ ಅಭಿವೃದ್ಧಿಗೆ ಸಮಗ್ರ ನಿಯಮಗಳು ಮತ್ತು ಯೋಜನೆಗಳನ್ನು ರೂಪಿಸಿ ಶೇ. ೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಅಭಿವೃದ್ಧಿ ಕ್ಷೇತ್ರಗಳನ್ನು ವಿಸ್ತರಿಸಲು ಸಲಹೆ ನೀಡಿದೆ. ಈ ಸಲಹೆಗಳನ್ನು ಅಂಗೀಕರಿಸಿ ಕೇಂದ್ರ ಸರ್ಕಾರ ३ನೇ ಪಂಚ ವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಶೇ. ೪೦ಕ್ಕಿಂತ ಹೆಚ್ಚು ಜನಸಂಖ್ಯೆಯಲ್ಲಿ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ಸುಮಾರು ೫೦೦ ಬುಡಕಟ್ಟು ಅಭಿವೃದ್ಧಿ ಕ್ಷೇತ್ರಗಳನ್ನು ಸ್ಥಾಪಿಸಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿತು.

೩. ಶಿಲು ಆಹೋ ಸಮಿತಿ (೧೯೬೯)

೧೯೬೯ರಲ್ಲಿ ಬುಡಕಟ್ಟು ಸಮುದಾಯಗಳ ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳ ಪರಿಶೀಲನೆಗೆ ಶಿಲು ಆಹೋ ಅವರ ಅಧ್ಯಕ್ಷತೆಯಲ್ಲಿ ಸರ್ಕಾರವು ಮತ್ತೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ತನ್ನ ಅಧ್ಯಯನ ವರದಿಯಲ್ಲಿ ಕೂಡಲೇ ದೇಬಾರ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸೂಚಿಸಿತು. ಬುಡಕಟ್ಟು ಕ್ಷೇತ್ರಾಭಿವೃದ್ಧಿ ಯೋಜನೆಯನ್ನು ನಿಲ್ಲಿಸುವಂತೆ ಸಲಹೆ ನೀಡಿತು. ಪರಿಶಿಷ್ಟ ಬುಡಕಟ್ಟುಗಳ ಸಮಸ್ಯೆಗಳಿಗೆ ಅವರ ಸಾಲಬಾಧೆ/ಋಣಬಾರ, ಅವರ ಭೂಮಿಯ ಅತಿಕ್ರಮಣ, ಆರ್ಥಿಕ ಹಿಂದುಳಿದಿರುವಿಕೆ, ಮತ್ತು ಅಸಮರ್ಪಕ ಸಂಪರ್ಕ ವ್ಯವಸ್ಥೆಗಳೇ ಕಾರಣವೆಂದು ಹೇಳಿ, ಕೂಡಲೇ ಸರ್ಕಾರವು ಈ ಸಮಸ್ಯೆಗಳನ್ನು ಬಗೆಹರಿಸಲು ಗಿರಿಜನರ ಸಮಗ್ರ ಅಭಿವೃದ್ಧಿಗೆ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಿತ್ತು.

೪. ಡಾ. ಎ.ಸಿ. ದುಬೆ ಸಮಿತಿ (೧೯೭೨)

೧೯೭೨ರಲ್ಲಿ ಭಾರತ ಸರ್ಕಾರದ ಅಂದಿನ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಮಂತ್ರಾಲಯವು ಎಸ್.ಸಿ. ದುಬೆಯವರ ಅಧ್ಯಕ್ಷತೆಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ತ್ವರಿತ ಚಾಲನೆ ನೀಡಲು ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಅಧ್ಯಯನ ಮಾಡಿ ನೀಡಿದ ವರದಿಯ ಮುಖ್ಯಾಂಶಗಳೆಂದರೆ ಭಾರತದ ಸ್ವಾತಂತ್ರ್ಯದ ನಂತರ ಜಾರಿಗೊಳಿಸಿದ ಎಲ್ಲಾ ಯೋಜನೆಗಳಲ್ಲಿ ಬುಡಕಟ್ಟು ಉಪಯೋಜನೆಯು ಅತ್ಯಂತ ಉಪಯುಕ್ತವಾದ ಯೋಜನೆಯಾಗಿದೆ. ಬುಡಕಟ್ಟು ಉಪಯೋಜನೆ ಎಂದರೆ, ಸಮಗ್ರ ಅಭಿವೃದ್ಧಿಗೆ ರಚಿಸುವ ಮುಖ್ಯ ಯೋಜನೆಯೊಂದರ ಭಾಗವೇ ಬುಡಕಟ್ಟು ಉಪಯೋಜನೆ. ಬುಡಕಟ್ಟು ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯೊಂದಿಗೆ ಅವರನ್ನು ಮುಖ್ಯವಾಹಿನಿಗೆ ತರುವುದು. ಈ ಸಮಿತಿ ನೀಡಿದ ಒಂದು ಪ್ರಮುಖ ಶಿಫಾರಸ್ಸಾಗಿತ್ತು. ಬುಡಕಟ್ಟು ಸಮುದಾಯಗಳ ಹಿತಾಸಕ್ತಿಯ ರಕ್ಷಣೆಯೊಂದಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನ್ಯಾಯ ಒದಗಿಸುವುದು ಅತ್ಯಂತ ಅವಶ್ಯವಾಗಿ ಆಗಬೇಕಾಗಿರುವ ಕೆಲಸ ಎಂದು ಸರಕಾರಕ್ಕೆ ಸೂಚಿಸಿತ್ತು.

ಬುಡಕಟ್ಟು ಉಪಯೋಜನೆಯ ಲಕ್ಷಣಗಳು

- ಈ ಉಪಯೋಜನೆಯು ಒಂದು ಕ್ಷೇತ್ರ ಯೋಜನೆಯಾಗಿದೆ. ಇದರ ಮೂಲಕ ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮ(ಐ.ಟಿ.ಡಿ.ಪಿ.)ವನ್ನು ಜಾರಿಗೊಳಿಸುವುದು; ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಮಾದರಿ ಕ್ಷೇತ್ರ ಅಭಿವೃದ್ಧಿ ಯೋಜನೆ ಮಾಡಿ ಅವುಗಳನ್ನು ಅನುಷ್ಠಾನಗೊಳಿಸಲು ಬುಡಕಟ್ಟು ಗುಂಪುಗಳನ್ನು ರಚಿಸುವುದು.
- ಬುಡಕಟ್ಟು ಜನರ ಅಗತ್ಯತೆ, ಕೌಶಲ್ಯತೆ ಮತ್ತು ಸಾಮರ್ಥ್ಯತೆಗೆ ಅನುಗುಣವಾಗಿ ಸಾಮಾಜಿಕ-ಆರ್ಥಿಕ ಯೋಜನೆಗಳನ್ನು ರೂಪಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು.
- ರಾಜ್ಯ ಯೋಜನೆಗಳಲ್ಲಿಯ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನಸಂಖ್ಯೆಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಮೀಸಲಿಡು ವುದು.
- ಇದಕ್ಕೆ ಪೂರಕವಾಗಿ ಕೇಂದ್ರ ಸರಕಾರ ವಿಶೇಷ ಕೇಂದ್ರಿಯ ನೆರವನ್ನು ನೀಡುವುದು ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಪ್ರಾಯೋಜಿತವಾದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
- ಎಲ್ಲಾ ಹಂತಗಳಲ್ಲೂ ವ್ಯವಸ್ಥಿತವಾದ ಆಡಳಿತವನ್ನು ರೂಪಿಸುವುದು. ವಿಶೇಷವಾಗಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಗಳನ್ನು ಯೋಜನೆಯ ಕಾರ್ಯಕ್ಷೇತ್ರಗಳಲ್ಲಿ ಜಾರಿ ಗೊಳಿಸುವುದು.

೫. ಎಲ್.ಪಿ ವಿದ್ಯಾರ್ಥಿ ಸಮಿತಿ (೧೯೭೪)

೧೯೭೪ರಲ್ಲಿ ಭಾರತ ಸರ್ಕಾರವು ಎಲ್.ಪಿ. ವಿಧ್ಯಾರ್ಥಿಯವರ ನೇತೃತ್ವದಲ್ಲಿ ಬುಡಕಟ್ಟು ಜನರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಬುಡಕಟ್ಟು ಜನರ ಹಿಂದುಳಿದಿರುವಿಕೆಗೆ ಅವರ ಕೃಷಿ ಪದ್ಧತಿ, ಭೂಮಿಯ ಅತಿಕ್ರಮಣ, ಕೈಗಾರೀಕರಣ

ಮತ್ತು ಅಭಿವೃದ್ಧಿ ಯೋಜನೆಗಳ ವಿರುದ್ಧಾತ್ಮಕ ಪರಿಣಾಮಗಳು, ಅನಕ್ಷರತೆ, ಅನಾರೋಗ್ಯ ಮತ್ತು ಪೌಷ್ಟಿಕಾಂಶಗಳ ಕೊರತೆಯಂತಹ ಸಮಸ್ಯೆಗಳನ್ನು ಗುರುತಿಸಿತು. ಈ ಸಮಿತಿಯು ಬುಡಕಟ್ಟು ಜನರಲ್ಲಿ ಹಿಂದುಳಿದ ಬುಡಕಟ್ಟುಗಳಿಗಾಗುತ್ತಿರುವ ಅನ್ಯಾಯವನ್ನು ತೋರ್ಪಡಿಸುವುದರೊಂದಿಗೆ, ಬುಡಕಟ್ಟು ಸಮುದಾಯಗಳಲ್ಲಿನ ಕೃಷಿ ಸುಧಾರಣೆ, ಭೂಮಿಯ ಅತಿಕ್ರಮಣದಿಂದ ಅವರ ಭೂಮಿಯ ರಕ್ಷಣೆ, ಋಣಬಾಧೆಯಿಂದ ಮುಕ್ತಿಗೆ ಕ್ರಮ, ಸೂಕ್ತ ಶಿಕ್ಷಣ, ಕೈಗಾರೀಕರಣ ಮತ್ತು ಅಭಿವೃದ್ಧಿ ಯೋಜನೆಗಳಿಂದಾಗುತ್ತಿರುವ ದುಷ್ಪರಿಣಾಮಗಳಿಂದ ಅವರಿಗೆ ಸೂಕ್ತ ರಕ್ಷಣೆ, ಆರೋಗ್ಯ ಸೌಲಭ್ಯಗಳ ಸುಧಾರಣೆ ಮತ್ತು ಪೌಷ್ಟಿಕ ಆಹಾರದ ಪೂರೈಕೆಗೆ ಹೆಚ್ಚು ಒತ್ತನ್ನು ಕೊಡಲು ಶಿಫಾರಸ್ಸು ಮಾಡಿತ್ತು.

೬. ದಿಲೀಪ್ ಸಿಂಗ್ ಭುರಿಯಾ ಸಮಿತಿ (೨೦೦೩)

ಭಾರತ ಸರ್ಕಾರವು ೨೦೦೩ರಲ್ಲಿ ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪರಿಶಿಷ್ಟ ವಲಯಗಳ ಕಾರ್ಯವೈಖರಿಯ ಪರಾಮರ್ಶೆಗೆ ದಿಲೀಪ್ ಸಿಂಗ್ ಭುರಿಯಾ ಅವರ ಅಧ್ಯಕ್ಷತೆಯಲ್ಲಿ ೧೭ ಸದಸ್ಯರ ಪರಿಶಿಷ್ಟ ಪಂಗಡಗಳ ಮತ್ತು ಪರಿಶಿಷ್ಟ ವಲಯಗಳ ರಾಷ್ಟ್ರೀಯ ಆಯೋಗವನ್ನು ರಚಿಸಿತ್ತು. ಈ ಆಯೋಗವು ೨೦೦೪ರಲ್ಲಿ ತನ್ನ ವರದಿಯನ್ನು ಸಲ್ಲಿಸಿತ್ತು. ಆದರೆ ಈ ವರದಿಯನ್ನು ಇನ್ನೂ ಪ್ರಸ್ತುತಪಡಿಸಿಲ್ಲ.

ಸ್ವಾತಂತ್ರ್ಯ ನಂತರದ ಪ್ರಾರಂಭಿಕ ದಿನಗಳಲ್ಲಿ ಬುಡಕಟ್ಟು ಕಲ್ಯಾಣದ ವಿಚಾರಗಳನ್ನು ಗೃಹ ಇಲಾಖೆಯೇ ನೋಡಿಕೊಳ್ಳುತ್ತಿತ್ತು. ಬುಡಕಟ್ಟುಗಳ ಜೀವನದ ಅವಶ್ಯಕತೆಗಳು ಮತ್ತು ಬೇಡಿಕೆಗಳು ಉಳಿದ ಬೇರೆ ಜನ ಸಮೂಹಗಳಿಗಿಂತ ವಿಭಿನ್ನವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ೧೯೯೯ರವರೆಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಗಳ ಉಸ್ತುವಾರಿಯನ್ನು ಹಿಂದುಳಿದ ವರ್ಗಗಳ ಇಲಾಖೆಯೇ ನೋಡಿಕೊಳ್ಳುತ್ತಿತ್ತು. ಇತ್ತೀಚೆಗೆ ಅಂದರೆ ಅಕ್ಟೋಬರ್ ೧೯೯೯ ನಂತರ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯನ್ನು ನೋಡಿಕೊಳ್ಳಲು ಸ್ವತಂತ್ರವಾದ ಸಂಪುಟದರ್ಜೆ ಸಚಿವರುಗಳನ್ನೊಳಗೊಂಡ ಬುಡಕಟ್ಟು ಕಲ್ಯಾಣ ಅಥವಾ ಅಭಿವೃದ್ಧಿ ಇಲಾಖೆಯು ಕಾರ್ಯಾಚರಣೆಗೆ ಬಂದಿದೆ. ಈ ಇಲಾಖೆಯು ಕೆಳಕಂಡ ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಬುಡಕಟ್ಟು ಸಮುದಾಯಗಳ ಕಲ್ಯಾಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆ, ನೀತಿ ನಿರೂಪಣೆ ಸಂಶೋಧನೆ ಮತ್ತು ತರಬೇತಿ ಸಂಬಂಧಪಟ್ಟ ವಿಚಾರಗಳ ನಿರ್ಧಾರಗಳನ್ನು ಕೈಗೊಳ್ಳುವ ಸ್ವತಂತ್ರ ಇಲಾಖೆಯಾಗಿದೆ. ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿ ವೇತನವೂ ಸೇರಿ ದಂತೆ ಬುಡಕಟ್ಟು ಸಮೂಹಗಳ ಅಭಿವೃದ್ಧಿಯನ್ನು ನೋಡಿಕೊಳ್ಳುವುದು. ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರಯತ್ನಗಳನ್ನು ಉತ್ತೇಜಿಸುವುದು. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿ ನಿರ್ವಹಿಸಲು ಆಡಳಿತಾತ್ಮಕ ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತದೆ.

೧. ಅನುಸೂಚಿತ ಪ್ರದೇಶಗಳ ಉಸ್ತುವಾರಿ ನೋಡಿಕೊಳ್ಳುವುದು.

೨. ಅನುಸೂಚಿತ ಪ್ರದೇಶಗಳಲ್ಲಿ ರಸ್ತೆಗಳು ಸೇತುವೆಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ತಯಾರಿಸುವುದು, ಮತ್ತು ಆಸ್ಸಾಂನಲ್ಲಿ ಸ್ವಾಯತ್ತ ಜಿಲ್ಲೆಗಳ ಜವಾಬ್ದಾರಿಯನ್ನು ನೋಡಿಕೊಳ್ಳುವುದು.

೩. ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಇರುವ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಸೂಕ್ತ ನಿರ್ದೇಶನಗಳನ್ನು ಹೊರಡಿಸುವುದು.

೩.೫. ಪಂಚವಾರ್ಷಿಕ ಯೋಜನೆಗಳು ಮತ್ತು ಬುಡಕಟ್ಟು ಅಭಿವೃದ್ಧಿ

ಭಾರತದಲ್ಲಿ ೧೯೫೧ರಿಂದ ಅಭಿವೃದ್ಧ್ಯಾತ್ಮಕ ಯೋಜನೆಗಳು ಪ್ರಾರಂಭವಾದಾಗಿನಿಂದಲೂ ಬುಡಕಟ್ಟುಗಳ ಅಭಿವೃದ್ಧಿಗೆ ಆದ್ಯತೆ ಕೊಡಲು ಸಂವಿಧಾನವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸುವುದನ್ನು ಶಾಸನಬದ್ಧವನ್ನಾಗಿಸಿದೆ. ಭಾರತದ ಯೋಜನಾ ಆಯೋಗವು ಬುಡಕಟ್ಟು ಅಭಿವೃದ್ಧಿಗಾಗಿನ ಉದ್ದೇಶಗಳು ಮತ್ತು ತಂತ್ರಗಳನ್ನು ಕಾಲಕಾಲಕ್ಕೆ ರೂಪಿಸುತ್ತದೆ. ವಿವಿಧ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಕೈಗೊಂಡ ಅಂಶಗಳು ಈ ಕೆಳಗಿನಂತಿವೆ.

ಮೊದಲನೇ ಪಂಚವಾರ್ಷಿಕ ಯೋಜನೆ (೧೯೫೧-೧೯೫೬)

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಕೈಗೊಂಡ ಸಕಾರಾತ್ಮಕ ನೀತಿಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ಬುಡಕಟ್ಟು ಜನರ ಶ್ರಮದ ಪ್ರತಿಫಲವನ್ನು ಅವರೇ ಅನುಭವಿಸುವಂತಹ ಉತ್ಪಾದಕ ಆರ್ಥಿಕ ಜೀವನವನ್ನು ಉತ್ತೇಜಿಸುವ ಮತ್ತು ಅವರ ನೈಸರ್ಗಿಕ ಸಂಪನ್ಮೂಲಗಳ ಅಭಿವೃದ್ಧಿಗೆ ಸಹಾಯ ಮಾಡುವುದು ಸಂಘಟಿತವಾದ ಹೊರಗಿನ ಶಕ್ತಿಗಳು ಅವರನ್ನು ಶೋಷಣೆ ಮಾಡದಂತೆ ತಡೆಯುವುದು.
- ಬುಡಕಟ್ಟು ಜನರ ಇಷ್ಟಕ್ಕೆ ವಿರುದ್ಧವಾಗಿ ಅವರ ಧಾರ್ಮಿಕ ಮತ್ತು ಸಾಮಾಜಿಕ ಜೀವನ ದಲ್ಲಿ ಬದಲಾವಣೆ ತರಲು ಪ್ರಯತ್ನಿಸುವುದು ಅಪೇಕ್ಷಣೀಯವಲ್ಲ.
- ಬುಡಕಟ್ಟುಗಳ ಅನೇಕ ಗುಣಲಕ್ಷಣಗಳನ್ನು ಉಳಿಸಿಕೊಳ್ಳುವುದು ಮಾತ್ರವಲ್ಲ ಅವುಗಳನ್ನು ಅಭಿವೃದ್ಧಿಪಡಿಸುವುದು ಕೂಡ ಅಂಗೀಕಾರ್ಹವಾದುದು.
- ಬುಡಕಟ್ಟುಗಳ ಭಾಷೆ ಮತ್ತು ಶ್ರೀಮಂತ ಕಲೆ ಮತ್ತು ಸಂಪ್ರದಾಯಕ ಕೌಶಲ್ಯಗಳನ್ನು ಪ್ರಶಂಸಿಸಿ ಸಂರಕ್ಷಣೆ ಮಾಡುವುದು.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳು ಹಿಂದುಳಿದ ವರ್ಗಗಳ ಹಿತಾಸಕ್ತಿಗಳನ್ನು ಸೂಕ್ತವಾಗಿ ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಿ

ಅನುಷ್ಠಾನಗೊಳಿಸುವ ತತ್ವವನ್ನು ಅಳವಡಿಸಿಕೊಂಡಿತ್ತು ಮತ್ತು ಬುಡಕಟ್ಟುಗಳ ಅಭಿವೃದ್ಧಿ ತೀವ್ರವಾಗಿ ಆಗಲೇಬೇಕೆಂದು ಉದ್ದೇಶಿಸಲಾಗಿತ್ತು. ಬುಡಕಟ್ಟು ಜನರ ಈ ಮೇಲಿನ ಅಂಶಗಳನ್ನು ಪರಿಗಣಿಸಿ ಕೊಂಡು ಭಾರತದ ಯೋಜನಾ ಆಯೋಗವು ಈ ರೀತಿ ಹೇಳಿದೆ 'ಪ್ರತ್ಯೇಕತಾ ನೀತಿಯ ಆದರ್ಶ ನೀತಿಗಳು ಬುಡಕಟ್ಟು ಸಮುದಾಯಗಳಿಗೆ ನ್ಯಾಯ ಒದಗಿಸಿಕೊಡುವಲ್ಲಿ ತುಂಬಾ ಒಳ್ಳೆಯ ವಿಚಾರಗಳಾಗಿವೆ. ಆದರೆ ಬುಡಕಟ್ಟು ಜನರ ಜೀವನದ ಒಳಿತಿಗಾಗಿ, ಆ ಸಮುದಾಯಗಳು ವಾಸಿಸುವ ಪ್ರದೇಶಗಳೊಂದಿಗಿನ ಸಂಪರ್ಕ ಮತ್ತು ಸಮಾಜ ಸೇವೆ ಕಾರ್ಯಗಳಿಂದಾಗಿ ಒಂದು ನಿರ್ದಿಷ್ಟ ಪ್ರಮಾಣದ ಅಸಂಸ್ಕೃತೀಕರಣ ಈಗಾಗಲೇ ಪ್ರಭಾವ ಬೀರುತ್ತಿರುವುದರಿಂದ ಈ ಪ್ರತ್ಯೇಕತಾ ನೀತಿಯನ್ನು ಅನುಷ್ಠಾನಗೊಳಿಸುವುದು ಸರಳವಾಗುವುದಿಲ್ಲ'. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ವಿಶೇಷವಾಗಿ ದುರ್ಬಲವರ್ಗಗಳ ಹೇಳಿಕೆಗಾಗಿ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು.

ಎರಡನೇ ಪಂಚವಾರ್ಷಿಕ ಯೋಜನೆ (೧೯೫೬-೧೯೬೧)

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಗೃಹ ಮಂತ್ರಾಲಯವು ಬುಡಕಟ್ಟು ಜನಸಂಖ್ಯೆ ಅಧಿಕವಾಗಿರುವ ಪ್ರದೇಶಗಳಲ್ಲಿ ವಿಶೇಷ ಬಹು ಉದ್ದೇಶಿತ ಬುಡಕಟ್ಟು ಬ್ಲಾಕ್‌ಗಳನ್ನು(ಸ್ಪೆಷಲ್ ಮಲ್ಟಿಪರ್ಪಸ್ ಟ್ರೈಬಲ್ ಬ್ಲಾಕ್ಸ್(ಎಸ್.ಎಂ.ಪಿ.ಟಿ) ಸ್ಥಾಪಿಸಲು ಸಮುದಾಯ ಅಭಿವೃದ್ಧಿ ಸಚಿವಾಲಯಕ್ಕೆ ಅನುದಾನವನ್ನು ನೇರವಾಗಿ ಒದಗಿಸಿದೆ. ೧೯೫೬-೬೧ರ ಅವಧಿಯಲ್ಲಿ ಸಮಾಜದಲ್ಲಿ ಕಡಿಮೆ ಸೌಲಭ್ಯ ಹೊಂದಿರುವ, ಸೌಲಭ್ಯ ವಂಚಿತ ಸಮೂಹಗಳಿಗೆ ನ್ಯಾಯ ದೊರಕಿಸಿ ಕೊಡಲು ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸಲು ಆರ್ಥಿಕ ಅಭಿವೃದ್ಧಿಯ ಪ್ರಯೋಜನಗಳು ಈ ಸಮೂಹಗಳಿಗೆ ಹೆಚ್ಚು ಹೆಚ್ಚು ಲಾಭದಾಯಕ ಪ್ರತಿಫಲಗಳನ್ನು ಕೊಡುವಂತಿರಬೇಕೆಂದು ಯೋಜಿಸಲಾಗಿತ್ತು.

ತೃತೀಯ ಪಂಚವಾರ್ಷಿಕ ಯೋಜನೆ (೧೯೬೧-೧೯೬೬)

ಎರಡನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಅಂದರೆ ೧೯೫೯ರಲ್ಲಿ ಭಾರತ ಸರ್ಕಾರವು ವಿಶೇಷ ಬಹು ಉದ್ದೇಶಿತ ಬುಡಕಟ್ಟು ಬ್ಲಾಕ್‌ಗಳನ್ನು ಪರಾಮರ್ಶಿಸಲು ವೇರಿಯರ್ ಎಲ್ವಿನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಮೂರನೇ ಯೋಜನೆಯ ಅವಧಿಯಲ್ಲಿ ವಿಶೇಷ ಬಹು ಉದ್ದೇಶಿತ ಬುಡಕಟ್ಟು ಬ್ಲಾಕ್‌ಗಳನ್ನು ೯ ಎಸ್.ಎಂ.ಪಿ.ಟಿ ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳಿಗೆ ಸಾಮಾನ್ಯವಾಗಿ ಒದಗಿಸುವ ೧೨ ಲಕ್ಷ ರೂ.ಗಳನ್ನು ಮತ್ತು ೧ನೇ ಹಂತದಲ್ಲಿ ೧೦ ಲಕ್ಷ ರೂ.ಗಳನ್ನು ಮತ್ತು ೨ನೇ ಹಂತದಲ್ಲಿ ೫ ಲಕ್ಷ ರೂ.ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳಿಗೆ ಹೆಚ್ಚುವರಿಯಾಗಿ ಅನುದಾನವನ್ನು ಒದಗಿಸಲಾಗಿತ್ತು.

ಮೂರು ವಾರ್ಷಿಕ ಯೋಜನೆಗಳ (೧೯೬೬-೧೯೬೯) ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ವಿಶೇಷ ಅನುದಾನವನ್ನು ಒದಗಿಸಲಾಗಿತ್ತು. ಇದರ ಜೊತೆಗೆ ೧೯೬೯-೭೦ರಲ್ಲಿ ಬುಡಕಟ್ಟು

ಅಭಿವೃದ್ಧಿ ಬ್ಲಾಕುಗಳ ಅವಧಿಯನ್ನು ಮೂರನೆಯ ಮತ್ತೊಂದು ಹಂತವನ್ನು ಒಳಪಡಿಸಿಕೊಂಡು ೨೭ ವರ್ಷಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿತ್ತು. ಈ ಮೂರನೇ ಹಂತದಲ್ಲಿ ಪ್ರತಿಯೊಂದು ಬ್ಲಾಕುಗಳಿಗೂ ತಲಾ ೧೦ ಲಕ್ಷ ರೂ. ಅನುದಾನ ಒದಗಿಸಲಾಗಿತ್ತು.

ನಾಲ್ಕನೆ ಪಂಚವಾರ್ಷಿಕ ಯೋಜನೆ (೯೬೯-೧೯೭೪)

ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷವಾಗಿ ದುರ್ಬಲವಾಗಿದ್ದ ವಿಶೇಷ ಮತ್ತು ನಿರ್ದಿಷ್ಟ ಸಮೂಹಗಳ ಉನ್ನತಿಗಾಗಿ ಸರಣಿರೂಪದಲ್ಲಿ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಾಗಿತ್ತು. ಸಣ್ಣ ರೈತರ ಅಭಿವೃದ್ಧಿ ನಿಯೋಗಗಳು (ಎಸ್.ಎಫ್.ಡಿ.ಎ) ಮತ್ತು ಅತಿ ಸಣ್ಣ ಮತ್ತು ಕೃಷಿ ಕಾರ್ಮಿಕರ ಅಭಿವೃದ್ಧಿ ನಿಯೋಗಗಳು(ಎಂ.ಎಫ್.ಡಿ.ಎ) ಈ ಎರಡೂ ಯೋಜನೆಗಳೂ ಈ ಸರಣಿಯ ಮೊದಲನೆ ಎರಡು ಯೋಜನೆಗಳಾಗಿದ್ದವು. ಈ ಯೋಜನೆಗಳಲ್ಲಿ ಅಭಿವೃದ್ಧಿಯ ಗಮನವನ್ನು ಪ್ರದೇಶದ ಅಭಿವೃದ್ಧಿಯಿಂದ ನಿರ್ದಿಷ್ಟ ಉದ್ದೇಶಿತ ಆಧಾರಾಂಶಗಳಿಗೆ ವಿಶೇಷ ಒತ್ತು ನೀಡಲು ಅರ್ಹ ಫಲಾನುಭವಿ ವ್ಯಕ್ತಿಗಳನ್ನು ಗುರುತಿಸಿ ಅವರ ಅಭಿವೃದ್ಧಿಗೆ ಹೆಚ್ಚು ಗಮನವನ್ನು ಕೇಂದ್ರೀಕರಿಸಲಾಗಿತ್ತು.

ಇದೇ ಸರಣಿಯ ಮತ್ತೊಂದು ಭಾಗವಾಗಿ ಅದೇ ದಿಕ್ಕಿನಲ್ಲಿ ಒಂದು ಭಿನ್ನತೆಯೊಂದಿಗೆ ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ(ಡಿ.ಪಿ.ಎ.ಪಿ)ಯನ್ನು ಜಾರಿಗೆ ತರಲಾಯಿತು. ಇದರಲ್ಲಿ ಹವಾಮಾನ ವೈಪರೀತ್ಯದ ಸುಳಿಯಲ್ಲಿ ಸಿಲುಕಿರುವ ಬರ ಪೀಡಿತ ಪ್ರದೇಶಗಳ ಕೃಷಿ ಸಮುದಾಯಗಳ ಅಭಿವೃದ್ಧಿಗೆ ಇಡೀ ಪ್ರದೇಶಕ್ಕೆ ಒತ್ತು ನೀಡಲು ಉದ್ದೇಶಿಸಲಾಗಿತ್ತು. ನಿರ್ಧಿಷ್ಟ ಫಲಾನುಭವಿ ಕ್ರಮವು ಸಮಾಜದ ದುರ್ಬಲ ವರ್ಗಗಳ ಮೇಲೆ ಗಮನಹರಿಸಲಾಗಿತ್ತು. ನಿರ್ಧಿಷ್ಟ ಪ್ರದೇಶ ಮತ್ತು ದುರ್ಬಲ ವರ್ಗಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯಕ್ರಮಗಳ ಸ್ಥಾಪನೆಯ ಹಿನ್ನೆಲೆಯಲ್ಲಿ ಬುಡಕಟ್ಟು ಪ್ರದೇಶಗಳನ್ನು ಆದ್ಯತಾ ಪ್ರದೇಶಗಳನ್ನಾಗಿಟ್ಟುಕೊಂಡು ಈ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಸಣ್ಣ ರೈತರ ಅಭಿವೃದ್ಧಿ ನಿಯೋಗಗಳ ಮಾದರಿಯಲ್ಲಿ ಬುಡಕಟ್ಟು ಜನರ ಸಮಸ್ಯೆಗಳ ನಿವಾರಣೆಗಾಗಿ ಬುಡಕಟ್ಟು ಅಭಿವೃದ್ಧಿ ನಿಯೋಗಗಳನ್ನು ಸ್ಥಾಪಿಸಲಾಯಿತು. ಈ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿ ನಿಯೋಗಗಳ ಮೇಲೆ ಮಾಡಿದ ಒಟ್ಟು ಮೊತ್ತವು ಬುಡಕಟ್ಟು ಅಭಿವೃದ್ಧಿ ನಿಯೋಗಗಳನ್ನು ಪ್ರಾರಂಭಿಸಲಾಯಿತು. ಪ್ರತಿಯೊಂದು ಬುಡಕಟ್ಟು ಅಭಿವೃದ್ಧಿ ನಿಯೋಗವು ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳ ಸಮೂಹಗಳನ್ನು ಒಳಗೊಂಡಿತ್ತು. ಬುಡಕಟ್ಟು ಅಭಿವೃದ್ಧಿ ನಿಯೋಗಗಳು ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸೇವೆಗಳು ಮತ್ತು ನಿಯಮಬದ್ಧ ಮಾದರಿಯ ಯೋಜನೆಗಳನ್ನು ಒಳಗೊಂಡಿತ್ತು. ಒಂದು ಪ್ರದೇಶದ ಸಾಮಾನ್ಯ ಅಭಿವೃದ್ಧಿ ಯೋಜನೆಗಳೊಂದಿಗೆ ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳ ಕಾರ್ಯಕ್ರಮಗಳು ಸೂಕ್ತವಾದ ಸಹಯೋಗ ಹೊಂದದೇ ಇದ್ದುದು ಯೋಜನೆಯ ಹಿನ್ನಡೆಗೆ ಕಾರಣವಾಗಿದೆ. ನಾಲ್ಕನೇ ಯೋಜನೆಯಲ್ಲಿ ಸಮಗ್ರ ಪ್ರದೇಶಾಭಿವೃದ್ಧಿ ಕ್ರಮವನ್ನು ಅಳವಡಿಸಿ ಕೊಳ್ಳುವುದರೊಂದಿಗೆ ಈ ಹಿನ್ನಡೆಯನ್ನು ಸರಿಪಡಿಸಲು ಪ್ರಯತ್ನಿಸಲಾಯಿತು.

ಕೋಷ್ಟಕ–೩.೧. ಒಂದರಿಂದ ನಾಲ್ಕನೇ ಯೋಜನೆಗಳವರೆಗೆ ಬುಡಕಟ್ಟು ಅಭಿವೃದ್ಧಿಗೆ ವಲಯವಾರು ಹಣಕಾಸು ಹಂಚಿಕೆ (ಕೋಟಿ ರೂ.ಗಳಲ್ಲಿ)

ಯೋಜನಾ ವರದಿ	ಶಿಕ್ಷಣ	ಆರ್ಥಿಕ ಅಭಿವೃದ್ಧಿ	ಆರೋಗ್ಯ/ ವಸತಿ	ಒಟ್ಟು
ಒಂದು ಪಂಚವಾರ್ಷಿಕ ಯೋಜನೆ	೫.೧೦	೮.೪೬	೩.೮೧	೧೭.೩೭
ಎರಡನೇ ಪಂಚವಾರ್ಷಿಕ ಯೋಜನೆ	೮.೦೫	೨೨.೭೦	೯.೨೬	೪೦.೫೧
ಮೂರನೆ ಪಂಚವಾರ್ಷಿಕ ಯೋಜನೆ	೧೩.೨೩	೩೦.೭೨	೭.೧೦	೫೧.೦೫
ಮೂರು ವಾರ್ಷಿಕ ಯೋಜನೆಗಳು	೯.೩೨	೨೪.೦೭	೧.೯೩	೩೫೩೨
ನಾಲ್ಕನೆ ಪಂಚವಾರ್ಷಿಕ ಯೋಜನೆ	೩೧.೫೨	೪೨.೨೫	೧೦.೪೨	೮೪.೨೦

ಮೂಲ: *ಐದನೇ ಪಂಚವಾರ್ಷಿಕ ಯೋಜನೆ ಅಪ್ರೋಚ್ ಪೇಪರ್*

ಐದನೇ ಪಂಚವಾರ್ಷಿಕ ಯೋಜನೆ (೧೯೭೪–೧೯೭೯)

ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮಧ್ಯದಲ್ಲಿ ಅಂದರೆ ೧೯೭೨ರಲ್ಲಿ ಕೇಂದ್ರ ಯೋಜನಾ ಆಯೋಗವು ಬುಡಕಟ್ಟು ಪ್ರದೇಶಗಳನ್ನು ಅಧ್ಯಯನ ಮಾಡಲು ಎಲ್.ಪಿ ವಿದ್ಯಾರ್ಥಿ ಅವರ ನೇತೃತ್ವದಲ್ಲಿ ಒಂದು ಕಾರ್ಯಪಡೆಯನ್ನು ರಚಿಸಿತು. ಈ ಕಾರ್ಯಪಡೆಯ ಅಧ್ಯಯನದಿಂದ ಹೊರಬಂದ ಅಂಶಗಳೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಇದುವರೆಗೂ ಬುಡಕಟ್ಟುಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳ ಮೂಲಕ ಪ್ರಯತ್ನಿಸಿದರೂ, ಪ್ರಾಚೀನ ಮಾದರಿಯ ಕೃಷಿ, ಭೂ ಅತಿಕ್ರಮಣ, ಋಣಬಾರ, ಕಳಪೆ ಆರೋಗ್ಯ ಕೈಗಾರಿಕೀಕರಣದಿಂದಾಗುವ ವಿರೋಧಾತ್ಮಕವಾದ ಪರಿಣಾಮಗಳು ಕಡಿಮೆ ಸಾಕ್ಷರತೆ, ಪೌಷ್ಟಿಕಾಂಶದ ಕೊರತೆ ಇತ್ಯಾದಿಗಳ ರೂಪದಲ್ಲಿ ಬುಡಕಟ್ಟುಗಳ ಸಮಸ್ಯೆಗಳು ಮರುಕಳಿಸುತ್ತವೆ. ಅಂದರೆ ಈ ಸಮಸ್ಯೆಗಳಿಂದ ಅವರು ಮುಕ್ತರಾಗಿಲ್ಲ ಎಂದು ಕಾರ್ಯಪಡೆಯ ವರದಿಯಲ್ಲಿ ಹೇಳಿದೆ.

ಈ ಹಿಂದಿನ ಹಲವಾರು ಸಮಿತಿಗಳು ಮತ್ತು ಕಾರ್ಯಪಡೆಯ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಐದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಒಟ್ಟಾರೆ ಹೊಸ ಕ್ರಮವನ್ನು ಅಳವಡಿಸಿಕೊಳ್ಳಲಾಗಿತ್ತು. ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಸರ್ಕಾರ ಮತ್ತು ಅರೆ–ಸರ್ಕಾರಿ ಸಂಘಟನೆಗಳಿಗೆ ಹಣಕಾಸಿನ ನೆರವು ನೀಡಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಚಟುವಟಿಕೆಗಳಿಗೆ ಹೊಸ ಚಾಲನೆಯನ್ನು ನೀಡಲಾಯಿತು. ಈ ಬುಡಕಟ್ಟು ಯೋಜನೆಗಳು ಬುಡಕಟ್ಟು ಪ್ರದೇಶ ಮತ್ತು ಇತರ ಪ್ರದೇಶಗಳ ನಡುವಿನ ಅಭಿವೃದ್ಧಿಯಲ್ಲಿನ ವ್ಯತ್ಯಾಸವನ್ನು ಕಡಿಮೆ ಮಾಡಿತು. ಸಾಮಾನ್ಯವಾಗಿ ಈ ಯೋಜನೆಯ ಅವಧಿಯಿಂದ ಬುಡಕಟ್ಟು ಸಮುದಾಯಗಳ ಜೀವನಮಟ್ಟ ಸುಧಾರಣೆಯ ಕಡೆಗೆ ಸಾಗತೊಡಗಿತು ಎನ್ನಬಹುದು.

ಈ ಮುಂದಿನ ಪಟ್ಟಿಯು ಒಂದನೇ ಪಂಚವಾರ್ಷಿಕ ಯೋಜನೆಯಿಂದ ೫ನೇ ಪಂಚ ವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಮಾಡಿದ ಹಣದ ಪ್ರಮಾಣವು ಹಂತ ಹಂತವಾಗಿ ಹೆಚ್ಚಾಗುತ್ತಾ ಬಂದಿರುವುದನ್ನು ತೋರಿಸುತ್ತಿದೆ.

ಕೋಷ್ಟಕ-೩.೨. ಒಂದನೇ ಪಂಚವಾರ್ಷಿಕ ಯೋಜನೆಯ ಅವಧಿಯಿಂದ ಐದನೇ ಯೋಜನಾ ಅವದಿಯವರೆಗೆ ಬುಡಕಟ್ಟು ಪ್ರದೇಶದ ಅಭಿವೃದ್ಧಿಗೆ ಮಾಡಿದ ವೆಚ್ಚದ ವಿವರ (ಕೋಟಿ.ರೂ.ಗಳಲ್ಲಿ)

ಯೋಜನಾ ವರದಿ	ಯೋಜನೆಯ ಒಟ್ಟು ವೆಚ್ಚ	ಬುಡಕಟ್ಟು ಅಭಿವೃದ್ಧಿಗೆ ಮಾಡಿದ ವೆಚ್ಚ	ಶೇಕಡಾ ವಾರು
ಒಂದು ಪಂಚವಾರ್ಷಿಕ ಯೋಜನೆ	೧.೯೬೦	೧೯.೯೨	೧.೦%
ಎರಡನೇ ಪಂಚವಾರ್ಷಿಕ ಯೋಜನೆ	೭,೬೭೨	೪೧.೯೨	೦.೯%
ಮೂರನೇ ಪಂಚವಾರ್ಷಿಕ ಯೋಜನೆ	೮೫೭೭	೫೦.೫೩	೦.೬%
ಮೂರು ವಾರ್ಷಿಕ ಯೋಜನೆಗಳು	೬೭೫೬	೩೨.೩೨	೦.೬%
ನಾಲ್ಕನೆ ಪಂಚವಾರ್ಷಿಕ ಯೋಜನೆ	೧೫೯೦೨	೭೫.೦೦	೦.೫%
ಐದನೇ ಪಂಚವಾರ್ಷಿಕ ಯೋಜನೆ	೨೯೩೨೨	೧೧೮೨೦೦	೩.೦೧%

ಮೂಲ: *ಐದನೇ ಪಂಚವಾರ್ಷಿಕ ಯೋಜನೆ ಅಪ್ರೋಚ್ ಪೇಪರ್*

೧೯೭೪-೭೯ರ ಬುಡಕಟ್ಟು ಉಪಯೋಜನೆ ಮೂಲತಃ ವಲಯವಾರು ಕಾರ್ಯಕ್ರಮಗಳನ್ನು ಪ್ರತಿನಿಧಿಸುತ್ತಿತ್ತು ಮತ್ತು ಇದರ ಒಟ್ಟು ಮೊತ್ತವು ವಲಯವಾರು ಅವಶ್ಯಕತೆಗಳಿಗನುಗುಣವಾಗಿತ್ತು. ೧೯೭೪-೭೯ರ ಬುಡಕಟ್ಟು ಉಪಯೋಜನೆಯಲ್ಲಿ ಬುಡಕಟ್ಟು ಸಮುದಾಯಗಳ ಶೋಷಣೆಯನ್ನು ನಿರ್ಮೂಲನೆ ಮಾಡಲು ಮೊದಲ ಆದ್ಯತೆ ನೀಡಲಾಗಿತ್ತು ಮತ್ತು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಮತ್ತು ಕೃಷಿ ಆಧಾರಿತ ಇತರ ವಲಯಗಳಿಗೆ ಹೆಚ್ಚು ಬಂಡವಾಳ ತೊಡಗಿಸಲಾಗಿತ್ತು (ಶೇ. ೭೬%). ನಂತರದ ಸ್ಥಾನವನ್ನು ಶೇ. ೨೧ರಷ್ಟನ್ನು ಶಿಕ್ಷಣ ಮತ್ತು ಆರೋಗ್ಯ ವಲಯಗಳು ಪಡೆದುಕೊಂಡಿದ್ದವು. ಈ ಯೋಜನೆಯಲ್ಲಿ ಸಹಕಾರ ಕ್ಷೇತ್ರಕ್ಕೂ ಹೆಚ್ಚು ಉತ್ತೇಜನ ನೀಡಲಾಗಿತ್ತು. ಕೃಷಿ ಉತ್ಪನ್ನಗಳು ಮತ್ತು ಅರಣ್ಯ ಉಪ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿಗಾಗಿ ೬೦ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿತ್ತು. ಸಾರಿಗೆ ಮತ್ತು ಸಂಪರ್ಕ ಕ್ಷೇತ್ರಗಳು ಕಡಿಮೆ ಪ್ರಾತಿನಿಧ್ಯ ಹೊಂದಿದ್ದು ಒಟ್ಟು ಯೋಜನಾ ವೆಚ್ಚದ ಶೇ. ೮ರಷ್ಟನ್ನು ಮಾತ್ರ ಈ ವಲಯಕ್ಕೆ ವಿನಿಯೋಗಿಸಲಾಗಿತ್ತು.

ಪ್ರತಿಯೊಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಂದಲೇ ರೂಪಿಸಲ್ಪಟ್ಟ ನಿರ್ದಿಷ್ಟ ಪ್ರದೇಶದ ವಿಶೇಷ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನಹರಿಸುವಂತಾಗಲು ಸಮಗ್ರ ಪ್ರದೇಶಾಭಿವೃದ್ಧಿ ಯೋಜನೆಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಈ ಉಪ ಯೋಜನೆಗಳು ಪ್ರತಿಯೊಂದು ರಾಜ್ಯದಲ್ಲೂ ಸ್ಥಳೀಯ ಪರಿಸ್ಥಿತಿಗಳಿಗನುಗುಣವಾಗಿ ಕಾರ್ಯಕ್ರಮ ಗಳನ್ನು ರೂಪಿಸಲಾಗುತ್ತಿತ್ತು.

ಆರನೇ ಪಂಚವಾರ್ಷಿಕ ಯೋಜನೆ (೧೯೮೦-೮೫)

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಐದನೇ ಯೋಜನೆಯ ಯೋಜನಾಕ್ರಮವನ್ನು ಮುಂದುವರಿಸಲಾಗಿತ್ತು. ಆರನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿಯೂ ಟಾರ್ಗೆಟ್ ಫಲಾನು ಭವಿಗಳ ಕ್ರಮದಲ್ಲಿ, ಬುಡಕಟ್ಟುಗಳ ಅಭಿವೃದ್ಧಿ ಮಟ್ಟ ಮತ್ತು ಇತರ ಸಮುದಾಯಗಳ ಅಭಿವೃದ್ಧಿಯ ನಡುವಿನ ಅಂತರವನ್ನು ಕಡಿಮೆಗೊಳಿಸುವ ಉದ್ದೇಶದೊಂದಿಗೆ ಬುಡಕಟ್ಟು ಜನರ ಜೀವನದಲ್ಲಿ ಗುಣಾತ್ಮಕವಾದ ಬದಲಾವಣೆ ತರುವ ಮಹದಾಸೆಯನ್ನು ಈ ಯೋಜನೆಯಲ್ಲಿ ಇಟ್ಟುಕೊಳ್ಳಲಾಗಿತ್ತು.

ಆರನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳು

- ಬಡತನ ಮತ್ತು ನಿರುದ್ಯೋಗಗಳನ್ನು ನಿರ್ಮೂಲನೆ ಮಾಡುವುದು.
- ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮಗಳ ಮೂಲಕ ಬುಡಕಟ್ಟು ಜನ ಜೀವನವನ್ನು ಗುಣಾತ್ಮಕವಾಗಿ ಸುಧಾರಿಸುವುದು.
- ಆದಾಯ ಮತ್ತು ಸಂಪತ್ತುಗಳ ಅಸಮಾನತೆಯನ್ನು ಕಡಿಮೆ ಮಾಡುವುದು.
- ಬುಡಕಟ್ಟು ಪ್ರದೇಶಗಳ ಜನರ ಸಾಮರ್ಥ್ಯ ಮತ್ತು ಪ್ರತಿಭೆಗಳ ಪ್ರಯೋಜನ ಪಡೆಯಲು ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು.

ಆರನೇ ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ತಂತ್ರಗಳಲ್ಲಿ ಪೂರ್ಣ ಉದ್ಯೋಗದ ಕಾರ್ಯಕ್ರಮ, ಶಿಕ್ಷಣ ಮತ್ತು ಆರೋಗ್ಯದ ಸೇವೆಗಳು ಮತ್ತು ಸಂರಕ್ಷಣಾತ್ಮಕ ಕ್ರಮಗಳ ಲಾಭ ಗಳ ಕ್ರೋಢೀಕರಣದ ಮೇಲೆ ಹೆಚ್ಚು ಒತ್ತು ನೀಡಲಾಗಿತ್ತು. ವಿವಿಧ ವಲಯಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿನ ಅಸಮರ್ಪಕತೆಗಳನ್ನು ತೊಡೆದು ಹಾಕಲು ಸಮಗ್ರವಾದ ಮಾರ್ಪಾಡುಗಳನ್ನು ಮಾಡಲಾಗಿತ್ತು. ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಯೋಜನಾ ಪ್ರಾಧಿಕಾರಗಳಿಗೆ ಕಾರ್ಯಕ್ರಮಗಳನ್ನು ಸಂಯೋಜನೆ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಧಿಕಾರವನ್ನು ಚಲಾಯಿಸಲು ರಾಜ್ಯಗಳು ಹೆಚ್ಚು ಮಹತ್ವ ನೀಡಿದ್ದವು. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೋಸ್ಕರ, ಹೆಚ್ಚಿನದಾಗಿ ಕೃಷಿ, ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಪೂರಕವಾದ ಉದ್ಯೋಗಗಳು ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮಗಳು ಮತ್ತು ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ನೀಡಲಾಗಿತ್ತು. ಬುಡಕಟ್ಟು ಜನರ ಆರ್ಥಿಕ ಅಂತಸ್ತನ್ನು ಹೆಚ್ಚಿಸುವುದು ಯೋಜನೆಯ ಪ್ರಮುಖ ಆದ್ಯತೆಯಾಗಿದ್ದರಿಂದ

ಸೂಕ್ತವಾದ ತೋಟಗಾರಿಕೆ ಅಭಿವೃದ್ಧಿ, ಆಕಳು, ಎಮ್ಮೆ, ಕುರಿ, ಕೋಳಿ ಮತ್ತು ಹಂದಿ ಸಾಕಾಣಿಕಾ ಚಟುವಟಿಕೆಗಳಿಗೂ ಈ ಯೋಜನೆಯಲ್ಲಿ ಉತ್ತೇಜನ ನೀಡಲಾಗಿತ್ತು. ಅಂತೆಯೇ ಹಿಂದಿನ ಯೋಜನೆಗಳಂತಲ್ಲದೇ ಇದರಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಿಂತ ಹೆಚ್ಚಾಗಿ ಕುಟುಂಬ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗಿತ್ತು.

ಏಳನೇ ಪಂಚವಾರ್ಷಿಕ ಯೋಜನೆ (೧೯೮೫–೯೦)

ಬುಡಕಟ್ಟು ಉಪಯೋಜನೆಯ ಮಹತ್ವದ ಅಂಶಗಳನ್ನು ಈ ಯೋಜನೆಯಲ್ಲಿಯೂ ಮುಂದುವರಿಸಿಕೊಂಡು ಬರಲಾಗಿತ್ತು. ಏಳನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನುಸರಿಸಲ್ಪಟ್ಟ ಬುಡಕಟ್ಟು ಉಪಯೋಜನೆಯ ತಂತ್ರಗಾರಿಕೆಗಳು ಈ ಕೆಳಕಂಡಂತಿವೆ:

- ಯೋಜನೆ ಆಧಾರಿತ ಅಭಿವೃದ್ಧಿಗೋಸ್ಕರ ಅಭಿವೃದ್ಧಿ ಕ್ರಮಗಳು ಮತ್ತು ಸಮಗ್ರತೆಗಳನ್ನು ಅಂಗೀಕರಿಸಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಬುಡಕಟ್ಟು ಜನರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮವನ್ನು ಸ್ಥಾಪಿಸಲು ದೃಷ್ಟಿಯಿಂದ ಅಭಿವೃದ್ಧಿ ಬ್ಲಾಕ್‌ಗಳನ್ನು ಗುರುತಿಸುವುದು.
- ಬುಡಕಟ್ಟು ಉಪಯೋಜನೆಗಳಿಗೆ ಸಾಕಷ್ಟು ಹಣಕಾಸು ವ್ಯವಸ್ಥೆ ಮಾಡುವುದು ಮತ್ತು ರಾಜ್ಯ ಯೋಜನೆಗಳ ನಿಯಂತ್ರಣದಲ್ಲಿ ಅನುದಾನ ಹರಿದು ಬರುವಂತೆ ಮಾಡುವುದು.
- ಬುಡಕಟ್ಟು ಪ್ರದೇಶಗಳಲ್ಲಿ ಸೂಕ್ತವಾದ ಸಿಬ್ಬಂದಿ ನೀತಿಯನ್ನು ಆಯ್ಕೆ ಮಾಡಿಕೊಂಡು ಸೂಕ್ತವಾದ ಆಡಳಿತಾತ್ಮಕ ರಚನೆಯನ್ನು ಸೃಷ್ಟಿಸುವುದು.

ಏಳನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನುಷ್ಠಾನ ಕ್ರಮದಲ್ಲಿ ಯಾವುದೇ ಬದಲಾವಣೆ ಮಾಡದೆ ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮ(ಐ.ಟಿ.ಡಿ.ಪಿ)ದೊಂದಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಲಾಗಿತ್ತು. ವಿವಿಧ ಅಭಿವೃದ್ಧಿ ನಿಯೋಗಗಳ ನಡುವೆ ಸಹಯೋಗವನ್ನು ಸ್ಥಾಪಿಸಿ ಸಾಮಾಜಿಕ ಸೇವೆಗಳಿಗೆ ಆದ್ಯತೆ ನೀಡಲಾಗಿತ್ತು. ಲ್ಯಾಂಪ್ಸ್‌ಗಳನ್ನು ಅವರ ಜನಪ್ರಿಯತೆಯ ತಳಹದಿಯನ್ನು ವಿಸ್ತರಿಸುವ ಮೂಲಕ ಅವುಗಳನ್ನು ಬಲಗೊಳಿಸಲಾಗಿತ್ತು. ಈ ಯೋಜನೆಯಲ್ಲಿ ಬುಡಕಟ್ಟು ಸಮುದಾಯದವರಿಗೆ ಪುನರ್ವಸತಿ ಮತ್ತು ಬುಡಕಟ್ಟು ಮಹಿಳೆಯರ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಗಮನಹರಿಸಲಾಗಿತ್ತು.

ಈ ಮುಂದಿನ ಪಟ್ಟಿಯು ವಿವಿಧ ಯೋಜನೆಗಳ ಅವಧಿಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗಾಗಿ ಮಾಡಲಾಗಿರುವ ವೆಚ್ಚದ ವಿವರವನ್ನು ತೋರಿಸುತ್ತದೆ. ಈ ಪಟ್ಟಿಯಲ್ಲಿ ಸೂಚಿಸಿರುವ ಪ್ರಕಾರ ರಾಜ್ಯದ ಅನುದಾನದಿಂದ ಬರುವ ಮೊತ್ತವು ಕೇಂದ್ರದ ವಿಶೇಷ ನೆರವಿನಿಂದ ಬರುವ ಅನುದಾನಕ್ಕಿಂತ ಹೆಚ್ಚಾಗಿರುವುದು ಕಂಡು ಬರುತ್ತದೆ. ಕೇಂದ್ರದ ವಿಶೇಷ ನೆರವು(ಎಸ್.ಸಿ.ಪಿ) ಯೋಜನೆಯ ಹಣವು ಐದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಡಿಮೆ ಇದ್ದು, ಏಳನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹೆಚ್ಚಾಗಿದೆ. ಬುಡಕಟ್ಟು ಅಭಿವೃದ್ಧಿಗಾಗಿ

ಮಾಡುವ ಒಟ್ಟು ವೆಚ್ಚವೂ ಯೋಜನೆಯಿಂದ ಯೋಜನೆಗೆ ಹೆಚ್ಚಾಗುತ್ತಾ ಬಂದಿರುವುದು ಕಂಡು ಬಂದಿದೆ. ಬುಡಕಟ್ಟು ಅಭಿವೃದ್ಧಿಗೆ ಈ ಯೋಜನೆಯ ಒಟ್ಟು ಹೂಡಿಕೆ ೭೯೫೧.೮೨ ಕೋಟಿ ರೂ.ಗಳಷ್ಟಾಗಿದ್ದು, ಈ ಯೋಜನೆಯ ಅವಧಿಯಲ್ಲಿ ರಾಜ್ಯ ಯೋಜನೆಯಿಂದ ಬಂದ ಹಣ ೭೧೦೦.೫೭ ಕೋಟಿ. ರೂ.ಗಳು.

ಕೋಷ್ಟಕ-೩.೩. ಬುಡಕಟ್ಟು ಅಭಿವೃದ್ಧಿಗಾಗಿ ವಿವಿಧ ಯೋಜನೆಗಳ ಅವಧಿಯಲ್ಲಿನ ವೆಚ್ಚದ ವಿವರ (ಕೋಟಿ ರೂ.ಗಳಲ್ಲಿ)

ಯೋಜನೆಗಳು	ರಾಜ್ಯ ಯೋಜನೆಯ ಹಣ	ಕೇಂದ್ರದ ನೆರವಿನಿಂದ ಬಂದ ಹಣ	ಒಟ್ಟು
೫ನೇ ಯೋಜನೆ	೭೫೯.೪೪	೧೮೬.೭೬	೯೪೬.೨೦
೧೯೭೯-೮೦ರ ವಾರ್ಷಿಕ ಯೋಜನೆ	೩೮೨.೪೫	೫೯.೪೫	೪೪೧.೯೦
೬ನೇ ಯೋಜನೆ	೩೩೮೭.೮೯	೪೮೬.೧೧	೩೮೭೪.೦೦
೭ನೇ ಯೋಜನೆ	೭೧೦೦.೫೨	೮೫೧.೨೫	೭೯೫೧.೮೨

ಮೂಲ: *ಎ ನೋಟ್ ಆನ್ ರಿವ್ಯೂ ಆಫ್ ಪ್ರೋಗ್ರಾಮ್ಸ್ ಡ್ಯೂರಿಂಗ್ ಸೆವೆಂತ್ ಪ್ಲ್ಯಾನ್, ಪ್ಲ್ಯಾನಿಂಗ್ ಕಮಿಷನ್, ನ್ಯೂಡೆಲ್ಲಿ*

ಎಂಟನೇ ಪಂಚವಾರ್ಷಿಕ ಯೋಜನೆ (೧೯೯೨-೧೯೯೭)

ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೋಸ್ಕರ ಇರುವ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನಾ ಆಯೋಗವು ಹೆಚ್ಚು ವಸ್ತುನಿಷ್ಠ ಕ್ರಮಗಳನ್ನು ಕೈಗೊಂಡಿತ್ತು. ಈ ಯೋಜನೆಯಲ್ಲಿ ಬಹುತೇಕ ಎಲ್ಲ ಹಂತಗಳಲ್ಲಿ ಕಾರ್ಯೋನ್ಮುಖ ಸಂಯೋಜನೆ ಮತ್ತು ಸೇವೆಗಳನ್ನು ಸಂಯೋಜನೆ ಮಾಡಿ ಪರಿಣಾಮಕಾರಿಯಾಗಿ ವಿತರಿಸಲು ಆಡಳಿತ ಕ್ರಮವನ್ನು ಪುನಶ್ಚೇತನಗೊಳಿಸಲು ಹೆಚ್ಚು ಒತ್ತು ನೀಡಲಾಗಿತ್ತು. ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರಿಗೆ ಉತ್ತಮವಾದ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಅವರ ಜೀವನದ ಪರಿಸರವನ್ನು ಸುಧಾರಿಸುವ ಕಡೆಗೂ ಸಹ ವಿಶೇಷ ಆಸಕ್ತಿ ವಹಿಸಲಾಗಿತ್ತು. ಯೋಜನೆಯ ಕಾರ್ಯಪಡೆಯೂ ಕೂಡ ಏಳನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಮುಂದುವರಿಸಿಕೊಂಡು ಹೋಗುವಂತೆ ಶಿಫಾರಸ್ಸು ಮಾಡಿದ್ದು. ಅದರಂತೆ ಎಂಟನೇ ಪಂಚವಾರ್ಷಿಕ ಯೋಜನೆಯು ಉದ್ದೇಶಗಳನ್ನು ಈ ಕೆಳಕಂಡ ಉದ್ದೇಶಗಳನ್ನು ಹೊಂದಲಾಗಿತ್ತು.

- ಬಡತನ ನಿರ್ಮೂಲನೆ ಮಾಡುವುದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ತನ್ಮೂಲಕ ಆದಾಯದ ಅಸಮಾನತೆಯನ್ನು ಹೋಗಲಾಡಿಸುವುದು.
- ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮಗಳ ಮೂಲಕ ಗುಣಮಟ್ಟದ ಜೀವನವನ್ನು ಒದಗಿಸುವುದು.
- ಬುಡಕಟ್ಟು ಅಭಿವೃದ್ಧಿ ಯೋಜನೆಯಿಂದ ಹೆಚ್ಚು ಆರ್ಥಿಕ ಲಾಭ ಪಡೆಯಲು ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಬಲಗೊಳಿಸುವುದು.
- ತೀವ್ರವಾದ ಶೈಕ್ಷಣಿಕ ಪ್ರಯತ್ನಗಳ ಮೂಲಕ ಆಸಕ್ತಿ ಇರುವ ಕಡೆಗಳಲ್ಲಿ ಬುಡಕಟ್ಟು ಜನರ ಆತ್ಮವಿಶ್ವಾಸವನ್ನು ವೃದ್ಧಿಗೊಳಿಸುವುದು.

ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ, ಬುಡಕಟ್ಟು ಉಪಯೋಜನೆ(ಟಿ.ಎಸ್.ಪಿ.) ಎಂ.ಎ.ಡಿ.ಎ.(ಮಾಡಿಫೈಡ್ ಏರಿಯಾ ಡೆವಲಪ್‌ಮೆಂಟ್ ಅಪ್ರೋಚ್), ಚದುರಿದ ಅಭಿವೃದ್ಧಿ ಯೋಜನೆಗಳು ಮತ್ತು ಹಿಂದಿನ ಬುಡಕಟ್ಟು ಅಭಿವೃದ್ಧಿ ಯೋಜನಾಕ್ರಮಗಳಿಗೆ ಒತ್ತು ನೀಡಾಲಾಗಿತ್ತು. ಔಪಚಾರಿಕವಲ್ಲದ ವಲಯಗಳಲ್ಲಿನ ಆರ್ಥಿಕ ಚಟುವಟಿಕೆಗಳ ವೈವಿಧ್ಯತೆಯ ಮೇಲೆ ಆದ ಪರಿಣಾಮಗಳ ಹೊರತಾಗಿಯೂ ಬುಡಕಟ್ಟು ಉಪಯೋಜನೆಯಲ್ಲಿ ಜೀವನಾಧಾರದ ಪ್ರಮುಖ ಮೂಲವಾಗಿ ಕೃಷಿವಲಯವು ಮುಂದುವರಿಯಿತು ಮತ್ತು ಮೀನುಗಾರಿಕೆ, ರೇಷ್ಮೆ, ಕೃಷಿ, ತೋಟಗಾರಿಕೆ, ಬರಡು ಭೂಮಿಯಲ್ಲಿ ಪ್ಲಾಂಟೇಷನ್ ಚಟುವಟಿಕೆಗಳು ಮತ್ತು ಹಣ್ಣು ತರಕಾರಿಗಳನ್ನು ಬೆಳೆಯುವುದನ್ನು ಅಭಿವೃದ್ಧಿಪಡಿಸಲು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹತ್ವ ನೀಡಲಾಗಿತ್ತು. ಈ ಚಟುವಟಿಕೆಗಳು ಬುಡಕಟ್ಟು ಜನರಿಗೆ ಪೂರಕವಾಗಿ ಹೆಚ್ಚುವರಿ ಆದಾಯ ಮತ್ತು ಉದ್ಯೋಗಕ್ಕೆ ಹೊಸ ಮಾರ್ಗಗಳನ್ನು ಒದಗಿಸಿಕೊಟ್ಟಿದ್ದವು. ಬುಡಕಟ್ಟು ಜನರ ಕೌಶಲ್ಯಗಳನ್ನು ಸುಧಾರಿಸುವ ಸಲುವಾಗಿ ಶಿಕ್ಷಣ ಮತ್ತು ವೃತ್ತಿ ಕೌಶಲ್ಯ ತರಬೇತುಗಳ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ನೀರಾವರಿ ಸೌಲಭ್ಯಗಳ ವಿಸ್ತರಣೆ, ಬುಡಕಟ್ಟು ವಸತಿ ನೆಲೆಗಳ ವಿದ್ಯುದ್ದೀಕರಣ, ನೀರಾವರಿ ಬಾವಿಗಳ ವಿಸ್ತರಣೆ, ಪಶುಸಂಗೋಪನಾ ಚಟುವಟಿಕೆಗಳ ವಿಸ್ತರಣೆ ಮತ್ತು ಗಣಿಗಾರಿಕೆಗಳಿಗೂ ಸಹ ಅವಕಾಶ ನೀಡಲಾಗಿತ್ತು. ಈ ಯೋಜನೆಯಲ್ಲಿ ಬುಡಕಟ್ಟು ಸಮೂಹಗಳ ಕುಟುಂಬಗಳನ್ನು ಆರ್ಥಿಕವಾಗಿ ಉತ್ತಮಪಡಿಸಲು ಕುಟುಂಬ ಕೇಂದ್ರಿತ ಯೋಜನೆಗಳಿಗೂ ಒತ್ತು ನೀಡಲಾಗಿತ್ತು. ಸಮುದಾಯ ಅಭಿವೃದ್ಧಿ ಯೋಜನೆಗಳಿಗೆ ದ್ವಿತೀಯ ಪ್ರಾಶಸ್ತ್ಯ ನೀಡಲಾಗಿತ್ತು.

ಒಂಬತ್ತನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨)

ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೭ರ ದರದಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಯೋಜಿಸಲಾಗಿತ್ತು. ಈ ಯೋಜನೆಯಲ್ಲಿ ಸೂಕ್ತವಾದ ಉತ್ಪಾದನಾಧಾರಿತವಾದ ಉದ್ಯೋಗಾವಕಾಶಗಳ ಸೃಷ್ಟಿ, ಬಡತನ ನಿರ್ಮೂಲನೆ, ಮಹಿಳೆಯರು ಮತ್ತು ಸಾಮಾಜಿಕವಾಗಿ

ಸೌಲಭ್ಯವಂಚಿತ ಸಮೂಹಗಳ ಸಬಲೀಕರಣದಂತಹ ಉದ್ದೇಶಗಳನ್ನು ಹೊಂದಲಾಗಿತ್ತು. ತುಳಿತಕ್ಕೆ ಒಳಗಾಗಿದ್ದ ದುರ್ಬಲ ವರ್ಗಗಳಿಗೆ ಆಹಾರ ಮತ್ತು ಪೌಷ್ಟಿಕಾಂಶಗಳನ್ನು ಒದಗಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಆದ್ದರಿಂದ ಸರ್ಕಾರ ಮತ್ತು ಜನರು ಅದರಲ್ಲೂ ವಿಶೇಷವಾಗಿ ಬಡಜನರು ಸಂಪೂರ್ಣವಾಗಿ ಪಾಲ್ಗೊಳ್ಳುವಂತಹ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಬಹುಮುಖ್ಯ ಕೆಲಸ ಎಂದರೆ ಹೊಸ ಯುಗಕ್ಕೆ ದಾರಿ ತೋರಿಸುವ ಜನಪರ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವುದಾಗಿತ್ತು. ಇವುಗಳಲ್ಲಿ ಕೇವಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೇ ಬಹುಸಂಖ್ಯಾತ ಜನರು ಅದರಲ್ಲೂ ವಿಶೇಷವಾಗಿ ಬಡಜನರು ಸಂಪೂರ್ಣವಾಗಿ ಪಾಲ್ಗೊಳ್ಳುವಂತೆ ಮಾಡಬೇಕೆಂಬುದು ಒಂಬತ್ತನೇ ಯೋಜನೆಯಲ್ಲಿ ಘೋಷಣೆ ಮಾಡಲಾಗಿತ್ತು.

ಪಾಲುಗಾರಿಕೆಯು ಈ ಯೋಜನೆಯು ಸಮಾನತೆ ಮತ್ತು ಆರ್ಥಿಕ ಬೆಳವಣಿಗೆಯ ದರವನ್ನು ಹೆಚ್ಚಿಸುವಂತಿರಬೇಕೆಂಬುದು ಯೋಜನೆಯ ಪೂರ್ವ ಷರತ್ತಾಗಿತ್ತು. ಈ ಉದ್ದೇಶವನ್ನು ಈಡೇರಿಸುವ ಸಲುವಾಗಿ ಭಾರತ ಸರ್ಕಾರವು ಸಂವಿಧಾನಕ್ಕೆ ೭೩ನೇ ತಿದ್ದುಪಡಿ ತಂದು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು, ಮಹಿಳೆಯರು ಮತ್ತು ಇತರ ಹಿಂದುಳಿದ ವರ್ಗಗಳು ಮತ್ತು ಅಂಚಿನ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಪಂಚಾಯತ್ ಸಂಸ್ಥೆಗಳನ್ನು ರೂಪಿಸುವುದರ ಮೇಲಿನ ಕಾರ್ಯ ಪಡೆಯ ಕರಡು ವರದಿಯಲ್ಲಿ ಸೂಚಿಸಿರುವ ಪ್ರಕಾರ 'ದೇಶದ ಬಹುಭಾಗ ಮತ್ತು ಬಹುಸಂಖ್ಯೆಯ ಜನರು ಪ್ರಗತಿಯ ಪ್ರತಿಫಲವನ್ನು ಕಂಡಿರಲಿಲ್ಲ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಳಮಟ್ಟದಲ್ಲಿನ ಜನರ ಪಾಲ್ಗೊಳ್ಳುವಿಕೆಯಿಂದ ಅಭಿವೃದ್ಧಿಯ ಪ್ರತಿಫಲಗಳು ಅನೇಕ ಬಾರಿ ದ್ವಿಗುಣಗೊಂಡಿವೆ' (೧೯೯೭-೨೦೦೨).

ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ಗಮನವನ್ನು ಸೆಳೆಯಲಾಗಿತ್ತು. ಬುಡಕಟ್ಟು ಆರ್ಥಿಕತೆಯ ಸಂರಕ್ಷಣೆ ಮತ್ತು ಹೊರಗಿನ ಮಾರುಕಟ್ಟೆಯ ಬೆದರಿಕೆಯ ವಿರುದ್ಧ ಬೆಂಬಲ ನೀಡುವ ಭರವಸೆಯನ್ನು ಬುಡಕಟ್ಟು ಜನರಿಗೆ ನೀಡಿತ್ತು. ಬೌದ್ಧಿಕ ಆಸ್ತಿ ಕಾಯಿದೆಯ ಪ್ರಕಾರ ಅರಣ್ಯ ಉಪ ಉತ್ಪನ್ನಗಳು ಮತ್ತು ಔಷಧೀಯ ಸಸ್ಯಗಳ ಉಪಯೋಗಕ್ಕೆ ಸಂಬಂಧಿಸಿದ ಬುಡಕಟ್ಟು ಜನರ ಮಾಲಿಕತ್ವ ಮತ್ತು ಹಕ್ಕನ್ನು ಸಂರಕ್ಷಿಸಲಾಗಿದೆ. ಈ ಯೋಜನೆಯ ೨೧ನೇ ಶತಮಾನದ ಪ್ರಾರಂಭದಲ್ಲಿ ಬುಡಕಟ್ಟು ಜನರ ಆಶೋತ್ತರಗಳನ್ನು ಈಡೇರಿಸುವ ಮತ್ತು ಅವರನ್ನು ರಾಷ್ಟ್ರೀಯ ಜೀವನದ ಮುಖ್ಯವಾಹಿನಿಗೆ ತರುವಲ್ಲಿನ ಒಂದು ಪ್ರಮುಖ ಪ್ರಕ್ರಿಯೆಯಾಗಿದೆ. ಈ ಯೋಜನೆಯಲ್ಲಿ ಪರಿಶಿಷ್ಟ ಬುಟಕಟ್ಟುಗಳನ್ನು ಒಳಗೊಂಡಂತೆ ಸಾಮಾಜಿಕವಾಗಿ ಸೌಲಭ್ಯ ವಂಚಿತ ಸಮೂಹಗಳಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆ ಮತ್ತು ಸಾಮಾಜಿಕ ಸಬಲೀಕರಣ, ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯದ ತತ್ವಗಳಡಿಯಲ್ಲಿ ಅಭಿವೃದ್ಧಿಪಡಿಸಿ ಅವರ ಸಮಗ್ರ ಜೀವನವನ್ನು ಸಕಾರಾತ್ಮಕವಾಗಿ ಬದಲಾವಣೆ ಮಾಡಲು ನಿರ್ಧರಿಸಲಾಗಿತ್ತು.

ಹತ್ತನೇ ಪಂಚವಾರ್ಷಿಕ ಯೋಜನೆ ೨೦೦೨-೨೦೦೭

ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದ ಉನ್ನತಿಗಾಗಿ, ಸಾಮಾಜಿಕ ಸಬಲೀಕರಣ, ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯ ಎಂಬ ಮೂರು ಪ್ರಮುಖ ತತ್ವಗಳ ಮೂಲಕ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಯಿತು. ಈ ಯೋಜನೆಯ ದೃಷ್ಟಿಯಿಂದ ನೋಡುವುದಾದರೆ, ಪರಿಶಿಷ್ಟ ಬುಡಕಟ್ಟುಗಳ ಧುಸ್ಥಿತಿಗೆ ಅವರ ಬಡತನ, ಆಸ್ತಿಯಿಲ್ಲದಿರುವುಕೆ ಮತ್ತು ಅನಕ್ಷರತೆಗಳಿಗಿಂತ ಹೆಚ್ಚಾಗಿ, ಸಮಾಜದ ಇತರ ಜನ ಸಮೂಹಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಸ್ಥೆಗಳೊಂದಿಗೆ ವ್ಯವಹರಿಸುವ ಸಾಮರ್ಥ್ಯವನ್ನು ಅವರು ಪಡೆದುಕೊಳ್ಳದೆ ಇರುವುದೇ ಆಗಿದೆ ಹಾಗೂ ಅವರ ಧುಸ್ಥಿತಿಗೂ ಇವೇ ಅಂಶಗಳು ಕಾರಣವಾಗಿವೆ ಎಂದು ನವದೆಹಲಿಯ ಪಾಲ್ಕ ಪ್ರಕಾಸನದವರು ಪ್ರಕಟಿಸಿರುವ ನದೀಮ್ ಹುಸೇನ್ ಅವರ "ಟ್ರೈಬಲ್ ಇಂಡಿಯಾ"ಎಂಬು ಪುಸ್ತಕದಲ್ಲಿ ಉಲ್ಲೇಖಿತವಾಗಿದೆ.

ನದೀಮ್ ಹುಸೇನ್ ಅವರ ಉಲ್ಲೇಖಕ್ಕೆ ಪೂರಕವಾಗಿ, ಸ್ವಾತಂತ್ರ್ಯನಂತರ ಪರಿಶಿಷ್ಟ ಬುಡಕಟ್ಟುಗಳ ಜನರು ವಾಸಿಸುತ್ತಿರುವ ಭೂಮಿಯಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಲ್ಲಿ ನಿರ್ಮಿಸಿದ ಅಣೆಕಟ್ಟಗಳು, ಗಣಿಗಾರಿಕೆ, ಕೈಗಾರಿಕೆಗಳ ಸ್ಥಾಪನೆ ಮತ್ತು ರಸ್ತೆಗಳ ನಿರ್ಮಾಣದಿಂದಾಗಿ ಅವರು ತಮ್ಮ ಮೂಲಸ್ಥಳದಿಂದ ಸ್ಥಳಾಂತರವಾಗುವ ಅಂಜಿಕೆಗೆ ಒಳಗಾಗಿದ್ದಾರೆ. ಜೊತೆಗೆ ಪರಿಶಿಷ್ಟ ಬುಡಕಟ್ಟುಗಳ ಜನರ ಜೀವನವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತೀ ಕರಿಸುವ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಜನಸಮೂಹ ಮೊದಲಿ ನಿಂದಲೂ ವಾಸಿಸುತ್ತಿರವ ಅರಣ್ಯ ಪ್ರದೇಶಗಳಿಗೆ ಹೊರಗಿನವರು ಅಂದರೆ ಬುಡಕಟ್ಟೇತರರು ಬರುವುದರಿಂದಲೂ ಅವರು ಬೀತಿಗೆ ಒಳಗಾಗಿದ್ದಾರೆ. ಇದರಿಂದಾಗಿ ಅವರು ತಮ್ಮ ಪಾರಂಪರಿಕ ಸಂಸ್ಥೆಗಳು, ಆಚರಣೆಗಳು ಮತ್ತು ಅವುಗಳ ಅಸ್ಥಿತ್ವವನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಅವರ ಪಾರಂಪರಿಕ ಜೀವನ ವಿಧಾನ ಮತ್ತು ಜಹೀವನ ಶೈಲಿಗಳು ಔಪಚಾರಿಕ ಮಾರುಕಟ್ಟೆ ಅಥವಾ ಸಂಸ್ಥೆಗಳಿಗೆ ವರ್ಗಾವಣೆಯಾಗುತ್ತಿರುವುದರಿಂದ ಇವರ ಜೀವನ ಸಂಕಷ್ಟಕ್ಕೆ ಸಿಲುಕಿದೆ,

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಗೆಹರಿಸಲಾಗದೇ ಉಳಿದಿರುವ, ಪರಿಶಿಷ್ಟ ಬುಡಕಟ್ಟುಗಳ ಸಮಸ್ಯೆಗಳನ್ನು ಪರಿಹರಿಸಲು ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯ ಕ್ರಮಗಳನ್ನು ರೂಪಿಸಲಾಗಿತ್ತು. ಅವುಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಿ ಪರಿಶಿಷ್ಟ ಬುಡಕಟ್ಟು ಗಳ ಜನರ ಸಮಸ್ಯೆಗಳನ್ನು ನಿವಾರಿಸುವುದರ ಮೂಲಕ ಅವರ ಬದುಕನ್ನು ಉತ್ತಮಪಡಿಸಲು ರಾಷ್ಟ್ರೀಯ ನೀತಿಯೋದನ್ನು ರೂಪಿಸಲಾಗಿತ್ತು. ಈ ನೀತಿಯಲ್ಲಿದ್ದ ಪ್ರಮುಖ ಅಂಶಗಳೆಂದರೆ, ಮೂಭೂತ ಸೌಲಭ್ಯಗಳ ಸೃಷ್ಟಿ, ಶಿಕ್ಷಣ, ಆರೋಗ್ಯ ಮತ್ತು ಬುಡಕಟ್ಟು ಮಹಿಳೆಯರ ಸಬಲೀಕರಣ ದಂತಹ ಅಂಶಗಳು ಪ್ರಮುಕವಾಗಿದ್ದವು.

ಆರ್ಥಿಕ ಬೆಳವಣಿಗೆ ಮಾತ್ರ ಈ ಯೋಜನೆಯ ಉದ್ದೇಶವಾಗಿರದೆ, ಬುಡಕಟ್ಟು ಅಭಿವೃದ್ಧಿಯೆಂದರೆ ಕೇವಲ ಜಿಡಿಪಿಯ ಹೆಚ್ಚಳವಾಗಿರದೆ, ಮಾನವ ಸಂಪನ್ಮೂಲದ ಸಮಗ್ರ ವಿಸ್ತರಣೆ ಎಂಬುದಾಗಿತ್ತು. ಮೂಲಭೂತ ಅವಶ್ಯಕತೆಗಳಾಗಿರುವ ಅನ್ನ, ವಸ್ತ್ರ ಮತ್ತು ವಸತಿಗಳಿಗಷ್ಟೇ ಸೀಮಿತವಾಗಿರದೆ, ಶಿಕ್ಷಣ, ಆರೋಗ್ಯ, ಶುದ್ದ ಕುಡಿಯುವ ನೀರಿನ ಪೂರೈಕೆ ಮತ್ತು ನೈರ್ಮಲೀಕರಣಗಳನ್ನು ಒಳಗೊಂಡಿತ್ತು. ಇವುಗಳ ಮೂಲಕ ಪರಿಶಿಷ್ಟ ಬುಡಕಟ್ಟುಗಳ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳನ್ನು ವಿಸ್ತರಿಸಲು ಯೋಜಿಸಲಾಗಿತ್ತು.

ಕಾಡುಗಳಲ್ಲಿ ನೆಲೆಸಿರುವ ಬುಡಕಟ್ಟು ಜನರ ನೆಲೆಗಳು ಶಾಲೆಗಳಿಂದ ದೂರವಿರುವುದರಿಂದ ಅಥವಾ ಅವರ ಬಡತನದಿಂದಾಗಿ ಅವರ ಮಕ್ಕಳು ಶಿಕ್ಷಣವನ್ನು ಮುಂದುವರಿಸುವ ಸ್ಥಿತಿಯಲಿಲ್ಲ. ಅಂತವರಿಗೆ ಶಿಕ್ಷಣವನ್ನು ಮುಂದುವರಿಸಲು, ಸಾಕ್ಷರತೆಯನ್ನು ಹೆಚ್ಚಿಸಲು ವಿದ್ಯಾರ್ಥಿನಿಲಯಗಳನ್ನು ಮಾಡಿಕೊಡುವ ಉದ್ದೇಶದಿಂದ ಪರಿಶಿಷ್ಟ ಬುಡಕಟ್ಟುಗಳ ಬಾಲಕ ಬಾಲಕಿಯರಿಗೆ ವಿದ್ಯಾರ್ಥಿ ನಿಲಯಗಳನ್ನು ಈ ಯೋಜನೆಯಲ್ಲಿ ನಿರ್ಮಿಸಿಕೊಡಲಾಗಿದೆ. ಇಂತಹ ವಿದ್ಯಾರ್ಥಿನಿಲಯಗಳನ್ನು ಮಾಧ್ಯಮಿಕಶಾಲೆ, ಪ್ರೌಢಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿಗಳಿಗೂ ಈ ಯೋಜನೆಯಲ್ಲಿ ವಿಸ್ತರಿಸಲಾಗಿದೆ.

ಮಹಿಳೆಯರ ಶಿಕ್ಷಣ ಪ್ರಮಾಣ ಪರಿಶಿಷ್ಟ ಬುಡಕಟ್ಟು ಸಮೂಹಗಳಲ್ಲಿ ಬಹಳ ಕಡಿಮೆ ಇದೆ. ಪರಿಶಿಷ್ಟ ಬುಡಕಟ್ಟು ಮಹಿಳೆಯರ ಅನಕ್ಷರತೆಯ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಭಾರತದಲ್ಲಿ ಬುಡಕಟ್ಟು ಮಹಿಳೆಯರ ಸಾಕ್ಷರತೇ ಪ್ರಮಾಣ ಶೇ ೧೦ಕ್ಕಿಂತ ಕಡಿಮೆ ಇರುವ ರಾಷ್ಟ್ರದ ೧೩೪ ಜಿಲ್ಲೆಗಳನ್ನು ಗುರುತಿಸಿ ಸಹಕಾರ ಸಂಘಗಳು ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಬುಡಕಟ್ಟು ಮಹಿಳಾ ಸಾಕ್ಷರತಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತದೆ. ಭಾರತದ ಯೋಜನಾ ವರದಿಯಲ್ಲಿ ಹೇಳಿರುವಂತೆ ಬುಡಕಟ್ಟು ಮಹಿಳೆಯರ ಸಾಕ್ಷರತಾ ಪ್ರಮಾನವನ್ನು ಪರಿಗಣಿಸಿ ಎಲ್ಲಾ ಪರಿಶಿಷ್ಟ ಬುಡಕಟ್ಟುಗಳ ಜನ ಸಮೂಹಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ.

೨೦೦೮-೨೦೦೯ನೇ ಸಾಲಿನ ವಾರ್ಷಿಕ ವರದಿಯಲ್ಲಿ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ನೀಡಿರುವ ವರದಿಯ ಪ್ರಕಾರ ಪರಿಶಿಷ್ಟ ಬುಡಕಟ್ಟುಗಳ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಅವರಿಗೆ ಹಣಕಾಸಿನ ನೆರವು ನೀಡಲು, "ರಾಷ್ಟ್ರೀಯ ಪರಿಶಿಷ್ಟ ಬುಡಕಟ್ಟುಗಳ ಹಣಕಾಸು ಅಭಿವೃದ್ಧಿ ನಿಗಮ"ವು ವಿಸ್ತೃತವಾದ ಆದಿವಾಸಿ ಮಹಿಳಾ ಸಶಕ್ತಿಕರಣ ಯೋಜನೆಯನ್ನು(ಎ.ಎಂ.ಎಸ್.ವೈ.) ಜಾರಿಗೆ ತಂದಿದೆ. ಪರಿಶಿಷ್ಟ ಬುಡಕಟ್ಟು ಸಮೂಹಗಳ ಕುಟುಂಬಗಳಲ್ಲಿ ದುಡಿಯುವ ಸದಸ್ಯರಿಗೆ, ಜನಶ್ರೀ ಜೀವನ್ ಭೀಮಾ ಯೋಜನಾ ಎಂಬ ಪಾಲಿಸಿಯನ್ನು ಈ ಯೋಜನಾ ಅವದಿಯಲ್ಲಿ ಜಾರಿಗೆ ತರಲಾಗಿದೆ೨.

ಒಟ್ಟಾರೆ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಜೀವನದ ಸರ್ವತೋಮುಖ ಅಭಿವೃದ್ಧಿಗೆ ರೂಪಿಸಿದ್ದ ಹಿಂದಿನ ಎಲ್ಲ ಯೋಜನೆಗಳನ್ನು, ಕಾರ್ಯಕ್ರಮಗಳನ್ನು

ಮುಂದುವರಿಸುಕೊಂಡು ಬಂದಿರುವುದರ ಜೊತೆಗೆ, ಬುಡಕಟ್ಟು ಜನರು ವಾಸಿಸುತ್ತಿರು ಮತ್ತು ಉಳುಮೆ ಮಾಡುತ್ತಿರುವ ಭೂಮಿಯ ಮೇಲಿನ ಹಕ್ಕು ಕಾನೂನುಬದ್ಧಗೊಳಿಸಲು ಮತ್ತು ಅವರನ್ನು ಒಕ್ಕಲೆಬ್ಬಿಸುವುದನ್ನ ತಪ್ಪಿಸಲು ೨೦೦೬ರಲ್ಲಿ ಪರಿಶಿಷ್ಟ ಬುಡಕಟ್ಟುಗಳು ಮತ್ತು ಸಾಂಪ್ರದಾಯಿ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಕಾಯಿದೆಯನ್ನು ಜಾರಿಗರ ತರಲಾಗಿದೆ. ಈ ಕಾಯಿದೆಯಿಂದಾಗಿ, ಪರಿಶಿಷ್ಟ ಬುಡಕಟ್ಟುಗಳ ಜನರಿಗೆ ತಮ್ಮ ಭೂಮಿ ಮೇಲಿನ ಹಕ್ಕುಪತ್ರಗಳನ್ನು ಸರ್ಕಾರದಿದ ಅದೀಕೃತವಾಗಿ ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ.[೩]

ಹನ್ನೊಂದನೇ ಪಂಚವಾರ್ಷಿಕ ಯೋಜನೆ ೨೦೦೭-೨೦೧೨.

ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಜನರು ಸಾಮಾಜಿಕ ವಾಗಿ ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಅನುಭವಿಸುತ್ತಿರುವ ದುಸ್ಥಿತಿಗೆ ಕಾರಣೀಭೂತ ವಾಗಿರುವ, ಸಾಮಾಜಿಕ ಆರ್ಥಿಕ ಹೊರತಣತನ, ಶೋಷಣೆ, ಮಾರ್ಜಿನಲೈಸೇಷನ್, ಅಶಾಂತಿ ಮತ್ತು ಬುಡಕಟ್ಟು ಪ್ರದೇಶಗಳ ಆಡಳಿತಗಳಂತಹ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ಸಾಮಾಜಿಕ ನ್ಯಾಯದ ಮೂಲಕ ಪರಿಶಿಷ್ಟ ಬುಡಕಟ್ಟುಗಳ ಜನರ ಜೀವನವನ್ನು, ಅವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಉನ್ನತೀಕರಣಗೊಳಿಸುವ ಉದ್ದೇಶದಿಂದ ಬುಡಕಟ್ಟು ಉಪ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಹನ್ನೊಂದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಜೀವನದ ಸಮಗ್ರ ಸುಧಾರಣೆಗಾಗಿ ಸಾಮಾಜಿಕ ಸಬಲೀಕರಣ ಮತ್ತು ಆರ್ಥಿಕ ಸಭಲೀಕರಣದ ಮಾರ್ಗಗಳನ್ನು ಅನುಸರಿಸಲಾಗಿದೆ.

ಸಾಮಾಜಿಕ ಸಬಲೀಕರಣಕ್ಕೋಸ್ಕರ ಶೈಕ್ಷಣಿಕ ಅಭಿವೃದ್ಧಿ ಅವಶ್ಯಕ ಎಂಬುದನ್ನು ಮನಗಂಡು, ಈ ಉದ್ದೇಶ ಸಾಧನೆಗಾಗಿ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗಾಗಿ ಹಣಕಾಸಿನ ಸಹಾಯ, ಪರಿಶಿಷ್ಟ ಬುಡಕಟ್ಟುಗಳ ವಿದ್ಯಾರ್ಥಿಗಳಿಗೆ ಕೋಚಿಂಗ್ ತರಗತಿಗಳು ಮತ್ತು ವಿದ್ಯಾರ್ಥಿನಿಲಯಗಳ ಸೌಲಭ್ಯಗಳನ್ನು ವಿವಿಧ ಯೋಜನೆಗಳ ಮೂಲಕ ಒದಗಿಸಿಕೊಡಲಾಗಿದೆ.[೪]

ಆರ್ಥಿಕ ಸಬಲೀಕರಭಕ್ಕೋಸ್ಕರ ಶೋಷಣೆಯನ್ನು ತಡೆಗಟ್ಟುವಿಕೆ, ಭೂ ಅನ್ಯತಕ್ರಾಂತತೆಯಿಂದ ಇವರನ್ನು ರಕಷಿಸುವುದು, ಒತ್ತಾಯಪೂರ್ವಕವಾಗಿ ಸ್ಥಳಾಂತರ ಮಾಡುವುದು ಮತ್ತು ದುಸ್ಥಿತಿ ಯಲ್ಲಿರುವ ಪರಿಶಿಷ್ಟ ಬುಡಕಟ್ಟುಗಳಿಗೆ ಸಂರಕ್ಷಣಾತ್ಮಕ ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸಲು, ಜೀವನಾವಶ್ಯಕಗಳು ಮತ್ತು ಸಾಮಾಜಿಕ ನ್ಯಾಯದ ಭರವಸೆ ನೀಡಲು, ಉದ್ಯೋಗ ಮತ್ತು ಆದಾಯ ಸೃಷ್ಠಿ ಮಾಡುವ ಕಾರ್ಯಕ್ರಮಗಳ ಮೂಲಕ ಪರಿಶಿಷ್ಟ ಬುಡಕಟ್ಟು ಸಮೂಹಗಳಾರ್ಥಿಕ ಸಬಲೀಕರಣಕ್ಕೆ ಕ್ರಮ ಕೈಗೊಳ್ಳಗಾಗಿತ್ತು.[೫]

ಬುಡಕಟ್ಟು ವ್ಯವಹಾರಗಳ ಸಚಿವಾಲಯದ ೨೦೦೮-೦೯ರ ವಾರ್ಷಿಕ ವರದಿಯ ಪ್ರಕಾರ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಮುದಾಯಗಳ ಅಭಿವೃದ್ಧಿಗಾಗಿ ಈ ಕೆಳಗಿನ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ.

೧. ಚಿಲ್ಲರೆ ಮಾರುಕಟ್ಟೆಗಳ ಸುಧಾರಣಾ ಚಟುವಟಿಕೆಗಳು

೨. ಅರಣ್ಯ ಉಪ ಉತ್ಪನ್ನಗಳ ಮಾರುಕಟ್ಟೆ ಸುಧಾರಣೆಗೆ ಸಂಬಂಧಿಸಿದ ಚಟುವಟಿಕೆಗಳು

೩. ಪರಿಶಿಷ್ಟ ಬುಡಕಟ್ಟುಗಳ ಕುಶಲ ಕೆಲಸಗಾರರ ಮತ್ತು ಅರಣ್ಯ ಉಪ ಉತ್ಪನ್ನಗಳನ್ನು ಸಂಗ್ರಹಿಸುವವರಿಗೆ, ವೃತ್ತಿ ತರಬೇತಿ, ಕೌಶಲ್ಯವೃದ್ಧಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು.

೪. ಸಂಶೋಧನೆ ಮತ್ತು ಅಭಿವೃದ್ಧಿ, ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು.

ಈ ಮೇಲಿನ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪರಿಶಿಷ್ಟ ಬುಡಕಟ್ಟು ಜನರನ್ನು ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿ ನಿಲ್ಲಿಸಲು ಈ ಯೋಜನೆಯಲ್ಲಿ ಹಲವಾರು ಕಾರ್ಯ ಕ್ರಮಗಳನ್ನು ಜಾರಿಗೆ ತರಲಾಗಿದೆ.

ಹನ್ನೆರಡನೇ ಪಂಚವಾರ್ಷಿ ಯೋಜನೆ ೨೦೧೨-೨೦೧೭

ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ಗಮನದಲ್ಲಿರಿಸಿಕೊಂಡು, ಪರಿಶಿಷ್ಟ ಬುಡಕಟ್ಟುಗಳು ಮತ್ತು ಬುಡಕಟ್ಟೇತರ ಸಮೂಹಗಳ ನಡುವಿನ ಅಂತರವನ್ನು ತಗ್ಗಿಸಲು ದೂರದೃಷ್ಟಿಯುಳ್ಳ ದ್ಯೇಯಗಳನ್ನು ಹೊಂದಲಾಗಿದೆ. ಅವುಗಳೆಂದರೆ:

೧. ಶಿಕ್ಷಣಕ್ಕೆ ಒತ್ತು ನೀಡುವುದು

೨. ಪರಿಶಿಷ್ಟ ಬುಡಕಟ್ಟುಗಳ ಮಕ್ಕಳು ವಿಶೇಷವಾಗಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸಾಕ್ಷರರಾಗಿರುವ ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣದ ಬೆಳವಣಿಗೆಗೆ ಗಮನ ಕೊಡುವುದು. ಪರಿಶಿಷ್ಟ ಬುಡಕಟ್ಟು ಹೆಣ್ಣುಮಕ್ಕಳ ಸಾಕ್ಷರತಾ ಪ್ರಮಾಣ ಶೇ. ೨೧ಕ್ಕಿಂತ ಕಡಿಮೆ ಇರುವ ಪರಿಶಿಷ್ಟ ಬುಡಕಟ್ಟು ಬ್ಲಾಕ್‌ಗಳಲ್ಲಿ ಮಹಿಳೆಯರ ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಆಧ್ಯತೆ ನೀಡುವುದು. ಇದಕ್ಕಾಗಿ ಈ ಬ್ಲಾಕ್‌ಗಳಲ್ಲಿ ಹೆಚ್ಚು ಆಶ್ರಮ ಶಾಲೆಗಳನ್ನು ಸ್ಥಾಪಿಸುವುದು.

೩. ಬುಡಕಟ್ಟು ಕಲ್ಯಾಣ ಇಲಾಖೆಯವರು ಈ ಸಮೂಹಗಳ ೫-೧೪ ವಯೋಮಾನದ ಎಲ್ಲ ಮಕ್ಕಳಿಗೂ ಶಿಕ್ಷಣ ದೊರೆಯಿವಂತೆ ಮಾಡುವುದು.

೪. ಪರಿಶಿಷ್ಟ ಬುಡಕಟ್ಟು ಸಮೂಹಗಳಲ್ಲಿ ಅರ್ಧಕ್ಕೆ ಶಾಲೆ ಬಿಟ್ಟು ಹೋಗುವ ಮಕ್ಕಳ ಸಂಖ್ಯೆ ಅಧಿಕವಾಗಿರುವುದು ಗಂಬೀರ ಸಮಸ್ಯೆಯಾಗಿದ್ದು, ಇಂತಹ ಮಕ್ಕಳು ಪುನಃ ಶಾಲೆಗೆ ಹೋಗುವಂತೆ ಮಾಡಲು ಮತ್ತು ಶಾಲೆಗೆ ಹೋಗುತ್ತಿರುವ ಮಕ್ಕಳು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸದಂತೆ ಮುಂದುವರಿಸೊಕೊಂಡು ಹೋಗುವಂತೆ ಮಾಡಲು, ಮದ್ಯಾಹ್ನದ ಬಿಸಿ . ಊಟ, ಉಚಿತ ಸಮವಸ್ತ್ರ, ಸ್ವೆಟರ್, ಶೂ ಮತ್ತು ಸಾಕ್ಸ್, ವಿದ್ಯಾರ್ಥಿ ವೇತನ, ಬೈಸಿಕಲ್ ವಿತರಣೆ ಮತ್ತು ಉಚಿತ ಪಠ್ಯಪುಸ್ತಕ ವಿತರಣೆಯಂತಹ ಯೋಜನೆಗಳನ್ನು ಅವರ ವಾಸಿಸುವ ಸ್ಥಳಗಳಲ್ಲಿಯೇ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

ಈ ಉದ್ದೇಶಗಳನ್ನೂ ಸಾಕಾರಗೊಳಿಸಲು ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಮಾರ್ಗಗಳು ಈ ಕೆಳಕಂಡಂತಿವೆ.

೧. ೮೯ ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳಲ್ಲಿ ಹೆಚ್ಚು ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಆಶ್ರಮ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು.

೨. ಪರಿಶಿಷ್ಟ ಬುಡಕಟ್ಟುಗಳ ಪ್ರದೇಶಗಳಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಆಶ್ರಮ ಶಾಲೆಗಳನ್ನಾಗಿ ಪರಿವರ್ತಿಸುವುದು.

೩. ಬುಡಕಟ್ಟು ಅಭಿವೃದ್ಧಿ ಬ್ಲಾಕುಗಳಲ್ಲಿ ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಅತ್ಯುತ್ತಮ ಮಾಧರಿಯ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದು ಮತ್ತು ಈಗಾಗಲೆ ಇರುವ ವಿದ್ಯಾರ್ಥಿ ನಿಲಯಗಳನ್ನು ಗುಣಾತ್ಮಕವಾಗಿ ಸುಧಾರಿಸುವುದು.

೪. ಎಲ್ಲಾ ಆಶ್ರಮ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳಿಗೂ ಶುದ್ದ ಕುಡಿಯುವ ನೀರು ಸೇರಿದಂತೆ ಸಂಪೂರ್ಣ ಮೂಳಭೂತ ಸೌಲಭ್ಯಗಳನ್ನು ಒಧಗಿಸುವುದು

೫. ಪರಿಶಿಷ್ಟ ಬುಡಕಟ್ಟುಗಳ ಪ್ರದೇಶಗಳಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಪೀಠೋಪ ಕರಣಗಳು ಪ್ರಯೋಗಾಲಯಗಳು ಮತ್ತು ಗ್ರಂಥಾಲಯ ಸೌಲಭ್ಯಗಳನ್ನು ಒಧಗಿಸುವುದು.

೬. ಈ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಮತ್ತು ನಿರ್ವಹಿಸುತ್ತಿರುವ ಶಿಕ್ಷಕೆ ಭೋದನಾ ಕೌಶಲ್ಯವನ್ನು ಹೆಚ್ಚಿಸಲು ಅವರಿಗೆ ಸೂಕ್ತ ತರಬೇತಿ ನೀಡುವುದು.

೭. ಕೇಂದ್ರ ಲೋಕಸೇವಾ ಆಯೋಗದವರು ಮತ್ತು ರಾಜ್ಯ ಸರ್ಕಾರಗಳು ನಡೆಸುವ ಸ್ಪರ್ಧಆತ್ಮಕ ಪರೀಕ್ಷೆಗಳಿಗೆ ಬುಡಕಟ್ಟು ವಿದ್ಯಾರ್ಥಿಗಳನ್ನು ತರಬೇತಿಗೊಳಿಸಲು ಪ್ರತಿಟತ ಕೋಚಿಂಗ್ ಸಂಸ್ಥೆಗಳಲ್ಲಿ ವ್ಯವಸ್ತೆ ಮಾಡುವುದು

೮. ಅದೇ ರೀತಿ ಐ.ಐ.ಟಿ. ವೈಧ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶ ಪರೀಕ್ಷೆಗಳಿಗೂ ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳಿಗೆ ಕೋಚಿಂಗ್ ವ್ಯವಸ್ಥೆ ಮಾಡುವುದು.

೯. ಪರಿಶಿಷ್ಟ ಬುಟಕಟ್ಟುಗಳಿಗೆ ಸೇರಿರುವ ಯುವಕರಿಗೆ ಮತ್ತು ಆಯ್ದ ವಿದ್ಯಾರ್ಥಿಗಳಿಗೆ ವೃತ್ತಿ ತರಬೇತಿಯನ್ನು ಕೊಡಿಸುವುದು.

ಈ ಮೇಲಿನ ಉದ್ದೇಶಗಳ ಸಾಧನೆಗಾಗಿ ೨೦೧೨ರಿಂದ ೨೦೧೭ರವರೆಗಿನ ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೧,೦೮೬೦೫.೦೦ ಕೋಟಿರೂಗಳನ್ನು ಖರ್ಚು ಮಾಡುವ ಪ್ರಸ್ಥಾವನೆಯೋದಿಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.[೬]

ಭಾರತದಲ್ಲಿ ಇದು ವರೆಗಿನ ಹನ್ನೆರಡು ಪಂಚವಾರ್ಷಿಕ ಯೋಜನೆಗಳ ಮೂಲಕ ಮತ್ತು ವಿವಧ ವಾರ್ಷಿಕ ಯೋಜನೆಗಳ ಅವಧಿಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಹೊಸ ಹೊಸ

ಕ್ರಮಗಳನ್ನ ಅಳವಡಿಸಿಕೊಂಡು ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಸರ್ಕಾರ ಮತ್ತು ಅರೆ-ಸರ್ಕಾರಿ ಸಂಘಟನೆಗಳಿಗೆ ಹಣಕಾಸಿನ ನೆರವು ನೀಡಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಚಟುವಟಿಕೆಗಳಿಗೆ ಹೊಸ ಚಾಲನೆಯನ್ನು ನೀಡಲಾಯಿತು. ಬುಡಕಟ್ಟು ಉಪ ಯೋಜನೆಗಳು ಮತ್ತು ಸಮಗ್ರ ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಬುಡಕಟ್ಟು ಬ್ಲಾಕುಗಳನ್ನು ಮಾಡಿ ಬುಡಕಟ್ಟು ಪ್ರದೇಶ ಮತ್ತು ಇತರ ಪ್ರದೇಶಗಳ ನಡುವಿನ ಅಭಿವೃದ್ಧಿಯಲ್ಲಿನ ವ್ಯತ್ಯಾಸವನ್ನು ಕಡಿಮೆ ಮಾಡಿತು. ಒಟ್ಟಾರೆ ಬುಡಕಟ್ಟು ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯಾನಂತರ ನೇಮಿಸಿದ ವಿವಿಧ ಸಮಿತಿಗಳು ಮತ್ತು ಆಯೋಗಗಳ ಸಲಹೆಗಳು ಮತ್ತು ಶಿಪಾರಸ್ಸುಗಳ ಪ್ರಕಾರ ಸಂವಿಧಾನದಂತೆ ಶೋಷಿತ, ಹಿಂದುಳಿದ ಮತ್ತು ಸೌಲಭ್ಯವಂಚಿತ ಪರಿಶಿಷ್ಟ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿ ಅವರ ಸಾಮಾಜಿಕ, ಆರ್ಥಿಕ ಮತ್ತು ಸಮಗ್ರ ಜೀವನವನ್ನು ಉನ್ನತೀಕರಿಸಿ ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ರಕ್ಷಿಸುವ ಪ್ರಯತ್ನಗಳನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ಮಾಡಲಾಗುತ್ತಿದೆ.

ಕನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಪರಿಶಿಷ್ಟ ಪಂಗಡದ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಸ್ವಯಂ ಉದ್ಯೋಗ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನದ ಯೋಜನೆ, ಕಿರು ಸಾಲ ಯೋಜನೆ ಮತ್ತು ನಿರುದ್ಯೋಗಿಗಳಿಗೆ ತರಬೇತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಪರಿಶಿಷ್ಟ ಬುಡಕಟ್ಟುಗಳ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಉನ್ನತೀಕರಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಈ ಅಧ್ಯಯನದಲ್ಲಿ ವಿಷಯವಾಗಿರುವ ಸಿದ್ದಿ ಜನಾಂಗದನರನ್ನು ೨೦೦೩ರ ವರೆಗೆ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿರಲಿಲ್ಲ, ಈ ಜನಾಂಗೀಯ ಸಮೂಹವನ್ನು ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿ ಯೋಜನೆಗಳ ಅನುಕೂಲತೆಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಿ ಬುಡಕಟ್ಟು ಜನಾಂಗದವರಿಗೆ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ೫೦ ಜನರಿಗೆ ೧೨.೫೦ ಲಕ್ಷ ರೂಪಾಯಿ ಸಹಾಯಧನ ನೀಡಲಾಗಿದೆ. ಉಧ್ಯಮಶೀಲತಾ ಅಭಿವೃದ್ಧಿ ಯೋಜನೆಯಲ್ಲಿ ಈ ಜಿಲ್ಲೆಯ ಸಿದ್ದಿಯರಲ್ಲಿ ೨ ಜನರು ೨.೪೦ ಲಕ್ಷ ರೂ ಅಂಚಿನ ಹಣ ಪಡೆದೊಕೊಂಡು ಅನುಕೂಲ ಪಡೆದುಕೊಂಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಪೈಕಿ ಗಂಗಾ ಕಲ್ಯಾಣ ವೈಯುಕ್ತಿಕ ನೀರಾವರಿ ಕೊಳವೆಬಾವಿ ಮತ್ತು ತೆರೆದ ಬಾವಿ ಯೋಜನೆಯಲ್ಲಿ ಘಟಕಕ್ಕೆ ೧.೫೦ ಲಕ್ಷ ರೂಗಳಂತೆ ೨೩ ಘಟಕಗಳಿಗೆ ಸಹಾಯ ಧನ ನೀಡಿದ್ದಾರೆ. ಆದರೆ, ಈ ಯೋಜನೆಯಲ್ಲಿ ಸಿದ್ದಿ ಜನಾಂಗದವರು ಯಾರು ಇದುವರೆಗೂ ಫಲಾನುಭವಿಗಳಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರದ ಯೋಜನೆ ಯಾಗಿರುವ ಕಿರು ಸಾಲ ಯೋಜನೆಯಲ್ಲಿ ಒಂದು ಘಟಕಕ್ಕೆ ಒಂದು ಲಕ್ಷ ರೂಗಳಂತೆ ಶೇ. ೫೦ರಷ್ಟು ಸಹಾಯಧನದೊಂದಿಗೆ ೫೦ ಜನ ಯುವಕರು ಫಲಾನುಭವಿಗಳಾಗಿದ್ದಾರೆ. ಹೀಗೆ ೨೦೦೩ರ

ನಂತರ ಅಂದರೆ, ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿದ ನಂತರ ಸಿದ್ದಿ ಜನಾಂಗದವರು ರಾಷ್ಟ್ರೀಯ ಬುಡಕಟ್ಟು ಆಯೋಗ, ರಾಜ್ಯ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿ ನಿಗಮಗಳ ಮೂಲಕ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಪೌಷ್ಟಿಕ ಆಹಾರಗ ವಿತರಣೆ, ಅರಣ್ಯ ಉತ್ಪನ್ನಗಳಿಗೆ ಲ್ಯಾಂಪ್ಸ್ ಸಂಸ್ಥೆಗಳ ಮೂಲಕ ಮಾರುಕಟ್ಟೆ, ಇವರು ಹಿಂದಿನಿಂದಲೂ ಉಳುಮೆ ಮಾಡಿಕೊಂಡು ಬಂದಿರುವ ಅರಣ್ಯ ಭೂಮಿಯನ್ನು ಸಕ್ರಮಾತಿ ಮಾಡಿಕೊಟ್ಟು, ಅವರಿಗೆ ಹಕ್ಕು ಪತ್ರ ನೀಡಿ ದಾಖಲಾತಿಗಳನ್ನು ಮಾಡಿಕೊಡಲಾಗುತ್ತಿದೆ. ಹಾಗೆಯೆ, ಭೂರಹಿತರಾಗಿರುವ ಬುಡಕಟ್ಟು ಜನರು ಎಲ್ಲಾದರೂ ಖಾಲಿ ಉಳಿದಿರುವ ಸರ್ಕಾರಿ ಜಮೀನನ್ನು ಗುರುತಿಸಿಕೊಂಡು ಮಂಜೂರು ಮಾಡಲು ಅರ್ಜಿ ಹಾಕಿದರೆ ಆಭೂಮಿಯನ್ನು ಅಂತಹ ಫಲಾನುಭವಿಗಳಿಗೆ ಹಕ್ಕು ಪತ್ರ ಕೊಡಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ, ೨೦೦೬ರ ಪರಿಶಿಷ್ಟ ಬುಡಕಟ್ಟುಗಳ ಮತ್ತು ಸಾಂಪ್ರದಾಯಿಕ ಅರಣ್ಯವಾಸಿಗಳ ಭೂಮಿ ಮತ್ತು ಆಸ್ತಿ ಹಕ್ಕಿನ ಕಾಯಿದೆಯು ಅನುಕೂಲ ಮಾಡಿಕೊಡುತ್ತಿದೆ.

ಕೊನೆಟಿಪ್ಪಣಿಗಳು

೧. ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೪, ಪುಟ ೨೫೫.

೨. ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ ವರದಿ–೨೦೦೫.

೩. ಅಂತರ್ಜಾಲ ಮಾಹಿತಿ: ಬುಡಕಟ್ಟು ಮಂತ್ರಾಲಯ, ೨೦೦೪, http://tribal.nic.in/WriteReadData/CMS/Documents/201212030510337890625File785.pdf

೪. ಪ್ರಥಮ ಪಂಚವಾರ್ಷಿಕ ಯೋಜನೆ(೧೯೫೧–೫೬), ಭಾರತದ ಯೋಜನಾ ಆಯೋಗ ಪ್ರಕಟಿಸಿರುವ ವರದಿ, ನವದೆಹಲಿ, ಪುಟ ೬೩೬–೬೪೦.

೫. ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ಕ್ರಿಯಾಯೋಜನೆ–೨೦೧೨–೧೩

ಅಧ್ಯಾಯ ನಾಲ್ಕು

ಅಧ್ಯಯನ ಕ್ಷೇತ್ರ ಪರಿಚಯ

೪.೧. ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಪರಿಚಯ

೪.೨. ನೈಸರ್ಗಿಕ ಸಂಪನ್ಮೂಲಗಳು

೪.೩. ಜನಸಂಖ್ಯೆ ಮತ್ತು ಲಿಂಗಾನುಪಾತ

೪.೪. ಮಾನವ ಅಭಿವೃದ್ಧಿ ಸೂಚ್ಯಾಂಕ

೪.೫. ಶೈಕ್ಷಣಿಕ ಸಂಸ್ಥೆಗಳು, ವಿದ್ಯಾರ್ಥಿಗಳ ದಾಖಲಾತಿ ಮತ್ತು ಸಾಕ್ಷರತೆ

೪.೬. ಆರೋಗ್ಯ ಸೌಲಭ್ಯಗಳು

೪.೭. ವಿವಿಧ ಕ್ಷೇತ್ರಗಳಲ್ಲಿ ದುಡಿಮೆಯಲ್ಲಿ ತೊಡಗಿರುವ ಕೆಲಸಗಾರರು

೪.೮. ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳು

೪.೯. ವ್ಯವಸಾಯ, ನೀರಾವರಿ ಮತ್ತು ಮೀನುಗಾರಿಕೆ

೪.೧೦. ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು

೪.೧೧. ಕರಕುಶಲ ಕಲೆಗಳು

೪.೧೨. ಸಿದ್ದಿ ಪರಿಶಿಷ್ಟ ಬುಡಕಟ್ಟು ಜನಾಂಗದ ಇತಿಹಾಸ ಮತ್ತು ಜನಸಂಖ್ಯೆ

ಅಧ್ಯಾಯ ನಾಲ್ಕು

ಅಧ್ಯಯನ ಕ್ಷೇತ್ರ ಪರಿಚಯ

೪.೧. ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಪರಿಚಯ

ಉತ್ತರ ಕನ್ನಡ ಜಿಲ್ಲೆಯು ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದು ಜಿಲ್ಲೆ. ಕರ್ನಾಟಕದ ರಾಜದಾನಿ ಬೆಂಗಳೂರಿನಿಂದ ೫೨೧ ಕಿ.ಮೀ ದೂರವಿರುವ, ಈ ಜಿಲ್ಲೆಯು ೧೦,೨೯೧.೦೦ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು, ರಾಜ್ಯದಲ್ಲಿ ಐದನೇ ಸ್ಥಾನವನ್ನು ಪಡೆದಿದೆ. ಕಾರವಾರ ಜಿಲ್ಲಾ ಕೇಂದ್ರವಾಗಿದ್ದು ೧೧ ಒಳಗೊಂಡಿದೆ. ೧,೯೧೦.೪೪ ಚ.ಕಿ.ಮೀ ವಿಸ್ತೀರ್ಣ ಹೊಂದಿರುವ ಸೂಪಾ ತಾಲೂಕು ಎಲ್ಲಕಿಂತ ದೊಡ್ಡದು ಮತ್ತು ೩೫೫.೫೦ ಚ.ಕಿ.ಮೀ ವಿಸ್ತೀರ್ಣ ಹೊಂದಿರುವ ಭಟ್ಕಳ ತಾಲೂಕು ಎಲ್ಲಕಿಂತ ಚಿಕ್ಕದಾದ ತಾಲೂಕಾಗಿದೆ. ಈ ಜಿಲ್ಲೆಯ ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದೆ, ಪೂರ್ವಕ್ಕೆ ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ ಶ್ರೇಣಿಗಳಿವೆ. ಈ ಜಿಲ್ಲೆಯು ೧೩° ೫೫ ಮತ್ತು ೧೫° ೩೧ ಉತ್ತರ ಅಕ್ಷಾಂಶ ಮತ್ತು ೭೪° ೯ ಮತ್ತು ೭೦° ೧೦ ಪೂರ್ವ ರೇಖಾಂಶಗಳ ನಡುವಿನ ಭೂಭಾಗವಾಗಿದೆ. ಭೌಗೋಳಿಕವಾಗಿ ಈ ಜಿಲ್ಲೆಯ ಭೂ ಭಾಗವನ್ನು ಕರಾವಳಿ ಮತ್ತು ಘಟ್ಟ ಪ್ರದೇಶಗಳೆಂದು ಎರಡು ಭಾಗಗಳಾಗಿ ವರ್ಗೀಕರಿಸಲಾಗಿದೆ. ಸಹ್ಯಾದ್ರಿ ಪರ್ವತ ಶ್ರೇಣಿಯು ಉತ್ತರ ಕನ್ನಡ ಜಿಲ್ಲೆಯ ಮಧ್ಯದಲ್ಲಿ ಹಾದುಹೋಗಿದೆ. ಜಿಲ್ಲೆಯ ಉತ್ತರಕ್ಕೆ ಗೋವಾ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕು, ಪೂರ್ವದಿಕ್ಕಿಗೆ ಧಾರವಾಡ ಜಿಲ್ಲೆ, ದಕ್ಷಿಣ ಭಾಗದಲ್ಲಿ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಸುತ್ತು ವರಿಯಲ್ಪಟ್ಟಿದೆ. ಪಶ್ಚಿಮ ಭಾಗವು ಅರಬ್ಬಿ ಸಮುದ್ರದಿಂದ ಆವರಿಸಲ್ಪಟ್ಟಿದ್ದು ೧೨೨ ಕಿ.ಮೀ. ಉದ್ದ ಕರಾವಳಿ ಪ್ರದೇಶ, ವಾಯವ್ಯದಲ್ಲಿ ಗೋವಾ ರಾಜ್ಯಗಳಿಂದ ಸುತ್ತುವರಿಯಲ್ಪಟ್ಟಿರುವ ಭೌಗೋಳಿಕ ಚಕ್ಕುಬಂಧಿಯನ್ನು ಉತ್ತರ ಕನ್ನಡ ಜಿಲ್ಲೆ ಹೊಂದಿದೆ.

ಪೋರ್ಚುಗೀಸರು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶವನ್ನು ಕೆನರಾ ಅಂದರೆ ಕರ್ನಾಟಕವೆಂಬ ಅರ್ಥದಲ್ಲಿ ಬಳಸಿದ್ದಾರೆ ಎಂದು ಕಾರವಾರ ಜಿಲ್ಲಾ ಧರ್ಮಪ್ರಾಂತ್ಯ ಅಭಿವೃದ್ಧಿ

ಭೂಪಟ: ಕರ್ನಾಟಕ ರಾಜ್ಯ

ಉತ್ತರ ಕನ್ನಡ ಜಿಲ್ಲೆಯ

ಸಿದ್ದಿ ಬುಡಕಟ್ಟು ಜನಾಂಗದ ನೆಲೆಗಳು



ಮಂಡಳಿ(ಕೆಡಿಡಿಸಿ) ಎಂಬ ಸ್ವಯಂ ಸೇವಾ ಸಂಸ್ಥೆ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಈ ಜಿಲ್ಲೆಗೆ ೧೯೭೭ನೇ ಜನವರಿ ೩೧ರಂದು ಉತ್ತರ ಕನ್ನಡ ಎಂದು ನಾಮಕರಣ ಮಾಡ ಲಾಯಿತು. ಇದು ೧೨೮ ಕಿ.ಮೀ. ಉದ್ದದ ಕಡಲ ತೀರವನ್ನು ಹೊಂದಿರುವ ವಿಶಿಷ್ಟ ನಾಡಾಗಿದೆ. ಒಟ್ಟಾರೆ ಜಿಲ್ಲೆಯು ೧೦೨೯೧ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ.

ಆಡಳಿತದ ಧೃಷ್ಠಿಯಿಂದ ಜಿಲ್ಲೆಯನ್ನು ನಾಲ್ಕು ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಭಟ್ಕಳ ಉಪ ವಿಭಾಗಕ್ಕೆ ಭಟ್ಕಳ, ಹೊನ್ನಾವರ ತಾಲೂಕುಗಳು, ಕಾರವಾರ ಉಪವಿಭಾಗಕ್ಕೆ ಹಳಿಯಾಳ ಕಾರವಾರ, ಸೂಪಾ ತಾಲೂಕುಗಳು, ಕುಮಟಾ ಉಪವಿಭಾಗಕ್ಕೆ ಕುಮಟಾ, ಅಂಕೋಲ ತಾಲೂಕುಗಳು ಮತ್ತು ಶಿರಸಿ ಉಪವಿಭಾಗಕ್ಕೆ ಶಿರಸಿ, ಯಲ್ಲಾಪುರ, ಸಿದ್ದಾಪುರ, ಮುಡಗೋಡು ತಾಲೂಕುಗಳು ಸೇರಿವೆ. ಇವುಗಳಲ್ಲಿ ಕಾರವಾರ, ಅಂಕೋಲ, ಕುಮಟ, ಹೊನ್ನಾವರ ಹಾಗೂ ಭಟ್ಕಳ ತಾಲೂಕಗಳು ಕರಾವಳಿ ಪ್ರದೇಶದಲ್ಲಿವೆ, ಉಳಿದ ಸಿದ್ದಾಪುರ, ಶಿರಸಿ, ಮುಂಡಗೋಡು, ಯಲ್ಲಾಪುರ, ಜೋಯಿಡಾ ಹಾಗೂ ಹಳಿಯಾಳ ತಾಲೂಕುಗಳು ಘಟ್ಟ ಪ್ರದೇಶದಲ್ಲಿವೆ. ಕರಾವಳಿ ಪ್ರದೇಶದ ತಾಲೂಕುಗಳು ಘಟ್ಟಪ್ರದೇಶದ ತಾಲೂಕಗಳಿಗಿಂತ ಹೆಚ್ಚು ಜನಸಾಂದ್ರತೆಯಿಂದ ಕೂಡಿವೆ. ಈ ಜಿಲ್ಲೆಯಲ್ಲಿ ೩೫ ಹೋಬಳಿಗಳು, ೨೦೮ ಗ್ರಾಮ ಪಂಚಾಯತಿಗಳು, ೩ ನಗರ ಸಭೆಗಳು, ೨ ಪುರಸಭೆಗಳು, ೬ ಪಟ್ಟಣ ಪಂಚಾಯತಿಗಳು ಇದ್ದು, ಒಟ್ಟು ೧೨೮೯ ಗ್ರಾಮಗಳಿದ್ದು ಅವುಗಳಲ್ಲಿ ೧೨೪೬ ಜನ ವಸತಿ ಇರುವ ಮತ್ತು ೪೩ ಜನವಸತಿಯಿಲ್ಲದ ಗ್ರಾಮಗಳಿವೆ.

೪.೨. ನೈಸರ್ಗಿಕ ಸಂಪನ್ಮೂಲಗಳು

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮಾಹಿತಿಗಳ ಪ್ರಕಾರ ೧೦೨೪೬೭೯ ಎಕರೆ ಭೌಗೋಳಿಕ ಒಟ್ಟು ವಿಸ್ತೀರ್ಣದಲ್ಲಿ ೮೧೩೫೯ ಎಕರೆ ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶವಿದೆ. ಇದರಲ್ಲಿ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಲ್ಲಿ ೩೪೪೮೫ ಎಕರೆಯನ್ನು ವ್ಯವಸಾಯೇತರ ಉಪಯೋಗಗಳಿಗೆ ಬಳಕೆಯಾಗುತ್ತಿದ್ದರೆ, ೧೬೨೩೪ ಎಕರೆ ಬಂಜರು ಭೂಮಿ ಸೇರಿ ಒಟ್ಟು ೫೦೭೯ ಎಕರೆ ವ್ಯವಸಾಯೇತರ ಭೂಮಿಯಾಗಿದೆ ಹಾಗೂ ೧೩೦೬೩೮೮ ಸಾಗುವಳಿ ಮಾಡದಿರುವ ಇತರ ಭೂಮಿಯಿದೆ, ಇದರಲ್ಲಿ ೬೪೫೦ ಎಕರೆ ಸಾಗುವಳಿಗೆ ಯೋಗ್ಯವಾದ ಭೂಮಿಯಾಗಿದೆ. ೧೬೬೨೫ ಎಕರೆ ಗೋಮಾಳ ಮತ್ತು ೪೮೦೬ ಎಕರೆ ವೃಕ್ಷ ಮತ್ತು ತೋಪುಗಳಿವೆ ಹಾಗೂ ೧೨೫೬೬೪ ಎಕರೆ ಬಿತ್ತನೆಯಾದ ಪ್ರದೇಶದಲ್ಲಿ ನಿವ್ವಳ ೧೧೯೪೬ ಎಕರೆಯಲ್ಲಿ ಬಿತ್ತನೆ ಮಾಡಲಾಗುತ್ತದೆ ಮತ್ತು ೧೨೭೧೮ ಎಕರೆ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೃಷಿಯು ಪ್ರಮುಖ ಪಾತ್ರವಹಿಸುತ್ತದೆ. ಇಡೀ ಜಿಲ್ಲೆಯಲ್ಲಿ ಕಾಡನ್ನು ಕಡಿದು ಕೃಷಿಗೆ ಬಳಸಲಾಗಿದೆ ಬಳಸಲಾಗುತ್ತಿದೆ. ವರ್ಷಕ್ಕೆ ಒಂದೇ ಬೆಳೆ ಬೆಳೆಯುವುದು ಇಲ್ಲಿಯ ಕೃಷಿಯ ಮತ್ತೊಂದು ಲಕ್ಷಣ, ಏಕೆಂದರೆ ಕೃಷಿ ಚಟುವಟಿಕೆಗಳು ಮಳೆಯನ್ನೇ ಆಶ್ರಯಿಸಿರುವುದು. ಭತ್ತ ಜಿಲ್ಲೆಯ ಪ್ರಮುಖ ಬೆಳೆಯಾಗಿದ್ದು, ಅಡಿಕೆ, ಕಾಳು ಮೆಣಸು, ತಾಳೆ,

ಮೆಕ್ಕೆ ಜೋಳ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಹಲವಾರು ರಕ್ಷಿತಾರಣ್ಯ ಪ್ರದೇಶಗಳಿದ್ದು ಹಲವಾರು ಜಾತಿಯ ಬೆಲೆ ಬಾಳುವ ಮರಗಳು ಮತ್ತು ಸಸ್ಯ ಸಂಪತ್ತನ್ನೂ ಹೊಂದಿದೆ.

ಭೌಗೋಳಿಕವಾಗಿ ಶಿರಸಿ, ಸುಪಾ, ಮತ್ತು ಯಲ್ಲಾಪುರ ತಾಲೂಕುಗಳು ಮಲೆನಾಡು ಪ್ರದೇಶದಲ್ಲಿದ್ದು, ಅಂಕೋಲ, ಭಟ್ಕಳ, ಹೊನ್ನಾವರಾ, ಕಾರವಾರ ಮತ್ತು ಕುಮಟಾ ತಾಲೂಕುಗಳು ಕರಾವಳಿ ಪ್ರದೇಶದಲ್ಲಿ ಹಾಗೂ ಹಳಿಯಾಳ ಮತ್ತು ಮುಂಡಗೋಡು ತಾಲೂಕುಗಳು ಅರೆ ಮಲೆನಾಡು ಪ್ರದೇಶಗಳಾಗಿವೆ. ಜಿಲ್ಲೆಯ ಹವಾಮಾನವು ಸಮಶೀತೋಷ್ಣವಾಗಿದೆ. ಸಮುದ್ರತೀರದಲ್ಲಿ ಆದ್ರತೆ ಮತ್ತು ಉಷ್ಣತೆ ಇರುತ್ತಿದ್ದು, ಬೇಸಿಗೆಯಲ್ಲಿ ಅತೀ ಹೆಚ್ಚು ೩೩೦ ಮತ್ತು ಚಳಿಗಾಲದಲ್ಲಿ ೨೦೦ ಸೆಂ. ಉಷ್ಣತೆ ಇರುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ವಾರ್ಷಿಕವಾಗಿ ಬೀಳುವ ಮಳೆಯ ಪ್ರಮಾಣ ಸರಾಸರಿ ಸುಮಾರು ೨೫೦ ಸೆಂ.ಮೀ. ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳಿನವರೆಗೆ ಮಳೆಗಾಲವಿದ್ದು ವರ್ಷದ ಉಳಿದ ದಿನಗಳಲ್ಲಿ ಒಣಹವೆ ಇರುತ್ತದೆ. ವಾಯವ್ಯ ಮಾರುತಗಳು ಜಿಲ್ಲೆಗೆ ಮಳೆಯ ಮೂಲಗಳಾಗಿವೆ. ಬಹುತೇಕ ಉತ್ತರ ಕನ್ನಡ ಜಿಲ್ಲೆಯು ಘಟ್ಟಪ್ರದೇಶ, ಕಣಿವೆ ಮತ್ತು ದಟ್ಟವಾದ ಅರಣ್ಯದಿಂದ ಕೂಡಿದೆ. ಪರ್ವತ ಶ್ರೇಣಿಯ ಮಧ್ಯದಲ್ಲಿರುವ ಅರ್ದಂಬರ್ಧ ಬೋಳಾಗಿರುವ ಪ್ರದೇಶವು ಜಿಲ್ಲೆಯನ್ನು ೩೦೦೦ ಚದರ ಮೈಲಿಗಳಷ್ಟು ವಿಸ್ತಾರವಾಗಿರುವ ಮೇಲಿನ ಬಾಲಘಾಟ್, ಮತ್ತು ೧೩೦೦ ಚದರ ಮೈಲಿಗಳಷ್ಟು ವಿಸ್ತಾರವಿರುವ ಕೆಳಗಿನ ಪಯನಘಾಟ್ ಪ್ರದೇಶವೆಂದು ವಿಂಗಡಿಸಿದೆ. ಜಿಲ್ಲೆಯು ಉದ್ದನೆಯ ಕರಾವಳಿ ಪ್ರದೇಶದಿಂದಲೂ ಆವರಿಸಿದೆ. ಆಳವಾದ ಮತ್ತು ಉದ್ದನೆಯ ಸಮುದ್ರತೀರ ಕಡಲಕೊಲ್ಲಿ ಇದ್ದಾಗ್ಯೂ ಕರಾವಳಿ ಪ್ರದೇಶವು, ಕಲ್ಲು ಬಂಡೆಗಳಿಂದ ಕೂಡಿದ ನಡುಗಡ್ಡೆಗಳು ಮತ್ತು ಶಿಲಾಕೃತಿಗಳಂತಹ ಭೂಶಿರ, ವಿಶಾಲವಾದ ಮರಳು ರಾಶಿಗಳಿಂದಾ ವೃತವಾದ ಸಮುದ್ರ ತೀರದ ಬೀಚುಗಳೂ ಕಂಗೊಳಿಸುತ್ತವೆ. ಕೆಳಮಟ್ಟದ ಕಿರಿದಾದ ನದಿದ್ವಾರಗಳು, ಕಡಿದಾದ ಭೂಶಿರ ಮತ್ತು ಎತ್ತರದ ಭೂಪ್ರದೇಶಗಳು ಜಿಲ್ಲೆಗೆ ತೊಡಿಸಿದ ಆಭರಣಗಳಂತಿವೆ. ಬದಲಾಗುತ್ತಿರುವ ಕರಾವಳಿ ತೀರದಲ್ಲಿ ಗಾಳಿ ಬೀಸುವ ಕಣಿವೆಗಳು ಮತ್ತು ಸಸ್ಯರಾಶಿಗಳಿಂದ ಕೂಡಿದ ಪರ್ವತ ಪ್ರದೇಶ ಈ ಜಿಲ್ಲೆಯ ಭೌಗೋಳಿಕ ಲಕ್ಷಣಗಳಾಗಿವೆ.

ಕಾಳಿ, ವರದಾ, ಗಂಗಾವಳಿ, ಶರಾವತಿ, ಬೇಡ್ತಿ, ಅಘನಾಶಿನಿ ಇವು ಮುಖ್ಯ ನದಿಗಳಾಗಿವೆ. ಕಾರವಾರದ ನಂತರದಲ್ಲಿ ಭಟ್ಕಳ, ಕದ್ರಿ, ಅಂಕೋಲ, ಹೊನ್ನಾವರ ಇವು ಇತರ ಬಂದರುಗಳಾಗಿವೆ. ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆ ಜೀವನಾಡಿ ಉದ್ಯೋಗವಾಗಿದೆ. ಸೀ ಬರ್ಡ್ ನೌಕಾ ನೆಲೆಯು ಜಿಲ್ಲೆಗೆ ರಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಮನ್ನಣೆ ಗಳಿಸಿಕೊಟ್ಟಿದೆ. ಕೃಷಿ ಕ್ಷೇತ್ರದಲ್ಲಿ ಏಕದಳ ದಾನ್ಯ ವಾದ ಭತ್ತ ಪ್ರಮುಖ ಬೆಳೆಯಾಗಿದೆ.ರಾಗಿ, ಜೋಳ, ಮುಸುಕಿನ ಜೋಳ ಗಾಗೂ ದ್ವಿದಳ ದಾನುಗಳಾದ ಕಡಲೆ, ತೊಗರಿ, ಹುರುಳಿ, ಹೆಸರು, ಅವರೆ ಮತ್ತು ಅಲಸಂದೆಯನ್ನು ಕಡಿಮೆ ಪ್ರದೇಶದಲ್ಲಿ ಬೆಳೆಯುತ್ತಾರೆ. ತೆಂಗು, ಅಡಿಕೆ, ಯಾಲಕ್ಕಿ, ಗೋಡಂಬಿ, ಕಬ್ಬು ಮತ್ತು ಅನಾನಸ್

ಮುಂತಾದವು ವಾಣಿಜ್ಯ ಬೆಳೆಗಳಾಗಿವೆ. ಜಾನುವಾರು ಗಣತಿಯ ಪ್ರಕಾರ ದನಕರುಗಳು, ಎಮ್ಮೆಗಳು, ಕುರಿಗಳು, ಆಡುಗಳು, ಹಂದಿಗಳು, ನಾಯಿಗಳು ಹಾಗೂ ಇತರೆ ಪ್ರಾಣಿಗಳನ್ನೂ ಒಳಗೊಂಡಂತೆ ಒಟ್ಟು ೫,೯೪,೯೨೯ ಜನುವಾರುಗಳಿವೆ ಮತ್ತು ೩,೬೧,೩೫೧ ಕೋಳಿಗಳಿವೆ.

ಕಬ್ಬಿಣದ ಅದಿರು ಹಾಗೂ ಮ್ಯಾಂಗನೀಸ್ ಮುಖ್ಯ ಖನಿಜಗಳಾಗಿವೆ. ಕದ್ರಾ, ಸೂಫಾ, ಕೊಡಸಳ್ಳಿ, ನಾಗಝರಿ ಮತ್ತು ಕೈಗಾ ಇವು ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳಗಿವೆ. ಹೆಂಚಿನ ತಯಾರಿಕೆ, ನೇಯ್ಗೆ, ನಾರಿನ ತಯಾರಿಕೆ, ಜೇನು ಸಾಕಣೆ, ಕಾಗದ ಹಾಗೂ ಪ್ಲೈವುಡ್ ತಯಾರಿಕೆ ಜಿಲ್ಲೆಯ ಮುಖ್ಯ ಕೈಗಾರಿಕರಗಳಾಗಿವೆ. ರಬ್ಬರ್, ತಂಬಾಕು ಹಾಗೂ ರೇಷ್ಮೇ ಉದ್ಯಮಗಳೂ ಇಲ್ಲಿವೆ. ಇವುಗಳಲ್ಲದೇ ಸಕ್ಕರೆ ಕಾರ್ಖಾನೆಗಳು ಮತ್ತು ವೆಸ್ಟ್ ಕೋಅಟ್ ಪೇಪರ್ ಮಿಲ್ಲ್ ಇವುಗಳು ಸಾವಿರಾತರು ಜನರಿಗೆ ಉದ್ಯೋಗ ನೀಡಿವೆ. ಅಂತೆಯೇ ರಾಷ್ಟ್ರದ ಪ್ರಮುಖ ಅಣು ವಿಧ್ಯುತ್ ಅಥಾವರ ವಾರುವ ಕೈಗಾ ಅಣು ವಿಧ್ಯುತ್ ಸ್ಥಾವರವೂ ಜಿಲ್ಲೆಯ ಜಿಲ್ಲೆಯ ಒಂದು ಹೆಮ್ಮೆಯ ಘಟಕವಾಗಿದೆ.

೪.೩. ಜನಸಂಖ್ಯೆ ಮತ್ತು ಲಿಂಗಾನುಪಾತ

ಉತ್ತರ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿಯಂತೆ ೧೩೫೩೬೪೪ ಇದ್ದು ಇದರಲ್ಲಿ ೬೮೬೮೭೬ ಪುರುಷರು ಮತ್ತು ೬೬೬೮೭೬ ಮಹಿಳೆಯರಿದ್ದಾರೆ. ಇದರಂತೆ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಹಳಿಯಾಳ ತಾಲೂಕಿನ ಒಟ್ಟು ಜನಸಂಖ್ಯೆ ೧೦೫೮೫೧ ಇದ್ದು ಇದರಲ್ಲಿ ೫೩೪೯೫ ಪುರುಷರು ಮತ್ತು ೫೧೯೫೬ ಮಹಿಳೆಯರಿದ್ದಾರೆ. ಹಾಗೆಯೇ ಯಲ್ಲಾಪುರ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೭೩೪೯೭ ಇದ್ದು, ಲಿಂಗವಾರು ಪುರುಷರು ೩೭೬೨೬ ಹಾಗೂ ೩೫೮೭೧ ಮಹಿಳೆಯರಿದ್ದಾರೆ. ಹಾಗಾಯೇ ಮುಂಡಗೋಡು ತಾಲೂಕಿನಲ್ಲಿ ೯೦೭೩೮ ಒಟ್ಟು ಜನಸಂಖ್ಯೆ ಇದ್ದು ಇದರಲ್ಲಿ ೪೮೯೭೩ ಪುರುಷರು ಮತ್ತು ೪೧೭೬೫ ಮಹಿಳೆಯರಿದ್ದಾರೆ. ಅಂಕೋಲ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೧೦೧೫೪೯ ಇದ್ದು, ಇದರಲ್ಲಿ ೫೧೩೪೮ ಪುರುಷರು, ೫೦೧೫೧ ಮಹಿಳೆಯರಿದ್ದಾರೆ. ೨೦೦೧ನೇ ಜನಗಣತಿಯ ಪ್ರಕಾರ ಕರ್ನಾಟಕದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೬೫ ಇದ್ದು, ಉತ್ತರ ಕನ್ನಡ ಜಿಲ್ಲೆಯ ಲಿಂಗಾನುಪಾತ ೯೭೧ರಷ್ಟಿದೆ. ಅಂತೆಯೆ ನನ್ನ ಅಧ್ಯಯನ ಕ್ಷೇತ್ರದ ತಾಲೂಕು ಗಳಾದ ಹಳಿಯಾಳದಲ್ಲಿ ೯೬೪, ಯಲ್ಲಾಪುರದಲ್ಲಿ ೯೫೩ ಮತ್ತು ಮುಂಡಗೋಡಿನಲ್ಲಿ ಲಿಂಗಾನುಪಾತವಿದೆ. ಮತ್ತು ಅಂಕೋಲ ತಾಲೂಕಿನಲ್ಲಿ ೯೭೬ ಇದೆ. ಲಿಂಗಾನುಪಾತವು ೨೦೧೧ನೇ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ೯೬೮, ಉತ್ತರ ಕನ್ನಡ ಜಿಲ್ಲೆಯ ಲಿಂಗಾನುಪಾತ ೯೭೫ ಇದೆ. ೨೦೧೧ನೇ ಜನಗಣತಿಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ ೧,೪೩,೬೮೪೮, ಇದರಲ್ಲಿ ೭೨೭೪೨೪ ಪುರುಷರು, ೭೦೯೪೨೩ ಮಹಿಳೆಯರಿದ್ದಾರೆ. ಹಾಗೆಯೇ ೧,೦೧೮೨೧೬ ಜನರು ಗ್ರಾಮೀಣ ಭಾಗದಲ್ಲಿದ್ದಾರೆ ಇವರಲ್ಲಿ ೫೧೫೮೬೭ ಗಂಡಸರು, ೫೦೨೩೪೯ ಮಹಿಳೆಯರಿದ್ದಾರೆ. ನಗರ ಪ್ರದೇಶದಲ್ಲಿ ಒಟ್ಟು ೪೧೮೬೩೧ ಜನಸಂಖ್ಯೆ ಇದೆ ಇದರಲ್ಲಿ ೨೧೧೫೫೭ ಪುರುಷರು, ೨೦೭೦೭೪ ಮಹಿಳೆಯರು ಇದ್ದಾರೆ. ಈ

ಜಿಲ್ಲೆಯಲ್ಲಿನ ಜನಸಣಖ್ಯೆ ಕರ್ನಾಟಕ ರಾಜ್ಯದ ಜನಸಂಖ್ಯೆಯ ಒಟ್ಟು ೨.೩೫ರಷ್ಟಿದೆ. ಲಿಂಗಾನುಪಾತ ೯೭೫ ರಷ್ಟಿದೆ. ಈ ಜಿಲ್ಲಡಯ ಸ್ತ್ರೀ ಪುಷರ ಪ್ರಮಾಣ ಅಥವಾ ಲಿಂಗಾನು ಪಾತವನ್ನು ರಾಷ್ಟ್ರ, ರಾಜ್ಯಗಳ ಲಿಂಗಾಪಾತಕ್ಕೆ ಹೋಲಿಸಿದಾಗ ಜಿಲ್ಲೆಯಲ್ಲಿ ಲಿಂಗಾನುಪಾತವು ಹೆಚ್ಚಾಗಿದೆ. ಜಿಲ್ಲೆಯಲ್ಲಿ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ೧೯೯೧ರಿಂದ ೨೦೦೧ರ ಅವದಿಯಲ್ಲಿ ಶೇ. ೧೦.೯ ಇತ್ತು, ಅದು ೨೦೦೧ರಿಂದ ೨೦೧೧ರ ಅವಧಿಯಲ್ಲಿ ಶೇ. ೬.೧೭ಕ್ಕೆ ಇಳಿದಿದೆ.

೪.೪. ಮಾನವ ಅಭಿವೃದ್ಧಿ ಸೂಚ್ಯಾಂಕ

ಉತ್ತರ ಕನ್ನಡ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಾಂಕಗಳು ಮತ್ತು ಅವುಗಳ ಆಯಾಮವಾರು ಸೂಚ್ಯಂಕಗಳ ಮೌಲ್ಯಗಳ ಮತ್ತು ಸ್ಥಾನ ೨೦೧೧ನೇ ಜನಗಣತಿಯ ಪ್ರಕಾರ ಈ ಕೆಳಗಿನಂತಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೀವನಮಟ್ಟ ಸೂಚ್ಯಾಂಕಗಳ ಮೌಲ್ಯ ಶೇ. ೦.೩೭೨ ಇದ್ದರೆ, ಅದರ ಸ್ಥಾನ ೧೪ರಷ್ಟಿದೆ. ಆರೋಗ್ಯ ಸೂಚ್ಯಾಂಕದ ಮೌಲ್ಯ ಶೇ. ೦.೭೭ರಷ್ಟಿದ್ದರೆ, ಆರೋಗ್ಯ ಸೂಚ್ಯಾಂಕ ಸ್ಥಾನ ೬ ಇದೆ. ಹಾಗೆಯೇ ಶೈಕ್ಷಣಿಕ ಸೂಚ್ಯಾಂಕ ೦.೬೨೪ ಇದ್ದು, ಇದರ ಸ್ಥಾನ ೧೨ ಇದೆ. ಉತ್ತರ ಕನ್ನಡ ಜಿಲ್ಲೆಯ ಒಟ್ಟು ಮಾನವ ಅಭಿವೃದ್ಧಿ ಸೂಚ್ಯಾಂಕವು ೦.೫೬೫ ಇದ್ದು, ಇದರ ಸ್ಥಾನ ರಾಜ್ಯದಲ್ಲಿ ೧೦ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿ ಕೊಂಡಿರುವ ತಾಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಾಂಕಗಳು ಮತ್ತು ಅವುಗಳ ಆಯಾಮವಾರು ಸೂಚ್ಯಾಂಕಗಳ ಮೌಲ್ಯ ಮತ್ತು ಸ್ಥಾನ ೨೦೧೧ರ ಪ್ರಕಾರ ಈ ಕೆಳಗಿನಂತಿವೆ.

ಹಳಿಯಾಳ ತಾಲೂಕಿನಲ್ಲಿ ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೩೦೩ರಷ್ಟಿದ್ದು, ಇದು ೮೨ನೇ ಸ್ಥಾನದಲ್ಲಿದೆ. ಈ ತಾಲೂಕಿನ ಆರೋಗ್ಯ ಸೂಚ್ಯಂಕ ಮೌಲ್ಯ ೦.೭೮೩ ಇದ್ದು, ೫೧ನೇ ಸ್ಥಾನದಲ್ಲಿದೆ. ಶೈಕ್ಷಣಿಕ ಸೂಚ್ಯಂಕದ ಮೌಲ್ಯ ೦.೫೨೧ ಇದ್ದು, ೬೩ನೇ ಸ್ಥಾನದಲ್ಲಿದೆ. ಒಟ್ಟು ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ೦.೪೯೮ ಇದ್ದು, ೬೨ನೇ ಸ್ಥಾನದಲ್ಲಿ. ಹಾಗೆಯೇ ಯಲ್ಲಾಪುರ ತಾಲೂಕಿನಲ್ಲಿ ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೩೪೬ ಇದ್ದು, ಇದರ ಸ್ಥಾನ ೬೧ರಲ್ಲಿದೆ. ಈ ತಾಲೂಕಿನ ಆರೋಗ್ಯ ಸೂಚ್ಯಂಕ ಮೌಲ್ಯ ೦.೭೯೮ರಷ್ಟಿದ್ದು, ಇದರ ಸ್ಥಾನ ೪೭ ಇದೆ. ಹಾಗೆಯೇ ಶೈಕ್ಷಣಿಕ ಸೂಚ್ಯಂಕ ಮೌಲ್ಯ ೦.೪೯೭ ಇದ್ದು, ಇದರ ಸ್ಥಾನ ೮೮ ಇದೆ. ಒಟ್ಟಾರೆ ಯಲ್ಲಾಪುರ ತಾಲೂಕಿನ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ೦.೫೧೬ ಇದ್ದು ಇದರ ಸ್ಥಾನ ೫೪ ಇದೆ.

ಅಂಕೋಲ ತಾಲೂಕಿನಲ್ಲಿ ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೨೭೧ ಇದ್ದು, ಇದರ ಸ್ಥಾನ ೯೮ ಇದೆ. ಆರೋಗ್ಯ ಸೂಚ್ಯಂಕ ಮೌಲ್ಯ ೦.೭೭೧ ಇದ್ದು, ೬೦ನೇ ಸ್ಥಾನದಲ್ಲಿದೆ. ಈ ತಾಲೂಕಿನ ಶೈಕ್ಷಣಿಕ ಸೂಚ್ಯಂಕ ಮೌಲ್ಯ ೦.೪೧೬ ಇದ್ದು, ಇದರ ಸ್ಥಾನ ೧೪೧ರಲ್ಲಿದೆ. ಹಾಗೆಯೇ ಈ ತಾಲೂಕಿನ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ೦.೪೪೩ ಇದ್ದು, ಇದರ ಸ್ಥಾನ ೯೬ ಇದೆ. ಅದರಂತೆ ನನ್ನ ಅಧ್ಯಯನ ಕ್ಷೇತ್ರದ ಇನ್ನೊಂದು ತಾಲೂಕು ಮುಂಡಗೋಡಿನ ಜೀವನಮಟ್ಟ ಸೂಚ್ಯಂಕ ಮೌಲ್ಯ ೦.೨೭೮ ಇದ್ದು, ೯೪ನೇ ಸ್ಥಾನದಲ್ಲಿದೆ. ಈ ತಾಲೂಕಿನ ಆರೋಗ್ಯ ಸೂಚ್ಯಂಕ ಮೌಲ್ಯ ೦.೬೬೧ ಇದ್ದು, ೯೪ನೇ ಸ್ಥಾನದಲ್ಲಿದೆ. ಅಂತೆಯೇ ಶೈಕ್ಷಣಿಕ ಸೂಚ್ಯಂಕ ಮೌಲ್ಯ ೦.೫೩೭

ಇದ್ದು, ಇದರ ಸ್ಥಾನ ೪೮. ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಈ ತಾಲೂಕಿನಲ್ಲಿ ೦.೪೬೨ ಇದ್ದು, ಸ್ಥಾನ ೮೩ ಇದೆ. ಹೀಗೆ ಪ್ರಸ್ತುತ ಅಧ್ಯಯನ ಕ್ಷೇತ್ರವಾಗಿದ್ದ ಉತ್ತರ ಕನ್ನಡ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕಗಳ ತಾಲೂಕಿನಿಂದ ತಾಲೂಕಿಗೆ ವ್ಯತ್ಯಾಸದಿಂದ ಕೂಡಿರುವುದು ಮೇಲಿನ ವಿವರಣೆಯಿಂದ ತಿಳಿದುಬಂದಿದೆ.

೪.೫. ಶೈಕ್ಷಣಿಕ ಸಂಸ್ಥೆಗಳು, ವಿದ್ಯಾರ್ಥಿಗಳ ದಾಖಲಾತಿ ಮತ್ತು ಸಾಕ್ಷರತೆ

೨೦೧೦ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ೧೧೯೮ ಪ್ರಾಥಮಿಕ ಶಾಲೆಗಳಿದ್ದು ಇವುಗಳಲ್ಲಿ ದಾಖಲಾಗಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೩೨೪೮೯ ಇವರಲ್ಲಿ ೬೮೫೬೩ ಗಂಡುಮಕ್ಕಳು ಹಾಗೂ ೬೩೮೭೬ ಹೆಣ್ಣುಮಕ್ಕಳಿದ್ದಾರೆ. ಇಲ್ಲಿ ಬಾಲಕಿಯರಿಗಿಂತ, ಬಾಲಕರ ದಾಖಲಾತಿ ಸಂಖ್ಯೆ ಹೆಚ್ಚಾಗಿವೆ. ಜಿಲ್ಲೆಯಲ್ಲಿ ಒಟ್ಟು ೩೪೩ ಪ್ರೌಢಶಾಲೆಗಳಲ್ಲಿ ೩೩೪೩೩ ಬಾಲಕರು ಮತ್ತು ೩೧೯೧೬ ಬಾಲಕಿಯರು ಸೇರಿದಂತೆ ಒಟ್ಟು ೬೫೩೪೯ ಮಕ್ಕಳು ದಾಖಲಾಗಿದ್ದಾರೆ. ಹಾಗೆಯೇ ಈ ಜಿಲ್ಲೆಯಲ್ಲಿ ೬ರಿಂದ ೧೪ ವಯಸ್ಸಿನ ಮಕ್ಕಳಲ್ಲಿ, ೧೦೦೦೮೧ ಹುಡುಗರು ಮತ್ತು ೯೩೬೯೫ ಹುಡುಗಿಯರು ಒಟ್ಟು ೧೯೩೭೭೬ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಇವರಲ್ಲಿ ೮೪೩ ಬಾಲಕರು ಮತ್ತು ೭೫೪ ಬಾಲಕಿಯರು ಒಟ್ಟು ೧೫೯೭. ೬ರಿಂದ ೧೪ ವರ್ಷದೊಳಗಿನ ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶಾಲೆ ಹೊರಗುಳಿದಿರುವ ಮಕ್ಕಳಲ್ಲಿಯೂ ಬಾಲಕರ ಸಂಖ್ಯೆ ಹೆಚ್ಚಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೮೬ ಪದವಿಪೂರ್ವ ಕಾಲೇಜುಗಳಿದ್ದು, ಒಟ್ಟು ೯೭೫೪ ಹುಡುಗರು ಮತ್ತು ೧೩೬೬೯ ಹುಡುಗಿಯರಿಗೆ ೨೩೪೨೩ ವಿದ್ಯಾರ್ಥಿಗಳು ಪದವಿಪೂರ್ವ ಶಿಕ್ಷಣ ಪಡೆಯುತ್ತಿದ್ದರೆ. ಆದರೆ, ಇಲ್ಲಿ ಗಮನಸಳೆಯುವ ಅಂಕವೆಂದರೆ ಪದವಿಪೂರ್ವ ಹಂತದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಿಂತ ವಿದ್ಯಾರ್ಥಿನಿಯರ ಸಂಖ್ಯೆಯೇ ಹೆಚ್ಚಾಗಿದೆ. ಅಂತೆಯೇ ಸಾಮಾನ್ಯ ಪದವಿ ಹಂತದ ಶಿಕ್ಷಣದಲ್ಲಿ ೧೩ ಸರ್ಕಾರಿ ಮತ್ತು ೧೪ ಖಾಸಗಿ ಒಟ್ಟು ೨೭ ಕಾಲೇಜುಗಳಿವೆ. ಇಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ೨೬೧೮ ಗಂಡುಮಕ್ಕಳು, ೩೪೯೩ ಹೆಣ್ಣುಮಕ್ಕಳು ಒಟ್ಟು ೬೧೧೧ ವಿದ್ಯಾರ್ಥಿಗಳು. ಹಾಗೆಯೇ ಖಾಸಗಿ ಕಾಲೇಜುಗಳಲ್ಲಿ ೩೫೨೦ ಗಂಡು ಮತ್ತು ೩೪೨೯ ಹೆಣ್ಣುಮಕ್ಕಳು ಒಟ್ಟು ೬೯೪೯ ಮಕ್ಕಳು ಸಾಮಾನ್ಯ ಪದವಿ ಹಂತದ ಶಿಕ್ಷಣ ಪಡೆಯುತ್ತಿದ್ದಾರೆ.

ವೈದ್ಯಕೀಯ ಪದವಿ ಕಾಲೇಜುಗಳು, ಸರ್ಕಾರಿ ಕಾಲೇಜುಗಳಲ್ಲಿ ಇರುವ ಒಂದು ಖಾಸಗಿ ವೈಧ್ಯಕೀಯ ಕಾಲೇಜಿನಲ್ಲಿ ೭೩ ಗಂಡು ಮತ್ತು ೫೫ ಹೆಣ್ಣು ಒಟ್ಟು ೧೨೮ ಮಕ್ಕಳು ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ. ನಾಲ್ಕು ಸರ್ಕಾರಿ ಮತ್ತು ನಾಲ್ಕು ಖಾಸಗಿ ಪಾಲಟೆಕ್ನಿಕ್ ಗಳಿದ್ದು, ಅವುಗಳಲ್ಲಿ ೧೦೫೭ ಹುಡುಗರು ಮತ್ತು ೪೪೦ ಹುಡುಗಿಯರು ಸೇರಿ ಒಟ್ಟು ೧೪೯೭ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ. ಹಾಗೆಯೇ ಜಿಲ್ಲೆಯಲ್ಲಿ ಒಂದು ಸರ್ಕಾರಿ ಮತ್ತು ಎರಡು ಖಾಸಗಿ ತಾಂತ್ರಿಕ ಕಾಲೇಜುಗಳಿದ್ದು, ಈ ಕಾಲೇಜು ಗಳಲ್ಲಿ ೩೬೯ ಬಾಲಕರು ಮತ್ತು ೨೧೬ ಬಾಲಕಿಯರು ಒಟ್ಟು ೫೮೫ ವಿದ್ಯಾರ್ಥಿಗಳು ತಾಂತ್ರಿಕ ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ಹೀಗೆ ಈ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕದ ಶಿಕ್ಷಣ ಸಂಸ್ಥೆ ಕೆ.ಎಲ್.ಇ. ಶಿಕ್ಷಣ ಸಂಸ್ಥೆ,

ಎಸ್.ಡಿ.ಎಂ. ಶಿಕ್ಷಣ ಸಂಸ್ಥೆ, ಮೆಸ್ಮಕೋಸ್ಮ ಪೇಪರ್ ಮಿಲ್‌ಗಳಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಮಹತ್ವದ ಕೊಡುಗೆ ನೀಡುತ್ತಿವೆ.

ಹಾಗೆಯೇ ಈ ಅಧ್ಯಯನ ಕ್ಷೇತ್ರದಲ್ಲಿನ ಸಾಕ್ಷರತೆಗೆ ಸಂಬಂಧಿಸಿದಂತೆ ಗಮನಹರಿಸುವುದಾದರೆ ಕರ್ನಾಟಕದ ಒಟ್ಟು ಸಾಕ್ಷರತಾ ಪ್ರಮಾಣ ೨೦೦೧ನೇ ಜನಗಣತಿಯ ಪ್ರಕಾರ ಶೇ. ೬೬.೬ರಷ್ಟಿವೆ. ಪುರುಷರು ಶೇ. ೭೬.೧, ಮಹಿಳೆಯರು ಶೇ. ೫೬.೯ರಷ್ಟಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ. ೭೬.೬ರಷ್ಟಿದ್ದು, ಲಿಂಗವಾರು ಪುರುಷರು ಶೇ. ೮೪.೫, ಮಹಿಳೆಯರು ಶೇ. ೬೮.೫೦ರಷ್ಟಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ಒಟ್ಟು ಶೇ. ೭೨.೬೫ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಶೇ. ೮೧.೫೬ರಷ್ಟಿದ್ದರೆ, ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣ ೬೩.೫೩ರಷ್ಟಿದೆ. ಅಂತೆಯೇ, ಜಿಲ್ಲೆಯ ನಗರ ಪ್ರದೇಶದ ಒಟ್ಟು ಸಾಕ್ಷರತೆ ಶೇ. ೮೬.೨೭ರಷ್ಟಿದೆ, ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ. ೯೧.೭೯ರಷ್ಟಿದ್ದರೆ, ಮಹಿಳಾ ಸಾಕ್ಷರತಾ ಮಟ್ಟ ಜಿಲ್ಲೆಯ ನಗರ ಪ್ರದೇಶದಲ್ಲಿ ಶೇ. ೮೦.೫೯ರಷ್ಟಿದೆ. ಈ ಅಂಕಿ ಅಂಶಗಳ ಪ್ರಕಾರ ನಗರ ಪ್ರಧೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾಪ್ರಮಾನ ಕಡಿಮೆ ಯಿರುವುದು ತಿಳಿದುಬಂದಿದೆ. ಹಾಗೆಯೆ, ಪುರುಷರಿಗಿಂತ ಮಹಿಳೆಯರ ಸಾಕ್ಷರತೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಕಡಿಮೆ ಪ್ರಮಾಣದಲ್ಲಿದೆ.

ಹಾಗೆಯೇ, ಉತ್ತರ ಕನ್ನಡ ಜಿಲ್ಲೆಯ ಪ್ರಸ್ತುತ ಅಧ್ಯಯನ ಕ್ಷೇತ್ರಗಳಾಗಿರುವ ಹಳಿಯಾಳ ತಾಲೂಕಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೬೩.೭ರಷ್ಟಿದ್ದು ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ. ೭೪.೫ರಷ್ಟಿದ್ದರೆ, ಮಹಿಳಾ ಸಾಕ್ಷರತಾ ಪ್ರಮಾಣ ಶೇ. ೫೨.೪ರಷ್ಟಿದೆ. ಯಲ್ಲಾಪುರ ತಾಲೂಕಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೭೩.೯ರಷ್ಟಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ಪ್ರಮಾಣ ಶೇ. ೮೧.೨ರಷ್ಟಿದ್ದರೆ, ಮಹಿಳಾ ಪ್ರಮಾಣ ಶೇ. ೬೬.೩ರಷ್ಟಿದೆ. ಹಾಗೆಯೇ ಮುಂಡಗೋಡು ತಾಲೂಕಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೭೦.೫ರಷ್ಟಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ಪ್ರಮಾಣ ಶೇ. ೭೯.೯ರಷ್ಟಿದ್ದರೆ, ಮಹಿಳಾ ಪ್ರಮಾಣ ಶೇ. ೫೯.೩ರಷ್ಟಿದೆ. ಅದರಂತೆ ಅಂಕೋಲಾ ತಾಲೂಕಿನ ಒಟ್ಟು ಸಾಕ್ಷರತಾ ಪ್ರಮಾಣ ಶೇ. ೭೬.೮ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣ ಶೇ. ೮೫.೭ರಷ್ಟಿದ್ದರೆ, ಶೇ. ೬೮.೭ರಷ್ಟು ಮಹಿಳೆಯರು ಸಾಕ್ಷರಾಗಿದ್ದಾರೆ.

೪.೬. ಆರೋಗ್ಯ ಸೌಲಭ್ಯಗಳು

ಉತ್ತರ ಕನ್ನಡ ಜಿಲ್ಲೆಯ ೧೧ ತಾಲೂಕುಗಳ ಪೈಕಿ ಕಾರವಾರ ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ೧೦ ತಾಲೂಕು ಕೆಂದ್ರ ಆಸ್ಪತ್ರೆಗಳಿವೆ. ಇವುಗಳಲ್ಲಿ ಒಟ್ಟು ೫೨೦ ಹಾಸಿಗೆಗಳ ವ್ಯವಸ್ಥೆಇವೆ. ಹಾಗೆಯೇ ಕಾರವಾರದಲ್ಲಿ ೪೦೦ ಹಾಸಿಗೆಗಳ ಒಂದು ಜಿಲ್ಲಾ ಆಸ್ಪತ್ರೆಯಿದೆ. ಇತರೆ ೨೦ ಹಾಸಿಗೆಳ ೨ ಆಸ್ಪತ್ರೆಗಳಿವೆ. ಜಿಲ್ಲೆಯಲ್ಲಿ ೧೩ ಸರ್ಕಾರಿ ಆಸ್ಪತ್ರೆಗಳು ೮೧ ಖಾಸಗೀ ನರ್ಸಿಂಗ್ ಹೋಂಗಳು, ೧೧೪ ಚಿಕಿತ್ಸಾಲಯಗಳು ಸೇರಿ ಒಟ್ಟು ೨೦೮ ಆಸ್ಪತ್ರೆಗಳಿವೆ. ಇವುಗಳಲ್ಲದೆ ೨೬ ಹಾಸಿಗೆಗಳ ಮೂರು ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು, ೪೩೨ ಹಾಸಿಗೆಗಳಿರುವ ೭೮ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ೧೧೦ ಹಾಸಿಗೆಗಳಿರುವ ೩ ಸಮುದಾಯ ಆರೋಗ್ಯ

ಕೇಂದ್ರ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳು ಮತ್ತು ೧೦ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಿವೆ. ಇವುಗಳಲ್ಲಿ ಒಟ್ಟು ೯೮೮ ಬಾಲಕರು ಮತ್ತು ೫೬೫ ಬಾಲಕಿಯರು ವಸತಿಯಲ್ಲಿದ್ದಾರೆ. ಹಾಗೆಯೇ ಒಂದು ಮೆಟ್ರಿಕ್ ನಂತರ ಬಾಲಕರ ವಸತಿನಿಲಯ ಇದರಲ್ಲಿ ೧೦೦ ಜನ ವಿದ್ಯಾರ್ಥಿಗಳಿದ್ದಾರೆ. ೨೦೦ ವಿದ್ಯಾರ್ಥಿನಿಯರಿರುವ ೨ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿ ನಿಲಯಗಳಿವೆ.

೪.೭. ವಿವಿಧ ಕ್ಷೇತ್ರಗಳಲ್ಲಿ ದುಡಿಮೆಯಲ್ಲಿ ತೊಡಗಿರುವ ಕೆಲಸಗಾರರು

ಜಿಲ್ಲೆಯಲ್ಲಿ ಒಟ್ಟು ೧೪೩೩೬೭ ಜನರು ಕೃಷಿ ಸಾಗುವಳಿದಾರರಿದ್ದಾರೆ. ಅವರಲ್ಲಿ ೯೪೨೫೪ ಪುರುಷ ಸಾಗುವಳಿದಾರರು ಮತ್ತು ೪೯೧೧೩ ಮಹಿಳಾ ಸಾಗುವಳಿದಾರರಿದ್ದಾರೆ. ಅಂತೆಯೇ ಒಟ್ಟು ೮೪೫೭೩ ಜನರು ಕೃಷಿ ಕಾರ್ಮಿಕರಿದ್ದು ಲಿಂಗವಾರು ಗಮನಿಸಿದ ಇದರಲ್ಲಿ ೩೭೮೯೧ ಪುರುಷ ಕೃಷಿಕಾರ್ಮಿಕರು ಮತ್ತು ೪೬೬೮೨ ಮಹಿಳಾ ಕೃಷಿಕಾರ್ಮಿಕರಿದ್ದಾರೆ. ಅಂದರೆ ಜಿಲ್ಲೆಯಲ್ಲಿ ಪುರುಷರಿಗಿಂತ ಮಹಿಳಾ ಕೃಷಿ ಕಾರ್ಮಿಕರೇ ಅಧಿಕವಾಗಿದ್ದು, ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಹೆಚ್ಚಾಗಿರುವುದು ಕಂಡುಬಂದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೩೦೪೮ ಜನರು ಗೃಹಕೈಗಾರಿಕೆಗಳಲ್ಲಿ ಕೆಲಸಗಾರರಾಗಿ ದುಡಿಯುತ್ತಿದ್ದಾರೆ. ಇವರಲ್ಲಿ ೯೧೨೬ ಪುರುಷರು ಮತ್ತು ೩೯೨೨ ಮಹಿಳಾ ಕಾರ್ಮಿಕರು ಗೃಹಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು ೫೮೧೨೭ ಜನ ಕೆಲಸಗಾರರುಗಳಿದ್ದು, ಅದರಲ್ಲಿ ೩೯೫೮೯ ಪುರುಷರು ಮತ್ತು ೧೮೫೪೮೯ ಮಹಿಳೆಯರಿದ್ದು, ಹಾಗೆಯೇ ಕೃಷಿಯೇತರ ಕೆಲಸಗಾರರ ಸಂಖ್ಯೆ ೩೫೩೩೩೮ ಜನಸಂಖ್ಯೆ ಇವರಲ್ಲಿ ೨೬೩೭೫೪ ಪುರುಷರು ಮತ್ತು ೮೯೬೧೪ ಮಹಿಳೆಯರು ಇದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ರೀತಿಯ ದುಡಿಮೆಯಲ್ಲಿ ತೊಡಗಿರುವವರ ಶೇಕಡಾವಾರು ಪ್ರಮಾಣವನ್ನು ನೋಡಿದಾಗ ಜಿಲ್ಲೆಯಲ್ಲಿ ಶೆ. ೨೪.೭ರಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಅಂತೆಯೇ ೧೪.೫ರಷ್ಟು ಜನರು ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಶೇ. ೨.೨ರಷ್ಟು ಜನರು ಗೃಹ ಮತ್ತು ಕರಕುಶಲ ಕೈಗಾರಿಕೆಗಳಲ್ಲಿ ನಿರತರಾಗಿದ್ದಾರೆ. ಹಾಗೆಯೇ ಶೇ. ೪೦.೨ರಷ್ಟು ಜನರು ಇತರ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಂತೆಯೇ ಹಳಿಯಾಳ ತಾಲೂಕಿನಲ್ಲಿ ಶೇ. ೫೦.೩ರಷ್ಟು ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಶೇ. ೨೦.೦ರಷ್ಟು ಜನರು ಕೃಷಿಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಶೇ. ೨.೭ರಷ್ಟು ಜನರು ಗೃಹ ಮತ್ತು ಕರಕುಶಲ ಕೈಗಾರಿಕೆಗಳಲ್ಲಿ ತೊಡಗಿದ್ದರೆ. ಶೇ. ೨೭.೬ ರಷ್ಟು ಜನರು ಗೃಹ ಮತ್ತು ಕರಕುಶಲ ಕೈಗಾರಿಕೆಗಳಲ್ಲಿ ತೊಡಗಿದ್ದರೆ, ಶೇ. ೨೭.೬ರಷ್ಟು ಜನರು ಇತರೆ ವೃತ್ತಿಗಳಲ್ಲಿ ತೊಡಗಿದ್ದರೆ. ಹಾಗೆಯೇ ಯಲ್ಲಾಪುರ ತಾಲೂಕಿನಲ್ಲಿ ಶೇ. ೨೭.೪ರಷ್ಟು ಜನರು ವ್ಯವಸಾಯ, ಶೇ. ೧೯ರಷ್ಟು ಜನ ಕೃಷಿ ಕಾರ್ಮಿಕರು ಮತ್ತು ಶೇ. ೧.೧ರಷ್ಟು ಜನರು ಗೃಹಕೈಗಾರಿಕೆಗಳಲ್ಲಿ ದುಡಿಯುತ್ತಿದ್ದರೆ, ಉಳಿದ ಶೇ. ೫೧.೬ರಷ್ಟು ಜನರು ಇತರೆ ವೃತ್ತಿಗಳಲ್ಲಿ

ದುಡಿಯುತ್ತಿದ್ದಾರೆ. ಹಾಗೆಯೇ ಮುಂಡಗೋಡು ತಾಲೂಕಿನಲ್ಲಿ ಶೇ. ೪೧.೪ ರಷ್ಟು ಜನರು ಕೃಷಿಯಲ್ಲಿ ನಿರತರಾಗಿದ್ದಾರೆ. ಶೇ. ೩೦.೯ರಷ್ಟು ಜನರು ಕೃಷಿಕಾರ್ಮಿಕರಾಗಿದ್ದಾರೆ. ಶೇ. ೨.೪ರಷ್ಟು ಜನರು ಗೃಹಕೈಗಾರಿಕೆಗಳಲ್ಲಿ ನಿರತರಾಗಿದ್ದಾರೆ. ಉಳಿದಂತೆ ಶೇ. ೨೫.೨ರಷ್ಟು ಜನರು ಇತರೆ ಕೆಲಸಕಾರ್ಯಗಳಲ್ಲಿ ದುಡಿಯುತ್ತಿದ್ದಾರೆ. ಹಾಗೆಯೇ ಅಂಕೋಲ ತಾಲೂಕಿನಲ್ಲಿ ಶೇ. ೩೬.೯ರಷ್ಟು ಜನರು ವ್ಯವಸಾಯಗಾರರಾಗಿ, ಶೇ. ೧೭.೩ರಷ್ಟು ಜನರು ಕೃಷಿ ಕಾರ್ಮಿಕರಾಗಿ, ಶೇ ೨.೨ರಷ್ಟು ಜನರು ಗೃಹಕೈಗಾರಿಕೆಗಳಲ್ಲಿ ಮತ್ತು ಉಳಿದ ಶೇ. ೪೩.೬ರಷ್ಟು ಜನರು ಇತರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಮೇಲಿನ ಅಂಕಿ ಅಂಶಗಳ ವಿವರಣೆಗಳನ್ನು ಗಮನಿಸಿದಾಗ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಸ್ತ್ರೀ ಮತ್ತು ಪುರುಷರಿಬ್ಬರೂ ಕೆಲಸಗಾರರಾಗಿ ದುಡಿಯುತ್ತಿದ್ದು, ಜಿಲ್ಲೆಯ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ.

೪.೮. ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ೨೮೩೭ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು, ಇವುಗಳಲ್ಲಿ ಒಟ್ಟು ೨೬೩೨೫ ಸದಸ್ಯರಿದ್ದಾರೆ. ಎಲ್ಲಾ ೧೭೭೭ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಬ್ಯಾಂಕಿನಲ್ಲಿ ಉಳಿತಾಯ ಪ್ರಾರಂಭಿಸಿರುವ ಸಂಘಗಳಾಗಿವೆ. ಹಾಗೆಯೇ ೫೫೩ ಯುವತಿ ಮಂಡಳಿಗಳು, ೪೯೧ ಮಹಿಳಾ ಮಂಡಳಿಗಳು ಸ್ತ್ರೀ ಶಕ್ತಿ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿದ್ದಾರೆ. ೨೬೩೨೫ ಸದಸ್ಯರುಗಳಲ್ಲಿ ೭೪೯೮೭ ಸದಸ್ಯರು ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆಯಡಿ ಯಲ್ಲಿ ಇಲ್ಲಿಯವರೆಗೆ ಒಟ್ಟು ೨೮೨೦೪ ಹೆಣೂ ಮಕ್ಕಳು ಫಲಾನುಭವಿಗಳಾಗಿದ್ದಾರೆ. ಸ್ತ್ರೀ ಶಕ್ತಿ ಯೋಜನೆಯ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿಯಲ್ಲಿ ೦-೬ ವರ್ಷ ವಯಸ್ಸಿನ ೪೬೦೬೫ ಮಕ್ಕಳು, ೧೯೬೬ ಗರ್ಭಿಣಿಯರು, ೯೨೮೧ ಬಾಣಂತಿಯರು, ೫೩೭೬ ಕಿಶೋರಿಯರು ಒಟ್ಟು ೧೧೮೬೮೫ ಜನರು ಫಲಾನುಭವಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ೨೫೬೮ ಅಂಗನವಾಡಿ ಶಿಕ್ಷಕಿಯರು ಮತ್ತು ೫೪೧೧ ಅಂಗನವಾಡಿ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ.

೪.೯. ವ್ಯವಸಾಯ ನೀರಾವರಿ ಮತ್ತು ಮೀನುಗಾರಿಕೆ

೧೦೨೪೬೭೯ ಹೆಕ್ಟರ್ ವ್ಯವಸಾಯ ಭೂಮಿಯಲ್ಲಿ ೮೧೩.೪೯೫ ಹೆಕ್ಟರ್ ಅರಣ್ಯ ಪ್ರದೇಶವಿದ್ದು ರಾಜ್ಯದಲ್ಲಿಯೇ ಅತಿಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆ ಎನಿಸಿಕೊಂಡಿದೆ. ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಲ್ಲಿ ೩೪೫೧೪ ಹೆಕ್ಟರ್ ಪ್ರದೇಶ ವ್ಯವಸಯೇತರ, ೧೬೭೩೪ ಹೆಕ್ಟರ್ ಬಂಜರು ಒಟ್ಟು ೫೦೭೪೮೮ ಹೆಕ್ಟೇರ್ ಸಾಗುವಳಿಗೆ ಲಭ್ಯವಿರುವುದಿಲ್ಲ. ೨೭೮೮೧ ಹೆಕ್ಟರ್ ಸಾಗುವಳಿ ಮಾಡದೇ ಇರುವ ಭೂಮಿ ಇದೆ. ಇದರಲ್ಲಿ ೬೪೫೦ ಹೆಕ್ಟರ್ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ೧೬೬೨೫ ಖಾಯಂ ಗೋಮಾಳ ಮತ್ತು ೪೮೦೬ ಹೆಕ್ಟರ್‌ಗಳಲ್ಲಿ ವೃಕ್ಷ ಮತ್ತು ತೋಪುಗಳಿವೆ. ಜಿಲ್ಲೆಯಲ್ಲಿ ಒಟ್ಟು ೪೮೮೪ ಭೂಹಿಡುವಳಿ ದಾರರಿದ್ದು, ಇವರಲ್ಲಿ ೩೬೧೪

ಪುರುಷ ಭೂಹಿಡುವಳಿದಾರರ ೧೧೯೬ ಹೆಕ್ಟರ್ ಭೂವಿಸ್ತೀರ್ಣದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಹಾಗೆಯೇ ೪೨೮ ಹೆಕ್ಟರ್ ಪ್ರದೇಶದಲ್ಲಿ ೧೨೭೦ ಮಹಿಳಾ ಭೂಹಿಡುವಳಿದಾರರಿದ್ದಾರೆ. ಒಟ್ಟಾರೆ ಭೂ ಹಿಡುವಳಿದಾರರಲ್ಲಿ ಮಹಿಳೆಯರಿಗಿಂತ ಪುರುಷರ ಸಂಖ್ಯೆ ಹೆಚ್ಚಾಗಿದೆ. ಒಟ್ಟು ೧೨೦೯೧ ಜನರು ಅತಿಸಣ್ಣ ಭೂಹಿಡುವಳಿದಾರರಿದ್ದಾರೆ. ಈ ಅತಿಸಣ್ಣ ಭೂಹಿಡುವಳಿದಾರರು ಒಟ್ಟು ೯೧೭೬ ಹೆಕ್ಟರ್ ಭೂ ಪ್ರದೇಶದ ಒಡೆತನ ಹೊಂದಿದ್ದಾರೆ. ಹಾಗೆಯೇ ಒಟ್ಟು ೩೦೩೩೪ ಸಣ್ಣ ಭೂಹಿಡುವಳಿದಾದರಿದ್ದು ಇವರು ೪೨೬೬೮ ಹೆಕ್ಟರ್ ಭೂಮಿಯನ್ನು ಹೊಂದಿದ್ದಾರೆ. ಹಾಗೆಯೇ ೧೩೮೯೪ ರೈತ ಕುಟುಂಬಗಳು ಅರೆಮಧ್ಯಮ ಭೂಹಿಡುವಳಿದಾರರಿದ್ದಾರೆ. ಇವರುಗಳು ೩೭೬೯ ಹೆಕ್ಟರ್ ಭೂ ಒಡೆತನ ಹೊಂದಿದ್ದಾರೆ. ಹಾಗೆಯೇ ೪೩೧೦ ಜನರು ಮಧ್ಯಮ ಭೂಹಿಡುವಳಿದಾರರಿದ್ದಾರೆ ಅವರುಗಳ ಒಟ್ಟು ೨೩೮೩೮ ಹೆಕ್ಟರ್ ಭೂಮಿಯನ್ನು ಹೊಂದಿದ್ದಾರೆ. ಹಾಗೆಯೇ ಒಟ್ಟು ೨೮೮ ಜನರು ದೊಡ್ಡ ಭೂಹಿಡುವಳಿ ದಾರರಿದ್ದಾರೆ. ಇವರ ಒಡೆತನದಲ್ಲಿರುವ ಭೂಮಿ ೩೮೪೭ ಹೆಕ್ಟರ್, ಜಿಲ್ಲೆಯಲ್ಲಿ ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿದಾರರ ಸಂಖ್ಯೆ ಅಧಿಕವಾಗಿದ್ದು, ಮಧ್ಯಮ ಮತ್ತು ಸಣ್ಣ ಭೂಹಿಡುವಳಿ ದಾರರ ಸಂಖ್ಯೆ ಕಡಿಮೆ ಇದೆ. ಜಿಲ್ಲೆಯಲ್ಲಿ ಒಟ್ಟು ೧೭೫೮೭೧ ಜನ ಭೂಹಿಡುವಳಿದಾರರಿದ್ದು ೧೯೯೪೨೦ ಹೆಕ್ಟರ್ ಭೂ ಒಡೆತನ ಹೊಂದಿದ್ದಾರೆ. ಜಿಲ್ಲೆಯಲ್ಲಿ ೫೨೨೮ ಜನ ಮಹಿಳೆಯರು ಸಣ್ಣ ಭೂ ಹಿಡುವಳಿ ದಾರರಾಗಿದ್ದು ಒಟ್ಟು ೭೩೩೫ ಎಕರೆ ಭೂಹಿಡುವಳಿಯ ಒಡೆತನವನ್ನು ಹೊಂದಿದ್ದಾರೆ. ಮಧ್ಯ ಪ್ರಮಾಣದ ಮಹಿಳಾ ಭೂ ಹಿಡುವಳಿದಾರರ ಸಂಖ್ಯೆ ೨೧೫೧ ಇದ್ದು ಇವರು ಒಟ್ಟು ೫೮೫೫ ಎಕರೆ ಭೂ ಮಿಯ ಒಡೆತನವನ್ನು ಹೊಂದಿದ್ದಾರೆ. ಹಾಗೆಯೇ, ಮಹಿಳೆಯರಲ್ಲಿ ದೊಡ್ಡ ಭೂ ಹಿಡುವಳಿದಾರರು ೯ ಜನರಿದ್ದಾರೆ, ಇವರು ಒಟ್ಟು ೪೯೮ ಎಕರ ಭೂಮಿಯ ಒಡೆತನ ಹೊಂದಿದ್ದಾರೆ.

ನೀರಾವರಿ

ನೀರಾವರಿಗೆ ಸಂಬಂಧಿಸಿದಂತೆ, ಕಾಲುವೆಗಳು, ಕೆರೆಗಳು ಮತ್ತು ಬಾವಿಗಳೆಂದು ಮೂರು ಮೂಲಗಳಿಂದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಲುವೆಗಳ ಮೂಲ ನೀರಾವರಿ ಸೌಲಭ್ಯಗಳು ಇರುವುದಿಲ್ಲ. ಜಿಲ್ಲೆಯಲ್ಲಿ ಇರುವ ಒಟ್ಟು ೨೩೭೧ ಕೆರೆಗಳಿಂದ ಒಟ್ಟು ೬೧೪೨ ಹೆಕ್ಟೆರ್ ವಿಸ್ತೀರ್ಣಕ್ಕೆ ಒಟ್ಟು ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಕೆರೆಗಳಿಂದ ನೀರಾವರಿಗೆ ಒಳಪಟ್ಟಿರುವ ನಿವ್ವಳ ನೀರಾವರಿ ವಿಸ್ತೀರ್ಣ ೫೭೬೦ ಹೆಕ್ಟೇರ್ ಭೂಮಿ. ಜಿಲ್ಲೆಯಲ್ಲಿ ಒಟ್ಟು ೮೫೨೨ ಬಾವಿಗಳಿದ್ದು, ನಿವ್ವಳ ೯೯೬ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಒದಗಿಸುತ್ತಿವೆ.

ಮೀನುಗಾರಿಕೆ

ಉತ್ತರ ಕನ್ನಡ ಜಿಲ್ಲೆ ವಿಶಾಲವಾದ ಮತ್ತು ಉತ್ಪಾದನೆಯ ಅಂದರೆ ೧೨೨ ಕಿ.ಮೀ. ಕರಾವಳಿ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯಲ್ಲಿ ಒಟ್ಟು ೧೩೪೫೦ ಕುಟುಂಬಗಳು ಪೂರ್ಣಕಾಲಿಕ ಮೀನುಗಾರಿಕೆಯಲ್ಲಿ ತೊಡಗಿವೆ. ಹಾಗೆಯೇ ೮೯೨೫ ಕುಟುಂಬಗಳು ಅರೆಕಾಲಿಕವಾಗಿ ಮೀನುಗಾರಿಕೆ

ಯಲ್ಲಿ ತೊಡಗಿವೆ. ೧೭೬೦ ಮೀನುಗಾರರು ಮತ್ಸಾಶ್ರಯ ಯೋಜನೆಯ ಫಲಾನು ಭವಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಕೇವಲ ಸಮುದ್ರದ ಮೀನುಗಾರಿಕೆಯಲ್ಲದೆ, ಒಳನಾಡಿನ ಕೆರೆ ಗಳಲ್ಲಿಯೂ ಮಿನುಗಾರಿಕೆ ಮಾಡುವವರಿದ್ದಾರೆ, ಅದರೆ ಅವರ ಸಂಖ್ಯೆ ಸ್ಪಷ್ಟವಾಗಿಲ್ಲ. ಮೀನುಗಾರಿಕೆಗೆ ಯೋಗ್ಯವಾದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿರುವ ೯೭೨ ಕೆರೆಗಳಿವೆ ಮತ್ತು ಸಣ್ಣ ನೀರಾವರು ಇಲಾಖಯ ವ್ಯಾಪ್ತಿಯಲ್ಲಿರುವ ೮೬ ಕೆರೆಗಳಲ್ಲಿ ಮೀನುಗಾರಿಕೆ ಮಾಡುತ್ತಿದ್ದಾರೆ. ಈಲ್ಲೆಯಲ್ಲಿ ವಾರ್ಷಿಕ ಒಟ್ಟು ೮೯೨೨೨ ಟನ್ನು ಮೀನನ್ನು ಹಿಡಿಯುತ್ತಾರೆ, ಹಿಡಿದ ಮೀನನ್ನು ಸಂರಕ್ಷಿಸಿ ಸ್ಟೋರೇಜ್ ಮಾಡಲು ೮೭.೫೦ ಟನ್ ಸಾಮರ್ಥ್ಯದ ೯ ಶೀಥಲೀಕರಣ ಘಟಕಗಳಿವೆ. ಹಾಗೆಯೇ, ೫೪೩ ಟನ್ ಸಾಮರ್ಥ್ಯದ ೩೬ ಮಂಜುಗಡ್ಡೆ ಕಾರ್ಖಾನೆಗಳಿವೆ.

೪.೧೦. ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು

ಉತ್ತರ ಕನ್ನಡ ಜಿಲ್ಲೆಯು ಪ್ರವಾಸೋದ್ಯಮದಲ್ಲಿ ಪ್ರಸಿದ್ಧರಾಗಿರುವ ಜಿಲ್ಲೆ. ಅಂಕೋಲಾ ತಾಲೂಕಿನ ಹನಿಬೀಚ್ ಹೊನ್ನೆ ಬೆಲಲ್, ಬಸಾಕಲ್ ಗುಡ್ಡ, ಬೇಲೆಕೆರಿ ಬಂದರು ತುಳಸಿಗುಡ್ಡ ಮತ್ತು ನದಿ ಭಾಗ, ಬೀಚುಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಭಟ್ಕಳ ತಾಲೂಕಿನ ಮುರುಡೇಶ್ವರ ವಿಶ್ವ ಪ್ರಸಿದ್ಧ ಪಡೆದ ಪ್ರವಾಸಿತಾಣ, ಚಿತ್ರಪುರ, ಹಾಡವಳ್ಳಿ, ಜೈನಬಸದಿ, ಬಂದರ ಮಾವಿನ ಕುರ್ವೆ ಮತ್ತು ಲೈಟ್ ಹೌಸ್‌ಗಳು ಭಟ್ಕಳ ತಾಲೂಕಿನ ಪ್ರಸಿದ್ಧ ಪ್ರವಾಸಿ ಕೇಂದ್ರಗಳಾಗಿವೆ. ಹೊನ್ನಾವರ ತಾಲೂಕಿನಲ್ಲಿರುವ ನಿಡುಕೊಡಿನ ಕರಿಕಾನ ಪರಮೇಶ್ವರಿ ದೇವಾಲಯ, ಇಡುಗುಂಜಿ ಮಹಾಗಣಪತಿ ದೇವಸ್ಥಾನ ಮತ್ತು ಗೇರಸೊಪ್ಪ ಜೈನಬಸದಿಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಕಾರವಾರದಲ್ಲಿರುವ ಸದಾಶಿವಗಡ ಕಿಲ್ಲೆ, ದೇವಗಡ, ದೇವಬಾಗ ರಿಸೋರ್ಟ್, ರವೀಂದ್ರನಾಥ ಟಾಗೂರ್ ಬೀಚ್ ಮುಂತಾದವು ಜಿಲ್ಲಾ ಕೇಂದ್ರವಾಗಿರುವ ಕಾರವಾರಕ್ಕೆ ಪ್ರವಾಸಿಗರನ್ನು ಸೆಳೆಯುತ್ತವೆ. ಕುಮಟಾ ತಾಲೂಕಿನಲ್ಲಿರುವ ಮಹಾಬಲೇಶ್ವರ ದೇವಸ್ಥಾನ, ಓಂ ಬೀಚ್, ಕುಡ್ಲೆ ಬೀಚ್, ಗೋಕರ್ಣ ಗೋರೆ ಗೊಪಾಲ ಕೃಷ್ಣದೇವಾಲಯ, ಕಡೆಗೂಡಿ ಭೈರಮೇಶ್ವರ ದೇವಸ್ಥಾನ, ಯಾಣ, ಲೋಕೇಶ್ವರ ದೇವಸ್ಥಾನಗಳು ವಿಶ್ವಪ್ರಸಿದ್ಧ ಪ್ರವಾಸಿ ಕೇಂದ್ರಗಳಾಗಿವೆ. ಶಿರಸಿಯ ಲುಸಿಗ್ಮನ್ ಪಾಲ್ಸ್ ಉಂಚಳ್ಳಾ, ಶ್ರೀ ಮಾರಿಕಾಂಬಾ ದೇವಸ್ಥಾನ, ಶಿರಸಿ ಮದುಕೇಶ್ವರ ದೇವಸ್ಥಾನ, ಬನವಾಸಿ ಮತ್ತು ಸಹಪುಲಿಂಗ ಜೋಯಿಡಾದ ಉಳವಿ ಚನ್ನಬಸವೇಶ್ವರ ದೇವಸ್ಥಾನ, ಸುಫಾ ಅಣೆಕಟ್ಟು, ದೂದ ಸಾಗರ ಮತ್ತು ಸಿಂತೀರಿ ರಾಕ್ಸ್ ಮತ್ತು ಯಲ್ಲಾಪುರ ತಾಲೂಕಿನಲ್ಲಿರುವ ಮಾಗೋಡ ಪಾಲ್ಸ್ ಮತ್ತು ಸಾಲೋಡಿ ಪಾಲ್ಸ್‌ಗಳು ಜಗತ್‌ಪ್ರಸಿದ್ಧ ಪ್ರವಾಸಿ ಕೇಂದ್ರಗಳಾಗಿವೆ.

೪.೧೧. ಉತ್ತರ ಕನ್ನಡ ಜಿಲ್ಲೆಯ ಕರಕುಶಲ ಕಲೆಗಳು

ಉತ್ತರ ಕನ್ನಡ ಜಿಲ್ಲೆ ಕರಕುಶಲ ಕಲೆಗಳ ಆಗರವಾಗಿದೆ. ಶ್ರೀಗಂಧದ ಕೆತ್ತನೆ, ಗಂದದ ಹಾರ ತಯಾರಿಕೆ, ಬೀಟೆ ಮರದ ಕೆತ್ತನೆ, ಬಿದಿರು ಹಾಗೂ ಬೆತ್ತ, ಮರದ ಕೆತ್ತನೆ, ಬೆಂಡಿನ ಕಲೆ, ಕಲಾತ್ಮಕ ಕುಂಭ ಕಲೆ, ಶಿಲ್ಪಕಲೆ, ಮೃಣ್ಮಯ ಗೊಂಬೆ, ಬೆಳ್ಳಿಯ ಆಭರಣ, ಧಾತುಕಲೆ, ಲಾವಂಚ ಕಲೆ, ಚಾಪೆನೇಯ್ಗೆ, ಹಿಟ್ಟಂಡೆ ಹುಲ್ಲಿನ ಕಲೆ, ಹಸೆ ಚಿತ್ತಾರ, ಕಾವಿಕಲೆ, ರತ್ನಗಂಬಳಿ ಇನ್ನೂ ಅನೇಕ ಕುಶಲ ಕಲೆಗಳಿಗೆ ಜಿಲ್ಲೆಯು ಹೆಸರುವಾಸಿಯಾಗಿದೆ.

ಶ್ರೀಗಂಧದ ಕಲೆ: ಗಂಧದ ಮರ, ದೇವರ ಮರವೆಂದು ಪ್ರಾಚೀನ ಕಾಲದಿಂದಲೂ ಹೆಸರು ಪಡೆದಿದೆ. ಈ ಮರಕ್ಕೆ ಕ್ರಿಮಿ ಕೀಟಗಳ ಬಾದೆ ಇರುವುದಿಲ್ಲ ಹೀಗಾಗಿ ಕಲಾವಸ್ತುಗಳನ್ನು ನೂರಾರು ವರ್ಷ ಕಾಯ್ದಿರಿಸಬಹುದಾಗಿದೆ. ಶತಮಾನಗಳ ಪೂರ್ವದಲ್ಲಿ ಗಡಿನಾಡಾದ ಗೋವಾ ಪ್ರದೇಶದಿಂದ ಗುಡಿಗಾರರು ವಲಸೆ ಬಂದು ನೆಲೆನಿಂತರು. ದೇವಸ್ಥಾನಗಳ ಬಣ್ಣ, ಚಿತ್ರ ಹಾಗೂ ಪ್ರತಿಮೆಗಳನ್ನು ಮಾಡುವ ಸುಪ್ರಸಿದ್ಧ ಕುಶಲ ಕರ್ಮಿಗಳಾದರು. ಬರಗಾಲದ ಪರಿಸ್ಥಿತಿಯಲ್ಲೊಮ್ಮೆ ಮೈಸೂರಿನ ಅರಸರು ಗುಡಿಗಾರರನ್ನು ಆಹ್ವಾನಿಸಿ ಗಂಧದ ವಿವಿಧ ಕಲಾ ವಸ್ತುಗಳನ್ನು ಮಡಿಸಿದ್ದರಿಂದ ಆ ವಸ್ತುಗಳನ್ನಿಂದು ಅರಮನೆಯಲ್ಲಿ ಕಾಣಬಹುದಾಗಿದೆ. ಗಂಧದ ಮರದಲ್ಲಿ ವಿವಿಧ ದೇವತಾ ಪ್ರತಿಮೆ ವಿವಿಧ ಭಂಗಿಯಲ್ಲಿ ಪ್ರಾಣಿ ಹಾಗೂ ಪಕ್ಷಿ ಸಂಕುಲ, ಆಭರಣ ಪೆಟ್ಟಿಗೆ, ಗೋಡೆ ಅಲಂಕಾರದ ವಸ್ತುಗಳು, ನಿತ್ಯೋಪಯೋಗಿ ವಸ್ತುಗಳು ಹೀಗೆ ಅನೇಕ ವಸ್ತುಗಳನ್ನು ತಯಾರಿಸಿರುತ್ತಾರೆ. ಗುಡಿಗಾರ ಮಹಿಳೆಯರು ಶ್ರೀಗಂದದ ತೆಳುವಾದ ಹಾಳೆಗಳಿಂದ ಸುವಾಸಿತ ಸುಂದರ ಹಾರಗಳನ್ನು ತಯಾರಿಸುತ್ತಾರೆ. ತಮ್ಮ ಮನದಾಳದ ವಿನ್ಯಾಸಗಳನ್ನು ಅಂದವಾಗಿ ಮೂಡಿಸುವಲ್ಲಿ ಪ್ರಸಿದ್ದರಾಗಿದ್ದರೆ. ಪೀಳಿಗೆಯಿಂದ ಪೀಳಿಗೆಗೆ ಈ ಕಲೆ ಆನುವಂಶಿಕವಾಗಿ ಸಾಗುತ್ತಾ ಬಂದಿದೆ.

ಬೆಂಡಿನ ಕಲೆ: ಮನೆಗೆಲಸದಿಂದ ಬಿಡುವು ದೊರೆತಾಗ ಗುಡಿಗಾರ ಹೆಣ್ಣುಮಕ್ಕಳು ಕೆರೆಗಳಲ್ಲಿ ಲಭ್ಯವಿರುವ ನಿರುಪಯುಕ್ತ ಬೆಂಡನ್ನು ನಯನ ಮನೋಹರ ಕಲಾವಸ್ತುಗಳನ್ನಾಗಿ ಪರಿವರ್ತಿಸುತ್ತಾರೆ. ಬೆಂಡಿನ ಮೇಲ್ಪದರವನ್ನು ಚಾಕುವಿನಿಂದ ಕತ್ತರಿಸಿ ತೆಗೆದು, ಶ್ವೇತವರ್ಣದ ಬೆಂಡನ್ನು ಹಾಳೆಗಳನ್ನಾಗಿ ತೆಗೆದು ಬೇಕಾದ ವರ್ಣಗಳಲ್ಲಿ ಬಣ್ಣ ಮಾಡಿ, ಸೂಜಿದಾರದಿಂದ ಬೇಕಾದ ಆಕಾರದ ಹೂವಿನ ಹಾರ, ಬಾಸಿಂಗ, ತುರಾಯಿ, ಹೂ ಗೊಂಚಲು ಹೀಗೆ ಅನೇಕ ಅಲಂಕಾರಿಕ ವಸ್ತುಗಳನ್ನು ಸೃಷ್ಟಿಸುತ್ತಾರೆ. ಹಾಲಕ್ಕಿ ಬುಡಕಟ್ಟಿನ ಸುಗ್ಗಿ ಕುಣಿತದ ತುರಾಯಿ ತುಂಬಾ ಆಕರ್ಷಕವಾಗಿರುತ್ತದೆ. ಗೌರಿ, ಗಣೇಶ ಮತ್ತು ಮದುವೆಯ ಸಮಯದಲ್ಲಿ ಬಾಸಿಂಗಗಳ ಬೇಡಿಕೆ ಬಹಳವಾಗಿರುತ್ತದೆ. ಕುಮಟ, ಶಿರಸಿ, ಬನವಾಸಿ, ಮುರ್ಡೇಶ್ವರ ಮತ್ತು ಅಂಕೋಲಗಳು ಪ್ರಮುಖ ಕಲಾ ಕೇಂದ್ರ ಗಳಾಗಿವೆ.

ಬೀಟೆ ಮರದ ಕೆತ್ತನೆ: ಬೀಟೆ ಮರವು ಜಿಲ್ಲೆಯಲ್ಲಿ ಸಮೃದ್ಧವಾಗಿ ಬೆಳೆಯುವುದರಿಂದ ಈ ಕುಶಲಕಲೆ ಹೆಚ್ಚು ಪ್ರಸಿದ್ಧವಾಗಿದೆ. ಈ ಮರವನ್ನು ಬಳಸಿ ಕಲಾತ್ಮಕ ಪೀಠೋಪಕರಣ, ದೇವಾನು ದೇವತೆಗಳ ವಿಗ್ರಹ, ಬಾಗಿಲು ಮಂಟಪ ಮುಂತಾದ ವಸ್ತುಗಳನ್ನು ಕಲಾಕರರು ತಯಾರಿಸುತ್ತಾರೆ. ಬೀಟೆ ಮರ ಗಟ್ಟಿ ಮುಟ್ಟಾಗಿದ್ದು ಒಳ್ಳೆಯ ಮೆರಗು ನೀಡುವುದರಿಂದ ಇದರಿಂದ ತಯಾರಾದ ಕಲಾತ್ಮಕ ವಸ್ತುಗಳು ಆಕರ್ಷಕವಾಗಿರುತ್ತವೆ. ಸದಾಶಿವಗಡ ಪೀಠೋಪಕರಣ ಹಾಗೂ ಮಂಟಪ ತಯಾರಿಕೆಯ ಪ್ರಮುಖ ಕೇಂದ್ರವಾಗಿದೆ. ಕುಮಟ, ಶಿರಸಿ, ಹೊನ್ನಾವರ ಮುಂತಾದ ಕೇಂದ್ರಗಳಲ್ಲಿ ವಿವಿಧ ಕಲಾ ವಸ್ತುಗಳನ್ನು ತಯಾರಿಸಲಾಗುತ್ತದೆ.

ಮರದ ಕೆತ್ತನೆ: ಶ್ರೀಗಂಧದ ಪೂರೈಕೆ ಕ್ಷೀಣಿಸಿದಂತೆ ಕುಶಲ ಕರ್ಮಿಗಳು ಸಾಗುವಾನಿ, ಸಿವನಿ, ರಂಜಲೆ, ಸುರಗಿ, ಜಮ್ಮನ ಮುಂತಾದ ಮರಗಳ ಬಳಕೆ ಮಾಡಲು ಪ್ರಾರಂಬಿಸಿದರು.

ದೇವಸ್ಥಾನದ ತೇರುಗಳ ತಯಾರಿಕೆಯಲ್ಲಿಯೂ ಜಂಬೆ ಹಾಗು ಸಾಗುವಾನಿ ಮರ ಬಳಸುತ್ತಾರೆ. ಹರಕೆಯ ಬೊಂಬೆಗಳನ್ನು ವಿವಿಧ ಮರಗಳಲ್ಲಿ ತಯಾರಿಸುತ್ತಾರೆ. ಗುಡಿಗಾರರ ಕಲ್ಪನಾಲೋಕದ ಸುಂದರ ಹೆಂಗಳೆಯರ ಬೊಂಬೆಗಳು, ಮಾಸ್ತಿಯಮ್ಮನ ದೇವಸ್ಥಾನಕ್ಕೆ ಹರಕೆಯಾಗಿ ಬಳಸಲ್ಪಡುವವು. ಗರಡಿಪಲು ಗ್ರಾಮದಲ್ಲಿ ಕಲಾತ್ಮಕವಾಗಿ ಮಜ್ಜಿಗೆ ಕಡೆಯುವ ಕಡಗೋಲುಗಳು ತಯಾರಾಗುತ್ತವೆ. ಕೆತ್ತನೆಯ ಕಳಸದ ಮಣೆಗಳನ್ನು ಸಾಮಾನ್ಯವಾಗಿ ಜಿಲ್ಲೆಯ ಎಲ್ಲರ ಮನೆಗಳಲ್ಲೂ ಕಾಣಬಹುದು. ಬಾಗಿಲು, ಕಿಟಕಿ, ಮೇಲ್ಛಾವಣಿ ಮುಂತಾದವನ್ನು ಸ್ಥಾನೀಯ ಜನರು ಹೆಚ್ಚು ಬಳಸುವುದರಿಂದ ಕಲಾಕಾರರಿಗೆ ಪ್ರೋತ್ಸಾಹ ದೊರೆತಿದೆ. ಹೀಗಾಗಿ ಸುಂದರ ಕೆತ್ತನೆಯ ಬಳಕೆಯನ್ನು ಗ್ರಾಮಾಂತರ ಪ್ರದೇಶದಲ್ಲಿಯೂ ಕಾಣಬಹುದು. ಕುಮಟ, ಹೊನ್ನಾವರ, ಶಿರಸಿ, ಮುರ್ಡೇಶ್ವರ, ಸೋಡಿಗದ್ದೆ ಮುಂತಾದವು ಮುಖ್ಯ ಕಲಾ ಕೇಂದ್ರಗಳಾಗಿವೆ.

ಬೆಳ್ಳಿಯ ಆಭರಣಗಳು ಮತ್ತು ಕಲಾತ್ಮಕ ವಸ್ತುಗಳು: ಜಿಲ್ಲೆಯ ನಗರ, ಪಟ್ಟಣ ಹಾಗು ಪ್ರಮುಖ ಗ್ರಾಮಗಳಲ್ಲಿಯೂ ಬೆಳ್ಳಿಯ ಆಭರಣ ತಯಾರಿಕೆಯನ್ನು ಕಾಣಬಹುದು. ಈ ಕಲೆಯಲ್ಲಿ ದೈವಜ್ಞ ಬ್ರಾಹ್ಮಣ ಕುಶಲಕರ್ಮಿಗಳನ್ನು ಹೆಚ್ಚಾಗಿ ಕಾಣಬಹುದು. ಗುಡಿಗಾರರು ಹಾಗೂ ಆಚಾರರು ಬೆಳ್ಳಿಯ ಹಾಳೆಗಳಲ್ಲಿ ಪ್ರತಿಮೆಯ ಹೊದಿಕೆ, ತೇರಿನ ಹೊದಿಕೆ, ದೇವಾಲಯದ ಬಾಗಿಲುಗಳ ಹೊದಿಕೆ, ಪೂಜಾವಸ್ತುಗಳು, ಪಲ್ಲಕ್ಕಿ, ಕಂಬದ ಹೊದಿಕೆ ಹೀಗೆ ಅನೇಕ ವಸ್ತುಗಳನ್ನು ಕುಶಲಕರ್ಮಿಗಳು ತಯಾರಿಸುತ್ತಾರೆ. ಆಭರಣಗಳಾದ ಕಾಲುಂಗುರ, ಪಿಲ್ಲಿ ಕಾಲ ಸರಪಳಿ, ಕಡೆ, ಉಡದಾರ, ಗೆಜ್ಜೆ, ಹೇರ್‌ಪಿನ್, ಬಳೆ, ಚೆಂಬು, ಹೀಗೆ ಅನೇಕ ಸೌಂಧರ್ಯದ ಆಭರಣ ವಸ್ತುಗಳನ್ನು ತಯಾರಿಸುತ್ತಾರೆ. ಶಿರಸಿ, ಸಿದ್ದಾಪುರ, ಯಲ್ಲಾಪುರ, ಅಂಕೋಲ, ಕುಮಟ, ಹೊನ್ನಾವರ, ಶಿರಸಿ, ಮುರ್ಡೇಶ್ವರ, ಮುಂತಾದವು ಮುಖ್ಯ ಕಲಾ ಕೇಂದ್ರಗಳಾಗಿವೆ.

ಹಸೆ ಚಿತ್ತಾರ: ಹಸೆ ಚಿತ್ತಾರ, ಬುಟ್ಟಿ ಚಿತ್ತಾರ ಹಗೂ ಗೋಡೆ ಚಿತ್ತಾರ ಈ ಜಿಲ್ಲೆಯ ಚಿಕಣಿ ಜನಪದರ ಚಿತ್ರಕಲೆಯಾಗಿದೆ. ಹಳ್ಳಿಗಳಲ್ಲಿ ಮಹಿಳೆಯರು ತಮ್ಮ ಮನೆಯ ಗೋಡೆ, ಬಾಗಿಲು ಚೌಕಟ್ಟು ಹಗೂ ಹೊಸ್ತಿಲಲ್ಲಿ ಚಿತ್ತಾಕರ್ಷಕ ಚಿತ್ತಾರಗಳನ್ನು ಬಿಡಿಸುತ್ತಾರೆ. ಕೆಮ್ಮಣ್ಣು, ಅಕ್ಕಿ ದ್ರವ, ತಾರೇಕಾಯಿ ದ್ರವ ಮುಂತಾದ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಕೆ ಮಾಡಿಕೊಂಡು ಬಿದಿರಿನ ಹಾಗೂ ನಾರಿನ ಕುಂಚಗಳಿಂದ ಚಿತ್ರ ಬಿಡಿಸುತ್ತಾರೆ. ಭೂಮಿ ಹುಣ್ಣಿಮೆಯ ದಿನ ಬಿದಿರಿನ ಬುಟ್ಟಿಗಳಿಗೆ ಕೆಮ್ಮಣ್ಣನ್ನು ಬಳಿದು, ನೆನಸಿದ ಅಕ್ಕಿಯನ್ನು ರುಬ್ಬಿ ಸೋಸಿ ದ್ರವದಿಂದ ಚಿತ್ತಾರ ಬಿಡಿಸುತ್ತಾರೆ. ದೀವರು, ಹರಿಜನರು, ಮಡಿವಾಳರು, ಹವ್ಯಕರು ಹೀಗೆ ವಿವಿಧ ಪಂಗಡದ ಜನರು ಈ ಕಲೆಯಲ್ಲಿ ನಿರತರಾಗಿದ್ದಾರೆ. ಸಿದ್ದಾಪುರ ತಾಲೂಕಿನ ಕಲ್ಲೂರು, ಮನಮನೆ, ಲಂಬಾಪುರ, ಐಸೂರು, ಗೊಳಗೋಡು ಹಾಗೂ ಕವಚೂರು ಗ್ರಾಮಗಳು ಮುಖ್ಯ ಕಲಾ ಕೇಂದ್ರಗಳಾಗಿವೆ. ಈ ಕಲೆಯನ್ನು ಮಹಾರಾಷ್ಟ್ರದ ವಾರ್ಲಿ ಕಲೆಯಂತೆ ಅಭಿವೃದ್ಧಿಪಡಿಸುವ ಪ್ರಯತ್ನಗಳು ನಡೆದಿವೆ.

ಬಿದಿರು ಹಾಗೂ ಬೆತ್ತದ ಕಲೆ: ಬಿದಿರು ಹಾಗೂ ಬೆತ್ತ ಈ ಜಿಲ್ಲೆಯಲ್ಲಿ ಬೆಳೆಯುವುದರಿಂದ ಅದನ್ನು ಬಳಕೆ ಮಾಡಿ ವಿವಿಧ ಕಲಾವಸ್ತುಗಳ ತಯಾರಿಕೆಯನ್ನು ಕುಶಲ ಕರ್ಮಿಗಳು ಮಾಡುತ್ತಾರೆ. ಚಾಪೆ, ಬುಟ್ಟಿ, ಮೊರ, ಹಡಗು, ದೀಪ, ಹೂ ಬುಟ್ಟಿ, ಪ್ರಾಣಿ, ಪಕ್ಷಿ ಗೋಡೆ ಅಲಂಕರಿಕ ವಸ್ತುಗಳು, ಆಟಿಕೆ, ಕಸದ ಬುಟ್ಟಿ ಹೀಗೆ ವಿವಿಧ ವಸ್ತುಗಳು ಬಿದಿರಿನಲ್ಲಿ ತಯಾರಾಗುತ್ತವೆ. ಬೆತ್ತದಿಂದ ಕುರ್ಚಿ, ಮೇಜು, ಮಂಚ, ಟೀಪಾಯಿ, ಊರುಗೋಲು ಮುಂತಾದ ವಸ್ತುಗಳನ್ನು ನಿರ್ಮಿಸುತ್ತಾರೆ. ಕೇಂದ್ರ ಸರ್ಕಾರದ ತರಬೇತಿ ಕೇಂದ್ರ ಅಂಕೋಲದ ಹತ್ತಿರದ ಬಾವಿಕೆರಿಯಲ್ಲಿ ತರಬೇತಿ ನೀಡುತ್ತಿದೆ. ಅನೇಕ ಸ್ವಯಂ ಸೇವಾ ಸಂಸ್ಥೆಗಳು ಈ ಕಲೆಯನ್ನು ಪ್ರೋತ್ಸಾಹಿಸುತ್ತಿವೆ. ಸಿದ್ದಿ ಮತ್ತು ಹಾಲಕ್ಕಿ ಜನಾಂಗದ ಕುಶಲ ಕರ್ಮಿಗಳು ಕೂಡ ಈ ಕಲೆಯಲ್ಲಿ ನಿರತರಾಗಿದ್ದಾರೆ. ಶಿರಾಲಿ, ಅಂಕೋಲ, ಯಲ್ಲಾಪುರ, ದೊಡ್ಡಮನೆ, ಮಳಗಿ, ಗೋಕರ್ಣ, ಬೆಳಂಬರ, ಹಲಗೇರಿ ಮುಂತಾದವು ಪ್ರಮುಖ ಕೇಂದ್ರಗಳಾಗಿವೆ. ಬಾಳೇಗುಳಿ ಯಲ್ಲಿರುವ ಅರಣ್ಯ ಇಲಾಖೆಯ ಬೆತ್ತದ ವಸ್ತುಗಳ ನ್ಯಾಯಬೆಲೆಯ ಮಾರಾಟ ಮಳಿಗೆ ಕಲಾಕಾರರಿಗೆ ಸಹಾಯ ಒದಗಿಸುತ್ತದೆ.

ಯೋಜನಾ ಆಯೋಗ ಬಿದಿರನ್ನು ಬೆಳೆಯುವುದರಿಂದ ಹೆಚ್ಚು ಮೌಲ್ಯಾಧಾರಿತ ಕಲಾವಸ್ತುಗಳ ತಯಾರಿಕೆ ಹಗೂ ಮಾರಾಟ ಮಾಡುವವರೆಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಯೋಜನೆಯನ್ನು ಜಾರಿಗೊಳಿಸಲು ಸಜ್ಜಾಗುತ್ತಿದೆ. ಈ ಯೋಜನೆಯಿಂದ ಜಿಲ್ಲೆಯಲ್ಲಿ ಇನ್ನಷ್ಟು ಬಿದಿರಿನ ಹಸಿರು ವಲಯ ನಿರ್ಮಾಣವಾಗಲಿದೆ ಹಾಗೂ ಹೆಚ್ಚಿನ ಕುಶಲ ಕರ್ಮಿಗಳಿಗೆ ಉದ್ಯೋಗಾವಕಾಶ ದೊರೆಯಲಿದೆ.

ಲಾವಂಚ ಕಲೆ: ಪ್ರಕೃತಿಯಲ್ಲಿ ಸಹಜವಾಗಿ ದೊರೆಯುವ ಸುಗಂಧ ವಸ್ತುಗಳಿಗೆ ಬೇಡಿಕೆ ಇದೆ. ಪರಿಮಳದ ವಸ್ತುಗಳು ಮಾನವನ ಮನಕ್ಕೆ ಮುದ ನೀಡಿ ಪರಿಸರ ಮಾಲಿನ್ಯ ಕಡಿಮೆ ಮಾಡುವ ಗುಣ ಹೊಂದಿವೆ. ಸುವಾಸನೆಯುಕ್ತ ಲಾವಂಚ ಬೇರಿನಿಂದ ಅನೇಕ ಕಲಾವಸ್ತುಗಳನ್ನು ತಯಾರಿಸುವ ಕಲೆ ಉತ್ತರ ಕನ್ನಡ ಜಿಲ್ಲೆಗೆ ಸೀಮಿತವಾಗಿದೆ. ಅಂದರೆ ಲಾವಂಚದ ಲಭ್ಯತೆಯು ಜಿಲ್ಲೆಯಲ್ಲಿದೆ. ಮೊದಲಿನಿಂದಲೂ ಲಾವಂಚದ ಬೇರನ್ನು ರೇಷ್ಮೆ ಬಟ್ಟೆಗಳಲ್ಲಿ ಇರಿಸುವ ಪರಿಪಾಠವಿದೆ, ಯಾಕೆಂದರೆ, ಇದರಿಂದ ಬಟ್ಟೆ ಕೆಟ್ಟು ಹೋಗುವುದಿಲ್ಲ. ಲಾವಂಚದ ಸುಗಂಧಿತ ಎಣ್ಣೆ ಆಯುರ್ವೇದ ಔಷಧದಲ್ಲಿ ಬಳಕೆಯಾಗುತ್ತದೆ. ಭಟ್ಕಳ ತಾಲೂಕಿನ ಬೆಂಗ್ರೆಯಲ್ಲಿ ಮುಖ್ಯ ಘಟಕವಿದ್ದು, ಮಹಿಳೆಯರಿಗೆ ತುಂಬಾ ಅನುಕೂಲಕರ ಉದ್ಯೋಗವಾಗಿದೆ. ಪರ್ಸ್, ಬ್ಯಾಗ್, ಹ್ಯಾಟ್, ಟೋಪಿ, ಗೋಡೆ ಅಲಂಕಾರಿಕ ವಸ್ತುಗಳು, ಪೆಟ್ಟಿಗೆಗಳು, ಪ್ರಾಣಿ, ಪಕ್ಷಿ, ಪರದೆ, ಚಪ್ಪಲಿ, ನಿತ್ಯೋಪಯೋಗಿ ಹಾಗೂ ಅಲಂಕಾರಿಕ ವಸ್ತುಗಳು ತಯಾರಾಗುತ್ತವೆ.

ಚಾಪೆ ನೇಯ್ಗೆ: ಇಳಿ ವಯಸ್ಸಿನ ಗ್ರಾಮೀಣ ಮಹಿಳೆಯರು ಎಳೆಯ ಈಚಲ ಎಲೆಯನ್ನು ತಂದು ನೆರಳಲ್ಲಿ ಒಣಗಿಸಿ ಬಣ್ಣ ಮಾಡಿ ಬಿಡುವಿನ ವೇಳೆಯಲ್ಲಿ ನಿತ್ಯೋಪಯೋಗಿ ಚಾಪೆಯನ್ನು ಕಲಾತ್ಮವಾಗಿ ಹೆಣೆಯುತ್ತಾರೆ. ನಾಲ್ಕು ಇಂಚಿನ ಪಟ್ಟಿಯನ್ನು ಹೆಣೆದು ತೋಡಿಸುವ ತಂತ್ರ ತುಂಬಾ ಜಾಣ್ಮೆಯದಾಗಿರುತ್ತದೆ. ಚಾಪೆಯಲ್ಲಿ ಅನೇಕ ವಿನ್ಯಾಸಗಳನ್ನು ಕಾಣಬಹುದು, ಸಿದ್ದಾಪುರ,

ತಾಲೂಕಿನ ಹಸವಂತೆ, ಕಲ್ಲೂರು, ಮನಮನೆ, ಒಂದಾನೆ, ಲಂಬಾಪುರ, ಗೊಳಗೋಡು, ಕವಚೂರು ಹಾಗೂ ಇನ್ನಿತರ ಗ್ರಾಮಗಳಲ್ಲಿ ಈ ಕಲೆ ತುಂಬಾ ಪ್ರಚಲಿತದಲ್ಲಿದೆ.

ಕಾವಿ ಕಲೆ: ಕಾವಿ ಕಲೆ ಇದೊಂದು ಕರಾವಳಿ ಜಿಲ್ಲೆಗಳಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಇಂದಿಗೂ ಕೂಡ ಸಾಂಪ್ರದಾಯಿಕವಾದ ಪುರಾತನ ದೇವಾಲಯಗಳಲ್ಲಿ ಈ ಕಲೆಯನ್ನು ಕಾಣಬಹುದು. ಕುಮಟಾದ ಮಹಾಲಸ ನಾರಾಯಣಿ ದೇವಿ ದೇವಾಲಯದಲ್ಲಿ ಈ ಕಲೆಯ ಉತ್ತಮ ವಿನ್ಯಾಸಗಳನ್ನು ಕಾಣಬಹುದು. ಇದೇ ಪಟ್ಟಣದ ಗೋಪಾಲಕೃಷ್ಣ ವೆಂಕಟರಮಣ ಮಠದಲ್ಲೂ ಕಾವಿ ವಿನ್ಯಾಸಗಳಿವೆ. ಅವಕ್ಕೆಲ್ಲಾ ಎನಾಮಲ್ ಪೈಂಟ್ ಮಾಡಿದ್ದಾರೆ. ಶಿರಸಿಯ ಮಾರಿಕಾಂಬಾ ದೇವಾಲುದಲ್ಲೂ ಎನಾಮಲ್ ಪೈಂಟ್ ಮಾಡಿ ಮೂಲ ಚಿತ್ರಗಳ ಸೊಬಗನ್ನು ಮುಚ್ಚಿ ಬಿಡಲಾಗಿದೆ.

ಕಲಾತ್ಮಕ ಕುಂಭ ಕಲೆ: ಮೆದುವಾದ ಮಣ್ಣು ಜಿಲ್ಲೆಯಲ್ಲಿ ದೊರಕುವುದರಿಂದ ಕುಂಬಾರರು ಸಾಂಪ್ರದಾಯಿಕವಾಗಿ ಈ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕುಂಬಾರನ ಚಕ್ರ, ಬಿದಿರಿನ ಹಾಗೂ ಮರದ ಸಾಮಾನ್ಯ ಸಲಕರಣೆಗಳನ್ನು ಬಳಕೆ ಮಾಡಿ ದಿನ ಬಳಕೆಯ ಹಾಗೂ ಅಲಂಕಾರಿಕ ಕುಡಿಕೆ, ಮಡಿಕೆ, ಬಾನಿ, ಹೂಜಿ, ಹೂದಾನಿ, ಧೂಪಾರ್ತಿ, ತವೆ, ದೀಪಸ್ತಂಭ, ಹುಂಡಿ, ಭಿತ್ತಿ ಚಿತ್ರ, ಗೋಡೆ ಅಲಂಕಾರಿಕ ವಸ್ತುಗಳು ಮತ್ತು ಆಟಿಕೆಗಳು ಹೀಗೆ ಅನೇಕ ಕಲಾ ವಸ್ತುಗಳನ್ನು ತಯಾರಿಸುತ್ತಾರೆ.

ಬನವಾಸಿಯಲ್ಲಿ ಕರಾವಳಿ ಸಂಸ್ಕೃತಿಯನ್ನು ಬಿಂಬಿಸುವ ಯಕ್ಷಗಾನದ ಮುಖವರ್ಣಿಕೆಗಳು, ಪ್ರಾಣಿ ಹಾಗೂ ಪಕ್ಷಿ ಸಂಕುಲ, ಮಾನವ ಮೂರ್ತಿಗಳನ್ನು ಶ್ರೀಪಾದ ಪುರೋಹಿತರು ತಮ್ಮ ವರ್ಣಲೋಕದಲ್ಲಿ ತಯಾರಿಸುತ್ತಾರೆ. ಬಾಳೆಗುಳಿಯ ವೀರಭದ್ರಪ್ಪ ಉತ್ತಮ ಕುಂಭಕಲಾಕಾರ ರಾಗಿದ್ದಾರೆ. ಬನವಾಸಿ ಶಿರಸಿ, ಕಾನಗೋಡು, ಮುರ್ಡೇಶ್ವರ, ಕುಂಬಾರ ಕೊಪ್ಪ, ಹಳಿಯಾಳ ಮುಂತಾದ ಸ್ಥಳಗಳಲ್ಲಿ ಈ ಕಲೆಯನ್ನು ಕಾಣಬಹುದಾಗಿದೆ.

ಜಿಲ್ಲೆಯ ಮುಂಡಗೋಡು ಪ್ರದೇಶದಲ್ಲಿ ನೆಲೆಸಿದ ಟಿಬೇಟಿಯನ್ನರು ಕಾಮನ ಬಿಲ್ಲಿನ ವರ್ಣದ ರತ್ನಗಂಬಳಿ ತಯಾರಿಕೆಗೆ ಹೆಸರುವಾಸಿಯಾಗಿದ್ದಾರೆ. ಹಿಟ್ಟಂಡೆ ಹುಲ್ಲಿನಿಂದ ಆಕರ್ಷಕ ದಿನಬಳಕೆಯ ವಸ್ತುಗಳನ್ನು ತಯಾರಿಸುತ್ತಾರೆ. ಭತ್ತದ ಗೊನೆಯಿಂದ ಅಂದದ ತೋರಣ ಮಾಡುತ್ತಾರೆ. ಹೀಗೆ ಉತ್ತರ ಕನ್ನಡ ಜಿಲ್ಲೆಯು ಇನ್ನೂ ಅನೇಕ ಕುಶಲ ಕಲೆಗಳ ಆಗರವಾಗಿ, ತನ್ನ ವಿಶಿಷ್ಟ ಸಂಸ್ಕೃತಿಯನ್ನು ಕಾಯ್ದುಕೊಂಡಿರುವ ಜಿಲ್ಲೆಯಾಗಿದೆ.

೪.೧೨. ಸಿದ್ದಿ ಪರಿಶಿಷ್ಟ ಬುಡಕಟ್ಟು ಜನಾಂಗದ ಇತಿಹಾಸ ಮತ್ತು ಜನಸಂಖ್ಯೆ

ಉತ್ತರ ಕನ್ನಡದ ಗೆಜೆಟಿಯರ್‌ನಲ್ಲಿ ಉಲ್ಲೇಖವಾಗಿರುವಂತೆ ಸಿದ್ದಿ ಜನಾಂಗೀಯ ಸಮುದಾಯ ದವರು ವಸಾಹತುಗಳ ಕಾಲ ಮತ್ತು ಅದಕ್ಕೂ ಪೂರ್ವದಲ್ಲಿ ಆಫ್ರಿಕಾದಿಂದ ಗುಲಾಮರಾಗಿ ಮಾರಾಟವಾಗಿ ಬಂದಂತಹ ಜನಸಮೂಹವಾಗಿದೆ. ಗುಂಗುರು ಕೂದಲು, ದಪ್ಪ ತುಟಿ,

ಚಪ್ಪಟೆಯಾಕಾರದ ಮೂಗು, ಕಪ್ಪು ಮೈಬಣ್ಣ ಇವು ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳ ಶಾರೀರಿಕ ಲಕ್ಷಣಗಳಾಗಿವೆ, ಇಂತಹ ಲಕ್ಷಣಗಳುಳ್ಳ ಇವರು ನೀಗ್ರೋ ಜನಾಂಗೀಯ ಲಕ್ಷಣ ಗಳುಳ್ಳವರಾಗಿದ್ದಾರೆ ಎಂದು ಗುರುತಿಸಲಾಗಿದೆ. ಮಾನವಕುಲ ಅಧ್ಯಯನಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರ ಪ್ರಕಾರ ಭಾರತದಲ್ಲಿ ಯಾವುದೇ ಸಮೂಹವು ನೀಗ್ರೋ ಲಕ್ಷಣಗಳನ್ನು ಹೊಂದಿಲ್ಲ, ಆದ್ದರಿಂದ ನೀಗ್ರೋ ಜನಾಂಗೀಯ ಲಕ್ಷಣಗಳನ್ನು ಹೊಂದಿರುವ ಇವರನ್ನು ಮೂಲತಃ ಭಾರತೀಯರು ಎಂದು ಪರಿಗಣಿಸಿಲ್ಲ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಗೆಜಿಟೀಯರ್‌ನಲ್ಲಿ ಇರುವಂತೆ ಸಿದ್ದಿಗಳ ಮೂಲವನ್ನು ಆಫ್ರಿಕ ಎಂದು ಒಪ್ಪಿಕೊಳ್ಳಲಾಗಿದೆ.

ಪೋರ್ಚುಗೀಸರ ಆಡಳಿತಾವಧಿಯಲ್ಲಿ ಭಾರತಕ್ಕೆ ಆಫ್ರಿಕಾದ ನೀಗ್ರೋ ಗುಲಾಮರ ವ್ಯಾಪಾರವಾಗುತ್ತಿತ್ತು. ಗುಲಾಮರ ವ್ಯಾಪಾರಕ್ಕೆ ಗೋವಾದಲ್ಲಿ ಒಳ್ಳೆಯ ಮಾರುಕಟ್ಟೆ ಇತ್ತು, ಆದ್ದರಿಂದ ಗೋವಾ ಪ್ರಮುಖ ಗುಲಾಮರ ಮಾರುಕಟ್ಟೆಯಾಗಿತ್ತು. ಪೋರ್ಚುಗೀಸರು ಆಫ್ರಿಕನ್ ನೀಗ್ರೋಗಳನ್ನು ಆಫ್ರಿಕಾದ ಮೊಜಾಂಬಿಕ್‌ನಿಂದ ಭಾರತಕ್ಕೆ ತಂದರು. ದೈಹಿಕವಾಗಿ ಬಲಶಾಲಿ ಗಳಾಗಿದ್ದ ಇವರನ್ನು ಕೀಳು ಮಟ್ಟದ ಮತ್ತು ಒರಟಾದ ಶ್ರಮದಾಯಕ ಕೆಲಸಗಳನ್ನು ಮಾಡಲು ಬಳಸುತ್ತಿದ್ದರು. ಡಚ್ಚರೂ ಮತ್ತು ಅರಬ್ಬರು ಪೋರ್ಚುಗೀಸರಷ್ಟಲ್ಲದಿದ್ದರೂ, ಆಫ್ರಿಕಾದಿಂದ ಭಾರತಕ್ಕೆ ನೀಗ್ರೋಗಳನ್ನು ತಂದು ಮಾರಾಟ ಮಾಡಿದ್ದಾರೆ ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾ ಧಾರಗಳಿವೆ. ಅವರು ನೀಗ್ರೋಗಳನ್ನು ದಕ್ಷಿಣ ಭಾರತಕ್ಕೆ ಆಮದು ಮಾಡಿಕೊಳ್ಳುತ್ತಿದ್ದರು.

ಐತಿಹಾಸಿಕ ದಾಖಲೆಗಳ ಪ್ರಕಾರ, ಸಿದ್ದಿ ಎಂಬ ಪದವನ್ನು ನೀಗ್ರೊ ಎಂಬ ಪದಕ್ಕೆ ಸಮಾನಾರ್ಥದಲ್ಲಿ ಉಪಯೋಗಿಸಿದಂತೆ ತೋರುತ್ತದೆ. ಇಂಗ್ಲೆಂಡಿನಿಂದ ದಕ್ಷಿಣ ಭಾರತ ಮತ್ತು ಶ್ರೀಲಂಕಾ ದೇಶಗಳಿಗೆ ಹಡಗು ಪ್ರಯಾಣ ಮಾಡುವಾಗ ಹಡಗನ್ನು ನಡೆಸುವವರನ್ನು ಸಂಬೋಧಿಸಲು ಸಿದ್ದಿ ಎಂಬ ಪದವನ್ನು ನೀಗ್ರೋ ಎಂಬ ಪದಕ್ಕೆ ಸಮಾನಾರ್ಥವಾಗಿ ಉಪಯೋಗಿಸಲಾಗುತ್ತಿತ್ತು.

ಭಾರತದಲ್ಲಿನ ಆಫ್ರಿಕಾದ ನೀಗ್ರೋಗಳ ರಾಜಕೀಯ ಇತಿಹಾಸದಿಂದ ತಿಳಿದುಬಂದಿರುವಂತೆ ಅವರನ್ನು ಗುಲಾಮರನ್ನಾಗಿ ಭಾರತಕ್ಕೆ ತರಲಾಗಿತ್ತು ಮತ್ತು ನಿಧಾನವಾಗಿ ಅಧಿಕಾರವನ್ನು ಪಡೆದು ಸಣ್ಣ ಪುಟ್ಟ ಸಂಸ್ಥಾನಗಳ ಮುಖ್ಯಸ್ಥರೂ ಆಗಿದ್ದರು, ಬಂಗಾಳದಲ್ಲಿ ಆಫ್ರಿಕಾದ ನೀಗ್ರೋಗಳು ಅಧಿಕಾರವನ್ನು ಪಡೆದು ಸಣ್ಣ ಪುಟ್ಟ ರಾಜ್ಯಗಳಲ್ಲಿ ಆಡಳಿತವನ್ನು ನಡೆಸಿದ್ದಾರೆ. ಇದಕ್ಕೆ ಪೂರಕವಾಗಿ ಆರ್ ಕೂಪ್‌ಲ್ಯಾಂಡ್(೧೯೩೮) ಅವರು ಆಕ್ಸಸ್ ದೇಶದಿಂದ ಏಷ್ಯಾದ ದೇಶಕ್ಕೆ ರಾಜನನ್ನು ಆಯ್ಕೆ ಮಾಡಲಾಗಿತ್ತು, ರಾಜನು ಮಾಡಿದ ಮೊದಲನೇ ಕೆಲಸವೆಂದರೆ ತನ್ನ ರಾಜ್ಯದಿಂದ ಆಫ್ರಿಕನ್‌ರನ್ನು ಹೊರಹಾಕಿದ್ದು. ಈ ರೀತಿ ಹೊರಹಾಕಲ್ಪಟ್ಟವರಲ್ಲಿ ಸಾವಿರಾರು ಜನ ಆಫ್ರಿಕನ್ ನೀಗ್ರೋ ಜನಾಂಗದವರಾಗಿದ್ದರು, ನಂತರ ಅವರು ದೆಹಲಿಯಿಂದ ಜುನಾಪುರ, ಗುಜರಾತ್, ಮತ್ತು ದಕ್ಷಿಣ ಭಾರತದ ಕಡೆಗೆ ಬಂದರು, ಅಲ್ಲಿಯೂ ಸಹ ಗುಲಾಮರ ವ್ಯಾಪಾರ ನಡೆದು ಗಣನೀಯ ಪ್ರಮಾಣದಲ್ಲಿ ನೀಗ್ರೋಗಳ ಜನಸಂಖ್ಯೆ ಹೆಚ್ಚಾಯಿತು ಎಂದು ಹೇಳಿದ್ದಾರೆ. ಈ ಅವಧಿಯಲ್ಲಿಯೇ ದಕ್ಷಿಣದಲ್ಲಿ ಆದಿಲ್‌ಶಾಹಿ ಮನೆತನದ ಆಡಳಿತವಿತ್ತು, ಆದಿಲ್‌ಶಾಹಿಗಳು ದಕ್ಷಿಣದಲ್ಲಿ

ಬೆಳಗಾವಿ ಪ್ರಾಂತ್ಯದ ಪಶ್ಚಿಮಘಟ್ಟ ಪ್ರದೇಶದಲ್ಲಿ ನೀಗ್ರೋಗಳ ಒಂದು ಬೆಟಾಲಿಯನ್‌ನನ್ನು ಇಟ್ಟಿದ್ದರು. ವಿಜಯಪುರದ ಇಬ್ರಾಹೀಂ ಆದಿಲ್‌ಶಾಹಿ ಅವರು ಸೈನ್ಯದಲ್ಲಿನ ವಿದೇಶಿ ಅಧಿಕಾರಿಗಳು ಮತ್ತು ಸೈನಿಕರನ್ನು ಹೊರಹಾಕಿದನು. ವಿಜಯಪುರದ ಆದಿಲ್‌ಶಾಹಿ ಸಾಮ್ರಾಜ್ಯದ ಪತನಾನಂತರ, ಇಲ್ಲಿನ ನೀಗ್ರೋಗಳು ಹೈದರಾಬಾದ್ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ನೆಲೆಯನ್ನು ಕಂಡು ಕೊಂಡಿರಬಹುದು.

ವಿವಿಧ ಧಾರ್ಮಿಕ ಸಮುದಾಯಕ್ಕೆ ಸೇರಿದ ಸಿದ್ದಿ ಜನಾಂಗದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ವಿವರಣೆಗಳು ವಿಭಿನ್ನ ರೀತಿಯ ಚಿತ್ರಣವನ್ನು ನೀಡುತ್ತವೆ. ಸಿದ್ದಿ ಮುಸಲ್ಮಾನರು ಮತ್ತು ಸ್ಥಳೀಯ ಇತರ ಜನರು ಉತ್ತರ ಕನ್ನಡ ಜಿಲ್ಲೆಯ ಮುಸ್ಲಿಂ ಸಿದ್ದಿಗಳ ಇತಿಹಾಸವನ್ನು ೧೬ನೇ ಶತಮಾನದ ವಿಜಯಪುರ ಸಾಮ್ರಾಜ್ಯದ ಮೂಲಕ ಗುರುತಿಸುತ್ತಾರೆ. ಇದನ್ನು ಸಮರ್ಥಿಸಲು ಅವರು ಸಿದ್ದಿ ಮುಸಲ್ಮಾನರ ಅಡ್ಡ ಹೆಸರು(ಸರ್ ನೇಮ್)ಗಳಾದ ನಾಯ್ಕ್, ಹಲವಾಲದಾರ್, ಪಟೇಲ್ ಇತ್ಯಾದಿಗಳನ್ನು ಬಳಸುತ್ತಾರೆ. ಸಿದ್ದಿ ಜನರು ತಮಗೆ ಈ ಹೆಸರುಗಳು ವಿಜಯಪುರದ ರಾಜನಿಂದ ಬಂದವುಗಳು ಎಂದು ಹೇಳುತ್ತಾರೆ. ಕ್ರಿಶ್ಚಿಯನ್ ಸಿದ್ದಿಗಳು ತಮ್ಮ ಮೂಲವನ್ನು ಗೋವಾದ ಕಡೆಯಿಂದ ಗುರುತಿಸಿಕೊಳ್ಳುತ್ತಾರೆ. ತಮ್ಮನ್ನು ಪೋರ್ಚುಗೀಸರು ಆಫ್ರಿಕಾದಿಂದ ಇಲ್ಲಿಗೆ ಕೊಂಡು ಕೊಂಡು ತಂದರು ಮತ್ತು ಅಲ್ಲಿಂದ ಅವರು ಗೋವಾ ರಾಜ್ಯಕ್ಕೆ ಹೊಂದಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಗೆ ಬಂದರು ಎಂದು ಹೇಳುತ್ತಾರೆ. ಹಿಂದು ಸಿದ್ದಿಗಳು ನಮ್ಮ ಪೂರ್ವಜರನ್ನು ಅರಬ್ ವ್ಯಾಪಾರಿಗಳು ಇಲ್ಲಿಗೆ ತಂದು ಸ್ಥಳೀಯ ಹವ್ಯಕ ಬ್ರಾಹ್ಮಣರಿಗೆ ಮಾರಾಟ ಮಾಡಿದರು, ಇದಕ್ಕೆ ಪ್ರತಿಯಾಗಿ ಅವರು ಸ್ಥಳೀಯ ಉತ್ಪನ್ನಗಳನ್ನು ಪಡೆಯುತ್ತಿದ್ದರು ಎಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. ಒಬ್ಬ ಹವ್ಯಕ ಬ್ರಾಹ್ಮಣ ವ್ಯಕ್ತಿ ಹೇಳುವ ಪ್ರಕಾರ ಅವರ ಮುತ್ತಾತ ಹಲವಾರು ಸಿದ್ದಿಗಳನ್ನು ಗುಲಾಮರನ್ನಾಗಿ ಇಟ್ಟುಕೊಂಡಿದ್ದ. ಸ್ಥಳೀಯರು ಹೇಳುವ ಮತ್ತೊಂದು ಕಥೆಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಪ್ರಬಲ ಜಾತಿಯ ಜಮೀನ್ದಾರರು ಅರಬ್ ವ್ಯಾಪಾರಸ್ಥರಿಂದ ಹಲವಾರು ಸಿದ್ದಿ ಜನರನ್ನು ಕೊಂಡು ತಂದಿದ್ದನು ಮತ್ತು ಹೈದರಾಲಿ ಆ ರಾಜ್ಯವನ್ನು ಆಕ್ರಮಿಸಿಕೊಂಡ ನಂತರ ಅವರೆಲ್ಲರೂ ಆ ರಾಜ್ಯದಿಂದ ಸ್ವತಂತ್ರವಾಗಿ ಕಾರವಾರ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹರಡಿಕೊಂಡರು.

ಸಿದ್ದಿ ಪರಿಶಿಷ್ಟ ಬುಡಕಟ್ಟು ಜನರು ಉತ್ತರ ಕನ್ನಡ ಜಿಲ್ಲೆಯ ಘಟ್ಟ ಪ್ರದೇಶಾದ್ಯಂತ ಹರಡಿಕೊಂಡಿದ್ದಾರೆ. ಸಿದ್ದಿ ಜನರು ಜಿಲ್ಲೆಯ ಯಲ್ಲಾಪುರ, ಅಂಕೋಲ, ಮುಂಡಗೋಡು, ಹಳಿಯಾಳ, ಜೋಯಿಡಾ ಮತ್ತು ದಾಂಡೇಲಿ ಪ್ರದೇಶಗಳ ಹಳ್ಳಿಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಇವರು ಬೆಳಗಾವಿ ಜೋಗ್‌ಫಾಲ್ಸ್ ರಸ್ತೆಯ ಉತ್ತರ ದಕ್ಷಿಣ ದಿಕ್ಕುಗಳ ಎರಡೂ ಕಡೆಗಳಲ್ಲಿ ಎರಡರಿಂದ ಐದು ಕಿಲೋ ಮೀಟರ್‌ಗಳಷ್ಟು ಒಳಗೆ ಕಾಡಿನಲ್ಲಿರುವ ಹಳ್ಳಿಗಳಲ್ಲಿ ನೆಲೆಸಿದ್ದಾರೆ, ಹುಬ್ಬಳ್ಳಿ ಕಾರವಾರ ರಸ್ತೆಯ ಎರಡೂ ಕಡೆಗಳಲ್ಲಿ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಸಿದ್ದಿ ಜನರು ನೆಲೆಸಿರುವ ಹಳ್ಳಿಗಳು ಕಂಡುಬರುತ್ತವೆ. ಬೆಳಗಾವಿ ಜೋಗ್‌ಫಾಲ್ಸ್ ರಸ್ತೆಯಲ್ಲಿ ಸಿದ್ದಿ ಜನರು ನೆಲೆಸಿರುವ ಹಳ್ಳಿಗಳು ಹಳಿಯಾಳ ತಾಲೂಕಿನ ಗಾವೂದಹಳ್ಳಿಯಿಂದ ಪ್ರಾರಂಭವಾಗಿ

ಭಾರತೀಹಳ್ಳಿಯವರೆಗೆ ಹರಡಿಕೊಂಡಿವೆ. ಹುಬ್ಬಳ್ಳಿ ಕಾರವಾರ ರಸ್ತೆಯಲ್ಲಿ ಯಲ್ಲಾಪುರ ತಾಲೂಕಿನ ಕಿರುವತ್ತಿ ಎಂಬ ಹಳ್ಳಿಯಿಂದ ಪ್ರಾರಂಭವಾಗಿ ಸುಂಕಸಾಳ ಎಂಬ ಹಳ್ಳಿಯವರೆಗೆ ವಿಸ್ತರಿಸಿವೆ. ಈ ಎರಡೂ ರಸ್ತೆಗಳ ಇಕ್ಕೆಲಗಳಲ್ಲಿನ ಒಳಪ್ರದೇಶಗಳಲ್ಲಿ ಸಿದ್ದಿ ಜನರು ನೆಲೆಸಿರುವ ಹಳ್ಳಿಗಳು ಕಂಡುಬರುತ್ತವೆ. ಹಿಂದೆ ಈ ಜನರು ನೆಲೆಸಿದ್ದ ಹಳ್ಳಿಗಳ ನಡುವಿನ ಸಂಪರ್ಕಕ್ಕೆ ಕಾಲುದಾರಿ ಅಥವಾ ಎತ್ತಿನಗಾಡಿಯ ದಾರಿಯನ್ನು ಬಳಸುತ್ತಿದ್ದರು. ಮಳೆಗಾಲದಲ್ಲಿ ನದಿತೊರೆಗಳು ತುಂಬಿ ಹರಿಯುತ್ತಿದ್ದುದರಿಂದ ಪರಸ್ಪರ ಸಂಪರ್ಕ ಕಡಿತವಾಗುತ್ತಿತ್ತು. ಇತ್ತೀಚಿಗೆ ವಿವಿದ ಹಳ್ಳಿಗಳ ನಡುವೆ ಗ್ರಾಮೀಣ ರಸ್ತೆಗಳು ನಿರ್ಮಾಣವಾಗಿರುವುದರಿಂದ ಸಂಪರ್ಕ ಸುಲಭವಾಗಿದೆ.

ಸಿದ್ದಿ ಜನರು ನೆಲೆಸಿರುವ ಹಳ್ಳಿಗಳನ್ನು ಕ್ರಮ ಮತ್ತು ಆ ಪ್ರದೇಶದ ಗುಣಲಕ್ಷಣಗಳ ಆಧಾರದ ಮೇಲೆ, ಎರಡು ಭಾಗಗಳಾಗಿ ವಿಂಗಡಿಸಲಾಗಿದೆ, ಅವುಗಳೆಂದರೆ ಹಳಿಯಾಳ ವಿಭಾಗ ಮತ್ತು ಯಲ್ಲಾಪುರ-ಅಂಕೋಲ ವಿಭಾಗ. ಹಳಿಯಾಳ ಪ್ರದೇಶದಲ್ಲಿ ಸಿದ್ದಿ ಜನರು ನೆಲೆಸಿರುವ ಪ್ರದೇಶಗಳಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಎದುರು-ಬದುರಾಗಿ ಸಾಲಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದು ಅವರು ಅವಲಂಬಿತವಾಗಿರುವ ಕೃಷಿ ಭೂಮಿಗೆ ಹೊಂದಿಕೊಂಡಿರುತ್ತದೆ. ಇವರು ಎರಡು ವಿಭಿನ್ನ ರೀತಿಯ ನೆಲೆಗಳಲ್ಲಿ ನೆಲೆಸಿರುತ್ತಾರೆ. ಅವುಗಳೆಂದರೆ, ಒಂದು ಮೂಲ ಹಳ್ಳಿಯಿಂದ ಸ್ವಲ್ಪ ದೂರದಲ್ಲಿ ಮನೆಗಳನ್ನು ಸಾಲಾಗಿ ನಿರ್ಮಿಸಿಕೊಂಡು ನೆಲೆಸಿರುತ್ತಾರೆ. ಇಂತಹ ನೆಲೆಗಳನ್ನು ಕೊಪ್ಪ ಎಂದು ಕರೆಯಲಾಗುತ್ತದೆ. ಮತ್ತೊಂದು ಹಳ್ಳಿ ಎಂದು ಗುರುತಿಸಲಾಗಿರುತ್ತದೆ. ಕೊಪ್ಪ ಕೆಲವು ಪ್ರಸಂಗಗಳಲ್ಲಿ ಹಳ್ಳಿಯ ಬಡಾವಣೆಯಂತಿರುತ್ತದೆ. ಸಾಮಾನ್ಯವಾಗಿ ಕೊಪ್ಪದಲ್ಲಿ ದೇವಾಲಯಗಳಿರುವುದಿಲ್ಲ; ಸಂಬಂಧಪಟ್ಟ ಹಳ್ಳಿಗಳಿಂದ ಕೊಪ್ಪಕ್ಕೆ ರಾಜಕೀಯ ಅಧಿಕಾರವು ಚಲಾಯಿಸಲ್ಪಡುತ್ತದೆ. ಕೊಪ್ಪಾದಲ್ಲಿ ನಾಯಕತ್ವ ಬೆಳೆದು ದೇವಾಲಯ ಸ್ಥಾಪಿತವಾದರೆ ಅದು ಹಳ್ಳಿಯಾಗಿ ಪರಿವರ್ತನೆಯಾಗುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದ ಮಾಹಿತಿಗಳ ಪ್ರಕಾರ ಒಂದು ಕೊಪ್ಪ ಬಹುದಿನಗಳವರೆಗೆ ಕೊಪ್ಪವಾಗಿ ಉಳಿಯುವುದಿಲ್ಲ, ಅದು ಹಳ್ಳಿಯಾಗಿ ಪರಿವರ್ತನೆಯಾಗುತ್ತದೆ. ಅಲ್ಲಿಯ ಜನರೇ ಹೇಳುವ ಪ್ರಕಾರ ಕೊಪ್ಪದಲ್ಲಿ ನಾಯಕತ್ವ ಬೆಳೆದು ದೇವರನ್ನು ಹೊಂದಿದಾಗ ಅದು ಹಳ್ಳಿಯಾಗುತ್ತದೆ. ಸಿದ್ದಿ ಜನರು ಸಾಮಾನ್ಯವಾಗಿ ಕೊಪ್ಪದಲ್ಲಿ ಬದುಕುವುದಕ್ಕಿಂತ ಹೆಚ್ಚಾಗಿ ಹಳ್ಳಿಗಳಲ್ಲಿ ವಾಸಿಸಲು ಇಷ್ಟಪಡುತ್ತಾರೆ. ಕೊಪ್ಪದಲ್ಲಿ ವಾಸಿಸುವರ ಅಂತಸ್ತು ಹಳ್ಳಿಗಳಲ್ಲಿ ವಾಸಿಸುತ್ತಿರುವವರ ಅಂತಸ್ತಿಗಿಂತ ಕಡಿಮೆ ಎಂದು ಅವರು ಭಾವಿಸುತ್ತಾರೆ. ಹಳ್ಳಿಗಳಲ್ಲಿ ವಾಸಿಸುತ್ತಿರುವವರು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಸ್ವತಂತ್ರರಾಗಿರುತ್ತಾರೆ, ಆದರೆ ಈ ವಿಷಯಗಳಿಗೆ ಸಂಬಂಧಿಸಿದಂತೆ ಕೊಪ್ಪದಲ್ಲಿರುವವರು ಹಳ್ಳಿಯಲ್ಲಿರುವವರ ಮೇಲೆ ಅವಲಂಬಿತರಾಗಿರುತ್ತಾರೆ.

ಹಳಿಯಾಳ ತಾಲೂಕಿನಲ್ಲಿನ ಸಿದ್ದಿ ಜನರು ಪ್ರತಿಯೊಂದು ಹಳ್ಳಿಗಳಲ್ಲಿಯೂ ಸುಮಾರು ೫, ೧೦, ೧೫, ೪೦, ೫೦ ಕುಟುಂಬಗಳಿರುತ್ತವೆ. ಯಲ್ಲಾಪುರ ಮತ್ತು ಅಂಕೋಲ ಪ್ರದೇಶಗಳಲ್ಲಿ ಮನೆಗಳು ಕೃಷಿ ಭೂಮಿಗೆ ಹೊಂದಿಕೊಂಡು ಚದುರಿದಂತೆ ಇವೆ(ತೋಟದ ಮನೆ). ಪ್ರತಿಯೊಂದು ಕುಟುಂಬವನ್ನು ಮನೆತನದ ಹಿರಿಯ ವ್ಯಕ್ತಿಯ ಮೂಲಕ ಗುರುತಿಸಲಾಗುತ್ತದೆ. ಇಂತಹ ಚದುರಿದ

ಮನೆಗಳ ಸಮೂಹವನ್ನು ಹಳ್ಳಿ ಎಂದು ಕರೆಯುತ್ತಾರೆ. ಸಿದ್ದಿ ಜನರು ವಾಸಿಸುವ ಹಳ್ಳಿಗಳಲ್ಲಿ ಕುಡಿಯಲು ಮತ್ತು ಕೃಷಿಗೆ ನೀರಿನ ಪೂರೈಕೆ ಸಮರ್ಪಕವಾಗಿತ್ತು. ವಿಶೇಷವಾಗಿ ಕುಡಿಯುವ ನೀರು ಬೇಸಿಗೆಯಲ್ಲೂ ದೊರೆಯುತ್ತಿತ್ತು, ಆದರೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸಿದ್ದಿ ಜನರು ನೀರನ್ನು ಕೃಷಿಗೆ ಬಳಸುತ್ತಿದ್ದರು, ಕೃಷಿಗಾಗಿ ಹೆಚ್ಚು ಪ್ರಮಾಣದ ನೀರನ್ನು ಹವ್ಯಕ ಬ್ರಾಹ್ಮಣರು ಬಳಸುತ್ತಿದ್ದರು ಬ್ರಾಹ್ಮಣ ಸಮುದಾಯದವರು ಬೆಟ್ಟಗಳ ಇಳಿಜಾರಿನ ಯೋಗ್ಯವಾದ ಭೂಮಿಯಲ್ಲಿ ಅಡಿಕೆ ತೋಟಗಳನ್ನು ಮಾಡಿಕೊಂಡಿದ್ದಾರೆ ಸಿದ್ದಿ ಜನರ ಭೂಮಿ ಎರಡು ಬೆಟ್ಟಗಳ ನಡುವೆ ಇರುತ್ತದೆ. ಕೃಷಿ ಭೂಮಿಯಿಂದ ಸುತ್ತುವರಿಯಲ್ಪಟ್ಟಿರುವ ಇವರ ಹಳ್ಳಿಗಳ ಸುತ್ತಲೂ ಬಿದಿರಿನ ಬೊಂಬುಗಳಿಂದ ಬೇಲಿ ಹಾಕಲಾಗಿರುತ್ತದೆ. ಹಿಂದೆ ಈ ರೀತಿಯ ಬೇಲಿ ಯನ್ನು ನಿರ್ಮಿಸುವುದು ಮತ್ತು ಅದನ್ನು ಸುಸ್ಥಿತಿಯಲ್ಲಿಡುವುದು ನಿರ್ವಹಣೆ ಮಾಡುವ ಜವಾಬ್ದಾರಿಯು ಹಳ್ಳಿಯ ಎಲ್ಲಾ ಜನರದ್ದಾಗಿರುತ್ತಿತ್ತು. ಕೆಲವು ತೋಟದ ಮನೆಗಳು ಸಾಮಾನ್ಯವಾಗಿ ಒಂದೇ ಸುತ್ತುವರಿದ ಬೊಂಬಿನ ಬೇಲಿಯನ್ನು ಹೊಂದಿರುತ್ತವೆ.ಇಲ್ಲಿ ನಾಯಿಗಳು ಬೊಗಳುತ್ತಿರುತ್ತವೆ, ಅಪರಿಚಿತರು, ಕ್ರೂರ ಪ್ರಾಣಿಗಳು ಮತ್ತು ಹೊರಗಿನವರ ಅತಿಕ್ರಮಣದಿಂದ ರಕ್ಷಕರಾಗಿ ನಾಯಿಗಳು ಮತ್ತು ಬೊಂಬಿನ ಬೇಲಿಗಳಿರುತ್ತವೆ. ಈ ರೀತಿಯಾಗಿ ಸಿದ್ದಿ ಬುಡಕಟ್ಟು ಜನರು ನೆಲೆಸಿರುವ ಹಳ್ಳಿಗಳು ಅವರ ಸಾಮಾನ್ಯ ಜೀವನಕ್ಕೆ ಬುನಾದಿಯಾಗಿರುತ್ತವೆ. ಆದಾಗ್ಯೂ, ಸಿದ್ದಿ ಕುಟುಂಬಗಳು ಮತ್ತು ಇತರ ಸಮುದಾಯಗಳ ಕುಟುಂಬಗಳನ್ನು ಅವಲೋಕಿಸಿದಾಗ ಅವುಗಳ ಕೌಟುಂಬಿಕ ಜೀವನವು ಭಿನ್ನ ಭಿನ್ನವಾಗಿರುತ್ತದೆ.

ಸಿದ್ದಿ ಪರಿಶಿಷ್ಟ ಬುಡಕಟ್ಟು ಜನರ ನೆಲೆಗಳು ರಸ್ತೆಯ ಎರಡು ಬದಿಗಳಲ್ಲಿ ಕಟ್ಟಿರುವ ಕಪ್ಪು ಮತ್ತು ಕೆಂಪು ಹಂಚುಗಳನ್ನು ಹೊದಿಸಿರುವ ಮನೆಗಳಿವೆ. ಟಿ.ಸಿ. ಫಾಲಾಕ್ಷಪ್ಪ ಅವರು ತಮ್ಮ ಸಿದ್ದೀಸ್ ಆಫ್ ನಾರ್ಥ್ ಕೆನರಾ ಎಂಬ ಪುಸ್ತಕದ ಪುಟ ೭ರಲ್ಲಿ ಹೇಳಿರುವಂತೆ, ಅವು ಗುಡಿಸಲುಗಳಾಗಿದ್ದು, ಒಂದೇ ಕೊಠಡಿಯನ್ನು ಹೊಂದಿದ್ದು, ಬಿದಿರಿನ ದಬ್ಬೆಗಳ ಸಹಾಯದಿಂದ ಎರಡು ಅಥವಾ ಮೂರು ಕೊಠಡಿಗಳನ್ನಾಗಿ ವಿಭಾಗ ಮಾಡಲಾಗಿರುತ್ತದೆ. ಫಾಲಾಕ್ಷಪ್ಪನವರು ಅಧ್ಯಯನ ಮಾಡಿದ ಸಮಯದಲ್ಲಿ ಇದ್ದಂತೆ ಇರದೆ, ಈಗ ಮನೆಯ ಗೋಡೆಗಳನ್ನು ಕೇವಲ ಮಣ್ಣಿನಿಂದ ಮಾಡಿ ದನಗಳ ಸಗಣಿಯಿಂದ ಸಾರಿಸಿರುವುದಿಲ್ಲ. ಈಗ, ಈ ಸಮುದಾಯದ ಜನರೂ ಕೂಡ ಇಟ್ಟಿಗೆ, ಸಿಮೆಂಟುಗಳಿಂದ ಗೋಡೆ ನಿರ್ಮಿಸಿಕೊಂಡು ಕೆಂಪುಹಂಚಿನ ಮನೆಗಳನ್ನು ಮತ್ತು ಆರ್.ಸಿ.ಸಿ ಮನೆಗಳನ್ನೂ ಕೆಲವರು ನಿರ್ಮಿಸಿಕೊಂಡಿದ್ದಾರೆ. ಮತ್ತು ಇವರ ಮನೆಗಳಲ್ಲಿ ಅಡಿಗೆ ಕೋಣೆ, ಬಚ್ಚಲು ಮನೆ ಕೊಟ್ಟಿಗೆಗಳು ಪ್ರತ್ಯೇಕವಾಗಿರುತ್ತವೆ.

ಕೌಟುಂಬಿಕ ಚಟುವಟಿಕೆಗಳಿಗೆ, ಗೃಹಕೃತ್ಯಗಳಿಗೆ ದಿನನಿತ್ಯ ಉಪಯೋಗಿಸುವ ವಸ್ತುಗಳು, ಮಣ್ಣು ಹಿತ್ತಾಳೆ ಅಥವಾ ತಾಮ್ರದಿಂದ ಮಾಡಿದವುಗಳಾಗಿದ್ದವು ಮಣ್ಣಿನ ಮಡಿಕೆಗಳನ್ನು ಅಡಿಗೆ ಮಾಡಲು ಮತ್ತು ತಾಮ್ರದ ಪಾತ್ರೆಗಳನ್ನು ನೀರು ಶೇಖರಿಸಿಟ್ಟುಕೊಳ್ಳಲು ಮತ್ತು ಲೋಹದ ಲೋಟಗಳನ್ನು ನೀರು ಕುಡಿಯಲು ಉಪಯೋಗಿಸುತ್ತಾರೆ ಬಾಸ್ಕೆಟ್‌ಗಳು ಮತ್ತು ಬೀಸಣಿಕೆಗಳನ್ನು ಬಿದಿರಿನಿಂದ ತಯಾರಿಸಿ ಉಪಯೋಗಿಸುತ್ತಾರೆ. ಬತ್ತದ ಸಿಪ್ಪೆಯನ್ನು ಬೇರ್ಪಡಿಸಿ ಅಕ್ಕಿ ಮಾಡಲು

ಕಲ್ಲಿನ ಒಳಕಲ್ಲನ್ನು ಉಪಯೋಗಿಸುತ್ತಾರೆ. ದವಸ ದಾನ್ಯಗಳನ್ನು ಸಂಗ್ರಹಿಸಲು ಬಿದಿರಿನಿಂದ ತಯಾರಿಸಿ ದನದ ಸಗಣಿಯಿಂದ ಸಾರಿಸಿದ ಕಣಜಗಳನ್ನು ಬಳಸುತ್ತಿದ್ದರು. ಹೆಚ್ಚು ದವಸ ಬೆಳೆದವರು ಅದರಲ್ಲಿ ದವಸ ಧಾನ್ಯಗಳನ್ನು ಸಂಗ್ರಹಿಸಿಡುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ, ಮಣ್ಣಿನ ಮಡಿಕೆ ಅಥವಾ ಪಾತ್ರೆಗಳಿಲ್ಲವಾಗಿವೆ, ಭತ್ತವನ್ನು ಯಂತ್ರಗಳ ಸಹಾಯದಿಂದ ಸಂಸ್ಕರಿಸಿ ಅಕ್ಕಿಯನ್ನು ಬೇರ್ಪಡಿಸಲಾಗುತ್ತದೆ. ಅಲ್ಯೂಮಿನಿಯಮ್, ಸ್ಟೀಲ್ ಮತ್ತು ಇತರ ಆಧುನಿಕ ಲೋಹಗಳನ್ನು ಬಳಸುತ್ತಿದ್ದಾರೆ.

ಕೋಷ್ಟಕ–೪.೧: ಸಿದ್ದಿ ಜನಾಂಗದ ಜನಸಂಖ್ಯೆ

(೨೦೦೧ ಮತ್ತು ೨೦೧೧ ಜನಗಣತಿ ಪ್ರಕಾರ)

ಕ್ರ.ಸಂ.	ತಾಲೂಕು	೨೦೦೧ರ ಜನಸಂಖ್ಯೆ			೨೦೧೧ರ ಜನಸಂಖ್ಯೆ		
		ಗಂಡು	ಹೆಣ್ಣು	ಒಟು	ಗಂಡು	ಹೆಣ್ಣು	ಒಟ್ಟು
೧	ಕಾರವಾರ	–	–	–	೨೦	೧೭	೩೭
೨	ಅಂಕೋಲ	೨೯೫	೨೯೨	೫೮೭	೪೪೪	೪೫೬	೯೦೦
೩	ಹಳಿಯಾಳ	೧೧೪೩	೧೧೩೭	೨೨೮೦	೫೧೭೭	೫೫೦೬	೧೦೬೮೩
೪	ಮೊಂಡಗೋಡು	೨೬೩	೨೩೬	೪೯೯	೫೨೯	೫೪೮	೧೦೭೭
೫	ಶಿರಸಿ	೩೩	೩೫	೬೮	೯೧	೮೮	೧೭೯
೬	ಸೂಫಾ	೧೬	೧೭	೩೩	೨೬	೨೨	೪೮
೭	ಯಲ್ಲಾಪುರ	೯೮೭	೯೦೭	೧೮೯೪	೧೧೭೧	೧೧೫೪	೨೩೨೫
	ಒಟ್ಟು	೨೭೩೭	೨೬೨೪	೫೩೬೧	೭೪೬೧	೭೭೯೧	೧೫೨೩೨

ಮೂಲ: *www.population.co.in*

ಕೋಷ್ಟಕ–೪.೨: ಉತ್ತರ ಕನ್ನಡ ಜಿಲ್ಲೆಯ ಒಟ್ಟು ಪರಿಶಿಷ್ಟ ಬುಡಕಟ್ಟುಗಳ ಮತ್ತು ಸಿದ್ದಿ ಪರಿಶಿಷ್ಟ ಬುಡಕಟ್ಟು ಜನಾಂಗದ ಕುಟುಂಬಗಳ ವಿವರ

ತಾಲೂಕು	ಒಟ್ಟು ಕುಟುಂಬ	ಇತರ ಪರಿಶಿಷ್ಟ ಪಂಗಡಗಳ	ಸಿದ್ಧ ಜನಾಂಗದವರ ಕುಟುಂಬಗಳು ಕುಟುಂಬಗಳು
ಅಂಕೋಲ	೨೧೦೭೯	೬೫	೨೬೨
ಭಟ್ಕಳ	೨೫೧೮೮	೧೩೯೭	೦

ಹಳಿಯಾಳ	೩೧೪೮೧	೭೦೯	೧೦೨೪
ಹೊನ್ನಾವರ	೩೨೮೦೮	೨೧	೦
ಕಾರವಾರ	೩೫೨೭೩	೧೨೦೮	೧೦
ಕುಮಟಾ	೨೮೨೫೧	೧೮	೦
ಮುಂಡಗೋಡ	೧೭೧೬೩	೭೧೧	೨೧೬
ಸಿದ್ದಾಪುರ	೨೦೫೯೮	೨೧೩	೦
ಶಿರಸಿ	೩೬೧೦೩	೩೯೧	೪೫
ಸೂಫಾ	೧೦೧೮೭	೨೧೦	೧೧
ಯಲ್ಲಾಪುರ	೧೫೨೯೨	೧೬೧	೧೦೪೦
ಒಟ್ಟು	**೨೭೩೪೨೨**	**೫೨೪೧**	**೨೬೬೮**

Source: District at a Glance, Uttara Kannada District-2011

೨೦೦೧ನೇ ಜನಗಣತಿಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೫೩೬೧. ಇದರಲ್ಲಿ ೨೭೩೭ ಪುರುಷರು ಮತ್ತು ೨೬೨೪ ಮಹಿಳೆಯರು ಇದ್ದರೆಂದು ತಿಳಿದು ಬರುತ್ತದೆ. ೨೦೧೧ನೇ ಜನಗಣತಿಯ ವರದಿಯ ಪ್ರಕಾರ ಈ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೧೫೨೩೨ ಇದರಲ್ಲಿ ೭೪೬೧ ಪುರುಷರು ಮತ್ತು ೭೭೯೧ ಮಹಿಳೆಯರು ಇರುವುದು ತಿಳಿದುಬರುತ್ತದೆ. ಎರಡು ಜನಗಣತಿಯ ವರದಿಗಳ ಅಂಕಿಅಂಶಗಳ ಪ್ರಕಾರ ಜನಸಂಖ್ಯೆಯಲ್ಲಿ ತುಂಬಾ ವ್ಯತ್ಯಾಸವಿರುವುದು ಕಂಡುಬರುವುದರ ಜೊತೆಗೆ, ಸಿದ್ದಿ ಜನರ ಮುಖಂಡರುಗಳು ನಡೆಸಿರುವ ಏಣಿಕೆಯ ಪ್ರಕಾರ ಇವರ ಜನಸಂಖ್ಯೆ ೩೧೮೫೨ ಎಂದು ತಿಳಿದುಬರುತ್ತದೆ. ಹಾಗೆಯೇ ಇತ್ತೀಚಿನ, ಅಂದರೆ ೨೦೧೬ರಲ್ಲಿನ ಅಂತರ್ಜಾಲದಲ್ಲಿನ ಅಂಕಿ ಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಜನಸಂಖ್ಯೆ ೧೮೦೦೦ ಎಂಬುದು ತಿಳಿದುಬಂದಿರುತ್ತದೆ. ಸಿದ್ದಿ ಜನರ ಜನಸಂಖ್ಯೆಗೆ ಸಂಬಂಧಿಸಿದಂತೆ ವಿಭಿನ್ನ ಅಂಕಿಸಂಖ್ಯೆಗಳು ಲಭ್ಯತೆಯಿದ್ದು ಪ್ರಸ್ತುತ ಈ ಜನಾಂಗದವರ ಜನಸಂಖ್ಯೆಗೆ ಸಂಬಂಧಿಸಿದಂತೆ ೨೦೧೧ನೇ ಸಾಲಿನ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಅಧ್ಯಾಯ ಐದು

ಅಂಕಿ ಅಂಶಗಳ ಮಾಹಿತಿ ವಿಶ್ಲೇಷಣೆ

ಅಧ್ಯಾಯ ಐದು


ಅಂಕಿ ಅಂಶಗಳ ಮಾಹಿತಿ ವಿಶ್ಲೇಷಣೆ

"ಬುಡಕಟ್ಟು ಮತ್ತು ಅಭಿವೃದ್ಧಿ" ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನದ ವಿಷಯ ಕುರಿತು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಅಂಕೋಲಾ, ಯಲ್ಲಾಪುರ ಮತ್ತು ಮುಂಡಗೋಡು ಈ ನಾಲ್ಕು ತಾಲೂಕುಗಳಿಂದ ೩೯೦ ಸಿದ್ದಿ ಬುಡಕಟ್ಟು ಜನಾಂಗದಲ್ಲಿ ಮಾಹಿತಿದಾರರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರಲ್ಲಿ ೧೩೦ ಜನ ಮಹಿಳೆಯರು ಹಾಗೂ ೨೫೦ ಪುರುಷ ಮಾಹಿತಿದಾರರನ್ನೊಳಗೊಂಡಂತೆ ಸಂಶೋಧನೆ ಕೈಗೊಳ್ಳಲಾಗಿದೆ. ಹಳಿಯಾಳ ತಾಲೂಕಿನಿಂದ ೧೫೦ ಕುಟುಂಬಗಳನ್ನು, ಯಲ್ಲಾಪುರ ತಾಲೂಕಿನಿಂದ ೧೪೫ ಕುಟುಂಬಗಳನ್ನು, ಮುಂಡಗೋಡು ತಾಲೂಕಿನಿಂದ ೪೫ ಕುಟುಂಬಗಳನ್ನು ಮತ್ತು ಅಂಕೋಲ ತಾಲೂಕಿನಿಂದ ೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಪ್ರಶ್ನಾವಳಿ ಮತ್ತು ಸಂದರ್ಶನ ಅನುಸೂಚಿಗಳ ಜೊತೆಗೆ ಗುಂಪುಚರ್ಚೆ, ಅವಲೋಕನ, ಅನೌಪಚಾರಿಕ ಚರ್ಚೆಯ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ಕೋಷ್ಟಕ ೫.೧. ಮಾಹಿತಿದಾದರ ಸ್ತ್ರೀ ಪುರುಷರ ಸಂಖ್ಯೆ

ಕ್ರಸಂ	ಲಿಂಗ	ಸಂಖ್ಯೆ	ಶೇಕಡ
೧.	ಗಂಡು	೨೪೦	೬೨
೨.	ಹೆಣ್ಣು	೧೫೦	೩೮
	ಒಟ್ಟು	**೩೯೦**	**೧೦೦**

ಲಂಬಚಿತ್ರ ೫.೧. ಮಾಹಿತಿದಾರರ ಸ್ತ್ರೀ ಪುರುಷರ ಸಂಖ್ಯಾ ಪ್ರಮಾಣ



ಯಾವುದೇ ಜನಾಂಗ ಅಥವಾ ಸಮುದಾಯದಲ್ಲಿ ಸ್ತ್ರೀ ಮತ್ತು ಪುರುಷರು ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿರುತ್ತಾರೆ. ಹಾಗೆಯೇ ಸಾಮಾಜಿಕ ಸಂಶೋಧನೆಗಳ ಅಧ್ಯಯನದಲ್ಲಿ ಮಾಹಿತಿ ದಾರರನ್ನಾಗಿ ಆಯ್ಕೆ ಮಾಡಿಕೊಳ್ಳುವಾಗ ಸ್ತ್ರೀ–ಪುರುಷರನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿ ಕೊಳ್ಳುವಂತೆ ಈ ಅಧ್ಯಯನದಲ್ಲಿಯೂ ಸ್ತ್ರೀ ಪುರುಷರಿಬ್ಬರನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮೇಲಿನ ಕೋಷ್ಟಕ ೫.೧ರಲ್ಲಿ ತೋರಿಸಿರುವಂತೆ ಅಧ್ಯಯನಕ್ಕೆ ಒಟ್ಟು ೩೯೦ ಮಾಹಿತಿದಾರರನ್ನು ಆಯ್ಕೆ ಮಾಡಿಕೊಂಡಿದ್ದು ಅವರಲ್ಲಿ ೨೪೦ ಮಹಿತಿದಾರರು ಅಂದರೆ ಶೇ. ೬೨ರಷ್ಟು ಜನರು ಪುರುಷರಾಗಿದ್ದಾರೆ ಉಳಿದಂತೆ ಶೇ. ೩೮ರಷ್ಟು ಅಂದರೆ ೧೫೦ ಮಾಹಿತಿದಾರರು ಮಹಿಳೆಯರಿದ್ದಾರೆ.

ಕೋಷ್ಟಕ ೫.೨. ಮಾಹಿತಿದಾರ ಕುಟುಂಬದ ಜನಸಂಖ್ಯೆ

ಜನಸಂಖ್ಯೆ		
ಒಟ್ಟು	**ಪುರುಷರು**	**ಮಹಿಳೆಯರು**
೨೮೭೯	೧೪೨೮	೧೪೫೧
ಪ್ರತಿಶತ	೪೯.೬೦	೫೦.೩೯

ಕೋಷ್ಟಕ ೫.೨ರಲ್ಲಿ ತೋರಿಸಿರುವಂತೆ ಈ ಅಧಯಯನಕ್ಕೆ ಆಯ್ಕೆ ಮಾಡಿಕೊಂಡ ೩೯೦ ಕುಟುಂಬಗಳಲ್ಲಿ ಒಟ್ಟು ಜನಸಂಖ್ಯೆ ೨೮೭೯ ಇದ್ದು ಇವರಲ್ಲಿ ೧೪೨೮ ಜನ ಅಂದರೆ ಶೇ. ೪೯.೬೦ರಷ್ಟು ಪುರುಷರಿದ್ದು, ಉಳಿದಂತೆ ೧೪೫೧ ಜನರು ಅಂದರೆ ಶೇ. ೫೯.೪೦ ಜನರು ಮಹಿಳೆಯರಿದ್ದಾರೆ.


೨೦೦೧ನೇ ಜನಗಣತಿಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೫೩೬೧. ಇದರಲ್ಲಿ ೨೬೩೭ ಪುರುಷರು ಮತ್ತು ೨೬೨೪ ಮಹಿಳೆಯರು ಇದ್ದಾರೆ. ೨೦೧೧ ನೇ ಜನಗಣತಿಯ ವರದಿಯ ಪ್ರಕಾರ ಈ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೧೫೨೩೨ ಇದರಲ್ಲಿ ೭೪೬೧ ಪುರುಷರು ಮತ್ತು ೭೭೯೧ ಮಹಿಳೆಯರು ಇರುವುದು ತಿಳಿದುಬರುತ್ತದೆ. ಎರಡು ಜನಗಣತಿಯ ವರದಿಗಳ ಅಂಕಿಅಂಶಗಳ ಪ್ರಕಾರ ಜನಸಂಖ್ಯೆಯಲ್ಲಿ ತುಂಬಾ ವ್ಯತ್ಯಾಸವಿರುವುದ ಕಂಡು ಬರುತ್ತದೆ. ಸಿದ್ದಿ ಜನರ ಮುಖಂಡರುಗಳು ನಡೆಸಿರುವ ಏಣಿಕೆಯ ಪ್ರಕಾರ ಇವರ ಜನಸಂಖ್ಯೆ ೩೧೮೫೨ ಇದೆ. ಇತ್ತೀಚಿನ, ಅಂದರೆ ೨೦೧೬ರಲ್ಲಿನ ಅಂತರ್ಜಾಲ ದಲ್ಲಿನ ಅಂಕಿ ಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಜನಸಂಖ್ಯೆ ೧೮೦೦೦. ಸಿದ್ದಿ ಜನರ ಜನಸಂಖೆಗೆ ಸಂಬಂಧಿಸಿದಂತೆ ವಿಭಿನ್ನ ಅಂಕಿಸಂಖ್ಯೆಗಳು ಲಭ್ಯವಿದೆ.

ಭಾರತದಲ್ಲಿ ಸ್ತ್ರೀ ಪುರುಷರ ಪ್ರಮಾಣ ೨೦೧೧ನೇ ಜನಗಣತಿಯ ಪ್ರಕಾರ ೧೦೦೦ ಪುರುಷರಿಗೆ ೯೪೩ ಮಹಿಳೆಯರಿದ್ದಾರೆ. ಪರಿಶಿಷ್ಟ ಬುಡಕಟ್ಟುಗಳಲ್ಲಿ ಲಿಂಗಾನುಪಾತವು ಪ್ರತಿ ೧೦೦೦ ಪುರುಷರಿಗೆ ೯೯೦ ಮಹಿಳೆಯರಿದ್ದಾರೆ. ಆದರಂತೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಸ್ತ್ರೀ ಪುರುಷರ ಪ್ರಮಾಣ ಒಂದು ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಹಾಗೆಯೇ ಒಟ್ಟಾರೆ ಕರ್ನಾಟಕದ ಪರಿಶಿಷ್ಟ ಬುಡಕಟ್ಟುಗಳಲ್ಲಿ ಪ್ರತಿ ಸಾವಿರ ಪುರುಷರಿಗೆ ೯೭೨ ಮಹಿಳೆ ಯರಿದ್ದಾರೆ. ಅದರಂತೆ ಈ ಅಧ್ಯಯನ ಕ್ಷೇತ್ರ ಮತ್ತು ವಿಷಯವಾಗಿ ಉತ್ತರ ಕನ್ನಡ ಜಿಲ್ಲೆಯ ಒಟ್ಟು ಲಿಂಗಾನುಪಾತ ಸಾವಿರ ಪುರುಷರಿಗೆ ೯೭೫ ಸ್ತ್ರೀಯರಿದ್ದಾರೆ. ಆಶ್ಚರ್ಯವೆಂಬಂತೆ, ಈ ಅಧ್ಯಯನದಲ್ಲಿ ೨೦೧೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಸ್ತ್ರೀ-ಪುರುಷರ ಲಿಂಗಾನುಪಾತ ೧೦೦೦ ಪುರುಷರಿಗೆ ೯೪೩ ಮಹಿಳೆಯರಿದ್ದಾರೆ. ಕರ್ನಾಟಕದ ಸ್ತ್ರೀ-ಪುರುಷರ ಲಿಂಗಾನುಪಾತ ೧೦೦೦ ಪುರುಷರಿಗರ ೯೬೮ ಮಹಿಳೆಯರಿದ್ದಾರೆ. ದೇಆಶದ ಸ್ತ್ರೀ-ಪುರುಷರ ಲಿಂಗಾನುಪಾತಕ್ಕಿಂತ ರಾಜ್ಯದ ೨೫ ಮಹಿಳೆಯರು ಲಿಂಗಾನುಪಾತ ಅಧಿಕವಾಗಿ ಸಂಖ್ಯೆಯಲ್ಲಿದ್ದಾರೆ. ರಾಜ್ಯದ ಬುಡಕಟ್ಟು ಜನರ ಲಿಂಗಾನುಪಾತವು(೯೭೨) ದೇಶದ ಬುಡಕಟ್ಟು ಜನರ(೯೯೦) ಲಿಂಗಾನುಪಾತಕ್ಕಿಂತ ಕಡಿಮೆಯಿದೆ. ಸಿದ್ದಿ ಪರಿಶಿಷ್ಟ ಬುಡಕಟ್ಟು ಜನಾಂಗದವರಲ್ಲಿ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾಮಟ್ಟದ ಲಿಂಗಾನುಪಾತಕ್ಕಿಂತ ಹೆಚ್ಚಾಗಿದೆ. ಅಂದರೆ, ಪ್ರತಿ ಸಾವಿರ ಸಿದ್ದಿ ಪುರುಷರಿಗೆ ೧೦೦೩ ಮಹಿಳೆಯರಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಸಿದ್ದಿ ಜನಾಂಗದವರಲ್ಲಿ ಲಿಂಗಾನುಪಾತವು ೧೦೦೦ ಪುರುಷರಿಗೆ ೧೦೦೧ ಮಹಿಳೆಯರಿದ್ದಾರೆ. ಅಂದರೆ, ಬುಡಕಟ್ಟು ಮಹಿಳೆಯರ ಲಿಂಗಾನುಪಾತವು ರಾಜ್ಯದ(೯೭೨) ಮತ್ತು ದೇಶದ (೯೯೦)ಕ್ಕಿಂತ ಅಧಿಕವಾಗಿದೆ.

ಕೋಷ್ಟಕ ೫.೩. ಮಾಹಿತಿದಾರರ ಕುಟುಂಬದ ಪ್ರಕಾರ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಪಿತೃ ಪ್ರಧಾನ	೨೪೦	೬೨
೨.	ಮಾತೃ ಪ್ರಧಾನ	೧೫೦	೩೮
	ಒಟ್ಟು	**೩೯೦**	**೧೦೦**

ಲಂಬಚಿತ್ರ ೫.೩. ಮಾಹಿತಿದಾರರ ಲಿಂಗವಾರು ಕುಟುಂಬದ ಪ್ರಮಾಣ




ಮೇಲಿನ ಕೋಷ್ಟಕ ೫.೩ ಮತ್ತು ಲಂಬಚಿತ್ರದ ವಿವರಣೆಯಂತೆ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ೩೯೦ ಕುಟುಂಬಗಳಲ್ಲಿ ೨೪೦ ಕುಟುಂಬಗಳು, ಅಂದರೆ ಪ್ರತಿಶತ ೬೨ರಷ್ಟು ಪಿತೃಪ್ರಧಾನ ಕುಟುಂಬಗಳಾಗಿವೆ ಉಳಿದಂತೆ ೧೫೦ ಕುಟುಂಬಗಳು ಅಂದರೆ, ಪ್ರತಿಶತ ೩೮ರಷ್ಟು ಮಾತೃಪ್ರಧಾನ ಕುಂಟುಂಬಗಳಿವೆ.

ಮೇಲಿನ ವಿವರಣೆಯನ್ನು ನೋಡಲಾಗಿ ಬುಡಕಟ್ಟು ಜನಾಂಗಗಳಲ್ಲಿಯೂ ಅತ್ಯಧಿಕ ಪ್ರಮಾಣದಲ್ಲಿ ಸಂಪ್ರದಾಯಿಕವಾದ ಪಿತೃಪ್ರಧಾನ ಕುಟುಂಬಗಳಿವೆ, ಮಾತೃಪ್ರಧಾನ ಕುಟುಂಬಗಳ ಸಂಖ್ಯೆ ಕಡಿಮೆ ಇದೆ.

ಕೋಷ್ಟಕ ೫.೪. ಕುಟುಂಬದ ವಿಧಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಅವಿಭಕ್ತ ಕುಟುಂಬ	೨೦೯	೫೪
೨.	ವಿಭಕ್ತ ಕುಟುಂಬ	೧೮೧	೪೬
	ಒಟ್ಟು	**೩೯೦**	**೧೦೦**

ಲಂಬಚಿತ್ರ ೫.೪. ಕುಟುಂಬದ ವಿಧಗಳ ಪ್ರಮಾಣ




ಕೋಷ್ಟಕ ೫.೪ರ ವಿವರಣೆಯಂತೆ ಅಧ್ಯಯನದಲ್ಲಿ ಪ್ರತಿಶತ ೫೪ರಷ್ಟು ಮಾಹಿತಿದಾರರ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಹಾಗೆಯೇ, ಉಳಿದ ೧೮೧ ಕುಟುಂಬಗಳು ಅಂದರೆ, ಪ್ರತಿಶತ ೪೬ರಷ್ಟು ಮಾಹಿತಿದಾರರ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ.

ಸಾಂಪ್ರದಾಯಿಕವಾದಂತ ಅವಿಭಕ್ತ ಕುಟುಂಬಗಳ ಪ್ರಮಾಣ ಬುಡಕಟ್ಟುಗಳಲ್ಲಿ ಅಧಿಕ ಪ್ರಮಾಣದಲ್ಲಿ ಜಾರಿಯಲ್ಲಿರುವುದು ಕಂಡು ಬರುತ್ತದೆ. ಮೇಲಿನ ವಿವರಣೆಯನ್ನು ನೋಡಲಾಗಿ ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ಅವಿಭಕ್ತ ಕುಟುಂಬದ ಸದಸ್ಯರಾಗಿರುವುದು ಕಂಡು ಬರುತ್ತವೆ. ಕಾರಣ ಇಂತಹ ಬುಡಕಟ್ಟುಗಳಲ್ಲಿ ಬಂಧುತ್ವ ಬಂಧದ ಪರಿಕಲ್ಪನೆಯು ಅಧಿಕವಾಗಿ ರುವದರಿಂದ ಎಲ್ಲರೂ ಒಂದೇ ಮಾತಾಪಿತೃಗಳಿಂದ ಬಂದಿದ್ದೇವೆ ಎಂಬ ನಂಬಿಕೆಯೊಂದಿಗೆ ಅವಿಭಕ್ತ ಕುಟುಂಬಗಳನ್ನು ಹೊಂದಿದವರಾಗಿರುತ್ತಾರೆ. ಆದರೆ, ಸಿದ್ದಿ ಕುಟುಂಬ ಪದ್ಧತಿಯಲ್ಲಿ ವಿವಾಹವಾದ ನಂತರ ಗಂಡುಮಕ್ಕಳು ತಮ್ಮ ಮೂಲ ಕುಟುಂಬದಿಂದ ಪ್ರತ್ಯೇಕವಾಗಿಯೆ ವಾಸಿಸುತ್ತಾರೆ. ಆದಾಗ್ಯೂ, ಬಂಧುತ್ವ ಬಂಧದ ಪರಿಕಲ್ಪನೆ ಮತ್ತು ಅವರೆಲ್ಲರೂ ಒಂದೇ ವಂಶಾವಳಿಗೆ ಸೇರಿದ್ದೇವೆಂದು ಬಲವಾಗಿ ನಂಬುವುದರಿಂದಲೂ, ಅಣ್ಣ ತಮ್ಮಂದಿರೆಲ್ಲರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರೂ ಒಂದೇ ಕುಟುಂಬದವರು ಎಂದು ಹೇಳಿಕೊಳ್ಳುವುದರಿಂದ ಅವಿಭಕ್ತ ಕುಟುಂಬಗಳ ಪ್ರಮಾಣ ಹೆಚ್ಚಗಿರುವುದು ಕಂಡುಬರುತ್ತದೆ.

ಕೋಷ್ಟಕ ೫.೫. ವಸತಿಯ ಸ್ವರೂಪ

ಕ್ರಸಂ	ವಿಪಯ	ಸಂಖ್ಯೆ	ಶೇಕಡ
೧.	ಗುಡಿಸಲು	೧೮೫	೪೭
೨.	ಹಂಚಿನ ಮನೆ	೧೯೮	೫೧
೩.	ಸಿಮೆಂಟ	೭	೨
	ಒಟ್ಟು	೩೯೦	೧೦೦

ಲಂಬಚಿತ್ರ ೫.೫. ವಸತಿಯ ಸ್ವರೂಪ



ಕೋಷ್ಟಕ ೫.೫ರಲ್ಲಿ ವಿವರಣೆಯಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ೩೯೦ ಕುಟುಂಬಗಳ ಮಾಹಿತಿದಾರರಲ್ಲಿ ೧೮೫ ಜನರು ಅಂದರೆ ಪ್ರತಿಶತ ೪೭ರಷ್ಟು ಮಾಹಿತಿದಾರರು ಗುಡಿಸಲುಗಳಲ್ಲಿ ವಾಸ ಮಾಡುತ್ತಾರೆ ಅದರಂತೆ ೧೯೮ ಮಾಹಿತಿದಾರರು ಅಂದರೆ, ಶೇ. ೫೧ರಷ್ಟು ಮಾಹಿತಿದಾರರು ಹಂಚಿನ ಮನೆಗಳಲ್ಲಿ ವಾಸಿಸುತ್ತಿದ್ದರೆ. ಉಳಿದಂತೆ ೭ ಜನ ಮಾಹಿತಿದಾರರು ಅಂದರೆ, ಪ್ರತಿಶತ ೨ರಷ್ಟು ಜನರು ಆರ್.ಸಿ.ಸಿ. ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದಲ್ಲಿ ಗುಡಿಸಲುಗಳನ್ನು ಮತ್ತು ಹಂಚಿನ ಮನೆಗಳನ್ನು ಹೊಂದಿದ್ದಾರೆ. ಬಿದಿರಿನ ತಡಿಕೆ, ಮತ್ತು ದಬ್ಬೆಗಳಿಂದ ನಿರ್ಮಿಸಿಕೊಂಡಿರುವಂತಹ ಜೋಪಡಿಗಳಲ್ಲಿ ವಾಸಮಾಡುತ್ತಿಲ್ಲ.

ಕೋಷ್ಟಕ ೫.೬ ವಸತಿಯ ಮಾಲಿಕತ್ವ


ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಸ್ವಂತ ಮನೆಯಲ್ಲಿರುವವರು	೩೫೨	೯೦
೨.	ಬಾಡಿಗೆ ಮನೆಯಲ್ಲಿರುವವರು	೩೦	೮
೩.	ವಸತಿರಹಿತರು	೮	೨
	ಒಟ್ಟು	**೩೯೦**	**೧೦೦**

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿ ಪ್ರಮುಖವಾದ ಅಂಶವಾಗಿದೆ. ಈ ಅಧ್ಯಯನಕ್ಕೆ ಒಳಪಡುವ ೩೯೦ ಮೀಹಿತಿದಾರರ ಕುಟುಂಬಗಳಲ್ಲಿ ೩೫೨ ಜನ ಮಾಹಿತಿದಾರರು ಅಂದರೆ, ಶೇ. ೯೦ರಷ್ಟು ಜನರು ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾರೆ. ೩೦ ಮಾಹಿತಿದಾರ ಕುಟುಂಬಗಳು ಅಂದರೆ ಶೇ. ೮ ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ ಹಾಗೆಯೇ, ಶೇ. ೨ರಷ್ಟು ಮಹಿತಿದರರು, ಅಂದರೆ ೮ ಕುಟುಂಬಗಳು ಕುಟುಂಬಗಳು ವಸತಿ ರಹಿತರಾಗಿದ್ದು ಬೇರೆಯವರ ಮನೆಯ ಹೆಚ್ಚುವರಿ ಕೊಠಡಿಗಳು ಅಥವಾ ಹೊರಾಂಡಗಳಲ್ಲಿ ವಾಸಿಸುತ್ತಿದ್ದಾರೆ.

ಕೋಷ್ಟಕ ೫.೭: ಶೌಚಾಲಯ ಸೌಲಭ್ಯ ಹೊಂದಿರುವ ಕುಟುಂಬಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಹೌದು	೯೭	೨೫
೨.	ಇಲ್ಲ	೨೯೩	೭೫
	ಒಟ್ಟು	೩೯೦	೧೦೦

ಲಂಬಚಿತ್ರ ೫.೭. ಶೌಚಾಲಯ ಸೌಲಭ್ಯ ಹೊಂದಿರುವ ಕುಟುಂಬಗಳ ಪ್ರಮಾಣ



ಮಾನವನ ಆರೋಗ್ಯ ಮತ್ತು ಸ್ವಚ್ಛತೆಯ ದೃಷ್ಟಿಯಿಂದ ಶೌಚಾಲಯಗಳ ಪಾತ್ರ ಮುಖ್ಯವಾದುದು. ಪ್ರಸ್ತುತ ಅಧ್ಯಯನದಲ್ಲಿ ಶೇ. ೯೭ ಕುಟುಂಬಗಳಲ್ಲಿ ಅಂದರೆ, ಪ್ರತಿಶತ ೨೫ರಷ್ಟು ಮಾಹಿತಿದಾರರು ತಾವು ವಾಸಿಸುವ ಪ್ರದೇಶದಲ್ಲಿ ಶೌಚಾಲಯ ಸೌಲಭ್ಯ ಹೊಂದಿದ್ದಾರೆ. ಹಾಗೆಯೇ ೨೯೩ ಕುಟುಂಬಗಳು ಅಂದರೆ, ಪ್ರತಿಶತ ೭೫ರಷ್ಟು ಮಾಹಿತಿದಾರರು ಶೌಚಾಲಯ ವ್ಯವಸ್ಥೆಯನ್ನು ಹೊಂದಿಲ್ಲ.

ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ತಾವು ವಾಸಿಸುವ ಪ್ರದೇಶದಲ್ಲಿ ಶೌಚಾಲಯ ಸೌಲಭ್ಯ ಹೊಂದಿರದೆ ಇರುವದು ಕಂಡು ಬರುತ್ತದೆ. ಸರ್ಕಾರವು ಉಚಿತವಾದ ಶೌಚಾಲಯ ಸೌಲಭ್ಯ ಒದಗಿಸುತ್ತಿದ್ದರೂ ಸಹ ಮಾಹಿತಿದಾರರು ಅದರ ಸದುಪಯೋಗ ಪಡೆದಿಲ್ಲ.

ಪ್ರತಿಶತ ೧೪ರಷ್ಟು ಮಾಹಿತಿದಾರರು ತಮ್ಮ ಮನೆಯಲ್ಲಿರುವ ಶೌಚಾಲಯವನ್ನು ಉಪಯೋಗಿಸುತ್ತಾರೆ. ಅದರಂತೆ ಪ್ರತಿಶತ ೧೧ರಷ್ಟು ಮಾಹಿತಿದಾರರು ಮನೆಯಲ್ಲಿ ಶೌಚಾಲಯ ವಿದ್ದಾಗಲೂ ಅದನ್ನು ಉಪಯೋಗಿಸುವುದಿಲ್ಲ. ಆದರೆ, ಸೋಜಿಗವೆಂಬಂತೆ ಈಗಲೂ ಈ ಬಗ್ಗೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದೇ ಇರುವವರೇ ಶೇ. ೭೫ರಷ್ಟಿದ್ದಾರೆ. ಇದಕ್ಕೆ ಕಾರಣ ಅವರ ಸಂಕೋಚದ ಭಾವನೆಯನ್ನು ತೋರಿಸುತ್ತದೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದಲ್ಲಿ ಮನೆಯಲ್ಲಿರುವ ಶೌಚಾಲಯವನ್ನು ಉಪಯೋಗಿದೇ ಇರುವುದು ಕಂಡು

ಬರುತ್ತದೆ. ಉಳಿದಂತೆ ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ಶೌಚಾಲಯ ಉಪಯೋಗಿಸದೆ ಬಯಲು ಪ್ರದೇಶದಲ್ಲಿ ತಮ್ಮ ನಿತ್ಯ ಕರ್ಮಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ.

ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಡೆಸಿರುವ ೩೯೦ ಮಾಹಿತಿದಾರ ಕುಟುಂಬಗಳ ಒಟ್ಟು ಜನಸಂಖ್ಯೆಯ ೨೮೭೭ರಲ್ಲಿ, ಪ್ರತಿಶತ ೨೨ ಜನರು ೧-೧೪ ವರ್ಷ ವಯಸ್ಸಿನ ಮಕ್ಕಳು, ೧೫ರಷ್ಟು ಮಾಹಿತಿದಾರರು ೧೫-೨೦ ವಯಸ್ಸಿನವ ರಾಗಿದ್ದಾರೆ. ಶೇ. ೧೩ರಷ್ಟು ಮಂದಿ ೨೧-೨೫ ವರ್ಷ ವಯಸ್ಸಿನವರು, ಪ್ರತಿಶತ ೨೬ರಷ್ಟು ಮಂದಿ ೨೬-೩೦ರಷ್ಟು ವಯಸ್ಸಿನವರು ಮತ್ತು ಪ್ರತಿಶತ ೪೬ರಷ್ಟು ಜನರು ೩೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಗುಂಪಿಗೆ ಸೇರಿದವರಾಗಿದ್ದಾರೆ.

೫.೪. ಸಿದ್ದಿ ಬುಡಕಟ್ಟು ಜನಾಂಗದ ಧರ್ಮ ಮತ್ತು ಸಾಮಾಜಿಕ ಸ್ಥಾನಮಾನ

ಕೋಷ್ಟಕ ೫.೮ ಧರ್ಮಗಳು

ಕ್ರಸಂ	ಧರ್ಮ	ಸಂಖ್ಯೆ	ಶೇಕಡ
೧.	ಹಿಂದು ಧರ್ಮಿಯರು	೧೫೦	೩೮
೨.	ಕ್ರೈಸ್ತ ಧರ್ಮಿಯರು	೧೨೦	೩೧
೩.	ಮುಸ್ಲೀಂ ಧರ್ಮಿಯರು	೧೨೦	೩೧

ಜಗತ್ತಿನ ಪ್ರತಿಯೊಂದು ದೇಶ ಮತ್ತು ಜನಸಮೂಹವು ಒಂದಲ್ಲ ಒಂದು ಧರ್ಮಕ್ಕೆ ಅಂಟಿಕೊಂಡವರೇ ಆಗಿರುತ್ತಾರೆ. ಮೇಲಿನ ಕೋಷ್ಟಕ ೫.೮ರಲ್ಲಿ ತೋರಿಸಿರುವಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಾಹಿತಿದಾರರಲ್ಲಿ ಸಿದ್ದಿ ಜನಾಂಗದವರು ಹಿಂದು, ಕ್ರೈಸ್ತ ಮತ್ತು ಮುಸಲ್ಮಾನ ಮೂರು ಧರ್ಮಗಳಿಗೆ ಸೇರಿದವರಾಗಿದ್ದಾರೆ. ಆಯ್ಕೆ ಮಾಡಿಕೊಂಡಿರುವ ಮಹಿತಿದಾರ ಕುಟುಂಬಗಳಲ್ಲಿ ೧೫೦ ಕುಟುಂಬಗಳು ಅಂದರೆ, ಶೇ. ೩೮ರಷ್ಟು ಮಹಿತಿದಾರರು ಹಿಂದು ಧರ್ಮವನ್ನು ಆಚರಿಸುತ್ತಿದ್ದಾರೆ ೧೨೦ ಕುಟುಂಬಗಳು ಅಂದರೆ, ಶೇ. ೩೧ರಷ್ಟು ಕುಟುಂಬಗಳು ಕ್ರೈಸ್ರ ಧರ್ಮವನ್ನು ಆಚರಿಸುತ್ತಿದ್ದಾರೆ. ಮತ್ತು ಉಳಿದ ೧೨೦ ಕುಟುಂಬಗಳು, ಅಂದರೆ ಶೇ. ೩೧ರಷ್ಟು ಮಹಿತಿದಾರರು ಮುಸ್ಲಿಂ ಧರ್ಮವನ್ನು ಆಚರಿಸುತ್ತಾರೆ.

ಸಿದ್ದಿ ಜನರು ಮೂಲತಃ ವಲಸೆ ಬಂದವರು, ಗೋವಾದಿಂದ ಗುಲಾಮಿತನದಿಂದ ತಪ್ಪಿಸಿ ಕೊಂಡು ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ನೆಲೆಸಿರುವ ಸಿದ್ದಿ ಬುಡಕಟ್ಟು ಜನರು ಹಿಂದೂ ಜಮೀನುದಾರರ ಮನೆಯಲ್ಲು ಕೂಲಿ ಆಳುಗಳಾಗಿ ಬದುಕನ್ನು ಕಟ್ಟಿಕೊಳ್ಳುವಾಗ ಅವರ ಯಜಮಾನರ ಧಾರ್ಮಿಕ ಆಚರಣೆಗಳನ್ನು ತಮ್ಮಾದನ್ನಾಗಿಸಿಕೊಂಡು ಹಿಂದುಗಳಾಗಿದ್ದಾರೆ. ನಿಜಾಮನ ಸೈನ್ಯದಲ್ಲಿ ಕೆಲಸ ಮಾಡಿಕೊಂಡಿದ್ದು ನಂತರ ಈ ಜಿಲ್ಲಗೆ ಬಂದು ಬದುಕನ್ನು ಕಟ್ಟಿ ಕೊಂಡಿರುವವರು ಮುಸಲ್ಮಾನರಾಗಿದ್ದಾರೆ. ಪೋರ್ಚುಗೀಸರ ಪ್ರಭಾವ ಮತ್ತು ಕ್ರೈಸ್ತ ಮಿಷನರಿಗಳ ಸಂಪರ್ಕ ಮತ್ತು

ಪ್ರಭಾವಕ್ಕೆ ಒಳಗಾದವರು ಕ್ರೈಸ್ತ ಧರ್ಮದ ಅನುಯಾಯಿಗಳಾಗಿದ್ದಾರೆ. ಒಟ್ಟಾರೆ ಅಧ್ಯಯನದಲ್ಲಿ ಹಿಂದು ಮುಸ್ಲಿಂ ಹಾಗೂ ಕ್ರೈಸ್ತ ಧರ್ಮಿಯರು ಇದ್ದಾರೆ.

ಸಿದ್ದಿ ಬುಡಕಟ್ಟು ಸಮುದಾಯದ ಜನರು ತಮ್ಮ ಸಾಮಾಜಿಕ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ, ಇತರ ಸಮುದಾಯಗಳ ಜನರು ತಮ್ಮನ್ನು ಹೇಗೆ ಕಾಣುತ್ತಾರೆ ಎಂಬುದನ್ನು ಕುರಿತಂತೆ, ಪ್ರತಿಶತ ೨೩ರಷ್ಟು ಬುಡಕಟ್ಟು ಮಾಹಿತಿದಾರರು ತಮ್ಮನ್ನು ಇತರ ಸಮುದಾಯದವರು ಯಾವುದೇ ಭೇದವಿಲ್ಲದೆ ಸಮಾನರಾಗಿ ಮತ್ತು ಉತ್ತಮವಾಗಿ ಕಾಣುತ್ತಾರೆ. ಉಳಿದಂತೆ ಪ್ರತಿಶತ ೬೦ರಷ್ಟು ಮಾಹಿತಿದಾರರು ಇತರರು ತಮ್ಮನ್ನು ಸಾದಾರಣವಾಗಿ ಕಾಣುತ್ತಾರೆ. ಎಂದು ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶ್ಯತ ೧೭ರಷ್ಟು ಮಾಹಿತಿದಾರರು ತಮ್ಮನ್ನು ಅತೀ ಕೀಳಾಗಿ ಯಾವುದೇ ಗೌರವ ನೀಡದೆ ಕೀಳಾಗಿ ನೋಡಿಕೊಳ್ಳುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಬುಡಕಟ್ಟು ಜನರು ಇತರರು ತಮ್ಮನ್ನು ಗೌರವದಿಂದ ಕಾಣುವ ಪ್ರಮಾಣ ಬಹಳ ಕಡಿಮೆ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಾರಣ ಬುಡಕಟ್ಟು ಜನರು ತಾವು ಕೀಳು ಎಂಬ ಭಾವನೆಯನ್ನು ಇತರ ಸಮುದಾಯದವರು ಹೊಂದಿದ್ದಾರೆ.

ಪ್ರತಿಶತ ೨೮ರಷ್ಟು ಮಾಹಿತಿದಾರರು ತಾವುಗಳು ಬುಡಕಟ್ಟು ಜನಾಂಗದವರು ಎಂಬಂತ ಕೀಳು ಭಾವನೆಯಿಲ್ಲದೆ ಬ್ರಾಹ್ಮಣರ ದೇವಾಲಯಗಳಿಗೆ ಭೇಟಿ ನೀಡುತ್ತೇವೆ ಎಂದು ತಿಳಿಸಿದ್ದಾರೆ. ಅದರಂತೆ ಪ್ರತಿಶತ ೭೨ರಷ್ಟು ಮಾಹಿತಿದಾರರು ತಾವುಗಳು ಯಾವುದೇ ಕಾರಣಕ್ಕೆ ದೇವಾಲಯ ಗಳಿಗೆ ಭೇಟಿ ನೀಡುವುದಿಲ್ಲ ಎಂದು ತಿಳಿಸಿದ್ದಾರೆ. ಮೇಲಿನ ವಿವರಣೆಯಂತೆ ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ಉನ್ನತ ವರ್ಗದವರ ದೇವಾಲಯಗಳ ಕುರಿತು ನಿರಾಸಕ್ತಿ ಭಾವನೆಯನ್ನು ಹೊಂದಿದ್ದು ಅವುಗಳಿಗೆ ಭೇಟಿ ನೀಡಲು ನಮಗೆ ಆಸಕ್ತಿ ಇಲ್ಲ ಎಂದು ತಿಳಿಸುತ್ತಾರೆ.

ಪ್ರತಿಶತ ೨ರಷ್ಟು ಮಾಹಿತಿದಾರರು ಮೇಲ್ಜಾತಿಯವರು ಮತ್ತು ಇತರರು ತಾವು ತಯಾರಿಸಿದ ಆಹಾರವನ್ನು ಸ್ವೀಕರಿಸುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶತ ೬೦ರಷ್ಟು ಮಾಹಿತಿದಾರರು ತಾವು ತಯಾರಿಸಿದ ಆಹಾರವನ್ನು ಸ್ವೀಕರಿಸುವದಿಲ್ಲ ಎಂದು ತಿಳಿಸಿದ್ದಾರೆ. ಇವರ ಕುರಿತಾಗಿ ಪ್ರತಿಶತ ೩೮ರಷ್ಟು ಮಾಹಿತಿದಾರರು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲು ಇಷ್ಟ ಇಲ್ಲವೆಂದು ತಿಳಿಸಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಸಮಾಜವು ಅಷ್ಟೊಂದು ತೀವ್ರ ರೀತಿಯಲ್ಲಿ ಬದಲಾವಣೆ ಮತ್ತು ಪರಿವರ್ತನೆ ಹೊಂದುತ್ತಿದ್ದಾಗಲೂ ಹಿಂದಿನ ಮಡಿ, ಮೈಲಿಗೆ, ಕಲ್ಪನೆಯಿಂದ ಆಧಾರಿತವಾಗಿ ಮೇಲ್ಜಾತಿಯವರು ತಾವುಗಳು ಶ್ರೇಷ್ಠರು ಎಂಬ ಭಾವನೆಯಿಂದ ಬುಡಕಟ್ಟು ಜನಾಂಗದವರು ತಯಾರಿಸುವ ಆಹಾರವನ್ನು ಸ್ವೀಕರಿಸುವುದಿಲ್ಲ.

ಸಾಮಾಜಿಕ ಏಣಿಶ್ರೇಣಿ ವ್ಯವಸ್ತೆಯಲ್ಲಿ ಸಿದ್ದಿಯರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದವರಾಗಿದ್ದು, ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿರುವಾಗ, ಅವರದೇ ಧರ್ಮದ ಇಲ್ಲಿನ ಸ್ಥಳೀಯರು ಅವರನ್ನು ನಿಕೃಷ್ಟವಾಗಿ


ಕಾಣುತ್ತಿರುವು ಕಂಡು ಬಂದಿದೆ. ಇದಕ್ಕೆ ಕಾರಣ ಅವರ ಮೈ ಬಣ್ಣ ಮತ್ತು ದೇಹ ರಚನೆ ಎಂದು ತಿಳಿದುಬರುತ್ತದೆ. ಅಂದರೆ, ಭಾರತೀಯ ಸಮಾಜದ ಜಾತಿ ಪದ್ದತಿಯಲ್ಲಿ ಕೇಳಜಾತಿಯ ಜನರು ಮತ್ತು ಇತರ ಸಿದ್ದಿಯೇತರ ಬುಡಕಟ್ಟು ಸಮೂಹಗಳು ಎದುರಿಸುತ್ತಿರುವ ಸಾಮಜಿಕ ಪ್ರತ್ಯೇಕತೆ ಮತ್ತು ಜನಾಂಗೀಯ ಪ್ರತ್ಯೇಕತೆಯಿಂದ ಬದುಕುತ್ತಿದ್ದಾರೆ.

೫.೫. ಶೈಕ್ಷಣಿಕ ಸ್ಥಿತಿಗತಿ

ಕೋಷ್ಟಕ ೫.೯. ಶಿಕ್ಷಣದ ಪ್ರಮಾಣ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಅನಕ್ಷರಸ್ಥರು	೨೧೪	೫೫
೨.	ಶಿಕ್ಷಿತರು	೧೭೬	೪೫
	ಒಟ್ಟು	**೩೯೦**	**೧೦೦**

ಲಂಬಚಿತ್ರ ೫.೯. ಶಿಕ್ಷಿತರ ಹಾಗೂ ಅನಕ್ಷರಸ್ಥರ ಪ್ರಮಾಣ



ಶಿಕ್ಷಣವು ಮಾನವನನ್ನು ಪ್ರಗತಿಪತದತ್ತ ಕೊಂಡೊಯ್ಯುವ ಒಂದು ಪ್ರಬಲ ಸಾಧನ, ಆದ್ದರಿಂದ ಯಾವುದೇ ಸಮೂಹದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಅರ್ಥ ಮಾಡಿಕೊಳ್ಳಲು ಆ ಮೂಹದ ಶೈಕ್ಷಣಿ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದು ಅವಶ್ಯಕ. ಅದರಂತೆ, ಮೇಲಿನ ಕೋಷ್ಟಕ ೫.೯ರ ವಿವರಣೆಯಂತೆ ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ೩೯೦ ಕುಟುಂಬಗಳ ಮಾಹಿತಿದಾರರಲ್ಲಿ ೨೧೪ ಕುಟುಂಬಗಳಲ್ಲಿನ ಪ್ರತಿಶತ ೫೫ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿದ್ದು ಯಾವುದೇ ರೀತಿಯ ಅಕ್ಷರ ಜ್ಞಾನವನ್ನು ಹೊಂದಿಲ್ಲ. ಅದರಂತೆ ೧೭೬ ಕುಟುಂಬಗಳ ಪ್ರತಿಶತ ೪೫ರಷ್ಟು ಮಾಹಿತಿದಾರರು ಅಕ್ಷರಸ್ಥರಾಗಿದ್ದರೆ.

ಈ ವಿವರಣೆಯ ಪ್ರಕಾರ ಅಧಿಕ ಪ್ರಮಾಣದಲ್ಲಿ ಬುಡಕಟ್ಟು ಮಾಹಿತಿದಾರರು ಯಾವುದೇ ರೀತಿಯ ಅಕ್ಷರಜ್ಞಾನವನ್ನು ಹೊಂದದೆ ಇರುವುದು ಕಂಡುಬರುತ್ತದೆ. ಕಾರಣ ಕೆಲವೊಂದು ಬುಡಕಟ್ಟು ಪ್ರದೇಶಗಳೆಲ್ಲ ಉತ್ತಮವಾದ ಶಾಲೆ ಮತ್ತು ಶಿಕ್ಷಕರ ಕೊರತೆಯು ಕಂಡು ಬರುತ್ತದೆ. ಇದರಿಂದಾಗಿ ಶಿಕ್ಷಿತರ ಪ್ರಮಾಣವು ಕಡಿಮೆ ಇರುವುದು ಕಂಡು ಬರುತ್ತದೆ.

ಪ್ರತಿಶತ ೫೪ರಷ್ಟು ಮಾಹಿತಿದಾರರು ಅಭಿಪ್ರಾಯಪಡುವಂತೆ ತಮ್ಮ ಕುಟುಂಬದಲ್ಲಿರುವ ಮಕ್ಕಳು ಮತ್ತು ಇತರ ಸದಸ್ಯರು ಶಾಲೆಗೆ ಹೋಗುತ್ತಿದ್ದು ಸಾಕ್ಷರರಾಗಿದ್ದಾರೆ ಎಂಬಂತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶತ ೪೬ರಷ್ಟು ಮಾಹಿತಿದಾರರ ಕುಟುಂಬದ ಸದಸ್ಯರು ಅನಕ್ಷರಸ್ಥರು ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಸರ್ಕಾರ ಎಲ್ಲ ಪ್ರದೇಶಗಳಲ್ಲಿಯೂ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿದ್ದು ನಿಧಾನವಾಗಿ ಸಮುದಾಯ ಎಲ್ಲಾ ಸದಸ್ಯರು ಅವುಗಳ ಸದುಪಯೋಗವನ್ನು ಪಡೆಯುತ್ತಿದ್ದು ಸಾಕ್ಷರತೆಯ ಪ್ರಮಾಣವು ನಿಧಾನವಾಗಿ ಅಧಿಕವಾಗಿರುವುದು ಕಂಡುಬಂದಿದೆ.

ಬುಡಕಟ್ಟು ಜನರ ಶೈಕ್ಷಣಿಕ ಮಟ್ಟವನ್ನು ಇತರ ಜನಸಮೂಹಗಳ ಶೈಕ್ಷಣಿಕ ಮಟ್ಟಕ್ಕೆ ಹೋಲಿಕೆ ಮಾಡಿದಾಗ ಬುಡಕಟ್ಟು ಜನರಲ್ಲಿ ಶಿಕ್ಷಣ ಕಡಿಮೆಯಿದೆ. ಇದಕ್ಕೆ ಹಲವಾರು ಅಂಶಗಳು ಕಾರಣವಾಗಿವೆ. ಅದರಂತೆ, ಈ ಅಧ್ಯಯನದ ಮಾಹಿತಿದಾರರ ಪೈಕಿ ಪ್ರತಿಶತ ೨೪ರಷ್ಟು ಮಾಹಿತಿ ದಾರರು ತಾವು ಎದುರಿಸುತ್ತಿರುವಂತಹ ಅತಿಯಾದ ಬಡತನವೇ ತಾವು ಅನಕ್ಷರಸ್ಥರಾಗಿಸಲು ಮೂಲ ಕಾರಣವಾಗಿದೆ. ಅದರಂತೆ ಪ್ರತಿಶತ ೪೨ರಷ್ಟು ಮಾಹಿತಿದಾರರು ತಾವು ವಾಸಿಸುವಂತಹ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಬೇಕಾದ ಮೂಲ ಸೌಕರ್ಯಗಳಿಲ್ಲದಿರುವುದು ಅವರ ಅನಕ್ಷರತೆಗೆ ಕಾರಣವಾಗಿದೆ. ಪ್ರತಿಶತ ೩೪ರಷ್ಟು ಮಾಹಿತಿದಾರರು ಅಭಿಪ್ರಾಯಪಡುವಂತೆ ತಮಗೆ ಶಿಕ್ಷಣದ ಮಹತ್ವದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಅನಕ್ಷರತೆಗೆ ಕಾರಣವಾಗಿದೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದ ೪೨ ಮಾಹಿತಿದಾರರು ತಾವುಗಳು ಸೌಲಭ್ಯ ವಂಚಿತರಾಗಿದ್ದು, ಆದ್ದರಿಂದಲೇ ಸಾಕ್ಷರರಾಗಲು ಸಾಧ್ಯವಾಗುತ್ತಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆಯ್ಕೆ ಮಾಡಿಕೊಂಡ ಮಾಹಿತಿದಾರರಲ್ಲಿ ಪ್ರತಿಶತ ೩೩ ರಷ್ಟು ಬುಡಕಟ್ಟು ನಿವಾಸಿಗಳು ಅವರ ಸಾಕ್ಷರತೆಯನ್ನು ಹೆಚ್ಚಿಸಲು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಕೈಗೊಂಡ ಕ್ರಮಗಳ ಬಗ್ಗೆ ತೃಪ್ತಿ ಹೊಂದಿದ್ದಾರೆ. ಅದರಂತೆ ಪ್ರತಿಶತ ೬೭ರಷ್ಟು ಮಾಹಿತಿದಾರರು ತಮಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದರ ಕುರಿತು ಯಾವುದೇ ತಿಳುವಳಿಕೆಯನ್ನು ಹೊಂದಿಲ್ಲಾ.

ಆಯ್ಕೆ ಮಾಡಿಕೊಂಡ ಮಾಹಿತಿದಾರರಲ್ಲಿ ಪ್ರತಿಶತ ೫೨ರಷ್ಟು ಮಾಹಿತಿದಾರರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸರ್ಕಾರದ ಹಾಸ್ಟೇಲ್‌ಗಳ ಸೌಲಭ್ಯದ ಅವಶ್ಯಕತೆ ಇದೆ.

ಅದರಂತೆ ಪ್ರತಿಶತ ೪೮ರಷ್ಟು ಮಾಹಿತಿದಾರರು ಹಾಸ್ಟೇಲ್ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದ ಮಾಹಿತಿದಾರರು ಅನಕ್ಷರಸ್ಥ ರಾಗಿರುವದರಿಂದ ತಮ್ಮ ಮಕ್ಕಳಿಗೂ ಶಿಕ್ಷಣ ಕೊಡಿಸುವ ಅವಶ್ಯಕತೆಯನ್ನು ಹೊಂದಿರ ಲಾರರು. ಆದ್ದರಿಂದ ಹಾಸ್ಟೇಲಿನ ಪ್ರಾಮುಖ್ಯತೆಯು ತಿಳಿದಿರಲಾರದು. ಇದರಿಂದಾಗಿ ಹಾಸ್ಟೇಲಿನ ಅವಶ್ಯಕತೆ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೫.೧೦: ಮಹಿಳೆಯರ ಶಿಕ್ಷಣದ ಪ್ರಮಾಣ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಅನಕ್ಷರಸ್ಥರು	೮೯	೬೮
೨.	ಶಿಕ್ಷಿತರು	೪೧	೩೨
	ಒಟ್ಟು	**೧೩೦**	**೧೦೦**

ಯಾವುದೇ ಸಮಾಜದ ಸ್ಥಾನಮಾನವನ್ನು ಆ ಸಮಾಜದಲ್ಲಿನ ಮಹಿಳೆಯರ ಶಿಕ್ಷಣದ ಆಧಾರದ ಮೇಲೆ ಮಾಪನ ಮಾಡಲಾಗುತ್ತದೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದ ಮಾಹಿತಿದಾರರ ಪೈಕಿ, ಕೋಷ್ಟಕ ೫.೧೦ರಲ್ಲಿನ ವಿವರಣೆಯಂತೆ ೩೯೦ ಮಾಹಿತಿದಾರರಿದ್ದು ಅವರಲ್ಲಿ ಶೇ. ೩೨ರಷ್ಟು ಮಹಿಳಾ ಮಹಿತಿದಾರರಿದ್ದಾರೆ ಅಂದರೆ ೧೩೦ ಮಹಿಳಾ ಮಾಹಿತಿ ದಾರರಿದ್ದರೆ ಇವರಲ್ಲಿ ಪ್ರತಿಶತ ೬೮ರಷ್ಟು ಮಹಿಳಾ ಮಾಹಿತಿದಾರರು ಅನಕ್ಷರಸ್ಥರಾಗಿದ್ದು ಅಂದರೆ ಕೇವಲ ಶೇ. ೩೨ ಮಹಿಳಾ ಮಾಹಿತಿದಾರರು ಸಾಕ್ಷರರಾಗಿದ್ದಾರೆ. ಮೇಲಿನ ವಿವರಣೆ ಯನ್ನು ನೋಡಲಾಗಿ ಬುಡಕಟ್ಟು ಪ್ರದೇಶಗಳಲ್ಲಿ ಸಾಂಪ್ರದಾಯಿಕವಾದ ಮನೋಭಾವನೆಯನ್ನು ಹೊಂದಿದ್ದು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರುವುದು ಕಂಡು ಬರುತ್ತದೆ. ಇದರಿಂದ ಮಹಿಳಾ ಮಾಹಿತಿದಾರರ ಶಿಕ್ಷಣದ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ.

ಸಮಾಜದ ಭವಿಷ್ಯದ ಪ್ರಜರಗಳಾದ ಮಕ್ಕಳ ಶಿಕ್ಷನಕ್ಕೆ ಸರ್ಕಾರು ಹೆಚ್ಚು ಒತ್ತು ನೀಡುತ್ತಿದ್ದು, ಬುಡಕಟ್ಟು ಅಭಿವೃದ್ಧಿಯಲ್ಲಿ ಶಿಕ್ಷಣಕ್ಕೆ ಹೆಚು ಪ್ರಾತಿನಿಧ್ಯ ನೀಡಲಾಗುತ್ತಿದೆ. ಈ ಅಧ್ಯಯನದ ಮಾಹಿತಿದಾರರಲ್ಲಿ ಪ್ರತಿಶತ ೧೩ ಮಾಹಿತಿದಾರರ ಅಭಿಪ್ರಾಯಂದಂತೆ ಅವರ ಮಕ್ಕಳು ಅನಕ್ಷರಸ್ಥರಾಗಿದ್ದು ಶಾಲೆಗೆ ಹೋಗುತ್ತಿಲ್ಲ. ಪ್ರತಿಶತ ೪೮ರಷ್ಟು ಮಾಹಿತಿದಾರರ ತಮ್ಮ ಮಕ್ಕಳು ೧-೪ನೇ ತರಗತಿಯ ವರೆಗೆ ಓದಿದ್ದದ್ದಾರೆ. ಪ್ರತಿಶತ ೩೦ರಷ್ಟು ಮಾಹಿತಿದಾರರು ತಮ್ಮ ಮಕ್ಕಳು ೫ರಿಂದ ೭ನೇ ತರಗತಿಯ ವರೆಗೆ ಓದುತ್ತಿದ್ದಾರೆ. ಶೇ. ೬ರಷ್ಟು ಮಾಹಿತಿದಾರರ ತಮ್ಮ ಮಕ್ಕಳು ೮ರಿಂದ ೧೦ನೇ ತರಗತಿಗಳಲ್ಲಿ ಓದುತ್ತಿದ್ದಾರೆ. ಪ್ರತಿಸತ ೩ರಷ್ಟು ಮಾಹಿತಿದಾರರು ತಮ್ಮ ಮಕ್ಕಳು ಪದವಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ.


ಆಯ್ಕೆ ಮಾಡಿಕೊಂಡ ಮಾಹಿತಿದಾರರಲ್ಲಿ ಮಾಹಿತಿದಾರರಲ್ಲಿ ಪ್ರತಿಶತ ೭೭ರಷ್ಟು ಮಾಹಿತಿ ದಾರರು ತಾವು ಏಕಪತ್ನಿತ್ವ ಪದ್ಧತಿಯನ್ನು ಆಚರಿಸುವಲ್ಲಿ ನಂಬಿಕೆಯನ್ನು ಹೊಂದಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉಳಿದಂತೆ ಪ್ರತಿಶತ ೭ರಷ್ಟು ಮಾಹಿತಿದಾರರು ದ್ವಿಪತ್ನಿತ್ವ ಪದ್ಧತಿಯನ್ನು ಆಚರಿಸುವ ಕುರಿತು ಉತ್ತಮ ಅಭಿಪ್ರಾಯವನ್ನು ಹೊಂದಿದವರಾಗಿದ್ದಾರೆ. ಉಳಿದಂತೆ ಪ್ರತಿಶತ ೧೫ ರಷ್ಟು ಮಾಹಿತಿದಾರರು ಬಹುಪತ್ನಿತ್ವ ಪದ್ಧತಿಯ ಕುರಿತು ಉತ್ತಮ ಅಭಿಪ್ರಾಯವನ್ನು ಹೊಂದಿದವರಾಗಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದ ಮಾಹಿತಿದಾರರು ಏಕ ಪತ್ನಿತ್ವ ಪದ್ಧತಿಯೇ ಶ್ರೇಷ್ಠವಾದುದು ಎಂಬಂತ ಅಭಿಪ್ರಾಯ ವನ್ನು ವ್ಯಕ್ತಪಡುತ್ತಿರುವುದು ಕಂಡುಬರುತ್ತದೆ. ಅದರಂತೆ ಅಷ್ಟೊಂದು ನಾಗರಿಕತೆಯ ಬೆಳವಣೆಯ ಕುರಿತು ಜ್ಞಾನವನ್ನು ಹೊಂದದೆ ಇರುವಂತಹ ಮಾಹಿತಿದಾರರು ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವ ಪದ್ಧತಿಯನ್ನು ಸಹ ಪುರಸ್ಕರಿಸುತ್ತಾರೆ.

ಕೋಷ್ಟಕ ೫.೧೧ ಮಾಹಿತಿದಾರ ಕುಟುಂಬಗಳ ಸದಸ್ಯರ ಶೈಕ್ಷಣಿಕ ಮಟ್ಟ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಅನಕ್ಷರಸ್ಥರು	೨೦೫	೫೩
೨.	೧ ರಿಂದ ೪ ನೇ ತರಗತಿ	೧೦೫	೨೭
೩.	೫ ರಿಂದ ೭ ನೇ ತರಗತಿ	೫೦	೧೩
೪.	೮ ರಿಂದ ೧೦ ನೇ ತರಗತಿ	೨೫	
೫.	ಪಿಯುಸಿ ಅಥವಾ ಪದವಿ	೫	೧
	ಒಟ್ಟು	**೩೯೦**	**೧೦೦**

ಕೋಷ್ಟಕ ೫.೧೧ರ ವಿವರಣೆಯಂತೆ ಪ್ರಸ್ತುತ ಅಧಯಯನಕ್ಕೆ ಆಯ್ಕೆ ಮಡಿಕೊಂಡಿದ್ದ ೩೯೦ ಮಾಹಿತಿದಾರರ ಪೈಕಿ ೨೦೫ ಜನ ಮಾಹಿತಿದಾರರು ಅಂದರೆ, ಪ್ರತಿಶತ ೫೩ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿದ್ದಾರೆ. ಮಾಹಿತಿದಾರರಲ್ಲಿ ೧೦೫ ಜನರು ಅಂದರೆ, ಪ್ರತಿಶತ ೨೭ರಷ್ಟು ೧ರಿಂದ ೪ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದಿದ್ದಾರೆ. ಅದರಂತೆ ೫೦ ಜನರು ಅಂದರೆ, ಶೇ. ೧೩ರಷ್ಟು ಮಾಹಿತಿದಾರರು ೫ರಿಂದ ೭ನೇ ತರಗತಿವರೆಗೆ ಓದಿದವರಾಗಿದ್ದಾರೆ. ಹಾಗೆಯೇ, ೨೫ ಜನರು ಅಂದರೆ ಪ್ರತಿಶತ ೬ರಷ್ಟು ಮಂದಿ ೮ರಿಂದ ೧೦ನೇ ತರಗತಿಯ ವರೆಗೆ ಶಿಕ್ಷಣ ಪಡೆದವರಾಗಿದ್ದಾರೆ. ೫ ಜನರು ಅಂದರೆ ಶೇ. ೧ರಷ್ಟು ಮಾಹಿತಿದಾರರು ಪಿಯುಸಿ ಅಥವಾ ಪದವಿ ಶಿಕ್ಷಣ ಪಡೆದವರಾಗಿದ್ದಾರೆ. ಸಿದ್ದಿ ಜನಾಂಗದವಲ್ಲಿ ಉನ್ನತ ಶಿಕ್ಷಣಕ್ಕೆ ಹೋಗುತ್ತಿರುವವರ ಸಂಖ್ಯೆ ಮತ್ತು ಅದರ ಬಗೆಗಿನ ಅರಿವು ತುಂಬಾ ಕಡಿಮಿ ಇದೆ.

ಲಂಬಚಿತ್ರ ೫.೧೧ ಮಾಹಿತಿದಾರ ಕುಟುಂಬಗಳ ಸದಸ್ಯರ ಶೈಕ್ಷಣಿಕ ಮಟ್ಟ



	ಅನಕ್ಷರಸ್ಥರು	೧-೪ನೇ ತರಗತಿ	೫-೭ನೇ ತರಗತಿ	೮-೧೦ನೇ ತರಗತಿ	ಪಿಯುಸಿ ಅಥವಾ ಪದವಿ
ಸಂಖ್ಯೆ	೨೦೫	೧೦೫	೫೦	೨೫	೫
ಶೇಕಡ	೫೩	೨೭	೧೩		೧

ಪ್ರತಿಶತ ೨೭ರಷ್ಟು ಮಾಹಿತಿದಾರರ ಮಕ್ಕಳು ಅಂಗನವಾಡಿಗೆ ಹೋಗುವವರಾಗಿದ್ದಾರೆ. ಪ್ರತಿಶತ ೩೮ರಷ್ಟು ಮಾಹಿತಿದಾರರ ಮಕ್ಕಳು ೧ರಿಂದ ೪ನೇ ತರಗತಿಯಲ್ಲಿ ಓದುತ್ತಿದ್ದಾರೆ. ಪ್ರತಿಶತ ೨೨ರಷ್ಟು ಮಾಹಿತಿದಾರರ ಮಕ್ಕಳು ೫ರಿಂದ ೭ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರತಿಶತ ೮ರಷ್ಟು ಮಾಹಿತಿದಾರರ ಮಕ್ಕಳು ೮ರಿಂದ ೧೦ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹಾಗೂ ಶೇಖಡ ೪ರಷ್ಟು ಮಾಹಿತಿದಾರರ ಮಕ್ಕಳು ಪಿಯುಸಿ ಅಥವಾ ಪದವಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದಲ್ಲಿ ೩೮ರಷ್ಟು ಮಾಹಿತಿದಾರರ ಮಕ್ಕಳು ೧ರಿಂದ ೪ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆಯುತ್ತಿರುವುದು ಕಂಡುಬರುತ್ತವೆ. ಬುಡಕಟ್ಟು ಜನರಲ್ಲಿ ಶಿಕ್ಷಣದ ತಿಳುವಳಿಕೆ ಮತ್ತು ಶಿಕ್ಷಣದ ಸೌಲಭ್ಯಗಳ ಪ್ರಮಾಣ ಕಡಿಮೆ ಇರುವುದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವವರ ಸಂಖ್ಯೆ ಕಡಿಮೆ ಕಂಡುಬರುತ್ತದೆ. ಅತೀ ಕಡಿಮೆ ಪ್ರಮಾಣದ ಮಾಹಿತಿದಾರರ ಮಕ್ಕಳು ಪದವಿ ಹಂತದ ಶಿಕ್ಷಣವನ್ನು ಪಡೆಯುತ್ತಿರುವುದು ಕಂಡುಬರುತ್ತದೆ.

ಪ್ರತಿಶತ ೩೩ರಷ್ಟು ಮಾಹಿತಿದಾರರು ಅಭಿಪ್ರಾಯಪಡುವಂತೆ ಅವರ ಮಕ್ಕಳು ಆರೋಗ್ಯ ವಾಗಿದ್ದಾರೆ, ಪ್ರತಿಶತ ೫೧ರಷ್ಟು ಮಾಹಿತಿದಾರರ ಮಕ್ಕಳು ಮಧ್ಯಮ ಆರೋಗ್ಯವನ್ನು ಹೊಂದಿದವ ರಾಗಿದ್ದಾರೆ. ಪ್ರತಿಶತ ೧೪ರಷ್ಟು ಮಾಹಿತಿದಾರರ ಮಕ್ಕಳು ಉತ್ತಮವಾದ ಆರೋಗ್ಯವನ್ನು ಹೊಂದದೆ ಇರುವುದು ತಿಳಿದು ಬರುತ್ತದೆ. ಮೇಲಿನ ವಿವರಣೆಯನ್ನು ನೋಡಲಾಗಿ ಅಧಿಕ ಪ್ರಮಾಣದ ಮಾಹಿತಿದಾರರ ಮಕ್ಕಳು ಮಧ್ಯಮ ರೀತಿಯ ಆರೋಗ್ಯವನ್ನು ಹೊಂದಿರುವದು ಕಂಡು ಬರುತ್ತದೆ. ಕಾರಣ ಸಾಂಪ್ರದಾಯಿಕ ಮಾದರಿಯ ಚಿಕಿತ್ಸೆಯ ಕುರಿತು ಆಸಕ್ತಿ ಹೊಂದಿರು ವಂತಹ ಇವರು ಆಧುನಿಕ ಸೌಲಭ್ಯಗಳಿಂದ ದೂರವಿರುತ್ತಾರೆ. ಇದರಿಂದ ಮಕ್ಕಳು ಮೇಲಿಂದ ಮೇಲೆ ಅನಾರೋಗ್ಯದ ಸಮಸ್ಯೆಗಳನ್ನು ಸಹ ಎದುರಿಸುವುದು ಕಂಡುಬರುತ್ತದೆ.

೫.೬. ಆರೋಗ್ಯ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದರರ ಪ್ರಕಾರ ಪ್ರತಿಶತ ೪೪ರಷ್ಟು ಮಾಹಿತಿದಾರರ ಕುಟುಂಬದ ಸದಸ್ಯರು ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದರಂತೆ ಪ್ರತಿಶತ ೧೯ರಷ್ಟು ಮಾಹಿತಿದಾರರು ಕುಟುಂಬದ ಸದಸ್ಯರು ಯಾವಾಗಲಾದರೊಮ್ಮೆ ಅನಾರೋಗ್ಯ ಪೀಡಿತರಾದರೆ ಚಿಕಿತ್ಸೆ ಪಡೆಯುತ್ತಾರೆ. ಪ್ರತಿಶತ ೩೭ರಷ್ಟು ಮಾಹಿತಿದಾರರು ಕುಟುಂಬದ ಸದಸ್ಯರು ಯಾವುದೇ ಆರೋಗ್ಯ ತೊಂದರೆಯನ್ನು ಎದುರಿಸುವದಿಲ್ಲ. ಮೇಲಿನ ವಿವರಣೆಯ ಪ್ರಕಾರ ಅಧಿಕ ಪ್ರಮಾಣದಲ್ಲಿ ಮಾಹಿತಿದಾರರ ಕುಟುಂಬದ ಸದಸ್ಯರು ಅನಾರೋಗ್ಯ ಪೀಡಿತರಾಗಿರುವದು ಕಂಡು ಬಂದಿದೆ.

ಅಧ್ಯಯನದ ಮಾಹಿತಿದರರಲ್ಲಿ ಪ್ರತಿಶತ ೧೦ರಷ್ಟು ಮಾಹಿತಿದಾರರು ಜ್ವರದಿಂದ ಬಳಲುತ್ತಿದ್ದಾರೆ. ಪ್ರತಿಶತ ೩೯ರಷ್ಟು ಮಾಹಿತಿದಾರರು ಕೆಲವೊಮ್ಮೆ ಕಾಯಿಲೆಗೆ ಬಿದ್ದರೆ ಪ್ರತಿಶತ ೫೧ ರಷ್ಟು ತಾವು ಜ್ವರದ ಸಮಸ್ಯೆಯನ್ನು ಎದುರಿಸಿಲ್ಲ. ಪ್ರತಿಶತ ೨೧ರಷ್ಟು ಮಾಹಿತಿದಾರರು ಭೇದಿ ಸಮಸ್ಯೆಯನ್ನು ಎದುರಿಸಿದ್ದರೆ ಪ್ರತಿಶತ ೬೯ರಷ್ಟು ಮಂದಿ ಕೆಲವೊಮ್ಮೆ ಸಮಸ್ಯೆ ಎದುರಿಸಿದರೆ ಪ್ರತಿಶತ ೧೦ರಷ್ಟು ಈ ಸಮಸ್ಯೆಯನ್ನು ಎದುರಿಸುವುದಿಲ್ಲ. ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶತ ೪೯ರಷ್ಟು ಮಾಹಿತಿದಾರರು ಮಲೇರಿಯಾ ಕಾಯಿಲೆಯನ್ನು ಎದುರಿಸಿದರೆ ಪ್ರತಿಶತ ೧೫ರಷ್ಟು ಕೆಲವೊಮ್ಮೆ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಎಂದರೆ ಪ್ರತಿಶತ ೨೬ರಷ್ಟು ತಾವುಗಳು ಮಲೇರಿಯಾ ಸಮಸ್ಯೆಯನ್ನು ಎದುರಿಸಿಲ್ಲ. ಪ್ರತಿಶತ ೨೮ರಷ್ಟು ಮಾಹಿತಿದಾರರು ಟೈಪಾಯಿಡ್ ಕಾಯಿಲೆಯನ್ನು ಎದುರಿಸಿದ್ದರೆ, ಪ್ರತಿಶತ ೧೬ರಷ್ಟು ತಾವು ಈ ಸಮಸ್ಯೆ ಎದುರಿಸಿಲ್ಲ ಎಂದು ತಿಳಿಸಿದ್ದಾರೆ. ಉಳಿದ ೫೬ರಷ್ಟು ಮಾಹಿತಿದರರು ಕೆಲವೊಮ್ಮೆ ಈ ಸಮಸ್ಯೆ ಎದುರಿಸುತ್ತೇವೆ ಎಂದಿದ್ದಾರೆ. ೧೮ರಷ್ಟು ಮಾಹಿತಿದಾರರು ಕಾಮಾಲ ಕಾಯಿಲೆಗೆ ಒಳಗಾಗಿದ್ದಾರೆ. ೪೪ರಷ್ಟು ಕಾಮಾಲೆ ಸಮಸ್ಯೆಯನ್ನು ಎದುರಿಸಿಲ್ಲ ಎಂದು ತಿಳಿಸಿದ್ದಾರೆ. ಪ್ರತಿಶತ ೨೪ರಷ್ಟು ಮಾಹಿತಿದಾರರು ಅಸ್ತಮಾ ಸಮಸ್ಯೆಯನ್ನು ಎದುರಿಸಿದರೆ ಪ್ರತಿಶತ ೨೨ರಷ್ಟು ಕೆಲವೊಮ್ಮೆ ಸಮಸ್ಯೆಯನ್ನು ಎದುರಿಸುತ್ತೇವೆ ಎಂದಿದ್ದಾರೆ. ಅದರಂತೆ ೫೫ರಷ್ಟು ಮಾಹಿತಿದಾರರು ಈ ಸಮಸ್ಯೆಯನ್ನು ಎದುರಿಸಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರತಿಶತ ೫೩ರಷ್ಟು ಮಾಹಿತಿದಾರರು ಅಲರ್ಜಿಯಂತಹ ಕಾಯಿಲೆಯನ್ನು ಎದುರಿಸಿದರೆ ಪ್ರತಿಶತ ೩೮ರಷ್ಟು ಕೆಲವೊಮ್ಮೆ ಈ ಸಮಸ್ಯೆಯನ್ನು ಎದುರಿಸುತ್ತೇವೆ ಎಂದಿದ್ದಾರೆ.

ಮೇಲಿನ ವಿವರಣೆಯನ್ನು ನೋಡಲಾಗಿ ಸಿದ್ದಿ ಜನಾಂಗದ ಜನರು ಒಂದಲ್ಲಾ ಒಂದು ರೀತಿಯ ಕಾಯಿಲೆಗಳಿಗೆ ಒಳಗಾಗಿರುವದು ತಿಳಿದು ಬರುತ್ತದೆ. ಅಧಿಕ ಪ್ರಮಾಣದಲ್ಲಿ ಮಾಹಿತಿ ದಾರರು ಅಂಟು ರೋಗಗಳನ್ನು ಎದುರಿಸಿರುವದು ತಿಳಿದು ಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಅವರಲ್ಲಿರುವ ಅನಕ್ಷರತೆ ಮತ್ತು ಮೂಢ ನಂಬಿಕೆಗಳು ಮತ್ತು ಆರೋಗ್ಯ ಮತ್ತು ನೈರ್ಮಲ್ಯದ ಕುರಿತಾಗಿರುವ ನಿರ್ಲಕ್ಷ್ಯತೆ ಇರುವುದು ತಿಳಿದುಬರುತ್ತದೆ.


ಚಿಕಿತ್ಸೆಯ ರೀತಿ ಕುರಿತಾಗಿ ಅಭಿಪ್ರಾಯ

ಕಾಯಿಲೆಗೆ ಚಿಕಿತ್ಸೆಯನ್ನು ಯಾವ ರೀತಿಯ ವೈದ್ಯ ಪದ್ಧತಿಯಿಂದ ಪಡೆಯುತ್ತಾರೆ ಎಂಬುದಕ್ಕೆ, ಪ್ರತಿಶತ ೯ರಷ್ಟು ಮಾಹಿತಿದಾರರು ಅಲೋಪತಿ ಚಿಕಿತ್ಸೆಯನ್ನು ಪಡೆಯುತ್ತಾರೆ. ಪ್ರತಿಶತ ೫೮ರಷ್ಟು ಮಾಹಿತಿದಾರರು ಆಯುರ್ವೇದದ ಚಿಕಿತ್ಸೆಯನ್ನು ಪಡೆಯುತ್ತಾರೆ. ಅದರಂತೆ ೩೩ರಷ್ಟು ಮಾಹಿತಿದಾರರು ಹೋಮಿಯೋಪತಿ ಚಿಕಿತ್ಸೆಯನ್ನು ಪಡೆಯುತ್ತಿರುವುದು ಕಂಡುಬಂದಿದೆ. ಮೇಲಿನ ವಿವರಣೆ ಯಪ್ರಕಾರ ಅಧಿಕ ಪ್ರಮಾಣದ ಮಾಹಿತಿದಾರರು ಆಯುರ್ವೇದ ಚಿಕಿತ್ಸೆ ಪಡೆಯುವದಾಗಿ ತಿಳಿಸಿದ್ದಾರೆ ಕಾರಣ ಕಾಡುಗಳಲ್ಲಿಯ ಸಸ್ಯಗಳ ಕುರಿತು ತಿಳುವಳಿಕೆ ಹೊಂದಿರುವ ಮಾಹಿತಿದಾರರು ಅದರ ಮೂಲಕವೇ ಚಿಕಿತ್ಸೆಯನ್ನು ಪಡೆಯುತ್ತಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧೨ ಸಾಂಪ್ರದಾಯಿಕ ವೈದ್ಯ ಪದ್ಧತಿ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ನಂಬಿಕೆ ಇದೆ	೨೮೨	೭೦
೨.	ನಂಬಿಕೆ ಇಲ್ಲ	೧೧೮	೩೦
	ಒಟ್ಟು	**೪೦೦**	**೧೦೦**

ಲಂಬಚಿತ್ರ ೫.೧೨ ಸಾಂಪ್ರದಾಯಿಕ ವೈದ್ಯಪದ್ಧತಿ



ಕೋಷ್ಟಕ ೫.೧೨ರ ವಿವರಣೆಯಂತೆ ಅಯ್ಕೆ ಮಾಡಿಕೊಂಡಿದ್ದ ೪೦೦ ಮಾಹಿತಿದರರ ಪೈಕಿ ೨೮೨ ಮಾಹಿತಿದಾರರು ಅಂದರೆ, ಶೇ. ೭೦ರಷ್ಟು ಮಾಹಿತಿದಾರರು ಸಾಂಪ್ರದಾಯಿಕವಾಗಿ ಆಯುರ್ವೇದ ಪದ್ಧತಿಯ ಚಿಕಿತ್ಸೆ ಕುರಿತು ನಂಬಿಕೆಯನ್ನು ಹೊಂದಿದ್ದಾರೆ. ಅದರಂತೆ, ೧೧೮ ಜನರು ಅಂದರೆ, ಪ್ರತಿಶತ ೩೦ರಷ್ಟು ಮಾಹಿತಿದಾರರು ಸಾಂಪ್ರದಾಯಿಕ ಚಿಕಿತ್ಸೆ ಕುರಿತು ನಂಬಿಕೆಯನ್ನು ಹೊಂದಿಲ್ಲ.

ಮೇಲಿನ ವಿವರಣೆಯನ್ನು ನೋಡಲಾಗಿ ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿದಾರರು ಸಾಂಪ್ರದಾಯಿಕ ವೈದ್ಯಪದ್ಧತಿಯ ಕುರಿತು ನಂಬಿಕೆ ಹೊಂದಿರುವದು ತಿಳಿದು ಬರುತ್ತದೆ. ಆದಿವಾಸಿ ಸಮುದಾಯದ ಜನರು ಇಂದಿಗೂ ತಮ್ಮ ಹಿರಿಯರು ಅನುಸರಿಸುವ ಪದ್ಧತಿಯ ಚಿಕಿತ್ಸೆಯಲ್ಲಿಯೇ ನಂಬಿಕೆಯನ್ನು ಹೊಂದಿರುವದು ತಿಳಿದು ಬಂದಿದೆ.

ಸರ್ಕಾರಿ ಆಸ್ಪತ್ರೆಯ ಕುರಿತಾದ ಮಾಹಿತಿ

ಆನರ ಆರೋಗ್ಯ ಸುಧಾರಣೆಯಲ್ಲಿ ಆಸ್ಪತ್ರೆಗಳ [ಆತ್ರ ಮುಖ್ಯವಾದದ್ದು. ಅದರಂತೆ ಆ ಅಧಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರಲ್ಲಿ ಪ್ರತಿಶತ ೪೧ರಷ್ಟು ಜನರು ತಾವು ಸರ್ಕಾರಿ ಆಸ್ಪತ್ರೆಯಿಂದ ಪಡೆಯುವಂತಹ ಸೌಲಭ್ಯಗಳಿಂದ ತೃಪ್ತಿ ಹೊಂದಿದ್ದಾರೆ. ಅದರಂತೆ ಪ್ರತಿಶತ ೫೯ರಷ್ಟು ಮಾಹಿತಿದಾರರು ಸರ್ಕಾರಿ ಆಸ್ಪತ್ರೆಯ ಸೌಲಭ್ಯಗಳ ಬಗೆಗೆ ತೃಪ್ತಿ ಹೊಂದಿಲ್ಲ. ಈ ಮಾಹಿತಿದಾರರು ತಮ್ಮ ಸಾಂಪ್ರದಾಯಿಕ ವೈದ್ಯಕೀಯ ಚಿಕಿತ್ಸೆಯಲ್ಲಿಯೇ ನಂಬಿಕೆಯನ್ನು ಹೊಂದಿದ್ದು ಯಾವುದೇ ಆಸ್ಪತ್ರೆಯನ್ನು ಅವಲಂಬಿಸಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ, ವೈದ್ಯರುಗಳ ನೇಮಕ ಆಗದೇ ಇರುವುದು, ಆಸ್ಪತ್ರೆಗೆ ಸರಿಯಾದ ಸಮಯಕ್ಕೆ ಬರಲು ಸೌಲಭ್ಯಗಳ ಅಲಭ್ಯತೆ, ವೈದ್ಯರುಗಳು ಅಸ್ಪತ್ರೆಯ ಬಳಿಯೇ ನೆಲೆಸಲು ಮೂಲಭೂತ ಸೌಲಭ್ಯಗಳು ಇಲ್ಲದೇ ಇರುವುದು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ತರಬೇತಿಯಿಲ್ಲದೆ ಇರುವುದು ಇಂತಹ ಕಾರಣಗಳಿಂದಾಗಿ ಸರ್ಕಾರಿ ಆಸ್ಪತ್ರೆಯ ಕುರಿತು ಸಿದ್ದಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸಾಂಪ್ರದಾಯಿಕ ವೈಧ್ಯ ಪದ್ದತಿ ಮೇಲೆ ನಂಬಿಕೆ ಹೊಂದಿರುವುದು ಕಂಡುಬಂದಿದೆ. ಯಲ್ಲಾಪುರ ತಾಲೂಕಿನ ಮಂಚೀಕೆರೆ, ಕಿರುವತ್ತಿ ಮತ್ತು ಗುಳ್ಳಾಪುರಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿಯೂ ಇವರು ಚಿಕಿತ್ಸೆ ಪಡೆಯುತ್ತಿರುವುದು ಕಂಡುಬಂದಿದೆ.

ಸಂಪ್ರದಾಯಿಕ ಮನೆ ವೈದ್ಯರನ್ನು ಹೊಂದಿರುವ ಕುರಿತು ಮಾಹಿತಿ

ಪ್ರತಿಶತ ೫೩ರಷ್ಟು ಮಾಹಿತಿದಾರರು ತಮ್ಮ ಕುಟುಂಬ ಎದುರಿಸುವ ಎಲ್ಲಾ ಅರೋಗ್ಯದ ಸಮಸ್ಯೆಗಳಿಗೆ ತಮ್ಮ ಕುಟುಂಬದ ಸಾಂಪ್ರದಾಯಿಕ ವೈದ್ಯರನ್ನು ಅವಲಂಬಿಸಿದ್ದು ಅಲ್ಲಿಂದಲೇ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಅದರಂತೆ ಪ್ರತಿಶತ ೪೭ರಷ್ಟು ಮಾಹಿತಿದಾರರು ಇಂತಹ ಯಾವುದೇ ಖಾಯಂ ಆಗಿ ನಿಗದಿಪಡಿಸಿದ ಕುಟುಂಬದ ಸಾಂಪ್ರದಾಯಿಕ ವೈದ್ಯರನ್ನು ಹೊಂದಿರುವುದಿಲ್ಲ. ಮೇಲಿನ ವಿವರಣೆಯನ್ನು ನೋಡಲಾಗಿ ಅಧಿಕ ಪ್ರಮಾಣದ ಬುಡಕಟ್ಟು ನಿವಾಸಿಗಳು ತಮ್ಮದೇ ಆದ ವೈದ್ಯರನ್ನು ಹೊಂದಿರುವುದು ತಿಳಿದು ಬಂದಿದೆ.

ಮಕ್ಕಳ ಆರೋಗ್ಯ

ಮಾಹಿತಿದಾರರ ಪೈಕಿ ಪ್ರತಿಶತ ೩೩ರಷ್ಟು ಮಾಹಿತಿದಾರರು ಅಭಿಪ್ರಾಯಪಡುವಂತೆ ಅವರ ಮಕ್ಕಳು ಆರೋಗ್ಯವಾಗಿದ್ದಾರೆ, ಪ್ರತಿಶತ ೫೧ರಷ್ಟು ಮಾಹಿತಿದಾರರ ಮಕ್ಕಳು ಯಾವಾಗ ಲಾದರೊಮ್ಮೆ ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಾರೆ. ಪ್ರತಿಶತ ೧೪ರಷ್ಟು ಮಾಹಿತಿದಾರರ ಮಕ್ಕಳು ಅನಾರೋಗ್ಯದಿಂದ ಬಳಲುತ್ತಿರುವುದು ತಿಳಿದು ಬಂದಿದೆ. ಮೇಲಿನ ವಿವರಣೆಯ ಪ್ರಕಾರ ಅಧಿಕ

ಪ್ರಮಾಣದ ಮಾಹಿತಿದಾರರ ಮಕ್ಕಳು ಸಾದಾರಣ ಆರೋಗ್ಯವನ್ನು ಹೊಂದಿರುವದು ಕಂಡು ಬರುತ್ತದೆ. ಕಾರಣ ಸಾಂಪ್ರದಾಯಿಕ ಮಾದರಿಯ ಚಿಕಿತ್ಸೆಯ ಕುರಿತು ಆಸಕ್ತಿ ಹೊಂದಿರುವಂತಹ ಇವರು ಆಧುನಿಕ ಸೌಲಭ್ಯಗಳಿಂದ ದೂರವಿರುತ್ತಾರೆ. ಇದರಿಂದ ಮಕ್ಕಳು ಮೇಲಿಂದ ಮೇಲೆ ಅರೋಗ್ಯದ ಸಮಸ್ಯೆಗಳನ್ನು ಸಹ ಎದುರಿಸುವುದು ಕಂಡು ಬಂದಿದೆ.

ಮಾಹಿತಿದಾರರ ಕುಟುಂಬಗಳಲ್ಲಿ ಪ್ರತಿಶತ ೧೬ರಷ್ಟು ಗರ್ಭಿಣಿಯರು ತಮ್ಮ ಹೆರಿಗೆಯ ಸಂದರ್ಭದಲ್ಲಿ ಅಜಾಗರೂಕತೆಯ ಕಾರಣಗಳಿಂದ ಮಗುವನ್ನು ಕಳೆದುಕೊಂಡಿರುವುದು ತಿಳಿದು ಬಂದಿದೆ. ಅದರಂತೆ, ಶೇ. ೮೪ರಷ್ಟು ಮಾಹಿತಿದಾರರು ಹೆರಿಗೆಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳನ್ನು ಎದುರಿಸಿಲ್ಲ. ಬುಡಕಟ್ಟು ಸಮುದಾಯಗಳಲ್ಲಿ ಮಕ್ಕಳನ್ನು ಪಡೆಯುವವರ ಪ್ರಮಾಣ ಅದಿಕವಾಗಿದ್ದಾಗಲೂ ಸಹ ಸಾಂಪ್ರದಾಯಿಕವಾಗಿ ಎಲ್ಲಾ ನೀತಿನಿಯಮಗಳನ್ನು ಪಾಲಿಸುವುದು ಕಂಡು ಬಂದಿದೆ.


ಕುಟುಂಬ ಯೋಜನೆ

ಈ ಅಧಯಯನದ ಮಾಹಿತಿದರರಲ್ಲಿ ಪ್ರತಿಶತ ೪೬ ಮಹಿಳಾ ಮಾಹಿತಿದಾರರು ಜಾರಿ ಯಲ್ಲಿರುವ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿದ್ದಾರೆ. ಶೇ. ೫೪ರಷ್ಟು ಮಹಿಳಾ ಮಾಹಿತಿದಾರರು ಯಾವುದೇ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿಲ್ಲ. ನೂರಕ್ಕೆ ನೂರರಷ್ಟು ಪುರುಷ ಮಾಹಿತಿದಾರರು ಯಾವುದೇ ರೀತಿಯ ಕುಟುಂಬ ಯೋಜನೆಗೆ ಒಳಪಡದೇ ಇರುವುದು ಕಂಡುಬಂದಿದೆ. ಮೇಲಿನ ವಿವರಣೆಯನ್ನು ನೋಡಲಾಗಿ ಬುಡಕಟ್ಟು ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಕುಟುಂಬಯೋಜನೆಯನ್ನು ಅಳವಡಿಸಿಕೊಂಡಿದ್ದು ಇನ್ನುಳಿದವರು ಅದರ ಬಗ್ಗೆ ತಿಳುವಳಿಕೆ ಮತ್ತು ಆಸಕ್ತಿಯನ್ನು ಹೊಂದದೆ ಇರುವುದು ಕಂಡು ಬಂದಿದೆ. ಇದಕ್ಕೆ ಕಾರಣ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಗಾದರೆ ಪುರುಷರಾಗಲಿ ಮಹಿಳೆಯರಾಗಲಿ ದೈಹಿಕ ಶಕ್ತಿಯನ್ನು ಕಳೆದುಕೊಂಡು ದುರ್ಬಲರಾಗುತ್ತೇವೆ ಮತ್ತು ನಂತರ ಯಾವುದೆ ರೀತಿಯ ದೈಹಿಕ ಕೆಲಸ ಕಾರ್ಯ ಗಳನ್ನು ಗೃಹ ಕೆಲಸಗಳನ್ನಾಗಲೀ ಅಥವಾ ಕೃಷಿ ಕೆಲಸಗಳನ್ನಾಗಲಿ ಮಾಡಲಾಗುದಿಲ್ಲ ಎಂಬ ನಂಬಿಕೆ ಅವರಲ್ಲಿರುವುದರಿಂದ ಸಂತಾನಹರಣ ಶಸ್ತ್ರ ಚಿಕಿಸ್ತೆಗಳಂತಹ ಕುಟುಂಬ ಯೋಜನೆಗಳನ್ನು ಅಳವಡಿಸಿಕೊಳ್ಳದೇ ಇರಲು ಪ್ರಮುಕ ಕಾರಣವೆಂದು ತಿಳಿದುಬಂದಿದೆ.

ಕೋಷ್ಟಕ ೫.೧೩ ಹೆರಿಗೆಯಾದ ಸ್ಥಳ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಮನೆ	೧೨೦	೩೧
೨.	ಸರ್ಕಾರಿ ಆಸ್ಪತ್ರೆ	೨೪೯	೬೪
೩.	ಖಾಸಗಿ ಆಸ್ಪತ್ರೆ	೨೧	೫
	ಒಟ್ಟು	೩೯೦	೧೦೦

ಲಂಬಚಿತ್ರ ೫.೧೩. ಹೆರಿಗೆಯಾಗುವ ಸ್ಥಳಗಳ ಪ್ರಮಾಣ



ಮೇಲಿನ ಕೋಷ್ಟಕ ೫.೧೩ರ ವಿವರಣೆಯಂತೆ ಆಯ್ಕೆ ಮಾಡಿಕೊಂಡಿದ್ದ ೩೯೦ ಮಾಹಿತಿದಾರರ ಕುಟುಂಬಗಳಲ್ಲಿ ೧೨೦ ಅಂದರೆ ಪ್ರತಿಶತ ೩೧ರಷ್ಟು ಕುಟುಂಬಗಳಲ್ಲಿ ತಾಯಂದಿರು ಮಕ್ಕಳಿಗೆ ಮನೆಯಲ್ಲಿಯೇ ಜನ್ಮ ನೀಡಿದ್ದಾರೆ. ಅದರಂತೆ ೨೪೯ ಕುಟುಂಬಗಳಲ್ಲಿ, ಪ್ರತಿಶತ ೬೪ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ತಾಯಂದಿರು ಸಮೀಪದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಉಳಿದಂತೆ ೨೧ ಕುಟುಂಬಗಳಲ್ಲಿ ತಾಯಂದಿರು, ಅಂದರೆ ಪ್ರತಿಶತ ೫ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ತಾಯಂದಿರು ಖಾಸಗಿ ಆಸ್ಪತ್ರೆಯಲ್ಲಿ ತಮ್ಮ ಮಕ್ಕಳಿಗೆ ಜನ್ಮ ನೀಡಿದ್ದಾರೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರತಿಶತ ೫೮ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ತಮ್ಮ ಮನೆಯ ಹತ್ತಿರವಿರುವ ಮತ್ತು ಮನೆಯಲ್ಲಿರುವ ಹಿರಿಯ ಸೂಲಗಿತ್ತಿಯರ ಸಹಾಯದಿಂದ ತಾಯಂದಿರು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಅದರಂತೆ ಪ್ರತಿಶತ ೪೨ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿ ತಾಯಂದಿರು ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯ ಮೂಲಕ ಮಗುವಿಗೆ ಜನ್ಮ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

ಬುಡಕಟ್ಟು ಸಮುದಾಯದ ಜನರು ಸಾಂಪ್ರದಾಯಿಕ ಆಯುರ್ವೇದ ಕುರಿತು ಜ್ಞಾನವನ್ನು ಹೊಂದಿದವರಾಗಿದ್ದು ಹೆರಿಗೆ ಕುರಿತು ಪರಿಣಿತಿಯನ್ನು ಹೊಂದಿರುತ್ತಾರೆ. ಇದರಿಂದಾಗಿ ಹೆಚ್ಚು ಆಸ್ಪತ್ರೆಗಳಿಗೆ ಹೋಗದೆ ಮನೆಯಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುವುದು ಕಂಡು ಬರುತ್ತದೆ.


ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರತಿಶತ ೭೧ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿನ ಮಹಿಳೆಯರು ತಮ್ಮ ಹೆರಿಗೆಯ ಸಂದರ್ಭದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಸೌಲಭ್ಯಗಳ ಕೊರತೆಯಿಂದ ತೊಂದರೆಗಳನ್ನು ಎದುರಿಸಿದ್ದಾರೆ. ಉಳಿದಂತೆ ಶೇ. ೨೯ರಷ್ಟು ಮಾಹಿತಿದಾರರ ಕುಟುಂಬಗಳಲ್ಲಿನ ಮಹಿಳೆಯರು ಮಾಹಿತಿದಾರರು ತಮ್ಮ ಸಮುದಾಯಗಳಲ್ಲಿಯೇ ಸೂಲಗಿತ್ತಿಯರು ಮತ್ತು ಹಿರಿಯ ಹೆಣ್ಣು ಮಕ್ಕಳ ಸಹಾಯದಿಂದ ಹೆರಿಗೆ ಮಾಡಿಸಿಕೊಂಡಿದ್ದು ಯಾವುದೇ ರೀತಿಯ ತೊಂದರೆಗಳನ್ನು ಎದುರಿಸಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೇಲಿನ ವಿವರಣೆಯ ಪ್ರಕಾರ ಇಂದಿಗೂ ಸಹ ಸೌಲಭ್ಯಗಳ ಕೊರತೆಯಿಂದ ಬುಡಕಟ್ಟು ಮಹಿಳೆಯರು ಹೆರಿಗೆ ಸಂದರ್ಭದಲ್ಲಿ ಹಲವಾರು ತೊಂದರೆಗಳನ್ನು ಎದುರಿಸುವುದು ಕಂಡುಬಂದಿದೆ. ಅದರಂತೆ ಗರ್ಭಿಣಿಯರು ತಮ್ಮ ಆರೋಗ್ಯದ ಕುರಿತು ಮುಂಜಾಗ್ರತೆಯನ್ನು ಹೊಂದದೆ ಇರುವುದು ಮತ್ತು ೧೦೮ ಉಚಿತ ವಾಹನ ಸೇವೆಯ ವ್ಯವಸ್ಥೆ ಇದ್ದರೂ ಅದು ಅರಣ್ಯ ಪ್ರದೇಶಗಳಲ್ಲಿರುವ ಸಿದ್ದಿ ಜನರ ನೆಲೆಗಳಿಗೆ ಹೋಗುವಷ್ಟರಲ್ಲಿಯೇ ಹೆರಿಗೆಯಾಗಿರುವುದು ಅಥವಾ ಸಾವು ಸಂಭವಿಸಿರುವುದು ಕಂಡುಬಂದಿದೆ. ಗರ್ಭಿಣಿಯರಿಗೆ ಅಂಗನವಾಡಿಗಳ ಮೂಲಕ ವಿತರಿಸುವ ಪೌಷ್ಠಿಕ ಆಹಾರಗಳ ಬಗ್ಗೆ ಸಿದ್ದಿ ಜನರಿಗೆ ಇರುವ ತಿಳುವಳಿಕೆಯ ಕೊರತೆಯಿಂದಲೂ ಗರ್ಬಿಣಿಯರು ಮತ್ತು ಮಕ್ಕಳು ಆರೋಗ್ಯ ಸಮಸ್ಯೆಗೆ ಸಿಲುಕುವುದು ಕಂಡುಬಂದಿದೆ.

ಕೋಷ್ಟಕ ೫.೧೪. ಗರ್ಭಿಣಿಯರ ಪೌಷ್ಟಿಕ ಆಹಾರ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಹೌದು	೯೮	೭೫
೨.	ಇಲ್ಲ	೧೩	೧೦
೩.	ಕೆಲವೊಂದು ಬಾರಿ	೧೯	೧೫
	ಒಟ್ಟು	**೧೩೦**	**೧೦೦**

ಲಂಬಚಿತ್ರ ೫.೧೪. ಗರ್ಭಿಣಿಯರ ಪೌಷ್ಟಿಕ ಆಹಾರ ಪ್ರಮಾಣ



ಮೇಲಿನ ಕೋಷ್ಟಕ ೫.೧೪ರ ವಿವರಣೆಯಂತೆ ಆಯ್ಕೆ ಮಾಡಿಕೊಂಡಿದ್ದ ೧೩೦ ಮಹಿಳಾ ಮಾಹಿತಿದಾರರ ಕುಟುಂಬಗಳಲ್ಲಿ ೯೮ ಜನ ಮಾಹಿತಿದಾರರು ಅಂದರೆ, ಪ್ರತಿಶತ ೭೫ರಷ್ಟು ಮಾಹಿತಿದಾರರು ಎಲ್ಲರೂ ಮಕ್ಕಳನ್ನು ಹೊಂದಿರುವ ತಾಯಂದಿರು ಆಗಿದ್ದಾರೆ. ಅವರು ತಾವು ಗರ್ಭಿಣಿಯರಿದ್ದಾಗ ತಮ್ಮ ಸಮೂಹದ ಸಾಂಪ್ರದಾಯಿಕವಾದ ಆಹಾರ ಸೇವಿಸುತ್ತಾರೆ. ಅದರಂತೆ ೧೩ ಜನರು ಅಂದರೆ, ಶೇ. ೧೦ರಷ್ಟು ಮಾಹಿತಿದಾರರು ತಾವು ಯಾವುದೇ ಹೊಸ ಆಹಾರವನ್ನು

ಸೇವಿಸುತ್ತಿಲ್ಲ. ಹಾಗೆಯೇ, ೧೯ ಜನ ಮಾಹಿತಿದಾರರು ಅಂದರೆ ಶೇ ೧೫ರಷ್ಟು ಜನ ಕೆಲವೊಂದು ಬಾರಿ ಮಾತ್ರ ಅಂತಹ ಪದ್ಧತಿಗಳನ್ನು ಅನುಸರಿಸುತ್ತೇವೆ ಎಂದು ಅಭಿಪ್ರಾಯ ನೀಡಿದ್ದಾರೆ. ಹಾಗೆ ಮಾಹಿತಿದಾರರಿಗೆ ಸರ್ಕಾರದಿಂದ ದೊರೆಯುವ ಪೌಷ್ಟೀಕ ಆಹಾರದ ಬಗೆಗೂ ತಿಳಿವಳಿಕೆ ಯಿರುವುದು ತಿಳಿದು ಬಂದಿದೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರತಿಶತ ೭೮ರಷ್ಟು ಮಾಹಿತಿದಾರರ ಕುಟುಂಬಗಲ್ಲಿ ಮಹಿಳೆಯರು ಸರ್ಕಾರದ ಅಂಗನವಾಡಿಗಳಿಂದ ಸಿಗುವ ಪೌಷ್ಟಿಕ ಆಹಾರವನ್ನು ಸೇವಿಸುತ್ತಾರೆ. ಅದರಂತೆ ಪ್ರತಿಶತ ೨೨ರಷ್ಟು ಮಹಿಳೆಯರು ಅಂಗನವಾಡಿಗಳ ಆಹಾರವನ್ನು ಸೇವಿಸುವುದಿಲ್ಲ. ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಅಧಿಕ ಪ್ರಮಾಣದಲ್ಲಿ ಗರ್ಭಿಣಿಯರು ಸರ್ಕಾರದಿಂದ ಸಿಗುವಂತಹ ಆಹಾರವನ್ನು ಯಾವುದೇ ಹಿಂಜರಿಕೆಯಿಲ್ಲದೆ ಸೇವಿಸುತ್ತಿದ್ದು, ಇದರಿಂದ ಸಿದ್ದಿ ಜನಾಂಗದವರಲ್ಲಿಯೂ ಸರ್ಕಾರದ ಸೌಲಭ್ಯಗಳ ಕುರಿತು ಮಾಹಿತಿ ಇರುವುದು ತಿಳಿದು ಬಂದಿದೆ.

ಕೋಷ್ಟಕ ೫.೧೫: ಅಂಗನವಾಡಿ ಕೇಂದ್ರ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಇದೆ	೧೧೯	೯೨%
೨.	ಇಲ್ಲ	೧೧	೮%
	ಒಟ್ಟು	೧೩೦	೧೦೦

ಕೋಷ್ಟಕ ೫.೧೫ರಲ್ಲಿ ತೋರಿಸಿರುವಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ೧೧೯ ಜನರು ಅಂದರೆ ಪ್ರತಿಶತ ೯೨ರಷ್ಟು ಮಾಹಿತಿದಾರರ ಹಳ್ಳಿಗಳಲ್ಲಿ ಅಂಗನವಾಡಿ ಕೇಂದ್ರದ ಕೇಂದ್ರಗಳಿವೆ. ಅದರಂತೆ, ೧೧ ಜನರು ಅಂದರೆ, ಪ್ರತಿಶತ ೮ರಷ್ಟು ಮಾಹಿತಿದಾರರ ಹಳ್ಳಿಗಳಲ್ಲಿ ಅಂಗನವಾಡಿ ಕೇಂದ್ರದ ಸೌಲಭ್ಯವನ್ನು ಹೊಂದಿಲ್ಲ. ಮೇಲಿನ ಕೋಷ್ಟಕದ ವಿವರಣೆಯಂತೆ, ಮಾಹಿತಿದಾರರ ಕುಟುಂಬಗಳಲ್ಲಿನ ಒಂದು ವರ್ಷದಿಂದ ಆರು ವರ್ಷದೊಳಗಿನ ಎಲ್ಲ ಮಕ್ಕಳು ಅಂಗನವಾಡಿ ಕೇಂದ್ರ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಸಿದ್ದಿ ಜನರು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುವುದರ ಮೂಲಕ ಮಕ್ಕಳ ಶಿಕ್ಷಣದ ಬಗ್ಗೆ ಗಮನ ಹರಿಸುತ್ತಿರುವುದು ಕಂಡುಬಂದಿದೆ. ಇದು ಬುಡಕಟ್ಟು ಜನರಿಗೆ ತಮ್ಮ ಮಕ್ಕಳ ಶಿಕ್ಷಣದ ಮಹತ್ವದ ಬಗೆಗೆ ಸಕಾರಾತ್ಮಕ ಅರಿವು ಮೂಡುತ್ತಿರುವುದನ್ನು ಬಿಂಬಿಸುತ್ತದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೬೩ರಷ್ಟು ಮಾಹಿತಿದಾರರು ತಮ್ಮ ಮಕ್ಕಳ ಆರೋಗ್ಯ ತಪಾಸಣೆಯನ್ನು ತಪ್ಪದೇ ಮಾಡಿಸುತ್ತಿದ್ದಾರೆ. ಪ್ರತಿಶತ ೨೭ರಷ್ಟು ಮಾಹಿತಿದಾರರು ಯಾವ ಆರೋಗ್ಯ ತಪಾಸಣೆಯನ್ನು ಮಾಡಿಸುತ್ತಿಲ್ಲ. ಉಳಿದಂತೆ ೧೦ರಷ್ಟು ಮಾಹಿತಿದಾರರು ತಮ್ಮ ಮಕ್ಕಳನ್ನು ಯಾವಾಗಲಾದರೊಮ್ಮೆ ಆರೋಗ್ಯ ತಪಾಸಣೆ ಮಾಡಿಸುತ್ತೇವೆ

ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಅತ್ಯಧಿಕ ಪ್ರಮಾಣದ ಮಾಹಿತಿದಾರರು ಸರಿಯಾಗಿ ತಮ್ಮ ಮಕ್ಕಳ ಆರೋಗ್ಯ ತಪಾಸಣೆ ಮಾಡಿಸುತ್ತಿರುವುದು ಕಂಡು ಬಂದಿದೆ. ಅಂದರೆ, ಮಕ್ಕಳ ಆರೋಗ್ಯದ ಬಗೆಗೂ ಸಿದ್ದಿ ಜನರಲ್ಲಿ ಅರಿವು ಉಂಟಾಗುತ್ತಿರುವುದು ಕಂಡುಬಂದಿದೆ.

ಅಂಗನವಾಡಿಯಿಂದ ಆಹಾರ ಪಡೆಯುವ ಕುರಿತ ಮಾಹಿತಿ

ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೭೧ರಷ್ಟು ಮಾಹಿತಿದಾರರು ತಮ್ಮ ಪ್ರದೇಶದಲ್ಲಿರುವ ಅಂಗನವಾಡಿಯಲ್ಲಿಯ ಆಹಾರ ಪದಾರ್ಥಗಳನ್ನು ಪಡೆಯುತ್ತಿದ್ದಾರೆ. ಅದರಂತೆ, ಪ್ರತಿಶತ ೨೯ರಷ್ಟು ಮಾಹಿತಿದಾರರು ಅಂಗನವಾಡಿಯಲ್ಲಿಯ ಆಹಾರ ಪದಾರ್ಥಗಳನ್ನು ಪಡೆಯುತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅತ್ಯಧಿಕ ಪ್ರಮಾಣದ ಮಾಹಿತಿದಾರರ ಅಭಿಪ್ರಾಯವನ್ನು ನೋಡಲಾಗಿ ಸರಕಾರ ಒದಗಿಸುವ ಸೌಲಭ್ಯಗಳ ಕುರಿತು ಅರಿವನ್ನು ಹೊಂದಿದ್ದು ಅವುಗಳ ಉಪಯೋಗ ಪಡೆಯುತ್ತಿರುವದು ತಿಳಿದು ಬಂದಿದೆ.

ಯಶಸ್ವಿನಿ ಯೋಜನೆ ಕುರಿತು ಮಾಹಿತಿ ಹೊಂದಿರುವ ಕುರಿತು

ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೫೨ರಷ್ಟು ಮಾಹಿತಿದಾರರು ಸರ್ಕಾರ ಒದಗಿಸಿರುವ ಉಚಿತ ವೈದ್ಯಕೀಯ ಯೋಜನೆಯಾದ ಯಶಸ್ವಿನಿ ಕುರಿತು ತಿಳುವಳಿಕೆ ಯನ್ನು ಹೊಂದಿದ್ದಾರೆ. ಅದರ ಉಪಯೋಗ ಮಾಡಿಕೊಳ್ಳುವ ತಿಳುವಳಿಕೆಯನ್ನು ಹೊಂದಿದ್ದಾರೆ. ಅದರಂತೆ, ಪ್ರತಿಶತ ೪೮ರಷ್ಟು ಮಾಹಿತಿದಾರರು ಈ ಯೋಜನೆಯ ಕುರಿತು ಯಾವುದೇ ತಿಳುವಳಿಕೆ ಹೊಂದಿರುವುದಿಲ್ಲ. ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ಯೋಜನೆಯ ಕುರಿತು ಮಾಹಿತಿ ಹೊಂದಿರುವದು ತಿಳಿದು ಬಂದಿದೆ. ಸರ್ಕಾರ ಉಚಿತ ಯೋಜನೆಯ ಕುರಿತು ಸಮೂಹ ಮಾಧ್ಯಮಗಳ ಮೂಲಕ ತಿಳುವಳಿಕೆ ನೀಡುತ್ತಿರುವದು ಕಂಡು ಬಂದಿದೆ.

೫.೬. ಮಹಿಳೆಯರ ಸ್ಥಿತಿಗತಿ

ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸುವವರ ಮಾಹಿತಿ

ಈ ಅಧ್ಯಯನದಲ್ಲಿನ ಪ್ರತಿಶತ ೩೩ ರಷ್ಟು ಮಾಹಿತಿದಾರರು ಕೇವಲ ಪುರುಷರು ತಮ್ಮ ಮಕ್ಕಳ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ. ಅದರಂತೆ ಪ್ರತಿಶತ ೬೭ರಷ್ಟು ಮಾಹಿತಿದಾರರ ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ಸ್ತ್ರೀಯರು ನೋಡಿಕೊಳ್ಳತ್ತಾರೆ. ಈ ವಿವರಣೆಯ ಪ್ರಕಾರ ಹೆಚ್ಚಿನ ಪ್ರಮಾಣದಲ್ಲಿ ಸ್ತ್ರೀಯರೇ ಮಕ್ಕಳ ಜವಾಬ್ದಾರಿಯನ್ನು ನೋಡಿಕೊಳ್ಳುತಿತರುವುದು ಕಂಡು ಬಂದಿದೆ. ಇಲ್ಲಿಯೂ ಸಹ ಪುರುಷ ಪ್ರಧಾನ ಕೌಟುಂಬಿಕ ಮೌಲ್ಯಗಳು ಇಂದಿಗೂ ಬುಡಕಟ್ಟು ಸಮುದಾಯದಲ್ಲಿ ಜಾರಿಯಲ್ಲಿರುವದು ಕಂಡು ಬರುತ್ತದೆ.


ಕುಟುಂಬದಲ್ಲಿ ಮಕ್ಕಳ ಶಿಕ್ಷಣದ ನಿರ್ಣಯ ತೆಗೆದುಕೊಳ್ಳುವವರ ಮಾಹಿತಿ

ಧಯಯನದ ಮಾಹಿತಿದಾರರಲ್ಲಿ ಪ್ರತಿಶತ ೭೮ ರಷ್ಟು ಮಾಹಿತಿದಾರರು ತಮ್ಮ ಮಕ್ಕಳ ಶಿಕ್ಷಣದ ಜವಾಬದಾರಿ ಮತ್ತು ತೀರ್ಮಾನಗಳನ್ನು ಪುರುಷರೇಞು ತೆಗೆದುಕೊಳ್ಳುತ್ತಾರೆ. ಅದರಂತೆ ಪ್ರತಿಶತ ೧೫ರಷ್ಟು ಮಾಹಿತಿದಾರರು ಕುಟುಂಬಗಳಲ್ಲಿ ಸ್ತ್ರೀಯರೂ ಅವರ ಜವಾಬ್ದಾರಿಯನ್ನು ಹೊಂದಿದ್ದು ಕಂಡು ಬಂದಿದೆ. ಅತೀ ಕಡಿಮೆ ಪ್ರಮಾಣ ಪ್ರತಿಶತ ೪ರಷ್ಟು ಕುಟುಂಬಗಳಲ್ಲಿ ಇಬ್ಬರೂ ಸೇರಿಕೊಂಡು ತೀರ್ಮಾನ ತೆಗೆದುಕೊಳ್ಳುವುದು ಕಂಡು ಬಂದಿದೆ. ಮೇಲಿನ ವಿವರಣೆಯ ಪ್ರಕಾರ ಅತ್ಯಧಿಕ ಪ್ರಮಾಣದಲ್ಲಿ ಪುರುಷರು ಕುಟುಂಬದ ಜವಾಬ್ದಾರಿಯನ್ನು ಹೊಂದಿದ್ದು ಅದರಲ್ಲಿ ಮಕ್ಕಳ ಶಿಕ್ಷಣ ವಿಷಯವು ಪ್ರಮುಖವಾಗಿದ್ದು ಗಂಡ ಮತ್ತು ಹೆಂಡತಿ ಇಬ್ಬರೂ ಚರ್ಚಿಸಿದರೂ ಅಂತಿಮ ನಿರ್ಣಯ ತೆಗೆದುಕೊಳ್ಳುವುದು ಪುರುಷರೇ ಆಗಿರುವುದು ಕಂಡುಬಂದಿದೆ.

ಕೋಷ್ಟಕ ೫.೧೬. ಮಾಹಿತಿದಾರರ ಕೌಟುಂಬಿಕ ಜವಾಬ್ದಾರಿ ನಿರ್ವಹಿಸುವವರ ಮಾಹಿತಿ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಪುರುಷರು	೨೩೦	೫೯
೨.	ಸ್ತ್ರೀಯರು	೫೦	೧೩
೩.	ಇಬ್ಬರು	೧೨೦	೩೧
	ಒಟ್ಟು	೩೯೦	೧೦೦

ಲಂಬಚಿತ್ರ ೫.೧೬. ಕೌಟುಂಬಿಕ ಜವಾಬ್ದಾರಿ ನಿರ್ವಹಿಸುವವರ ಲಿಂಗವಾರು ಪ್ರಮಾಣ



ಮೇಲಿನ ಕೋಷ್ಟಕ ೫.೧೬ರ ವಿವರಣೆಯಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರಲ್ಲಿ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುವ ಕುರಿತು ಪ್ರತಿಕ್ರೀಯಿಸಿರುವವರ ಪೈಕಿ ೨೩೦ ಜನ ಮಹಿತಿದಾರರು ಅಂದರೆ, ಪ್ರತಿಶತ ೫೯ ರಷ್ಟು ಮಾಹಿತಿದಾರರು ತಮ್ಮ ಕುಟುಂಬದ ಜವಾಬ್ದಾರಿಯನ್ನು ಪುರುಷರಷ್ಟೆ ನಿರ್ವಹಿಸುತ್ತಾರೆ. ಅದರಂತೆ, ೫೦ ಜನರು ಅಂದರೆ, ಪ್ರತಿಶತ ೧೩ರಷ್ಟು ಮಾಹಿತಿದಾರರು ಕುಟುಂಬದ ಜವಾಬ್ದಾರಿಯನ್ನು ಮನೆಯಲ್ಲಿಯ ಮಹಿಳೆಯರು ನೋಡಿಕೊಳ್ಳುತ್ತಾರೆ. ಉಳಿದಂತೆ ೧೨೦ ಜನರು ಅಂದರೆ, ಪ್ರತಿಶತ ೩೧ರಷ್ಟು ಕುಟುಂಬಗಳ ಕೆಲಸ ಕಾರ್ಯ ಮತ್ತು ಜವಾಬ್ದಾರಿಗಳನ್ನು ಸ್ತ್ರಿ ಮತ್ತು ಪುರುಷರಿಬ್ಬರು ಸೇರಿಕೊಂಡು ನಿರ್ವಹಿಸುವುದು ಕಂಡುಬಂದಿದೆ. ಮೇಲಿನ ವಿವರಣೆಯ ಪ್ರಕಾರ ಅತ್ಯಧಿಕ ಪ್ರಮಾಣದಲ್ಲಿ ಬುಡಕಟ್ಟು ಕುಟುಂಬಗಳ ಜವಾಬ್ದಾರಿಯನ್ನು ಪುರುಷರು ನಿರ್ವಹಿಸುತ್ತಿದ್ದು ಪುರುಷ ಪ್ರಧಾನ ಕುಟುಂಬಗಳು ಜಾರಿಯಲ್ಲಿರುವುದು ಕಂಡು ಬಂದಿದೆ. ಹಾಗೆಯೇ, ಕುಟುಂಬದ ಅಗತ್ಯ ವಸಗತುಗಲನ್ನು ಕೊಂಡು ತರುವ ಜವಾಬ್ದಾರಿಯನ್ನು ನಿರ್ವಹಿಸುವವರು ಪುರಷರೋ ಅಥವಾ ಮಹಿಳೆಯರೋ ಎಂಬ ವಿಚಾರಗಳಿಗೂ ಸಂಗ್ರಹಿಸಿರುವ ಮಾಹಿತಿಗಳು ಈ ಮುಂದಿ ನಂತಿವೆ.

ಪ್ರತಿಶತ ೪೮ರಷ್ಟು ಮಾಹಿತಿದಾರರು ತಮ್ಮ ಕುಟುಂಬ ನಿರ್ವಹಣೆಗೆ ಅವಶ್ಯವಿರುವ ವಸ್ತುಗಳನ್ನು ಕೇವಲ ಪುರುಷರಷ್ಟೇ ತರುತ್ತಾರೆ. ಅದರಂತೆ ಪ್ರತಿಶತ ೩೮ ರಷ್ಟು ಕುಟುಂಬಗಳಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಕೊಂಡುಕೊಂಡು ಬರುವ ಜವಾಬ್ದಾರುಯನ್ನು ಮಹಿಳೆಯರು ನಿರ್ವಹಿಸುತ್ತಾರೆ. ಉಳಿದಂತೆ ಪ್ರತಿಶತ ೧೪ರಷ್ಟು ಮಾಹಿತಿದಾರರು ತಾವುಗಳು ಇಬ್ಬರೂ ಸೇರಿಕೊಂಡು ಅಗತ್ಯವಸ್ತುಗಳನ್ನು ತುರುವಕಾರ್ಯ ನಿರ್ವಹಿಸುತ್ತೇವೆ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲಿನ ವಿವರಣೆಯ ಪ್ರಕಾರ ಅಧಿಕ ಪ್ರಮಾಣದಲ್ಲಿ ಪುರುಷರೇ ಮನೆಗೆ ಬೇಕಾದ ಅವಶ್ಯಕ ವಸ್ತುಗಳನ್ನು ತರುವುದು ತಿಳಿದು ಬಂದಿದೆ. ಅದು ಹಿಂದಿನಿಂದಲೂ ಮುಂದು ವರೆಯುತ್ತಿರುವ ಸಂಪ್ರದಾಯ ಮತ್ತು ಇದು ಪುರುಷರ ಜವಾಬ್ದಾರಿ ಎಂಬ ನಂಬಿಕೆಯೊಂದಿಗೆ ಕಾರ್ಯನಿರ್ವಹಿಸುವುದು ಕಂಡುಬಂದಿದೆ. ಬುಡಕಟು ಸಮುದಾಯಗಳ ಮೇಲೆ ಆಧುನಿಕತೆಯ ಪ್ರಭಾವ ಕಂಡು ಬರುತ್ತಿರುವುದಕ್ಕೆ ಮತ್ತೊಂದು ನಿದರ್ಶನ ಎಂಬಂತೆ ಕೆಲವರು ಗಂಡ-ಹೆಂಡತಿಯರಿಬ್ಬರೂ ಅಗತ್ಯ ವಸ್ತುಗಳನ್ನು ತರುವುದು ಕಂಡುಬಂದಿದೆ. ಗಂಡ ಮದ್ಯಪಾನದ ಚಟಕ್ಕೆ ಬಿದ್ಧಿದ್ದರೆ ಹೆಂಡತಿಯು ಅನನಿಗೆ ತಾನು ದುಡಿದ ಹಣವನ್ನು ಗಂಡನ ಕೈಯಲ್ಲಿ ಕೊಟ್ಟು ಸಂತೆಗೆ ಕಳುಹಿಸಲು ಒಪ್ಪದೇ ತಾನೇ ಕುಟುಂಬದ ಅಗತ್ಯ ವಸ್ತುಗಳನ್ನು ಕೊಂಡುಕೊಂಡು ಬರುತ್ತಿರುವುದು ಕಂಡುಬಂದಿದೆ. ಇನ್ನೂ ಕೆಲವರು ಅನೌಪಚಾರಿಕವಾಗಿ ಚರ್ಚಿಸುವಾಗ ನಮ್ಮಲ್ಲಿ ಯಾವುದೇ ತಾರತಮ್ಯವಿಲ್ಲ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೬೦ರಷ್ಟು ಮಾಹಿತಿದಾರರು ದಿನನಿತ್ಯವೂ ರೇಡಿಯೋ ಕೇಳುವ ಹವ್ಯಾಸವನ್ನು ಹೊಂದಿದ್ದಾರೆ, ಅದರಂತೆ ಪ್ರತಿಶತ ೪೦ರಷ್ಟು ಮಾಹಿತಿದಾರರು ದಿನನಿತ್ಯವೂ ರೇಡಿಯೋ ಕೇಳುವ ಹವ್ಯಾಸವನ್ನು ಹೊಂದಿಲ್ಲ ಎಂಬಂತ

ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅತ್ಯಧಿಕ ಪ್ರಮಾಣದಲ್ಲಿ ಬುಡಕಟ್ಟು ಸಮುದಾಯದವರು ಸಮೂಹ ಮಾಧ್ಯಮವಾದ ರೇಡಿಯೋವನ್ನು ಬಳಸುವದು ತಿಳಿದು ಬಂದಿದೆ.

ಕೋಷ್ಟಕ ೫.೧೭. ಅಡಿಗೆಗೆ ಬಳಸುವ ಉರವಲು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಗ್ಯಾಸ್	೨೯	೭
೨.	ಸೀಮೆ ಎಣ್ಣೆ	೯೨	೨೪
೩.	ಸೌದೆ	೧೬೭	೪೩
೪.	ಎಲೆತರಗು	೧೦೨	೨೬
	ಒಟ್ಟು	**೩೯೦**	**೧೦೦**

ಕೋಷ್ಟಕ ೫.೧೭ರಲ್ಲಿ ಸೂಚಿಸಿರುವ ಪ್ರಕಾರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರ ಪೈಕಿ ೨೯ ಕುಟುಂಬಗಳು ಅಂದರೆ ಶೇ. ೭ರಷ್ಟು ಕುಟುಂಬಗಳು ಅಡಿಗೆ ಮಾಡಲು ಎಲ್.ಪಿ.ಜಿ ಗ್ಯಾಸ್ ಬಳಸುತ್ತಿದ್ದರೆ. ಹಾಗೆಯೇ, ೯೨ ಕುಟುಂಬಗಳಲ್ಲಿ ಅಂದರೆ, ಶೇ. ೨೪ ಕುಟುಂಬಗಳು ಸೀಮೆ ಎಣ್ಣೆಯನ್ನು ಅಡುಗೆ ಮಾಡುವ ಉರುವಲಾಗಿ ಬಳಸುತ್ತಾರೆ. ಉಳಿದಂತೆ ೧೬೭ ಕುಟುಂಬಗಳಲ್ಲಿ ಅಂದರೆ. ಶೇ. ೪೩ರಷ್ಟು ಕುಟುಂಬಗಳು ಸೌದೆಯ ಮೂಲಕ ಅಡುಗೆ ಮಾಡುತ್ತಾರೆ. ೧೦೨ ಕುಟುಂಬಗಳಲ್ಲಿ ಎಲೆ ತರಗಿನಂತಹ ಉರುವಲಿನ ಮೂಲಕ ಅಡುಗೆ ಮಾಡುತ್ತಾರೆ.

ದೂರದರ್ಶನ ನೋಡುವದರ ಕುರಿತು

ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೪೪ರಷ್ಟು ಮಾಹಿತಿದಾರರು ದಿನನಿತ್ಯವೂ ದೂರದರ್ಶನ ನೋಡುವ ಹವ್ಯಾಸವನ್ನು ಹೊಂದಿರುತ್ತಾರೆ. ಅದರಂತೆ ಪ್ರತಿಶತ ೩೩ರಷ್ಟು ಯಾವಾಗಲಾದರೊಮ್ಮೆ ದೂರದರ್ಶನ ನೋಡುವ ಹವ್ಯಾಸವನ್ನು ಹೊಂದಿರುತ್ತಾರೆ. ಅದರಂತೆ ಪ್ರತಿಶತ ೨೩ರಷ್ಟು ಮಾಹಿತಿದಾರರು ದೂರದರ್ಶನ ನೋಡುವ ಹವ್ಯಾಸವನ್ನು ಹೊಂದಿಲ್ಲ ಎಂದು ತಿಳಿದು ಬಂದಿದೆ. ಅತ್ಯಧಿಕ ಪ್ರಮಾಣದಲ್ಲಿ ಬುಡಕಟ್ಟು ಸಮುದಾಯದವರು ದೂರದರ್ಶನ ಸೌಲಭ್ಯವನ್ನು ಹೊಂದಿದ್ದು ಅದರ ಮೂಲಕ ಮನರಂಜನೆಯನ್ನು ಪಡೆಯುತ್ತಿರುವುದು ತಿಳಿದು ಬಂದಿದೆ.

ಕೋಷ್ಟಕ ೫.೧೮. ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ

ಕ್ರಸಂ.	ವಿಷಯ	ಪುರುಷರು	ಶೇಕಡ	ಸ್ತ್ರೀಯರು	ಶೇಕಡ	ಒಟ್ಟು	ಶೇಕಡ
೧	ಹೌದು	೨೪೦	೬೨	೯೮	೨೫	೨೬೨	೭೦
೨	ಇಲ್ಲ	೨೦	೫	೩೨	೮	೧೧೮	೩೦
	ಒಟ್ಟು	೨೬೦	೬೭	೧೩೦	೩೩	೩೯೦	೧೦೦

ಕೋಷ್ಟಕ ೫.೧೮ರ ವಿವರಣೆಯಂತೆ ೩೯೦ ಮಾಹಿದಾರರಲ್ಲಿ ಒಟ್ಟು ೨೪೦ ಪುರುಷ ಮಾಹಿತಿದಾರರು ಪ್ರತಿಶತ ೬೨ರಷ್ಟು ಮಾಹಿತಿದಾರರು ವಿವಿಧ ರೀತಿಯ, ಅಂದರೆ, ಸ್ವಸಹಾಯ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ ಮತ್ತು ಲ್ಯಾಪ್ಸ್‌ಗಳಂತಹ ಸಂಘ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿರುತ್ತಾರೆ. ಉಳಿದಂತೆ ೨೦ರಷ್ಟು ಪುರುಷ ಮಹಿತಿದಾರರು ಅಂದರೆ, ಪ್ರತಿಶತ ೫ರಷ್ಟು ಮಾಹಿತಿದಾರರು ಯಾವುದೇ ಸಂಘ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿಲ್ಲ.

ಮಹಿಳಾ ಮಾಹಿತಿದಾರರ ಪೈಕಿ ೯೮ ಜನರು ಪ್ರತಿಶತ ೨೫ರಷ್ಟು ಮಹಿಳಾ ಮಾಹಿತಿದಾರರು ತಾವುಗಳು ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳಂತಹ ಹಲವು ಸಂಘ-ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿದ್ದಾರೆ. ಅದರಂತೆ ೩೨ ಜನ ಮಹಿಳಾ ಮಾಹಿತಿದಾರರು ಅಂದರೆ ಪ್ರತಿಶತ ೮ರಷ್ಟು ಮಾಹಿತಿದಾರರು ಯವುದೇ ಸಂಘ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿಲ್ಲ. ಒಟ್ಟಾರೆ ಸ್ತ್ರೀ ಮತ್ತು ಪುರುಷರು ಸೇರಿ, ೩೯೦ ಮಹಿತಿದಾರರ ಪೈಕಿ ೨೬೨ ಅಂದರೆ ಶೇ. ೭೦ರಷ್ಟು ಜನರು ಮತ್ತು ೧೧೮ ಜನ ಮಾಹಿತಿದಾರರು ಅಂದರೆ ಶೇ ೩೦ರಷ್ಟು ಜನರು ಯಾವುದೇ ಸಂಘ ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿಲ್ಲ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದಲ್ಲಿ ಪುರುಷ ಮಾಹಿತಿದಾರರು ಸಂಘ-ಸಂಸ್ಥೆಗಳ ಸದಸ್ಯತ್ವ ಹೊಂದಿರುವುದು ಕಂಡು ಬರುತ್ತದೆ. ಅದರಂತೆ ಬುಡಕಟ್ಟುಗಳಲ್ಲಿಯೂ ಬದಲಾವಣೆಯು ಕಂಡು ಬರುತ್ತಿದ್ದು ಅಲ್ಪ ಪ್ರಮಾಣದಲ್ಲಿಯಾದರೂ ಸ್ತ್ರೀಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತಿದ್ದು ಮನೆಯಿಂದ ಹೊರ ಬಂದು ಸದಸ್ಯತ್ವ ಹೊಂದುತ್ತಿರುವುದು ಕಂಡುಬಂದಿದೆ.

ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೨೩ ಪುರುಷ ಮಾಹಿತಿದಾರರು ಸಂಘ ಸಂಸ್ಥೆಗಳಲ್ಲಿ ಸದಸ್ಯರೆಲ್ಲರೊಂದಿಗೆ ಅವಶ್ಯಕ ನಿರ್ಣಯ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುತ್ತಾರೆ. ಅದರಂತೆ, ಪ್ರತಿಶತ ೫೦ರಷ್ಟು ಜನರು ಅಲ್ಪ ನಡೆಯುವಂತಹ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಉಳಿದಂತೆ ಪ್ರತಿಶ ೮ರಷ್ಟು ಅವಶ್ಯವಿದ್ದಾಗ ಸಲಹೆ ನೀಡುತ್ತಾರೆ. ಅದರಂತೆ ಪ್ರತಿಶತ ೩ರಷ್ಟು ಸಂಘ ಸಂಸ್ಥೆಯ ಇತರ ಎಲ್ಲಾ ಕಾರ್ಯಗಳಲ್ಲಿಯೂ ಭಾಗವಹಿಸುತ್ತಾರೆ.

ಅದರಂತೆ ಒಟ್ಟು ಪ್ರತಿಶತ ೩೩ ಮಹಿಳಾ ಮಾಹಿತಿದಾರರಲ್ಲಿ ನಿರ್ಣಯ ತೆಗೆದುಕೊಳ್ಳುವವರ ಪ್ರಮಾಣ ಕಂಡು ಬರಲಾರದು ಪ್ರತಿಶತ ೬ರಷ್ಟು ಮಾಹಿತಿದಾರರು ಸಂಘ-ಸಂಸ್ಥೆಗಳ ಚರ್ಚೆಯಲ್ಲಿ

ಭಾಗವಹಿಸುತ್ತಾರೆ. ಅದರಂತೆ ಕಡಿಮೆ ಪ್ರಮಾಣದಲ್ಲಿ ಪ್ರತಿಶತ ೧ರಷ್ಟು ಸಲಹೆ ನೀಡುವಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಅದರಂತೆ ಪ್ರತಿಶತ ೧ರಷ್ಟು ಮಾಹಿತಿದಾರರು ಸಂಘ ಸಂಸ್ಥೆಗಳ ನಡೆಸುವ ಇತರ ಕಾರ್ಯಗಳಲ್ಲಿ ತಮ್ಮನು ತೊಡಗಿಸಿಕೊಂಡಿದ್ದಾರೆ.ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದಲ್ಲಿ ಪುರುಷ ಮಾಹತಿದಾರರು ಸಂಘ-ಸಂಸ್ಥೆಗಳು ಹಲವಾರು ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

೫.೮. ಆರ್ಥಿಕ ಚಟುವಟಿಕೆಗಳು


೫.೮.೧. ಸಿದ್ದಿ ಜನಾಂಗದ ಉದ್ಯೋಗ, ಆಸ್ತಿಯ ಒಡೆತನ ಮತ್ತು ಆದಾಯದ ವಿವರಣೆ

ಸಿದ್ದಿ ಜನಾಂಗದವರನ್ನು ಇತರ ಬುಡಕಟ್ಟು ಜನಾಂಗದವರೊಂದಿಗೆ ಹೋಲಿಸಿದಾಗ ಇವರು ತಮ್ಮ ಕಾಲ ಮೇಲೆ ತಾವು ನಿಂತವರಲ್ಲ. ಒಬ್ಬರಿಂದ ಒಬ್ಬರಿಗೆ ಮಾರಾಟವಾಗುತ್ತ ಕೇವಲ ಗುಲಾಮರಾಗಿ ಬದುಕಿದ ಇವರ ಹಿರಿಯರು. ಇವರಿಗಾಗಿ ಏನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇದೀಗ ಕೂಲಿಯನ್ನಾದರೂ ಮಾಡಿ ಸ್ವತಂತ್ರ ಜೀವನ ಮಾಡುತ್ತ, ನಾನು ನನ್ನ ಸಂಸಾರ ಎಂಬ ತೃಪ್ತಿಯಲ್ಲಾದರೂ ಇರುವ ಇಂದಿನ ಬದುಕಿಗೆ ಆಧಾರವಾಗಿರುವ ಆರ್ಥಿಕ ಮೂಲಗಳಿಗೆ ಸಂಗ್ರಹಿಸಿರುವ ಮಾಹಿತಿಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಕೋಷ್ಟಕ ೫.೧೯. ವೃತ್ತಿಗಳು

ಕ್ರಸಂ.	ಉದ್ಯೋಗ/ವೃತ್ತಿ	ಕುಟುಂಬಗಳ ಸಂಖ್ಯೆ	ಶೇಕಡವಾರು ಪ್ರಮಾಣ
೧.	ಕೃಷಿ ಕಾರ್ಮಿಕ	೧೬೯	೪೩
೨.	ಕೃಷಿ/ಕೂಲಿ	೧೬೧	೪೧
೩.	ಕೃಷಿ	೨೦	೫
೪.	ವ್ಯಾಪಾರ	೧೧	೩
೫.	ಗಾರೆ ಕೆಲಸ	೧೪	೪
೬.	ಇತರೆ(ಅರಣ್ಯ ಉತ್ಪನ್ನಗಳ ಸಂಗ್ರಹ), ಸಾರಿಗೆ ಸೇವೆ ಇತ್ಯಾದಿ__..	೧೫	೪
	ಒಟ್ಟು	೩೯೦	೧೦೦

ಲಂಬಚಿತ್ರ ೫.೧೯. ವಿವಿಧ ವೃತ್ತಿಗಳು




ಕೋಷ್ಟಕ ೫.೧೯ರಲ್ಲಿ ಸೂಚಿಸಿರುವಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ನೀಡಿರುವ ಮಾಹಿತಿಗಳು. ೩೯೦ ಜನ ಮಾಹಿತಿದಾರರ ಪೈಕಿ ೧೮೯ ಜನರು ಅಂದರೆ ಶೇ. ೪೩ರಷ್ಟು ಮಾಹಿತಿದಾರರು ಕೃಷಿ ಕೂಲಿಕಾರ್ಮಿಕರಾಗಿದ್ದಾರೆ. ಇವರಲ್ಲಿ ೧೬೧ ಜನರು ಅಂದರೆ ಶೇ. ೪೧ರಷ್ಟು ಮಾಹಿತಿದಾರರು ಅಲ್ಪಸ್ವಲ್ಪ ಜಮೀನನ್ನೂ ಹೊಂದಿದ್ದು ವ್ಯವಸಾಯವನ್ನು ಮಾಡುತ್ತ ಕೃಷಿ ಕಾರ್ಮಿಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಒಟ್ಟು ಮಾಹಿತಿದಾರರಲ್ಲಿ ೨೦ ಜನರು ಅಂದರೆ, ಶೇ. ೫ರಷ್ಟು ಮಾಹಿತಿದಾರರು ಕೇವಲ ಕೃಷಿಯನ್ನು ಮಾಡುತ್ತಿದ್ದಾರೆ. ೧೧ ಜನ ಮಾಹಿತಿದಾರರು ಅಂದರೆ ಶೇ. ೩ರಷ್ಟು ಜನರು ಸಣ್ಣ ವ್ಯಾಪಾರವನ್ನು ಮಾಡುತ್ತ ಬದುಕುತ್ತಿದ್ದಾರೆ. ಮಾಹಿತಿದಾರರ ಪೈಕಿ ೧೪ ಜನರು ಅಂದರೆ ಶೇ. ೪ರಷ್ಟು ಜನರು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಮತ್ತು ಸ್ಥಳೀಯವಾಗಿ ಗಾರೆ ಕೆಲಸದವರಾಗಿ ಮತ್ತು ಇತರೆ ಕೆಲಸಗಳ ಮೂಲಕ ದುಡಿಯುತ್ತಿದ್ದಾರೆ. ಉಳಿದ ೧೫ ಜನರು ಅಂದರೆ ಶೇ. ೪ರಷ್ಟು ಮಾಹಿತಿದಾರರು ಅರಣ್ಯ ಉಪ ಉತ್ಪನ್ನಗಳ ಸಂಗ್ರಹ, ಸರಕು ಸಾಗಣೆ ಮತ್ತು ಪ್ರಯಾಣಿಕರ ಲಘು ವಾಹನಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದರೆ.

ಕೋಷ್ಟಕ ೫.೨೦. ಕುಟುಂಬ ಆಸ್ತಿಯ ಒಡೆತನ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಪುರುಷರು	೨೯೮	೭೬
೨.	ಸ್ತ್ರೀಯರು	೮೨	೨೧
೩.	ಇಬ್ಬರೂ	೧೦	೩
	ಒಟ್ಟು	**೩೯೦**	**೧೦೦**

ಲಂಬಚಿತ್ರ ೫.೨೦. ಕುಟುಂಬ ಆಸ್ತಿಯ ಒಡೆತನ ಲಿಂಗವಾರು ಪ್ರಮಾಣ



ಮೇಲಿನ ಕೋಷ್ಟಕ ೫.೨೦ರ ವಿವರಣೆಯಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರಲ್ಲಿ ೨೯೮ ಜನ ಪುರುಷರು ಅಂದರೆ, ಪ್ರತಿಶತ ೭೬ರಷ್ಟು ಮಾಹಿತಿದಾರರು ಆಸ್ತಿಯ ಒಡೆತನವನ್ನು ಪುರುಷರೆ ಹೊಂದಿದ್ದಾರೆ. ಅದರಂತೆ, ೮೨ ಜನರು ಅಂದರೆ ಪ್ರತಿಶತ ೨೧ರಷ್ಟು ಮಾಹಿತಿದಾರರ ಅಭಿಪ್ರಾಯದಂತೆ ಕುಟುಂಬದ ಆಸ್ತಿಯು ಸ್ತ್ರೀಯರ ಹೆಸರಿನಲ್ಲಿದೆ. ಉಳಿದಂತೆ, ೧೦ ಜನ ಮಾಹಿತಿದಾರರು ಅಂದರೆ, ಪ್ರತಿಶತ ೩ರಷ್ಟು ಕುಟುಂಬದ ಆಸ್ತಿಯೂ ಸ್ತ್ರೀ ಮತ್ತು ಪುರುಷರಿಬ್ಬರ ಹೆಸರಿನಲ್ಲಿಯೂ ಒಡೆತನವಿದೆ.


ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದ ಮಾಹಿತಿದಾರರ ಕುಟುಂಬದ ಆಸ್ತಿಯು ಪುರುಷರ ಹೆಸರಿನಲ್ಲಿರುವದು ತಿಳಿದು ಬಂದಿದೆ. ಕೆಲವು ಸ್ತ್ರೀಯರೂ ಮಾತ್ರ ತಮ್ಮ ತಾಯಿಯಿಂದ ಪಡೆದಂತ ಆಸ್ತಿಯ ಒಡೆತನವನ್ನು ಹೊಂದಿರುವುದು ತಿಳಿದು ಬರುತ್ತದೆ. ಅತ್ಯಧಿಕ ಕಡಿಮೆ ಪ್ರಮಾಣದ ಕುಟುಂಬಗಳಲ್ಲಿ ಪತಿ-ಪತ್ನಿಯರಿಬ್ಬರೂ ಜಂಟಿಯಾಗಿ ಆಸ್ತಿಯ ಒಡೆತನ ಹೊಂದಿರುವುದು ಕಂಡು ಬಂದಿದೆ.

ಕೋಷ್ಟಕ: ೫.೨೧. ಮಾಹಿತಿದಾರರ ಕುಟುಂಬಗಳು ಹೊಂದಿರುವ ಭೂಮಿಯ ಪ್ರಮಾಣ

ಕ್ರಸಂ.	ಭೂಮಿಯ ಪ್ರಮಾಣ ಎಕರೆಗಳಲ್ಲಿ	ಕುಟುಂಬಗಳ ಸಂಖ್ಯೆ	ಶೇಕಡವಾರು ಪ್ರಮಾಣ
೧.	೧ ಎಕರೆಗಿಂತ ಕಡಿಮೆ	೧೭೦	೪೪
೨.	೧-೨ ಎಕರೆ	೧೦೦	೨೬
೩.	೨-೩ ಎಕರೆ	೭೦	೧೮
೪.	೩-೪ ಎಕರೆ	೨೫	೬

೫.	೪–೫ ಎಕರೆ	೨೦	೫
೬	೫ ಎಕರೆ ಗಿಂತ ಜಾಸ್ತಿ	೫	೧
	ಒಟ್ಟು	೩೯೦	೧೦೦

ಲಂಬಚಿತ್ರ ೫.೨೧. ಕುಟುಂಬಗಳು ಹೊಂದಿರುವ ಭೂಮಿಯ ಪ್ರಮಾಣ



ಮೇಲಿನ ಕೋಷ್ಟಕ ೫.೨೧ರಲ್ಲಿನ ಅಂಕಿಅಂಶಗಳನ್ನು ಗಮನಿಸಿದಾಗ, ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರ ಕುಟುಂಬಗಳ ಪೈಕಿ ೧೭೦ ಕುಟುಂಬಗಳು ಅಂದರೆ ಶೇ. ೪೪ರಷ್ಟು ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿದ್ದು ಈ ಜಮೀನೂ ಸಹ ಅವರು ವಾಸಿಸಲು ಕಟ್ಟಿಕೊಂಡಿರುವ ಮನೆಯ ಸುತ್ತಲಿನ ಜಾಗವಾಗಿರುತ್ತದೆ. ಹಾಗೂ ೧೦೦ ಮಾಹಿತಿದಾರ ಕುಟುಂಬಗಳು ಅಂದರೆ ಶೇ. ೨೬ರಷ್ಟು ಮಾಹಿತಿದಾರರು ಒಂದರಿಂದ ಎರಡು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದಾರೆ. ಹಾಗೆಯೇ, ೭೦ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೧೮ರಷ್ಟು ಮಾಹಿತಿದರರು ಎರಡರಿಂದ ಮೂರು ಎಕರೆ ಜಮೀನಿನ ಒಡೆತನ ಹೊಂದಿದ್ದಾರೆ. ಹಾಗೆಯೇ, ೨೫ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೬ರಷ್ಟು ಮಾಹಿತಿದಾರರು ಮೂರರಿಂದ ನಾಲ್ಕು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದರೆ. ಹಾಗೆಯೇ, ೨೦ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೫ರಷ್ಟು ಮಾಹಿತಿದಾರರು ನಾಲ್ಕರಿಂದ ಐದು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದರೆ. ಸಿದ್ದಿ ಜನಾಂಗ ದವರಲ್ಲಿ ಐದು ಎಕರೆಗಿಂತ ಹೆಚ್ಚು ಜಮೀನಿನ ಒಡೆತನವನ್ನು ಹೊಂದಿರುವ ಮಾಹಿತಿದಾರರು ಕೇವಲ ಐದು ಕುಟುಂಬಗಳು ಅಂದರೆ, ಶೇ. ೧ರಷ್ಟು ಮಾಹಿತಿದಾರರು ಐದು ಎಕರೆಗಿಂತ ಹೆಚ್ಚು ಜಮೀನಿನ ಒಡೆತನವನ್ನು ಹೊಂದಿದ್ದಾರೆ. ಈ ಕುಟುಂಬಗಳ ಈ ಚಿಕ್ಕಗಾತ್ರದ ಭೂಮಿಯೂ

ಅವರು ವಾಸಿಸುತ್ತಿರುವ ಮನೆಗಳಿಗೆ ಹೊಂದಿಕೊಂಡಿರುವ ಹಿತ್ತಲು ಗಳನ್ನು ಸೇರಿಸಿಕೊಂಡು ಮಾಹಿತಿದಾರರು ಕೂಲಿಯ ವಿವರಗಳನ್ನು ನೀಡಿದ್ದಾರೆ. ಆದ್ದರಿಂದ ಇಲ್ಲಿ ಭೂರಹಿತ ಕುಟುಂಬ ಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿಲ್ಲ. ಅಂದರೆ ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿರುವವರೆಲ್ಲರೂ ಭೂರಹಿತ ಕೃಷಿ ಕಾರ್ಮಿಕರೇ ಆಗಿದ್ದಾರೆ.

ಕೋಷ್ಟಕ ೫.೨೨: ಕೃಷಿ ನೀರಾವರಿ ಪದ್ಧತಿ

ಕ್ರಸಂ	ಅಭಿಪ್ರಾಯ	ಸಂಖ್ಯೆ	ಶೇಕಡ
೧.	ಒಣಭೂಮಿ	೧೮೦	೪೬
೨.	ನೀರಾವರಿ	೫೦	೧೩
೩.	ಅರೆನೀರಾವರ	೨೦	೫
೪.	ಬಂಜರು ಭೂಮಿ	೧೪೦	೩೬
	ಒಟ್ಟು	೩೯೦	೧೦೦

ಕೋಷ್ಟಕ ೫.೨೨ರ ವಿವರಣೆಯಂತೆ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ೩೯೦ ಕುಟುಂಬಗಳ ಪೈಕಿ ೧೮೦ ಕುಟುಂಬಗಳ ಮಾಹಿತಿದಾರರು ಅಂದರೆ, ಪ್ರತಿಶತ ೪೬ರಷ್ಟು ಮಾಹಿತಿದಾರರು ಒಣಭೂಮಿಯನ್ನು ಹೊಂದಿದ್ದಾರೆ. ಹಾಗೆಯೇ, ೫೦ ಮಾಹಿತಿದಾರ ಕುಟುಂಬಗಳು ಅಂದರೆ, ಪ್ರತಿಶತ ೧೩ರಷ್ಟು ಮಾಹಿತಿದಾರರು ನೀರಾವರಿ ಸೌಲಭ್ಯವಿರುವ ಭೂಮಿಯನ್ನು ಹೊಂದಿದ್ದು, ಉಳಿದಂತೆ ೨೦ ಮಾಹಿತಿದಾರರ ಕುಟುಂಬಗಳು ಅಂದರೆ, ಪ್ರತಿಶತ ೫ರಷ್ಟು ಮಾಹಿತಿದಾರರು ಅರೆ ನೀರಾವರಿ ಭೂಮಿಯನ್ನು ಮತ್ತು ೧೪೦ ಮಾಹಿತಿದಾರರ ಕುಟುಂಬಗಳು ಅಂದರೆ, ಪ್ರತಿಶತ ೩೬ರಷ್ಟು ಮಾಹಿತಿದಾರರು ಬಂಜರು ಭೂಮಿಯನ್ನು ಹೊಂದಿದ್ದಾರೆ.

ಭೂಮಿಯ ಉಳುಮೆಯ ಸ್ವರೂಪ


ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೧೫ರಷ್ಟು ಮಾಹಿತಿದಾರರು ತಮ್ಮ ಭೂಮಿಯನ್ನು ತಾವೇ ಸ್ವಂತ ಉಳುಮೆ ಮಾಡುತ್ತಾರೆ. ಅದರಂತೆ ಪ್ರತಿಶತ ೫೮ರಷ್ಟು ಮಾಹಿತಿದಾರರು ಪಾಲುದಾರಿಕೆಯಲ್ಲಿ ಭೂಮಿಯನ್ನು ಉಳುಮೆ ಮಾಡುತ್ತಾರೆ. ಕಾರಣ ಇದರಲ್ಲಿ ಕೆಲವರು ಒಣ ಮತ್ತು ಬಂಜರು ಭೂಮಿಯನ್ನು ಹೊಂದಿದ್ದು ಬದುಕಲು ಯಾವುದೇ ಆದಾಯಗಳು ಇಲ್ಲದಿರುವುದಕ್ಕೆ ಅವರು ಬೇರೆಯವರ ಭೂಮಿಯನ್ನು ಉಳುಮೆ ಮಾಡಿ ಆದಾಯ ಪಡೆಯುತ್ತಾರೆ. ಅದರಂತೆ ಪ್ರತಿಶತ ೨೬ರಷ್ಟು ಮಾಹಿತಿದಾರರು ಗುತ್ತಿಗೆ ಆಧಾರದ ಮೇಲಿಂದ ಭೂಮಿ ಉಳುಮೆಯನ್ನು ಮಾಡುತ್ತಿದ್ದಾರೆ. ಮೇಲಿನ ವಿವರಣೆಯ ಪ್ರಕಾರ ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ಪಾಲುದಾರಿಕೆ ಮತ್ತು ಗುತ್ತಿಗೆ ಆಧಾರದ ಮೇಲಿಂದ ಭೂ ಉಳುಮೆ ಮಾಡುತ್ತಿರುವುದು ಕಂಡು ಬಂದಿದೆ.

ಮೇಲಿನ ವಿವರಣೆಗೆ ಪೂರಕವಾಗಿ ವೈಜ್ಞಾನಿಕ ಬೇಸಾಯ ಮಾಡುವ ಕುರಿತು ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರಲ್ಲಿ ಪ್ರತಿಶತ ೮೯ರಷ್ಟು ಮಾಹಿತಿದಾರರು ಯಾವುದೇ ರೀತಿಯ ವೈಜ್ಞಾನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳದೆ ಸಾಂಪ್ರದಾಯಿಕ ವಾದ ಬೇಸಾಯವನ್ನು ಮಾಡುತ್ತಿದ್ದಾರೆ. ಆದರೆ ಅತೀ ಕಡಿಮೆ ಪ್ರಮಾಣದಲ್ಲಿ ಪ್ರತಿಶತ ೧೧ ರಷ್ಟು ಮಾಹಿತಿದಾರರು ವೈಜ್ಞಾನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತೀ ಕಡಿಮೆ ಪ್ರಮಾಣದಲ್ಲಿ ಬುಡಕಟ್ಟು ಸಮುದಾಯದ ಜನರು ಆಧುನಿಕ ಬೇಸಾಯದ ಕುರಿತು ಒಲವನ್ನು ಹೊಂದಿದ್ದು ಅದನ್ನು ಅಳವಡಿಕೊಂಡಿರುವುದು ತಿಳಿದು ಬಂದಿದೆ. ಉಳಿದಂತೆ ಎಲ್ಲರೂ ಸಾಂಪ್ರದಾಯಿಕ ಮಾದರಿಯನ್ನು ಮುಂದುವರೆಸುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲವಾಗಿರುವ ಇವರ ಹೆಚ್ಚು ಹಣ ವೆಚ್ಚಮಾಡಿ ವೈಜ್ಞಾನಿಕ ಬೇಸಾಯ ಮಾಡಲು ಬಯಸದೆ ಇರುವುದು ಕಂಡು ಬಂದಿದೆ. ಪ್ರತಿಶತ ೭೧ರಷ್ಟು ಮಾಹಿತಿದಾರರು ಸಾಂಪ್ರದಾಯಿಕವಾದ ತಮ್ಮದೇಯಾದ ದನಕರುಗಳಿಂದ ಬಂದಂತ ಕೊಟ್ಟಿಗೆ ಗೊಬ್ಬರವನ್ನು ತಮ್ಮ ಬೇಸಾಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದರಂತೆ ಪ್ರತಿಶತ ೧೮ರಷ್ಟು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುತ್ತಾರೆ ಉಳಿದಂತೆ ಪ್ರತಿಶತ ೧೧ರಷ್ಟು ಮಾಹಿತಿದಾರರು ಬೆಳೆ ಆಧರಿಸಿ ಅವಶ್ಯವಿದ್ದಂತೆ ಎರಡೂ ರೀತಿಯ ಗೊಬ್ಬರಗಳನ್ನು ಬಳಸುತ್ತಾರೆ. ಮೇಲಿನ ವಿವರಣೆ ಯನ್ನು ನೋಡಲಾಗಿ ಕಡಿಮೆ ಸಂಖ್ಯೆಯಲ್ಲಿ ಮಾಹಿತಿದಾರರು ಸಾಂಪ್ರದಾಯಿಕವಾದ ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುತ್ತಿರುವುದು ತಿಳಿದು ಬರುತ್ತದೆ.

ಕೋಷ್ಟಕ ೫.೨೩. ಚರ-ಸ್ಥಿರಾಸ್ತಿಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧	ಸಾಕು ಪ್ರಾಣಿ	೧೩೦	೩೩
೨	ವಾಹನಗಳು	೬೮	೧೭
೩	ಒಡವೆ	೮	೨
೪	ಗೃಹೋಪಯೋಗಿ ವಸ್ತುಗಳು	೭೮	೨೦
೫	ಇತರೆ	೧೦೬	೨೭
	ಒಟ್ಟು	೩೯೦	೧೦೦

ಲಂಬಚಿತ್ರ ೫.೨೩. ಚರ-ಸ್ಥಿರಾಸ್ತಿಗಳ ಪ್ರಮಾಣ



ಕೋಷ್ಟಕ ೫.೨೩ರಲ್ಲಿನ ವಿವರಣೆಯ ಪ್ರಕಾರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತದಾರರ ಕುಟುಂಬಗಳ ಪೈಕಿ ೧೦೩ ಕುಟುಂಬಗಳು ಅಂದರೆ, ಶೇ. ೩೩ರಷ್ಟು ಮಾಹಿತಿದಾರರು ಹಸು, ಕುರಿ, ಕೋಳಿಮತ್ತು ನಾಯಿಗಳಂತಹ ಸಾಕು ಪ್ರಾಣಿಗಳನ್ನು ಹೊಂದಿದ್ದಾರೆ. ೬೮ ಮಾಹಿತಿದಾರರು ಅಂದರೆ, ಶೇ ೧೭ರಷ್ಟು ಮಾಹಿತಿದಾರರು ದ್ವಿಚಕ್ರ ವಾಹನಗಳು ಮತ್ತು ವಾಣಿಜ್ಯ ಉದ್ದೇಶದ ಮೂರು ಮತ್ತು ನಾಲ್ಕು ಚಕ್ರಗಳ ವಾಹನಗಳನ್ನು ಹೊಂದಿದ್ದಾರೆ. ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೇ ೮ ಕುಟುಂಬಗಳು ಅಂದರೆ ಒಟ್ಟು ಮಾಹಿತಿದಾರರ ಪೈಕಿ ಶೇ ೨ರಷ್ಟರಲ್ಲಿ ಮಾತ್ರ ಆಭರಣ ಒಡವೆಗಳಿವೆ. ಹಾಗೆಯೇ ೭೮ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೨೦ರಷ್ಟು ಮಾಹಿತಿದಾರರು, ಗೃಹೋಪಯೋಗಿ ವಸ್ತುಗಳನ್ನು ಹೊಂದಿದ್ದಾರೆ. ಉಳಿದ ೧೦೬ ಮಾಹಿತಿದಾರರ ಕುಟುಂಬಗಳು ಅಂದರೆ ಶೇ. ೨೭ರಷ್ಟು ಮಾಹಿತಿದಾರರು ಇತರ ಚರಾಸ್ತಿಗಳನ್ನು ಹೊಂದಿದ್ದಾರೆ. ಇತರ ಚರಾಸ್ತಿಗಳು ಎಂದರೆ, ದೂರದರ್ಶನ, ರೇಡಿಯೋ ಮುಂತಾದ ಎಲೆಕ್ಟ್ರಾನಿಕ್ಸ್ ವಸ್ತುಗಳು.

ಕೋಷ್ಟಕ ೫.೨೪: ಕುಟುಂಬದ ತಿಂಗಳ ಆದಾಯ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	೧೦೦೦-೪೦೦೦	೧೮೨	೪೭
೨.	೪೦೦೧-೫೦೦೦	೯೩	೨೪
೩.	೫೦೦೧-೧೦೦೦೦	೬೧	೧೬
೪.	೧೦೦೦೧ಕ್ಕಿಂತ ಹೆಚ್ಚು	೫೪	೧೪
	ಒಟ್ಟು	೩೯೦	೧೦೦

ಕೋಷ್ಟಕ ೫.೨೪ರಲ್ಲಿ ಸೂಚಿಸಿರುವ ಅಂಕಿ ಅಂಶಗಳ ಪ್ರಕಾರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರ ಕುಟುಂಬಗಳ ಪೈಕಿ ೧೮೭ ಕುಟುಂಬಗಳು ಅಂದರೆ ಪ್ರತಿಶತ ೪೭ರಷ್ಟು ಮಾಹಿತಿದಾರರು ತಿಂಗಳಿಗೆ ರೂ. ೧೦೦೦-೪೦೦೦ ಆದಾಯ ಪಡೆಯುತ್ತಿದ್ದಾರೆ. ಹಾಗೆಯೇ, ೯೩ ಮಾಹಿತಿದಾರರ ಕುಟುಂಬಗಳು ಅಂದರೆ, ಪ್ರತಿಶತ ೨೪ ರಷ್ಟು ಮಾಹಿತಿದಾರರು ೪೦೦೧-೫೦೦೦ರಷ್ಟು ಆದಾಯ ಪಡೆಯುತ್ತಾರೆ. ಅದರಂತೆಯೇ ೬೧ ಮಾಹಿತಿದಾರರ ಕುಟುಂಬಗಳು ಅಂದರೆ, ಪ್ರತಿಶತ ೧೬ರಷ್ಟು ಮಾಹಿತಿದಾರರು ೫೦೦೧ರಿಂದ ೧೦೦೦೦ ರೂ. ಆದಾಯವನ್ನು ಮತ್ತು ೫೪ ಕುಟುಂಬಗಳು ಅಂದರೆ ಪ್ರತಿಶತ ೧೪ರಷ್ಟು ಮಾಹಿತಿದಾರರು ೧೦೦೦೧ ರೂಪಾಯಿಕ್ಕಿಂತ ಹೆಚ್ಚು ಆದಾಯವನ್ನು ಪಡೆಯುವದು ತಿಳಿದು ಬಂದಿದೆ.

ಸಿದ್ದಿ ಜನರು ತಮ್ಮ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಉಳಿತಾಯದ ಬಗ್ಗೆ ಆಸಕ್ತಿ ಇದ್ದರೂ ಅದು ಸಾಧ್ಯವಾಗುತ್ತಿಲ ಎಂಬುದು ತಿಳಿದುಬರುತ್ತದೆ. ಪ್ರತಿಶತ ೪೬ರಷ್ಟು ಮಾಹಿತಿದಾರರು ಉಳಿತಾಯ ಮಾಡುತ್ತೇನೆ ಎಂದು ತಿಳಿಸಿದ್ದಾರೆ. ಅದರಂತೆ ಪ್ರತಿಶತ ೫೪ರಷ್ಟು ಮಾಹಿತಿದಾರರು ಯಾವುದೇ ಉಳಿತಾಯ ಮಾಡಲು ಸಾಧ್ಯವಾಗುವದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೇಲಿನ ವಿವರಣೆಯ ಪ್ರಕಾರ ಅಧಿಕ ಪ್ರಮಾಣದಲ್ಲಿ ಮಾಹಿತಿದಾರರಿಗೆ ಬಂದಂತಹ ಆದಾಯವನ್ನು ಮನೆಯ ಎಲ್ಲಾ ಖರ್ಚುಗಳ ನಂತರ ಯಾವುದೇ ಉಳಿತಾಯ ಮಾಡಲು ಸಾಧ್ಯವಿಲ್ಲ. ಬುಡಕಟ್ಟು ಸಮುದಾಯಗಳಲ್ಲಿ ಆದಾಯದ ಕಡಿಮೆ ಇರುವುದರೊಂದಿಗೆ ಉಳಿತಾಯದ ಮನೋಭಾವನೆ ಕಡಿಮೆ ಇದೆ. ಅಧಿಕ ಪ್ರಮಾಣದ ಮಾಹಿತಿದಾರರು ಉಳಿತಾಯದ ಮನೋಭಾವನೆಯನ್ನು ಹೊಂದದೇ ಇರುವುದು ತಿಳಿದು ಬಂದಿದೆ. ಆದಾಗ್ಯೂ ಸಿದ್ದಿ ಬುಡಕಟ್ಟು ಜನರು ವಿವಿಧ ಮೂಲಗಳಲ್ಲಿ ಉಳಿತಾಯ ಮಾಡುತ್ತಿರುವದೂ ಕಂಡು ಬಂದಿದ್ದು ಅದರ ಮಹಿತಿ ಕೆಳಗಿನಂತಿದೆ.

ಉಳಿತಾಯ ಮಾಡುವ ಮೂಲಗಳು

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರತಿಶತ ೮ರಷ್ಟು ಮಾಹಿತಿದಾರರು ಠೇವಣಿ ಕಟ್ಟುವ ಮೂಲಕ ಉಳಿತಾಯ ಮಾಡುತ್ತಿದ್ದಾರೆ. ಅದರಂತೆ ಪ್ರತಿಶತ ೧೩ರಷ್ಟು ಮಾಹಿತಿ ದಾರರು ಚೀಟಿ ಕಟ್ಟುವದರ ಮೂಲಕ ಉಳಿತಾಯ ಮಾಡುವದಾಗಿ ತಿಳಿಸಿದ್ದಾರೆ. ಮತ್ತು ಪ್ರತಿಶತ ೬ರಷ್ಟು ಮಾಹಿತಿದಾರರು ಲೇವಾದೇವಿ ವ್ಯವಹಾರ ಮಾಡುವ ಮೂಲಕ ಹಣವನ್ನು ಉಳಿತಾಯ ಮಾಡುತ್ತಾರೆ. ಮತ್ತು ಪ್ರತಿಶತ ೩ರಷ್ಟು ಮಾಹಿತಿದಾರರು ನಗದು ಹಣವನ್ನು ಮನೆ ಯಲ್ಲಿಯೇ ಕೂಡಿಡುವ ಮೂಲಕ ಉಳಿತಾಯ ಮಾಡುತ್ತಾರೆ. ಪ್ರತಿಶತ ೧೬ರಷ್ಟು ಮಾಹಿತಿದಾರರು ಇನ್ನಿತರ ಮೂಲಗಳೊಂದಿಗೆ ಉಳಿತಾಯ ಮಾಡುತ್ತಾರೆ. ಮೇಲಿನ ವಿವರಣೆಯ ಪ್ರಕಾರ ಮಾಹಿತಿದಾರರು ಒಂದಿಲ್ಲಾ ಒಂದು ಮೂಲದಿಂದ ಅಲ್ಪ ಪ್ರಮಾಣದಲ್ಲಿ ಉಳಿತಾಯ ಮಾಡು ತ್ತಿರುವುದು ತಿಳಿದು ಬಂದಿದೆ.

ಕೋಷ್ಟಕ ೫.೨೫. ಹಣಕಾಸು ಮೂಲಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧	ಸಹಕಾರಿ ಬ್ಯಾಂಕ್	೧೨೨	೩೧
೨	ಗ್ರಾಮೀಣ ಅಭಿವೃದ್ಧಿ ಬ್ಯಾಂಕ	೧೫೦	೩೮
೩	ವಾಣಿಜ್ಯ ಬ್ಯಾಂಕ್	೬೦	೧೫
೪	ಅಂಚೆ ಕಚೇರಿ	೫೮	೧೫
	ಒಟ್ಟು	೩೯೦	೧೦೦

ಮೇಲಿನ ಕೋಷ್ಟಕ ೫.೨೫ರ ವಿವರಣೆಯಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರ ಕುಟುಂಬಗಳ ಪೈಕಿ ೧೨೨ ಜನರು ಅಂದರೆ ಪ್ರತಿಶತ ೩೧ರಷ್ಟು ಮಾಹಿತಿದಾರರು ತಮ್ಮ ಹಣಕಾಸು ವ್ಯವಹಾರವನ್ನು ಸಹಕಾರಿ ಬ್ಯಾಂಕಗಳ ಮೂಲಕ ನಡೆಸುತ್ತಾರೆ. ಹಾಗೆಯೇ, ೧೫೦ ಮಾಹಿತಿದಾರರ ಕುಟುಂಬಗಳಲ್ಲಿ ಅಂದರೆ, ಪ್ರತಿಶತ ೩೮ರಷ್ಟು ಮಾಹಿತಿದಾರರು ತಮ್ಮ ಹಣಕಾಸು ವ್ಯವಹಾರವನ್ನು ಗ್ರಾಮೀಣ ಅಭಿವೃದ್ಧಿ ಬ್ಯಾಂಕ ಮೂಲಕ ನಡೆಸುತ್ತಾರೆ. ಹಾಗೂ, ೬೦ ಮಾಹಿತಿದಾರರು ಅಂದರೆ, ಪ್ರತಿಶತ ೧೫ರಷ್ಟು ಮಾಹಿತಿದಾರರು ತಮ್ಮ ಹಣಕಾಸು ವ್ಯವಹಾರವನ್ನು ವಾಣಿಜ್ಯ ಬ್ಯಾಂಕ್ ಮೂಲಕ ನಡೆಸಿದರೆ ಉಳಿದಂತೆ, ೫೮ ಜನರು ಅಂದರೆ, ಪ್ರತಿಶತ ೧೫ರಷ್ಟು ಮಾಹಿತಿದಾರರು ತಮ್ಮ ಹಣಕಾಸು ವ್ಯವಹಾರವನ್ನು ಅಂಚೆ ಕಚೇರಿ ಮೂಲಕ ನಡೆಸುತ್ತಾರೆ.

ಮೇಲಿನ ವಿವರಣೆಯ ಪ್ರಕಾರ ಅಧಿಕ ಪ್ರಮಾಣದ ಮಾಹಿತಿದಾರರು ತಮ್ಮ ಸಮುದಾಯಗಳ ಹತ್ತಿರವಿರುವ ಸಹಕಾರಿ ಬ್ಯಾಂಕ್‌ಗಳ ಮೂಲಕ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ತಮ್ಮ ಹಣಕಾಸಿನ ವ್ಯವಹಾರಗಳನ್ನು ನಡೆಸುವುದು ತಿಳಿದು ಬಂದಿದೆ. ಬುಡಕಟ್ಟು ಸಮುದಾಯಗಳಲ್ಲಿ ಇನ್ನಿತರ ವಿವಿಧ ಸೌಲಭ್ಯಗಳು ಇಲ್ಲದ ಕಾರಣವಾಗಿ ಅಲ್ಲಿಯೇ ಲಭ್ಯವಿರುವ ಅಂಚೆ ಕಚೇರಿಯಂತಹ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿರುವುದು ತಿಳಿದು ಬಂದಿದೆ.

ಕೋಷ್ಟಕ ೫.೨೬. ಬ್ಯಾಂಕುಗಳಿಂದ ಸಾಲ ಪಡೆದವರು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಹೌದು	೨೯೫	೭೬
೨.	ಇಲ್ಲ	೯೫	೨೪
	ಒಟ್ಟು	೩೯೦	೧೦೦

ಮೇಲಿನ ಕೋಷ್ಟಕ ೫.೨೬ರ ವಿವರಣೆಯಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದುವ ೩೯೦ ಮಾಹಿತಿದಾರರ ಕುಟುಂಬಗಳ ಪೈಕಿ ೨೯೫ ಜನರು ಅಂದರೆ, ಪ್ರತಿಶತ ೭೬ರಷ್ಟು ಮಾಹಿತಿದಾರರು ವಿವಿಧ ಬ್ಯಾಂಕುಗಳ ಮೂಲಕ ಸಾಲಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಅದರಂತೆ ೯೫ ಜನರು ಅಂದರೆ ಪ್ರತಿಶತ ೨೪ರಷ್ಟು ಮಾಹಿತಿದಾರರು ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ಕುಟುಂಬವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಮೇಲಿನ ವಿವರಣೆಗಳ ಪ್ರಕಾರ, ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ಕಡಿಮೆ ಆದಾಯ ಹೊಂದಿದ್ದಾರೆ, ಆದ್ದರಿಂದ ಆರ್ಥಿಕ ಅವಶ್ಯಕತೆಗಳಿಗೆ ತಕ್ಕಂತೆ ವಿವಿಧ ಬ್ಯಾಂಕುಗಳಿಂದ ಸಾಲಸೌಲಭ್ಯವನ್ನು ಪಡೆಯುತ್ತಿರುವುದು ಕಂಡು ಬಂದಿದೆ.

ವಿವಿಧ ಮೂಲಗಳಿಂದ ಸಾಲ ತೆಗೆದುಕೊಂಡಿರುವ ಈ ಸಮೂಹದ ಜನರಲ್ಲಿ, ಪ್ರತಿಶತ ೩೪ರಷ್ಟು ಮಾಹಿತಿದಾರರು ತಾವು ಪಡೆದಂತಹ ಸಾಲವನ್ನು ಹಲವಾರು ಅನುತ್ಪಾದಕ ಕಾರಣ ಗಳಾದ ಮನೆಯ ಅಲಂಕಾರ ಮತ್ತು ಇತರ ವಸ್ತುಗಳನ್ನು ಕೊಳ್ಳಲು ಬಳಸುವದಾಗಿ ಹೇಳಿದ್ದಾರೆ. ಅದರಂತೆ ಪ್ರತಿಶತ ೧೦ರಷ್ಟು ಮಾಹಿತಿದಾರರು ಮೊದಲು ಮಾಡಿರುವ ಸಾಲವನ್ನು ತೀರಿಸಲು ಬಳಸಿದರೆ ಪ್ರತಿಶತ ೧೮ರಷ್ಟು ಮಾಹಿತಿದಾರರು ಮಕ್ಕಳ ಮದುವೆ ಮತ್ತು ಇನ್ನಿತರ ಹಬ್ಬ-ಹರಿದಿನಗಳ ಆಚರಣೆಗಾಗಿ ಬಳಸಿರುವುದಾಗಿ ತಿಳಿಸಿದ್ದಾರೆ. ಉಳಿದಂತೆ ಪ್ರತಿಶತ ೩೦ರಷ್ಟು ಮಾಹಿತಿದಾರರು ಪಡೆದಂತ ಸಾಲದ ಮನೆಯ ಖರ್ಚುಗಳಿಗೆ ಅರ್ಧಭಾಗವನ್ನು ಉಪಯೋಗ ಮಾಡಿದ್ದು ಇನ್ನು ಉಳಿದಂತೆ ಅರ್ಧ ಭಾಗವನ್ನು ಇನ್ನು ಕಾಯ್ದಿರಿಸಿರುವದಾಗಿ ತಿಳಿಸಿದ್ದಾರೆ. ಪ್ರತಿಶತ ೬ರಷ್ಟು ಮಾಹಿತಿದಾರರು ಹಲವಾರು ಕಾರಣಗಳಿಂದ ಕುಟುಂಬದ ತುರ್ತು ಅವಶ್ಯಕತೆಗಳಿಗೆ ಬಳಸಿಕೊಂಡಿರುವುದು ತಿಳಿದು ಬಂದಿದೆ.


ಪ್ರತಿಶತ ೬೫ರಷ್ಟು ಮಾಹಿತಿದಾರರು ಬ್ಯಾಂಕುಗಳ ಮೂಲಕ ಪಡೆದಂತೆ ಸಾಲವನ್ನು ಇನ್ನೂವರೆಗೂ ಮರುಪಾವತಿಯನ್ನು ಮಾಡಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉಳಿದಂತೆ ಪ್ರತಿಶತ ೧೧ರಷ್ಟು ಮಾಹಿತಿದಾರರು ಪಡೆದಂತ ಸಾಲವನ್ನು ನಿಗದಿತ ಸಮಯದಲ್ಲಿ ಮರುಪಾವತಿಯನ್ನು ಮಾಡಿದ್ದಾರೆ.

ಸರ್ಕಾರದಿಂದ ಪರಿಶಿಷ್ಟ ಬುಡಕಟ್ಟುಗಳಿಗೆ ದೊರೆಯುತ್ತಿರುವ ಸೌಲಭ್ಯಗಳ ಬಗೆಗಿನ ಅರಿವು

ಕೋಷ್ಟಕ ೫.೨೭ ಪಡಿತರ ಚೀಟಿ ಸೌಲಭ್ಯ ಹೊಂದಿರುವ ಕುಟುಂಬಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧	ಹೌದು	೨೯೮	೭೬
೨	ಇಲ್ಲ	೯೨	೨೪
	ಒಟ್ಟು	೩೯೦	೧೦೦

ಲಂಬಚಿತ್ರ ೫.೨೭. ಪಡಿತರಚೀಟಿ ಸೌಲಭ್ಯ ಹೊಂದಿರುವ ಕುಟುಂಬಗಳ ಪ್ರಮಾಣ



ಮೇಲಿನ ಕೋಷ್ಟಕ ೫.೨೭ರ ವಿವರಣೆಯಂತೆ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರ ಕುಟುಂಬಗಳ ಪೈಕಿ ೨೯೮ ಜನರು ಅಂದರೆ, ಪ್ರತಿಶತ ೭೬ರಷ್ಟು ಮಾಹಿತಿದಾರರು ಪಡಿತರ ಚೀಟಿ ಸೌಲಭ್ಯ ಹೊಂದಿದ್ದಾರೆ. ಅದರಂತೆ, ೯೨ ಜನರು ಅಂದರೆ, ೨೪ರಷ್ಟು ಮಾಹಿತಿದಾರರು ಪಡಿತರ ಚೀಟಿ ಸೌಲಭ್ಯ ಹೊಂದಿರುವದಿಲ್ಲ. ಮೇಲಿನ ವಿವರಣೆಯ ಪ್ರಕಾರ ಆರ್ಥಿಕವಾಗಿ ಹಿಂದುಳಿದ ಮಾಹಿತಿದಾರರು ಸರ್ಕಾರ ಒದಗಿಸಿರುವ ಸೌಲಭ್ಯದ ಉಪಯೋಗವನ್ನು ಪಡೆಯುತ್ತಿರುವುದು ಕಂಡು ಬಂದಿದೆ.

ಸರ್ಕಾರದಿಂದ ಬುಡಕಟ್ಟು ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳ ಕುರಿತ ಮಾಹಿತಿ

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಪೈಕಿ ಪ್ರತಿಶತ ೭೬ರಷ್ಟು ಮಾಹಿತಿದಾರರಿಗೆ ಸರ್ಕಾರದಿಂದ ಬುಡಕಟ್ಟು ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳು ತೃಪ್ತಿ ತಂದಿವೆ. ಉಳಿದ ಪ್ರತಿಶತ ೨೪ರಷ್ಟು ಮಾಹಿತಿದಾರರಿಗೆ ಸರ್ಕಾರದಿಂದ ಬುಡಕಟ್ಟು ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳು ತೃಪ್ತಿತಂದಿಲ್ಲ. ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ಸರ್ಕಾರ ಬುಡಕಟ್ಟು ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳು ತೃಪ್ತಿಕರವಾಗಿದೆ ಎಂಬುದು ತಿಳಿದು ಬರುತ್ತದೆ. ೨೦೦೩ರಲ್ಲಿ ಸಿದ್ದಿ ಜನಾಂಗವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸುವುದಕ್ಕಿಂತ ಮೊದಲು ಇವರಿಗೆ ಸರ್ಕಾರದಿಂದ ಬುಡಕಟ್ಟು ಜನರಿಗೆ ದೊರೆಯುತ್ತಿದ್ದ ಯಾವುದೇ ರೀತಿಯ ವಿಶೇಷ ಸವಲತ್ತುಗಳು ಸಿಗುತ್ತಿರಲಿಲ್ಲ, ಈಗ ಜಿಲ್ಲೆಯ ಇತರ ಆದಿವಾಸಿ ಬಿಡಕಟ್ಟುಗಳಿಗಿಂತ ಹೆಚ್ಚಿನ ಸವಲತ್ತುಗಳನ್ನು ಸಿದ್ದಿಯರು ಪಡೆಯುತ್ತಿರುವುದು ಕಂಡು ಬಂದಿದೆ.

ಬುಡಕಟ್ಟು ಅಭಿವೃದ್ಧಿಗಾಗಿರುವ ಸರ್ಕಾರೇತರ ಸಂಸ್ಥೆಗಳ ಕುರಿತ ಮಾಹಿತಿ

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರ ಕುಟುಂಬಗಳ ಪೈಕಿ ಪ್ರತಿಶತ ೬೭ರಷ್ಟು ಮಾಹಿತಿದಾರರು ಬುಡಕಟ್ಟು ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳ ಕೈಗೊಂಡ ಕಾರ್ಯಗಳು ತಮಗೆ ಉತ್ತಮವಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿದ್ದರೆ ಉಳಿದ ಪ್ರತಿಶತ

ಲರಷ್ಟು ಮಾಹಿತಿದಾರರು ಬುಡಕಟ್ಟು ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳ ಕೈಗೊಂಡ ಕಾರ್ಯಗಳು ತಮಗೆ ಉತ್ತಮವಾಗಿಲ್ಲ ಎಂಬಂತ ಅಭಿಪ್ರಾಯವನ್ನು ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿದ್ದಾರೆ. ಪ್ರತಿಶತ ೨೫ರಷ್ಟು ಮಾಹಿತಿದಾರರು ಬುಡಕಟ್ಟು ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳ ಬಗ್ಗೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಬುಡಕಟ್ಟು ಜನರ ಜೀವನದ ಉನ್ನತಿಗಾಗಿ ಗ್ರೀನ್ ಇಂಡಿಯಾ ಟ್ರಸ್ಟ್, ಕಾರವಾರ ಧರ್ಮ ಪ್ರಾಂತ್ಯ ಪರಿಷತ್, ಮತ್ತು ಕ್ರೈಸ್ತ ಮಿಷನರಿಗಳಂತಹ ಹಲವಾರು ಸರ್ಕಾರೇತರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರೀನ್ ಇಂಡಿಯಾ ಟ್ರಸ್ಟ್, ವಿಶೇಷವಾಗಿ ಸಿದ್ದಿ ಬುಡಕಟ್ಟು ಜನರ ಸಬಲೀಕರಣವನ್ನೇ ಪ್ರಮುಕ ದ್ಯೇಯವನ್ನಾಗಿರಿಸಿಕೊಂಡು ಇಡೀ ಜಿಲ್ಲೆ ಯಾಧ್ಯಂತ ಸಿದ್ದಿಯರ ಭೂಮಿ ಮತ್ತು ಅರಣ್ಯದ ಹಕ್ಕಿಗಾಗಿ ಹೋರಾಡುತ್ತಿದೆ. ಹಾಗೆಯೇ, ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಇವರಿಗೆ ದೊರಕಿಸಿಕೊಡಲು ತನ್ನದೇ ಆದ ಕಾರ್ಯ ಕರ್ತರ ಜಾಲವನ್ನು ರಚಿಸಿಕೊಂಡು, ಸ್ವಸಹಾಯ ಸಂಘಗಳನ್ನು, ಸ್ತ್ರೀಶಕ್ತಿ ಸಂಘಗಳನ್ನು ರಚಿಸಿ ಸಿದ್ದಿಯರ ಸಂಪೂರ್ಣ ಸಬಲೀಕರನಕ್ಕಾಗಿ ಕಾರ್ಯ ನಿರ್ವಹಿಸುತ್ತಿದೆ. ಹಾಗೆಯೆ, ಕಾರವಾರ ಜಿಲ್ಲಾ ಧರ್ಮ ಪ್ರಾಂತ್ಯ ಪರಿಷತ್ ಕೂಡ ಕಾರ್ಯನಿರ್ವಹಿಸುತ್ತಿದೆ. ಆದರೂ, ಸಿದ್ದಿ ಸಮೂಹದ ಕೆಲವು ಮುಖಂಡರು ಅನೌಪಚಾರಿಕವಾಗಿ ಮಾತನಾಡುವಾಗ ಸಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಬಗೆಗೆ ಅಸಮದಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಭೂ ನೀತಿಯ ಕುರಿತ ಮಾಹಿತಿ


ಪ್ರತಿಶತ ೨೧ರಷ್ಟು ಮಾಹಿತಿದಾರರು ಸರ್ಕಾರದ ಭೂ ನೀತಿಯು ಸೂಕ್ತವಾಗಿದೆ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆ ಉಳಿದ ಪ್ರತಿಶತ ೨೭ರಷ್ಟು ಮಾಹಿತಿದಾರರು ಸರ್ಕಾರದ ಭೂ ನೀತಿಯು ಅಸಮರ್ಪಕವಾಗಿದೆ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿದ್ದಾರೆ. ಪ್ರತಿಶತ ೫೨ ರಷ್ಟು ಮಾಹಿತಿದಾರರು ಸರ್ಕಾರದ ಭೂ ನೀತಿಯು ತೊಂದರೆದಾಯಕವಾಗಿದೆ ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿದ್ದಾರೆ. ಅತ್ಯಧಿಕ ಪ್ರಮಾಣದಲ್ಲಿ ಮಾಹಿತಿದಾರರು ಬುಡಕಟ್ಟು ಅಭಿವೃದ್ಧಿಗಾಗಿ ಸರ್ಕಾರೇತರ ಸಂಸ್ಥೆಗಳು ಕೈಗೊಂಡ ಕಾರ್ಯಗಳು ಭೂ ನೀತಿಯ ಕುರಿತು ಅತೃಪ್ತಿಕರ ಭಾವನೆಯನ್ನು ಹೊಂದಿದ್ದಾರೆ

೫.೯. ರಾಜಕೀಯ ಚಟುವಟಿಕೆಗಳು

ಕೋಷ್ಟಕ ೫.೨೮: ಪಂಚಾಯಿತಿಗಳ ಸದಸ್ಯತ್ವ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಹೌದು	೧೨	೩
೨.	ಇಲ್ಲ	೩೭೮	೯೭
	ಒಟ್ಟು	**೩೯೦**	೧೦

ಲಂಬಚಿತ್ರ ೫.೨೮. ಪಂಚಾಯಿತಿಗಳ ಸದಸ್ಯತ್ವ ಪ್ರಮಾಣ




ಇತ್ತೀಚಿನ ಸಂದರ್ಭದಲ್ಲಿ ಯಾವುದೇ ಸಮುದಾಯವು ಆರ್ಥಿಕವಾಗಿ ಮತ್ತು ಸಾಮಾಜಿಕ ವಾಗಿ ಅಭಿವೃದ್ಧಿ ಹೊಂದಬೇಕಾದರೆ ರಾಜಕೀಯ ಪ್ರಾತಿನಿಧ್ಯ ಮಹತ್ವದ ಪಾತ್ರ ವಹಿಸುತ್ತದೆ. ಅದರಂತೆ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಾಹಿತಿದರರ ಪೈಕಿ, ಮೇಲಿನ ಕೋಷ್ಟಕ ೫.೨೮ ವಿವರಣೆಯಂತೆ ಪ್ರತಿಶತ ೩ರಷ್ಟು ಮಾಹಿತಿದಾರರು ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿದ್ದಾರೆ. ಅದರಂತೆ, ಪ್ರತಿಶತ ೯೭ರಷ್ಟು ಮಾಹಿತಿದಾರರು ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿಲ್ಲ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಾಹಿತಿದಾರರು ರಾಜಕೀಯ ಚಟುವಟಿಕೆ ಗಳ ಕುರಿತು ಆಸಕ್ತಿ ಹೊಂದಿದ್ದಾರೆ.

ಕೋಷ್ಟಕ ೫.೨೯. ರಾಜಕೀಯ ಪಕ್ಷಗಳ ಸದಸ್ಯತ್ವ

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಕಾಂಗ್ರೆಸ್	೪	೧
೨.	ಬಿ.ಜೆ.ಪಿ	೩	೧
೩.	ಜೆ.ಡಿ.ಎಸ್	೨	೧
೪.	ಇತರೆ	೩	೧
	ಒಟ್ಟು	೧೨	೩

ಲಂಬಚಿತ್ರ ೫.೨೯. ರಾಜಕೀಯ ಪಕ್ಷಗಳ ಸದಸ್ಯತ್ವ ಪ್ರಮಾಣ




ಒಂದು ಜನಾಂಗ ಅಥವಾ ಸಮುದಾಯ ಸಾಮಜಿಕವಾಗಿ ಮತ್ತು ಆರ್ಥಿಕವಾಗಿ ತನನ್ನು ತಾನು ಗುರುತಿಸಿಕೊಳ್ಳಲು ರಾಜಕೀಯದಲ್ಲಿ ಸಮೂಹದ ಪಾಲ್ಗೊಳ್ಳುವಿಕೆ ಮುಖ್ಯವಾಗುತ್ತದೆ. ಅದರಂತೆ, ಮೇಲಿನ ಕೋಷ್ಟಕ ೫.೨೯ ವಿವರಣೆಯಂತೆ ಸಿದ್ದಿ ಜನಾಂಗದವರು ವಿವಿಧ ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದುಕೊಂಡಿರುವುದನ್ನು ತಿಳಿಸುತ್ತದೆ. ಅದರಂತೆ, ಕೇವಲ ೧೨ ಜನ ಮಾಹಿತಿ ದಾರರು ಮಾತ್ರ ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದುಕೊಂಡಿದ್ದಾರೆ. ಅವರಲ್ಲಿ, ಪ್ರತಿಶತ ೩೩ರಷ್ಟು ಮಾಹಿತಿದಾರರು ಕಾಂಗ್ರೇಸ್ ಪಕ್ಷದ ಸದಸ್ಯರಾಗಿ ಆ ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರತಿಶತ ೨೫ ಮಾಹಿತಿದಾರರರು ಭಾರತೀಯ ಜನತಾ ಪಕ್ಷದ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಪ್ರತಿಶತ ೧೭ ಮಾಹಿತಿದಾರರರು ಜೆ.ಡಿ.ಎಸ್ ಪಕ್ಷದ ಸದಸ್ಯತ್ವ ಪಡೆದುಕೊಂಡಿದ್ದಾರೆ. ಪ್ರತಿಶತ ೨೫ ಮಾಹಿತಿದಾರರರು ಇತರೆ ಪಕ್ಷಗಳ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕೋಷ್ಟಕ ೫.೩೦. ಚುನಾಯಿತ ಪ್ರತಿನಿಧಿಗಳು

ಕ್ರಸಂ	ವಿಷಯ	ಸಂಖ್ಯೆ	ಶೇಕಡ
೧.	ಹೌದು	೮	೨
೨.	ಇಲ್ಲ	೪	೨
ಒಟ್ಟು		೧೨	೪



ಲಂಬಚಿತ್ರ ೫.೩೦. ಚುನಾಯಿತ ಪ್ರತಿನಿಧಿಗಳ ಪ್ರಮಾಣ



ಮೇಲಿನ ಕೋಷ್ಟಕ ೫.೩೦ರ ವಿವರಣೆಯಂತೆ ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದಿರುವ ೧೨ ಜನ ಮಾಹಿತಿದಾರರ ಪೈಕಿ ೮ ಜನರು, ಅಂದರೆ ಒಟ್ಟು ೩೯೦ ಮಾಹಿತಿದಾರರ ಪೈಕಿ ಪ್ರತಿಶತ ೨ರಷ್ಟು ಮಾಹಿತಿದಾರರು ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಾಗಿದ್ದಾರೆ. ಹಾಗೆಯೇ ೨ರಷ್ಟು ಮಾಹಿತಿದಾರರು ಸ್ಥಳಿಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಾಗಿರುವುದಿಲ್ಲ. ಮೇಲಿನ ವಿವರಣೆಗಳ ಪ್ರಕಾರ ಕಡಿಮೆ ಪ್ರಮಾಣದಲ್ಲಿ ಅಂದರೆ ಶೇ. ೪ರಷ್ಟು ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೊಂಡಿರುವುದು ಕಂಡುಬಂದಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಚುನಾವಣೆಗೆ ಹಣದ ಅವಶ್ಯಕತೆ ಹೆಚ್ಚಾಗಿರುವುದು. ಬಡತನದಿಂದ ನರಳುತ್ತಿರುವ ಸಿದ್ದಿ ಜನರು ಹಣ ಖರ್ಚು ಮಾಡಿ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ.

ಇತ್ತೀಚೆಗೆ ಪಕ್ಷ ರಾಜಕಾರಣದಲ್ಲಿ ಸಿದ್ದಿ ಮುಖಂಡರುಗಳು ಮತ್ತು ಯುವಕರುಗಳು ಗುರುತಿಸಿ ಕೊಳ್ಳುತ್ತಿರುವುದು ಕಂಡು ಬಂದಿದೆ. ಯಾವುದಾದರೂ ಒಂದು ರಾಜಕೀಯ ಪಕ್ಷದ ನಾಯಕರುಗಳ ಬೆಂಬಲದಿಂದ ಪರಿಶಿಷ್ಟ ಪಂಗಡದ ಜನರಿಗೆ ಮೀಸಲಾಗಿರುವ ಕ್ಷೇತ್ರಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ದಿ ಜನಾಂಗದ ಸದಸ್ಯರು ಸ್ಪರ್ಧಿಸಿ ಆಯ್ಕೆಯಾಗುತ್ತಿರುವುದು ಕಂಡು ಬಂದಿದೆ. ಹಳಿಯಾಳ ತಾಲೂಕಿನ ಗೊಳೆಗಳ್ಳಿಯಲ್ಲಿ ಮುಸ್ಲೀಂ ಸಿದ್ದಿ ಯುವಕನೊಬ್ಬ ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯನಾಗಿ ಆಯ್ಕೆಯಾಗಿದ್ದಾನೆ. ಮತ್ತು ಅಂಕೋಲ ತಾಲೂಕಿನ ಡೋಂಗ್ರೀ ಗ್ರಾಮ ಪಂಚಾಯತಿಗೆ ಕಮ್ಮಾಣೆ ಗ್ರಾಮದ ಸಿದ್ದಿ ಮಹಿಳೆಯೊಬ್ಬರು ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅವರ ಅನುಭವಗಳನ್ನು ಆಲಿಸಿದಾಗ, ಅವರೂ ಕೂಡ ಭಾರತೀಯ ಸಾಮಾಜದ ಇತರ ಜನಸಮೂಹಗಳಲ್ಲಿರುವಂತೆ ರಾಜಕೀಯ ಪಕ್ಷಗಳ ಸ್ಥಳೀಯ ನಾಯಕರುಗಳ ಕೈಗೊಂಬೆಯಾಗಿ ಕೆಲಸ ನಿರ್ವಹಿಸಿರುವುದು ಕಂಡು ಬಂದಿದೆ. ಹಾಗೆಯೇ, ಹಳಿಯಾಳ ತಾಲೂಕಿನ ಗಾಡಗೆರಾ ಗ್ರಾಮದ ಮಹಿಳೆಯೊಬ್ಬರು ತಾಲೂಕ ಪಂಚಾಯತಿಯ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದಾರೆ. ಇದೇ ಗ್ರಾಮದ ಶ್ರೀಮತಿ ಜುಲಿಯಾನ ಫೆರ್ಧು ಫರ್ನಾಂಡೀಸ್ ಎನ್ನುವವರು ಕರ್ನಾಟಕ ಜಾನಪದ

ಅಕಾಡೆಮಿಯ ರಾಜ್ಯ ಸಮಿತಿಯ ಸದಸ್ಯರಾಗಿ ಸರ್ಕಾರದಿಂದ ನಾಮನಿರ್ದೇಶನ ಗೊಂಡಿದ್ದಾರೆ. ಒಟ್ಟಾರೆ ಈ ಅಧ್ಯಯನದಿಂದ ತಿಳಿದುಬಂದಿರುವಂತೆ ಸಿದ್ದಿ ಜನಾಗದವರು ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಸ್ಪಷ್ಟವಾಗಿ ಗುರುತಿಸಿಕೊಳ್ಳದೆ, ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅದರಿಂದ ಲಾಭ ಪಡೆದುಕೊಳ್ಳು ಬುದ್ದಿವಂತಿಕೆಯನ್ನು ಕೆಲವು ಯುವಕರು ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ರಾಜಕೀಯ ನಿಷ್ಠೆ ಸ್ಥಳೀಯ ಪ್ರಬಲ ಜಾತಿಗಳ ಕೃಪಾಕಟಾಕ್ಷವನ್ನು ಅವಲಂಬಿಸಿರುವುದು ಕಂಡುಬಂದಿದೆ.

ಅಧ್ಯಾಯ ಆರು

ಚರ್ಚೆ ಮತ್ತು ಸಾರಂಶ

೧. ಚರ್ಚೆಗಳು

೨. ಸಾರಂಶ

೩. ಫಲಿತಗಳು

೪. ಸಲಹೆ ಸೂಚನೆಗಳು

ಅಧ್ಯಾಯ ಆರು

ಚರ್ಚೆ ಮತ್ತು ಸಾರಂಶ

"ಬುಡಕಟ್ಟು ಮತ್ತು ಅಭಿವೃದ್ಧಿ"(ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಅಭಿವೃದ್ಧಿ ಅಧ್ಯಯನ) ಎಂಬ ಶೀರ್ಷಿಕೆಯ ಅಡಿಯಲ್ಲಿ ಕೈಗೊಂಡ ಸಂಶೋಧನಾ ವರದಿಯ ಚರ್ಚೆ ಮತ್ತು ಸಾರಾಂಶವು ಈ ಮುಂದಿನಂತಿದೆ. ಸಿದ್ದಿ ಬುಡಕಟ್ಟು ಜನಾಂಗದ ಪೂರ್ವಿಕರು ಆಫ್ರಿಕಾದಿಂದ ವಲಸೆಬಂದವರು ಆಫ್ರಿಕಾದ ಜಂಭೂದಾರಿ ದ್ವೀಪದಲ್ಲಿ ಸರಳ ಮತ್ತು ಸ್ವಾತಂತ್ರವಾದ ಜೀವನವನ್ನು ನಡೆಸುತ್ತಿದ್ದರು. ಆದರೆ ನಾಗರಿಕರೆನಿಸಿಕೊಂಡವರು ಈ ಸಿದ್ದಿ ಬುಡಕಟ್ಟು ಜನರನ್ನು ೧೩ ಮತ್ತು ೧೪ನೇ ಶತಮಾನಗಳಲ್ಲಿ ಮಾರಾಟದ ಸರಕುಗಳಂತೆ ಭಾರತ ಮತ್ತು ವಿಶ್ವದ ಇತರ ರಾಷ್ಟ್ರಗಳಿಗೆ ಇವರನ್ನು ಗುಲಾಮರಂತೆ ಮಾರಾಟ ಮಾಡಿದರು. ಈ ಪ್ರಕ್ರೀಯೆಯಲ್ಲಿ ಪೋರ್ಚುಗೀಸರು ಗುಜರಾತ್ ಮತ್ತು ಅರಭ್ ವರ್ತಕರು ಭಾರತಕ್ಕೆ ತಂದ ಈ ಜನರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಸಿದ್ದಿಗಳು ಭೂಮಾಲೀಕರು, ವರ್ತಕರುಗಳ ಮನೆಯಲ್ಲಿ ಪ್ರಾಣಿಗಳಿಗಿಂತ ಕೀಳಾಗಿ ಜೀವನವನ್ನು ಸಾಗಿಸುತ್ತಿದ್ದರು. ಹೇಗೋ? ಏನೋ? ಗೋವಾದಿಂದ ತಪ್ಪಿಸಿಕೊಂಡು ಬಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆ, ಧಾರವಾಡ ಜಿಲ್ಲೆಯ ಕಲಘಟಗಿ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕುಗಳಿಗೆ ಬಂದು ನೆಲೆಸಿದರು. ಪ್ರಾರಂಭದಲ್ಲಿ ಅಲೆಮಾರಿಗಳಾಗಿ ಕಾಡಿನಲ್ಲಿ ಬದುಕುತ್ತಿದ್ದರು, ಬೇಟೆಯಾಡುತ್ತ, ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳನ್ನೇ ಆಹಾರವನ್ನಾಗಿಸಿಕೊಂಡು ಬದುಕು ನೂಕುತ್ತಿದ್ದರು. ಕ್ರಮೇಣ ಅಡಿಕೆ ತೋಟಗಳಲ್ಲಿ ಭೂಮಾಲಿಕರ ಮನೆಯಲ್ಲಿ ಕೃಷಿಕಾರ್ಮಿಕರಾಗಿ ಕೃಷಿ ಕೌಶಲ್ಯವನ್ನೂ ಕಲಿತ್ತಿದ್ದಾರೆ, ಸ್ವಂತ ಕೃಷಿಕರೂ ಆಗಿದ್ದಾರೆ. ಇತ್ತೀಚಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯುವತ್ತ ಮುಖ ಮಾಡಿದ್ದಾರೆ. ಹಳಿಯಾಳ ತಾಲೂಕಿನಲ್ಲಿ ಸಿದ್ದಿ ಜನರು ನೆಲೆಸಿರುವ ೧೫೦ ಕುಟುಂಬಗಳನ್ನು, ಯಲ್ಲಾಪುರ ತಾಲೂಕಿನಲ್ಲಿ ೧೪೫ ಕುಟುಂಬಗಳನ್ನು, ಮುಂಡಗೋಡು ತಾಲೂಕಿನ ೪೫ ಕುಟುಂಬ ಗಳನ್ನು ಮತ್ತು ಅಂಕೋಲ ತಾಲೂಕಿನ ೫೦ ಕುಟುಂಬಗಳನ್ನು ಪ್ರಾತಿನಿಧಿಕ ನೆಲೆಯಲ್ಲಿ ಮಾದರಿಗಳನ್ನಾಗಿ ಆಯ್ಕೆ ಮಾಡಿಕೊಂಡು ಪ್ರಶ್ನಾವಳಿ ಮತ್ತು ಸಂದರ್ಶನ ಅನುಸೂಚಿಗಳ

ಜೊತೆಗೆ ಗುಂಪುಚರ್ಚೆ, ಸಾಂದರ್ಭಿಕ ಅವಲೋಕನ, ಅನೌಪಚಾರಿಕ ಸಂಭಾಷಣೆಗಳ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ವಿಶಲೇಷಣೆ ಮಾಡಲಾಗಿದೆ. ಶಿಕ್ಷಣ ಆರೋಗ್ಯದ ವಿಚಾರಗಳಲ್ಲಿ ಸಕಾರಾತರ್ಮಕವಾಗಿ ಜೀವನವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಶಿಕ್ಷಣದ ಬಗ್ಗೆ ಅರಿವನ್ನೂ ಮೂಡಿಸಿಕೊಳ್ಳತ್ತಿದ್ದಾರೆ. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಇತರರಂತೆ ಸಮಾಜದ ಮುಖ್ಯವಾಹಿನಿಗೆ ಸೇರಲು ಅವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿರುವುದು ಅನುಕೂಲವಾಗಿದೆ ಎಂಬ ವಿಚಾರಗಳು ನನ್ನ ಕ್ಷೇತ್ರ ಕಾರ್ಯದ ಅನುಭವದಿಂದ ಕಂಡುಬಂದಿದೆ. ಜನಾಂಗೀಯ ಸಮುದಾಯ ವಾಗಿರುವ ಸಿದ್ದಿ ಜನರು ಈಗ ಜೀವನ ಶೈಲಿಯನ್ನು ಸಮಾಜದ ಇತರರಂತೆ ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡುಬಂದಿದೆ.

ಸಿದ್ದಿ ಸಮುದಾಯವು ತನ್ನ ಅಸ್ತಿತ್ವವನ್ನು ಪಡೆದುಕೊಂಡು ಗುರುತಿಸಿಕೊಂಡಿರುವ ಸಮಯದಲ್ಲಿ ಅವಿಭಕ್ತ ಕುಟುಂಬ ರಚನೆಯನ್ನು ಹೊಂದಿತ್ತು ಎನ್ನುವುದು ಕಂಡುಬಂದಿದೆ. ಒಟ್ಟಾಗಿ ಜೀವಿಸಿ, ಬದುಕಿನ ಹಲವು ಹಂತಗಳಲ್ಲಿ ಸಮುದಾಯದ ಸಾಂಪ್ರದಾಯಿಕತೆ, ರೂಢಿ, ಪದ್ಧತಿ, ಆಚರಣೆಗಳನ್ನು ಅಂತಸತ್ವದಲ್ಲಿರಿಸಿಕೊಂಡ ಸ್ಥಳೀಯ ಜನಾಂಗಗಳಲ್ಲಿ ಸಿದ್ದಿಯೂ ಒಂದು. ಆದರೆ ಕಾಲಾಂತರದಲ್ಲಿ ಮತ್ತು ನಾಗರಿಕತೆಯ ಬೆಳವಣಿಗೆಯ ಜೊತೆ ಜೊತೆಗೆ ಈ ಸಮುದಾಯದಲ್ಲಿಯೂ ಅನೇಕ ರೂಪಾಂತರಗಳಾದವು. ಅವರ ದೈನಂದಿನ ಬದುಕಿನಿಂದ ಹೊರಜಗತ್ತಿನ ಸಂಪರ್ಕದವರೆಗೂ ಗಮನಿಸಬಹುದಾದ ರೂಪಾಂತರಗಳು ಅವರ ಬದುಕನ್ನು ಅಧ್ಯಯನ ಮಾಡಲು ಪ್ರೇರೇಪಿಸಿದ ಅಂಶ. ಹೀಗೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಮತು ಕ್ಷೇತ್ರ ಮಟ್ಟದ ಅಂಕಿ–ಅಂಶಗಳನ್ನು ಆಧರಿಸಿದಾಗ ಕಂಡುಬಂದಂತಹ ಅಂಶಗಳನ್ನು ಮಾಹಿತಿದಾರರ ಜನಸಂಖ್ಯೆಗೆ ಸಂಬಂಧಿಸಿದ ಅಂಕಿ ಅಂಶಗಳು, ಸಿದ್ದಿಯರ ಜನಸಂಖ್ಯೆ, ಲಿಂಗಾನುಪಾತ, ಕುಟುಂಬದ ರಚನೆ ಮತ್ತು ಕಾರ್ಯಗಳು, ಧರ್ಮ, ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಅವರ ಸ್ಥಾನಮಾನ, ಸಿದ್ದಿ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳು, ಅವರ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಆರ್ಥಿಕ ಬದುಕು ಅದರ ಭಾಗವಾಗಿ ಉದ್ಯೋಗ, ವ್ಯವಸಾಯ ಮುಂತಾದ ಅಂಶಗಳನ್ನು ಮಾಪಕಗಳನ್ನಾಗಿ ತೆಗೆದುಕೊಂಡು ನಡೆಸಿದ ಈ ಆಧ್ಯಯನದ ವಿವರಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ

ಜನಸಂಖ್ಯೆ ಮತ್ತು ಲಿಂಗಾನುಪಾತ

೨೦೦೧ನೇ ಜನಗಣತಿಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೫೩೬೧. ಇದರಲ್ಲಿ ೨೭೩೭ ಪುರುಷರು ಮತ್ತು ೨೬೨೪ ಮಹಿಳೆಯರು ಇದ್ದಾರೆ. ೨೦೧೧ನೇ ಜನಗಣತಿಯ ವರದಿಯ ಪ್ರಕಾರ ಈ ಜಿಲ್ಲೆಯ ಸಿದ್ದಿಯರ ಒಟ್ಟು ಜನಸಂಖ್ಯೆ ೧೫೨೩೨ ಇದರಲ್ಲಿ ೭೪೬೧ ಪುರುಷರು ಮತ್ತು ೭೭೯೧ ಮಹಿಳೆಯರು ಇರುವುದು ತಿಳಿದುಬರುತ್ತದೆ. ಎರಡು ಜನಗಣತಿಯ ವರದಿಗಳ ಅಂಕಿಅಂಶಗಳ ಪ್ರಕಾರ ಜನಸಂಖ್ಯೆಯಲ್ಲಿ ತುಂಬಾ ವ್ಯತ್ಯಾಸವಿರುವುದು ಕಂಡು ಬರುವುದರ ಜೊತೆಗೆ, ಸಿದ್ದಿ ಜನರ ಮುಖಂಡರುಗಳು ನಡೆಸಿರುವ ಏಣಿಕೆಯ ಪ್ರಕಾರ ಇವರ ಜನಸಂಖ್ಯೆ ೩೧೮೫೨. ಇತ್ತೀಚಿನ, ಅಂದರೆ ೨೦೧೬ರಲ್ಲಿನ ಅಂತರ್ಜಾಲದಲ್ಲಿನ ಅಂಕಿ

ಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಜನಸಂಖ್ಯೆ ೧೮೦೦೦ ಎಂಬುದು ತಿಳಿದುಬಂದಿರುತ್ತದೆ. ಸಿದ್ದಿ ಜನರ ಜನಸಂಖ್ಯೆಗೆ ಸಂಬಂಧಿಸಿದಂತೆ ವಿಭಿನ್ನ ಅಂಕಿಸಂಖ್ಯೆಗಳು ಲಭ್ಯವಿದೆ.

ಭಾರತದಲ್ಲಿ ಸ್ತ್ರೀ-ಪುರುಷರ ಪ್ರಮಾಣ ೨೦೧೧ನೇ ಜನಗಣತಿಯ ಪ್ರಕಾರ ೧೦೦೦ ಪುರುಷರಿಗೆ ೯೪೩ ಮಹಿಳೆಯರಿದ್ದಾರೆ. ಪರಿಶಿಷ್ಟ ಬುಡಕಟ್ಟುಗಳಲ್ಲಿ ಲಿಂಗಾನುಪಾತವು ಪ್ರತಿ ೧೦೦೦ ಪುರುಷರಿಗೆ ೯೯೦ ಮಹಿಳೆಯರಿದ್ದಾರೆ. ಆದರಂತೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಸ್ತ್ರೀ ಪುರುಷರ ಪ್ರಮಾಣ ಒಂದು ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಹಾಗೆಯೇ ಒಟ್ಟಾರೆ ಕರ್ನಾಟಕದ ಪರಿಶಿಷ್ಟ ಬುಡಕಟ್ಟುಗಳಲ್ಲಿ ಪ್ರತಿ ಸಾವಿರ ಪುರುಷರಿಗೆ ೯೭೭ ಮಹಿಳೆಯರಿದ್ದಾರೆ. ಅಧ್ಯಯನ ಕ್ಷೇತ್ರ ಉತ್ತರ ಕನ್ನಡ ಜಿಲ್ಲೆಯ ಒಟ್ಟು ಲಿಂಗಾನುಪಾತ ಸಾವಿರ ಪುರುಷರಿಗೆ ೯೭೫ ಸ್ತ್ರೀಯರಿದ್ದಾರೆ. ಆಶ್ಚರ್ಯವೆಂಬಂತೆ ಸಿದ್ದಿ ಪರಿಶಿಷ್ಟ ಬುಡಕಟ್ಟು ಜನಾಂಗದವರಲ್ಲಿ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾಮಟ್ಟದ ಲಿಂಗಾನುಪಾತಕ್ಕಿಂತ ಹೆಚ್ಚಾಗಿದೆ. ಅಂದರೆ, ಪ್ರತಿ ಸಾವಿರ ಸಿದ್ದಿ ಪುರುಷರಿಗೆ ೧೦೦೩ ಮಹಿಳೆಯರಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೩೯೦ ಕುಟುಂಬಗಳಲ್ಲಿ ಒಟ್ಟು ೨೮೭೯ ಜನಸಂಖ್ಯೆಯಿದ್ದು, ಇವರಲ್ಲಿ ೧೪೨೮ ಪುರುಷರು ಮತ್ತು ೧೪೫೧ ಮಹಿಳೆಯರು ಇದ್ದಾರೆ. ಇವರಲ್ಲಿ ಪ್ರತಿ ಸಾವಿರ ಪುರುಷರಿಗೆ ೧೦೦೧ ಜನ ಮಹಿಳೆಯರು ಇರುವುದು ಕಂಡುಬಂದಿದೆ. ವಯೋಮಾನಕ್ಕೆ ಸಂಬಂಧಿಸಿದಂತೆ ಸಿದ್ದಿ ಜನಾಂಗದ ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ೩೯೦ ಕುಟುಂಬಗಳಲ್ಲಿ ೧-೧೪ ವರ್ಷ ವಯಸ್ಸಿನ ಮಕ್ಕಳು ಶೇ. ೨೨ರಷ್ಟು, ೧೫-೨೦ ವಯಸ್ಸಿನವರು ಶೇ. ೧೫ರಷ್ಟು, ೨೧-೨೫ ವಯೋಮಾನದವರು ಶೇ. ೨೬ರಷ್ಟು, ೨೬-೩೦ರ ವಯಸ್ಸಿನವರು ಶೇ. ೪೬ರಷ್ಟಿದ್ದಾರೆ. ಈ ವಯೋಮಾನ ರಚನೆ ಯಿಂದ ಕಂಡುಬಂದಿರುವ ಅಂಶವೆಂದರೆ ಈ ಸಮುದಾಯದವರಲ್ಲಿ ೬೦ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನ ವೃದ್ಧರ ಸಂಖ್ಯೆ ಕಡಿಮೆ ಇದೆ.

ಮೇಲಿನ ಅಂಕಿ ಅಂಶಗಳ ಪ್ರಕಾರ ಈ ಅಧ್ಯಯನವು ಮಹಿಳೆಯರ ಸಂಖ್ಯೆ ಜಾಸ್ತಿ ಇರುವುದನ್ನು ಇದರಿಂದ ಬೇರೆ ಸಮುದಾಯಗಳಲ್ಲಿರುವಂತೆ ಗಂಡುಮಕ್ಕಳು ಬೇಕೇ ಬೇಕೆಂಬ ಭಾವನೆ ಮತ್ತು ಗಂಡುಮಕ್ಕಳು ಇಲ್ಲದಿದ್ದರೆ ಸದ್ಗತಿ ದೊರೆಯುವುದಿಲ್ಲ ಎಂಬ ನಂಬಿಕೆ ಇಲ್ಲದಿರುವುದು ಕಾರಣವಾಗಿದೆ. ಹೆಣ್ಣು ಮತ್ತು ಗಂಡುಮಕ್ಕಳನ್ನು ಸಮಾನವಾಗಿ ಕಾಣುತ್ತಾರೆ. ಹಾಗಾಗಿ, ನಿಸರ್ಗ ನಿಯಮಕ್ಕನುಗುಣವಾಗಿ, ಹೆಣ್ಣು ಮತ್ತು ಗಂಡುಮಕ್ಕಳ ಸಂಖ್ಯೆ ಸಮಾನವಾಗಿದೆ. ಇದು ಮಹಿಳೆಯರ ಆರೋಗ್ಯ ಸ್ಥಿತಿಯನ್ನು ತಿಳಿಸುತ್ತದೆ.

ಕುಟುಂಬ

ಕುಟುಂಬವು ಸಿದ್ದಿ ಬುಡಕಟ್ಟು ಸಮೂಹಕ್ಕೆ ಇತರ ಸಮೂಹಗಳಂತೆಯೇ ಸಂಬಂಧಗಳನ್ನು ಹುಟ್ಟು ಹಾಕುವ ಮತ್ತು ಅವುಗಳನ್ನು ಗಟ್ಟಿಗೊಳಿಸುವ ಒಂದು ಮಹತ್ವದ ಸಾಮಾಜಿಕ ಸಂಸ್ಥೆ ಯಾಗಿದೆ. ಸಿದ್ದಿಗಳ ವಾಸದ ನೆಲೆಗಳಲ್ಲಿನ ಜೀವನದಲ್ಲಿ ಕುಟುಂಬವು ಮೂಲಭೂತ ಘಟಕವಾಗಿದೆ. ಹಿರಿಯರ ಬಗೆಗಿನ ಗೌರವ ಮತ್ತು ಸಮೂಹದಲ್ಲಿನ ಇತರರ ಬಗೆಗಿನ ಹೊಣೆಗಾರಿಕೆಗಳು

ಕುಟುಂಬಗಳನ್ನು ಬೆಸೆಯುವ ಶಕ್ತಿಯಾಗಿವೆ. ಕುಟುಂಬದ ಹಿಂದಿನ ತಲೆಮಾರುಗಳ ಸತ್ತ ವ್ಯಕ್ತಿಗಳು ಮತ್ತು ಬದುಕಿರುವ ಸದಸ್ಯರುಗಳ ನಡುವೆ ಪರಸ್ಪರ ಹೊಣೆಗಾರಿಕೆಗಳಿರುತ್ತವೆ. ಸಿದ್ದಿಗಳಲ್ಲಿ ಕೌಟುಂಬಿಕ ಸಂಬಂಧಗಳು ಸಾವಿನೊಂದಿಗೆ ಅಂತ್ಯವಾಗದೆ ಸಾವಿನ ನಂತರವೂ ಮುಂದುವರಿಯುತ್ತವೆ. ಕುಟುಂಬದಲ್ಲಿ ಬದುಕಿರುವ ಮತ್ತು ಸತ್ತ ಸದಸ್ಯರುಗಳು ಪರಸ್ಪರ ಸಂಪರ್ಕದಲ್ಲಿರುತ್ತಾರೆ. ಮರಣ ಹೊಂದಿರುವ ಹಿರಿಯ ಸದಸ್ಯರುಗಳ ಪ್ರಮುಖ ಕೆಲಸವೇನೆಂದರೆ ಅವರ ಇಡೀ ಕುಟುಂಬಕ್ಕೆ ಬೆಂಗಾವಲಾಗಿರುವುದು. ಮುಂದೆ ಕುಟುಂಬಕ್ಕೆ ಒದಗಬಹುದಾದ ಅಪಾಯಗಳ ಬಗೆಗೆ ಸೂಚನೆ ನೀಡಿ, ಅದರಿಂದಾಗುವ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡುವುದಾಗಿರುತ್ತದೆ. ಹಾಗೆಯೇ, ಸಂದರ್ಭ ಬಂದಾಗಲೆಲ್ಲ ಹಿರಿಯರ ಮಾರ್ಗದರ್ಶನಕ್ಕಾಗಿ ಅವರನ್ನು ಬದುಕಿರುವವರು ಆರಾಧಿಸುತ್ತಾರೆ. ಇಂತಹ ಒಂದು ಅತಿಭೌತಿಕ ಆಚರಣೆಯು ಸಿದ್ದಿ ಸಮೂಹದಲ್ಲಿ ಕುಟುಂಬದ ಚಾಲನ ಶಕ್ತಿಯಾಗಿರುತ್ತದೆ.

ಸಿದ್ದಿ ಜನಾಂಗದವರಲ್ಲಿ ಕುಟುಂಬವು ಸಾಮಾನ್ಯವಾಗಿ ಭಾರತದ ಇತರ ಜನರಂತೆ ಇದ್ದರೂ, ರಕ್ತಂಬಂಧಗಳನ್ನು ಆಧರಿಸಿದ ವಿಭಕ್ತ ಕುಟುಂಬ ಪದ್ಧತಿ ಇವರಲ್ಲಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಲಿಂಗಾನುಪಾತಕ್ಕೆ ಸಂಬಂಧಿಸಿದಂತೆ ಸ್ತ್ರೀಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಜಾಸ್ತಿಯಿದ್ದರು, ಪಿತೃಪ್ರಧಾನ ಕುಟುಂಬಗಳೇ ಹೆಚ್ಚಾಗಿರುವುದು. ಈ ಅಧ್ಯಯನದದಲ್ಲಿ ದೊರೆತಿರುವ ಮಾಹಿತಿಗಳಿಂದ ತಿಳಿದುಬರುತ್ತದೆ. ಕುಟುಂಬದಲ್ಲಿ ವಿವಾಹವಾದ ನಂತರ ಗಂಡುಮಕ್ಕಳು ತನ್ನ ಹೆಂಡತಿಯೊಂದಿಗೆ ಮೂಲ ಕುಟುಂಬದಿಂದ ಪ್ರತ್ಯೇಕ ಮನೆ ಮಾಡಿಕೊಂಡು ಸಾಂಸಾರಿಕ ಜೀವನ ಪ್ರಾರಂಬಿಸುತ್ತಾನೆ. ಆದರೂ ಆರ್ಥಿಕವಾಗಿ ಮತ್ತು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ, ಘರ್ ಎಂದು ಕರೆಯಲ್ಪಡುವ ಹಿರಿಯರ ಮೂಲ ಕುಟುಂಬದೊಂದಿಗೂ ಗುರುತಿಸಿಕೊಳ್ಳುವುದು ವಾಡಿಕೆಯಾಗಿದೆ. ಆದರೆ ಐರಾವತಿ ಕರ್ವೆಯವರ ವ್ಯಾಖ್ಯಾನದಂತೆ, ಒಂದೇ ಸೂರಿನಡಿಯಲ್ಲಿ ವಾಸಿಸುತ್ತ, ಒಂದೇ ಅಡುಗೆ ಮನೆಯಲ್ಲಿ ಬೇಯಿಸಿದ ಆಹಾರವನ್ನು ಸೇವಿಸುತ್ತ ಸಾಮನ್ಯ ಆಸ್ತಿಯ ಒಡೆತನವನ್ನು ಹೊಂದಿ, ಸಾಮಾನ್ಯ ಪೂಜ ಪದ್ಧತಿಗಳಲ್ಲಿ ವಾಸಿಸುತ್ತಿರುವ ಮೂರ್‍ನಾಲ್ಕು ತಲೆಮಾರುಗಳಿಗೆ ಸೇರಿದ ಜನರು ಒಟ್ಟಾಗಿ ವಾಸಿಸುವ ಜನರ ಗುಂಪಿನಂತಿರದೆ, ಆಸ್ತಿ, ಸಾಮಾನ್ಯ ವಾಸಸ್ಥಾನ ಮತ್ತು ಒಂದೇ ಅಡುಗೆಮನೆ ಈ ಲಕ್ಷಣಗಳನ್ನು ಹೊರತುಪಡಿಸಿ, ಸಿದ್ದಿ ಕುಟಟುಂಬಗಳು ಕೌಟುಂಬಿಕ ಸಂಬಂಧಗಳನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿರುವುದು ಕಂಡುಬಂದಿದೆ. ಆದಾಗ್ಯೂ ಸಿದ್ದಿ ಜನರ ಕುಟುಂಬವನ್ನು ಆಧುನಿಕ ಅವಲಂಬಿತ ಕೇಂದ್ರ ಅಥವಾ ವಿಭಕ್ತ ಕುಟುಂಬಗಳೆಂದು ಗುರುತಿಸಬಹುದಾಗಿದೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಮಾಹಿತಿದಾರರ ಕುಟುಂಬಗಳಲ್ಲಿ ಶೇ. ೫೪ರಷ್ಟು ಅವಿಭಕ್ತ ಕುಟುಂಬಗಳಿದ್ದು ಶೇ. ೪೬ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಿವೆ. ಹಾಗೆಯೇ, ಲಿಂಗಾನುಪಾತದಲ್ಲಿ ಸ್ತ್ರೀಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿದೆ. ಆದಾಗ್ಯೂ, ಈ ಜನಾಂಗದವರಲ್ಲಿ ಶೇ. ೬೨ರಷ್ಟು ಪಿತೃಪ್ರಧಾನ ಕುಟುಂಬಗಳಿದ್ದು, ಶೇ. ೩೮ರಷ್ಟು ಮಾತೃಪ್ರಧಾನ ಕುಟುಂಬಗಳಿವೆ. ಈ ಅಧ್ಯಯನದಲ್ಲಿ ಕಂಡುಕೊಂಡಿರುವಂತೆ ಸಿದ್ದಿಯರ ಕುಟುಂಬದ ರಚನೆ ಮತ್ತು ಕಾರ್ಯಗಳಿಗಿಗೆ ಸಂಬಂದಿಸಿದಂತೆ ಪ್ರಸ್ತುತ ಅಧ್ಯಯನದಿಂದ ಕಂಡುಬಂದಿರುವ ವಿಷಯಗಳನ್ನು ಈ ಮುಂದೆ ವಿವರಿಸಲಾಗಿದೆ.

ಮನೆಯ ಯಜಮಾನನನ್ನು ಬುದ್ದಿವಂತ ಎಂದು ಕರೆಯಲಾಗುತ್ತದೆ. ಸೈದ್ಧಾಂತಿಕವಾಗಿ ಕುಟುಂಬದ ಒಳಗೆ ಉನ್ನತವಾದ ಅಧಿಕಾರ ಆತನ ಕೈಯಲ್ಲಿ ಇರುತ್ತದೆ, ವಾಸ್ತವಿಕವಾಗಿ ಅಧಿಕಾರವು ಪ್ರಜಾಸತ್ತಾತ್ಮಕವಾಗಿರುತ್ತದೆ. ಕುಟುಂಬದ ಇತರರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಭೂಮಿಯನ್ನು ಕೊಂಡುಕೊಳ್ಳಲು ಅಥವಾ ಗೇಣಿ ಒಪ್ಪಂದ ಮಾಡಿಕೊಳ್ಳುವಾಗ, ಬುದ್ದಿವಂತನು ಚರ್ಚೆಯನ್ನು ಪ್ರಾರಂಭ ಮಾಡಿ ಹೆಂಡತಿ ಮತ್ತು ಪ್ರಬುದ್ಧಮಾನಕ್ಕೆ ಬಂದ ಮಕ್ಕಳ ಅಭಿಪ್ರಾಯವನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುತ್ತಾನೆ. ಮನೆಯ ಒಳಗೆ ತಾಯಿಯು ಹೆಣ್ಣು ಮಕ್ಕಳ ಆಗು-ಹೋಗುಗಳ ಬಗೆಗಿನ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಾಳೆ. ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆಯೂ ತಾಯಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ತಂದೆಯ ಅನುಪಸ್ಥಿತಿಯಲ್ಲಿ ಹಿರಿಯ ಮಗ ಅಥವಾ ತಾಯಿ ಕುಟುಂಬದ ದಿನ ನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಆರೋಗ್ಯ ಚೆನ್ನಾಗಿರುವವರೆಗೂ ಕುಟುಂಬದಲ್ಲಿ ಪೋಷಕರು ಪ್ರಬಲರಾಗಿರುತ್ತಾರೆ, ಆದರೆ ಅವರಿಗೆ ವಯಸ್ಸಾಗುತ್ತಾ ಹೋದಂತೆ ಹಿನ್ನೆಲೆಗೆ ಸರಿಯುತ್ತಾರೆ. ಸಾಮಾನ್ಯವಾಗಿ ಹಿರಿಯರೇ ಕುಟುಂಬದ ಯಜಮಾನನಾಗಿದ್ದರೂ ಅವರ ಮಕ್ಕಳು ಹೆಚ್ಚು ಕಡಿಮೆ ಕುಟುಂಬದ ನಿರ್ವಹಣೆಯನ್ನು ಸ್ವತಂತ್ರವಾಗಿ ಮಾಡುತ್ತಿರುತ್ತಾರೆ. ತಂದೆ ಮನೆತನದ ಯಜಮಾನನಾಗಿರುವವರೆಗೂ ಕುಟುಂಬದ ಆಂತರಿಕ ವ್ಯವಹಾರಗಳ ನಿರ್ವಹಣೆಯನ್ನು ತಾಯಿ ನಿರ್ವಹಿಸುತ್ತಿರುತ್ತಾಳೆ. ಗಂಡುಮಕ್ಕಳು ತಾಯಿಯ ಆದೇಶಗಳಿಗನುಗುಣವಾಗಿ ನಡೆದುಕೊಂಡರೆ ಸೊಸೆ ಅತ್ತೆಗೆ ವಿಧೇಯಳಾಗಿರುತ್ತಾಳೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿನ ಗುಂಪು ಚರ್ಚೆಯಿಂದ ದೃಢಪಟ್ಟಿದೆ.

ಭೂಮಿ, ದನಕರುಗಳು, ಎತ್ತುಗಳು, ಕೋಳಿ, ಕುರಿ ಗೃಹೋಪಯೋಗಿ ವಸ್ತುಗಳು, ಕೃಷಿ ಮತ್ತು ಇತರ ಉಪಕರಣಗಳು ಸಿದ್ದಿ ಸಮುದಾಯದಲ್ಲಿನ ಕುಟುಂಬದ ಆಸ್ತಿಗಳಾಗಿವೆ. ಮನೆಯೊಂದನ್ನು ಹೊರತುಪಡಿಸಿ, ತಂದೆಯ ಮರಣದ ನಂತರ ಇತರ ಎಲ್ಲಾ ಆಸ್ತಿಗಳನ್ನು ಸಹೋದರರೆಲ್ಲರೂ ಹಂಚಿಕೊಳ್ಳುತ್ತಾರೆ. ಮನೆಯು ಅಲ್ಲಿಯೇ ವಾಸವಿದ್ದು ಹಿರಿಯರ ಪೂಜೆಯ ಜವಾಬ್ದಾರಿಯನ್ನು ನಿರ್ವಹಿಸುವ ಹಿರಿಯ ಮಗನಿಗೆ ಸಲ್ಲುತ್ತದೆ. ಸಹೋದರರು ಬದುಕಿರುವವರೆಗೂ ಭೂಮಿಯನ್ನು ಶಾಸನಬದ್ಧವಾಗಿ ವಿಭಾಗ ಮಾಡಿಕೊಳ್ಳುವುದಿಲ್ಲ, ಆದರೆ, ಅನೌಪಚಾರಿಕವಾಗಿ ಭೂಮಿಯನ್ನು ಹಂಚಿಕೊಂಡು ಉಳುಮೆ ಮಾಡಿಕೊಳ್ಳುತ್ತಾರೆ. ಕಾನೂನುಬದ್ಧವಾಗಿ ಭೂಮಿಯು ಘಕದ ಸ್ವತ್ತಾಗಿರುತ್ತದೆ, ಆದ್ದರಿಂದ ಅದು ಘರ್‌ದ ಕರ್ತನ ಹೆಸರಿನಲ್ಲಿರುತ್ತದೆ. ಭೂಮಿಯು ಗೇಣಿಗೆ ತೆಗೆದುಕೊಂಡಿದ್ದಾಗಿದ್ದರೂ ಪಾಲು ಮಾಡಿಕೊಂಡು ಉಳುಮೆ ಮಾಡುತ್ತಾರೆ. ಕರ್ತನು ಇತರ ಸಹೋದರರಿಂದ ಗೇಣಿಯ ಹಣವನ್ನು ಸಂಗ್ರಹಿಸಿ ಅವನ ಪಾಲನ್ನೂ ಸೇರಿಸಿ ಜಮೀನುದಾರನಿಗೆ ಕೊಡುವುದು ನಡೆದುಬಂದಿದೆ ಎಂದು ಸಿದ್ದಿ ಜನಾಂಗದ ಹಿರಿಯರು ತಿಳಿಸುತ್ತಾರೆ. ಕುಟುಂಬದ ಸಹೋದರರಲ್ಲಿ ಯಾರಾದರೂ ಮರಣ ಹೊಂದಿದರೆ, ಆತನ ಆಸ್ತಿಯು ಆತನ ಮಕ್ಕಳಿಗೆ ಸೇರುತ್ತದೆ, ಒಂದುವೇಳೆ ಸತ್ತ ವ್ಯಕ್ತಿಗೆ ಗಂಡು ಸಂತಾನ ಇಲ್ಲದಿದ್ದರೆ ದತ್ತಕವನ್ನೂ ತೆಗೆದುಕೊಂಡಿಲ್ಲದಿದ್ದರೆ, ಆತನಿಗೆ ಸೇರಿದ ಭೂಮಿಯು ಬದುಕಿರುವವರೆಗೂ ಆತನ ಹಿರಿಯ ಸಹೋದರನಿಗೆ ಸೇರುತ್ತದೆ. ವಿಧವೆಗೆ ಆಕೆಯ ಸತ್ತ ಗಂಡನ

ಭೂಮಿಯ ಮೇಲೆ ಯಾವುದೇ, ರೀತಿಯ ಹಕ್ಕು ಇರುವುದಿಲ್ಲ. ಆಕೆಯು ಕರ್ತನ ಮನೆಗೆ ಬಂದು ವಾಸಿಸಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಸಹೋದರರೆಲ್ಲರೂ ಬದುಕಿರುವವರೆಗೂ ಕುಟುಂಬದ ಆಸ್ತಿಯು ಕರ್ತನ ಹೆಸರಿನಲ್ಲಿರುತ್ತದೆ. ಅದು ಹಿರಿಯರ ಸ್ವತ್ತಾಗಿರುತ್ತದೆ. ಅದನ್ನು ಕರ್ತನಿಗೆ ಬಿಟ್ಟು, ಕಾರ್ಮಿಕರಾಗಿ ಅಥವಾ ಹೊಸ ಗೇಣಿ ಭೂಮಿಯನ್ನು ಹುಡುಕಿಕೊಂಡು ಕೆಲವರು ಹೋಗುತ್ತಾರೆ, ಹಿರಿಯರ ಸ್ವತ್ತು ಕಡಿಮೆ ಪ್ರಮಾಣದಲ್ಲಿದ್ದಾಗ, ಕಿರಿಯ ಸಹೋದರರು ಹೊಸ ಗೇಣಿ ಭೂಮಿ ಪಡೆದು ಅಥವಾ ಲಭ್ಯವಿರುವ ಸರ್ಕಾರಿ ಭೂಮಿಯಲ್ಲಿ ವ್ಯವಸಾಯ ಮಾಡುತ್ತಾರೆ. ಈ ರೀತಿ ಕಿರಿಯ ಸಹೋದರರು ಹಿರಿಯರ ಸ್ವತ್ತಿನಲ್ಲಿ ಭಾಗ ಪಡೆಯದೇ ಇದ್ದಾಗ ಹಿರಿಯರು ಪೂಜೆ ಮತ್ತು ನಿರ್ವಹಣೆಯ ಹಣ ಮತ್ತು ವಸ್ತುಗಳನ್ನು ಕೇಳುವ ನೈತಿಕ ಹಕ್ಕು ಕರ್ತನಿಗೆ ಇರುವುದಿಲ್ಲ.

ಕುಟುಂಬದಲ್ಲಿನ ಮಹಿಳೆಯರು ಸೀರೆ, ಒಡವೆ ಮತ್ತು ಆಕೆಗೆ ಉಡುಗೊರೆಯಾಗಿ ಬಂದ ಇತರೆ ವಸ್ತುಗಳ ಹೊರತಾಗಿ ಬೇರೆ ಯಾವುದೇ ಆಸ್ತಿಯ ಮೇಲೆ ಹಕ್ಕಿರುವುದಿಲ್ಲ. ಗಂಡ ಆಕೆಯ ಅನುಮತಿಯಿಲ್ಲದೇ ಅವುಗಳನ್ನು ಮಾರಾಟ ಮಾಡುವ ಅಥವಾ ಅಡಮಾನ ಇಡುವ ಹಕ್ಕು ಹೊಂದಿರುತ್ತಾನೆ, ಹಾಗೆಯೇ, ಗಂಡನ ಗಮನಕ್ಕೆ ಬಾರದೇ ಅವುಗಳನ್ನು ಪರಬಾರೆ ಮಾಡುವ ಹಕ್ಕು ಆಕೆಗೂ ಇದೆ. ಇವು ಮಹಿಳೆಯರ ವೈಯುಕ್ತಿಕ ಆಸ್ತಿಗಳಾಗಿರುವುದರಿಂದ, ಅವು ಕುಟುಂಬದ ಆಸ್ತಿ ಭಾಗಕ್ಕೆ ಸೇರುವುದಿಲ್ಲ ಮತ್ತು ಕುಟುಂಬದ ಆಸ್ತಿ ವಿಭಜನೆಯ ಸಮಯದಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಗಂಡನ ಮರಣಾನಂತರ ಮಹಿಳೆ ತನ್ನ ವೈಯುಕ್ತಿಕ ಆಸ್ತಿಗೆ ಸಂಪೂರ್ಣ ಹಕ್ಕುದಾರಳಾಗಿರುತ್ತಾಳೆ. ಅವುಗಳನ್ನು ಅವಳಿಗೆ ಇಷ್ಟ ಬಂದ ಹಾಗೆ ಕೊಡುವ ಅಧಿಕಾರವಿರುತ್ತದೆ. ಸಿದ್ದಿ ಮಹಿಳೆಯರಿಗೆ ಸೇರಿದ ವಸ್ತುಗಳಿಗೆ ಸಂಬಂಧಿಸಿದಂತೆ ಇರುವ ಒಂದು ಗಮನಾರ್ಹ ಅಂಶವೆಂದರೆ ಅವರು ತುಂಬಾ ವಯಸ್ಸಾಗಿ ಸಾಯುವವರೆಗೂ ಅವರ ಇಟ್ಟುಕೊಂಡು ಕೊನೆಗೆ ಸಾಯುವ ಕಾಲದಲ್ಲಿ ಯೋಗಕ್ಷೇಮ ನೋಡಿಕೊಂಡವರಿಗೆ ಅವುಗಳನ್ನು ಕೊಡುತ್ತಾರೆ.

ಸಿದ್ದಿ ಜನರಲ್ಲಿನ ಕುಟುಂಬದ ರಚನೆಯನ್ನು ಮನೆತನದ ಮೂಲಕ ತಿಳಿದುಕೊಳ್ಳಬೇಕಾಗುತ್ತದೆ. ಮನೆತನ ಎಂಬುದು ಕುಟುಂಬದ ಗುಂಪಿನ ಒಂದು ರಚನೆ. ಸಾಮಾನ್ಯವಾಗಿ ಇದು ಗಂಡ ಹೆಂಡತಿ ಮತ್ತು ಅವಿವಾಹಿತ ಮಕ್ಕಳುಗಳಿರುತ್ತಾರೆ. ಕೆಲವು ಕುಟುಂಬಗಳಲ್ಲಿ ವಯಸ್ಸಾದ ತಂದೆ ತಾಯಿಯರೂ ಕುಟುಂಬದ ಸದಸ್ಯರಾಗಿರುತ್ತಾರೆ. ಕುಟುಂಬವು ಒಂದು ಆರ್ಥಿಕ ಘಟಕವಾಗಿರುತ್ತದೆ. ಗಂಡ ಅಥವಾ ಹಿರಿಯ ಪುರುಷ ವ್ಯಕ್ತಿ ಕುಟುಂಬದ ಯಜಮಾನನಾಗಿ ಭೂಮಿಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ. ಅವನೇ ಕುಟುಂಬದ ದುಡಿಯುವ ವ್ಯಕ್ತಿಯಾಗಿರುತ್ತಾನೆ ಮತ್ತು ಹೆಂಡತಿ ಮಕ್ಕಳು ಕುಟುಂಬದ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡುತ್ತಾರೆ.

ಯಲ್ಲಾಪುರ ಭಾಗದಲ್ಲಿ ಪ್ರತಿಯೊಂದು ಸಿದ್ದಿ ಕುಟುಂಬವು ಒಂದಲ್ಲಾ ಒಂದು ರೀತಿಯಲ್ಲಿ ಹವ್ಯಕ ಬ್ರಾಹ್ಮಣ ಕುಟುಂಬಗಳೊಂದಿಗೆ ಆರ್ಥಿಕ ಸಂಬಂಧ ಹೊಂದಿರುತ್ತವೆ. ಗೇಣಿದಾರರಾಗಿ ಅಥವಾ ಮನೆಗೆಲಸದ ಸೇವಕರಾಗಿಯಾದರೂ ಇರುತ್ತಾರೆ. ಇತ್ತೀಚಿನ ದಿನಗಳಲ್ಲಿಯೂ ಅಂತಹ ಸಂಬಂಧಗಳು ಮುಂದುವರಿದಿವೆ. ಇಂತಹ ಸೇವಕ ಪಾತ್ರದಿಂದ ಸಿದ್ದಿಗಳು ಹಣವನ್ನು ಗಳಿಸುತ್ತಿದ್ದರು

ಮತ್ತು ಕೆಲಸ ಮುಗಿಸಿ ಮನೆಗೆ ಹೋಗುವಾಗ ಆಹಾರ ತಿಂಡಿ ತಿನಿಸುಗಳನ್ನು ಅವರು ಕೊಡುತ್ತಿದ್ದರು. ಎಂದು ಸಿದ್ದೀಸ್ ಆಫ್ ನಾರ್ಥ ಕರ್ನಾಟಕದಲ್ಲಿ ಟಿ.ಸಿ. ಪಾಲಾಕ್ಷಪ್ಪನವರು ಹೇಳಿರುವಂತಹ ಪರಿಸ್ಥಿತಿ ಈಗ ಬದಲಾಗಿದ್ದು ಕೂಲಿಗಾಗಿ ಹವ್ಯಕ ಬ್ರಾಹ್ಮಣರ ಮನೆಗೆ ಹೋಗುತ್ತಿರುವುದು ಈಗಲೂ ಇದೆ, ಆದರೆ ಕೂಲಿಯ ನಂತರ ಅವರ ಮನೆಯಲ್ಲಿ ಉಳಿದ ಆಹಾರವನ್ನು ಸ್ವೀಕರಿಸಲು ಯುವ ಸಿದ್ದಿಗಳು ನಿರಾಕರುಸುತ್ತಾರೆ ಎಂದು ಅನಂತರಾಮ ಸಿದ್ದಿ ಹೆಳುತ್ತಾರೆ. ಈ ಭಾಗದಲ್ಲಿ ಹವ್ಯಕ ಬ್ರಾಹ್ಮಣರು ಸಮಾಜದಲ್ಲಿ ಗಣ್ಯರಾಗಿದ್ದಾರೆ, ಹಳ್ಳಿಯಲ್ಲಿನ ರಾಜಕೀಯ ಮತ್ತು ಸ್ವಲ್ಪಮಟ್ಟಿಗೆ ಈ ಪ್ರದೇಶದ ರಾಜಕೀಯವೂ ಈ ಹವ್ಯಕ ಬ್ರಾಹ್ಮಣ ಸಮುದಾಯದ ನಿಷ್ಠೆಯನ್ನು ಅವಲಂಬಿಸಿದೆ, ಅಂತೆಯೇ, ಬಡತನದಿಂದ ನರಳುತ್ತಿರುವ ಸಾಮಾನ್ಯ ಸಿದ್ದಿ ಜನರು ಸ್ಥಳೀಯ ಭೂಮಾಲೀಕರಾಗಿರುವ ಹವ್ಯಕ ಬ್ರಾಹ್ಮಣರಿಗೆ ತೋರಿಕೆಗಾದರೂ ನಿಷ್ಠೆಯನ್ನು ತೋರಿಸುತ್ತಿರುವುದು ಕಂಡುಬರುತ್ತಿದೆ.

ಪ್ರತಿಯೊಂದು ಸಿದ್ದಿ ಕುಟುಂಬವು ತನ್ನದೇ ಆದ ಸ್ವಂತ ಅಥವಾ ಬಾಡಿಗೆ ಪಡೆದ ಭೂಮಿಯನ್ನು ಹೊಂದಿರುತ್ತದೆ. ಕುಟುಂಬದ ಯಜಮಾನ ಅದರ ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತಾನೆ. ಗೃಹಕೃತ್ಯಗಳನ್ನು ಮುಗಿಸಿಕೊಂಡು ಹೆಂಡತಿಯು ಗಂಡನಿಗೆ ಸಹಾಯ ಮಾಡಲು ಕೃಷಿ ಕೆಲಸಕ್ಕೆ ಹೋಗುತ್ತಾಳೆ. ೮ರಿಂದ ೧೦ ವರ್ಷ ವಯಸ್ಸಿನ ಮಕ್ಕಳಿದ್ದರೆ ಅವರೂ ಕೂಡ ಅದಕ್ಕೆ ಕೈ ಜೋಡಿಸುತ್ತಾರೆ. ಪೋಷಕರ ಗೈರುಹಾಜರಿಯಲ್ಲಿ ಕೆಲವು ಮಕ್ಕಳೇ ಅವಶ್ಯಕ ಕೆಲಸಗಳನ್ನು ಮಾಡುತ್ತಾರೆ.

ಕುಟುಂಬವನ್ನು ಘರ್ ಮತ್ತು ಬಿಡಾರ ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಇದು ಕುಟುಂಬದ ಒಳಗೆ ನಡೆಯುವ ಕ್ರಿಯೆಯಾಗಿರುತ್ತದೆ. ಕುಟುಂಬವು ಚಿಕ್ಕದಾಗುತ್ತಾ ಹೋಗುವುದು ಸಿದ್ದಿ ಜನಾಂಗದ ಲಕ್ಷಣ, ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿವಾಹಿತ ವ್ಯಕ್ತಿಯು ತನ್ನ ತಂದೆಯ ಅಥವಾ ಅಣ್ಣನ ಕುಟುಂಬದೊಂದಿಗೆ ವಾಸಿಸುತ್ತಾನೆ. ವಿವಾಹವಾದ ತಕ್ಷಣ ಮನೆಯನ್ನು ಬಿಟ್ಟು ಹೊರಗೆ ಹೋಗಿ ಹೊಸ ಕುಟುಂಬವನ್ನು ಸ್ಥಾಪಿಸಿಕೊಳ್ಳುವ ಒಲವು ಅವರಲ್ಲಿ ಸಾಮಾನ್ಯವಾಗಿದೆ. ಭಾರತದ ಇತರ ಕುಟುಂಬ ಪದ್ಧತಿಗಳಲ್ಲಿ ಕಂಡು ಬರುವಂತಹ ಕಡು ವೈರತ್ವ ಮತ್ತು ಕುಟುಂಬ ಕಲಹದ ತೀವ್ರತೆಯನ್ನು ತಪ್ಪಿಸುವುದೇ ಈ ರೀತಿ ಪ್ರತ್ಯೇಕ ಕುಟುಂಬವನ್ನು ಸ್ಥಾಪಿಸಿಕೊಳ್ಳುವುದರ ಹಿಂದೆ ಇರುವ ಭಾವನೆ. ಎಂದು ಪಾಲಾಕ್ಷಪ್ಪನವರು ಹೇಳಿರುವುದು ಈಗಲೂ ಸತ್ಯ ಎಂದು ತಿಳಿದುಬರುತ್ತದೆ. ಒಬ್ಬ ವ್ಯಕ್ತಿ ವಿವಾಹವಾದ ಕೂಡಲೇ ಪ್ರತ್ಯೇಕವಾಗಿ ಹೋಗುವಾಗ ಭೂಮಿಯಲ್ಲಿ ಪಾಲು ಪಡೆದುಕೊಳ್ಳುತ್ತಾನೆ, ಅದು ಬಾಡಿಗೆ ಭೂಮಿಯಾಗಿದ್ದರೂ ಪಾಲುಮಾಡಿಕೊಂಡು ವ್ಯವಸಾಯ ಮಾಡುತ್ತಾರೆ. ಹೊಸ ಮನೆಯನ್ನು ಕಟ್ಟಿಕೊಂಡು ಕುಟುಂಬ ಸ್ಥಾಪಿಸಿಕೊಳ್ಳಲು ಎಲ್ಲ ರೀತಿಯ ನೆರವನ್ನು ಪಡೆದುಕೊಳ್ಳುತ್ತಾರೆ. ಸಿದ್ದಿ ಜನಾಂಗ ಇಂತಹ ಪ್ರತ್ಯೇಕತೆಯು ಸಹೋದರರ ನಡುವಿನ ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಕುಟುಂಬದ ಏಕತೆ ಮತ್ತು ಸಹೋದರರ ನಡುವೆ ಪ್ರೀತಿ ವಾತ್ಸಲ್ಯಗಳನ್ನು ಹೆಚ್ಚಿಸುತ್ತದೆ.

ಹೀಗೆ ಪ್ರತ್ಯೇಕಗೊಂಡ ಕುಟುಂಬಗಳಲ್ಲಿನ ಮೂಲ ಕುಟುಂಬವನ್ನು 'ಘರ್' ಎಂದು ಹೊಸದಾಗಿ ಪ್ರತ್ಯೇಕಗೊಂಡು ಸ್ಥಾಪಿಸಿಕೊಂಡ ಕುಟುಂಬವನ್ನು 'ಬಿಡಾರ' ಎಂದು ಕರೆಯಲಾಗುತ್ತದೆ. ಸಿದ್ದಿಗಳ

ಜೀವನದಲ್ಲಿ ಈ ಎರಡೂ ಪದಗಳು ಮಹತ್ವದವುಗಳಾಗಿವೆ. ಘರ್ ಎಂದರೆ ಮನೆತನದ ಹಿರಿಯರು ಬಾಳಿ ಬದುಕಿದ ಮನೆಯಾಗಿರುತ್ತದೆ. ಕುಟುಂಬದ ಹಿರಿಯ ಮಗ ಅಲ್ಲಿಯೇ ವಾಸವಿದ್ದು ಹಿರಿಯರ ಪೂಜೆ ಮುಂತಾದ ಪಾರಂಪರಿಕ ಧಾರ್ಮಿಕ ಆಚರಣೆಗಳನ್ನು ಮಾಡುತ್ತಾರೆ. ಘರ್ ಆ ಕುಟುಂಬಸ್ಥರೆಲ್ಲರಿಗೂ ಪವಿತ್ರ ಮತ್ತು ಪೂಜ್ಯನೀಯವಾಗಿರುತ್ತದೆ. ಆದ್ದರಿಂದ ಆ ಕುಟುಂಬಕ್ಕೆ ಸಂಬಂಧಪಟ್ಟವರಲ್ಲದೇ ಬೇರೆ ಯಾರೂ ಮನೆಯೊಳಗೆ ಹೋಗಿ ಹಿರಿಯರು ದೇವರನ್ನು ಸ್ಪರ್ಶಿಸುವಂತಿಲ್ಲ. ಘರ್‌ನ ಪಾವಿತ್ರತೆಗಾಗಿ ತುಂಬಾ ಕಠಿಣವಾದ ಮಡಿ ಮೈಲಿಗೆಯ ಭಾವನೆಯು ಸಿದ್ದಿ ಜನಾಂಗದಲ್ಲಿದೆ. ಮಾಸಿಕದ ದಿನಗಳಲ್ಲಿ ಸಿದ್ದಿ ಮಹಿಳೆಯರು ಕೂಡ ಮನೆಯೊಳಗೆ ಹೋಗುವಂತಿಲ್ಲ. ಘರ್‌ಅನ್ನು ನಾಶಪಡಿಸುವಂತಿಲ್ಲ ಮತ್ತು ಅದನ್ನು ಸ್ಥಳಾಂತರಿಸುವಂತೆಯೂ ಇಲ್ಲ. ಘರ್‌ನ ನಿರ್ವಹಣೆಗಾಗಿ ಸಂಬಂಧಿಸಿದ ಎಲ್ಲ ಸಹೋದರರೂ ಹಣ ಮತ್ತು ಸೇವೆಯನ್ನು ಮೀಸಲಿಡಬೇಕು. ಹುಟ್ಟು, ನಾಮಕರಣ, ವಿವಾಹ, ಸಾವು ಮುಂತಾದ ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಎಲ್ಲ ಸಹೋದರರು ಘರ್‌ಗೆ ಬಂದು ಪಾಲ್ಗೊಳ್ಳುತ್ತಾರೆ. ಘರ್‌ನಲ್ಲಿ ವಾಸಿಸುವ ಕರ್ತನೆಂದು ಕರೆಯುವ ಹಿರಿಯ ಅಣ್ಣ ಹಿರಿಯರು ದೇವರನ್ನು ಇಟ್ಟುಕೊಂಡು ಕರ್ತನ ಪೂಜೆ ಮಾಡುವುದು ಅವನ ಕರ್ತವ್ಯವಾಗಿರುತ್ತದೆ.

ಸಿದ್ದಿಗಳು ಬಿಡಾರವನ್ನು ಪವಿತ್ರ ಸ್ಥಳ ಎಂದು ಪರಿಗಣಿಸಿಕೊಂಡಿರುವುದಿಲ್ಲ ಆದ್ದರಿಂದ ಅಲ್ಲಿ ಯಾವುದೇ ರೀತಿಯ ಧಾರ್ಮಿಕ ಆಚರಣೆಗಳೂ ನಡೆಯುವುದಿಲ್ಲ. ಬಿಡಾರವನ್ನು ಅವಶ್ಯಕತೆ ಬಂದಾಗ ಸ್ಥಳಾಂತರಿಸಿಕೊಳ್ಳಬಹುದಾಗಿರುತ್ತದೆ. ಆದ್ದರಿಂದ ಅದಕ್ಕೆ ಶಾಶ್ವತ ನೆಲೆ ಎಂಬುವುದಿರುವುದಿಲ್ಲ, ಪ್ರಸ್ತುತ ಮತ್ತು ಅವರ ಮುಂದಿನ ಪೀಳಿಗೆಯವರು ಬದಲಾಯಿಸಿಕೊಳ್ಳುತ್ತ ಹೋಗಬಹುದು. ಮರಣ ಹೊಂದಿದ ವ್ಯಕ್ತಿಯ ಗಂಡುಮಕ್ಕಳು ಆತನನ್ನು ಹಿರಿಯರು ಎಂದು ಪೂಜಿಸಲು ಪ್ರಾರಂಭಿಸುತ್ತಾರೆ, ಉದಾಹರಣೆಗೆ, 'ಎ', 'ಬಿ', 'ಸಿ' ಮತ್ತು 'ಡಿ' ನಾಲ್ಕು ಜನ ಸಹೋದರರಾಗಿದ್ದರೆ ಇವರ ಹಿರಿಯರು ವಾಸವಾಗಿದ್ದ ಮನೆಯಲ್ಲಿ ಹಿರಿಯರ ಪೂಜೆ ಮಾಡಲಾಗುತ್ತದೆ. ಬಿ, ಸಿ ಮತ್ತು ಡಿ ಸಹೋದರರು 'ಎ'ನ ಮನೆಯನ್ನು ಘರ್ ಎಂದು ಗುರುತಿಸಿಕೊಳ್ಳುತ್ತಾರೆ. ಬಿ, ಸಿ, ಡಿ, ಸಹೋದರರು ತಮ್ಮ ಮನೆಯಲ್ಲಿ ಹಿರಿಯರು ಪೂಜೆ ಮಾಡುವವರೆಗೂ ಅವರ ಮನೆ ಅಥವಾ ಕುಟುಂಬಗಳು ಸಂಪೂರ್ಣವಾಗಿ ಬಿಡಾರಗಳಾಗಿರುತ್ತವೆ. ಬಿ, ಸಿ, ಮತ್ತು ಡಿ ಸಹೋದರರು ಪರಸ್ಪರರ ಕುಟುಂಬಗಳನ್ನು ಬಯ್ಯಾಚ 'ಬಿಡಾರ' ಎಂದು ಕರೆಯುತ್ತಾರೆ. 'ಎ'ನ ಘರ್‌ನಲ್ಲಿ ವರ್ಷಕ್ಕೊಮ್ಮೆ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಬಿ, ಸಿ, ಮತ್ತು ಡಿ ಸಹೋದರರು ಅವರವರ ಪತ್ನಿ ಮತ್ತು ಮಕ್ಕಳ ಸಮೇತರಾಗಿ ಹಣ ಮತ್ತು ದವಸಗಳೊಂದಿಗೆ ಬರುತ್ತಾರೆ. ವೈವಾಹಿಕ ಸಂಬಂಧಗಳಿಂದ ಏರ್ಪಟ್ಟ ಸಂಬಂಧಿಕರೂ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಹಣ ಮತ್ತು ದವಸವನ್ನು ಮೊದಲೇ ಘರ್‌ಗೆ ಕಳುಹಿಸಿಕೊಟ್ಟಿರುತ್ತಾರೆ. 'ಎ' ಮರಣ ಹೊಂದಿದ ನಂತರ, ಆತನ ಗಂಡುಮಕ್ಕಳು ತಮ್ಮ ತಂದೆಯನ್ನು ಹಿರಿಯರು ಎಂದು ಪರಿಗಣಿಸಿ ಪೂಜಿಸುತ್ತಾರೆ. ಇದರಿಂದ ಇದುವರೆಗೂ ಬಿಡಾರವಾಗಿದ್ದ 'ಬಿ'ನ ಮನೆ ಈಗ ಘರ್ ಆಗುತ್ತದೆ. 'ಬಿ' ಕರ್ತನಾಗುತ್ತಾನೆ. 'ಸಿ' ಮತ್ತು 'ಡಿ' 'ಬಿ'ನ ಮನೆಯನ್ನು ಈಗ ಹಿಯರು ಘರ್ ಎಂದು ಪರಿಗಣಿಸುತ್ತಾರೆ. ಅವರು

ಧಾರ್ಮಿಕ ಆಚರಣೆ ಮತ್ತು ಹಿರಿಯರು ಪೂಜೆಗೆ 'ಬಿ'ನ ಮನೆಗೆ ಹೋಗುತ್ತಾರೆ. 'ಎ'ನ ಮನೆಯನ್ನು ಈ ಮೂವರೂ ಸಹೋದರರು ಈಗ ಬಯ್ಯಾಚ ಘರ್ ಎಂದು ಗುರುತಿಸಿಕೊಳ್ಳುತ್ತಾರೆ. ಎ, ಬಿ, ಸಿ, ಮತ್ತು ಡಿ ಸಹೋದರರ ನಡುವೆ ಇದ್ದ ಸಹೋದರತ್ವದ ಸಂಬಂಧಗಳು ಅವರ ಮರಣದ ನಂತರ ಕೇವಲ ರಕ್ತ ಸಂಬಂಧಿಗಳಾಗುತ್ತಾರೆ. ಎ, ನ ಮಕ್ಕಳು ಬಿ, ಸಿ, ಮತ್ತು ಡಿ. ಗೆ ರಕ್ತ ಸಂಬಂಧಿಗಳಾಗುತ್ತಾರೆ, ಏಕೆಂದರೆ, ಅವರಿಗೆ ಒಬ್ಬರೇ ಸಾಮಾನ್ಯ ಹಿರಿಯರು ಇರುವುದಿಲ್ಲ. ಇಂತಹ ಬದಲಾವಣೆಗಳೊಂದಿಗೆ ಎ,ನ ಮನೆಯು ಆತನ ಮಕ್ಕಳಿಗೆ ಘರ್ ಆಗಿರುತ್ತದೆ. ಸಾಮಾನ್ಯ ಪೂಜೆ ಮಾಡುತ್ತಿದ್ದಾಗ ಅವರ ನಡುವೆ ಅವರು ಸಹೋದರತ್ವದ ಹತ್ತಿರದ ಸಂತತಿ ಯವರಾಗಿದ್ದರು, ಆದರೆ ಅವರ ಮರಣದ ನಂತರ ಅವರ ಸಂತತಿಯವರು ವಿಸ್ತೃತ ಸಂಬಂಧಿ ಗಳಾಗುತ್ತಾರೆ. ಈ ರೀತಿಯ ಪುರುಷರ ಕಡೆಯ ಸಂಬಂಧಿಗಳು ಸಾಮಾನ್ಯ ಪರಂಪರೆಯ ಹೊರತಾಗಿಯೂ ದಾಯಾದಿಗಳಾಗುತ್ತಾರೆ.

ಕೆಲವು ಸಂದರ್ಭಗಳಲ್ಲಿ ಘರ್‌ನ ಸ್ಥಾನ ಮಾನಗಳೂ ಬದಲಾಗುತ್ತವೆ. ಉದಾ: 'ಎ', ಗಂಡು ಮಕ್ಕಳಿಲ್ಲದೇ ಮರಣ ಹೊಂದಿದರೆ, ಆತನ ಅಳಿಯ 'ಎ'ನ ಮನೆಗೆ ಬಂದು ಇರಬಹುದು, ಆದರೆ ಹಿರಿಯರು ಪೂಜೆ ಮಾಡುವಂತಿಲ್ಲ. ಹಿರಿಯರು ದೇವರನ್ನು 'ಎ', ಸಹೋದರ 'ಬಿ', ತನ್ನ ಮನೆಗೆ ತೆಗೆದುಕೊಂಡು ಹೋಗಿ ಇಟ್ಟುಕೊಂಡು ಪೂಜಿಸುತ್ತಾನೆ. ಇಂತಹ ಸಂದರ್ಭದಲ್ಲಿ 'ಎ', ಘರ್ ದ ಸ್ಥಾನಮಾನವನ್ನು ಕಳೆದುಕೊಂಡು ಬಿಡಾರ ಆಗುತ್ತದೆ. ಹಾಗೆಯೇ 'ಬಿ', ಘರ್‌ನ ಸ್ಥಾನವನ್ನು ಪಡೆದುಕೊಳ್ಳುತ್ತದೆ ಮತ್ತು ಗಂಡು ಸಂತಾನವಿಲ್ಲದ 'ಎ' ನನ್ನು ಹಿರಿಯರು ಎಂದು ಪರಿಗಣಿಸುವುದಿಲ್ಲ.

ಟಿ.ಸಿ ಪಾಲಾಕ್ಷಪ್ಪ ನವರ ಸಿದೀಸ್ ಆಫ್ ನಾರ್ಥ್ ಕೆನರ ಮತ್ತು ಕಿರಣ್ ಕಮಲ್ ಪ್ರಸಾದ್ ಅವರ ಇನ್ ಅರ್ಚ್ ಆಫ್ ಅನ್ ಐಡೆಂಟಿಟಿಯಲ್ಲಿ ಕಂಡುಬಂದಿರುವುದಕ್ಕೂ ಈ ಅಧ್ಯಯನದಲ್ಲಿ ಕಂಡು ಬಂದಿರುವ ಅಣ್ಣ ತಮ್ಮಂದಿರು ಕೌಟುಂಬಿಕ ವ್ಯವಹಾರಗಳಲ್ಲಿ, ಬಂದುತ್ವ ಮತ್ತು ಹಿರಿಯರ ಪೂಜೆಗೆ ಸಂಬಂಧಿಸಿಂತೆ ಹೊಂದಾಣಿಕೆ ಇದ್ದರೂ ಆರ್ಥಿಕ ವಿಚಾರಗಳಲ್ಲಿ ಪ್ರತ್ಯೇಕತೆಯನ್ನು ಕಾಯುಕೊಳ್ಳುತ್ತಿರುವುದು ಕಂಡು ಬಂದಿದೆ.

ಈ ಮೇಲಿನ ಚರ್ಚೆಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಅವೇನೆಂದರೆ,

೧. ಇತರ ಮನೆ(ಬಿಡಾರ)ಗಳಿಗೆ ಹಿರಿಯರು ಸಂಬಂಧವಾಗಿ ಕುಟುಂಬವು ಮನೆತನದವರಿಗೆಲ್ಲ ಒಂದು ಘಟಕವಾಗಿ ಉಳಿಯುತ್ತದೆ.

೨. ಈಗಲೂ ಕುಟುಂಬವು ಕೇಂದ್ರ ಕುಟುಂಬವಾಗಿದ್ದಾಗ್ಯೂ ಧರ್ಮಾಚರಣೆ ಮತ್ತು ಕ್ರಿಯಾ ವಿಧಿಗಳಿಗೆ ಸಂಬಂಧಿಸಿದಂತೆ ಅದು ವಿಸ್ತೃತ ಕುಟುಂಬದ ಭಾಗವಾಗಿರುತ್ತದೆ.

ಸಂತತಿಯ ಮುಖ್ಯ ಸ್ಥಾನಮಾನ ಮತ್ತು ಅಧಿಕಾರವು ಹಿರಿಯರು ದೇವರ ಬಲದಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಕ್ರಿಯಾವಿಧಿಗಳ ಆಚರಣೆಯ ಮೂಲಕ, ಹಿರಿಯರ ಆಶೀರ್ವಾದದ ಬಲದಿಂದ ಹಿರಿಯರನ್ನು ಪೂಜಿಸುವ ಕುಟುಂಬದ ಹಿರಿಯ ಪುರುಷ ವ್ಯಕ್ತಿ ಹೆಚ್ಚು ಅಧಿಕಾರವುಳ್ಳವ

ನಾಗಿರುತ್ತಾನೆ. ಮತ್ತು ಹಿರಿಯರು ಮತ್ತು ಕುಟುಂಬಕ್ಕೆ ಅವಿಧೇಯತೆಯಿಂದ ನಡೆದುಕೊಳ್ಳುವ ವ್ಯಕ್ತಿಗೆ ಸಂಬಂಧಿಸಿದಂತೆ ಧರ್ಮಾಚರಣೆ ಮತ್ತು ಕ್ರಿಯಾವಿಧಿಗಳ ಆಚರಣೆಗೆ ನಿರಾಕರಣೆ ಮಾಡಬಹುದು ಆದರೂ ನಿರಂಕುಶನಾಗಿರುವುದಿಲ್ಲ. ಹಿರಿಯರು ತಮ್ಮ ವರ್ತನೆಯನ್ನು ಗಮನಿಸುತ್ತಿರುತ್ತಾರೆ, ತಪ್ಪು ಮಾಡಿದರೆ ಶಿಕ್ಷೆ ಕೊಡುತ್ತಾರೆ, ಎಂಬ ಭಾವನೆ ಇಟ್ಟುಕೊಂಡಿರುತ್ತಾರೆ. ಕುಟುಂಬದ ಅಸಂತೋಷಕ್ಕೆ ಹಿರಿಯರ ಅಸಂತುಷ್ಟಿಯೇ ಕಾರಣ ಎಂದುಕೊಳ್ಳುತ್ತಾರೆ. ಕಾಯಿಲೆ ಕಷ್ಟಗಳು ಬಂದಾಗ ಹಿರಿಯರು ಕನಸಿನಲ್ಲಿ ಬಂದು ಎಚ್ಚರಿಸುತ್ತಾರೆ ಆದ್ದರಿಂದ ಕುಟುಂಬದ ಎಲ್ಲಾ ಸದಸ್ಯರುಗಳು ನೈತಿಕತೆ ಮತ್ತು ಮೌಲ್ಯಯುತವಾಗಿ ನಡೆದುಕೊಳ್ಳುವಂತೆ ನೋಡಿಕೊಳ್ಳುವುದು ಕುಟುಂಬದ ಕರ್ತನ ಜವಾಬ್ದಾರಿ ಯಾಗಿರುತ್ತದೆ.

ಇದುವರೆಗಿನ ನನ್ನ ಚರ್ಚೆಯು ಕೇವಲ ಪಿತೃಸಂಬಂಧಿ ಸಂಬಂಧಗಳ ಬಗ್ಗೆ ಕೇಂದ್ರೀಕೃತವಾಗಿದೆ, ಸಿದ್ದಿಜನಾಂಗವು ಸ್ತ್ರೀ ಮತ್ತು ಪುರುಷ ಸಂಬಂಧಗಳೆರಡರ ಪ್ರಾಬಲ್ಯವಿರುವ ಸಾಮಾಜಿಕ ವ್ಯವಸ್ಥೆಯಾಗಿದೆ. ತಾಯಿಯ ಕಡೆಯ ಸಂಬಂಧಗಳೂ ಕೂಡ ಅಷ್ಟೇ ಪ್ರಬಲವಾಗಿರುತ್ತವೆ. ಪಿತೃ ಸಂಬಂಧಿಗಳಂತೆ ಮಾತೃ ಸಂಬಂಧಗಳು ಧರ್ಮ ಮತ್ತು ಕ್ರಿಯಾವಿಧಿಗಳ ಆಚರಣೆಯಲ್ಲಿ ಕಂಡುಬರುವುದಿಲ್ಲ. ಪ್ರೀತಿ ಮತ್ತು ವಾತ್ಸಲ್ಯಗಳಿಂದ ಕೂಡಿರುವ ಮಾತೃ ಸಂಬಂಧಗಳು ಪಿತೃ ಸಂಬಂಧಗಳಿಗಿಂತ ಗಟ್ಟಿಯಾಗಿರುತ್ತವೆ. ಮಾತೃತ್ವದ ಸಂಬಂಧಗಳು ವಿವಾಹದ ಮೂಲಕ ಶುರುವಾಗುತ್ತವೆ. ತಾಯಿಯ ಕಡೆಯ ರಕ್ತ ಸಂಬಂಧಿಗಳನ್ನು ಗುರುತಿಸಲು ಸಿದ್ದಿ ಜನಾಂಗದವರು ಬಳಗದವರು ಎಂಬ ಪದವನ್ನು ಉಪಯೋಗಿ ಸುತ್ತಾರೆ. (ಹಿಂದೂ ಧರ್ಮದ ಎಲ್ಲ ಜಾತಿಯವರೂ ಈ ಪದವನ್ನು ಬಳಸುವುದರಿಂದ ಇದು ಹಿಂದು ಧರ್ಮದ ಪ್ರಭಾವದಿಂದ ಬಂದಿರಬಹುದು) ಮನೆತನದ ಅಥವಾ ಕೌಟುಂಬಿಕ ಕಾರ್ಯಗಳನ್ನು ಗಮನಿಸಿದರೆ ಬಳಗದವರ ಪಾತ್ರ ಸ್ಪಷ್ಟವಾಗುತ್ತದೆ. ತಾಯಿಯ ಕಡೆಯ ಹತ್ತಿರದ ಸಂಬಂಧಿಕರಾಗಿರುವ ಆಕೆಯ ತಂದೆ, ತಾಯಿ ಮತ್ತು ಸಹೋದರ ಸಹೋದರಿಯರು ಆಗಾಗ್ಗೆ ಭೇಟಿ ಕೊಡುತ್ತಿರುತ್ತಾರೆ. ಕೃಷಿ ಕಾರ್ಯಗಳು ಹೆಚ್ಚಾಗಿದ್ದಾಗ ಮತ್ತು ಸುಗ್ಗಿಯ ಕಾಲದಲ್ಲಿ ಶ್ರಮಿಕರ ಅವಶ್ಯಕತೆ ಇದ್ದಾಗ ತಾಯಿಯ ಕಡೆಯ ರಕ್ತ ಸಂಬಂಧಿಗಳೊಂದಿಗೆ ಪರಸ್ಪರ ಸಹಾಯ ಸಹಕಾರಗಳನ್ನು ಪಡೆದುಕೊಳ್ಳುತ್ತಾರೆ. ಪಿತೃವಂಶೀಯ ಸಂಬಂಧಿಕರ ಸಹಾಯದ ಹೊರತಾಗಿಯೂ ಹೆಂಡತಿಯ ಸಹೋದರರು ಮತ್ತು ಸಹೋದರಿಯರ ಗಂಡಂದಿರು ಸಹಾಯ ಮಾಡುತ್ತಾರೆ. ಆಗಾಗ್ಗೆ ಇವರುಗಳ ನಡುವೆ ವಿಶೇಷ ತಿನಿಸುಗಳ ವಿನಿಮಯವೂ ನಡೆಯುತ್ತಿರುತ್ತದೆ. ವಿವಾಹವಾದ ಮಹಿಳೆ ತನ್ನ ಮೊದಲನೇ ಮಗುವಿನ ಹೆರಿಗೆಗೆ ತಂದೆಯ ಮನೆಗೆ ಹೋಗುತ್ತಾಳೆ. ನಂತರದ ಹೆರಿಗೆ ಮತ್ತು ಬಾಣಂತನಕ್ಕೆ ಆಕೆಯ ತಾಯಿಯೇ ಅವಳ ಮನೆಗೆ ಬಂದು ಯೋಗಕ್ಷೇಮ ನೋಡಿಕೊಳ್ಳುತ್ತಾಳೆ.ಹಿಂದೂ ಕುಟುಂಬ ಪದ್ಧತಿಯಂತೆಯೇ ಸಿದ್ದಿಗಳಲ್ಲಿಯೂ ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ತಾಯಿಯ ಸಹೋದರರು ಪ್ರಮುಖ ಪಾತ್ರ ವಹಿಸುತ್ತಾರೆ. ವಿವಾಹದಂತಹ ಇತರ ವಿಶೇಷ ಸಂದರ್ಭಗಳಲ್ಲಿ ತಾಯಿಯ ಸಹೋದರರ ಅನುಪಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಗಂಡ, ಹೆಂಡತಿ, ಅವಿವಾಹಿತ ಗಂಡು ಮತ್ತು ಹೆಣ್ಣುಮಕ್ಕಳು, ಹಿಂದಿನ ತಲೆಮಾರಿನ ಅಜ್ಜ ಅಥವಾ ಅಜ್ಜಿ ಅಥವಾ ಇಬ್ಬರೂ ಒಟ್ಟಾಗಿರುವುದು ಕಂಡುಬಂದಿದೆ. ಸಿದ್ದಿ ಜನಾಂಗದವರಲ್ಲಿ ಪಿತೃಪ್ರಧಾನ ಮತ್ತು ಮಾತೃಪ್ರಧಾನ ಕುಟುಂಬ ಪದ್ಧತಿಗಳಿರುವುದು ಕಂಡುಬರುತ್ತದೆ. ಆದರೆ ಸಾಮಾನ್ಯವಾಗಿ ಬುಡಕಟ್ಟು ಜನರು ಮಾತೃಪ್ರಧಾನ ಕುಟುಂಬ ಪದ್ಧತಿ ಹೊಂದಿರುತ್ತಾರೆ. ಈ ಅಧ್ಯಯನದಲ್ಲಿ ಸಿದ್ದಿಯರಲ್ಲಿ ಶೇ. ೬೨ರಷ್ಟು ಪಿತೃಪ್ರಧಾನ ಮತ್ತು ಶೇ. ೩೮ರಷ್ಟು ಮಾತೃಪ್ರಧಾನ ಕುಟುಂಬ ಪದ್ಧತಿ ಆಚರಣೆಯಲ್ಲಿದೆ.

ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳಿಗೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬಗಳ ಪ್ರಮಾಣ ವಿಭಕ್ತ ಕುಟುಂಬಗಳಿಗಿಂತ ಅಧಿಕವಾಗಿರುವುದು ಕಂಡುಬಂದಿದೆ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ಬಂಧುತ್ವ ಬಂಧನದ ಪರಿಕಲ್ಪನೆಯು ಅಧಿಕವಾಗಿರುವುದರಿಂದ ಎಲ್ಲರೂ ಒಂದೇ ವಂಶಾವಳಿಗೆ ಸೇರಿದವರು ಎಂಬ ನಂಬಿಕೆಯೊಂದಿಗೆ ಅವಿಭಕ್ತ ಕುಟುಂಬದಲ್ಲಿ ಬದುಕುತ್ತಿರುವುದು ಕಂಡುಬರುತ್ತದೆ. ಆದರೆ, ಸಿದ್ದಿ ಕುಟುಂಬ ಪದ್ಧತಿಯಲ್ಲಿ ವಿವಾಹದ ನಂತರ ಗಂಡುಮಕ್ಕಳು ತಮ್ಮ ಮೂಲಕ ಕುಟುಂಬದಿಂದ ಪ್ರತ್ಯೇಕವಾಗಿಯೇ ವಾಸಿಸುತ್ತಿರುವುದು ತಿಳಿದುಬಂದಿದೆ. ಸಿದ್ದಿಯರ ಮೂಲ ಕುಟುಂಬವನ್ನು ಘರ್ ಎಂದೂ ವಿವಾಹದ ನಂತರ ಕಿರಿಯ ಸಹೋದರರು ಸ್ಥಾಪಿಸಿಕೊಂಡ ಕುಟುಂಬವನ್ನು ಬಿಡಾರ ಎಂದು ಕರೆಯುತ್ತಾರೆ. ಆದಾಗ್ಯೂ ಕಾರ್ಯಾತ್ಮಕ ಅವಲಂಬನೆ ಬಂಧುತ್ವ ಬಂಧನದ ಪರಿಕಲ್ಪನೆ ಮತ್ತು ಅವರೆಲ್ಲರೂ ಒಂದೇ ವಂಶಾವಳಿಗೆ ಸೇರಿದ್ದೇವೆ ಎಂದು ಬಲವಾಗಿ ನಂಬಿರುವುದರಿಂದ ಅಣ್ಣ ತಮ್ಮಂದಿರು ವಿವಾಹವಾದ ನಂತರ ಪ್ರತ್ಯೇಕವಾಗಿ ವಾಸಿಸುತ್ತಿದ್ದರೂ, ಒಂದೇ ಕುಟುಂಬದವರು ಎಂದು ಹೇಳುತ್ತಾರೆ. ಅದ್ದರಿಂದ, ಮಾಹಿತಿದಾರರ ಕುಟುಂಬಗಳ ಸಂಖ್ಯೆಯಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚಾಗಿರುವುದು ಕಂಡುಬಂದಿದೆ. ಇಂತಹ ಕುಟುಂಬಗಳಲ್ಲಿ, ಸಹಕಾರದ ತತ್ವ ಸಂಕಷ್ಟದ ಸಮಯದಲ್ಲಿ ಪರಸ್ಪರ ಸಹಾಯ ಸಹಕಾರ ನೀಡುತ್ತಿರುವುದು ಕಂಡುಬರುತ್ತದೆ. ಕುಟುಂಬದ ರಚನೆಗೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿ ಹಿಂದು ಪೂಜೆ ಯಂತಹ ಸಾಂಪ್ರದಾಯಿಕ ಆಚರಣೆಯನ್ನು ಕುಟುಂಬದ ಹಿರಿಯ ಪುರುಷ ವ್ಯಕ್ತಿ ನಡೆಸಿಕೊಂಡು ಬರುತ್ತಿದ್ದರು. ಕುಟುಂಬದಲ್ಲಿ ಗಂಡ, ಹೆಂಡತಿ ಅವರ ಅವಿವಾಹಿತ ಗಂಡು ಮತ್ತು ಹೆಣ್ಣುಮಕ್ಕಳು ಹಿಂದಿನ ತಲೆಮಾರಿನಲ್ಲಿ ಹಿರಿಯ ಮಗನಾಗಿದ್ದರೆ, ಅವರ ವಯೋವೃದ್ಧ ತಂದೆ-ತಾಯಿ ಇರುತ್ತಿದ್ದರು. ಈ ಅಧ್ಯಯನದಿಂದ ತಿಳಿದುಬಂದಿರುವಂತೆ ವಯೋವೃದ್ಧ ತಂದೆ-ತಾಯಿಗಳು, ಹಿರಿಯ ಮಗನ ಬಳಿಯೇ ಇರುವುದಿಲ್ಲ. ಮತ್ತು ಹಿರಿಯರು ಪೂಜಿಸುವಂತಹ ಕುಟುಂಬದ ಸಾಂಪ್ರದಾಯಿಕ ಕಾರ್ಯಗಳನ್ನು ಹಿರಿಯ ಮಗನೇ ಮಾಡಬೇಕಾಗಿತ್ತು. ಆದರೆ, ಈಗ ಇಂತಹ ಕೆಲಸಗಳನ್ನು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಯಾರಾದರೂ ಒಬ್ಬ ಸಹೋದರ ತನ್ನ ಕಿರಿಯ ಮತ್ತು ಹಿರಿಯ ಸಹೋದರರನ್ನು ಸೇರಿಸಿಕೊಂಡು ಆಚರಿಸುತ್ತಿರುವುದು ಕಂಡುಬಂದಿದೆ.

ವಸತಿ

ಸಿದ್ದಿಯರ ಕುಟುಂಬಗಳ ವಸತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಹಿ.ಚಿ. ಬೋರಲಿಂಗಯ್ಯನವರು ಸಿದ್ದಿಯರ ಸಂಸ್ಕೃತಿಯಲ್ಲಿ ಹೇಳಿರುವಂತೆ ಕಡುಬಡತನವನ್ನು ಸಾರುವ ಬಿದಿರಿನ ಹೊದಿಕೆಯ ಗೋಡೆಗೆ ಮಣ್ಣಿನ ಲೇಪನ, ಮೇಲೆ ಹುಲ್ಲಿನ ಸೂರು, ಮನೆಯೊಳಗೆ ಒಂದು ಅಂಗಳ ಒಂದು ಮೂಲೆಯಲ್ಲಿ ಅಡುಗೆ ಮನೆ, ಒಂದಿಷ್ಟು ಮಡಕೆ ಕುಡಿಕೆ ಮತ್ತು ಬಿದಿರಿನ ಬುಟ್ಟಿ ಮುಂತಾದ ಪರಿಕರಗಳು ಸಿದ್ದಿಯವರ ಆಸ್ತಿ ಎಂದು ಹೇಳಿದ್ದಾರೆ. ಆದರೆ ನನ್ನ ಅಧ್ಯಯನದಲ್ಲಿ ಕಂಡುಬರುವ ಪ್ರಕಾರ ಸಿದ್ದಿಯರಲ್ಲಿ ಶೆ. ೫೦ಕ್ಕಿಂತ ಹೆಚ್ಚು ಕುಟುಂಬಗಳು ಹಂಚಿನ ಮನೆಯಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ. ಶೇ. ೨ರಷ್ಟು ಕುಟುಂಬಗಳು ಸಿಮೆಂಟ್ ಮನೆಗಳಲ್ಲಿ ಹಾಗೂ ಶೇ. ೪೭ರಷ್ಟು ಜನರು ಗುಡಿಸಲುಗಳಲ್ಲಿ ವಾಸಿಸುತ್ತಿರುವುದು ಕಂಡುಬಂದಿದೆ. ಹಾಗೆಯೇ ಗುಡಿಸಲು ಮನೆಗಳೂ ಸಹ ಬೋರಲಿಂಗಯ್ಯನವರು ಹೇಳಿರುವಂತೆ ಅಷ್ಟೇ ನಿಕೃಷ್ಟವಾಗಿಲ್ಲ. ಹುಲ್ಲಿನ ಗುಡಿಸಲುಗಳನ್ನು ೭–೮ ಅಡಿ ಎತ್ತರದ ಗೋಡೆ, ವರಾಂಡ, ಪ್ರತ್ಯೇಕ ಕೋಣೆಗಳು, ಕೊಟ್ಟಿಗೆ, ಟಿ.ವಿ., ದ್ವಿಚಕ್ರವಾಹನಗಳು, ದನಕರುಗಳು, ಕುರಿ ಮುಂತಾದ ಸ್ತಿರಾಸ್ತಿಗಳು ಕಂಡುಬರುತ್ತವೆ. ಅದ್ದರಿಂದ ವಸತಿ ವ್ಯವಸ್ಥೆಯನ್ನು ನೋಡಿದಾಗ ಕಾಡಿನ ಮಧ್ಯದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರೂ ವಿಶಾಲವಾದ ಕೊಠಡಿಗಳು, ಕೆಂಪು ಹಂಚಿನ ಮೇಲ್ಛಾವಣಿ, ಮಣ್ಣಿನ ಮತ್ತು ಸಿಮೆಂಟ್ ನೆಲ ಮುಂತಾದ ಸೌಲಭ್ಯಗಳನ್ನು ಹೊಂದಿರುವ ಮನೆಗಳಿವೆ. ಈ ಅಧ್ಯಯನಕ್ಕೆ ಒಳಪಟ್ಟಿರುವ ೩೯೦ ಮಾಹಿತಿದಾರರ ಕುಟುಂಬಗಳಲ್ಲಿ ೩೫೨ ಜನ ಮಾಹಿತಿದಾರರು ಅಂದರೆ, ಶೇ. ೯೦ರಷ್ಟು ಜನರು ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾರೆ. ೩೦ ಮಾಹಿತಿದಾರ ಕುಟುಂಬಗಳು ಅಂದರೆ ಶೇ. ೮ರಷ್ಟು ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಹಾಗೆಯೇ, ಶೇ. ೨ರಷ್ಟು ಮಾಹಿತಿದರರು, ಅಂದರೆ ೮ ಕುಟುಂಬಗಳು ವಸತಿ ರಹಿತರಾಗಿದ್ದು ಬೇರೆಯವರ ಮನೆಯ ಹೆಚ್ಚುವರಿ ಕೊಠಡಿಗಳು ಅಥವಾ ಹೊರಾಂಡಗಳಲ್ಲಿ ವಾಸಿಸುತ್ತಿದ್ದಾರೆ. ಸಿದ್ದಿ ಬುಡಕಟ್ಟು ಜನರು ವಾಸಿಸುವ ಮನೆಗಳಲ್ಲಿ ಶೇ. ೭೫ರಷ್ಟು ಕುಟುಂಬಗಳಲ್ಲಿ ಶೌಚಾಲಯವನ್ನೇ ಉಪಯೋಗಿಸದೇ ಇರುವವರು ಹೆಚ್ಚಾಗಿದ್ದಾರೆ. ಶೇ. ೭೫ರಷ್ಟು ಶೌಚಾಲಯ ಉಪಯೋಗಿಸುವ ಬಗ್ಗೆ ಯಾವುದೇ ರೀತಿಯ ಪ್ರತಿಕ್ರಿಯೇ ನೀಡದೇ ಇರುವುದು.

ಸಿದ್ದಿಯರು ತಾವು ನೆಲೆಸಿರುವ ಪ್ರದೇಶಗಳಲ್ಲಿ ಇತರರು ಯಾವ ಮೂಲಗಳಿಂದ ನೀರನ್ನು ಪಡೆದುಕೊಳ್ಳುತ್ತಿದ್ದಾರೋ, ಅದೇ ಮೂಲಗಳಿಂದ ಕುಡಿಯುವ ನೀರನ್ನು ಉಪಯೋಗಿಸಿ ಕೊಳ್ಳುತ್ತಿರುವುದು ಸಿದ್ದಿನೆಲೆಗಳಿಗೆ ಬೇಟಿ ನೀಡಿದಾಗ ನನ್ನ ಗಮನಕ್ಕೆ ಬಂದಿದೆ. ಆದರೆ, ಮನೆಗಳಿಗೆ ನೀರಿನ ಸರಬರಾಜು ಮಾಡಿಕೊಳ್ಳುವ ವ್ಯವಸ್ಥೆ ಮಾತ್ರ ಪ್ರದೇಶಗಳ ಭೌಗೋಳಿಕ ಸ್ವರೂಪವನ್ನಾಧರಿಸಿ ಭಿನ್ನವಾಗಿರುವುದು ಕಂಡುಬಂದಿದೆ. ಇತರ ಸಮೂಹಗಳ ಶ್ರೀಮಂತರು ತಮ್ಮ ಮನೆಗಳಿಗೆ ಪೈಪ್ ಲೈನ್ ಮೂಲಕ ಮನೆಯ ಒಳಗಡೆಗೆ ನೀರಿನ ಸಂಪರ್ಕ ಕಲ್ಪಿಸಿಕೊಂಡಿದ್ದರೆ ಸಿದ್ದಿಯರು ಇಂತಹ ವ್ಯವಸ್ಥೆ ಮಾಡಿ ಕೊಳ್ಳಲಾಗದ ಸ್ಥಿತಿಯಲ್ಲಿರುವುದು ಕಂಡುಬಂದಿದೆ. ಯಲ್ಲಾಪುರ, ಹಳಿಯಾಳ ಮತ್ತು ಮುಂಡಗೋಡು ಪ್ರದೇಶಗಳಲ್ಲಿ ಸಿದ್ದಿಯೇತರ ಇತರ ಸಮುದಾಯಗಳು ನೆಲೆಸಿರುವ ಸಿದ್ದಿ ಕುಟುಂಬಗಳು ಊರಿನ

ಹೊರಗಡೆ ಇದ್ದರೂ ಅವರಿಗೆ ಪ್ರತ್ಯೇಕ ಸಿಸ್ಟನ್ ಇಟ್ಟು ನೀರಿನ ವ್ಯವಸ್ಥೆ ಮಾಡಲಾಗಿದೆ. ಇನ್ನೂ ಕೆಲವು ಹಳ್ಳಿಗಳಲ್ಲಿ ಇತರ ಸಮುದಾಯಗಳ ಜನರಿಗೆ ಸರಬರಾಜು ಮಾಡುವ ನೀರಿನ ಸಿಸ್ಟನ್‌ಗಳಿಂದಲೇ ಇವರು ನೀರಿನ್ನು ಅವರೊಟ್ಟಿಗೆ ತೆಗೆದುಕೊಳ್ಳುತ್ತಾರೆ. ಆದರೆ ಅಂಕೋಲ, ದಾಂಡೇಲಿ ಮತ್ತು ಕಾಡುಗಳಲ್ಲಿ ದೂರ ದೂರ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ಸಿದ್ದಿ ಕುಟುಂಗಳಿಗೆ ಈಗಲೂ ಸಮೀಪದ ಹಳ್ಳಗಳೇ ನೀರಿನ ಮೂಲವಾಗಿರುವುದು ಕಂಡು ಬಂದಿದೆ.

ಧರ್ಮ

ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗೀಯ ಸಮುದಾಯದಲ್ಲಿ ಪ್ರಪಂಚದ ಪ್ರಮುಖ ಧರ್ಮಗಳಾಗಿರುವ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮೂರು ಧರ್ಮಗಳನ್ನು ಅನುಸರಿಸುವವರಿದ್ದಾರೆ. ಪ್ರತಿಯೊಂದೂ ಧಾರ್ಮಿಕ ಸಮೂಹದವರೂ ಭೌಗೋಳಿಕವಾಗಿ ಪರಸ್ಪರ ಪ್ರತ್ಯೇಕವಾಗಿಯೇ ವಾಸಿಸುತ್ತಾರೆ. ಹಳಿಯಾಳ ಪ್ರದೇಶದ ಸಿದ್ದಿ ಜನರು ಹೆಚ್ಚಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಗಳ ಅನುಯಾಯಿಗಳಾಗಿದ್ದಾರೆ. ಯಲ್ಲಾಪುರ ಮತ್ತು ಅಂಕೋಲ ತಾಲೂಕುಗಳಲ್ಲಿನ ಸಿದ್ದಿ ಜನರು ಹೆಚ್ಚಾಗಿ ಹಿಂದೂ ಧರ್ಮದ ಅನುಯಾಯಿಗಳಾಗಿದ್ದಾರೆ. ಹಳಿಯಾಳದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ಒಂದೇ ಹಳ್ಳಿಯಲ್ಲಿ ವಾಸವಾಗಿದ್ದರೂ ಪರಸ್ಪರ ಪ್ರತ್ಯೇಕ ಕೇರಿಗಳಲ್ಲಿ ನೆಲೆಸಿದ್ದಾರೆ. ಹಿಂದೂ ಸಿದ್ದಿಗಳು ಸ್ಥಳೀಯವಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳಿಂದ ಅಂತರವನ್ನು ಕಾಯ್ದು ಕೊಂಡಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ಪರಸ್ಪರ ದೂರದಲ್ಲಿ ಪ್ರತ್ಯೇಕ ನೆಲೆಗಳಲ್ಲಿಯೇ ವಾಸಿಸುತ್ತಿದ್ದಾರೆ. ಸ್ಥಳೀಯವಾಗಿ ಹಿಂದು ಸಿದ್ದಿಗಳು ಇತರ ಹಿಂದು ಜಾತಿಗಳ ನಡುವೆ ಜೀವನ ಶೈಲಿ ಮತ್ತು ಆಚರಣೆಗಳನ್ನು ಹಂಚಿಕೊಂಡು ಬದುಕುತ್ತಿದ್ದಾರೆ. ಹಾಗೆಯೇ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ತಮ್ಮ ತಮ್ಮ ಧರ್ಮಗಳ ಸ್ಥಳೀಯ ಸಮೂಹಗಳ ನಡುವೆ ಬದುಕುತ್ತಿದ್ದಾರೆ. ಸ್ಥಳೀಯ ಇತರ ಧಾರ್ಮಿಕ ಸಮುದಾಯಗಳಿಗೆ ಹೊಂದಿಕೊಂಡು ಮತ್ತು ಮೂರು ಧರ್ಮಗಳಿಗೆ ಇಡೀ ಸಿದ್ದಿ ಜನಾಂಗದವರು ವರ್ಗೀಕರಣ ಗೊಂಡಿರುವ ಪ್ರಯುಕ್ತ, ಸಿದ್ದಿಗಳ ನಿಜವಾದ ಸ್ವಂತಿಕೆಯ ಭಾವನೆ ಯಾವುದೇ ರೀತಿಯಲ್ಲೂ ಅಭಿವೃದ್ಧಿಯಾಗಿಲ್ಲ ಎಂದು ಹೇಳಬಹುದು. ಸಿದ್ದಿಗಳು ತಾವು ಸಿದ್ದಿಗಳಾಗಿ ಗುರುತಿಸಿಕೊಳ್ಳುವುದಕ್ಕಿಂತ ಮುಸಲ್ಮಾನರಾಗಿ ಗುರುತಿಸಿ ಕೊಳ್ಳಲು ಇಷ್ಟಪಡುತ್ತಾರೆ. ಆದ್ದರಿಂದ ಅವರನ್ನು ಮುಸಲ್ಮಾನ ಸಿದ್ದಿ ಎಂದೇ ಕರೆಯಬೇಕು. ಈ ಅಂಶವು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪಡೆದ ಅನುಭವವಾಗಿದೆ. ಅವರು ನಾವು ಮೊದಲು ಮುಸಲ್ಮಾನರು ನಂತರ ಸಿದ್ದಿಗಳು ಎಂದು ಭಾವಿಸುತ್ತಾರೆ. ಇದೇ ರೀತಿಯ ಭಾವನೆಗಳು ಇತರ ಧರ್ಮದ ಸಿದ್ದಿ ಜನರಲ್ಲಿಯೂ ಇದೆ.

ಸಿದ್ದಿ ಮುಸಲ್ಮಾನರು ಸುನ್ನಿ ಪಂಗಡಕ್ಕೆ ಸೇರಿದ್ದು ಮುಸಲ್ಮಾನರ ಇತರ ಪಂಗಡಗಳಿಂದ ಪ್ರತ್ಯೇಕವಾಗಿದ್ದಾರೆ. ಅವರು ಸ್ಥಳೀಯ ಮುಸಲ್ಮಾನರ ಇತರ ಉಪ ಪಂಗಡಗಳಿಗಿಂತ ಪ್ರತ್ಯೇಕವಾದ ಮುಸಲ್ಮಾನರೆಂದು ಅವರೇ ಗುರುತಿಸಿಕೊಳ್ಳುತ್ತಾರೆ. ನಾವು ಪ್ರವಾದಿ ಮಹಮ್ಮದ್‌ನ ವಂಶಸ್ಥರು, ನಮ್ಮ ಗುರು ಪ್ರವಾದಿ ಮಹಮ್ಮದ್‌ರ ಶಿಷ್ಯರಾಗಿದ್ದ ಬಾಬಾಗೋರ್ ಎಂದು ಹೇಳಿಕೊಳ್ಳುತ್ತಾರೆ.

ಪ್ರಾರಂಭದಿಂದಲೂ ನಾವು ಮತಾಂತರಗೊಂಡ ಮುಸಲ್ಮಾನರಲ್ಲ ಎನ್ನುತ್ತಾರೆ. ಇಸ್ಲಾಮಿಕ್ ನಂಬಿಕೆಗಳಲ್ಲಿ ನಮ್ಮದೇ ಪ್ರತ್ಯೇಕ ವಿಭಾಗ ಎಂದು ಹೇಳಿಕೊಳ್ಳುತ್ತಾರೆ.

ಸಿದ್ದಿ ಮುಸಲ್ಮಾನರು ಇತರ ಮುಸಲ್ಮಾನರ ಹಾಗೆಯೇ ಇಸ್ಲಾಂ ಧರ್ಮವನ್ನು ಆಚರಿಸುತ್ತಾರೆ, ಆದಾಗ್ಯೂ, ಇವರೊಂದಿಗೆ ಸ್ಥಳೀಯ ಮುಸಲ್ಮಾನರು ವೈವಾಹಿಕ ಸಂಬಂಧವನ್ನು ಬೆಳೆಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ದೈಹಿಕವಾಗಿ ಅವರ ನೀಗ್ರೋ ಜನಾಂಗೀಯ ಲಕ್ಷಣಗಳು ಮತ್ತು ಸಿದ್ದಿ ಮುಸಲ್ಮಾನರು ಆಚರಿಸುವ ಹಿರಿಯರ ಪೂಜೆ ಈ ಅಂಶಗಳನ್ನು ಹೊರತುಪಡಿಸಿದರೆ ಇಸ್ಲಾಂ ಧರ್ಮ ಇತರ ಎಲ್ಲಾ ಆಚರಣೆಗಳನ್ನು ಸಿದ್ದಿ ಮುಸಲ್ಮಾನರೂ ಆಚರಿಸುತ್ತಾರೆ. ಹಿಂದೂ ಮತ್ತು ಕ್ರಿಶ್ಚಿಯನ್ ಸಿದ್ದಿಗಳಂತಲ್ಲದೇ ಮುಸ್ಲಿಂ ಸಿದ್ದಿಗಳು ತಮ್ಮ ಹೆಸರಿನ ನಂತರ ಮನೆತನದ ಹೆಸರನ್ನು ಸೂಚಿಸುವಾಗ ಸಿದ್ದಿ ಸಮುದಾಯಕ್ಕಿಂತ ಹೆಚ್ಚಾಗಿ ಮುಸ್ಲೀಂ ಸಮುದಾಯಕ್ಕೆ ಪ್ರಾಶಸ್ತ್ಯ ನೀಡುತ್ತಾರೆ.

ಸಿದ್ದಿ ಕ್ರಿಶ್ಚಿಯನ್ನರು ಕ್ಯಾಥೋಲಿಕ್ ಪಂಗಡಕ್ಕೆ ಸೇರಿದವರಾಗಿದ್ದಾರೆ. ಇವರು ಹೆಚ್ಚಾಗಿ ಹಳಿಯಾಳ ಚರ್ಚಿಗೆ ಮತ್ತು ಕೆಲವರು ಯಲ್ಲಾಪುರ ಚರ್ಚುಗಳಿಗೆ ಸೇರಿದವರಾಗಿದ್ದಾರೆ. ಈ ಚರ್ಚುಗಳು ಗೋವಾದ ಕ್ಯಾಥೋಲಿಕ್ ಚರ್ಚಿನಿಂದ ನಿಯಂತ್ರಿಸಲ್ಪಡುತ್ತವೆ. ಸಿದ್ದಿ ಮುಸಲ್ಮಾನರಂತಲ್ಲದೆ, ಕ್ರಿಶ್ಚಿಯನ್ ಸಿದ್ದಿಗಳು ಸ್ಥಳೀಯ ಸಿದ್ದಿಯೇತರ ಕ್ರಿಶ್ಚಿಯನ್ನರೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿಲ್ಲ. ಆದರೆ ಇಲ್ಲಿಯ ಸಿದ್ದಿ ಕ್ರಿಶ್ಚಿಯನ್ನರು ಸ್ಥಳೀಯ ಹಿಂದೂ ಕೆಳಜಾತಿಯ ಹುಡುಗಿಯರನ್ನು ವಿವಾಹವಾಗಿ ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಿಕೊಂಡ ನಿದರ್ಶನಗಳಿವೆ. ಕ್ರಿಶ್ಚಿಯನ್ ನಂಬಿಕೆಗೆ ವಿರುದ್ಧವಾಗಿ ಇವರೂ ಕೂಡ ಹಿರಿಯರ ಪೂಜೆ ಮಾಡುತ್ತಾರೆ. ಇದರಿಂದಾಗಿ ಸ್ಥಳೀಯ ಸಿದ್ದಿಯೇತರ ಕ್ರಿಶ್ಚಿಯನ್ನರು ಇವರ ಕ್ರೈಸ್ತಾಚರಣೆಯ ಬಗ್ಗೆ ಅಪನಂಬಿಕೆ ಹೊಂದಿದ್ದಾರೆ. ಸಿದ್ದಿ ಕ್ರಿಶ್ಚಿಯನ್ನರು ಹಿಂದೂ ಕೆಳಜಾತಿಗಳೊಂದಿಗೆ ಚರ್ಚುಗಳಲ್ಲಿ ವೈವಾಹಿಕ ಸಂಬಂಧವನ್ನೇರ್ಪಡಿಸಿ ಕೊಂಡು ಮನೆಗೆ ಹೋದ ನಂತರ ಮನೆಯಲ್ಲಿ ಹಿಂದೂ ಧರ್ಮದಂತೆ ಪುರೋಹಿತ್ಯವಿಲ್ಲದಿದ್ದರೂ ಹಿಂದೂ ಧರ್ಮದ ಆಚರಣೆಗಳನ್ನೂ ಮಾಡುತ್ತಾರೆ.

ಯಲ್ಲಾಪುರ ಮತ್ತು ಅಂಕೋಲ ತಾಲೂಕುಗಳ ಘಟ್ಟ ಪ್ರದೇಶಗಳಲ್ಲಿ ಇತರ ಹಿಂದೂ ಜಾತಿ ಸಮುದಾಯಗಳ ನಡುವೆ ಹಿಂದೂ ಸಿದ್ದಿಗಳು ಬದುಕುತ್ತಿದ್ದಾರೆ. ಇಲ್ಲಿನ ಸಿದ್ದಿಗಳು ಹಿಂದು ಧರ್ಮಕ್ಕೆ ಔಪಚಾರಿಕವಾಗಿ ಮತಾಂತರಗೊಂಡವರಲ್ಲ. ಹಿಂದೂಗಳು ಪ್ರಬಲರಾಗಿರುವ ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಅವರು ಹಿಂದೂಗಳ ಸಂಸ್ಕಾರಗಳು, ಕ್ರಿಯಾವಿಧಿಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ತಮ್ಮದನ್ನಾಗಿಸಿಕೊಂಡಿದ್ದಾರೆ. ಈ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿಲ್ಲ, ಈಗಲೂ ನಡೆಯುತ್ತಲೇ ಇದೆ. ಅವರಲ್ಲಿ ಕೆಲವರು ಮೃತ ದೇಹಗಳನ್ನು ಸುಡುತ್ತಾರೆ, ಮತ್ತೆ ಕೆಲವರು ಮಣ್ಣಿನಲ್ಲಿ ಹೂಳುತ್ತಾರೆ. ಮೃತದೇಹಗಳನ್ನು ಹೂಳುವುದರ ಬದಲು ಸುಡುವ ಪದ್ಧತಿ ಇತ್ತೀಚಿನದಾಗಿದೆ. ಪ್ರಾಯಶಃ ಹವ್ಯಕ ಬ್ರಾಹ್ಮಣ ಪುರೋಹಿತರ ಸಲಹೆಗಳಿಂದ ಇದನ್ನು ಆಚರಿಸುತ್ತಿದ್ದಾರೆ. ಹವ್ಯಕ ಬ್ರಾಹ್ಮಣರು ಸಿದ್ದಿಗಳಿಗೆ ಹೇಳಿರುವ ಪ್ರಕಾರ ಸತ್ತ ವ್ಯಕ್ತಿಗಳ ಮೃತ ದೇಹಗಳನ್ನು ಸುಟ್ಟು ಅದರ ಭಸ್ಮವನ್ನು ಈ ಭಾಗದ ಯಾತ್ರ ಸ್ಥಳವಾಗಿರುವ ಗೋಕರ್ಣ

ತಲುಪುವ ಬೇಡ್ತಿ ನದಿಗೆ ಬಿಟ್ಟರೆ ಅವರು ಸ್ವರ್ಗಕ್ಕೆ ಹೋಗುತ್ತಾರೆ. ಹಿಂದೂ ಸಿದ್ದಿಗಳು ಉಪಕಾರ ಬದ್ಧತೆಯಿಂದ ಸಾಧು ಮಠಕ್ಕೆ ಅವರು ನಿಷ್ಠರಾಗಿ ನಡೆದುಕೊಂಡು ಕಾಣಿಕೆಯನ್ನು ಕೊಡುತ್ತಾರೆ. ಕೆಲವು ವರ್ಷಗಳ ಹಿಂದೆ ಸ್ವಾಮಿಜಿಗಳ ಶಿಷ್ಯರು ಸಿದ್ದಿಗಳನ್ನು ಮಠಕ್ಕೆ ಕರೆದುಕೊಂಡು ಹೋಗಿ ಪ್ರತಿ ವರ್ಷ ಹಬ್ಬದ ಆಚರಣೆ ಮಾಡಿಸುತ್ತಿದ್ದರು. ಮಠದೊಂದಿಗಿನ ವಿವಾದದಿಂದಾಗಿ ಆಚರಣೆ ಈಗ ನಡೆಯುತ್ತಿಲ್ಲ ಎಂದು ಸಿದ್ದಿ ಸಮುದಾಯದ ಹಿರಿಯ ವ್ಯಕ್ತಿಗಳು ಹೇಳುತ್ತಾರೆ.

ಹಿಂದೂ ಸಿದ್ದಿಗಳಲ್ಲಿ ಕೆಲವರು ಹಂದಿ ಮಾಂಸವನ್ನು ತಿನ್ನುತ್ತಾರೆ, ಸಂಪ್ರದಾಯಸ್ಥರಾಗಿರುವ ಕೆಲವು ಹಿಂದಿನ ತಲೆಮಾರಿನವರು ಹಂದಿ ಮಾಂಸವನ್ನು ಸೇವಿಸುವುದಿಲ್ಲ. ಆದ್ದರಿಂದ ಯಾರು ಹಂದಿ ಮಾಂಸವನ್ನು ಸೇವಿಸುವುದಿಲ್ಲವೋ ಅವರು ಮೂಲತಃ ಹಿಂದುಗಳು, ಅದನ್ನು ಸೇವಿಸುವವರು ಮೂಲತಃ ಮುಸಲ್ಮಾನರಾಗಿದ್ದು, ನಂತರ ಹಿಂದೂ ಧರ್ಮವನ್ನು ಇತ್ತೀಚಿಗೆ ಒಪ್ಪಿಕೊಂಡು ಆಚರಿಸತ್ರತಾರೆ. ಇದಕ್ಕೆ ಪುಷ್ಠಿ ನೀಡುವಂತೆ ಇವರಲ್ಲಿ ಕೆಲವರ ಹೆಸರುಗಳು ಜುಮ್ಮ, ಫಕೀರ ಇಸ್ಮಾಯಿಲ್‌ನಂತಹ ಮುಸ್ಲಿಂ ಹೆಸರುಗಳಿವೆ. ಸಿದ್ದಿ ಸಂಪ್ರದಾಯದ ಪ್ರಕಾರ ಅಜ್ಜನ ಹೆಸರನ್ನು ಅವನು ಸತ್ತ ನಂತರ ಅವರ ಜ್ಞಾಪಕಾರ್ಥವಾಗಿ ಅವನ ಮೊಮ್ಮಕ್ಕಳಿಗೆ ಇಡುತ್ತಾರೆ. ಈಗಲೂ ಅವರು ಪುನರ್ಜನ್ಮ ನಂಬಿಕೆ ಇಟ್ಟಿರುವುದರಿಂದ ಸತ್ತವರು ಪುನಃ ಅದೇ ಕುಟುಂಬದಲ್ಲಿ ಹುಟ್ಟುತ್ತಾರೆ ಎಂಬ ನಂಬುಕೆ ಈ ಜನಾಂಗೀಯ ಸಮುದಾಯದಲ್ಲಿದೆ.

ಪ್ರಸ್ತುತ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿರುವ ಮಾಹಿತಿಗಳ ಮತ್ತು ಕಿರಣ್ ಕಮಲ್ ಪ್ರಸಾದ ಅವರು "ಇನ್ ಸರ್ಚ್ ಆಫ್ ಅನ್ ಐಡೆಂಟಿಟಿ"ಯಲ್ಲಿ ಉಲ್ಲೇಖಿಸಿರುವ ಪ್ರಕಾರ ಸಿದ್ದಿ ಜನರು ಗೋವಾ ರಾಜ್ಯದಿದಂದ ಗುಲಾಮಿತನದ ಕಪಿಮುಷ್ಠಿಯಿಂದ ತಪ್ಪಿಸಿಕೊಂಡು ಬಂದಾಗ ಅವರಿಗೆ ಧರ್ಮದ ಬಗ್ಗೆ ತಿಳುವಳಿಕೆಯಾಗಲಿ ಕಾಳಜಿಯಾಗಲಿ ಇರಲಿಲ್ಲ ಎನ್ನುವುದು ಕಂಡುಬಂದಿದೆ. ಆದರೆ, ಸಿದ್ದಿ ಜನರು ಗೋವಾದಿಂದ ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿ ಬಂದು ಇಲ್ಲಿನ ಸ್ಥಳೀಯ ಹವ್ಯಕ ಬ್ರಾಹ್ಮಣರು, ಮರಾಠರು ಮತ್ತು ಲಿಂಗಾಯತ ಸಮುದಾಯಗಳ ಸಂಪರ್ಕದಿಂದ ಹಿಂದುಗಳಾಗಿದ್ದಾರೆ. ಪೋರ್ಚ್‌ಗೀಸರ ಮೂಲಕ ವ್ಯಾಪಾರದ ಸರಕುಗಳಾಗಿ ಭಾರತಕ್ಕೆ ಬಂದು, ಕರ್ನಾಟಕ ಮತ್ತು ಗೋವಾ ರಾಜ್ಯಗಳಲ್ಲಿ ಕ್ರೈಸ್ತ ಮಿಶನರಿಗಳ ಸಂಪರ್ಕಕಕ್ಕೆ ಬಂದು ಕ್ರೈಸ್ತರಾಗಿದ್ದಾರೆ. ಈಗಲೂ ಕ್ರೈಸ್ತ ಮಿಶನರಿಗಳು ಈ ಜನಾಂಗದವರಿಗೆ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವುದರ ಮೂಲಕ ಮತಾಂತರವನ್ನು ಮಾಡುತ್ತಿದ್ದಾರೆ. ಹಾಗೆಯೇ ಹೈದರಾಬಾದಿನ ನಿಜಾಮರ ಸೈನ್ಯದಲ್ಲಿ ಸೈನಿಕರಾಗಿ ಸೇವೆಗೆ ಸೆರಿದ ಸಿದ್ದಿಗಳು ಮತ್ತು ಅರಬ್ ವರ್ತಕ ಸಂಪರ್ಕ ಪಡೆದಿದ್ದವರು ಮುಸ್ಲಿಂ ಧರ್ಮದ ಅನುಯಾಯಿಗಳಾಗಿರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುತ್ತದೆ.

ಆದರೆ ಮೂರು ಧರ್ಮದ ಸ್ಥಳೀಯರು ಸಿದ್ದಿಯರನ್ನು ಸಂಖ್ಯಾದೃಷ್ಟಿಯಿಂದ ತಮ್ಮ ಧರ್ಮದ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಮಾತ್ರ ಇವರನ್ನು ತಮ್ಮ ತಮ್ಮ ಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ. ಸಿದ್ದಿಯರ ವಿಚಾರದಲ್ಲಿ ಮೂರು ಧರ್ಮದ ಸ್ಥಳೀಯರು, ಸಾಮಾಜಿಕವಾಗಿ

ಸಾಂಸ್ಕೃತಿಕವಾಗಿ ಜನಾಂಗೀಯವಾಗಿ ಮತ್ತು ವೈವಾಹಿಕ ವಿಚಾರಗಳಲ್ಲಿ ಅವರನ್ನು ಪ್ರತ್ಯೇಕವಾಗಿಯೇ ಕೀಳು ಮನೋಭಾವನೆಯಿಂದ ಕಾಣುತ್ತಿದ್ದಾರೆ.

ಹಿಂದು ಸಿದ್ದಿ ಮಹಿಳೆಯರನ್ನು ಸಿದ್ದಿಯೇತರ ಹಿಂದುಗಳು ಮದುವೆಯಾಗಿ ವೈವಾಹಿಕ ಸಂಬಂಧ ಬೆಳೆಸಲು ಒಪ್ಪುವುದಿಲ್ಲ. ಅದೇ ರೀತಿ ಮುಸ್ಲಿಂ ಸಿದ್ದಿಯರನ್ನು ಸಿದ್ದಿಯೇತರ ಮುಸ್ಲಿಂರನ್ನು ವಿವಾಹವಾಗಲೂ ನಿರಾಕರಿಸುತ್ತಾರೆ. ಹಾಗೆಯೇ ಮೂಲ ಕ್ರೈಸ್ತರಾಗಲಿ, ಹಿಂದೂ ಧರ್ಮದ ಕೆಳಜಾತಿಗಳಿಂದ ಮತಾಂತರಗೊಂಡ ಕ್ರಿಶ್ಚಿಯನ್‌ರಾಗಲಿ ಸಿದ್ದಿ, ಯುವಕ ಯುವತಿಯರನ್ನು ವಿವಾಹವಾಗುತ್ತಿಲ್ಲ. ಈ ಮೂರು ಧರ್ಮದವರು ತಮ್ಮದೇ ಧರ್ಮ ಅನುಸರಿಸುತ್ತಿರುವ ಸಿದ್ದಿಯರೊಂದಿಗೆ ವೈವಾಹಿಕ ಸಂಬಂಧ ಹೊಂದದೇ ಇರಲು ಕಾರಣ, ಸಿದ್ದಿಯರ ವಿದೇಶಿ ಮೂಲ, ದೇಹದ ರಚನೆ ಮತ್ತು ಕಪ್ಪು ಚರ್ಮ, ಒಟ್ಟಾರೆ ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಕೆಳಜಾತಿಯ ಜನರು ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಅಸ್ಪೃಶ್ಯರೆಂಬ ಕೀಳಿರಿಮೆ ಭಾವನೆಯನ್ನ ಹೊಂದಿರುವಂತೆ ಸಿದ್ದಿಯರು ಇವುಗಳ ಜೊತೆಗೆ ಜನಾಂಗೀಯ ಹೊರಗಣತನದಿಂದಲೂ ನರಳುತ್ತಿರುವುದು ಈ ಅಧ್ಯಯನದಿಂದ ಹೊರಬಂದಿರುವ ಒಂದು ಪ್ರಮುಖ ಅಂಶವಾಗಿದೆ.

ವಿವಾಹ

ಹಿರಿಯರ ಆಶೀರ್ವಾದದಿಂದ ಬಂದಂತಹ ವಿವಾಹವು ಸಿದ್ದಿಗಳಿಗೆ ಕಡ್ಡಾಯವಾಗಿರುತ್ತದೆ. ವಿವಾಹಯೋಗ್ಯ ವಯಸ್ಸಾದವರು ಅವಿವಾಹಿತರಾಗಿಯೇ ಉಳಿಯುವುದು ಯೋಚನೆಗೆ ನಿಲುಕದ ವಿಷಯವಾಗಿದೆ. ಅವಿವಾಹಿತನಾಗಿ ಉಳಿಯುವ ವ್ಯಕ್ತಿ ಸಾರ್ವಜನಿಕವಾಗಿ ನಿಂದನೆಗೆ ಒಳಗಾಗುತ್ತಾನೆ. ಅಂದರೆ ಪುರುಷನಿರಲಿ ಮಹಿಳೆಯರಿರಲಿ ಕೌಟುಂಬಿಕ ಜೀವನದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ, ಇತ್ತೀಚಿಗೆ ಅನಾರೋಗ್ಯ ಕಾರಣದಿಂದ ಮತ್ತು ಹಣಕಾಸಿನ ತೊಂದರೆಗಳಿಂದ ವಿವಾಹವನ್ನು ಮುಂದೂಡುತ್ತಿರುವುದು ಕಂಡುಬಂದಿದೆ, ಆದ್ದರಿಂದ ವಿವಾಹದ ವಯಸ್ಸು ಹೆಚ್ಚಾಗಿದೆ. ಈ ಸಮುದಾಯದಲ್ಲಿ ಬಾಲ್ಯವಿವಾಹದ ಆಚರಣೆ ಇಲ್ಲ, ಇದನ್ನು ಹಿರಿಯರು ಅನೈತಿಕವೆಂದು ಪರಿಗಣಿಸುತ್ತಾರೆ.

ಹಿಂದೂ ಸಿದ್ದಿಗಳು ಮತ್ತು ಕ್ರಿಶ್ಚಿಯನ್ ಸಿದ್ದಿಗಳಲ್ಲಿ ಏಕಪತ್ನಿತ್ವ ವಿವಾಹವು ಆಚರಣೆಯಲ್ಲಿದ್ದರೆ, ಮುಸ್ಲಿಂ ಸಿದ್ದಿಗಳಿಗೆ ಬಹು ಪತ್ನಿತ್ವ ವಿವಾಹಕ್ಕೆ ಅವಕಾಶವಿದೆ. ಒಂದು ವೇಳೆ ಮೊದಲನೇ ಹೆಂಡತಿ ಮರಣ ಹೊಂದಿದರೆ, ಅಥವಾ ಆಕೆಗೆ ಬಂಜೆತನವಿದ್ದರೆ ಎರಡನೆ ವಿವಾಹವಾಗಲು ಅವಕಾಶವಿದೆ. ಸಂಪ್ರದಾಯದ ಪ್ರಕಾರ ವಿಧವೆಯರ ಪುನಃವಿವಾಹಕ್ಕೆ ಅವಕಾಶವಿರುವಿದಿಲ್ಲ, ಆದರೆ ವಿಧವೆಯು ವಿಧುರನನ್ನು ವಿವಾಹವಾಗಬಹುದಾಗಿದೆ. ಇಂತಹ ವಿವಾಹಗಳನ್ನು ಉಡಿ ಎಂದು ಕರೆಯಲಾಗುತ್ತದೆ ಮತ್ತು ಇಂತಹ ವಿವಾಹಗಳು ಅಪರೂಪಕ್ಕೆಂಬಂತೆ ನಡೆಯುತ್ತವೆ.

ಸಿದ್ದಿ ಸಮುದಾಯದ ವಿವಾಹ ಸಂಪ್ರದಾಯಗಳ ಬಗ್ಗೆ ಕ್ಷೇತ್ರ ಕಾರ್ಯವು ಹೆಚ್ಚಿನ ಮತ್ತು ಆಸಕ್ತಿದಾಯಕ ಅಂಕಿ-ಅಂಶಗಳನ್ನು ಒದಗಿಸುತ್ತವೆ. ಶೇ. ೭೭ರಷ್ಟು ಕುಟುಂಬಗಳು ಏಕ ಪತ್ನಿ ವ್ಯವಸ್ಥೆಯನ್ನು ಹೊಂದಿರುವ ಲಕ್ಷಣ ಗಮನಾರ್ಹ. ಆದಾಗ್ಯೂ ಶೇ. ೧೫ರಷ್ಟು ಕುಟುಂಬಗಳಲ್ಲಿ

ಬಹು ಪತ್ನಿತ್ವ ವ್ಯವಸ್ಥೆ ಇರುವುದು ಕುಟುಂಬದ ಸಾಮರಸ್ಯ ಜೀವನವನ್ನು ತಿಳಿಸಿಕೊಡುತ್ತದೆ. ಇದು ಆಧುನಿಕತೆಯ ತೆಕ್ಕೆಯಲ್ಲಿ ಈ ಸಮುದಾಯ ಜೀವಿಸುತ್ತಿದ್ದರೂ, ತಮ್ಮ ಕುಟುಂಬದ ವೈವಾಹಿಕ ಸ್ಥಾನಮಾನವನ್ನು ಸಾಂಪ್ರದಾಯಿಕ ನೆಲೆಯಲ್ಲಿಯೇ ಉಳಿಸಿಕೊಂಡು ಮುಂದುವರಿಸಿಕೊಂಡು ಬಂದಿರುವುದರ ಕುರಿತಾದ ಅಗತ್ಯವನ್ನು ಹೇಳುತ್ತದೆ.

ವಿವಾಹದಲ್ಲಿ ವಧು-ವರರನ್ನು ಆಯ್ಕೆ ಮಾಡುವಾಗ ಸಂಬಂಧಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಹತ್ತಿರದ ಸಂಬಂಧಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗುತ್ತದೆ. ಅಕ್ಕನ ಮಗಳು, ತಂದೆಯ ಸಹೋದರಿಯ ಮಗಳು, ಅಥವಾ ತಾಯಿಯ ಸಹೋದರರ ಮಕ್ಕಳುಗಳ ನಡುವೆ ವಿವಾಹ ಮಾಡುವುದು ಸಾಮಾನ್ಯವಾಗಿ ಆಚರಣೆಯಲ್ಲಿದೆ. ಇಂತಹ ಸಹೋದರ ಸಂಬಂಧಿಗಳ ನಡುವಿನ ವೈವಾಹಿಕ ಸಂಬಂಧಗಳನ್ನು ಕಡೆಗಣಿಸಿದರೆ, ಕುಟುಂಬಗಳ ನಡುವೆ ವಿವಾದಗಳೇರ್ಪಡುತ್ತಿದ್ದವು ಮತ್ತು ಅಪಹರಣ ಮಾಡಿಕೊಂಡು ಹೋಗಿ ವಿವಾಹ ಮಾಡುತ್ತಿದ್ದ ಪ್ರಸಂಗಗಳು ನಡೆಯುತ್ತಿರುತ್ತವೆ ಎಂದು ಸಮೂಹದ ಹಿರಿಯರು ಹೇಳುತ್ತಾರೆ. ಕ್ರಿಶ್ಚಿಯನ್ ಸಿದ್ದಿಗಳಿಗೆ ಸಂಬಂಧಿಸಿದಂತೆ, ಆ ಧರ್ಮದ ಸಾಮಾನ್ಯ ನಿಯಮದಂತೆ ಒಂದು ಪ್ರಮಾಣದ ವರೆಗಿನ ಹತ್ತಿರದ ಸಂಬಂಧಿಗಳ ನಡುವಿನ ವೈವಾಹಿಕ ಸಂಬಂಧಗಳಿಗೆ ಅವಕಾಶವಿರುವುದಿಲ್ಲ. ಅದರೆ ಸಿದ್ದಿ ಸಮೂಹದ ಸಂಪ್ರದಾಯ ಮತ್ತು ಪದ್ಧತಿಗಳಿಗೆ ಅನುಗುಣವಾಗಿ ಹತ್ತಿರದ ರಕ್ತ ಸಂಬಂಧಿಗಳ ನಡುವಿನ ವಿವಾಹಕ್ಕೆ ಅನುಮತಿ ಇದೆ ಎಂಬುದು ಕ್ಷೇತ್ರಕಾರ್ಯದಲ್ಲಿನ ಸಮೂಹದ ಜನರ ಸಂದರ್ಶನದ ಸಂದರ್ಭದಲ್ಲಿ ತಿಳಿದುಬಂದಿದೆ. ಇದಕ್ಕೆ ಪೂರಕವಾಗಿ ಟಿ.ಸಿ. ಫಾಲಾಕ್ಷಪ್ಪನವರ ಅಧ್ಯಯನದಿಂದ ತಿಳಿದುಬರುವಂತೆ ಕ್ರೈಸ್ಥ ಸಿದ್ದಿಯರು ಇಂತಹ ವೈವಾಹಿಕ ಸಂಬಂಧ ಮಾಡುವುದಕ್ಕಿಂತ ಮೊದಲು ಸಿದ್ದಿಗಳ ಕುಟುಂಬದ ದೇವರಾದ ಹಿರಿಯರ ಅಥವಾ ಮನೆದೇವರ ಮುಂದೆ ಮೂರು ಮೇಣದ ಬತ್ತಿಗಳನ್ನು ಹಚ್ಚಿ, ಚಿಕ್ಕ ಮಕ್ಕಳಿಗೆ ಆ ಮೇಣದ ಬತ್ತಿಗಳನ್ನು ಆರಿಸಲು ಹೇಳಿ ನಂದಿಸುತ್ತಿದ್ದರು. ಇದರೊಂದಿಗೆ ಅವರ ರಕ್ತ ಸಂಬಂಧ ಕೊನೆಗೊಳ್ಳುತ್ತದೆ ಎಂದು ನಂಬುತ್ತಿದ್ದರು. ನಂತರ ವಧು ವರರನ್ನು ನೈಜವಾದ ವಿವಾಹದ ಆಚರಣೆಗಳಿಗೆ ಒಳಪಡಿಸುತ್ತಿದ್ದರು. ಇಂತಹ ಸಹೋದರ ಸಂಬಂಧಿಗಳಲ್ಲಿ ವೈವಾಹಿಕ ಸಂಬಂಧ ಮಾಡುವ ಪ್ರಮುಖ ಉದ್ದೇಶವೇನೆಂದರೆ, ಕೌಟುಂಬಿಕ ಹೊಣೆಗಾರಿಕೆ ಮತ್ತು ಸಂಬಂಧಿಕರ ನಡುವಿನ ವೈವಾಹಿಕ ಸಂಬಂಧಗಳು ಶಾಶ್ವತವಾಗಿರುತ್ತವೆ ಎಂಬ ನಂಬಿಕೆಯಾಗಿದೆ.

ಸೋದರ ಸಂಬಂಧಿಗಳ ಹೊರಗೆ ಹೊಸದಾಗಿ ವೈವಾಹಿಕ ಸಂಬಂಧಗಳನ್ನು ಮಾಡುವಾಗ ವಧು ವರರ ಕೌಟುಂಬಿಕ ಹಿನ್ನೆಲೆ, ದೈಹಿಕ ಸಾಮರ್ಥ್ಯ, ವೈಯಕ್ತಿಕ ಗುಣಗಳು ಮತ್ತು ಆರೋಗ್ಯಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿತ್ತು. ಹೆಣ್ಣುಮಕ್ಕಳು ದೈಹಿಕ ಕೆಲಸ ಮಾಡುವುದು ಮತ್ತು ಮಕ್ಕಳನ್ನು ಹೆರಬೇಕಾಗಿರುವುದರಿಂದ ಅವರ ಆರೋಗ್ಯಕ್ಕೆ ಮಹತ್ವ ನೀಡಿ ವಿವಾಹ ಮಾಡಿಕೊಳ್ಳುತ್ತಾರೆ. ವ್ಯಕ್ತಿಯು ಉತ್ತಮ ನೈತಿಕತೆಯುಳ್ಳವನಾಗಿರಬೇಕು, ವಿವಾಹವಾಗುವ ಹುಡುಗ ಮತ್ತು ಹುಡುಗಿಯರು ಉತ್ತಮ ಚಾರಿತ್ರ್ಯವುಳ್ಳವರಾಗಿರುವುದರ ಜೊತೆಗೆ, ಸಂಬಂಧಪಟ್ಟ ಕುಟುಂಬದ ಎಲ್ಲಾ ಸದಸ್ಯರೂ ಉತ್ತಮ ಚಾರಿತ್ರ್ಯವಂತರಾಗಿರಬೇಕೆಂಬ ನಿರೀಕ್ಷೆಯಿರುತ್ತದೆ.

ವಿವಾಹವಾಗುವ ಹುಡುಗ ಹುಡುಗಿಯರು ಸಂಬಂಧಿಗಳಾಗಿದ್ದರೆ, ವೈವಾಹಿಕ ಮಾತುಕತೆಗಳ ಪ್ರಾರಂಭವು ಯಾವುದೇ ಕಡೆಯಿಂದಲಾದರೂ ಪ್ರಾರಂಭವಾಗಬಹುದಾಗಿತ್ತು, ಇದನ್ನು ಸಂಬಂಧಿಕರ ಕಡೆಯಿಂದ ಕುಟುಂಬಗಳಿಂದ ಹೊರಗೆ ಏರ್ಪಡಿಸುವಾಗ ಮೊದಲು ಮಧ್ಯವರ್ತಿಗಳ ಮೂಲಕ ಅನೌಪಚಾರಿಕವಾಗಿ ಮಾತುಕತೆ ಮುಗಿಸಿ ಒಪ್ಪಿಗೆಯಾದ ಮೇಲೆ, ಹುಡುಗಿಯ ಮನೆಯಲ್ಲಿ ಔಪಚಾರಿಕವಾಗಿ ಅಧಿಕೃತ ಮಾತುಕತೆಗಳಾಗುತ್ತವೆ. ನಂತರ ವಿವಾಹದ ಆಚರಣೆಯ ದಿನ ನಿಗದಿಯಾಗುತ್ತದೆ. ಅದಕ್ಕೂ ಮೊದಲು ಎಲ್ಲರಗೂ ಒಪ್ಪಿಗೆಯಾದ ಮೇಲೆ ಮದುವೆಯಾಗುವ ಹುಡುಗನ ಕಡೆಯವರು ಮದುಮಗಳ ಮನೆಗೆ ಹೂವು ಹಣ್ಣುಗಳನ್ನು ತಟ್ಟೆಯಲ್ಲಿಟ್ಟು ಹುಡುಗಿಯ ಪೋಷಕರಿಗೆ ಕೊಟ್ಟು ಹಾಲು ಅನ್ನ ಉಣ್ಣಲಿಕ್ಕೆ ಬಂದಿದ್ದೇವೆ ಎಂದು ಹೇಳುತ್ತಾರೆ. ಹುಡುಗಿಯ ಪೋಷಕರು ಆಯಿತು ಎಂದು ಹೇಳಿದರೆ ಮದುವೆಯ ನಿಶ್ಚಿತಾರ್ಥ ಕಾರ್ಯ ನಡೆಯುತ್ತದೆ. ಈ ಆಚರಣೆಯನ್ನು ಮದುವೆಯಾಗುವ ಹುಡುಗನ ಸಹೋದರಿಯರು ಸೇರಿ ಸರಳವಾಗಿ ಬೆಳ್ಳಿಯಿಂದ ಮಾಡಿದ ಹೂವನ್ನು ಕೊಟ್ಟು ನೆರವೇರಿಸುತ್ತಾರೆ. ಇದರೊಂದಿಗೆ ಹುಡುಗ ವಿವಾಹದ ಮಾರುಕಟ್ಟೆಯಿಂದ ಹೊರಬಂದು, ವಿವಾಹದ ದಿನವನ್ನು ನಿಗದಿಪಡಿಸುತ್ತಾರೆ.

ಸಿದ್ದಿ ಸಮೂಹದಲ್ಲಿ ವಿವಾಹದ ಸಮಯದಲ್ಲಿ ಹೆಣ್ಣು ಕರ(ತೆರ) ಕೊಡುವುದು ಸಂಪ್ರದಾಯ, ಹೆಣ್ಣು ಕರದ ಮೊತ್ತವನ್ನು ನಿಶ್ಚಿತಾರ್ಥಕ್ಕಿಂತಲೂ ಮೊದಲೇ ನಿರ್ಧರಿಸಿ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಇದರ ಮೊತ್ತವನ್ನು ಮಾತುಕತೆ ಮತ್ತು ವ್ಯಕ್ತಿಗಳನ್ನು ಪರಿಗಣಿಸಿ ನಿಗದಿ ಮಾಡಲಾಗುತ್ತದೆ. ಹೆಣ್ಣು ಕರದ ಹಣವನ್ನು ಮದುಮಗಳ ತಂದೆಗೆ ಅಥವಾ ಆಕೆಯ ಪೋಷಕರಿಗೆ ಅವಳನ್ನು ಸಾಕಿ ಸಲಹಿದ್ದಕ್ಕಾಗಿ ಕೃತಜ್ಞತಾಪೂರ್ವಕವಾಗಿ ಕೊಡಲಾಗುತ್ತದೆ. ಮದುಮಗಳ ಮನೆಯವರಿಗೆ ಆ ಕುಟುಂಬದ ಕೆಲಸ ಮಾಡುವ ಒಬ್ಬಳು ಸದಸ್ಯೆ ಮನೆ ಬಿಟ್ಟು ಹೋಗುವುದರಿಂದಾಗಿ ಹೆಣ್ಣುಕರ ಕೊಡಲಾಗುತ್ತದೆ. ಹೆಣ್ಣು ಕರ ಕೊಡುವುದು ಘನತೆಯ ಸಂಕೇತವೆಂದು ಅವರು ಭಾವಿಸಿರುವುದರಿಂದ ಯಾರೂ ಕೂಡ ಅದನ್ನು ಕೊಡದೇ ಯಾವ ಹುಡುಗಿಯನ್ನೂ ವಿವಾಹವಾಗುವುದಿಲ್ಲ. ಹೆಣ್ಣು ಕರದ ಮೊತ್ತ ಹೆಚ್ಚಾದಷ್ಟೂ ಅವರ ಘನತೆ ಹೆಚ್ಚುವುದೆಂದು ಅವರು ನಂಬಿದ್ದಾರೆ. ನಾನು ಕ್ಷೇತ್ರ ಕಾರ್ಯ ಮಾಡುವಾಗ ಈ ಆಚರಣೆಯ ಬಗ್ಗೆ ಟೀಕೆಗಳು ವ್ಯಕ್ತವಾದವು, ಇದರಿಂದಾಗಿ ವಿವಾಹವು ಒಂದು ವ್ಯವಹಾರವಾಗುತ್ತಿದೆ ಮತ್ತು ಕುಟುಂಬದ ಐಕಮತ್ಯಕ್ಕೆ ಮಾರಕವಾಗುತ್ತಿದೆ, ಇದು ಸಿದ್ದಿಗಳನ್ನು ಸ್ಥಳೀಯ ಲೇವಾದೇವಿದಾರರ ಗುಲಾಮರನ್ನಾಗಿಸುತ್ತಿದೆ ಎಂಬ ಟೀಕೆಗಳು ಕೇಳಿಬಂದಿವೆ. ಸಾಮಾನ್ಯ ವಾಗಿ ಬಡ ಕುಟುಂಬದವರಿಗೆ ಇದಕ್ಕಾಗಿ ಹಣ ಉಳಿಸಿ ಮದುವೆ ಮಾಡಲು ಕಷ್ಟವಾಗುವುದರಿಂದ ಸ್ಥಳೀಯ ಲೇವಾದೇವಿದಾರರಿಂದ ಹಣ ಪಡೆದು ಅವರ ಮನೆಯ ಜೀತದಾಳುಗಳಾಗಿ ದುಡಿಯುತ್ತಾರೆ, ಅಥವಾ ಅತಿಯಾದ ಬಡ್ಡಿ ಕೊಡುತ್ತಾರೆ. ಇಲ್ಲದಿದ್ದರೆ ಜೀವನಪರ್ಯಂತ ಗುಲಾಮರಾಗುತ್ತಾರೆ ಅಥವಾ ಇದ್ದ ಅಲ್ಪ ಸ್ವಲ್ಪ ಭೂಮಿಯನ್ನು ಕಳೆದುಕೊಳ್ಳುತ್ತಾರೆ.

ಸಾಮಾಜಿಕ ಸ್ಥಿತಿಗತಿ

ಸಿದ್ದಿ ಜನಾಂಗದವರ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಅವರ ಸಾಮಾಜಿಕ ಮತ್ತು ಜನಾಂಗೀಯ ಹೊರಗಣತನದಿಂದ ನರಳುತ್ತಿರುವ ಸಿದ್ದಿಯರನ್ನು ಸ್ಥಳೀಯ ಮೇಲ್ಜಾತಿಯ ಜನರೂ ಇವರನ್ನು ಸಮನವಾಗಿ ಕಾಣುತ್ತಿಲ್ಲ ಎಂಬ ಅಂಶವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಬಡತನ, ಅನಾರೋಗ್ಯ, ಮಹಿಳೆಯರ ಮೇಲಿನ ಧೌರ್ಜನ್ಯ, ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಬಗೆಗೆ ಉದಾಸೀನತೆ ಮತ್ತು ಹೆಚ್ಚು ಬಡ್ಡಿಗೆ ಲೇವಾದೇವಿದಾರರಿಂದ ಸಾಲ ಇವುಗಳಿಂದಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಗಿನ ಸ್ಥಾನವನ್ನು ಹೊಂದಿದ್ದಾರೆ. ಹಿಂದು ಸಿದ್ದಿಯರನ್ನು, ಪರಿಶಿಷ್ಟ ಜಾತಿ ಮತ್ತು ಇತರ ಬುಡಕಟ್ಟಾಗಳು ಮತ್ತು ಕೆಳಜಾತಿಯ ಜನರು ಇವರನ್ನು ನಿಕೃಷ್ಟವಾಗಿ ಕಾಣುತ್ತಾರೆ. ವಿಶೇಷವೆಂದರೆ ಹವ್ಯಕ ಬ್ರಾಹ್ಮಣರು ಸಿದ್ದಿಯರನ್ನು ಮನೆಯ ದೇವರ ಕೋಣೆಯನ್ನು ಹೊರತುಪಡಿಸಿ ಬೇರೆ ಎಲ್ಲಾ ಕಡೆ ಇವರಿಂದ ಸ್ವಚ್ಛ ಮಾಡಿಸುತ್ತಾರೆ. ಆದರೆ ಪರಿಶಿಷ್ಟ ಜಾತಿ ಮತ್ತು ಇತರ ಕೆಳ ಹಿಂದೂ ಕೆಳಜಾತಿಯ ಜನರನ್ನು ಮನೆಯ ಒಳಗಡೆ ಸೇರಿಸಿಕೊಳ್ಳುವುದಿಲ್ಲ. ಈ ಒಂದು ಕಾರಣದಿಂದ, ಕೆಲವು ಹಿಂದು ಸಿದ್ದಿಯರು ನಾವು ಹಿಂದೂ ಧರ್ಮದ ಕೆಳಜಾತಿಯವರಿಗಿಂತ ಶ್ರೇಷ್ಠ ಎಂದು ಭಾವಿಸಿದ್ದಾರೆ. ಒಟ್ಟಾರೆ ಸಿದ್ದಿಯರನ್ನು ಉತ್ತರ ಕನ್ನಡ ಜಿಲ್ಲೆಯ ಇತರ ಬುಡಕಟ್ಟು ಮತ್ತು ಜಾತಿಯವರು ನಮ್ಮನ್ನು ಕೀಳಾಗಿ ಕಾಣುತ್ತಿರುವುದನ್ನು ಅರ್ಥಮಾಡಿಕೊಂಡು ತಮ್ಮನ್ನು ತಾವೇ ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಶೈಕ್ಷಣಿಕವಾಗಿ ಉನ್ನತಿ ಹೊಂದಿ, ಆರ್ಥಿಕವಾಗಿ ಸ್ವಾವಲಂಬಿಗಳಾಗುವುದರ ಮೂಲಕ ಸಾಮಾಜಿಕ ಏಣಿಶ್ರೇಣಿಯಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಳ್ಳ ಬೇಕೆಂಬ ಅರಿವನ್ನು ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ. ಈ ಅಂಶಗಳನ್ನು ದೃಢೀಕರಿಸುವಂತೆ ಮಾಹಿತಿದಾರರಲ್ಲಿ ಶೇ. ೫೨ರಷ್ಟು ಜನರು, ದೇವಾಲಯಗಳಿಗೆ ಹೋಗುತ್ತೇವೆ ಎಂದು ಹೇಳಿದ್ದಾರೆ. ಉಳಿದವರು ಯಾವುದೇ ಅಭಿಪ್ರಾಯ ನೀಡಿರುವುದಿಲ್ಲ.

'ಸ್ಟ್ರಾಟಿಫಿಕೇಷನ್ ಅಮಾಂಗ್ ಇಂಡಿಯನ್ ಟ್ರೈಬ್ಸ್' ಎಂಬ ಸಂಶೋಧನಾ ಪ್ರಬಂಧದಲ್ಲಿ ಪ್ರದೀಪ್ ಕುಮಾರ್ ಬೋಸ್ ರವರು, ಭಾರತದ ಬುಡಕಟ್ಟುಗಳಲ್ಲಿ ಜಾತಿ ಏಣಿ-ಶ್ರೇಣಿ, ಅಥವಾ ಪವಿತ್ರ-ಅಪವಿತ್ರತೆ ಎಂಬ ಏಣಿ-ಶ್ರೇಣಿ, ಅಥವಾ ವರ್ಗಗಳ ಸಾಮಾಜಿಕ ಸ್ತರವಿನ್ಯಾಸವನ್ನು ಅವಲೋಕಿಸಿ ಅದರ ಪ್ರಸ್ತುತತೆಯನ್ನು ಪ್ರಶ್ನಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅವರು ಗುಜರಾತಿನ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಬುಡಕಟ್ಟು ಜನಸಂಖ್ಯೆಯು ಆಧುನಿಕ ಮಾರುಕಟ್ಟೆ ಮತ್ತು ಉತ್ಪಾದನಾ ವ್ಯವಸ್ಥೆಗಳು, ಮತ್ತು ಆಧುನಿಕ ರಾಜಕೀಯ ವ್ಯವಸ್ಥೆಯ ಒಳಗೆ ಅವರು ಹೊಂದಿಕೊಳ್ಳುತ್ತಿರುವುದು ಮತ್ತು ಉದ್ಯೋಗಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುವುದನ್ನು ತೋರಿಸಿದ್ದಾರೆ ಮತ್ತು ಶ್ರೀಮಂತ ರೈತರು, ಮಧ್ಯಮ ರೈತರು, ಬಡರೈತರು, ಮತ್ತು ಭೂರಹಿತ ಕೃಷಿಕಾರ್ಮಿಕರು ಎಂಬ ನಾಲ್ಕು ವರ್ಗಗಳು ಅಸ್ತಿತ್ವವಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಪ್ರದೀಪ್ ಕುಮಾರರ ಬೋಸೆ ಅವರ ಗುಜರಾತಿನ ಬುಡಕಟ್ಟುಗಳಿಗೆ ಸಂಬಂಧಿಸಿಂತೆ ಕಂಡುಕೊಂಡಿರುವ ಅಂಶಗಳೇ ಈ ಅಧ್ಯಯನದ ಸಮೂಹವಾಗಿರುವ ಸಿದ್ದಿಯರಲ್ಲಿಯೂ ಪವಿತ್ರ-ಅಪವಿತ್ರತೆ ಎಂಬ ಏಣಿ-ಶ್ರೇಣಿ, ಅಥವಾ ವರ್ಗಗಳ ಸಾಮಾಜಿಕ ಸ್ತರವಿನ್ಯಾಸದ ನಂಬಿಕೆಗಳು ಕಂಡುಬರುತ್ತವೆ.

ಅಂತೆಯೇ ಆಹಾರವನ್ನು ಪಡೆದುಕೊಳ್ಳುವ ಇಲ್ಲವೇ ಕೊಡುವ ತೆಗೆದುಕೊಳ್ಳುವ ವಿಚಾರದಲ್ಲಿ ಅಷ್ಟೂ ಬದಲಾವಣೆಯಾಗಿಲ್ಲ ಎಂದು ಕಂಡುಬರುತ್ತದೆ. ಸಮಾಜ ತೀವ್ರವಾಗಿ ಬದಲಾವಣೆ ಯಾಗುತ್ತಿದ್ದರೂ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರಿಗೆ ಸಂಬಂಧಿಸಿದ ಮಡಿ, ಮೈಲಿಗೆ ಎಂಬ ತಾರತಮ್ಯದ ನಡವಳಿಕೆಗಳು ಬದಲಾವಣೆಯಾಗಿಲ್ಲ..

ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಸಿದ್ದಿಯರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದವರಾಗಿದ್ದು, ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ತಮ್ಮನ್ನು ತಾವು ಗುರುತಿಸಿ ಕೊಳ್ಳುತ್ತಿರುವಾಗ ಅವರದೇ ಧರ್ಮದ, ಸಿದ್ದಿಗಳಲ್ಲದವರು ಇವರನ್ನು ತಾರತಮ್ಯ ಮತ್ತು ಕೀಳುಭಾವನೆ ಯಿಂದ ನೋಡುತ್ತಾರೆ. ಅವರ ದೇಹ ರಚನೆ, ಚರ್ಮದ ಬಣ್ಣ ಮತ್ತು ವಿದೇಶಿ ಮೂಲದ ಕಾರಣದಿಂದ ಸ್ಥಳೀಯ ಬುಡಕಟ್ಟುಗಳೂ, ಕೀಳಾಗಿ ಕಾಣುತ್ತಿರುವುದು ಕಂಡುಬಂದಿದೆ. ಹಿಂದು, ಮುಸ್ಲಿಂ ಮತ್ತು ಕ್ರೈಸ್ತರೆಲ್ಲರೂ ಧರ್ಮ ಜನಸಂಖ್ಯೆಗೆ ಸಿದ್ದಿಯರನ್ನು ಆಯಾ ಧರ್ಮಕ್ಕೆ ಸೇರಿಸಿ ಕೊಳ್ಳುತ್ತಿದ್ದಾರೆಯೇ ಹೊರತು ಅವರ ಸಾಮಾನ್ಯ ಜೀವನದಲ್ಲಿ ಬೆರೆಯುತ್ತಿಲ್ಲ ಮತ್ತು ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಈ ಕಾರಣದಿಂದ ಸಿದ್ದಿಯರಲ್ಲಿ ಅಂತರ್ ಧರ್ಮೀಯ ವಿವಾಹದ ಆಚರಣೆ ಸಾಮಾನ್ಯವಾಗಿದೆ. ಅಂತೆಯೇ ಒಂದೇ ಕಂಡುಬಂದಿಲ್ಲ. ಅತ್ತೆ ಹಿಂದೂ ಧರ್ಮಕ್ಕೆ ಸೇರಿದ್ದರೆ, ಸೊಸೆ ಕ್ರಿಶ್ಚಿಯನ್, ಅಳಿಯ ಮುಸ್ಲಿಂ ಇರುತ್ತಾರೆ. ಜನಾಂಗೀಯ ಹೊರಗಣತನ ದಿಂದ ಸಿದ್ದಿಯರು ಅನುಭವಿಸುತ್ತಿರುವ ಪರಿಸ್ಥಿತಿಯಿಂದಾಗಿ ಅಂತರ್ ಧರ್ಮೀಯ ವಿವಾಹದ ಆಚರಣೆ ಈ ಜನರಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಬುಡಕಟ್ಟುಗಳ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಗೆ ಸಂಬಂಧಿಸಿದಂತೆ ಸ್ಟ್ರಾಟಿಫಿಕೇಷನಂ ಅಮಾಂಗ್ ಇಂಡಿಯನ್ ಟ್ರೈಬ್ ಎಂಬ ಪ್ರಬಂಧದಲ್ಲಿ **ಪ್ರದೀಪ್‌ಕುಮಾರ ಬೋಸ್** ಅವರು ಭಾರತದ ಬುಡಕಟ್ಟುಗಳಲ್ಲಿ ಜಾತಿ ಏಣಿಶ್ರೇಣಿ ಪವಿತ್ರ ಅಪವಿತ್ರ, ಉನ್ನತ ವರ್ಗ ಕೆಳವರ್ಗಗಳ ಸಾಮಜಿಕ ಸ್ತರ ವಿನ್ಯಾಸವನ್ನು ಅವಲೋಕಿಸಿ ಅದರ ಪ್ರಸ್ತುತತೆಯನ್ನು ಪ್ರಶ್ನಿಸಿದ್ದಾರೆ. ಪ್ರದೀಪ್‌ಕುಮಾರ ಬೋಸ್ ಅವರು ಗುಜರಾತಿನ ಬುಡಕಟ್ಟುಗಳನ್ನು ಅಧ್ಯಯನ ಮಾಡಿ, ಬುಡಕಟ್ಟು ಜನರು ಆಧುನಿಕ ಮಾರುಕಟ್ಟೆ, ಉತ್ಪಾದನಾ ವ್ಯವಸ್ಥೆಗಳು ಮತ್ತು ಆಧುನಿಕ ರಾಜಕೀಯ ವ್ಯವಸ್ಥೆಯೊಳಗೆ ಹೊಂದಿಕೊಳ್ಳುತ್ತಿದ್ದಾರೆ ಎಂದು ತಮ್ಮ ಅಧ್ಯಯನದಲ್ಲಿ ಸ್ಪಷ್ಟಪಡಿಸುತ್ತ ಅಲ್ಲಿನ ಬುಡಕಟ್ಟು ಜನರು ಪ್ರಾದೇಶಿಕ ಭಿನ್ನತೆಗಳನ್ನು ಹೊಂದಿದ್ದು, ಶ್ರೀಮಂತರು, ರೈತರು ಮಧ್ಯಮ ರೈತರು, ಬಡರೈತರುಮತ್ತು ಭೂರಹಿತ ಕೃಷಿಕಾರ್ಮಿಕರು ಎಂಬ ನಾಲ್ಕು ವರ್ಗಗಳು ಅಸ್ತಿತ್ವದಲ್ಲಿದೆ ಎಂದು ಹೇಳಿದ್ದಾರೆ. ಈ ವಿಚಾರಗಳನ್ನು ಪ್ರಸ್ತುತ ಈ ಅಧ್ಯಯನದ ಫಲಿತಗಳೊಂದಿಗೆ ತುಲನೆ ಮಾಡಿ ನೋಡಿದಾಗ, ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರೂ ಕೂಡ ವಿಭಿನ್ನ ಉದ್ಯೋಗ ಮತ್ತು ವ್ಯವಸಾಯ ಮಾಡುತ್ತ ವರ್ಗವಸ್ಥೆಯಾನ್ನಾಧಾರಿತ ಏಣಿಶ್ರೇಣಿ ವ್ಯವಸ್ಥೆ ಹೊಂದಿರುವುದು ಕಂಡುಬರುತ್ತದೆ. ಈ ಸಮೂಹವು ಕೂಡ ಆಧುನಿಕ ಉತ್ಪಾದನಾ ವ್ಯವಸ್ಥೆ, ಉದ್ಯೋಗ ಮಾರುಕಟ್ಟೆ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡುಬಂದಿದೆ. **ಜಗನ್ನಾಥ ಪಾಂಡೆಯವರ** 'ಟ್ರೈಬಲ್ ಪೆಸೆಂಟ್ರಿ ಡೈನಾಮಿಕ್ಸ್ ಆಫ್ ಡೆವಲಪ್‌ಮೆಂಟ್' ಎಂಬ ಸಂಶೋಧನಾ ಪ್ರಬಂಧದಲ್ಲಿ

ಜಗನ್ನಾಥ ಪಾಂಡೆಯವರು ಒರಿಸ್ಸಾದ ಬುಡಕಟ್ಟು ಹಳ್ಳಿಗಳಲ್ಲಿನ ವರ್ಗಗಳು ಮತ್ತು ವರ್ಗ ಸಂಬಂಧಗಳ ಬಗ್ಗೆ ಅಧ್ಯಯನದಲ್ಲಿ ಪಾಂಡೆಯವರು ಬುಡಕಟ್ಟು ಹಳ್ಳಿಗಳ ಲಕ್ಷಣಗಳನ್ನು ವಿಶ್ಲೇಷಿಸುತ್ತ, ಊಳಿಗಮಾನ್ಯ ಸಂಬಂಧಗಳು ಮತ್ತು ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆ ಆಗುತ್ತಿವೆ ಎಂದು ಹೇಳಿದ್ದಾರೆ. ಅದರಂತೆ ಈ ಅಧ್ಯಯನದಲ್ಲಿಯೂ ಸಿದ್ದಿಯರು ಮೇಲ್ಜಾತಿಗಳ ಜನರೊಂದಿಗೆ ಸಾಂಪ್ರದಾಯಿಕ ಊಳಿಗದ ಪದ್ಧತಿ ಇಲ್ಲದಿದ್ದರೂ ಅವರ ಕಪಿಮುಷ್ಟಿಯಿಂದ ಹೊರಬರಲಾಗದೇ ತೊಳಲಾಡುತ್ತಿರುವುದು ಕಂಡುಬಂದಿದೆ.

ಸಿದ್ದಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿನ ಜೀವನದಲ್ಲಿ ಕೆಲವು ಸಾಮಾನ್ಯ ಅಂಶಗಳನ್ನು ಹಂಚಿಕೊಳ್ಳದೆ ಇತರ ಸಮೂಹಗಳ ನಡುವೆ ಜೀವಿಸುತ್ತಿದ್ದಾರೆ. ಆ ಸಮೂಹಗಳೆಂದರೆ, ಹವ್ಯಕ ಬ್ರಾಹ್ಮಣರು ಮರಾಠರು, ಲಿಂಗಾಯತರು, ಒಕ್ಕಲಿಗರು, ಹಾಲಕ್ಕಿ ಒಕ್ಕಲು, ಕುಣಬರು, ಹಲಸರು, ಬಿಂದಿಗಳು, ನಾಮಧಾರಿಗಳು ಗೌಳಿಗಳು, ಮಾಹಾರ್, ಕೊಟ್ಟೀಗಾರ್ ಮತ್ತು ಇತರರು. ಈ ಸಮೂಹಗಳ ನಡುವಿನ ಕೆಲವು ನಿರ್ದಿಷ್ಟ ಸಾಂಸ್ಕೃತಿಕ ಅಂಶಗಳ ವಿನಿಮಯವು ಎಲ್ಲ ಸಮೂಹಗಳಲ್ಲೂ ಈ ಭಾಗದಲ್ಲಿ ಸಮಾಜಿಕ–ಸಾಂಸ್ಕೃತಿಕ ಏಕತೆಗೆ ಕಾರಣವಾಗಿವೆ. ಕೌಟುಂಬಿಕ ಸಂಸ್ಕೃತಿಗೆ ಸಂಬಂಧಿಸಿ ದಂತೆ ಪ್ರತಿ ಸಮೂಹವೂ ಮತ್ತೊಂದು ಸಮೂಹಕ್ಕಿಂತ ಭಿನ್ನವಾಗಿರುತ್ತವೆ. ಒಂದು ಜಾತಿಯ ಕುಲದೇವತೆಗೂ ಮತ್ತೊಂದು ಜಾತಿಯ ಕುಲದೇವತೆಗೂ ವ್ಯತ್ಯಾಸಗಳಿರುತ್ತವೆ. ಮನೆಯ ಒಳಗಿನ ಜೀವನ ಮತ್ತು ಹೊರಗಿನ ಜೀವನಗಳೆರಡೂ ವಿಶಿಷ್ಟವಾಗಿರುತ್ತವೆ, ಆದರೆ ಪರಸ್ಪರ ಅವಲಂಬಿತ ವಾಗಿರುತ್ತಾರೆ. ಈ ಜಿಲ್ಲೆಯ ಎಲ್ಲಾ ಸಮೂಹಗಳೂ ಏಣಿ–ಶ್ರೇಣಿ ವ್ಯವಸ್ಥೆಯಿಂದ ಕೂಡಿವೆ. ಏಣಿ–ಶ್ರೇಣಿ ವ್ಯವಸ್ಥೆಯಲ್ಲಿ ಜಾತಿಯ ಸ್ಥಾನಮಾನಗಳಿಗೆ ಅನುಗುಣವಾಗಿ ಅಧಿಕಾರ ಮತ್ತು ಸವಲತ್ತುಗಳು ಬೇರೆ ಬೇರೆಯಾಗಿರುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಬೆಟ್ಟ ಪ್ರದೇಶಗಳಾಗಿರುವ ಯಲ್ಲಾಪುರ ಮತ್ತು ಅಂಕೋಲಗಳಲ್ಲಿ ಹವ್ಯಕ ಬ್ರಾಹ್ಮಣರು ಪ್ರಬಲ ಜಾತಿಯವರಾಗಿದ್ದಾರೆ, ಅವರೇ ಕೃಷಿ ಭೂಮಿಯ ಸಿಂಹ ಪಾಲಿಗೆ ಒಡೆಯರಾಗಿದ್ದಾರೆ. ಸ್ವಲ್ಪಮಟ್ಟಿಗೆ ಒಕ್ಕಲಿಗರೂ ಭೂಮಿಯ ಒಡೆತನವನ್ನು ಹೊಂದಿದ್ದಾರೆ. ಹವ್ಯಕ ಬ್ರಾಹ್ಮಣರು ಸ್ಥಳೀಯವಾಗಿ ಪುರೋಹಿತ ವರ್ಗವೂ ಆಗಿದೆ. ಸಿದ್ದಿಗಳು, ಕುಣಬಿಯವರು, ಕೋಮಾರ್ ಪೈಕಗಳು, ಬಿಂದೀಗಳು, ಕರೆ ವಕ್ಕಲರು, ಮತ್ತು ಗೌಳಿಗಳು ಮುಂತಾದ ಬಹಳಷ್ಟು ಕೆಳ ಜಾತಿಯ ಹವ್ಯಕ ಬ್ರಾಹ್ಮಣರ ಹತ್ತಿರ ಕೂಲಿಯಾಳುಗಳಾಗಿದ್ದಾರೆ. ಹವ್ಯಕ ಬ್ರಾಹ್ಮಣರು ಆಧ್ಯಾತ್ಮಿಕ ಮತ್ತು ಧಾರ್ಮಿಕ ಪ್ರಾಬಲ್ಯತೆಯ ಜೊತೆಗೆ ಆರ್ಥಿಕವಾಗಿಯೂ ಪ್ರಬಲರಾಗಿದ್ದಾರೆ. ಹವ್ಯಕ ಬ್ರಾಹ್ಮಣರು ಇತರೆ ಸಮೂಹದವರಿಗಿಂತ ಹೆಚ್ಚು ಭೂಮಿಯನ್ನು ಹೊಂದಿದ್ದಾರೆ. ಅಡಿಕೆ ಮತ್ತು ಮೆಣಸಿನ ಬೆಳೆಗಳನ್ನು ಬೆಳೆಯುತ್ತಾರೆ. ಇತರ ಎಲ್ಲ ಕೆಳಜಾತಿ ಮತ್ತು ಬುಡಕಟ್ಟು ಸಮುದಾಯಗಳು ಗೇಣಿದಾರರಾಗಿ ಅಥವಾ ಕೃಷಿ ಕಾರ್ಮಿಕರಾಗಿ ಹವ್ಯಕ ಬ್ರಾಹ್ಮಣರನ್ನು ಅವಲಂಬಿಸಿದ್ದಾರೆ.

ಯಲ್ಲಾಪುರ ಮತ್ತು ಅಂಕೋಲ ಪ್ರದೇಶದಲ್ಲಿ ಹವ್ಯಕ ಬ್ರಾಹ್ಮಣರಂತೆ ಹಳಿಯಾಳ ತಾಲೂಕಿನಲ್ಲಿ ಮರಾಠರು ಮತ್ತು ಸ್ವಲ್ಪ ಸಂಖ್ಯೆಯಲ್ಲಿ ಲಿಂಗಾಯತರು ಪ್ರಬಲ ಜಾತಿಯವರಾಗಿದ್ದಾರೆ. ಇತ್ತೀಚಿನವರೆಗೂ

ಲಿಂಗಾಯತರು ಮತ್ತು ಮರಾಠರು ಅತ್ಯಧಿಕ ಕೃಷಿ ಭೂಮಿಯ ಒಡೆತನ ಹೊಂದಿದ್ದಾರೆ. ಇತರ ಜಾತಿಯ ಜನರು ಈ ಪ್ರಬಲ ಜಾತಿಯವರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಾರೆ. ಹೆಚ್ಚು ಕಡಿಮೆ ಈ ಭೂಮಾಲೀಕರೆ ಹಳ್ಳಿಯ ಪಟೇಲರುಗಳಾಗಿದ್ದರಿಂದ ರಾಜಕೀಯವಾಗಿಯೂ ಅವರೇ ಪ್ರಬಲರಾಗಿದ್ದಾರೆ. ಸಿದ್ದಿಗಳು ಸೇರಿದಂತೆ ಇತರ ಎಲ್ಲ ಸಮುದಾಯಗಳು ಭೂಮಿಯನ್ನು ಹೊಂದಿದ್ದರೂ, ಸಣ್ಣ ಭೂಹಿಡುವಳಿದಾರರಾಗಿದ್ದಾರೆ ಮತ್ತು ಅರಣ್ಯ ಕಡಿದು ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿರುವವರಾಗಿದ್ದಾರೆ. ಕೆಲವು ಹಳ್ಳಿಗಳಲ್ಲಿ ಮರಾಠರು ಭೂ ಹಿಡುವಳಿ ವರ್ಗವಾಗಿರುವುದರ ಜೊತೆಗೆ ಸಂಖ್ಯಾತ್ಮಕವಾಗಿಯೂ ಗಣನೀಯವಾಗಿದ್ದು ರಾಜಕೀಯವಾಗಿ ಕ್ರೀಯಾಶೀಲ ಪ್ರಭಾವಿ ಗಳಾಗಿದ್ದಾರೆ.

ಮೇಲಿನ ವಿವರಣೆಯಲ್ಲಿ ತಿಳಿಸಿರುವಂತೆ ಯಲ್ಲಾಪುರ ಮತ್ತು ಅಂಕೋಲಾಗಳಲ್ಲಿ ಸಿದ್ದಿ ಜನರು ಹರಡಿಕೊಂಡಿರುವ ಪ್ರದೇಶಗಳಲ್ಲಿ ಹವ್ಯಕ ಬ್ರಾಹ್ಮಣರು ಪ್ರಬಲರಾಗಿರುವುದರಿಂದ ಈ ಸಮುದಾಯದ ಸಾಂಸ್ಕೃತಿಕ ವಿಷಯಗಳು ಪ್ರಬಲ ಹೊಂದಿವೆ. ಹಳಿಯಾಳ ಭಾಗದಲ್ಲಿ ಸಂಸ್ಕೃತಿ ಕ್ರಿಯಾವಿಧಿ ಮತ್ತು ಸಂಸ್ಕಾರಗಳ ವಿಷಯದಲ್ಲಿ ಲಿಂಗಾಯತ ಸಮುದಾಯದವರು ಪ್ರಭಾವ ಬೀರುತ್ತಾರೆ. ಕೆಲವು ಹಳ್ಳಿಗಳಲ್ಲಿ ಮರಾಠರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಬಹುಸಂಖ್ಯಾತರಾಗಿರುವುದರಿಂದ, ಇಡೀ ಪ್ರದೇಶದಲ್ಲಿಯೇ ಅವರು ಪ್ರಬಲರಾಗಿದ್ದಾರೆ. ಹಳಿಯಾಳ ಯಲ್ಲಾಪುರ ಮತ್ತು ಅಂಕೋಲ ಪ್ರದೇಶಗಳಲ್ಲಿ ಕೃಷಿಯು ಜೀವನಾಧಾರದ ಕೆಲಸವಾಗಿದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಎಲ್ಲಾ ಸಮೂಹಗಳೂ ಕೃಷಿಯನ್ನೇ ಅವಲಂಬಿಸಿವೆ. ಕೃಷಿಗೆ ಸಂಬಂಧಿಸಿದಂತೆ ಎಲ್ಲರೂ ಸಾಮಾನ್ಯ ವಾಗಿರುವ ದೇವರು ಮತ್ತು ದೇವತೆಗಳನ್ನು ಪೂಜಿಸುತ್ತಾರೆ(ವೈ.ಆರ್.ರಾವ್). ಎರಡೂ ಪ್ರದೇಶಗಳಲ್ಲಿ ಬೆಳೆಗಳನ್ನು ಕಠಾವು ಮಾಡಿದ ನಂತರ "ಸುಗ್ಗಿ ಹಬ್ಬ"ವನ್ನು ಆಚರಿಸುತ್ತಾರೆ. ಸುಗ್ಗಿ ಹಬ್ಬವು ಕೃಷಿಯನ್ನು ಅವಲಂಬಿಸಿರುವ ಎಲ್ಲ ಸಮೂಹಗಳಿಗೂ ಅನ್ವಯಿಸುತ್ತದೆ. ಕೃಷಿಗೆ ಸಂಬಂಧಿಸಿದ ದೇವಾನುದೇವತೆಗಳನ್ನು ಹವ್ಯಕ ಬ್ರಾಹ್ಮಣರು ಅಥವಾ ಲಿಂಗಾಯತರ ಪುರೋಹಿತ್ಯದಲ್ಲಿ ಪೂಜೆ ಮಾಡುತ್ತಾರೆ. ಹದಿನೈದು ದಿನಗಳ ಕಾಲ ನಡೆಯುವ ಸುಗ್ಗಿ ಹಬ್ಬಕ್ಕೆ ಎಲ್ಲರೂ ಹಣ, ಶ್ರಮ ಮತ್ತು ದವಸ ಧಾನ್ಯಗಳ ರೂಪದಲ್ಲಿ ದೇಣಿಗೆ ನೀಡುತ್ತಾರೆ. ಈ ಹಬ್ಬವಾದ ನಂತರ ಬೆಳೆಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಉಪಯೋಗಿಸುತ್ತಾರೆ. ಎಂಬ ವಿಚಾರವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲೂ ಕಂಡು ಬಂದಿದ್ದು, ಟಿ.ಸಿ. ಫಾಲಾಕ್ಷಪ್ಪನವರ ಅಧ್ಯಯನದ ಪುಟ ೧೩ರಲ್ಲೂ ಉಲ್ಲೇಖಿತವಾಗಿದೆ. ಎರಡೂ ಪ್ರದೇಶಗಳಲ್ಲೂ ಜನರು ಕೃಷಿಗೆ ಸಂಬಂಧಿಸಿದಂತೆ ಬೇರೆ ಬೇರೆ ದೇವರುಗಳನ್ನು ಪೂಜಿಸುತ್ತಾರೆ, ಯಲ್ಲಾಪುರ ಮತ್ತು ಅಂಕೋಲ ಪ್ರದೇಶಗಳಲ್ಲಿ ನ್ಯಾಸ ಹಳೇ ದೇವರು ಎಂಬ ದೇವತೆಗಳನ್ನು ಪೂಜಿಸಿದರೆ ಹಳಿಯಾಳ ಪ್ರಾಂತ್ಯದಲ್ಲಿ ಯಲ್ಲಮ್ಮ, ಹನುಮಂತ ಮತ್ತು ಸಿದ್ಧರಾಮೇಶ್ವರ ದೇವರುಗಳನ್ನು ಪೂಜಿಸುತ್ತಾರೆ.

ಹಿಂದುಳಿದ ವರ್ಗಗಳ ಆಯೋಗವು ಹಿಂದೂ ಸಿದ್ದಿಗಳನ್ನು ಹಿಂದುಳಿದವರೆಂದೂ ಮತ್ತು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳನ್ನು ಅಲ್ಪಸಖ್ಯಾತರೆಂದು ಧರ್ಮದ ಆಧಾರದ ಮೇಲೆ

ವರ್ಗೀಕರಿಸಿತ್ತು. ಸಿದ್ದಿಗಳಿಗೆ ಎಲ್ಲಾ ಪ್ರದೇಶಗಳಲ್ಲೂ ಹವ್ಯಕ ಬ್ರಾಹ್ಮಣ ಮತ್ತು ಲಿಂಗಾಯತರ ಮನೆಗಳಿಗೆ ಪ್ರವೇಶಾವಕಾಶವಿದೆ. ಅವರಿಗೆ ಶಿವ, ಗಣೇಶ ಮತ್ತು ವಿಷ್ಣು ದೇವರುಗಳ ಆಲಯಗಳಿಗೆ ಪ್ರವೇಶಾವಕಾಶವಿದೆ, ಆದರೆ ಅವರಿಗೆ ದೇವರ ಪೂಜೆ ಮಾಡಲು ಬಿಡುವುದಿಲ್ಲ.

ಒಂದು ಜನಾಂಗೀಯ ಸಮುದಾಯವಾಗಿ ಸಿದ್ದಿ ಜನರು ಹವ್ಯಕ ಬ್ರಾಹ್ಮಣರು ಕರೆ ವಕ್ಕಲರು, ಕುಣಬಿ, ಹಾಲಕ್ಕಿ ವಕ್ಕಲುಗಳಿಗಿಂತ ಕೆಳಗಿನ ಅಂತಸ್ತಿನಲ್ಲಿ ಗುರುತಿಸುತ್ತಾರೆ. ಸಿದ್ದಿಗಳು, ಆರೇರು, ಕುಣಬಿಗಳು ಮತ್ತು ಫಿಶರ್‌ಮನ್‌ಗಳಿಗಿಂತ ಕೆಳಗಿನ ಮತ್ತು ಮಹರ್ ಮತ್ತು ಇತರ ಅಸ್ಪೃಶ್ಯ ಜಾತಿಯವರಿಗಿಂತ ಮೇಲಿನ ಅಂತಃಸ್ತನ್ನು ಹೊಂದಿದ್ದಾರೆ. ಎಂದು ಟಿ.ಸಿ. ಫಾಲಾಕ್ಷಪ್ಪನವರು ಪುಟ ೧೪ರಲ್ಲಿ ಉಲ್ಲೇಖಿಸಿದ್ದಾರೆ. ಮರಾಠರು ಸಿದ್ದಿಗಳಿಗಿಂತ ಶ್ರೇಷ್ಠರೆಂದು ಹಕ್ಕು ಸಾದಿಸುತ್ತಾರೆ ಆದರೆ ಸಿದ್ದಿಗಳು ಅದನ್ನು ಸಮ್ಮತಿಸುವುದಿಲ್ಲ. ಹಾಗೆಯೇ ಬಂದಿಗಳು ಸಿದ್ದಿಗಳಿಗಿಂತ ಶ್ರೇಷ್ಠರೆಂದು ಹಕ್ಕು ಸಾಧಿಸುತ್ತಾರೆ, ಆದರೆ ಸ್ಥಳೀಯವಾಗಿ ಸಿದ್ದಿಗಳು ಮೇಲಿನ ಎರಡು ಸಮುದಾಯಗಳನ್ನು ಬೇರೆ ಬೇರೆಯಾಗಿ ನೋಡುತ್ತಾರೆ. ಬಂದಿಗಳ ನೈತಿಕ ನಡವಳಿಕೆಗಳ ಕಾರಣದಿಂದ ನಿಧಾನವಾಗಿ ಅವರ ಅಂತಸ್ತು ಕುಸಿತವಾಗುತ್ತಿದೆ. ಸಿದ್ದಿಗಳು ಬಂದಿಗಳು ಮತ್ತು ಕೋನಾರ್‌ಪಿಕ್‌ಗಳೊಂದಿಗೆ ಸಹ ಭೋಜನ ಮಾಡುತ್ತಾರೆ. ಆದರೆ ಹಾಲಕ್ಕಿ ವಕ್ಕಲರುಗಳು ಸಿದ್ದಿಗಳೊಂದಿಗೆ ಊಟ ಮಾಡುವುದಿಲ್ಲ. ಆಹಾರ ನೀಡುವುದಿಲ್ಲ ಮತ್ತು ಮನೆಯೊಳಗೆ ಸೇರಿಸುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಿಯರು ಸಾಮಾಜಿಕವಾಗಿ ಹಿಂದುಳಿದ ಜನಾಂಗವಾಗಿದ್ದು ದಲಿತ ಸಮೂಹಗಳೊಂದಿಗೆ ಗುರುತಿಸಲ್ಪಡುತ್ತಿದೆ. ಮೇಲ್ಜಾತಿಯ ಜನರು ಮತ್ತು ಕೆಲವು ಹಿಂದುಳಿದ ಸಮುದಾಯಗಳು ಸಿದ್ದಿಯರನ್ನು ವಯುಕ್ತಿಕ ಕುಟುಂಬಗಳ ಮಟ್ಟದಲ್ಲಿ ವಿವಾಹದಂತಹ ದಾರ್ಮಿಕ ಸಭೆ ಸಮಾರಂಭಗಳಿಗೆ ಆಹ್ವಾನಿಸುತ್ತಾರೆ. ಅವರಿಗೆ ಆಹಾರವನ್ನು ಪ್ರತ್ಯೇಕವಾಗಿ ನೀಡಲಾಗುತ್ತದೆ. ಆನಂತರ ಪತ್ರೆಗಳನ್ನು ಮತ್ತು ಆ ಜಾಗ ವನ್ನು ಸ್ವಚ್ಚ ಮಾಡುವ ಕೆಲಸಕ್ಕೆ ಸಿದ್ದಿಯರನ್ನು ಉಪಯೋಗಿಸಿಕೊಳ್ಳುತ್ತಾರೆ.

ಮಹಿಳೆಯರ ಸ್ಥಿತಿಗತಿ

ಅವಕಾಶ ಸಿಕ್ಕರೆ, ಎಂತಹವರೂ ಧೈರ್ಯವಾಗಿ ಮಾನಸನ್ಮಾನದಿಂದ ಬದುಕುತ್ತಾರೆ ಎನ್ನುವುದಕ್ಕೆ ನಾನು ಭೇಟಿಮಾಡಿದ ಕೆಲವು ಸಿದ್ದಿ ಮಹಿಳೆಯರೊಂದಿಗಿನ ಮಾತುಕತೆಯಿಂದ ವಿಶಿಷ್ಟ ಮಾಹಿತಿ ದೊರೆಯಿತು. ದಿನಾಂಕ ೨೦-೧೧-೨೦೧೩ರಂದು ಹಳಿಯಾಳದಲ್ಲಿ ನಾನು ಸಿದ್ದಿಯರು ಆಯೋಜಿಸಿದ್ದ ಒಂದು ರ್‍ಯಾಲಿಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯಿತು, ರ್‍ಯಾಲಿ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ನನಗೆ ತಿಳಿದಿರಲಿಲ್ಲ, ಸಂಬಂದಪಟ್ಟವರನ್ನು ಸಂಪರ್ಕಿಸಲು ಎಸ್.ಟಿ.ಡಿ ಬೂತ್ ಹುಡುಕಾಡು ತ್ತಿದ್ದ ನನಗೆ ಅಲ್ಲಿ ಸಿದ್ದಿ ಸಮುದಾಯದ ಯುವತಿಯೊಬ್ಬರು ಕಂಡರು. ರ್‍ಯಾಲಿಯ ವಿಚಾರವನ್ನು ತಿಳಿದುಕೊಳ್ಳಲು ನಾನು ಅವರನ್ನು ಮಾತನಾಡಿಸಿದಾಗ ತುಂಬಾ ಆತ್ಮೀಯತೆಯಿಂದ ನನ್ನ ಸಮಸ್ಯೆಯನ್ನು ಬಗೆಹರಿಸಲು ಸಿದ್ದಿ ಸಂಘದಲ್ಲಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿರುವ ಆಕೆಯ ಸಹೋದರಿ ಯನ್ನು ಫೋನಿನ ಮೂಲಕ ಪರಿಚಯಿಸಿ ಅವರ ನಂಬರನ್ನು ಕೊಟ್ಟು ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟ ರೀತಿ ಯಾವ ವಿದ್ಯಾವಂತ ನಾಗರಿಕ ಸಮಾಜದ ಮಹಿಳೆಯರಿಗಿಂತ ಏನೂ

ಕಡಿಮೆಯಿರಲಿಲ್ಲ. ಅಷ್ಟೇ ಅಲ್ಲದೇ ಸಿದ್ದಿ ಸಮುದಾಯದ ೬೯ ಮಕ್ಕಳು ಶಿಕ್ಷಣ ಪಡೆಯುತ್ತಿರುವ ಮಿಲಾಗರಸ್ ಬೋರ್ಡಿಂಗ್ ಶಾಲೆಯ ಬಗ್ಗೆ ಮಾಹಿತಿ ನೀಡಿದರು. ಕೊನೆಗೆ ಹೊರಡುವಾಗ ಮೇಡಮ್ ನಿಮ್ಮ ಕ್ವಾಲಿಫಿಕೇಷನ್ ಏನು? ಎಂದು ಪ್ರಶ್ನೆ ಕೇಳಿದ್ದಕ್ಕೆ, ಹಾಗಂದ್ರೇನ್ರಿ? ಎಂಬ ಮರುಪ್ರಶ್ನೆ ಬಂತು, ಆಗ ನಾನು ನೀವು ಎಲ್ಲಿಯವರೆಗೆ ಓದಿದ್ದೀರಿ ಎಂದು ಕೇಳಿದಾಗ,"ಸಾರ್, ನಾನ್ ಸಾಲಿಕಲ್ತಿಲ್ರಿ, ಮಿಲಾಗರಸ್ ಬೋರ್ಡಿಂಗ್ ಶಾಲೆಯಲ್ಲಿ ಕೆಲಸ ಮಡಿಕೊಂಡಿದ್ದೀನ್ರಿ" ಎಂದು ಹೇಳಿದರು. ನಂತರ ನಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದರೆ ನಮ್ಮ ಫಾದರ್ (ಚರ್ಚಿನ ಮುಖ್ಯಸ್ಥರು) ಅವರ ಹತ್ತಿರ ಬಂದು ಭೇಟಿಯಾಗಬಹುದು ಎಂದು ಹೊರಟು ಹೋಗುವಾಗ ಅವರ ಸಹೋದರಿ ರೋಸಿಗೆ ಫೋನ್ ಮಾಡ್ರಿ ಎಂದು ಅವರ ನಂಬರ್ ಕೊಟ್ಟು ಹೋದರು. ಆಕೆಯ ಹೆಸರು ದೇವದಿತ ಫ್ರಾನ್ಸಿಸ್ ಸಿದ್ದಿ ಮತ್ತು ಆಕೆಯ ಸಹೋದರಿಯ ಹೆಸರು ರೋಸಿ ಲೂಯೀಸ್ ದುಬಲಿ ಎಂದು ಹೇಳಿದರು.

ದೇವದಿತಾ ಅವರಿಂದ ಸಹಾಯ ಪಡೆದುಕೊಂಡು ನೇರವಾಗಿ ವನಸಿರಿ ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶಗಳ ಸಹಕಾರಿ ಸಂಘ ಹತ್ತಿರ ಬಂದೆ. ಅಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿಯ ಸದಸ್ಯರುಗಳು ಕುಳಿತುಕೊಂಡು ಏನನ್ನೋ ಚರ್ಚಿಸುತ್ತಿದ್ದರು. ಅಧ್ಯಕ್ಷರು ನನ್ನನ್ನು ನೋಡಿ ಕರೆದು ಕುರ್ಚಿ ಹಾಕಿಸಿ ಅಲ್ಲಿಯೇ ಕುಳಿತುಕೊಳ್ಳಲು ಹೇಳಿ ಅವರ ಚರ್ಚೆಯನ್ನು ಮುಂದುವರಿಸಿದರು. ಅವರೆಲ್ಲರೂ, ಅಂದು ಸಿದ್ದಿ ಜನಾಂಗದ ರ್‍ಯಾಲಿಯ ಮೂಲಕ ಸರ್ಕಾರಕ್ಕೆ ತಮ್ಮ ಸಮುದಾಯದ ಸಮಸ್ಯೆಗಳನ್ನು ಕುರಿತು ಮನವಿ ಪತ್ರದ ಕರಡು ಪ್ರತಿಯನ್ನು ಕುರಿತು ಚರ್ಚಿಸುತ್ತಿದ್ದರು. ಇಲ್ಲಿ ವಿಶೇಷವಾಗಿ ಚರ್ಚೆಗೆ ಬಂದಿದ್ದ ವಿಷಯ ವೇನೆಂದರೆ, ಮನವಿ ಪತ್ರದ ಕರಡಿನಲ್ಲಿ ನಮ್ಮ ಸಮುದಾಯದ ಜನರನ್ನು ಅರಣ್ಯ ಇಲಾಖೆ ಮತ್ತು ಇತರ ಇಲಾಖೆಯ ಅಧಿಕಾರಿಗಳು, ದನ ನಾಯಿ ಮತ್ತು ಹಂದಿ ಮತ್ತು ಇತರ ಪ್ರಾಣಿಗಳಿಗಿಂತಲೂ ಕಡೆಯಾಗಿ ನೋಡುತ್ತಿದ್ದಾರೆ, ಆದ್ದರಿಂದ ನಾವು ಕೂಡ ಮನುಷ್ಯರಂತೆ ಬದುಕುವ ವಾತವರಣ ಕಲ್ಪಿಸಿಕೊಡಬೇಕು ಎಂಬ ವಿಷಯವಿತ್ತು. ಈ ವಿಷಯಕ್ಕೆ ಸಂಘದ ಉಪಾಧ್ಯಕ್ಷೆಯಾಗಿರುವ ಶ್ರೀಮತಿ ಮೇರಿ ಬಾವ್ತೀಸ್ ಗರಿಭಾಚೆ ಅವರು ಆಕ್ಷೇಪ ವ್ಯಕ್ತಪಡಿಸಿ, ನಮ್ಮನ್ನು ನಾವು ಪ್ರಾಣಿಗಳಿಗಿಂತ ಕೀಳು ಎಂದು ಜರಿದುಕೊಳ್ಳುವುದು ಬೇಡ, ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನ ಸಿಕ್ಕಿದ ಮೇಲೆ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಿದಾಗ,ಅದಕ್ಕೆ ಸಂಘದ ಅದ್ಯಕ್ಷರು ನಿಮ್ಮಂತಹ ಕೆಲವರ ಸ್ಥಿತಿ ಸುಧಾರಿಸಿರಬಹುದು, ಆದರೆ, ಕಾಡಿನಲ್ಲಿ ವಾಸಿಸುತ್ತಿರುವ ಬಹುಸಂಖ್ಯೆಯ ನಮ್ಮ ಜನರಿಗೆ ಇನ್ನೂ ಶಿಕ್ಷಣ, ಆರೋಗ್ಯದಂತಹ ಸೌಲಭ್ಯಗಳೂ ಸಿಗುತ್ತಿಲ್ಲ, ಕಾಡಿನಲ್ಲಿ ಅವರಷ್ಟಕ್ಕೆ ಅವರು ಬದುಕಲೂ ಅಧಿಕಾರಿಗಳು ಬಿಡುತ್ತಿಲ್ಲ. ಹಾಗಾಗಿ ನಮ್ಮ ಜನರ ಬದುಕು ಪ್ರಾಣಿಗಳಿಗಿಂತ ಕಡೆಯಾಗಿಯೇ ಇದೆ ಎಂದು ಹೇಳಿ ವಾದವನ್ನು ಮುಗಿಸಿದರು.

ಈ ಮೇಲಿನ ಚರ್ಚೆಯಿಂದ ನನಗೆ ತಿಳಿದು ಬಂದ ಅಂಶವೇನೆಂದರೆ, ಮಹಿಳೆ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಿ, ನಮ್ಮನ್ನು ನಾವು ಜರಿದುಕೊಳ್ಳುವುದು ಬೇಡ, ಎಂದು

ಹೇಳಿದ ಮಾತು ಸಮುದಾಯದ ಮಹಿಳೆಯರ ಸ್ವಾಭಿಮಾನವನ್ನು ಪ್ರತಿನಿಧಿಸುವಂತ್ತಿದ್ದರೆ, ಅಧ್ಯಕ್ಷರ ಮಾತು ವಸ್ತುಸ್ಥಿತಿಯನ್ನು ತೆರೆದಿಟ್ಟಿತ್ತು. ಕೊನೆಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದ ಮನವಿ ಪತ್ರವನ್ನು ಸಿದ್ಧಪಡಿಸಿಕೊಂಡು ರ್‍ಯಾಲಿಯಲ್ಲಿ ಭಾಗವಹಿಸಲು ಒಂದೆಡೆ ಸೇರಿದ್ದ ಅಂಬೇಡ್ಕರ್ ಸರ್ಕಲ್‌ಗೆ ಬಂದೆವು. ಅಲ್ಲಿ ಸುಮಾರು ಸಿದ್ದಿ ಸಂಘಟನೆಯ ನಾಯಕರುಗಳು ರ್‍ಯಾಲಿಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳುವಳಿಕೆ ಹೇಳಿದರು. ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚು ಜನರು ಒಂದೆಡೆ ಸೇರಿದ್ದರು, ಇವರಲ್ಲಿ ಶೇ. ೭೦ರಷ್ಟು ಮಹಿಳೆಯರು, ಮತ್ತು ಶೇ. ೩೦ರಷ್ಟು ಪುರುಷರು ಇದ್ದರು.

ಸಿದ್ದಿ ಜನಾಂಗದವರಲ್ಲಿನ ಲಿಂಗಾನುಪಾತದ ರಚನೆಯು ಕುಟುಂಬದ ಒಳಗೆ ಮತ್ತು ಹೊರಗೆ ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾನವನ್ನು ಕಲ್ಪಿಸಿಕೊಟ್ಟಿದೆ. ಭಾರತೀಯ ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಮತ್ತು ಕೃಷಿ ಉತ್ಪನ್ನಗಳಲ್ಲಿ ಪ್ರಮುಖ ಪಾತ್ರವಹಿಸುವಂತೆ, ಸಿದ್ದಿ ಮಹಿಳೆಯರ ಬದುಕು ಕೃಷಿಯ ಮೇಲೆ ಹೆಚ್ಚಾಗಿ ಅವಲಂಭಿತವಾಗಿದೆ. ಆದರೆ, ಕೃಷಿಯ ಆಸ್ತಿಯಾದ ಭೂಮಿಯ ಮೇಲೆ ಮಹಿಳೆಯರಿಗೆ ಹಕ್ಕು ಇಲ್ಲ. ಸಿದ್ದಿ ಮಹಿಳೆಯರು ಕೃಷಿ ಚಟುವಟಿಕೆಗಳಾದ ಬಿತ್ತುವುದು, ನಾಟಿ ಮಾಡುವುದು, ಕಳೆ ತೆಗೆಯುವುದು ಸುಗ್ಗಿ ಕಾಲದಲ್ಲಿ ಒಕ್ಕಣೆ ಮಾಡುವುದು ಬೆಳೆಗಳಿಗೆ ನೀರು ಆಯಿಸುವುದು ಮುಂತಾದವುಗಳಲ್ಲಿ ಪುರುಷರ ಹಾಗೆಯೆ ಕೆಲಸ ಮಾಡುತ್ತಾರೆ. ಆದರೂ, ಪುರುಷ ಕೂಲಿಕಾರರಿಗೆ ದಿನಕ್ಕೆ ೨೦೦ ರೂಪಾಯಿ ಕೋಲಿ ಸಿಕ್ಕರೆ ಮಹಿಳೆಯರಿಗೆ ೧೫೦ ರೂ. ಸಿಗುತ್ತದೆ. ಸಿದ್ದಿ ಜನಾಂಗದವರಲ್ಲಿ ಲಿಂಗಾನುಪಾತ ರಾಷ್ಟ್ರ ರಾಜ್ಯಗಳಿಗಿಂತ ಹೆಚ್ಚಾದ್ದರೂ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆ.

ಈ ಅಧ್ಯಯನದಲ್ಲಿ ಕಂಡು ಬಂದಿರುವ ಪ್ರಕಾರ, ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ೧೩೦ ಮಹಿಳಾ ಮಾಹಿತಿದಾರರಲ್ಲಿ ೫೮ ಜನರು ಅಂದರೆ, ಶೇ. ೪೫ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದರೆ. ಶೇ. ೩೧ರಷ್ಟು ಅಂದರೆ ೪೦ ಮಹಿಳಾ ಮಾಹಿತಿದಾರರು ೧ ರಿಂದ ನಾಲ್ಕನೇ ತರಗತಿಯ ವರೆಗೆ ಕಲಿತವರಾಗಿದ್ದರೆ. ೧೫ ಜನ ಮಹಿಳಾ ಮಹಿತಿದರರು ಅಂದರೆ ಶೇ. ೧೨ರಷ್ಟು ಜನ ೫ ರಿಂದ ೭ನೇ ತರಗತಿಯ ವರೆಗೆ ಕಲಿತಿದ್ದಾರೆ. ೧೨ ಜನ ಮಹಿಳಾ ಮಹಿತಿದಾರರು ಅಂದರೆ ಶೇ. ೯ರಷ್ಟು ಜನರು ೮ ರಿಂದ ೧೦ನೇ ತರಗತಿಯವರೆಗೆ ಕಲಿತಿದ್ದಾರೆ, ಹಾಗೆಯೇ, ಪಿಯುಸಿ ವರೆಗೆ ಕಲಿತಿರುವ ಮಹಿಳಾ ಮಾಹಿತಿದಾರರ ಸಂಖ್ಯೆ ೩ ಅಂದರೆ ಶೇ. ೨ರಷ್ಟಿದ್ದಾರೆ ಮತ್ತು ಪದವಿ ವರೆಗೆ ವ್ಯಾಸಂಗ ಮಾಡಿರುವವರು ಕೇವಲ ೨ ಜನ ಮಾತ್ರ ಅಂದರೆ ಇವರ ಶೇಕಡವಾರು ಪ್ರಮಾಣ ೧ರಷ್ಟಿದೆ.

ಸಿದ್ದಿ ಬುಡಕಟ್ಟು ಕುಟುಂಬಗಳಲ್ಲಿ ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸುವ ವಿಚಾರದಲ್ಲಿ ಮಕ್ಕಳ ಶಿಕ್ಷಣದ ವಿಷಯದಲ್ಲಿ ಮತ್ತು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುವ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳುವಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸುತ್ತಿರುವುದು ಕಂಡುಬಂದಿದೆ. ಮಕ್ಕಳಿಗೆ ಶಿಕ್ಷಣ ಮತ್ತು ಅವರ ಪ್ರತಿ ನಿತ್ಯದ ಜವಾಬ್ದಾರಿಗಳನ್ನು ತೆಗೆದುಕೊಳ್ಳುವಲ್ಲಿ ಶೇ. ೬೭ರಷ್ಟು ಮಹಿಳೆಯರ ಪಾತ್ರ ನಿರ್ಣಯಕವಾಗಿರುವುದು ಕಂಡುಬಂದಿದೆ. ಕೌಟುಂಬಿಕ ವಿಚಾರಗಳು ಅಂದರೆ

ಮಕ್ಕಳ ವಿವಾಹ, ಆಸ್ತಿ, ಮನೆ ಮುಂತಾದ ವಿಚಾರಗಳಲ್ಲಿ ನಿರ್ಣಯಕೈಗೊಳ್ಳುವಲ್ಲಿ ಗಂಡ-ಹೆಂಡತಿ ಇಬ್ಬರೂ ಸೇರಿ ನಿರ್ಧರಿಸಿದರು. ಶೇ. ೫೯ರಷ್ಟು ಕುಟುಂಬಗಳಲ್ಲಿ ಪುರುಷರದ್ದೇ ಅಂತಿಮ ನಿರ್ಣಯ ವಾಗಿರುತ್ತದೆ. ಕುಟುಂಬದ ದೈನಂದಿನ ಬದುಕಿಗೆ ಬೇಕಾಗುವ ಅಗತ್ಯ ವಸ್ತುಗಳನ್ನು ಕೊಂಡುತರುವಲ್ಲಿ ಪುರುಷರೇ ಮುಂಚೂಣಿಯಲ್ಲಿದ್ದರೂ, ಮಹಿಳೆಯರೂ ವಾರದ ಮಾರುಕಟ್ಟೆಗೆ ಹೋಗಿ ಅಗತ್ಯವಸ್ತುಗಳ ಖರೀದಿಯಲ್ಲಿ ಮಹತ್ವದ ಪಾತ್ರವಹಿಸುತ್ತಿರುವುದು ಕಂಡುಬಂದಿದೆ.

ಒಟ್ಟಾರೆ ಭಾರತೀಯ ಸಮಾಜದ ಇತರ ಮುಂದುವರಿದ ಸಮೂಹಗಳ ಮಹಿಳೆಯರಿಗಿಂತ ಸಿದ್ದಿ ಬುಡಕಟ್ಟು ಮಹಿಳೆಯರು ಪುರುಷರಿಗೆ ಸಮಾನವಾಗಿ ಬದುಕುತ್ತಿರುವುದು ಕಂಡುಬಂದಿದೆ.

ಶಿಕ್ಷಣ

ಶಿಕ್ಷಣ ಸಮಾಜದ ಸರ್ವಾಂಗೀಣ ಪ್ರಗತಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿರುವ ಪ್ರಬಲ ಸಾಧನವಾಗಿದೆ. ಸಿದ್ದಿಯರು ಸಾಮಾಜಿಕವಾಗಿ ಅತಿ ಹಿಂದುಳಿದ ಸಮೂಹವಾಗಿದೆ ಇವರನ್ನು ಧಲಿತರಂತೆ ನೂಡುತ್ತಾರೆ. ಸಿದ್ದಿಯರಲ್ಲಿ ಅನಕ್ಷರತೆ ಹೆಚ್ಚಾಗಿದೆ. ಇತ್ತೀಚಿಗೆ ಸಿದ್ದಿಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ನಂತರ ಅರ್ಧದಲ್ಲಿಯೆ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೆಣ್ಣುಮಕ್ಕಳು ಪ್ರೌಢಾವಸ್ಥೆಗೆ ಬಂದ ನಂತರ ಎಲ್ಲಾ ಮೂರು ಧರ್ಮಗಳ ಸಿದ್ದಿಯರಲ್ಲಿಯೂ ಅವರನ್ನು ಶಿಕ್ಷಣ ಮುಂದುವರಿಸಲು ಪ್ರೋತ್ಸಾಹಿಸುವುದಿಲ್ಲ. ಸಿದ್ದಿ ಹೆಣ್ಣು ಮತ್ತು ಗಂಡುಮಕ್ಕಳು ದೈಹಿಕ ಲಕ್ಷಣಗಳು ಮತ್ತು ಚರ್ಮದ ಬಣ್ಣದ ಕಾರಣದಿಂದ ರ್‍ಯಾಗಿಂಗಿಗೆ ಒಳಗಾಗಿ ಶಿಕ್ಷಣವನ್ನು ಮೊಟಕುಗೊಳಿಸುತ್ತಾರೆ. ಬಾಲ್ಯ ವಿವಾಹವನ್ನು ಸಾಮಾನ್ಯವಾಗಿ ಸಿದ್ದಿಯರು ಆಚರಿಸುತ್ತಾರೆ ಹೆಣ್ಣು ಮಕ್ಕಳಿಗೆ ೧೪-೧೫ನೇ ವಯಸ್ಸಿಗೆ ವಿವಾಹ ಮಾಡುವುದರಿಂದ ಮಹಿಳೆಯರ ಸಾಕ್ಷರತೆ ಕಡಿಮೆಯಾಗಲು ಕಾರಣವಾಗಿದೆ.

ಸಿದ್ದಿ ಜನಾಂಗದ ಮಹಿಳೆಯರಲ್ಲಿ ಶೇ. ೬೮ರಷ್ಟು ಮಹಿಳೆಯರು ಅನಕ್ಷರಸ್ಥರಾಗಿರುವುದು ಕಂಡುಬಂದಿದೆ. ಆದರೆ, ಇತ್ತೀಚಿನ ಬದಲವಣೆ ಎಂಬಂತೆ ಸಿದ್ದಿ ಜನಾಂಗದ ಹೆಣ್ಣುಮಕ್ಕಳು ಶಾಲೆಗೆ ಹೋಗುತ್ತಿರುವುದು, ಅದರಲ್ಲಿಯೂ ಹೆಚ್ಚಾಗಿ ಪ್ರೌಢಶಾಲೆ, ಪಿ.ಯು.ಸಿ. ಮತ್ತು ಪದವಿ ಹಂತಗಳನ್ನು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಶಿಕ್ಷಣ ಪಡೆಯುತ್ತಿರುವುದು ಕಂಡುಬಂದಿದೆ. ಕಾರಣಗಳನ್ನು ಕಂಡುಕೊಳ್ಳಲು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೌಪಚಾರಿಕವಾಗಿ ಸಂಗ್ರಹಿಸಿಕೊಂಡ ಮಾಹಿತಿಗಳ ಪ್ರಕಾರ, ಗಂಡು ಮಕ್ಕಳು ೧೩-೧೪ನೇ ವಯಸ್ಸಿಗೆ ಬರುತ್ತಿದ್ದಂತೆ, ಅರಣ್ಯ ಉತ್ಪನಗಳ ಸಂಗ್ರಹಕ್ಕಾಗಿ ಗೋವಾ, ಮಂಗಳೂರು, ಮುಂತಾದ ನಗರಗಳಿಗೆ ವಲಸೆ ಹೋಗುವುದರಿಂದ ಮತ್ತು ಸರಕು ವಾಹನ ಖರೀದಿ ಕೃಷಿಯಲ್ಲಿ ತೊಡಗಿಕೊಳ್ಳುವುದರಿಂದ ಗಂಡುಮಕ್ಕಳು ಶಿಕ್ಷಣವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿರುವುದು ಕಂಡುಬಂದಿದೆ.

ಈ ಅಧ್ಯಯನದ ಮಾಹಿತಿದಾರರಲ್ಲಿ ಕುಟುಂಬದಲ್ಲಿ ವೈವಾಹಿಕ ವಿಚಾರಗಳಿಗೆ ಸಂಬಂಧಿಸಿದಂತೆ ರಾಷ್ಟ್ರ, ರಾಜ್ಯ ಮತ್ತು ಉತ್ತರಕನ್ನಡ ಜಿಲ್ಲೆಯ ಬುಡಕಟ್ಟೇತರ ಇತರ ಸಮುದಾಯಗಳು ಮತ್ತು

ಸಿದ್ದಿಯೇತರ ಇತರ ಬುಡಕಟ್ಟುಗಳಿಗೆ ಹೋಲಿಕೆ ಮಾಡಿದಾಗ ಸಿದ್ದಿಯರಲ್ಲಿ ಲಿಂಗಾನುಪಾತ ಅತ್ಯಧಿಕವಾಗಿದೆ. ಅಂದರೆ ಪ್ರತಿ ಸಾವಿರ ಪುರುಷರಿಗೆ ೧೦೦೩ ಜನ ಮಹಿಳೆಯರಿದ್ದಾರೆ ಎನ್ನುವುದು ೨೦೧೧ರ ಜನಗಣತಿಯ ವರದಿಯಿಂದ ತಿಳಿದುಬರುತ್ತದೆ. ಆದಾಗ್ಯು ಈ ಸಮುದಾಯದ ಅತ್ಯಧಿಕ ಅಂದರೆ ಶೇ. ೭೭ರಷ್ಟು ಕುಟುಂಬಗಳು ಏಕಪತ್ನಿತ್ವದ ಕುಟುಂಬಗಳಾಗಿರುವುದು ಕಂಡುಬಂದಿದೆ. ಉಳಿದಂತೆ ಶೇ. ೭ರಷ್ಟು ದ್ವಿಪತ್ನಿತ್ವ ಮತ್ತು ಶೇ. ೧೫ರಷ್ಟು ಬಹುಪತ್ನಿತ್ವದ ವಿವಾಹದ ಕುಟುಂಬಗಳು ಇರುವುದು ತಿಳಿದುಬರುತ್ತದೆ.

೬ನೇ ಡಿಸೆಂಬರ್ ೨೦೧೩ರಂದು ಯಲ್ಲಾಪುರದ ಪ್ರೇಮದ ನಕ್ಷತ್ರಗಳು ಶಾಲೆಗೆ ಭೇಟಿ ನೀಡಿ, ಅಲ್ಲಿಯ ಮುಖ್ಯಸ್ಥರಾಗಿರುವ ಲಿಯೋಲಿಯಾ ಅವರ ಅನುಮತಿ ಪಡೆದು ಶಾಲೆಯ ಆವರಣದಲ್ಲಿ ಸುತ್ತಾಡಿ, ಶಿಕ್ಷಕಿಯಾಗಿರುವ ಲಾರೆನ್ಸ್ ಅವರೊಂದಿಗೆ ಸಂವಾದ ನಡೆಸಿ, ಶಾಲೆಯಲ್ಲಿರುವ ಮಕ್ಕಳ ಬಗ್ಗೆ ಮತ್ತು ಸಿದ್ದಿ ಸಮುದಾಯದ ಬಗ್ಗೆ ಮಾಹಿತಿ ಪಡೆದುಕೊಂಡೆ. ಹೀಗೆ ಅಲ್ಲಿಂದ ಹೊರಡುವಾಗ, ನಾನು, ಸಿದ್ದಿ ಸಮುದಾಯದ ಜನರಲ್ಲಿ ಆಗಿರುವ ಬದಲಾವಣೆಗಳೇನು? ಎಂದು ಕೇಳಿದಾಗ, ಪ್ರಾರಂಭದಲ್ಲಿ ನಾವು ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ಕೇಳಲು ಹೋದರೆ ಅವರು ಹೆದರಿ ಓಡುತ್ತಿದ್ದರು, ಈಗ, ನಮ್ಮನ್ನೇ ಹೆದರಿಸಿ ಶಾಲೆಗೆ ಪ್ರವೇಶ ಕೇಳುವಂತಾಗಿದ್ದಾರೆ ಎಂದು ಉತ್ತರಿಸಿದರು. ಇದು ಶಿಕ್ಷಣದ ಬಗ್ಗೆ ಸಿದ್ದಿ ಸಮುದಾಯದವರಲ್ಲಿ ಮೂಡಿರುವ ಅರಿವನ್ನು ಸೂಚಿಸಿತು.

ಹಾಗಾಗಿ ನಾನು ಶಿಕ್ಷಣ ಸಂಸ್ಥೆಗಳಿಗೆ ಬೇಟಿ ನೀಡಿದಾಗ ಬುಡಕಟ್ಟು ಜನರ ವೈಯಕ್ತಿಕ ಮತ್ತು ಸಾಮಾಜಿಕ ಸಬಲೀಕರಣದ ಮೂಲಕ ಜೀವನದಲ್ಲಿ ಸಮೃದ್ಧತೆ ಪಡೆಯಲು, ಸಾಮರ್ಥ್ಯದ ಮಟ್ಟವನ್ನು ಹೆಚ್ಚಿಸಿಕೊಳ್ಳಲು, ತೊಂದರೆಗಳಿಂದ ಹೊರಬರಲು ಮತ್ತು ತಮ್ಮ ಜೀವನ ಮಟ್ಟವನ್ನು ಸುಸ್ಥಿರವಾಗಿ ಇಟ್ಟುಕೊಳ್ಳುವಂತಹ ಅವಕಾಶಗಳನ್ನು ವಿಸ್ತರಿಸಿಕೊಳ್ಳಲು ಶಿಕ್ಷಣ ಒಂದೇ ಏಕೈಕ ಸಾಧನವಾಗಿದೆ ಎಂಬ ಸತ್ಯ ಸಿದ್ದಿ ಬುಡಕಟ್ಟು ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಭಾಗವಹಿಸಿ ಸಾಧನೆ ಮಾಡುತ್ತಿರುವುದರಿಂದ ಸ್ಪಷ್ಟವಾಗುತ್ತದೆ

ಸ್ಟಡೀಸ್ ಇನ್ ಸೋಶಿಯಲ್ ಚೇಂಜ್ ಎತ್ನೋಗ್ರಾಫಿಕ್ ಅಂಡ್ ಪೋಕ್ ಕಲ್ಚರಲ್ ಸೊಸೈಟಿ ಎಂಬ ಗ್ರಂಥದಲ್ಲಿ ಬಿ.ಕೆ. ರಾಯ್‌ಬರ್ಮನ್ ಅವರು ಬುಡಕಟ್ಟು ಜನರು ಶಿಕ್ಷಣ ಮತ್ತು ಆಧುನಿಕ ತಂತ್ರಜ್ಞಾನವನ್ನು ಪಡೆದುಕೊಂಡಿದ್ದರೂ ಬುಡುಕಟ್ಟು ಜಗತ್ತಿನ ಭಾವನೆಗಳನ್ನು ಉಳಿಸಿಕೊಂಡಿದ್ದಾರೆ ಎಂದು ಕಂಡುಕೊಂಡಿರುವಂತೆ, ಸಿದ್ದಿ ಜನರಲ್ಲಿಯು ಸಾಕ್ಷರತೆಯ ಪ್ರಮಾಣ ಮತ್ತು ಅವರ ಸಾಂಪ್ರದಾಯಿಕ ಮೌಲ್ಯ ಮತ್ತು ಭಾವನೆಗಳಿಗೆ ಸಂಬಂಧಿಸಿದಂತೆ ಅಕ್ಷರಸ್ಥರು ಮತ್ತು ಅನಕ್ಷರಸ್ತರು ಎರಡಲ್ಲಿ ಪ್ರಕಾರದ ಜನರು ತಮ್ಮನ್ನು ಒಂದು ವಂಶಾವಳಿಯ ಜನರೆಂದ ಗುರುತಿಸಿಕೊಂಡಿರುವುದು ಕಂಡುಬಂದಿದೆ. ಶೇ. ೫೫ರಷ್ಟು ಅನಕ್ಷರಸ್ಥರು, ಶೇ. ೪೫ರಷ್ಟು ಅಕ್ಷರಸ್ಥರೂ ಇರುವ ಈ ಸಮುದಾಯದಲ್ಲಿ ಔಪಚಾರಿಕ ಶಿಕ್ಷಣಕ್ಕೆಂದ ಆಧುನಿಕ ಕೌಶಲ್ಯಗಳನ್ನು ಅಳವಡಿಸಿಕೊಂಡು ಬದುಕನ್ನು ಕಟ್ಟಿಕೊಳ್ಳಬೇಕೆಂಬ ಹಂಬಲ ಇವರಲ್ಲಿ ಕಂಡುಬಂದಿದೆ.

ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ೩೯೦ ಕುಟುಂಬಗಳ ಮಾಹಿತಿದಾರರಲ್ಲಿ ೨೧೪ ಕುಟುಂಬಳಲ್ಲಿನ ಪ್ರತಿಶತ ೫೫ ರಷ್ಟು ಮಾಹಿತಿದಾರರು ಅನಕ್ಷರಸ್ಥರಾಗಿದ್ದು ಯಾವುದೇ ರೀತಿಯ ಅಕ್ಷರ ಜ್ಞಾನವನ್ನು ಹೊಂದಿಲ್ಲ. ಅದರಂತೆ ೧೭೬ ಕುಟುಂಬಗಳ ಪ್ರತಿಶತ ೪೫ ರಷ್ಟು ಮಾಹಿತಿದಾರರು ಅಕ್ಷರಸ್ಥರಾಗಿದ್ದರೆ.

ಈ ವಿವರಣೆಯ ಪ್ರಕಾರ ಅಧಿಕ ಪ್ರಮಾಣದಲ್ಲಿ ಬುಡಕಟ್ಟು ಮಾಹಿತಿದಾರರು ಯಾವುದೇ ರೀತಿಯ ಅಕ್ಷರಜ್ಞಾನವನ್ನು ಹೊಂದದೆ ಇರುವುದು ಕಂಡು ಬಂದಿದೆ. ಕಾರಣ ಕೆಲವೊಂದು ಬುಡಕಟ್ಟು ಪ್ರದೇಶಗಳೆಲ್ಲ ಉತ್ತಮವಾದ ಶಾಲೆ ಮತ್ತು ಶಿಕ್ಷಕರ ಕೊರತೆಯಿಂದಾಗಿ ಶಿಕ್ಷಿತರ ಪ್ರಮಾಣವು ಕಡಿಮೆ ಇರುವುದು ಕಂಡು ಬಂದಿದೆ.

ಪ್ರತಿಶತ ೫೪ರಷ್ಟು ಮಾಹಿತಿದಾರರು ಅಭಿಪ್ರಾಯಪಡುವಂತೆ ತಮ್ಮ ಕುಟುಂಬದಲ್ಲಿರುವ ಮಕ್ಕಳು ಮತ್ತು ಇತರ ಸದಸ್ಯರು ಶಾಲೆಗೆ ಹೋಗುತ್ತಿದ್ದು ಸಾಕ್ಷರರಾಗಿದ್ದಾರೆ ಎಂಬಂತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶತ ೪೬ರಷ್ಟು ಮಾಹಿತಿದಾರರ ಕುಟುಂಬದ ಸದಸ್ಯರು ಅನಕ್ಷರಸ್ಥರು ಎಂಬಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲಿನ ವಿವರಣೆಯನ್ನು ನೋಡಲಾಗಿ ಸರ್ಕಾರ ಎಲ್ಲ ಪ್ರದೇಶಗಳಲ್ಲಿಯೂ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿದ್ದು ನಿಧಾನವಾಗಿ ಸಮುದಾಯ ಎಲ್ಲಾ ಸದಸ್ಯರು ಅವುಗಳ ಸದುಪಯೋಗವನ್ನು ಪಡೆಯುತ್ತಿದ್ದು ಸಾಕ್ಷರತೆಯ ಪ್ರಮಾಣವು ನಿಧಾನವಾಗಿ ಅಧಿಕವಾಗಿರುವುದು ಕಂಡು ಬಂದಿದೆ.

ಬುಡಕಟ್ಟು ಜನರ ಶೈಕ್ಷಣಿಕ ಮಟ್ಟವನ್ನು ಇತರ ಜನಸಮೂಹಗಳ ಶೈಕ್ಷಣಿಕ ಮಟ್ಟಕ್ಕೆ ಹೋಲಿಕೆ ಮಾಡಿದಾಗ ಬುಡಕಟ್ಟು ಜನರಲ್ಲಿ ಶಿಕ್ಷಣ ಕಡಿಮೆಯಿದೆ. ಇದಕ್ಕೆ ಹಲವಾರು ಅಂಶಗಳು ಕಾರಣವಾಗಿವೆ. ಅದರಂತೆ, ಈ ಅಧ್ಯಯನದ ಮಾಹಿತಿದಾರರ ಪೈಕಿ ಪ್ರತಿಶತ ೨೪ರಷ್ಟು ಮಾಹಿತಿದಾರರು ತಾವು ಎದುರಿಸುತ್ತಿರುವಂತಹ ಅತಿಯಾದ ಬಡತನವೇ ತಾವು ಅನಕ್ಷರಸ್ಥರಾಗಿಸಲು ಮೂಲ ಕಾರಣವಾಗಿದೆ. ಅದರಂತೆ ಪ್ರತಿಶತ ೪೨ರಷ್ಟು ಮಾಹಿತಿದಾರರು ತಾವು ವಾಸಿಸುವಂತಹ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಬೇಕಾದ ಮೂಲ ಸೌಕರ್ಯಗಳಿಲ್ಲದಿರುವುದು ಅವರ ಅನಕ್ಷರತೆಗೆ ಕಾರಣವಾಗಿದೆ. ಪ್ರತಿಶತ ೩೪ರಷ್ಟು ಮಾಹಿತಿದಾರರು ಅಭಿಪ್ರಾಯ ಪಡುವಂತೆ ತಮಗೆ ಶಿಕ್ಷಣದ ಮಹತ್ವದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಅನಕ್ಷರತೆಗೆ ಕಾರಣವಾಗಿದೆ. ಮೇಲಿನ ವಿವರಣೆಯನ್ನು ನೋಡಲಾಗಿ ಅತ್ಯಧಿಕ ಪ್ರಮಾಣದ ೪೨ ಮಾಹಿತಿದಾರರು ತಾವುಗಳು ಸೌಲಭ್ಯ ವಂಚಿತರಾಗಿದ್ದು, ಆದ್ದರಿಂದಲೇ ಸಾಕ್ಷರರಾಗಲು ಸಾಧ್ಯವಾಗುತ್ತಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸರ್ಕಾರ ಮತ್ತು ಸ್ವಂಯ ಸೇವಾಸಂಸ್ಥೆಗಳು ಉಚಿತವಾಗಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿದ್ದರೂ ಇಂತಹ ಶೈಕ್ಷಣಿಕ ಸೌಲಭ್ಯಗಳು ಈ ಸಮುದಾಯದ ಎಲ್ಲಾ ಮಕ್ಕಳಿಗೂ ದೊರೆಯುತ್ತಿಲ್ಲ ಎಂಬುದು ತಿಳಿದುಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಬಡತನ, ಸೌಲಭ್ಯಗಳ ಕೊರತೆ ಮತ್ತು ಈ ಜನಾಂಗದವರಲ್ಲಿ ಇರಬಹುದಾದ ಅಜ್ಞಾನವೇ ಕಾರಣವಾಗಿದೆ.

ಆರೋಗ್ಯ

ಮಾನವ ಅಭಿವೃದ್ಧಿ ಸೂಚ್ಯಾಂಕಗಳಲ್ಲಿ ಆರೋಗ್ಯಕ್ಕೆ ಮಹತ್ವದ ಸ್ಥಾನವಿದೆ. ಶಿಕ್ಷಿತರಾಗಿ ಹಣವನ್ನು ಸಂಪಾದಿಸಿ ಆರೋಗ್ಯ ಸರಿಯಿಲ್ಲದಿದ್ದರೆ ಮನುಷ್ಯನ ಬದುಕು ದುಸ್ತರವಾಗುತ್ತದೆ. ಹೆಚ್ಚು ಸಂಖ್ಯೆಯ ಅನಕ್ಷರಸ್ಥರಿರುವ ಈ ಸಮೂಹದ ಜನರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಮತ್ತು ಅರಿವು ಇಲ್ಲ. ಕಾಯಿಲೆಗಳಿಗೆ ಸಾಂಪ್ರದಾಯಿಕ ವೈಧ್ಯ ಪದ್ಧತಿಯನ್ನು ಹೆಚ್ಚು ಜನ ಅವಲಂಬಿಸಿದ್ದಾರೆ. ಹೃದಯಕ್ಕೆ ಸಂಬಂಧಿಸಿದ, ಅಪೆಂಡಿಕ್ಸ್ ಅಲ್ಸರ್ ನಂತಹ ಕಾಯಿಲೆಗಳನ್ನು ಸೂಕ್ತ ಅಮಯದಲ್ಲಿ ಗುರುತಿಸಿಕೊಳ್ಳಲಾಗದೆ ಮರಣ ಹೊಂದುತ್ತಾರೆ. ಇವರಲ್ಲಿ ಶೇ. ೯೦ರಷ್ಟು ಪುರುಷರು ಮತ್ತು ಶೇ. ೨೫ರಷ್ಟು ಮಹಿಳೆಯರು ಮಧ್ಯಪಾನ ಮಾಡುತ್ತಾರೆ, ಎದರ ಪರಿಣಾಮವಾಗಿ ದುಡಿದ ಆದಾಯವನ್ನು ಮಧ್ಯಪಾನಕ್ಕೆ ಖರ್ಚು ಮಾಡುತ್ತಾರೆ. ಹಾಗೆಯೆ ಅದರಿಂದುಟಾಗುವ ಆರೋಗ್ಯದ ಸಮಸ್ಯೆಗಳಿಗೂ ಹಣದ ಅವಶ್ಯಕತೆಯಿಂದಾಗಿ, ಸಾಲಗಾರರಾಗಿ ಸಂಕಷ್ಟಕ್ಕೆ ಸಿಲಿಕಿಕೊಂಡಿದ್ದಾರೆ. ಈ ಅಧ್ಯಯನದಲ್ಲಿ ಶೇ. ೪೪ರಷ್ಟು ಮಂದಿ ಅನಾರೋಗ್ಯದಿಂದ ನರಳುತ್ತಿದ್ದಾರೆ. ಶೇ. ೩೦ರಷ್ಟು ಮಂದಿ ಆರೋಗ್ಯದಿಂದ ಇರುವುದು ಕಂಡುಬರುತ್ತದೆ. ಉಳಿದ ಶೇ. ೧೯ರಷ್ಟು ಜನರು ಆಗಾಗ್ಗೆ ಯಾವಾಗಲಾದರೊಮ್ಮೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಆದರೆ ಕ್ಷೇತ್ರಕಾರ್ಯದ ಸಾಮಾನ್ಯ ಅವಲೋಕನದಲ್ಲಿ ಕಂಡುಬಂದಿರುವ ಪ್ರಕಾರ ಸಿದ್ದಿ ಜನರು ಆರೋಗ್ಯದ ಬಗ್ಗೆ ನಿಷ್ಕಳಜಿ ತೋರುತ್ತಿದ್ದರು, ಕಾಯಿಲೆ ತೀವ್ರ ಸ್ವರೂಪಕ್ಕೆ ಹೋದ ಮೇಲೆ ಆಧುನಿಕ ವೈದ್ಯರ ಬಳಿ ಬರುತ್ತಿರುವುದು ಕಂಡುಬಂದಿದೆ. ಅಲ್ಸರ್, ವಿಷಮ ಶೀತ ಜ್ವರ, ಡೆಂಗು ಮುಂತಾದ ಕಾಯಿಲೆಗಳಿಗೆ ತುತ್ತಾದವರು ಈ ಕಾಯಿಲೆಗಳ ಬಗ್ಗೆ ಸರಿಯಾದ ಅರಿವು ಇಲ್ಲದೇ ಮರಣ ಹೊಂದುತ್ತಿರುವುದು ಕಂಡುಬಂದಿದೆ. ಅಂದರೆ, ಸಿದ್ದಿ ಜನಾಂಗದವರಲ್ಲಿರುವ ಅನಕ್ಷರತೆ, ಅಜ್ಞಾನ ಸ್ಥಳೀಯ ಸಾಂಪ್ರದಾಯಿಕ ವೈದ್ಯರ ಮೇಲಿನ ಅವಲಂಬನೆ, ಮೂಢನಂಬಿಕೆಗಳು ಮತ್ತು ಆರೋಗ್ಯ ನೈರ್ಮಲ್ಯದ ಕುರಿತಾಗಿರುವ ನಿರ್ಲಕ್ಷತೆಯಿಂದ ಆರೋಗ್ಯಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ. ಈಗಲೂ ಈ ಜನಾಂಗದವರಲ್ಲಿ ಶೇ. ೯ರಷ್ಟು ಜನರು ಮಾತ್ರ ಆಧುನಿಕ ಅಲೋಪತಿ ವೈದ್ಯ ಪದ್ಧತಿಯಿಂದ ಚಿಕಿತ್ಸೆ ಪಡೆಯುತ್ತಿರುವುದು ತಿಳಿದುಬಂದಿದೆ. ಅಂತೆಯೇ ಶೇ. ೩೦ರಷ್ಟು ಮಾಹಿತಿದಾರರು ಸಾಂಪ್ರದಾಯಿಕ ವೈದ್ಯ ಪದ್ಧತಿಯನ್ನೆ ನಂಬಿರುವುದು ಕಂಡುಬರುತ್ತದೆ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಸಿದ್ದಿ ಜನಾಂಗದವರಲ್ಲಿರುವ ಮೇಲಿನ ಮನೋಭಾವನೆಯಿಂದಾಗಿ ಶೇ. ೫೨ರಷ್ಟು ಹೆರಿಗೆ ಸಂದರ್ಭದಲ್ಲಿ ತಾಯಿ ಅಥವಾ ಮಗುವಿನ ಸಾವು ಸಂಭವಿಸಿರುವುದು ಕಂಡುಬಂದಿದೆ. ಇಷ್ಟೆಲ್ಲಾ ಆರೋಗಯ ಸಮಸ್ಯೆಗಳನ್ನು ಎದುರಿಸುತ್ತಿರುವ ಜನಾಂಗದವರಲ್ಲಿ ಶೇ. ೫೯ರಷ್ಟು ಜನರು ಸರ್ಕಾರಿ ಆಸ್ಪತ್ರೆಗಳ ಕಾರ್ಯವೈಖರಿಯ ಬಗ್ಗೆ ಅಸಮದಾನ ಹೊಂದಿರುವುದು ಕಂಡುಬಂದಿದೆ. ಅದರಂತೆ ಶೇ. ೫೩ರಷ್ಟು ಜನರು ಸಾಂಪ್ರದಾಯಿಕ ಬುಡಕಟ್ಟು ವೈದ್ಯರನ್ನೇ ನಂಬಿರುವುದು ಕಂಡುಬಂದಿದೆ. ಇನ್ನು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಕೃತಿಯೊಂದಿಗೆ ಬೆಳೆಯುತ್ತಿರುವ ಮಕ್ಕಳಿಗೆ ಯಾವುದೇ ರೀತಿಯ ಆರೋಗ್ಯದ ಸಮಸ್ಯೆ ಇರುವುದಿಲ್ಲ ಎಂದು

ಕೆಲವರು ಹೇಳಿದರೆ ಶೇ. ೫೧ರಷ್ಟು ಜನರು ನೀಡಿರುವ ಮಾಹಿತಿಯಂತೆ ಮಕ್ಕಳ ಆರೋಗ್ಯ ಸಾಧಾರಣ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಮಧ್ಯಮ ಅಥವಾ ಸಾಧಾರಣ ರೀತಿಯ ಆರೋಗ್ಯವನ್ನು ಹೊಂದಿರುವ ಮಕ್ಕಳ ಪೋಷಕರು ಸಾಂಪ್ರದಾಯಿಕ ಮಾದರಿಯ ಚಿಕಿತ್ಸೆ ಕುರಿತು ಆಸಕ್ತಿ ಹೊಂದಿರುವುದರಿಂದ, ಆಧುನಿಕ ವೈದ್ಯಕೀಯ ಸೌಲಭ್ಯದಿಂದ ದೂರ ಇರುವುದರಿಂದ ಮಕ್ಕಳು ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿರುವುದು ಕಂಡುಬಂದಿದೆ.

ಸರ್ಕಾರದ ಉಚಿತ ೧೦೮ ಸೇವೆಯ ಸೌಲಭ್ಯ ಲಭ್ಯವಿದ್ದರು ಕೂಡ ಕಾಡಿನೊಳಗಡೆ ವಾಸಿಸುತ್ತಿರುವ ಸಿದ್ದಿ ಜನಾಂಗದವರ ವಾಸದ ನೆಲೆಗಳಿಗೆ ೧೦೮ ವಾಹನ ಹೋಗುವುದು ಕಷ್ಟಕರ ವಾಗಿದೆ. ಆದ್ದರಿಂದ ಹೆರಿಗೆಯ ಸಂದರ್ಭದಲ್ಲಿ ಪ್ಯಾರಲೆಸ್ ಮತ್ತು ಹೃದಯರೋಗಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ತುತ್ತಾದವರು ಮರಣ ಹೊಂದಿರುವುದು ಕಂಡುಬಂದಿದೆ.

ಆರ್ಥಿಕತೆ

ಸಿದ್ದಿಯರ ಆರ್ಥಿಕ ಪರಿಸ್ಥಿತಿ ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಕಂಡುಬರುತ್ತದೆ. ಇವರು ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳೆರಡರಲ್ಲೂ ವಾಸಿಸುತ್ತಿದ್ದಾರೆ. ಇವರಲ್ಲಿ ಅತಿ ಹೆಚ್ಚು ಅಂದರೆ ಶೇ. ೭೫ರಷ್ಟು ಜನರು ಸ್ತ್ರೀ ಪುರುಷರಿಬ್ಬರೂ ಬದುಕಲು ಅರಣ್ಯ ಉಪ ಉತ್ಪನ್ನಗಳ ಸಂಗ್ರಹ ಮಾಡುವ ಬುಟ್ಟಿ ತಯಾರಿಸುವ ಬಿದಿರಿನ ಪೀಠೋಪಕರಣಗಳ ತಯಾರಿಕೆಯಂತಹ ಸಾಂಪ್ರದಾಯಿಕ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ. ಅವರು ಸಂಗ್ರಹಿಸಿದ ಈ ಉತ್ಪನ್ನಗಳಿಘೆ ಸರಿಯಾದ ಮಾರುಕಟ್ಟೆ ಸೌಲಭ್ಯವಿಲ್ಲದೇ ಸ್ಥಳೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಈ ಕೆಲಸಗಳನ್ನು ಬಿಟ್ಟರೆ ಅವರಿಗೆ ಇರುವುದು ಮತ್ತು ಕೃಷಿ ಮಾಡುವುದು ಮತ್ತು ದಿನಗೂಲಿ ಕೃಷಿ ಕೆಲಸ, ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕೂಲಿ, ಈ ಎಲ್ಲಾ ಉದ್ಯೋಗದ ಮೂಲಗಳು ಸಾಂಧರ್ಬಿಕ ವಾಗಿರುತ್ತವೆ ಮತ್ತು ಸುಸ್ಥಿರ ಆದಾಯವನ್ನು ತಂದುಕೊಡುವುದಿಲ್ಲ. ಈ ಎಲ್ಲಾ ಮೂಲಗಳಿಂದ ಬರುವ ಆದಾಯ ಅವರ ದಿನ ನಿತ್ಯದ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಪರಿಣಾಮವಾಗಿ ಖಾಸಗಿಯವರಿಂದ ಸಾಲ ಪಡೆದು ಅವರ ಮನೆಯಲ್ಲಿ ಕಡಿಮೆ ಕೂಲಿಗೆ ಕೆಲಸ ಮಾಡುತ್ತರೆ. ಕೆಲವು ಪುರುಷರು ಮತ್ತು ಯುವಕರು ಕಾರು ಮತ್ತು ಟ್ರಕ್ಕುಗಳ ಚಾಲಕರಾಗಿ ಮತ್ತು ಮಹಿಳೆಯರು ಬೇರೆಯವರ ಮನೆಯಲ್ಲಿ ಮನೆಕೆಲಸಗಳನ್ನು ಮಾಡುತ್ತಾರೆ. ಇವೆಲ್ಲವೂ ಸಾಂಧರ್ಬಿಕ ಉದ್ಯೋಗ ಗಳಾಗಿರುವುದರಿಂದ ಕೆಲವರು ಗೋವಾ, ಮಹಾರಾಷ್ಟ್ರ, ಉಡುಪಿ, ಮಂಗಳೂರು ಮತ್ತು ಬೆಂಗಳೂರುಗಳಿಗೆ ವಲಸೆ ಹೋಗಿ, ಕಟ್ಟಡ ನಿರ್ಮಾಣದಲ್ಲಿ, ಮಟ್ಟನ್‌ಸ್ಟಾಲ್‌ಗಳಲ್ಲಿ ಮತ್ತು ಮಹಿಳೆಯರು ಗಾರ್ಮೆಂಟ್‌ಗಳಲ್ಲಿ ಮತ್ತು ಮನೆಕೆಲಸದವರಾಗಿ ಕೆಲಸ ಮಾಡುತ್ತಾರೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರರು ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ನೀಡಿರುವ ಮಾಹಿತಿಗಳು. ೩೯೦ ಜನ ಮಾಹಿತಿದಾರರ ಪೈಕಿ ೧೭೯ ಜನರು ಅಂದರೆ ಶೇ ೪೩ ರಷ್ಟು ಮಹಿತಿದರರು ಕೃಷಿ ಕೂಲಿಕಾರ್ಮಿಕರಗಿದ್ದಾರೆ. ಇವರಲ್ಲಿ ೧೬೧ ಜನರು ಅಂದರೆ ಶೇ ೪೧ ರಷ್ಟು ಮಾಹಿತಿದಾರರು ಅಲ್ಪಸ್ವಲ್ಪ ಜಮೀನನ್ನೂ ಹೊಂದಿದ್ದು ವ್ಯವಸಾಯವನ್ನು

ಮಾಡುತ್ತ ಕೃಷಿ ಕಾರ್ಮಿಕರಾಗಿಯೂ ಕೆಲಸ ಮಡುತಿದ್ದಾರೆ. ಒಟ್ಟು ಮಾಹಿತಿದಾರರಲ್ಲಿ ೨೦ ಜನರು ಅಂದರೆ, ಶೇ. ೫೦ರಷ್ಟು ಮಾಹಿತಿದಾರರು ಕೇವಲ ಕೃಷಿಯನ್ನ ಮಾಡುತ್ತಿದ್ದಾರೆ. ೧೧ ಜನ ಮಾಹಿತಿದರರು ಅಂದರೆ ಶೇ. ೩ರಷ್ಟು ಜನರು ಸಣ್ಣ ವ್ಯಾಪಾರವನ್ನು ಮಡುತ್ತ ಬದುಕುತ್ತಿದ್ದಾರೆ. ಮಾಹಿತಿದಾರರ ಪೈಕಿ ೧೪ ಜನರು ಅಂದರೆ ಶೇ. ೪ರಷ್ಟು ಜನರು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಮತ್ತು ಸ್ಥಳೀಯವಾಗಿ ಗಾರೆ ಕೆಲಸದವರಾಗಿ ಮತ್ತು ಇತರೆ ಕೆಲಸಗಳ ಮೂಲಕ ದುಡಿಯುತ್ತಿದ್ದಾರೆ. ಉಳಿದ ೧೫ ಜನರು ಅಂದರೆ ಶೇ. ೪ರಷ್ಟು ಮಾಹಿತಿದಾರರು ಅರಣ್ಯ ಉಪ ಉತ್ಪನ್ನಗಳ ಸಂಗ್ರಹ, ಸರಕು ಸಾಗಣೆ ಮತ್ತು ಪ್ರಯಾಣಿಕರ ಲಘು ವಾಹನಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದರೆ.

ಸಿದ್ದಿ ಜನಾಂಗದ ಆರ್ಥಿಕ ಸಂಘಟನೆಯು ತುಂಬಾ ಸರಳವಾದುದಾದ್ದು ವ್ಯವಸಾಯದ ಸುತ್ತಲೇ ಕೇಂದ್ರೀಕೃತವಾಗಿರುವುದು ಕಂಡುಬಂದಿದೆ. ವ್ಯವಸಾಯದ ಶೈಲಿ ಮತ್ತು ಅದು ನಡೆಯುವ ರೀತಿ ಅವರ ಸಾಮಾಜಿಕ ಆದರ್ಶ ಮತ್ತು ಮನೋಭಾವನೆಗಳಿಂದ ನಿರ್ದೇಶಿಸಲ್ಪಡುತ್ತದೆ. ಅವರು ತಾವು ಬದುಕುವುದಕ್ಕಾಗಿ ದುಡಿಯಬೇಕೆಂದು ತಿಳಿದಿದ್ದರು. ಅವರ ಸಾಮಾಜಿಕ ತತ್ವಾದರ್ಶಗಳಲ್ಲಿ ಹೆಚ್ಚುವರಿ ಸಂಪತ್ತಿನ ಸಂಗ್ರಹಕ್ಕೆ ಅವಕಾಶವಿಲ್ಲ. ಈಗ ಅವರು ಒಂದು ಹಂಚಿನ ಮನೆ ಕಟ್ಟಿಸಿಕೊಳ್ಳುವುದು ಮತ್ತು ಕೆಲವೇ ಎಕರೆಗಳಷ್ಟು ಭೂಮಿಯ ಒಡೆತನ ಹೊಂದುವುದು ಅವರ ಪ್ರಮುಖ ಗುರಿಯಾಗಿತ್ತು. ಇದಕ್ಕಿಂತ ಹೆಚ್ಚಾಗಿ ಅವರು ಏನನ್ನು ಆಶಿಸುತ್ತಿರಲಿಲ್ಲ. ಆದರೆ, ಈಗ ಇತರ ಸಮೂಹಗಳಂತೆ, ಆದುನಿಕ ಜೀವನಶೈಲಿ ರೂಡಿಸಿಕೊಳ್ಳಿತ್ತಿರುವುದು ಕಂಡು ಬಂದಿದೆ.

ಸಿದ್ದಿ ಜನರ ಆರ್ಥಿಕ ಪರಿಸ್ಥಿತಿಯು ಸರಳ ಮತ್ತು ನಿಯಮಿತ, ಆದಾಗ್ಯೂ ಅದು ಸಾಮಾಜಿಕ ತೊಡಗುವಿಕೆಯ ಮಹತ್ವವನ್ನು ಪಡೆದಿದೆ. ಆರ್ಥಿಕ ಕ್ರಿಯೆಯ ಚಾಲಕ ಶಕ್ತಿ ಕೆಲವು ಸಾಮಾಜಿಕ ನಿಯಮಗಳಲ್ಲಿನ ಪರಿಣಾಮವಾಗಿರುತ್ತಿತ್ತು. ಅವರ ಪ್ರಕಾರ ಸಾಂದರ್ಭಿಕವಾಗಿ ವಯಸ್ಸಾದವರು, ಅನಾರೋಗ್ಯ ಪೀಡಿತರು, ಮತ್ತು ಚಿಕ್ಕ ಮಕ್ಕಳನ್ನು ಹೊರತುಪಡಿಸಿ ಸಿದ್ದಿ ಜನಾಂಗದ ಯಾವೊಬ್ಬ ವ್ಯಕ್ತಿಯೂ ದುಡಿಯದೇ ತಿನ್ನುವಂತಿಲ್ಲ. ದುಡಿಯುವ ವಯಸ್ಸಿನ ಯಾವುದೇ ವ್ಯಕ್ತಿಯ ಸೋಮಾರಿತನವು ಸಾಮಾಜಿಕ ಮನ್ನಣೆ ಗಳಿಸುವುದಿಲ್ಲ ಮತ್ತು ಅದನ್ನು ಅವಮಾನಕರ ಎಂದು ಪರಿಗಣಿಸುತ್ತಿರಿವಿದಿ ಕಂಡುಬರುತ್ತದೆ.. ಸ್ವಾಭಾವಿಕವಾಗಿ ಅವರ ಸಾಮರ್ಥ್ಯದ ಬಗ್ಗೆ ಹೆಮ್ಮೆಪಡುತ್ತಾರೆ ಮತ್ತು ಸಾಮಾಜಿಕ ಟೀಕೆಗಳ ಬಗ್ಗೆಯೂ ತುಂಬಾ ಅರಿವುಳ್ಳವರಾಗಿದ್ದಾರೆ. ಅವರಿಗೆ ಪರಿಶ್ರಮದ ಕೆಲಸ ಕೇವಲ ಹಣ ಗಳಿಕೆಗೆ ಮಾತ್ರವಲ್ಲ, ಸಮಾಜದಲ್ಲಿ ಘನತೆಯನ್ನು ತಂದುಕೊಡುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

'ಟ್ರೈಬಲ್ ಎಕಾನಮಿ ಇನ್ ಗುಜರಾತ್' ಎಂಬ ಸಂಶೋಧನಾ ಪ್ರಬಂಧದಲ್ಲಿ **ಮಿಮಲ್ ಷಾ** ಅವರು, ಅಖಿಲ ಭಾರತ ಗ್ರಾಮೀಣ ಅಭಿವೃದ್ಧಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಇನ್ವೆಸ್ಟ್‌ಮೆಂಟ್ ಸಮೀಕ್ಷೆಯ ಆಧಾರದ ಮೇಲೆ ಗುಜರಾತಿನ ಬುಡಕಟ್ಟು ಆರ್ಥಿಕತೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಫಲಿತಗಳಲ್ಲಿ ಹೊರ ಹೊಮ್ಮಿರುವ ಪ್ರಮುಖ ಅಂಶಗಳೆಂದರೆ-ವೃತ್ತಿಗಳಲ್ಲಿ ವೈವಿಧ್ಯತೆ ಉಂಟಾಗುತ್ತಿರುವುದು, ಬುಡಕಟ್ಟಿನ ಬಹುಸಂಖ್ಯೆಯ ಜನರು

ಕೃಷಿಯಲ್ಲಿ ಮುಂದುವರಿದಿರುವುದು, ಕೃಷಿಯನ್ನು ಆಧುನೀಕರಿಸಲು ಸ್ವಲ್ಪ ಮಟ್ಟಿನ ಬಂಡವಾಳ ಹೂಡಿಕೆ, ಉತ್ಪಾದನೆಯಲ್ಲಿ ಸ್ವಲ್ಪಮಟ್ಟಿನ ಹೆಚ್ಚಳ, ಮತ್ತು ಅನೇಕ ಜನರು ಹಣಕಾಸಿನ ವ್ಯವಹಾರಕ್ಕೆ ಸಾಂಪ್ರದಾಯಕ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನೇ ಅವಲಂಬಿಸಿರುವುದು ಕಂಡುಬಂದಿದೆ. ಅದರಂತೆ ನನ್ನ ಈ ಅಧಯಯಯನದಲ್ಲಿಯೂ ಸಿದ್ದಿ ಜನಾಂಗದ ಬಹುಸಂಖ್ಯೆ ಯಜನದರು ಕೃಷಿಯಲದಲಿ ಮುಂದುವರಿದಿರುವುದು ಕಂಡು ಬಂದದೆ.

ಹಾಗೆಯೇ, ವಿಮರ್ಲ ಶಾ ಅವರು ಕಂಡುಕೊಂಡಿರುವಂತೆ ಸಿದ್ದಿ ಜನಾಂಗದ ಜನರಲ್ಲಿಯೂ ಹಣಕಾಸಿನ ಮತ್ತು ಹಣಕಾಸೇತರ ವ್ಯವಹಾರಗಳೆರಡೂ ರೂಢಿಯಲ್ಲಿರುವುದೂ ಕಂಡುಬಂದಿದೆ. ಅದರಲ್ಲೂ ಸಾಮಾನ್ಯವಾಗಿ ಎಲ್ಲರಿಗೂ ಅನುಕೂಲವಾಗುವ ಮತ್ತು ಹೆಚ್ಚು ಜನರು ಇಷ್ಟಪಡುವ ಹಣಕಾಸೇತರ ವಿನಿಮಯಗಳು ಹೆಚ್ಚು ಜನಪ್ರಿಯವಾಗಿವೆ. ಹಣಕಾಸೇತರ ವ್ಯವಹಾರಗಳಲ್ಲಿ ಜನಾಂಗದ ಜನರು ತಮ್ಮಲ್ಲಿನ ದಿನನಿತ್ಯದ ಜೀವನದಲ್ಲಿ ತಕ್ಷಣ ಉಪಯೋಗಕ್ಕೆ ಸಿಗುವ ವಸ್ತು ಮತ್ತು ಸೇವೆ ವಿನಿಮಯ ಪದ್ಧತಿಗೆ ಮಹತ್ವ ಕೊಡುತ್ತಿರುವುದು ಈಗಲೂ ಕೆಲವುಕಡೆ ಆಚರಣೆಯಲ್ಲಿದೆ. ಈ ರೀತಿಯ ವಿನಿಮಯ ವ್ಯವಸ್ಥೆಯನ್ನು 'ವಾಟಾ' ಎಂದು ಕರೆಯಲಾಗುತ್ತದೆ. ವಾಟಾ ವ್ಯವಸ್ಥೆಯ ಪ್ರಕಾರ ಇತರೆ ವಸ್ತುಗಳು ಮತ್ತು ಸೇವೆಗಳನ್ನು ಬತ್ತಕ್ಕೆ ವಿನಿಮಯ ಮಾಡಿಕೊಳ್ಳುತ್ತಾರೆ. ಸ್ಥಳೀಯ ಅವಶ್ಯಕತೆಯ ಆಧಾರದ ಮೇಲೆ ಭತ್ತಕ್ಕೆ ತಮ್ಮ ಸೇವೆ ಮತ್ತು ವಸ್ತುಗಳನ್ನು ವಿನಿಮಯ ಮಾಡಿ ಕೊಳ್ಳುವುದು ಸಂಪ್ರದಾಯವಾಗಿತ್ತು. ಕರಾವಳಿ ಪ್ರದೇಶದ ಮೀನುಗಾರರು ವರ್ಷದಲ್ಲಿ ಒಂದು ಅಥವಾ ಎರಡು ಬಾರಿ ಸಿದ್ದಿ ಜನಾಂಗದವರ ನೆಲೆಗಳಿಗೆ ಹೋಗಿ ಮೀನು ಕೊಟ್ಟು ಭತ್ತ ತೆಗೆದು ಕೊಂಡು ಹೋಗುತ್ತಿದ್ದರು. ಈಗ ಸಿದ್ದಿಯರಲ್ಲಿಯೇ ಕೆಲವರು ಕರಾವಳಿಗೆ ಹೋಗಿ ಮೀನನ್ನು ತಂದು ಸಿದ್ದಿಯರ ನೆಲೆಗಳಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದಿದೆ. ಸಿದ್ದಿ ಜನರ ಪ್ರಾಥಮಿಕ ಆರ್ಥಿಕ ಚಟುವಟಿಕೆ ಕೃಷಿ, ಮತ್ತು ಪೂರಕ ಆದಾಯದ ಮೂಲಕ್ಕಾಗಿ ಅರಣ್ಯ ಕಾರ್ಮಿಕರಾಗಿ ಮತ್ತು ಜೇನು ತುಪ್ಪ ಸಂಗ್ರಹಿಸುವ ಕೆಲಸ ಮಾಡುತ್ತಾರೆ.

ಸಿದ್ದಿಗಳು ತಮ್ಮ ಕೌಟುಂಬಿಕ ಸಂಬಂಧಿಗಳ ನಡುವೆ ಮತ್ತು ಸಮೂಹದೊಳಗಿನ ಸಹಕಾರದ ಮೂಲಕ ಉಳ್ಳವರು ಮತ್ತು ಇಲ್ಲದವರು ಅದರ ಪ್ರತಿಫಲವನ್ನು ಹಂಚಿಕೊಳ್ಳುತ್ತಾರೆ. ಒಬ್ಬ ಸಿದ್ದಿಯು ಆತನಲ್ಲಿರುವ ವಸ್ತುಗಳನ್ನು ಇತರರೊಂದಿಗೆ ಹಂಚಿಕೊಳ್ಳದಿದ್ದರೆ, ನೆಮ್ಮದಿಯಿರುತ್ತಿರಲಿಲ್ಲ ಎಂದು ಜನಾಂಗದ ಹಿರಿಯರಾದ ಶಿವಾ ಸಿದ್ದಿ ಹೇಳುತ್ತಾರೆ. ಸಿದ್ದಿಗಳಲ್ಲಿ ಯಾರಾದರೊಬ್ಬರು ಇಂತಹ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡರೆ ಅಂತಹ ವ್ಯಕ್ತಿಯನ್ನು ಇತರರು ಟೀಕಿಸುವರಲ್ಲದೇ, ಸಾಮಾಜಿಕ ಅವಕೃಪೆಗೂ ಒಳಗಾಗಬೇಕಾಗುತ್ತದೆ. ಸೋಮಾರಿತನವನ್ನು ಬಿಟ್ಟು ಬೇರೆಯಾವುದೇ ಕಾರಣದಿಂದ ಸಹೋದರರಲ್ಲಿ ಯಾರಾದರೊಬ್ಬರದು ಬೆಳೆ ನಾಶವಾಗಿದ್ದರೆ, ಸಿದ್ದಿ ಜನರ ನೀತಿಸಂಹಿತೆಯಂತೆ ಉತ್ತಮ ಫಸಲು ಪಡೆದ ಸಹೋದರ ನಷ್ಟ ಅನುಭವಿಸಿದ ಸಹೋದರನಿಗೆ ಸುಗ್ಗಿಯ ಕಾಲದಲ್ಲಿ ಪಾಲು ಕೊಡುತ್ತಾನೆ. ಈ ರೀತಿ ಮಾಡದೇ ಇದ್ದರೆ ಅವನು ಸ್ವಾರ್ಥವನ್ನು ಪ್ರದರ್ಶಿಸಿದಂತಾಗುತ್ತದೆ. ಅಗೌರವದ ರೀತಿಯಲ್ಲಿ ಜನರು ಅವನ ಮೇಲೆ ಆಪಾದನೆ ಮಾಡುತ್ತಾರೆ. ಆದ್ದರಿಂದ ಸಿದ್ದಿ ಜನಾಂಗದಲ್ಲಿನ

ಆರ್ಥಿಕತೆಯು, ಆಧುನಿಕ ಕೈಗಾರಿಕಾ ಆರ್ಥಿಕತೆಯಂತೆ ಸಂಪತ್ತನ್ನು ಒಬ್ಬನೇ ಕ್ರೂಢೀಕರಿಸಿಕೊಳ್ಳು ವಂತಹದ್ದಾಗಿರದೆ, ಸಂಪತ್ತನ್ನು ಹಂಚಿಕೊಂಡು ಅನುಭವಿಸುವುದಾಗಿದೆ. ಅದರಲ್ಲೂ, ವಿಶೇಷವಾಗಿ ರಕ್ತ ಸಂಬಂಧಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಕೃಷಿ ಉತ್ಪನ್ನಗಳು ಮತ್ತು ಇತರ ಉತ್ಪನ್ನಗಳನ್ನು ಹಂಚಿಕೊಳ್ಳುವುದೇ ಅವರ ಆರ್ಥಿಕತೆಯ ಆಧಾರವಾಗಿದೆ. ಹೀಗೆ ಅವರ ಆರ್ಥಿಕ ವ್ಯವಸ್ಥೆಯೇ ಸಮಾಜದಲ್ಲಿನ ಸಂಬಂಧಗಳನ್ನು ಗಟ್ಟಿಗೊಳಿಸಿದೆ, ಶಾಶ್ವತಗೊಳಿಸಿದೆ.

ಸಿದ್ದಿ ಜನಾಂಗದವರಲ್ಲಿ ಕೆಲವೇ ಕುಟುಂಬಗಳು ಭೂಮಿಯ ಒಡೆತನವನ್ನು ಹೊಂದಿವೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡು ಬಂದಂತೆ ಕೆಲವು ಕುಟುಂಬಗಳು ಮಾತ್ರ ಪೂರ್ವಜರಿಂದ ಪಡೆದ ಪಿತ್ರಾರ್ಜಿತ ಆಸ್ತಿಯನ್ನು ಹೊಂದಿದ್ದಾರೆ. ಅವರಲ್ಲಿ ಭೂಒಡೆತನವನ್ನು ಎಷ್ಟು ತಲೆಮಾರುಗಳಿಂದ ಹೊಂದಿದ್ದಾರೆ ಎನ್ನುವುದರ ಆಧಾರದ ಮೇಲೆ ಹಳ್ಳಿಯಲ್ಲಿ ಯಜಮಾನಿಕೆಯನ್ನು ನಿರ್ಧರಿಸ ಲಾಗುತ್ತಿತ್ತೆಂದು ಟಿ.ಸಿ. ಪಾಲಾಕ್ಷಪ್ಪ ಅವರು ಹೇಳಿರುವುದು ಸತ್ಯವೆಂದು ತಿಳಿದುಬಂದಿದೆ. ಬುದ್ದಿವಂತ ಎಂದು ಕರೆಯುವ ಹಳ್ಳಿಯ ಮುಖ್ಯಸ್ಥನು ಹಿಂದಿನ ಪೀಳಿಗೆಯವರಿಂದ ಭೂ ಒಡೆತನವನ್ನು ಹೊಂದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಜನಾಂಗದವರಲ್ಲಿ ಬಹುಸಂಖ್ಯಾತ ಕುಟುಂಬಗಳು ಇತ್ತೀಚಿಗೆ ಭೂ ಒಡೆತನವನ್ನು ಪಡೆದಿದ್ದಾರೆ. ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಸ್ವಚ್ಛಗೊಳಿಸಿಕೊಂಡು ಉಳುಮೆ ಮಾಡುತ್ತ ಅದನ್ನು ಸರ್ಕಾರದ ಯೋಜನೆಗಳ ಸಹಾಯದಿಂದ ತಮ್ಮದನ್ನಾಗಿಸಿಕೊಂಡಿದ್ದಾರೆ. ಕೆಲವರು ಈಗ ಭಾರತ ಸರ್ಕಾರದ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳು ಮತ್ತು ಸಾಂಪ್ರದಾಯಿಕ ಅರಣ್ಯ ವಾಸಿಗಳ ಭೂಮಿ ಹಕ್ಕಿನ ೨೦೦೬ನೇ ಕಾಯಿದೆಯ ಪ್ರಕಾರ ತಾವು ಉಳುಮೆ ಮಾಡುತ್ತಿರುವ ಭೂಮಿಯ ಒಡೆತನವನ್ನು ಪಡೆದು ಕೊಳ್ಳುತ್ತಿದ್ದಾರೆ. ಆದರೆ, ಇದಕ್ಕೆ ಅರಣ್ಯ ಇಲಾಖೆಯ ಕೆಲವು ಅಧಿಕಾರಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಭೂಮಿಯ ಮೇಲಿನ ಇವರ ಹಕ್ಕಿಗೆ ಅಡಚಣೆಯನ್ನು ಒಡ್ಡುತ್ತಿರುವುದು ಕಂಡುಬಂದಿದೆ. ಏಕೆಂದರೆ, ಈಗಾಗಲೇ ವ್ಯವಸಾಯ ಯೋಗ್ಯ ಭೂಮಿಯು ಸ್ಥಳೀಯವಾಗಿ ಪ್ರಬಲರಾಗಿರುವ ಮೇಲ್ಜಾತಿಯವರ ಒಡೆತನದಲ್ಲಿದೆ. ಸಿದ್ದಿ ಜನಾಂಗದವರಿಗೆ ಅರಣ್ಯ ಇಲಾಖೆಯ ಭೂಮಿಯನ್ನು ಕಂದಾಯ ಇಲಾಖೆಯ ಮೂಲಕ ಕೃಷಿ ಮಾಡಲು ಕೊಟ್ಟಿದ್ದಾರೆ. ಈ ರೀತಿ ಪಡೆದ ಭೂಮಿಯನ್ನು ಅವರು ಸ್ವಂತ ಬೇಸಾಯಕ್ಕೆ ಮಾತ್ರ ಉಪಯೋಗಿಸಿಕೊಳ್ಳಬೇಕೇ ಹೊರತು ಅದನ್ನು ಪರಬಾರೆ ಮಾಡುವಂತಿಲ್ಲ. ಇಂತಹ ಭೂಮಿಯನ್ನು ತಖ್ಯಾವಿ ಭೂಮಿ ಎಂದು ಕರೆಯಲಾಗುತ್ತದೆ ಎಂದು ಜನಾಂಗದ ಪ್ರಮುಖರು ಹೇಳುತ್ತಾರೆ. ತಖ್ಯಾವಿ ಭೂಮಿಯನ್ನು ಭೂರಹಿತ ಬುಡಕಟ್ಟು ಕುಟುಂಬ ದವರಿಗೆ ಕೊಡಲಾಗಿರುತ್ತದೆ. ಸಾಮಾನ್ಯವಾಗಿ ಈ ರೀತಿ ಪಡೆದ ಭೂಮಿಯನ್ನು ಸ್ವತಃ ತಾವೇ ಗಿಡಗಂಟಿ ಮತ್ತು ಮರಗಳನ್ನು ಕಡಿದು ಕಲ್ಲುಗಳನ್ನು ಹೊರಹಾಕಿ ವ್ಯವಸಾಯ ಯೋಗ್ಯ ಭೂಮಿ ಯನ್ನಾಗಿ ಮಾಡಿಕೊಳ್ಳಬೇಕು. ಈ ತಹರದ ಭೂಮಿಯ ಫಲಾನುಭವಿಗಳು ಹೇಳುವ ಪ್ರಕಾರ, ಇಂತಹ ಭೂಮಿಯಿಂದ ಮೊದಲ ಎರಡು ಮೂರು ವರ್ಷಗಳಲ್ಲಿ ಹೆಚ್ಚು ಆದಾಯ ಸಿಗುವುದಿಲ್ಲ ನಂತರ ಭೂಮಿಯ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ೩೯೦ ಮಾಹಿತಿದಾರ ಕುಟುಂಬಗಳ ಪೈಕಿ ೧೭೦ ಕುಟುಂಬಗಳು ಅಂದರೆ ಶೇ. ೪೪ರಷ್ಟು ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿದ್ದು ಈ ಜಮೀನೂ ಸಹ ಅವರು ವಾಸಿಸಲು ಕಟ್ಟಿಕೊಂಡಿರುವ ಮನೆಯ ಸುತ್ತಲಿನ ಜಾಗವಾಗಿರುತ್ತದೆ. ಹಾಗೂ ೧೦೦ ಮಾಹಿತಿದಾರ ಕುಟುಂಬಗಳು ಅಂದರೆ ಶೇ. ೨೬ ರಷ್ಟು ಮಾಹಿತಿದಾರರು ಒಂದರಿಂದ ಎರಡು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದಾರೆ. ಹಾಗೆಯೇ, ೭೦ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೧೮ರಷ್ಟು ಮಾಹಿತಿದರರು ಎರಡರಿಂದ ಮೂರು ಎಕರೆ ಜಮೀನಿನ ಒಡೆತನ ಹೊಂದಿದ್ದಾರೆ. ಹಾಗೆಯೇ, ೨೫ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೬ರಷ್ಟು ಮಾಹಿತಿದಾರರು ಮೂರರಿಂದ ನಾಲ್ಕು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದರೆ. ಹಾಗೆಯೇ, ೨೦ ಮಾಹಿತಿದಾರರ ಕುಟುಂಬಗಳು ಅಂದರೆ, ಶೇ. ೫ರಷ್ಟು ಮಾಹಿತಿದಾರರು ನಾಲ್ಕರಿಂದ ಐದು ಎಕರೆ ಜಮೀನಿನ ಒಡೆತನವನ್ನು ಹೊಂದಿದ್ದರೆ. ಸಿದ್ದಿ ಜನಾಂಗದವರಲ್ಲಿ ಐದು ಎಕರೆಗಿಂತ ಹೆಚ್ಚು ಜಮೀನಿನ ಒಡೆತನವನ್ನು ಹೊಂದಿರುವ ಮಾಹಿತಿದಾರರು ಕೇವಲ ಐದು ಕುಟುಂಬಗಳು ಅಂದರೆ, ಶೇ. ೧ರಷ್ಟು ಮಾಹಿತಿದಾರರು ಐದು ಎಕರೆಗಿಂತ ಹೆಚ್ಚು ಜಮೀನಿನ ಒಡೆತನವನ್ನು ಹೊಂದಿದ್ದಾರೆ. ಈ ಕುಟುಂಬಗಳ ಈ ಚಿಕ್ಕಗಾತ್ರದ ಭೂಮಿಯೂ ಅವರು ವಾಸಿಸುತ್ತಿರುವ ಮನೆಗಳಿಗೆ ಹೊಂದಿಕೊಂಡಿರುವ ಹಿತ್ತಲುಗಳನ್ನು ಸೇರಿಸಿ ಕೊಂಡು ಮಾಹಿತಿದಾರರು ಕೂಲಿಯ ವಿವರಗಳನ್ನು ನೀಡಿದ್ದಾರೆ. ಆದ್ದರಿಂದ ಇಲ್ಲಿ ಭೂರಹಿತ ಕುಟುಂಬಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿಲ್ಲ. ಅಂದರೆ ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿರುವವರೆಲ್ಲರೂ ಭೂರಹಿತ ಕೃಷಿ ಕಾರ್ಮಿಕರೇ ಆಗಿದ್ದಾರೆ.

ಈ ಭಾಗದ ಸಿದ್ದಿ ಜನಾಂಗದವರು ಬೆಳೆಯುವ ಪ್ರಮುಖ ಬೆಳೆ ಭತ್ತ, ಯಾವಾಗಲಾದರೊಮ್ಮೆ ಭತ್ತದ ಬದಲಾಗಿ ಕಬ್ಬನ್ನು ಬೆಳೆಯುತ್ತಾರೆ, ಕಬ್ಬಾಗಲಿ ಭತ್ತವಾಗಲಿ ವರ್ಷಕ್ಕೆ ಒಂದೇ ಬೆಳೆಯನ್ನು ಬೆಳೆಯುತ್ತಾರೆ. ನೀರಾವರಿಯ ಕೊರತೆಯಿಂದಾಗಿ ಎರಡನೇ ಬೆಳೆಯ ಬಗ್ಗೆ ಅವರು ಯೋಚಿಸುವುದಿಲ್ಲ. ಕಾಡುಗಳ ಇಳಿಜಾರಾದ ಪ್ರದೇಶಗಳಲ್ಲಿ ಅವರ ಕೃಷಿ ಭೂಮಿ ಇರುವುದರಿಂದ ನೀರಾವರಿ ಸೌಲಭ್ಯವೇ ಇರುವುದಿಲ್ಲ. ಕೆಲವು ಕಡೆಗಳಲ್ಲಿ ನೀರಿನ ಲಭ್ಯತೆ ಇದ್ದರೂ, ಸಿದ್ದಿಗಳ ಭೂಮಿಯಿರುವ ನಿರ್ಧಿಷ್ಟ ಪ್ರದೇಶದಿಂದಾಗಿ ಎರಡನೇ ಬೆಳೆಯನ್ನು ಅವರು ಬೆಳೆಯುವಂತಿಲ್ಲ. ಅವರ ವಾಸ ಸ್ಥಳವು ಹಳ್ಳಿಯ ಹೊರ ವಲಯದಲ್ಲಿದ್ದರೆ, ಉನ್ನತ ಅಥವಾ ಪ್ರಬಲ ಜಾತಿಯ ಜನರ ಕೃಷಿ ಭೂಮಿಯು ನೀರಾವರಿ ಸೌಲಭ್ಯ ಸುಲಭವಾಗಿ ಲಭ್ಯವಾಗುವ ಕಡೆಗಳಲ್ಲಿರುತ್ತದೆ. ಆದ್ದರಿಂದ, ಹೆಚ್ಚಾಗಿರುವ ನೀರು ಸ್ಥಳೀಯ ಮೇಲ್ಜಾತಿ ಜನರ ಭೂಮಿಗೆ ಸೀಮಿತವಾಗಿದೆ. ಡೋಂಗ್ರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಾಳೇಗಾಂವ್ ಎಂಬ ಹಳ್ಳಿಯ ಸಿದ್ದಿ ಜನಾಂಗದ ರೈತರು ಹೇಳುವ ಪ್ರಕಾರ, ಅವರು ಒಮ್ಮೆ ಎರಡನೇ ಬೆಳೆಯನ್ನು ಬೆಳೆಯಲು ಪ್ರಯತ್ನಿಸಿ, ನೀರುಸಿಗದೇ ಬೆಳೆಯನ್ನು ಕಳೆದುಕೊಂಡು ನಷ್ಟವನ್ನು ಅನುಭವಿಸಿದ್ದಾರೆ. ಆದ್ದರಿಂದ ಅವರು ಎರಡನೇ ಬೆಳೆ ಬೆಳೆಯುವ ಸಾಹಸಕ್ಕೆ ಕೈ ಹಾಕುತ್ತಿಲ್ಲ.

ಸಿದ್ದಿ ಜನಾಂಗದವರು ಅಡಿಕೆ ತೋಟ ಮಾಡುವುದರಲ್ಲಿ ನಿಪುಣರಾಗಿದ್ದಾರೆ, ಆದಾಗ್ಯೂ, ಸ್ವಂತ ಅಡಿಕೆ ತೋಟದ ಒಡೆತನ ಹೊಂದಿರಲಿಲ್ಲ. ಇತ್ತೀಚಿಗೆ ಸರ್ಕಾರದಿಂದ ಮಂಜೂರಾಗಿರುವ ಭೂಮಿಯಲ್ಲಿ ಅಲ್ಪ ಸ್ವಲ್ಪ ಅಡಿಕೆ ಬೆಳೆಯುತ್ತಿದ್ದಾರೆ. ಅಡಿಕೆ ಗಿಡಗಳನ್ನು ನೆಟ್ಟು, ಮೂರು ನಾಲ್ಕು ವರ್ಷಗಳವರೆಗೆ ಕಾಯುವಷ್ಟು ಸಹನೆ ಮತ್ತು ಸಾಮರ್ಥ್ಯ ಈ ಜನಾಂಗದ ಜನರಿಗೆ ಇಲ್ಲದೇ ಇರುವುದರಿಂದ ಅವರು ಸ್ಥಳೀಯ ಜಮೀನುದಾರರ ಅಡಿಕೆ ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿದ್ದಾರೆ. ಇವರ ಬಳಿ ಬಂಡವಾಳವೂ ಇಲ್ಲದಿರುವುದರಿಂದ ಅಲ್ಪಾವಧಿಯಲ್ಲಿ ಪಸಲು ಕೊಡುವ ಬೆಳೆಗಳನ್ನು ಬೆಳೆಯುತ್ತಾರೆ. ತಮ್ಮ ಮನೆಯ ಸುತ್ತ ಮುತ್ತ ಇರುವ ಜಾಗದಲ್ಲಿ ಮೆಣಸಿನಕಾಯಿ, ಸೌತೆಕಾಯಿ, ಬೆಂಡೆಕಾಯಿ, ಟೊಮೆಟೋ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇದನ್ನು ಹೆಚ್ಚಾಗಿ ಕುಟುಂಬದ ಉಪಯೋಗಕ್ಕೆ ಬಳಸುತ್ತಾರೆ, ಉಳಿದ ತರಕಾರಿಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೂ, ಇದರಿಂದ ಅವರ ಕುಟುಂಬದ ಆದಾಯಕ್ಕೆ ಮಹತ್ವದ ಕೊಡುಗೆಯೇನೂ ಆಗುವುದಿಲ್ಲ.

ಕೃಷಿಗೆ ಸಂಬಂಧಿಸಿದಂತೆ ಈ ಜನಾಂಗದ ರೈತರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು, ಅವುಗಳೆಂದರೆ,

೧. ಸ್ವಂತ ಭೂಮಿಯನ್ನು ಹೊಂದಿರುವವರು.

೨. ಬೆಳೆ ಹಂಚಿಕೆಯ ಮೇಲೆ ಕೃಷಿ ಮಾಡುತ್ತಿರುವವರು.

೩. ಗುತ್ತಿಗೆಯ ಆಧಾರದ ಮೇಲೆ ಭೂಮಿಯನ್ನು ಉಳುಮೆ ಮಾಡುತ್ತಿರುವವರು.

೪. ಭೂರಹಿತ ಕೃಷಿ ಕಾರ್ಮಿಕರು.

ಒಂದನೇ ವರ್ಗದ ರೈತರು ಸ್ವತಃ ತಾವೇ ಭೂಮಿಯ ಒಡೆತನವನ್ನು ಹೊಂದಿರುತ್ತಾರೆ, ಅಂತಹ ರೈತ ಕುಟುಂಬಗಳು ಸಣ್ಣ ಹಿಡುವಳುದಾರರಾಗಿ ವ್ಯವಸಾಯ ಮಾಡುತ್ತಿದ್ದಾರೆ. ಎರಡನೆಯದಾಗಿ, ಉಳುಮೆ ಮಾಡುತ್ತಿರುವ ಗೇಣಿದಾರರು. ಭೂಮಿಯನ್ನು ಭೋಗ್ಯಕ್ಕೆ ಪಡೆದುಕೊಂಡು ವ್ಯವಸಾಯ ಮಾಡುತ್ತಾರೆ. ಸ್ಥಳೀಯವಾಗಿ ಇತರೆ ಜಾತಿಯವರಿಂದ ಭೂಮಿಯನ್ನು ವಾರಕ್ಕೆ ತೆಗೆದುಕೊಂಡು ಬೇಸಾಯ ಮಾಡುತ್ತಾರೆ. ಈ ರೀತಿಯ ಬೇಸಾಯದಲ್ಲಿ ಉಳುಮೆ ಮಾಡುವವರು ಮತ್ತು ಭೂಮಾಲಿಕರು ಫಸಲನ್ನು ಹಂಚಿಕೊಳ್ಳುತ್ತಾರೆ ಮತ್ತು ಭೂಮಿಯನ್ನು ಬಾಡಿಗೆಗೂ ಪಡೆಯುತ್ತಾರೆ. ಬೆಳೆ ಹಂಚಿಕೊಳ್ಳುವ ಪದ್ಧತಿಯಲ್ಲಿ ಭೂ ಮಾಲೀಕರು ಮತ್ತು ಗೇಣಿದಾರರು ಎಲ್ಲವನ್ನೂ ಸಮನಾಗಿ ಹಂಚಿಕೊಳ್ಳುತ್ತಾರೆ. ಬೆಳೆಯನ್ನು ಬೆಳೆಯುವ ಜವಾಬ್ದಾರಿಯೂ ಇಬ್ಬರ ಮೇಲೂ ಇರುತ್ತದೆ. ಭೂಮಾಲೀಕನು ಎತ್ತುಗಳು, ಕೃಷಿ ಉಪಕರಣಗಳು, ಬೀಜ ಮತ್ತು ಗೊಬ್ಬರಗಳನ್ನು ಒದಗಿಸುತ್ತಾನೆ, ಉಳುಮೆ ಮಾಡುವವರು ಶ್ರಮವಹಿಸಿ ಕೆಲಸ ಮಾಡುತ್ತಾರೆ.

ಮತ್ತೊಂದು ರೀತಿಯ ಗೇಣಿ ಪದ್ಧತಿಯೆಂದರೆ, ಭೂಮಿಯನ್ನು ಕೆಲವು ಷರತ್ತುಗಳಿಗೊಳಪಟ್ಟು ಒಪ್ಪಂದದ ಆಧಾರದ ಮೇಲೆ ಬಾಡಿಗೆಗೆ ಕೊಡುವುದು., ಭೂಮಿಯ ಫಲವತ್ತತೆ ಮತ್ತು ಪ್ರದೇಶವೂ ಕೂಡ ಭೂ ಬಾಡಿಗೆಯ ನಿರ್ಧಾರಕ ಅಂಶಗಳಾಗಿರುತ್ತವೆ. ಒಪ್ಪಂದಮಾಡಿಕೊಂಡು ಭೂಮಿಯನ್ನು

ಒಮ್ಮೆ ಬಾಡಿಗೆಗೆ ಪಡೆದರೆ ಅದರ ಉಳುಮೆಯ ಸಂಪೂರ್ಣ ಜವಾಬ್ದಾರಿ ಗೇಣಿದಾರ ಅಥವಾ ಬಾಡಿಗೆಗೆ ಪಡೆದ ರೈತನದೇ ಆಗಿರುತ್ತದೆ.

ಭೂರಹಿತ ಕೃಷಿ ಕಾರ್ಮಿಕರೂ ಕೂಡ, ಗೇಣಿ ಅಥವಾ ಬಾಡಿಗೆಗೆ ಬೇರೆಯವರ ಭೂಮಿಯನ್ನು ಪಡೆದು ಉಳುಮೆ ಮಾಡುತ್ತಾರೆ, ಅಥವಾ ಸ್ವತಃ ಕೃಷಿ ಮಾಡುವ ರೈತರ ಹೊಲದಲ್ಲಿ ಕೆಲಸ ಮಾಡುವ ಮೂಲಕ ಕೂಲಿ ಆಳುಗಳಾಗಿ ದುಡಿಯುತ್ತಾರೆ. ಹೆಚ್ಚಾಗಿ ಇವರು ಹವ್ಯಕ ಬ್ರಾಹ್ಮಣರು ಅಥವಾ ಸ್ಥಳೀಯ ಇತರ ಜಾತಿಯ ಜಮೀನ್ದಾರರೊಂದಿಗೆ ನಿರಂತರ ಸೇವಾ ಸಂಬಂಧಗಳನಿಟ್ಟು ಕೊಂಡಿರುತ್ತಾರೆ. ಕೂಲಿಯನ್ನು ಭಾಗಶಃ ವಸ್ತುಗಳ ರೂಪದಲ್ಲಿ ಮತ್ತು ಹಣದ ರೂಪದಲ್ಲಿ ಪಡೆಯುತ್ತಾರೆ. ಈ ಕೆಳಗಿನ ಪಟ್ಟಿಯ ಮೂಲಕ ಸಿದ್ದಿ ಜನಾಂಗದ ಕುಟುಂಬಗಳು ಹೊಂದಿರುವ ಭೂಮಿಯ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಸಿದ್ದಿ ಜನಾಂಗದವರಲ್ಲಿ ಬಹು ಸಂಖ್ಯಾತ ಜನರು ಸ್ವಂತ ಭೂಮಿಯನ್ನು ಉಳುಮೆ ಮಾಡಿ ವ್ಯವಸಾಯ ಮಾಡುವವರಿದ್ದಾರೆ. ಮೂರು ಪ್ರಕಾರದ ಭೂಒಡೆತನ ಮತ್ತು ಗೇಣಿ ಪದ್ಧತಿಗಳನ್ನು ಈ ಮುಂದಿನ ಪಟ್ಟಿಗಳ ಸಹಾಯದಿಂದ ಪರಿಶೀಲಿಸಿದಾಗ ಅವರ ಆರ್ಥಿಕ ಪರಿಸ್ಥಿತಿಯನ್ನು ಸ್ಪಷ್ಟವಾಗಿ ತಿಳಿದುಬರುತ್ತದೆ.

ಸಿದ್ದಿ ಜನಾಂಗದ ಬಹುಸಂಖ್ಯಾತರು ಅತಿ ಸಣ್ಣ ರೈತರಾಗಿದ್ದಾರೆ. ಈ ಪ್ರದೇಶದಲ್ಲಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿರುವಂತೆ, ೬ ರಿಂದ ೧೧ ಎಕರೆ ಭೂಹಿಡುವಳಿಯಲ್ಲಿ ಅವರಿಗೆ ಆರ್ಥಿಕ ಸಂತೃಪ್ತಿಯನ್ನುಂಟು ಮಾಡುತ್ತಿಲ್ಲ. ಈ ಭೂಮಿಯಲ್ಲಿ ಚನ್ನಾಗಿ ಮಳೆ ಬಂದರೆ ಎಂಟರಿಂದ ಹತ್ತು ಚೀಲ ಭತ್ತ ಸಿಗುತ್ತದೆ, ಕಾಡಹಂದಿಯಂತಹ ಇತರ ಕಾಡು ಪ್ರಾಣಿಗಳಿಂದ ಬೆಳೆಗಳಿಗೆ ಯಾವಾಗಲೂ ಅಪಾಯವಿರುತ್ತದೆ. ಈ ಭಾಗದಲ್ಲಿ ಬೆಳೆಗಳಿಗೆ ಕಾಯಿಲೆ ಮತ್ತು ಕೀಟಗಳ ಹಾವಳಿಯೂ ಹೆಚ್ಚಾಗಿರುತ್ತದೆ. ಇದರಿಂದ ಬಡ ಸಿದ್ದಿರೈತರಿಗೆ ಅವುಗಳನ್ನು ನಿಯಂತ್ರಿಸುವ ಸಾಮರ್ಥ್ಯ ಮತ್ತು ಕೌಶಲ್ಯಗಳೆರಡೂ ಇರುವುದಿಲ್ಲವಾದ್ದರಿಂದ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ.

ಸಿದ್ದಿ ಜನಾಂಗೀಯ ಬುಡಕಟ್ಟು ಜನರು ಯಾವುದೇ ಪ್ರಕಾರದ ಭೂ ಹಿಡುವಳಿಯಿಂದ ವ್ಯವಸಾಯ ಮಾಡುತ್ತಿರಲಿ, ಅವರ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದಾಗ ಹೆಚ್ಚು ಕಡಿಮೆ ಎಲ್ಲರ ಆರ್ಥಿಕ ಸ್ಥಿತಿಯು ಒಂದೇ ಸಮನಾಗಿರುತ್ತದೆ. ಸ್ವಂತ ಭೂಮಿಯನ್ನು ಹೊಂದಿರುವವರ ಆರ್ಥಿಕ ಪರಿಸ್ಥಿತಿ ಲಾಭದಾಯಕ ಎಂದು ಭಾವಿಸಿಕೊಂಡಿದ್ದರೂ, ಬೆಳೆಯ ಪ್ರಮಾಣದಲ್ಲಿ ವ್ಯತ್ಯಾಸ ವಿರುತ್ತದೆಯೇ ಹೊರತು, ಆರ್ಥಿಕ ಅಂತಸ್ತಿನಲ್ಲಿ ಅಲ್ಲ.

ಈ ಭಾಗದಲ್ಲಿ ಸ್ವಂತ ಭೂ ಹಿಡುವಳಿ ಹೊಂದಿರುವವರ ಆದಾಯ ಮತ್ತು ಕಷ್ಟಗಳನ್ನು ಗುರುತಿಸುವುದು ಕಷ್ಟ, ಮಳೆಯ ಅಭಾವದಿಂದ, ನದಿಗಳ ಪ್ರವಾಹದಿಂದ ಅಥವಾ ಕಾಡುಪ್ರಾಣಿಗಳ ದಾಳಿಯಿಂದ ಬೆಳೆನಾಶವಾಗುವುದರಿಂದ ಉಂಟಾಗುವ ನಷ್ಟಕ್ಕೆ ಅವರ ರಕ್ತಸಂಬಂಧಿಗಳನ್ನು ಬಿಟ್ಟರೆ ಬೇರೆ ಯಾರೂ ನೆರವಿಗೆ ಬರುವುದಿಲ್ಲ. ಗೇಣಿದಾರರು ಅಥವಾ ಭೂಬಾಡಿಗೆ ಉಳುಮೆದಾರರು, ಭೂಮಾಲಿಕರಿಂದ ಇಂತಹ ಸಂದರ್ಭಗಳಲ್ಲಿ ಸಹಾಯ ಪಡೆದುಕೊಳ್ಳುವ ನಿರೀಕ್ಷೆಯಿರುತ್ತದೆ.

ಈ ಎಲ್ಲ ಸಂಗತಿಗಳನ್ನು ನೋಡಿದಾಗ, ಬೇರೆಯವರ ಭೂಮಿಯನ್ನು ಗೇಣಿಗೆ ಪಡೆದು ಉಳುಮೆ ಮಾಡುತ್ತಿರುವವರ ಸ್ಥಿತಿಯೇ ಚೆನ್ನಾಗಿರುತ್ತದೆ. ಗೇಣಿದಾರನು ಭೂಮಾಲಿಕನ ಆಶ್ರಯ ಮತ್ತು ಸಹಾಯವನ್ನು ನಂಬಿಕೊಂಡಿರುತ್ತಾರೆ. ಕೃಷಿ ಕಾರ್ಮಿಕರ ಕೊರತೆ ಅಧಿಕವಾಗಿರುವುದರಿಂದ, ಭೂಮಾಲಿಕರು ಒಳ್ಳೆಯ ಗೇಣಿದಾರರಿಗಾಗಿ ಹುಡುಕುತ್ತಿರುತ್ತಾರೆ. ಕೃಷಿಯು ಒಂದು ಅನಿಶ್ಚಿತವಾದ ಕೆಲಸವಾಗಿದೆ ಎಂದು ತಿಳಿದಿರುವಾಗ, ಅಂತಹ ಭೂಮಾಲೀಕರು ಇಂತಹ ಗೇಣಿದಾರರಿಗಾಗಿ ಕಾಯುತ್ತಿರುತ್ತಾರೆ ಇಂತಹ ಪರಿಸ್ಥಿತಿಯಲ್ಲಿ ಇಬ್ಬರೂ ಪರಸ್ಪರ ಒಪ್ಪಿಗೆಯ ಮೇಲೆ ಕೃಷಿ ಮಾಡುತ್ತಿರುವುದು ಕಂಡುಬರುತ್ತದೆ.

ಪ್ರಾಕೃತಿಕ ವಿಕೋಪಗಳಿಂದ ಬೆಳೆಗಳು ನಾಶವಾದಂತಹ ಸಂದರ್ಭದಲ್ಲಿ, ಕಷ್ಟಕರ ಪರಿಸ್ಥಿತಿಯಿಂದ ಹೊರಬರಲು ಸ್ವಂತ ಭೂಮಾಲೀಕರಾಗಿರುವ ಸಿದ್ದಿ ರೈತರಿಗೆ ಹೆಚ್ಚು ಸಾಮರ್ಥ್ಯವಿರಬೇಕಾಗುತ್ತದೆ. ಏಕೆಂದರೆ, ಅವರಿಗೆ ಇದೇ ಪ್ರಮುಖವಾದ ಆರ್ಥಿಕ ಚಟುವಟಿಕೆಯಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ದಿ ಭೂಮಾಲೀಕರ ಆರ್ಥಿಕ ಸ್ಥಿತಿ ಚೆನ್ನಾಗಿದೆಯೇ? ಅಥವಾ ಬೇರೆ ರೀತಿಯ ಕೃಷಿಕರ ಸ್ಥಿತಿ ಆರ್ಥಿಕವಾಗಿ ಚೆನ್ನಾಗಿದೆಯೇ? ಎಂಬುದು ಪ್ರಶ್ನಾರ್ಥಕವಾಗುತ್ತದೆ. ಗೇಣಿದಾರರು ಮತ್ತು ಚಿಕ್ಕ ಭೂಹಿಡುವಳಿದಾರರಾಗಿರುವವರು ಒಂದೇ ರೀತಿಯ ಆರ್ಥಿಕ ಸ್ಥಾನಮಾನಗಳುಳ್ಳವ ರಾಗಿದ್ದಾರೆ. ಈ ಎರಡೂ ರೀತಿಯ ಕುಟುಂಬಗಳ ಸದಸ್ಯರುಗಳು ತಮ್ಮ ಜಮೀನಿನಲ್ಲಿ ಕೆಲಸವಿಲ್ಲದೇ ಇದ್ದಾಗ, ತಮ್ಮ ಆದಾಯದ ಮುಖ್ಯ ಮೂಲವೆಂದು ತಾವಾಗಿಯೇ ಬೇರೆಯವರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.

ಇಷ್ಟಾಗಿಯೂ, ಸಿದ್ದಿ ಜನರು ಭೂಮಿಯ ಆರ್ಥಿಕ ಮೌಲ್ಯದ ಹೊರತಾಗಿ ಭೂ ಒಡೆಯರಾಗಲು ಹಾತೊರೆಯುತ್ತಿರುವುದು ಕಂಡುಬಂದಿದೆ. ಪ್ರಾಯಶಃ ಭೂ ಒಡೆತನದೊಂದಿಗೆ ಬೆರೆತಿರುವ ಸಾಮಾಜಿಕ ಮೌಲ್ಯದಿಂದಾಗಿ ಎಲ್ಲರೂ ಭೂ ಒಡೆಯರಾಗಲು ಬಯಸುತ್ತಿದ್ದಾರೆ. ಅವರು ಭೂಮಿಯೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ. ಇದು ಅವರಿಗೆ ಘನತೆಯನ್ನು ತಂದುಕೊಡುತ್ತದೆ ಎಂಬ ಹೆಮ್ಮೆಯ ಭಾವನೆ ಅವರಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಳೀಯವಾಗಿ ಆಚರಣೆಯಲ್ಲಿರುವ ಭೂ ಗೇಣಿ ಪದ್ಧತಿಯನ್ನೇ ಸಿದ್ದಿ ಬುಡಕಟ್ಟು ಜನರೂ ಅನುಸರಿಸುತ್ತಿರುವುದು ಕಂಡು ಬಂದಿದೆ. ಮುಲಿ ಮತ್ತು ಗೇಣಿ ಪದ್ಧತಿಗಳಲ್ಲಿ ಸಾಕಷ್ಟು ಭಿನ್ನತೆಯಿದೆ. ಮುಲಿ ಎಂದರೆ ಭೂಮಿಯ ಮೇಲೆ ಸಂಪೂರ್ಣ ಅಧಿಕಾರ ಅಥವಾ ಒಡೆತನ ಹೊಂದಿರುವವರು. ಇವರಿಗೆ ತಮ್ಮ ಭೂಮಿಯನ್ನು ಯಾವುದೇ ರೀತಿಯಲ್ಲಾದರೂ ಪರಭಾರೆ ಮಾಡಲು ಹಕ್ಕು ಮತ್ತು ಅಧಿಕಾರ ಇರುತ್ತದೆ. ಇಂತಹ ಹಕ್ಕು ಅನುವಂಶೀಯವಾಗಿ ಬಂದಿರುತ್ತದೆ. ತುಂಬಾ ಪ್ರಾಚೀನ ಕಾಲದಿಂದಲೂ ಭೂಮಿಯ ಮೇಲೆ ಈ ರೀತಿಯ ಒಡೆತನ ಹೊಂದಿರುವ ಸಿದ್ದಿಯೇತರ ಸಮುದಾಯದವರನ್ನು ಮುಲಿಗಾರರು ಎಂದು ಕರೆಯಲಾಗುತ್ತದೆ. ಮತ್ತೊಂದು ರೀತಿಯ ಭೂಸಾಗುವಳಿ ಪದ್ಧತಿಯೆಂದರೆ ಗೇಣಿ ಭೂಮಿಯನ್ನು ಭೋಗ್ಯಕ್ಕೆ ಪಡೆದು ಸಾಗುವಳಿ ಮಾಡುವುದೇ ಗೇಣಿ ಪದ್ಧತಿ. ಹೀಗೆ ಬೇರೆಯವರ ಭೂಮಿಯನ್ನು ಭೋಗ್ಯಕ್ಕೆ ಪಡೆದು

ಸಾಗುವಳಿ ಮಾಡುವವರನ್ನು ಗೇಣಿದಾರ ಎಂದು ಕರೆಯಲಾಗುತ್ತದೆ. ಗೇಣಿಯಲ್ಲಿ ಸಾಹುಕಾರರಿಂದ ಖಾಸಗಿಯಾಗಿ ಪಡೆಯುವುದು ಮತ್ತು ಸರ್ಕಾರದಿಂದ ನೇರವಾಗಿ ಪಡೆಯುವುದು ಎಂದು ಎರಡು ಪ್ರಕಾರಗಳಿವೆ. ಮೊದಲನೆಯ ಸಾಹುಕಾರ ಜಮೀನುದಾನಿಂದ ಭೂಮಿಯನ್ನು ಗೇಣಿಗೆ ಪಡೆದರೆ "ಸಾಹುಕಾರ ಗೇಣಿ" ಎಂದೂ, ಸರ್ಕಾರದಿಂದ ಪಡೆದರೆ "ಸರ್ಕಾರಿ ಗೇಣಿ" ಎಂದು ಕರೆಯಲಾಗುತ್ತದೆ. ಸರ್ಕಾರಿ ಗೇಣಿ ಭೂಮಿಯ ಪಾಳು ಬಿದ್ದ, ಅರಣ್ಯ ಕಡಿದ ಅಥವಾ ಸರಿಯಾದ ಮಾಲಿಕತ್ವವಿಲ್ಲದ ಭೂಮಿಯಾಗಿರುತ್ತದೆ.

ಮತ್ತೊಂದು ರೀತಿಯ ಗೇಣಿ ಪದ್ಧತಿಯೆಂದರೆ ಸರ್ಕಾರಿ ಗೇಣಿ ಇಲ್ಲಿ ಭೂ ಬಾಡಿಗೆಯನ್ನು ನೇರವಾಗಿ ಹಣದ ರೂಪದಲ್ಲಿ ಸರ್ಕಾರಕ್ಕೆ ಕಟ್ಟುತ್ತಾರೆ. ಸರ್ಕಾರದಿಂದ ಭೂಮಿಯನ್ನು ಪಡೆದ ಮೇಲೆ ಅದನ್ನು ಬೇರೆಯವರಿಗೆ ಯಾವುದೇ ರೀತಿಯಲ್ಲೂ ಪರಬಾರೆ ಮಾಡುವಂತಿಲ್ಲ.

ಪ್ರಸ್ತುತ ಅಧ್ಯಯನದಲ್ಲಿ ಸಿದ್ದಿ ಬುಡಕಟ್ಟು ಜನರು ಅತಿ ಕಡಿ ಪ್ರಮಾಣದ ಅಂದರೆ ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿರುವವರ ಪ್ರಮಾಣ ಹೆಚ್ಚಾಗಿರುವುದು ಅಂದರೆ ಶೇ. ೪೪ರಷ್ಟಿರುವುದು ಕಂಡುಬಂದಿದೆ, ಈ ಕುಟುಂಬಗಳ ಈ ಚಿಕ್ಕಗಾತ್ರದ ಭೂಮಿಯೂ ಅವರು ವಾಸಿಸುತ್ತಿರುವ ಮನೆಗಳಿಗೆ ಹೊಂದಿಕೊಂಡಿರುವ ಹಿತ್ತಲುಗಳನ್ನು ಸೇರಿಸಿಕೊಂಡು ಮಾಹಿತಿದಾರರು ಭೂಮಿಯ ವಿವರಗಳನ್ನು ನೀಡಿದ್ದಾರೆ. ಆದ್ದರಿಂದ ಇಲ್ಲಿ ಭೂರಹಿತ ಕುಟುಂಬಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿಲ್ಲ. ಅಂದರೆ ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿರುವವರೆಲ್ಲರೂ ಭೂರಹಿತ ಕೃಷಿ ಕಾರ್ಮಿಕರೆಂದೇ ಹೇಳಿಕೊಂಡಿದ್ದಾರೆ. ಉಳಿದಂತೆ ಶೇ. ೨೬ರಷ್ಟು ಕುಟುಂಬಗಳು ಒಂದರಿಂದ ಎರಡು ಕರೆ ಭೂಮಿಯನ್ನು ಹೊಂದಿರುವ ಅತಿ ಸಣ್ಣ ಭುಹಿಡುವಳಿದಾರಾಗಿದ್ದಾರೆ ಮತ್ತು ಆ ಭೂಮಿಯ ಹಕ್ಕು ಪತ್ರಗಳನ್ನು ಈಗ ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ. ಉಳಿದಂತೆ. ಎರಡು ಎಕರೆಯಿಂದ ಮೂರು ಎಕರೆ ಹೊಂದಿರುವರು ಶೇ. ೧೮ರಷ್ಟು ಇದ್ದರೆ, ಮೂರು ಎಕರೆಯಿಂದ ನಾಲ್ಕು ಎಕರೆ ಭೂಮಿ ಹೊಂದಿದರುವವರು ಶೇ. ೬ರಷ್ಟಿದ್ದಾರೆ ಮತ್ತು ಐದು ಎಕರೆಗಿಂತ ಜಾಸ್ತಿ ಭೂಮಿಯನ್ನು ಕೇವಲ ಶೇಕಡ ಒಂದುರಷ್ಟು ಕುಟುಂಬಗಳು ಮಾತ್ರ ಇರುವುದು ಕಂಡು ಬಂದಿದೆ. ಈ ಅಂಕಿಅಂಶಗಳನ್ನ ಗಮನಿಸಿದಾಗ ಸಿದ್ದಿ ಜನಾಂಗದವರಲ್ಲಿ ಭುಮಿಯ ಇಡೆತನ ಹೊಂದಿರುವವರ ಪ್ರಮಾಣ ಕಡಿಮೆ ಇರುವುದು ತಿಳಿದುಬಂದಿದ್ದು, ಇದರಿಂದ ಅವರಲ್ಲಿ ಬಡತನ ಹೆಚ್ಚಾಗಿರುವುದನ್ನು ಸೂಚಿಸುತ್ತದೆ.

ಕೃಷಿಯು ಒಂದು ಸಾಂಪ್ರದಾಯಿಕ ವೃತ್ತಿಯಾಗಿ ಸಿದ್ದಿ ಜನರ ಜೀವನಾಧಾರದ ಮೂಲವಾಗಿದೆ ಎಂದು ನಂಬಿರುವ ಅವರು ಬೇರೆ ಉದ್ಯೋಗಗಳ ಬಗ್ಗೆ ಚಿಂತೆ ಮಾಡುವುದಿಲ್ಲ. ಭೂಮಿಯ ಮೇಲಿನ ಅಕ್ಕರೆ ಮತ್ತು ವ್ಯವಸಾಯದ ಮೇಲಿನ ಆಸಕ್ತಿಯು ಅವರನ್ನು ಆರ್ಥಿಕವಲ್ಲದ ಹಿಡುವಳಿಗಳಲ್ಲಿ ಕೃಷಿಯನ್ನೇ ಅವಲಂಬಿಸುವಂತೆ ಮಾಡಿದೆ.

ಹೀಗಾಗಿ, ವೈಯಕ್ತಿಕವಾಗಿ ತೊಂದರೆಯನ್ನು ತೆಗೆದುಕೊಂಡು ಅರಣ್ಯವನ್ನು ಕಡಿದು ವ್ಯಸಾಯಕ್ಕೆ ಆ ಭೂಮಿಯನ್ನು ಸಜ್ಜುಗೊಳಿಸಿಕೊಂಡಿದ್ದಾರೆ. ಈ ಜನಾಂಗದವರಿಗೆ ಕಾಡಿನಿಂದಾಗುವ ಅನುಕೂಲ

ಮತ್ತು ಅನಾನುಕೂಲಗಳೆರಡೂ ತಿಳಿದಿವೆ. ಎಲ್ಲಿ ನೀರಿನ ಜರಿಗಳು ಅಪಾಯಕಾರಿಯಾಗಿರುತ್ತವೆ ಮತ್ತು ಔಷದಿಯ ಸಸ್ಯಗಳು ಯಾವ ಭಾಗದಲ್ಲಿ ಸಿಗುತ್ತವೆ ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ತಮ್ಮ ಪೂರ್ವಜರು ಪರ್ಯಾಯ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಇಂದು ಗುಡ್ಡದ ತುದಿಯಲ್ಲಿ ಪಾಳುಬಿದ್ದ ಭೂಮಿಯನ್ನು ತೋರಿಸುತ್ತಾರೆ. ಆದರೆ ಈಗ ಇವರು ಪರ್ಯಾಯ ಭೂಮಿ ವ್ಯವಸಾಯ ಅಥವಾ ಕುಮ್ರಿ ಬೇಸಾಯವನ್ನು ಮುಂದುವರಿಸುತ್ತಿದ್ದಾರೆ. ಪರಿಣಾಮಕಾರಿ ಕೃಷಿಕರಾಗಿರುವ ಅವರು ಕೃಷಿ ಉಪಕರಣಗಳನ್ನು ಮತ್ತು ರಸಗೊಬ್ಬರವನ್ನು ಉಪಯೋಗಿಸುವುದನ್ನು ತಿಳಿದುಕೊಂಡಿದ್ದಾರೆ. ಎತ್ತರದ ಪ್ರದೇಶಗಳಲ್ಲಿ ಕೃಷಿ ಭೂಮಿ ನಿಯಮಿತವಾಗಿರುವುದರಿಂದ, ಒಂದು ಕುಟುಂಬಕ್ಕೆ ಸಾಮಾನ್ಯವಾಗಿ ಲಭ್ಯತೆಯಿರುವ ಭೂಮಿ ಕೆಳಗಿನ ಇಳಿಜಾರು ಪ್ರದೇಶ ಮತ್ತು ಎರಡು ಬೆಟ್ಟಗಳ ನಡುವಿನ ಕಿರಿದಾದ ಕಣಿವೆಗಳ ನಡುವೆ ಇರುತ್ತದೆ. ಸಿದ್ದಿಜನಾಂಗದವರ ಕೃಷಿ ಮಳೆಯನ್ನೇ ಆಶ್ರಯಿಸಿರುವುದರಿಂದ ವರ್ಷಕ್ಕೆ ಒಂದೇ ಬೆಳೆ ಬೆಳೆಯುವುದು ಸಾಮಾನ್ಯವಾಗಿದೆ. ಬೀಜಗಳನ್ನು ನೇರವಾಗಿ ಕೂರಿಗೆಯ ಮೂಲಕ ಬಿತ್ತನೆ ಮಾಡಿ ಬೆಳೆಯುವುದು ಇವರಲ್ಲಿ ಕಂಡುಬರುತ್ತದೆ. ನಾಟಿ ಮಾಡಿ ಸಸಿಗಳನ್ನು ಹಾಕಿ ವ್ಯವಸಾಯ ಮಾಡುವ ವಿಧಾನ ಇವರಲ್ಲಿ ಕಂಡು ಬರುತ್ತಿಲ್ಲ. ಇತ್ತೀಚಿನ ಯುವ ವ್ಯವಸಾಯಗಾರರು ನಾಟಿ ಕೃಷಿ ವಿದಾನವನ್ನು ಕಲಿತು ಅನುಸರಿಸುತ್ತಿರುವುದು ಕಂಡುಬರುತ್ತಿದೆ. ಅವರಲ್ಲಿರುವ ಬಡತನ, ನಾಟಿ ಪದ್ಧತಿಗೆ ಹೆಚ್ಚು ನೀರಿನ ಅವಶ್ಯಕತೆಯಿರುವುದು, ನೀರಿನ ಕೊರತೆ ಇವುಗಳಿಂದಾಗಿ ಅವರು ಈ ವಿಧಾನವನ್ನು ಅಳವಡಿಸಿಕೊಳ್ಳಲು ಅಸಹಾಯಕತೆಯನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸುತ್ತಾರೆ. ಬಡತನದಿಂದಾಗಿ ಅವರು ಹೆಚ್ಚು ಬಂಡವಾಳ ಹೂಡಲು ಆಗುತ್ತಿಲ್ಲ, ನಾಟಿಪದ್ಧತಿಗೆ ಗೊಬ್ಬರ ಮುಂತಾದವುಗಳಿಗೆ ಬಂಡವಾಳ ಹೆಚ್ಚಾಗಿ ಬೇಕು, ಅಲ್ಲದೇ, ಈ ಪದ್ಧತಿ ದೀರ್ಘಕಾಲ ತೆಗೆದುಕೊಳ್ಳುತ್ತದೆ. ಅವರ ಶೋಚನೀಯ ಆರ್ಥಿಕ ಪರಿಸ್ಥಿತಿಯಿಂದಾಗಿ, ಅವರು ಕಡಿಮೆ ಇಳುವರಿ ಕೊಡುವ ಒಂದು ಬೆಳೆಯನ್ನೆ ಬೆಳೆಯುತ್ತಾರೆ. ಕೊಟ್ಟಿಗೆ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರಗಳನ್ನು ಸುಲಭವಾಗಿ ಉಪಯೋಗಿಸುತ್ತಾರೆ ಮತ್ತು ಇತ್ತೀಚೆಗೆ ರಸಗೊಬ್ಬರವನ್ನು ಬಳಸುತ್ತಿದ್ದಾರೆ.

ಯಾವುದೇ ರೀತಿಯಲ್ಲಿ ವ್ಯವಸಾಯ ಮಾಡಿದರೂ ಭೂಮಿಯಿಂದ ಬರುತ್ತಿರುವ ಆದಾಯದಿಂದ ವರ್ಷವಿಡೀ ಕುಟುಂಬದವರ ಜೀವನ ನಿರ್ವಹಣೆಗೆ ಕಷ್ಟವಾಗುತ್ತಿದೆ. ಲಭ್ಯವಾದ ಮಾಹಿತಿಗಳ ಪ್ರಕಾರ ಭೂಮಿಯಿಂದ ಬರುವ ಆದಾಯವು ಅವರಿಗೆ ಐದು ಅಥವಾ ಆರು ತಿಂಗಳುಗಳ ಜೀವನ ನಿರ್ವಹಣೆಗೆ ಮಾತ್ರ ಸಾಕಾಗುತ್ತದೆ. ಈ ಮುಖ್ಯವಾದ ಆದಾಯದ ಮೂಲಕ್ಕೆ ಪೂರಕವಾಗಿ ಉಳಿದ ದಿನಗಳಲ್ಲಿ ಅರಣ್ಯಗಳಲ್ಲಿ ಅಥವಾ ಮೇಲ್ಜಾತಿಯ ಜನರ ಅಡಿಕೆ ತೋಟಗಳಲ್ಲಿ ಸಿದ್ದಿ ಜನರು ಕೂಲಿ ಆಳುಗಳಾಗಿ ದುಡಿಯುತ್ತಾರೆ. ಯಲ್ಲಾಪುರ. ಅಂಕೋಲ, ಹಳಿಯಾಳ ಮತ್ತು ಮುಂಡಗೋಡು ಪ್ರದೇಶಗಳಲ್ಲಿ ಡಿಸೆಂಬರ್‌ನಿಂದ ಜೂನ್ ತಿಂಗಳ ವರೆಗೆ ಕೆಲಸ ವಿಫಲವಾಗಿ ಲಭ್ಯವಾಗಿರುತ್ತದೆ. ಡಿಸೆಂಬರ್ ತಿಂಗಳಿನಿಂದ ಮಳೆಗಾಲ ನಿಲ್ಲುತ್ತದೆ. ಆಗ ಕಾಡಿನಲ್ಲಿ ಸಿದ್ದಿ ಜನಾಂಗದ ಜನರು ಕೆಲಸ ವನ್ನು ಪ್ರಾರಂಭಿಸುತ್ತಾರೆ. ಬಿದಿರನ್ನು ಕಡಿಯುವುದು, ಮರಗಳನ್ನು ಕಡಿದು ದಿಮ್ಮಿಗಳನ್ನಾಗಿ ಪರಿವರ್ತಿಸಿ ಗುತ್ತಿಗೆದಾರರಿಗೆ ಕೊಡುವುದು, ಸರ್ಕಾರದಿಂದ ಅರಣ್ಯ ಉತ್ಪನ್ನಗಳ ಸಂಗ್ರಹಕ್ಕಾಗಿ ಗುತ್ತಿಗೆ ಪಡೆದಿರುತ್ತಾರೆ. ಆ ಕೆಲಸಕ್ಕೆ ಸಿದ್ದಿ ಜನರು ಕೂಲಿ ಕೆಲಸಗಾರರಾಗಿ ಹೋಗುತ್ತಾರೆ. ದಿನಗೂಲಿ

ಆಧಾರದ ಮೇಲೆ ಸಿದ್ದಿಗಳು ಗುತ್ತಿಗೆದಾರರ ಕೈ ಕೆಳಗೆ ಕೆಲಸ ಮಾಡುತ್ತಾರೆ. ಈ ಜನಾಂಗದ ಮಹಿಳೆಯರು ಅರಣ್ಯದ ಕೆಲಸಗಳಿಗೆ ಹೋಗುವುದಿಲ್ಲ, ಅವರು ಜಮೀನುದಾರರ ಮನೆಗೆಲಸದವರಾಗಿ, ಭತ್ತ ಅಕ್ಕಿ ಶುಚಿಗೊಳಿಸಲು ಅಡಿಕೆ ಕಾಯಿ ಸುಲಿಯುವ ಕೆಲಸ ಮಾಡುತ್ತಾರೆ. ಕೆಲವು ಹಳ್ಳಿಗಳಲ್ಲಿ ಪುರುಷರೂ ಸಹ ಅಡಿಕೆ ತೋಟಗಳಲ್ಲಿ ಕೆಲಸ ಮಾಡುತ್ತಾರೆ. ಸಿದ್ದಿ ಜನರು ಉತ್ತಮ ಕೆಲಸಗಾರರು ಕೆಲಸವನ್ನು ಗುತ್ತಿಗೆ ಪಡೆದು ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾರೆ ಎಂದು ಸ್ಥಳೀಯ ಇತರೆ ಭೂಮಾಲಿಕರೂ ಹೇಳುತ್ತಾರೆ.

ಜೇನು ತುಪ್ಪ ಸಂಗ್ರಹ: ಅಗಸ್ಟ್-ಸಪ್ಟೆಂಬರ್ ತಿಂಗಳುಗಳಲ್ಲಿ ಸಿದ್ದಿ ಜನಾಂಗದ ಕೆಲವರು ತಾವಾಗಿಯೇ ಕಾಡಿನಲ್ಲಿ ಜೇನು ತುಪ್ಪವನ್ನು ಸಂಗ್ರಹಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ದೊಡ್ಡ ಗುತ್ತಿಗೆದಾರರಿಂದ ಮತ್ತು ಸರ್ಕಾರದಿಂದ ಅನುಮತಿ ಪಡೆದು ಗುತ್ತಿಗೆ ಆದಾರದ ಮೇಲೆ ಜೇನು ತುಪ್ಪವನ್ನು ಸಂಗ್ರಹಿಸಿ ಕೊಡುತ್ತಿದ್ದರು. ಇತ್ತೀಚಿಗೆ ಇದನ್ನು ಲ್ಯಾಂಪ್ಸ್ ಸಂಸ್ಥೆಗೆ ಮಾರಾಟ ಮಾಡುತ್ತಾರೆ. ದೊಡ್ಡ ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಂಡು ೩ರಿಂದ ೪ ಜನ ಸಿದ್ದಿ ಜನರು ಒಟ್ಟಾಗಿ ಜೇನುತುಪ್ಪವನ್ನು ಹೆಚ್ಚಾಗಿ ಸಂಗ್ರಹಿಸಿ ಅವರಿಗೆ ಕೊಡುತ್ತಾರೆ.

ಬೇಟೆ: ಸಿದ್ದಿ ಜನಾಂಗದವರಲ್ಲಿ ಬೇಟೆ ಮಾಡುವುದು ಅವರ ಕೃಷಿ ಚಟುವಟಿಕೆಗಳೊಂದಿಗೆ ಸೇರಿಕೊಂಡಿದೆ, ಏಕೆಂದರೆ, ಈ ಭಾಗದ ಬೆಳೆಗಳು ನಿರಂತರವಾಗಿ ಕಾಡು ಹಂದಿಗಳಂತಹ ಕಾಡು ಪ್ರಾಣಿಗಳ ದಾಳಿಗೆ ತುತ್ತಾಗುವ ಅಪಾಯಕ್ಕೆ ಒಳಪಡುತ್ತಿರುತ್ತವೆ. ಅವರ ಬೆಳೆಗಳನ್ನು ಸಂರಕ್ಷಿಸಿಕೊಳ್ಳಲು, ಹಳ್ಳಿಗಳಿಗೆ ಸೇರಿದ ಸ್ಥಳೀಯ ಜನರು ಸಿದ್ದಿ ಜನರೊಂದಿಗೆ ಬೇಟೆಯಾಡುತ್ತಾರೆ. ಬೇಟೆಗಾಗಿ ಅವರು ಗನ್ನುಗಳನ್ನು ಬಳಸುತ್ತಾರೆ. ಸ್ವಂತ ಗನ್ನುಗಳಿಲ್ಲದೇ ಇರುವವರು ಬೇಟೆಯಾಡು ವವರೊಟ್ಟಿಗೆ ಸಹಾಯಕರಾಗಿರುತ್ತಾರೆ. ಹವ್ಯಕ ಬ್ರಾಹ್ಮಣರು ಮತ್ತು ಲಿಂಗಾಯತರು ಬೇಟೆಯಾಡಿದರೂ ಅವರು ಸಸ್ಯಹಾರಿಗಳಾಗಿರುವುದರಿಂದ ಬೇಟೆಯನ್ನು ಆಹಾರಕ್ಕಾಗಿ ಉಪಯೋಗಿಸುವುದಿಲ್ಲ, ಅದನ್ನು ಅವರ ಜೊತೆಯಲ್ಲಿ ಸಹಾಯಕರಾಗಿ ಹೋಗುವ ಸಿದ್ದಿ ಜನಾಂಗದವರಿಗೆ ಉಪಯೋಗಿಸಲು ಕೊಡುತ್ತಾರೆ.

ಮೇಲೆ ತಿಳಿಸಿರುವ ಕೆಲವು ಹೆಚ್ಚುವರಿ ಮಾಧ್ಯಮಿಕ ಚಟುವಟಿಕೆಗಳ ಹೊರತಾಗಿ ಸಿದ್ದಿ ಜನರು ಇತರ ಚಟುವಟಿಕೆಗಳನ್ನು ಹೆಚ್ಚಾಗಿ ಮಾಡುತ್ತಿರಲಿಲ್ಲ. ಬುಟ್ಟಿ ತಯಾರು ಮಾಡುವುದು, ಪಶು ಸಂಗೋಪನೆಗಳಂತಹ ಚಟುವಟಿಕೆಗಳನ್ನು ಅವರು ಆರ್ಥಿಕ ಚಟುವಟಿಕೆಗಳೆಂದು ಪರಿಗಣಿಸದೇ ಇರುವುದು ಕಂಡುಬಂದಿದೆ. ಏಕೆಂದರೆ, ಸಾಕು ಪ್ರಾಣಿಗಳು ನಿರಂತರವಾಗಿ ಕ್ರೂರ ಮೃಗಗಳಿಗೆ ಬಲಿಯಾಗುತ್ತಿರುವುದು. ಆದರೆ ಸಿದ್ದಿಗಳು ಬಿದಿರಿನಿಂದ ಚಾಪೆಗಳನ್ನು ತಯಾರಿಸಿ ಸ್ವಂತಕ್ಕೆ ಉಪಯೋಗಿ ಸುತ್ತಿದ್ದರು. ಅಪರೂಪಕ್ಕೊಮ್ಮೆ ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಿದ್ದರು. ಆದರೆ, ಇತ್ತೀಚೆಗೆ ಈ ಜನಾಂಗಕ್ಕೆ ಪರಿಶಿಷ್ಟ ಬುಡಕಟ್ಟಿನ ಸ್ಥಾನಮಾನ ಸಿಕ್ಕಿದ ಮೇಲೆ ವಿಶೇಷ ನೆರವು ಮತ್ತು ಸವಲತ್ತುಗಳಿಂದಾಗಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಪ್ರಭಾವದಿಂದ ಇವರ ಆರ್ಥಿಕ ಚಟುವಟಿಕೆಗಳು ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸಿವೆ.

ಸ್ಥಳೀಯ ಇತರ ಸಮುದಾಯಗಳವರಲ್ಲಿ ಸಿದ್ದಿ ಜನರು ಆಲಸಿಗಳು ಮತ್ತು ಜಾಗೃತರಲ್ಲದವರು ಎಂಬ ಭಾವನೆಯಿದೆ. ಉತ್ತಮವಾದ ದೇಹದಾರ್ಢ್ಯತೆ ಹೊಂದಿದ್ದರೂ, ಅವರು ಕಷ್ಟಪಟ್ಟು ಕೆಲಸ ಮಾಡುವ ಸ್ವಭಾವವನ್ನು ಹೊಂದಿಲ್ಲ, ಈ ರೀತಿಯ ಭಾವನೆಗಳು ಅವರ ಮೌಲ್ಯಗಳನ್ನು ಅಪಾರ್ಥ ಗೊಳಿಸುತ್ತಿವೆ. ಈ ಪ್ರದೇಶದಲ್ಲಿ ಸಿದ್ದಿಯರ ಸ್ವಭಾವವನ್ನು ಅರ್ಥಮಾಡಿಕೊಳ್ಳಲು, ಕೆಲಸಕ್ಕೆ ಸಂಬಂಧಿಸಿದಂತೆ ಅವರು ಹೊಂದಿರುವ ಮೌಲ್ಯಗಳನ್ನು ತಿಳಿದುಕೊಳ್ಳಬೇಕು. ಸಿದ್ದಿ ಜನರು, ಭೂಮಿಯ ಕೆಲಸ ಮತ್ತು ಎಲ್ಲ ರೀತಿಯ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಾರೆ. ಇದನ್ನೇ ಅವರು ಜೀವನ ವಿಧಾನವೆಂದು ಭಾವಿಸಿದ್ದಾರೆ. ಭೂಮಿಯಲ್ಲಿ ಉಳುಮೆ ಮಾಡುವುದು, ಬಿತ್ತನೆ ಮತ್ತು ಕಟಾವು ಮಾಡುವ ಕೆಲಸಗಳಲ್ಲಿ ಸಂತೋಷವನ್ನು ಕಾಣುತ್ತಾರೆ. ಇದೇ ರೀತಿಯ ಭಾವನೆಯನ್ನು ಅಡಿಕೆ ತೋಟಗಳಲ್ಲಿ ಕೆಲಸ ಮಾಡುವುದಕ್ಕೂ ಅನ್ವಯಿಸುತ್ತಾರೆ. ಈ ರೀತಿಯ ಎಲ್ಲಾ ಕೆಲಸಗಳನ್ನು ಆಸಕ್ತಿ ಮತ್ತು ಉತ್ಸಾಹದಿಂದ ಮಾಡುತ್ತಾರೆ. ಕೃಷಿಯೇತರ ಕೆಲಸಗಳನ್ನು ಅವರು ಏಕಾಗ್ರತೆಯಿಂದ ಮಾಡುತ್ತಿರಲಿಲ್ಲ. ಹಣದ ಅವಶ್ಯಕತೆಯಿದ್ದರೂ ಅರಣ್ಯದ ಕೆಲಸಗಳು ಮತ್ತು ರಸ್ತೆ ಕೆಲಸಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಯಾರಾದರೂ ಅವರನ್ನು ಅಂತಹ ಕೆಲಸಗಳನ್ನು ಏಕೆ ಮಾಡುವುದಿಲ್ಲ? ಎಂದು ಪ್ರಶ್ನಿಸಿದರೆ, ನಕ್ಕು, ಇದು ಕೆಲಸವಾ? ಎಂದು ಮರು ಪ್ರಶ್ನೆ ಹಾಕುತ್ತಿದ್ದ ಕಾಲ ಒಂದಿತ್ತು ಎಂದು ಗೊಳೆಹಳ್ಳಿಯ ಇಮಾಮ್ ಸಾಬ್ ಎಂಬ ಹಿರಿಯ ವ್ಯಕ್ತಿ ಹೇಳುತ್ತಾರೆ. ಆದರೆ ಇತ್ತೀಚಿಗೆ, ಸಿದ್ದಿಯರು ನಿರ್ಮಾಣ ಕಾಮಗಾರಿಗಳನ್ನು ಕೂಲಿಕಾರ್ಮಿಕರಾಗಿ ಹಣ ಸಂಪಾದಿಸುತ್ತಿರುವುದು ಕಂಡುಬಂದಿದೆ.

ಅಲೋಕ ಕುಮಾರ್ ಅವರ 'ಟ್ರೈಬಲ್ ಕಲ್ಚರ್ ಅಂಡ್ ಎಕಾನಮಿ' ಎಂಬ ಪುಸ್ತಕದಲ್ಲಿ, ಬುಡಕಟ್ಟುಗಳ ವಾಸದ ನೆಲೆಗಳಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಶೀಘ್ರವಾಗಿ ನಿರ್ಮಿಸಿ ಕೊಡುವ ಅವಶ್ಯಕತೆಗಳ ಬಗ್ಗೆ ಮನವರಿಕೆ ಮಾಡಿದ್ದಾರೆ. ಅಂತೆಯೇ ನನ್ನ ಈ ಅಧ್ಯಯನದಲ್ಲಿ ಕಂಡುಬಂದಿರುವಂತೆ ಸಿದ್ದಿ ಜನರು ವಾಸವಾಗಿರುವ ನೇಲೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ಇರುವುದು ಕಂಡುಬಂದಿದೆ.

ಸಂಸ್ಕೃತಿ

ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಗಿರುವ ಆದಿವಾಸಿ ಸಮುದಾಯಗಳು ಭಾರತ ಸಂಸ್ಕೃತಿಯ ಮೂಲಾಧಾರವಾಗಿ ಕಂಡುಬರುತ್ತವೆ. ಇಲ್ಲಿರುವ ಜನಜೀವನ, ಬದುಕುವ ರೀತಿ ನಡೆ ನುಡಿಗಳು ಇಂದಿಗೂ ಬದಲಾವಣೆಯೊಂದಿಗೆ ಜಾರಿಯಲ್ಲಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನವು ಸಿದ್ದಿಜನಾಂಗೀಯ ಸಮುದಾಯವು ಹೊಂದಿರುವ ಜೀವನದ ರೀತಿ, ನೀತಿ ಮತ್ತು ಶೈಲಿಗಳು ಅವರ ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗಳು ಮತ್ತು ಸಂಸ್ಕೃತಿಗಳಲ್ಲಿ ಅವರು ಮಾಡಿಕೊಳ್ಳುತ್ತಿರುವ ಬದಲಾವಣೆಗಳ ಕುರಿತು ವಸ್ತುನಿಷ್ಟ ಮಾಹಿತಿಗಳನ್ನು ನೀಡುತ್ತದೆ.

ಭಾಷೆ ಮತ್ತು ಅದರ ಬಳಕೆಯು ಒಂದು ಸಮುದಾಯದ ಅಸ್ತಿತ್ವವನ್ನು ಹೇಳುತ್ತದೆ. ಸಿದ್ದಿ ಸಮುದಾಯವು ಹೆಚ್ಚಾಗಿ ೫ ಭಾಷೆಗಳನ್ನು ಸಂವಹನದಲ್ಲಿ ಬಳಸುತ್ತಾರೆ ಕನ್ನಡ, ಮರಾಠಿ, ಕೊಂಕಣಿ, ಹಿಂದಿ ಮತ್ತು ಉರ್ದು. ಈ ಎಲ್ಲಾ ಭಾಷೆಗಳ ಅರಿವೂ ಅವರಿಗಿರುವುದು ಕಂಡುಬರುತ್ತದೆ.

ಭಾಷೆಯು ಒಂದು ಪ್ರಮುಖ ಸಂವಹನಾ ಮಾಧ್ಯಮವೂ ಹೌದು. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಹಲವು ಭಾಷೆಗಳ ಅನಿವಾರ್ಯತೆ ಈ ಸಮುದಾಯಕ್ಕಿರುವುದನ್ನು ನಾವು ಗಮನಿಸಬಹುದು. ಅಂತೆಯೇ ಜೀವನದ ಭಾಗವಾಗಿ ಭಾಷೆಯ ಬಳಕೆಯ ಅಗತ್ಯತೆಯೂ ಇಲ್ಲಿ ಕಂಡುಬರುತ್ತಿದೆ.

ಸಿದ್ದಿ ಬುಡಕಟ್ಟು ಸಮುದಾಯದವರ ಭಾಷೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನಭಿನ್ನವಾಗಿರುತ್ತದೆ. ಯಲ್ಲಾಪುರ ಮತ್ತು ಅಂಕೋಲಗಳಲ್ಲಿ ಅವರು ಸಾಮಾನ್ಯವಾಗಿ ಮಾತನಾಡುವ ಭಾಷೆ ಕನ್ನಡ ಮತ್ತು ಕೊಂಕಣಿ ಆದರೆ ಈ ಭಾಗದಲ್ಲಿನ ಸಿದ್ದಿ ಜನರು ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಮಾತನಾಡಿದರೂ ಅವರ ಮಾತೃ ಭಾಷೆ ಕೊಂಕಣಿಯಾಗಿದೆ. ಹಳಿಯಾಳದಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಮಾತನಾಡುತ್ತಾರೆ, ಈ ಪ್ರದೇಶದಲ್ಲಿ ಮುಸ್ಲಿಂ ಸಿದ್ದಿಗಳೂ ಕನ್ನಡ ಭಾಷೆಯಲ್ಲಿ ಮಾತನಾಡುತ್ತಾರೆ. ಆದರೆ ಸ್ಥಳೀಯ ಮುಸಲ್ಮಾನರಂತೆ ಅವರ ಮಾತೃ ಭಾಷೆಯೂ ಉರ್ದು. ಈ ಪ್ರದೇಶದ ಕ್ರಿಶ್ಚಿಯನ್ ಸಿದ್ದಿಗಳು ಕೊಂಕಣಿ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಮಾತನಾಡುತ್ತಾರೆ, ಆದರೆ ಅವರ ಮಾತೃಭಾಷೆ ಕೊಂಕಣಿ.

ಬುಡಕಟ್ಟು ಜನಾಂಗಗಳಲ್ಲಿರುವ ಶ್ರೇಷ್ಠ ಮೌಲ್ಯಾಚರಣೆಗಳೇ ಇಂದಿಗೂ ಪ್ರಪಂಚದೆಲ್ಲೆಡೆ, ಎಲ್ಲೆಲ್ಲೂ ಬುಡಕಟ್ಟು ಜನರು ನೆಲೆಸಿವೆಯೋ, ಅಲ್ಲಲ್ಲಿ ಮಾತ್ರ ಕಾಡು ಉಳಿದಿರಿವಿದಕ್ಕೆ ಸೀಮಾ ಶ್ರೇಷ್ಟ ಆಚರಣೆಯಿಂದ ಎಂದು ಸಂಶೋಧನೆಗಳಿಂದ ಧೃಡಪಟ್ಟಿದೆ. ಬುಡಕಟ್ಟು ಜನರ ಸಾಂದ್ರತೆಗಳಿಲ್ಲದ ಕಾಡುಗಳು ಭೂ ಮಾಲಿಕರ ದಾಳಿಗೆ ಸಿಲುಕಿ ಕಾಫೀ, ಟೀ ಪ್ಲಾಂಟೇಷನ್‌ಗಳಾಗಿ ಹೋಗಿವೆ ಎಂದು ಬಿ.ಪಿ. ಮಹೇಂದ್ರಕುಮಾರ ಅವರು ತಮ್ಮ "ಬುಡಕಟ್ಟು ಜನಾಂಗದವರಲ್ಲಿ ಸೀಮೆಯ ಪರಿಕಲ್ಪನೆ" ಎಂಬ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲು ಹಂಪಿ ಇವರು ಪ್ರಕಟಿಸಿರುವ ಬುಡಕಟ್ಟು ಅಧಯಯನ ಸಂಪುಟ–೮ರಲ್ಲಿ ಹೇಳಿರುವುದಕ್ಕೆ ಪೂರಕವಾಗಿ, ಸಿದ್ದಿ ಜನರ ಸೀಮೆಯ ಪರಿಜ್ಞಾನದಿಂದಲೇ ಅವರ ಸಾಂಸ್ಕೃತಿಕ ಬದುಕು ಪುನಃರೂಪಗೊಂಡಿದೆ ಎಂದು ಹೇಳಬಹುದು. ಸಿದ್ದಿ ಸಮುದಾಯದ ಪ್ರತಿ ಸದಸ್ಯನೂ ಅರಣ್ಯ ಪ್ರದೇಶದ ಮತ್ತು ಭೂಮಿಯ ಮಕ್ಕಳಾಗಿ ಜನ್ಮ ಪಡೆದವರು ಎಂದರೆ ತಪ್ಪಾಗಲಾರದು. ಈ ದೃಷ್ಟಿಕೋನದಿಂದ ಅವರನ್ನು ನಾವು ವಿಶ್ಲೇಷಿಸಿದರೆ, ಅವರ ಆರೋಗ್ಯ, ಸ್ವಚ್ಚತೆ ಇತ್ಯಾದಿಗಳ ಬಗ್ಗೆ ಕಾಡೇ ಅವರಿಗೆ ಒಂದಷ್ಟು ಜ್ಞಾನವನ್ನು ಕಲಿಸಿಕೊಟ್ಟಿದೆ. ಆಧುನಿಕ ವ್ಯವಸ್ಥೆ ಕೊಡಮಾಡುವ ಔಷಧಿಗಳ ಸಂಶೋಧನೆ ಮತ್ತು ಬಳಕೆಯನ್ನು ಅವರೇ ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಶೇ. ೮೦ರಷ್ಟು ಕುಟುಂಬಗಳು ನಮ್ಮ ಸದಸ್ಯರು ಆರೋಗ್ಯವಾಗಿದ್ದಾರೆ ಎಂಬುದು ಕ್ಷೇತ್ರ ಕಾರ್ಯದ ಅನುಭವಗಳಿಂದ ತಿಳಿದುಬಂದಿದೆ.

ಸಿದ್ದಿ ಸಮುದಾಯದ ಸದಸ್ಯರು ತಮ್ಮ ಹಳ್ಳಿಗಳಲ್ಲಿ ಸರಳವಾದ ಬಟ್ಟೆಯನ್ನು ಧರಿಸುವ ಇವರು (ಲುಂಗಿ, ಉದ್ದವಾದ ಶರ್ಟ್, ರುಮಾಲ್ ಅಥವಾ ಟವೆಲ್) ಇತ್ತೀಚಿನ ದಿನಗಳಲ್ಲಿ ಪ್ಯಾಂಟ್, ಶರ್ಟ್ ಮಹಿಳೆಯರು ಬ್ಲೌಸ್‌ನ್ನು ಧರಿಸುತ್ತಿದ್ದಾರೆ. ಗಂಡುಮಕ್ಕಳು ಹೆಚ್ಚಾಗಿ ಪ್ಯಾಂಟ್ ಟಿ–ಶರ್ಟ್ ಧರಿಸಿದರೆ ಹೆಣ್ಣುಮಕ್ಕಳು ಚೂಡಿದಾರ ಮತ್ತು ಶಾರ್ಟ್ ಸ್ಕರ್ಟ್ ಗಳನ್ನು ಧರಿಸುತ್ತಿದ್ದಾರೆ.

ಆಧುನಿಕತೆಯ ಬದಲಾವಣೆಗಳಿಗೆ ಸಮುದಾಯವೂ ಹೊರಳಿಕೊಳ್ಳುತ್ತಿದೆ ಮತ್ತು ಆ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವುದಕ್ಕೆ ಅವರ ಧಿರಿಸುಗಳೆ ಸಾಕ್ಷಿಯಾಗಿವೆ.

ಸಿದ್ದಿ ಸಮುದಾಯವು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಹಾಗಾಗಿ ಅರಣ್ಯದಲ್ಲಿ ಲಭ್ಯವಿರುವ ಸಿಹಿಗೆಣಸು, ಜೇನು, ಹಣ್ಣುಗಳ ಜೊತೆಗೆ ಮಾಂಸ-ಮೀನು, ಭತ್ತ, ರಾಗಿ, ಬೇಳೆಗಳನ್ನು ಆಹಾರ ಪದಾರ್ಥವಾಗಿ ಬೆಳೆದು ಸೇವಿಸುತ್ತಿದ್ದಾರೆ. ಮೂಲತಃ ಇವರ ಕಸುಬು ಬೇಟೆಯಾಡುವುದೇ ಆಗಿತ್ತು. ಆದರೆ ಈ ಸಮುದಾಯದಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿಗಳಿರುವುದೂ ಕಂಡುಬರುತ್ತದೆ. ಈ ಸಮುದಾಯದ ಸಂಸ್ಕೃತಿಯು ಆಹಾರ ಪದ್ಧತಿಗಳಲ್ಲಿ ಅಡಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಪ್ರಕೃತ್ತಿ ದತ್ತವಾದ ಆಹಾರ ಪದಾರ್ಥಗಳನ್ನು ಸೇವಿಸುವ ಸದಸ್ಯರು ತಮ್ಮ ಆರೋಗ್ಯವನ್ನೂ ಕಾಪಾಡಿಕೊಂಡಿರುವುದು ಪ್ರಶಂಸನೀಯ.

ಸಿದ್ದಿ ಜನಾಂಗದ ಎಲ್ಲರೂ ಶ್ರಮದ ದುಡಿಮೆಯ ಮೇಲೆ ಅವಲಂಬಿಸಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಇದರಿಂದ ಅವರು ಮೊದಲಿನಿಂದಲೂ ಶೋಷಣೆ, ತಾರತಮ್ಯ, ಅನ್ಯಾಯ ಅತ್ಯಾಚಾರ ಮುಂತಾದ ಕಷ್ಟಕರ ಪರಿಸ್ಥಿತಿಗಳನ್ನು ಅನುಭವಿಸಿದ್ದಾರೆ, ದಿನವೆಲ್ಲಾ ಬೇರೆಯವರ ಹೊಲ-ಗದ್ದೆಗಳಲ್ಲಿ ತೋಟಗಳಲ್ಲಿ ದುಡಿದರೂ ನೆಮ್ಮದಿಯ ಬದುಕು ಇಲ್ಲದೆ, ಅನ್ಯಾಯ, ಶೋಷಣೆಗಳನ್ನು ಎದುರಿಸಿ ಪ್ರತಿಭಟಿಸುವ ಶಕ್ತಿ ಸಾಮರ್ಥ್ಯವೂ ಇಲ್ಲದೆ ತಮ್ಮ ನೋವುಗಳನ್ನು ಅವರು ರಾತ್ರಿ ಡುಮಾಮಿ ಮತ್ತು ಪುಗಡಿ ನೃತ್ಯಗಳ ಮೂಲಕ ನೂವು ನಲಿವಿಗಳನ್ನು ಹಾಡುಗಳನ್ನು ಹೇಳುತ್ತ ನೃತ್ಯಮಾಡುತ್ತ ವ್ಯಕ್ತ ಪಡಿಸುತ್ತಾರೆ. ತಮ್ಮ ನೋವು-ನಲಿವುಗಳನ್ನು ವ್ಯಕ್ತಪಡಿಸುವ ಹಾಡುಗಳು ಜಾನಪದದ ಸಾಹಿತ್ಯದಂತೆ ಅವರ ಮನಸ್ಸಿನ ವಿಚಾರಗಳು ಹಾಡಿನ ರೂಪದಲ್ಲಿ ಹೊರ ಹಾಕುವಾಗ, ಪುಗಡಿ ನೃತ್ಯದ ಸಂದರ್ಭದಲ್ಲಿ ಹಾಡುವ ಹಾಡಿನ ಮೂಲಕ ವ್ಯಕ್ತಪಡಿಸುತ್ತೇವೆ ಎಂದು ಗಾಡಗೇರಾದ ಜುಲಿಯಾನ ಸಿದ್ದಿ ಹೇಳುತ್ತಾರೆ. ಜುಲಿಯಾನ ಅವರ ಹೇಳುವ ಪ್ರಕಾರ ಅವರ ಜಾನಪದ ಬದುಕಿನ ಅದೆಷ್ಟೋ ವಿಚಾರಗಳು ಹೊರ ಜಗತ್ತಿಗೆ ತಿಳಿಯದೇ ನಶಿಸಿಹೋಗುತ್ತವೆ ಇನ್ನು ಮುಂದಾದರೂ ಅವುಗಳನ್ನು ಸಂಗ್ರಹಿಸಿ ಕಾಪಾಡುವ ಕೆಲಸಗಳಾಗಬೇಕಾಗಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಈ ಜನಾಂಗವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದ ನಂತರ ಸಿದ್ದಿಯರ ಸಾಂಸ್ಕೃತಿ ಅಂಶಗಳಾಗಿರುವ ಪುಗಡಿ ಮತ್ತು ಡುಮಾಮಿ ನೃತ್ಯಗಳು ರಾಷ್ಟ್ರದಾದ್ಯಂತ ಪ್ರದರ್ಶನಗೊಳ್ಳುತ್ತಿರುವುದು ಕಂಡು ಬಂದಿದೆ. ಈ ಕೆಲಸವನ್ನು ಹಳಿಯಾಳದ ಅಮ್ಟಾ ಸಿದ್ದಿ ಸಾಂಸ್ಕೃತಿ ಕಲಾಮೇಳ ಎಂಬ ಸಂಘಟನೆ ನಿರ್ವಹಿಸಿಕೊಂಡು ಹೋಗುತ್ತಿರುವುದು ಕಂಡುಬಂದಿದೆ.

'ಟ್ರೈಬಲ್ ಲೈಫ್ ಇನ್ ಇಂಡಿಯಾ' ಎಂಬ ಸಂಶೋಧನಾ ಪ್ರಬಂಧದಲ್ಲಿ, ಬೋಸ್ ನಿರ್ಮಲ್ ಕುಮಾರ್‌ರವರು ಬುಡಕಟ್ಟುಗಳ ಸಾಮಾಜಿಕ ಜೀವನದ ಬಗ್ಗೆ ಹೇಳುತ್ತ, ಬುಡಕಟ್ಟುಗಳು ಅವರ ಸಾಮಾಜಿಕ ವ್ಯವಸ್ಥೆಯಲ್ಲಿ ಇತರರಿಗಿಂತ ಭಿನ್ನವಾಗಿದ್ದಾರೆ ಎಂದು ಹೇಳಿದ್ದಾರೆ. ಅವರು ತಮ್ಮ

ವೈವಾಹಿಕ ನಿಯಮಗಳನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಅವರದೇ ಆದ ಸಮೂಹದ ಒಳಗೆ ವಿವಾಹ ಸಂಬಂಧ ಬೆಳೆಸುತ್ತಾರೆ ಮತ್ತು ಕೆಲವು ವೇಳೆ ಆಂತರಿಕ ಮತ್ತು ಬಾಹ್ಯ ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ಬುಡಕಟ್ಟಿನ ಮುಖ್ಯಸ್ಥ ಅಥವಾ ರಾಜಕೀಯ ನಾಯಕರಿಂದ ಮಾರ್ಗದರ್ಶನ ಪಡೆಯುತ್ತಾರೆ. ಮತ್ತೊಂದು ರೀತಿಯಲ್ಲಿ ಬುಡಕಟ್ಟಿಗೆ ಸೇರಿದವರು ವಿಶೇಷ ಸೌಲಭ್ಯಕ್ಕಾಗಿ 'ಪರಿಶಿಷ್ಟ ಬುಡಕಟ್ಟು' ಎಂಬ ಸಮೂಹದ ಹೆಸರಿನೊಂದಿಗೆ ವಿಭಿನ್ನ ಸಮುದಾಯವನ್ನೇ ರೂಪಿಸಿಕೊಂಡಿದ್ದಾರೆ ಹಾಗೂ ಅವರು ಸ್ವಲ್ಪ ಸಮಯದಲ್ಲೇ ಭಾರತದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನದ ಮುಖ್ಯವಾಹಿನಿಗೆ ಬರುತ್ತಾರೆ ಎಂದು ಚರ್ಚಿಸಿದ್ದಾರೆ. ಬೋಸ್ ನಿರ್ಮಲ್ ಕುಮಾರ್ ಅವರು ಹೇಳಿರುವಂತೆ ಸಿದ್ದಿ ಜನರೂ ಕೂಡ ಸ್ಥಳೀಯ ಸಾಂಸ್ಕೃತಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಇತರರಿಗಿಂತ ಭಿನ್ನವಾಗಿ ಬದುಕುತ್ತಿರುವುದು ಕಂಡುಬಂದಿದೆ. ಅನಿವಾರ್ಯವಾಗಿ ಅವರ ಜನಾಂಗೀಯ ಲಕ್ಷಣಗಳಿಂದಾಗಿ ವೈವಾಹಿಕ ನಿಯಮಗಳನ್ನು ಅವರದೇ ಆದ ಸಮೂಹದ ಒಳಗೆ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತಿರುವುದು ಕಂಡುಬಂದಿದೆ. ಮುಖ್ಯವಾಹಿನಿಗೆ ಬರುತ್ತಾರೋ ಬಿಡುತ್ತರೋ ಆದರೆ ಬೋಸ್ ನಿರ್ಮಲ್ ಕುಮಾರ ಹೇಳಿರುವಂತೆ ಈ ಅಧ್ಯನದಿಂದಲೂ ಸಿದ್ದಿ ಜನರು ಈ ನಿಟ್ಟಿನಲ್ಲಿ ಬದುಕುತ್ತಿರುವುದು ಕಂಡುಬಂದಿದೆ.

ರಾಜಕೀಯ

ಸಿದ್ದಿ ಜನರ ರಾಜಕೀಯ ವ್ಯವಸ್ಥೆಯು ಪ್ರಮುಖವಾಗಿ ರಾಜಕೀಯ-ನ್ಯಾಯಿಕ ಕಾರ್ಯವನ್ನು ಮಾಡುತ್ತದೆ. ಸಂಕೀರ್ಣತೆಯಿಲ್ಲದ, ಒಂದು ರಾಜ್ಯದ ಎಲ್ಲಾ ಪ್ರಮುಖ ಅಂಶಗಳನ್ನು ಇವರ ರಾಜಕೀಯ ವ್ಯವಸ್ಥೆ ಹೊಂದಿದೆ. ಇವರ ರಾಜಕೀಯ ವ್ಯವಸ್ಥೆಯು ಇವರು ನೆಲೆಸಿರುವ ಒಂದು ಹಳ್ಳಿಗೆ ಸೀಮಿತವಾಗಿರುತ್ತದೆ. ಸಿದ್ದಿ ಜನರು ಹಳ್ಳಿಗಳ ಗಡಿಗಳನ್ನು ಮರ, ನದಿ ಗುಡ್ಡಗಳಂತಹ ಗೋಚರವಾದ ನಿರ್ದಿಷ್ಟ ಗುರುತುಗಳಿಂದ ಸ್ಪಷ್ಟವಾಗಿ ಗುರುತಿಸಿಕೊಂಡಿರುತ್ತಾರೆ. ಇಂತಹ ಗಡಿರೇಖೆಗಳಿಂದ ಗುರುತಿಸಲ್ಪಟ್ಟಿರುವ ಹಳ್ಳಿಗಳಲ್ಲಿ ಅವರ ರಾಜಕೀಯ ಸಂಘಟನೆಯು ಅತ್ಯುನ್ನತವಾದ ಅಧಿಕಾರವನ್ನು ಹೊಂದಿರುತ್ತಿತ್ತು ಎಂದು ಸಿದ್ದೀಸ್ ಆಫ್ ನಾರ್ಥ್ ಕೆನರಾ ಎಂಬ ಪುಸ್ತಕದಲ್ಲಿ ಟಿ.ಸಿ ಪಾಲಾಕ್ಷಪ್ಪನವರು ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಬಿ.ಪಿ. ಮಹೇಂದ್ರಕುಮಾರ ಅವರು ತಮ್ಮ "ಬುಡಕಟ್ಟು ಜನಾಂಗದವರಲ್ಲಿ ಸೀಮೆಯ ಪರಿಕಲ್ಪನೆ" ಎಂಬ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲು ಹಂಪಿ ಇವರು ಪ್ರಕಟಿಸಿರುವ ಬುಡಕಟ್ಟು ಅಧಯಯನ ಸಂಪುಟ-೪ರಲ್ಲಿ ಹೇಳಿದ್ದಾರೆ. ಆದರೆ ಇತ್ತೀಚೆಗೆ ಹಳ್ಳಿ ಪ್ರದೇಶ ಗ್ರಾಮ ಪಂಚಾಯತಿ ಮುಂತಾದವುಗಳ ದಾಖಲೆಗಳು ಕಂದಾಯ ಮತ್ತು ಸರ್ವೇ ಇಲಾಖೆಗಳಲೂ ಸಿಗುತ್ತಿರುವುದರಿಂದ, ಸಿದ್ದಿ ಜನರು ಆಧುನಿಕ ಆಡಳಿತ ಪದ್ಧತಿಗೆ ಒಳಪಟ್ಟಿರುವುದರಿಂದ, ಸಾಂಪ್ರದಾಯಿಕ ಸೀಮಾರೇಖೆಗಳನ್ನು ಅವಲಂಬಿಸದೇ ಸರ್ಕಾರದ ದಾಖಲೆಗಳ ಮೇಲೆ ಅವಲಂಬಿಸಬೇಕಾದ ಅವಶ್ಯಕತೆ ಮತ್ತು ಅನಿವಾರ್ಯತೆ ಕಂಡುಬರುತ್ತಿದೆ.

ಪಾಲಾಕ್ಷಪ್ಪ ಅವರ ವಿವರಣೆಯಂತೆ ಸಿದ್ದಿ ಸಭಾ ಎಂದು ಕರೆಯಲ್ಪಡುವ ಸಂಘಟನೆಯು ಅವರ ಸ್ಥಳೀಯ ರಾಜಕೀಯ ಘಟಕವಾಗಿದೆ, ಇದು ಒಂದು ಪ್ರಜಾಸತ್ತಾತ್ಮಕ ಮಂಡಳಿ. ಹಳ್ಳಿಯ

ಎಲ್ಲಾ ಕುಟುಂಬಗಳ ಮುಖ್ಯಸ್ಥರನ್ನು ಒಳಗೊಂಡಿರುವ ಸಂಘಟನೆಯೇ ಸಿದ್ದಿ ಸಭಾ. ಇದರಲ್ಲಿನ ಸದಸ್ಯರುಗಳಲ್ಲಿ ಹಿರಿತನದ ಆಧಾರದ ಮೇಲೆ ಪಂಚರು ಎಂದು ಕರೆಯುವ ಐದು ಜನರನ್ನು ಆಯ್ಕೆ ಮಾಡುತ್ತಾರೆ. ಈ ಐದು ಜನರಲ್ಲಿ ಒಬ್ಬರನ್ನು ಮುಖ್ಯಸ್ಥರನ್ನಾಗಿ ಆರಿಸುತ್ತಿದ್ದರು. ಆತನನ್ನು ಬುದ್ಧಿವಂತ ಎಂದು ಕರೆಯಲಾಗುತ್ತಿತ್ತು. ಇವನು ಸಭಾ ಮತ್ತು ಪಂಚರ ಸಮಿತಿಯ ನಾಯಕನಾಗಿರುತ್ತಿದ್ದ. ಸಭಾ ಮತ್ತು ಪಂಚ ಇವು ಸಿದ್ದಿ ಜನರಿಗೆ ವಿಶಿಷ್ಟವಾದುದೇನಾಗಿರಲಿಲ್ಲ, ಹವ್ಯಕ ಬ್ರಾಹ್ಮಣರು ಮತ್ತು ಈ ಭಾಗದ ಇತರ ಪ್ರಬಲ ಜಾತಿಗಳನ್ನು ಹೊರತುಪಡಿಸಿ ಎಲ್ಲ ಕೃಷಿಕ ವರ್ಗಗಳಲ್ಲಿಯೂ ಈ ರೀತಿಯ ರಾಜಕೀಯ ಸಂಘಟನೆ ಅಸ್ತಿತ್ವದಲ್ಲಿತ್ತು ಎಂದು ಎನ್ ಆರ್ ನಾಯಕ್ ಅವರು ಉತ್ತರ ಕನ್ನಡ ಜಿಲ್ಲೆಯ ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಆದರೂ, ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳೊಂದಿಗೆ ಕಾರವಾರ ಜಿಲ್ಲೆಯ ಹಾಲಕ್ಕಿ ಒಕ್ಕಲರು, ಬಂದಿಗಳು, ನಾಮದಾರಿಗಳು ಮತ್ತು ಇತರ ಮೀನುಗಾರಿಕಾ ಸಮುದಾಯಗಳು ಈ ರೀತಿಯ ರಾಜಕೀಯ ವ್ಯವಸ್ಥೆಯನ್ನು ಹೊಂದಿದ್ದವು. ಟಿ.ಸಿ. ಫಾಲಾಕ್ಷಪ್ಪನವರು ಹೇಳಿರುವಂತೆ ಈ ಜಿಲ್ಲೆಯ ಒಕ್ಕಲು ಸಮುದಾಯವು ವಿಸ್ತಾರವಾದ ರಾಜಕೀಯ ವ್ಯವಸ್ಥೆಯನ್ನು ಹೊಂದಿತ್ತು, ಇದು ಗ್ರಾಮ ಪರಿಷತ್ತು, ಕೇವಲ ಗ್ರಾಮಗಳನ್ನು ಮಾತ್ರ ನಿಯಂತ್ರಸದೆ, ಇಡೀ ಸಮುದಾಯವನ್ನೇ ನಿಯಂತ್ರಿಸುತ್ತಿತ್ತು. ಗ್ರಾಮ ಪರಿಷತ್ತು ಸಮುದಾಯ ಪರಿಷತ್ತಿನ ಶಕ್ತಿಯನ್ನು ಹೆಚ್ಚಿಸುತ್ತಿತ್ತು. ಸಿದ್ದಿ ಸಭಾವೂ ಒಕ್ಕಲು ಸಮುದಾಯದಂತೆ ಇಡೀ ಜನಾಂಗಕ್ಕೆ ಅನ್ವಯಿಸುವಂತೆ ವಿಶಾಲ ವ್ಯಾಪ್ತಿಯನ್ನು ಹೊಂದಿರಲಿಲ್ಲ ಎಂದು ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ.

ಸಿದ್ದಿ ಸಭಾದ ಅಧಿಕಾರವು ಕೇವಲ ಸಿದ್ದಿಯರು ನೆಲೆಸಿರುವ ಒಂದು ನೆಲೆಗೆ ಸೀಮಿತವಾಗಿರುತ್ತದೆ. ಸಿದ್ದಿಯರ ನೆಲೆಗಳ ಹೊರಗೆ ಬೇರೆ ಬೇರೆ ನೆಲೆಗಳ ನಡುವೆ ವಿವಾದಗಳು ಉಂಟಾದರೆ ಸ್ಥಳೀಯವಾಗಿ ಇತರೆ ಸಮುದಾಯಗಳಲ್ಲಿರುವಂತೆ ದೊಡ್ಡ ಸಾಮುದಾಯಿಕ ನಿಯಂತ್ರಣ ವ್ಯವಸ್ಥೆ ಗಳಿರುವುದಿಲ್ಲ. ವಿವಿಧ ನೆಲೆಗಳ ನಡುವಿನ ಸಹಕಾರದ ಸಾಧನವಾಗಿ ಸಿದ್ದಿಗಳಲ್ಲಿ ತಮ್ಮದೇ ಆದ ವ್ಯವಸ್ಥೆಯನ್ನು ಹೊಂದಿದ್ದಾರೆ. ಎರಡು ನೆಲೆಗಳ ನಡುವೆ ವಿವಾದ ಉಂಟಾದಾಗ ಎರಡೂ ನೆಲೆಗಳ ಬುದ್ಧಿವಂತರು ಸಬೆ ಸೇರಿ ವಿವಾದವನ್ನು ಬಗೆಹರಿಸಿಕೊಳ್ಳುತ್ತಿದ್ದರು.

ಸಿದ್ದಿ ಜನಾಂಗದವರು ನೆಲೆಸಿರುವ ಹಳ್ಳಿಗಳಲ್ಲಿ ಪ್ರತಿನಿತ್ಯದ ಆಗು ಹೋಗುಗಳ ಬಗ್ಗೆ ನಿಗಾ ವಹಿಸಲು ಬುದುವಂತನಿಗ ಮತ್ತು ಆತನಿಗೆ ಸಹಾಯ ಮಾಡಲು, ಅದೇ ನೆಲೆಯ ಸದಸ್ಯನೊಬ್ಬನನ್ನು ಕೋಲ್ಕಾರ ಎಂದು ನೇಮಿಸಿರುತ್ತಾರೆ. ಹಳ್ಳಿಯ ಅಥವಾ ಸಿದ್ದಿಗಳ ನೆಲೆಯಲ್ಲಿ ಶಾಂತಿ ಭಂಗವಾಗು ವಂತಹ ಘಟನೆಗಳು ನಡೆದಾಗ ತಕ್ಷಣ ಆ ವಿಷಯವನ್ನು ಕೋಲ್ಕಾರನು ಬುದ್ಧಿವಂತನಿಗೆ ತಿಳಿಸುತ್ತಿದ್ದ, ಬುದ್ಧಿವಂತ ಸ್ವಸಾಮರ್ಥ್ಯದಿಂದ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ, ಸಾಧ್ಯವಾಗದಿದ್ದಾಗ ಕೋಲ್ಕಾರನ ಸಲಹೆಯ ಮೇರೆಗೆ ಸಭಾದ ಸಭೆಕರೆದು ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತಿದ್ದರುಎಂದು ಸಿದ್ದಿಯರ ಸಂಸ್ಕೃತಿಯಲ್ಲಿ ಹಿ.ಚಿ. ಬೋರಲಿಂಗಯ್ಯನವರು ಪ್ರಸ್ತಾಪಿಸಿದ್ದಾರೆ.

ಬುದ್ಧಿವಂತನನ್ನು ಅನುವಂಶೀಯವಾಗಿ ಮತ್ತು ವೈಯಕ್ತಿಕವಾಗಿ ಆಜೀವಪರ್ಯಂತ ಆಯ್ಕೆ ಮಾಡಿದ್ದಾಗ್ಯೂ ಸಭಾವು ಅತ್ಯುನ್ನತ ಅಧಿಕಾರವನ್ನು ಹೊಂದಿದ್ದು, ಬುದ್ಧಿವಂತ ಅಥವಾ ಅವನ

ಕಛೇರಿಯ ಯಾರಾದರೂ ತಪ್ಪು ಮಾಡಿದಾಗ ಅವರನ್ನು ಅಧಿಕಾರದಿಂದ ಇಳಿಸುವ ಅಧಿಕಾರವನ್ನು ಹೊಂದಿದೆ. ಬುದ್ಧಿವಂತ ಮತ್ತು ಕೋಲ್ಕಾರ ಈ ಎರಡೂ ಹುದ್ದೆಗಳು ಗೌರವಾನ್ವಿತವಾಗಿ ಇರುತ್ತವೆ. ಈ ಹುದ್ದೆಗಳೊಂದಿಗೆ ಯಾವುದೇ ರೀತಿಯ ಹಣಕಾಸು ಅಥವಾ ಬಹುಮಾನಗಳು ಸೇರಿ ಕೊಂಡಿರುವುದಿಲ್ಲ. ಸಿದ್ದಿ ಜನಾಂಗದವರಲ್ಲಿ ಈ ಅಧಿಕಾರದ ಹುದ್ದೆಗಳೊಂದಿಗೆ ಯಾವುದೇ ರೀತಿಯ ಮಂತ್ರ ತಂತ್ರ ಅಥವಾ ದೈವಿಕ ಅಧಿಕಾರಗಳೂ ಬೆಸೆದುಕೊಂಡಿರುವುದಿಲ್ಲ. ಇದರೊಂದಿಗೆ ಸಿದ್ದಿ ಜನರ ಮನೋಭಾವನೆಯು ಸಮಾನತೆಯ ಪ್ರತಿಪಾದಕವಾಗಿರುತ್ತದೆ., ಇಂತಹ ನಾಯಕತ್ವವನ್ನು ಸಿದ್ದಿ ಜನಾಂಗದವರೆಲ್ಲರೂ ಅಧಿಕಾರಕ್ಕಿಂತ ಹೆಚ್ಚಾಗಿ ಘನತೆ ಮತ್ತು ಅಂತಸ್ತಿನ ದೃಷ್ಟಿಯಲ್ಲಿ ನೋಡುತ್ತಾರೆ. ಸಾಮಾನ್ಯವಾಗಿ ಸಿದ್ದಿ ಜನಾಂಗದವರೆಲ್ಲರೂ ಬಡವರಾಗಿರುವುದರಿಂದ, ಅವರಿಗೂ ಯಾವುದೇ ವಿಶೇಷ ಉಡುಪುಗಳಿರುವುದಿಲ್ಲ, ಅವನೂ ಕೂಡ ಇತರರಂತೆಯೇ ಹಳ್ಳಿಯ ಒಬ್ಬ ಸೇವಕ ಅಥವಾ ಕಾರ್ಮಿಕನಂತೆ ಇರುತ್ತಾನೆ. ಬುದ್ಧಿವಂತನ ಕುಟುಂಬಕ್ಕೆ ಇಡೀ ಸಿದ್ದಿ ನೆಲೆಯ ಎಲ್ಲ ಕುಟುಂಬದವರೂ ಹೊಣೆಗಾರರಾಗಿರುತ್ತಾರೆ. ಅವರ ಕುಟುಂಬದ ಕಷ್ಟ-ಸುಖಗಳಲ್ಲಿ ಭಾಗಿಗಳಾಗುತ್ತಾರೆ. ಅವರ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೆ ಇಡೀ ನೆಲೆಯು ಶೋಕಾಚರಣೆ ಮಾಡುತ್ತದೆ ಎಂಬ ಅಂಶವನ್ನು ಆರ್.ಎಸ್. ಹಿರೇಮಠ ಅವರು ಲೈಫ್ ಲಿವಿಂಗ್ ಆ್ಯಂಡ್ ಲಾಂಗ್ವೇಜಸ್ ಆಫ್ ಸಿದ್ದೀಸ್ ಆಫ್ ನಾರ್ಥ್ ಕೆನರಾ ಎಂಬ ಅವರ ಸಂಶೋಧನಾ ಪ್ರಬಂಧದಲ್ಲಿ ತಿಳಿಸಿದ್ದಾರೆ.

ರಾಜಕೀಯ-ನ್ಯಾಯಿಕ ಮಂಡಳಿಯಾಗಿ ಸಿದ್ದಿ ಸಭಾವು ತಪ್ಪಿಸ್ಥತರಿಗೆ ಶಿಕ್ಷೆಯನ್ನು ನೀಡುತ್ತದೆ. ಶಿಕ್ಷೆಯ ಪ್ರಮಾಣವು ಒಂದು ಘಟನೆಯಿಂದ ಮತ್ತೊಂದಕ್ಕೆ ಮತ್ತು ಕಾಲದಿಂದ ಕಾಲಕ್ಕೆ ಭಿನ್ನವಾಗಿರುತ್ತದೆ. ಹಿಂದೆ ಸಿದ್ದಿ ಸಭಾದವರು ತಪ್ಪಿತಸ್ಥರಿಗೆ ಛಡಿ ಏಟಿನ ಶಿಕ್ಷೆ ವಿಧಿಸುತ್ತಿತ್ತು, ಈಗ ಛಡಿ ಏಟಿನ ಬದಲು ದಂಡ ವಿಧಿಸುತ್ತದೆ. ಎಂದು ಗುಳ್ಳಾಪುರದ ಹಿರಿಯ ವ್ಯಕ್ತಿ ಶಿವಾ ಸಿದ್ದಿ ಎನ್ನುವವರು ಹೇಳುತ್ತಾರೆ. ಸಿದ್ದಿ ಸಭಾವು ತಪ್ಪಿತಸ್ಥರಿಗೆ ತನ್ನ ನಡವಳಿಕೆಯನ್ನು ಸುಧಾರಿಸಿಕೊಂಡು ಪುನಃ ಸಮೂಹ ದೊಂದಿಗೆ ಬದುಕಲು ಅವಕಾಶ ಮಾಡಿಕೊಡುತ್ತದೆ.

ಈ ಮೊದಲೇ ಉಲ್ಲೇಖಿಸಿರುವಂತೆ ಸಿದ್ದಿ ಜನಾಂಗದವರ ಸಿದ್ದಿ ಸಭಾವು ಅವರು ನೆಲೆಸಿರುವ ಹಳ್ಳಿಯ ರಾಜಕೀಯ-ನ್ಯಾಯಿಕ ಮಂಡಳಿಯಾಗಿತ್ತು. ಒಂದು ರಾಜಕೀಯ ಮಂಡಳಿಯಾಗಿ ಸಾಮಾಜಿಕ ಸುವ್ಯವಸ್ಥೆ ಮತ್ತು ಯೋಗಕ್ಷೇಮವನ್ನು ನಿರ್ವಹಿಸುತ್ತಿತ್ತು. ಒಂದು ನ್ಯಾಯಿಕ ಮಂಡಳಿಯಾಗಿ ನ್ಯಾಯಾಂಗದ ಕೆಲಸವನ್ನೂ ಮಾಡುತ್ತಿತ್ತು. ಸಿದ್ದಿ ನೆಲೆಗಳು ತುಂಬಾ ಪ್ರತ್ಯೇಕವಾಗಿದ್ದಾಗ, ಪೋಲಿಸರು ಇಲ್ಲಿಗೆ ಬರುವುದು, ಹೋಗುವುದು ದುಸ್ತರವಾಗಿದ್ದಾಗ, ಸಿದ್ದಿ ಸಭಾವು ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸುವ ರಾಜಕೀಯ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಸಿದ್ದಿ ಸಭಾದ ನ್ಯಾಯಿಕ ಕಾರ್ಯವು ಸಿದ್ದಿ ಸಮಾಜದ ನೆಲೆಗಳ ಪರಿಧಿಯೊಳಗೆ ಸಾಮಾಜಿಕ ನಿಯಮಗಳು ವಿಕಾಸಹೊಂದಲು ಕಾರಣವಾಗಿದೆ.

ಗ್ರಾಮ ಪಂಚಾಯಿತಿ ಎಂದು ಕರೆಯಲ್ಪಡುವ ಹಳ್ಳಿಗಳ ಸಮೂಹವು ಒಂದು ರಾಜಕೀಯ ಘಟಕವಾಗಿರುತ್ತದೆ. ಪಂಚಾಯತಿಯು ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳೊಂದಿಗೆ ಸಂಬಂಧ ಹೊಂದಿವೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಆರ್ಥಿಕ ಮತ್ತು ಇತರ ಸಂಪನ್ಮೂಲಗಳನ್ನು ಪಡೆದುಕೊಂಡು ಮೂಲಭೂತ ಸೌಲಭ್ಯಗಳನ್ನು ಸೃಷ್ಟಿ ಮಾಡುವುದರ ಜೊತೆಗೆ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತವೆ. ಇದು ಸ್ವಾತಂತ್ರ್ಯ ನಂತರದ ಭಾರತದ ಗ್ರಾಮೀಣ ರಾಜಕೀಯ ವ್ಯವಸ್ಥೆಯೂ ಹೌದು. ಪಂಚಾಯತಿ ಚುನಾವಣೆಗಳಲ್ಲಿ ಸಿದ್ದಿ ಜನರು ಸ್ಪರ್ಧಿಸಿ ಆಯ್ಕೆಯಾಗಿ ಚುನಾಯಿತ ಪ್ರತಿನಿಧಿಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಾಹಿತಿದಾರರಲ್ಲಿ ಪ್ರತಿಶತ ೩ರಷ್ಟು ಮಾಹಿತಿದಾರರು ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿದ್ದಾರೆ. ಅದರಂತೆ, ಪ್ರತಿಶತ ೯೭ರಷ್ಟು ಮಾಹಿತಿದಾರರು ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿಲ್ಲ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಾಹಿತಿದಾರರು ರಾಜಕೀಯ ಚಟುವಟಿಕೆಗಳ ಕುರಿತು ಆಸಕ್ತಿ ಹೊಂದಿದ್ದಾರೆ. ಈ ಅಧ್ಯಯನವು ಸಿದ್ದಿ ಜನಾಂಗದವರು ಒಂದೇ ರಾಕಜೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳದೆ, ವಿವಿಧ ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದುಕೊಂಡಿರುವುದನ್ನು ತಿಳಿಸುತ್ತದೆ. ಅದರಂತೆ, ಕೇವಲ ೧೨ ಜನ ಮಾಹಿತಿದಾರರು ಮಾತ್ರ ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದುಕೊಂಡಿದ್ದಾರೆ. ಅವರಲ್ಲಿ, ಪ್ರತಿಶತ ೩೩ರಷ್ಟು ಮಾಹಿತಿದಾರರು ಕಾಂಗ್ರೇಸ್ ಪಕ್ಷದ ಸದಸ್ಯರಾಗಿ ಆ ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರತಿಶತ ೨೫ ಮಾಹಿತಿದಾರರರು ಭಾರತೀಯ ಜನತಾ ಪಕ್ಷದ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಪ್ರತಿಶತ ೧೭ ಮಾಹಿತಿದಾರರರು ಜೆ.ಡಿ.ಎಸ್ ಪಕ್ಷದ ಸದಸ್ಯತ್ವ ಪಡೆದುಕೊಂಡಿದ್ದಾರೆ. ಪ್ರತಿಶತ ೨೫ ಮಾಹಿತಿದಾರರರು ಇತರೆ ಪಕ್ಷಗಳ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದಿರುವ ಕೆಲವೇ ಜನರು ಅಂದರೆ, ೧೨ ಜನ ಮಾಹಿತಿ ದಾರರ ಪೈಕಿ ೮ ಜನರು, ಅಂದರೆ ಒಟ್ಟು ೩೬೦ ಮಾಹಿತಿದಾರರ ಪೈಕಿ ಪ್ರತಿಶತ ೨ರಷ್ಟು ಮಾಹಿತಿದಾರರು ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಾಗಿದ್ದಾರೆ. ಹಾಗೆಯೇ ೨ರಷ್ಟು ಮಾಹಿತಿದಾರರು ಸ್ಥಳಿಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಾಗಿರುವುದಿಲ್ಲ. ಮೇಲಿನ ವಿವರಣೆಗಳ ಪ್ರಕಾರ ಕಡಿಮೆ ಪ್ರಮಾಣದಲ್ಲಿ ಅಂದರೆ ಶೇ ೪ರಷ್ಟು ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೊಂಡಿರುವುದು ಕಂಡುಬಂದಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಚುನಾವಣೆಗೆ ಹಣದ ಅವಶ್ಯಕತೆ ಹೆಚ್ಚಾಗಿರುವುದು. ಬಡತನದಿಂದ ನರಳುತ್ತಿರುವ ಸಿದ್ದಿ ಜನರು ಹಣ ಖರ್ಚು ಮಾಡಿ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ.

ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿ: ಸಿದ್ದಿ ಸಭಾವು ಬದಲಾವಣೆಗೆ ಸೀಮಿತವಾಗಿ ಸ್ಪಂದಿಸುವ ಒಂದು ಮೂಲಭೂತವಾದಿ ವ್ಯವಸ್ಥೆಯಾಗಿತ್ತು. ಆದರೆ, ಇದರ ಅಧಿಕಾರವು ನಿರಂತರವಾಗಿ ಹೊರಗಿನ ಶಕ್ತಿಗಳಿಂದ ತೊಂದರೆಗೆ ಒಳಗಾಗುತ್ತಿರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಪಡೆದ ಅನುಭವಗಳಿಂದ ಕಂಡುಬಂದಿದೆ. ಸಿದ್ದಿ ಜನಾಂಗೀಯ ಸಮುದಾಯವು ಹೊರಗಿನ ಮುಖ್ಯ

ವಾಹಿನಿಯೊಂದಿಗೆ ಹೆಚ್ಚು ಸಂಪರ್ಕ ಇಟ್ಟುಕೊಳ್ಳದೆ ಇದ್ದಾಗ ಸಿದ್ದಿ ನೆಲೆಯ ಮುಖ್ಯಸ್ಥ ಅಥವಾ ಬುದ್ಧಿವಂತನು ತುಂಬಾ ಹೆಚ್ಚು ಅಧಿಕಾರ ಮತ್ತು ಗೌರವವನ್ನು ಅನುಭವಿಸುತ್ತಿದ್ದರು. ಇತ್ತೀಚಿಗೆ ಸಿದ್ದಿಗಳ ನೆಲೆ ಮತ್ತು ಅರಣ್ಯದೊಳಗೆ ಹೊರಗಿನವರ ಸಂಚಾರ ಮತ್ತು ಸಂಪರ್ಕ ಹೆಚ್ಚಾಗಿದೆ. ಅರಣ್ಯದ ಕೆಲಸಗಾರರು ಮತ್ತು ಇತರರು ಈ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಪ್ರದೇಶಕ್ಕೆ ಕೆಲವು ಕೈಗಾರಿಕೆಗಳು, ಅಭಿವೃದ್ಧಿ ಯೋಜನೆಗಳು, ವಿದ್ಯುತ್ ಉತ್ಪಾದನಾ ಘಟಕಗಳು ಆರಂಭವಾಗಿವೆ. ಇದರಿಂದ, ಸಿದ್ದಿ ಜನಾಂಗೀಯ ಸಮುದಾಯದ ಒಬ್ಬ ಸಾಮಾನ್ಯ ಸದಸ್ಯನಿಗೂ ಬೇರೆಯವರ ಸಂಪರ್ಕ ದೊರಕಿದೆ. ಇದರಿಂದ ಸಮೂಹದ ಕೆಲವು ಸದಸ್ಯರು ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಅಧಿಕಾರವನ್ನು ಪ್ರಶ್ನಿಸುತ್ತಿದ್ದಾರೆ. ಇದರಲ್ಲಿಯೂ ಕೆಲವರು ಸ್ಥಳೀಯ ರಾಜಕೀಯದಿಂದ ಪ್ರಭಾವಿತರಾಗಿದ್ದಾರೆ. ಇದರಿಂದ ಸಿದ್ದಿ ನೆಲೆಗಳು ರಾಜಕೀಯವಾಗಿ ಛಿದ್ರವಾಗುತ್ತಿವೆ. ಎರಡನೆಯದಾಗಿ ಹಳ್ಳಿಯ ಪಟೇಲರು ಮತ್ತು ಕುಲಕರ್ಣಿಗಳು ಸಿದ್ದಿ ನೆಲೆಯ ಮುಖ್ಯಸ್ಥನ ಅಧಿಕಾರದ ವ್ಯಾಪ್ತಿಗೆ ಪ್ರವೇಶಿಸುತ್ತಿದ್ದಾರೆ. ನೆಲೆಯಲ್ಲಿ ಕೆಲವು ವಿವಾದಗಳುಂಟಾದಾಗ ಪಟೇಲರು ಮತ್ತು ಕುಲಕರ್ಣಿಗಳು ಒಬ್ಬ ವ್ಯಕ್ತಿಯನ್ನು ಜೊತೆಯಲ್ಲಿಟ್ಟುಕೊಂಡು ವಿಷಯವನ್ನು ಪೋಲಿಸರವರೆಗೂ ಕೊಂಡೊಯ್ಯುತ್ತಿದ್ದಾರೆ. ಮೂರನೆಯದಾಗಿ ಸ್ಥಳೀಯ ಜಮೀನುದಾರರು, ಸಿದ್ದಿ ನೆಲೆಯ ಮುಖ್ಯಸ್ಥ ಮತ್ತು ಸಿದ್ದಿ ಸಭಾಗೆ ಗಂಭೀರವಾದ ತೊಂದರೆ ಕೊಟ್ಟಿದ್ದಾರೆ. ಸಿದ್ದಿಜನರು ಗೇಣಿದಾರರಾಗಿ ಅಥವಾ ಕೃಷಿ ಕಾರ್ಮಿಕರಾಗಿ ಒಂದಲ್ಲಾ ಒಂದು ರೀತಿಯಲ್ಲಿ ಜಮೀನುದಾರರನ್ನೇ ಅವಲಂಬಿಸಿರುತ್ತಾರೆ. ಕೆಲವು ವೇಳೆ ಸಿದ್ದಿ ಸಭಾದಲ್ಲಿ ವಿಚಾರಣೆಗೆ ಒಳಗಾಗಿರುವ ವ್ಯಕ್ತಿಗೆ ಜಮೀನ್ದಾರರು ಆಶ್ರಯ ನೀಡುತ್ತಾರೆ. ಇದರಿಂದ ಜಮೀನ್ದಾರರಿಗೆ ಇಂತಹ ವ್ಯಕ್ತಿಗಳು ಸುಲಭವಾಗಿ ಸಿಗುವ ಕಾರ್ಮಿಕರ ಮೂಲವಾಗುತ್ತಿದ್ದಾರೆ.

ಇಂತಹ ಬದಲಾವಣೆಗೆ ಕಾರಣ ಪಕ್ಷ ರಾಜಕಾರಣದಲ್ಲಿ ಸಿದ್ದಿ ಮುಖಂಡರುಗಳು ಮತ್ತು ಯುವಕರುಗಳು ಗುರುತಿಸಿಕೊಳ್ಳುತ್ತಿರುವುದು ಮತ್ತು ಯಾವುದಾದರೂ ಒಂದು ರಾಜಕೀಯ ಪಕ್ಷದ ನಾಯಕರುಗಳ ಬೆಂಬಲದಿಂದ ಪರಿಶಿಷ್ಟ ಪಂಗಡದ ಜನರಿಗೆ ಮೀಸಲಾಗಿರುವ ಕ್ಷೇತ್ರಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ದಿ ಜನಾಂಗದ ಸದಸ್ಯರು ಸ್ಪರ್ಧಿಸಿ ಆಯ್ಕೆಯಾಗುತ್ತಿರುವುದು ಕಂಡು ಬಂದಿದೆ. ಹಳಿಯಾಳ ತಾಲೂಕಿನ ಗೋಳಿಹಳ್ಳಿಯಲ್ಲಿ ಮುಸ್ಲೀಂ ಸಿದ್ದಿ ಯುವಕನೆಬ್ಬ ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯನಾಗಿ ಆಯ್ಕೆಯಾಗಿದ್ದಾನೆ. ಮತ್ತು ಅಂಕೋಲ ತಾಲೂಕಿನ ಡೊಂಗ್ರೀ ಗ್ರಾಮ ಪಂಚಾಯತಿಗೆ ಕಮ್ಮಾಣಿ ಗ್ರಾಮದ ಸಿದ್ದಿ ಮಹಿಳೆಯೊಬ್ಬರು ಗ್ರಾಮಪಂಚಾಯಿತಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅವರ ಅನುಭವಗಳನ್ನು ಆಲಿಸಿದಾಗ, ಅವರೂ ಕೂಡ ಭಾರತೀಯ ಸಮಾಜದ ಇತರ ಜನಸಮೂಹಗಳಲ್ಲಿರುವಂತೆ ರಾಜಕೀಯ ಪಕ್ಷಗಳ ಸ್ಥಳೀಯ ನಾಯಕರುಗಳ ಕೈಗೊಂಬೆಯಾಗಿ ಕೆಲಸ ನಿರ್ವಹಿಸಿರುವುದು ಕಂಡುಬಂದಿದೆ. ಹಾಗೆಯೇ, ಹಳಿಯಾಳ ತಾಲೂಕಿನ ಗಾಡಗೇರಾ ಗ್ರಾಮದ ಮಹಿಳೆಯೊಬ್ಬರು ತಾಲೂಕ ಪಂಚಾಯತಿಯ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದಾರೆ. ಒಟ್ಟಾರೆ ಸಿದ್ದಿ ಜನಾಂಗದವರು ಈ ಅಧ್ಯಯನದಿಂದ ತಿಳಿದುಬಂದಿರುವಂತೆ ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಸ್ಪಷ್ಟವಾಗಿ ಗುರುತಿಸಿಕೊಳ್ಳದೆ, ಯಾವುದೇ ಪಕ್ಷ ಅಧಿಕಾರಕ್ಕೆ

ಬಂದರೂ ಅದರಿಂದ ಲಾಭಪಡೆದುಕೊಳ್ಳು ಬುದ್ಧಿವಂತಿಕೆಯನ್ನು ಕೆಲವು ಯುವಕರು ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ರಾಜಕೀಯ ನಿಷ್ಠೆ ಸ್ಥಳೀಯ ಪ್ರಭಲ ಜಾತಿಗಳ ಕೃಪಾಕಷ್ಟಾಕ್ಷವನ್ನು ಅವಲಂಬಿಸಿರುವುದು ಕಂಡುಬಂದಿದೆ.

'ಪ್ರೊಸೆಸ್ ಆಫ್ ಟ್ರೈಬಲ್ ಯೂನಿಫಿಕೇಷನ್ ಆಂಡ್ ಇಂಟಿಗ್ರೇಷನ್' ಎಂಬ ಸಂಶೋಧನಾ ಗ್ರಂಥದಲ್ಲಿ **ಎಸ್.ಎಲ್. ಜೋಶಿ** ಅವರು 'ಬುಡಕಟ್ಟು ಜನರು ರಾಜಕೀಯ ಸಾಮಾಜೀಕರಣದ ಪರಿಣಾಮವಾಗಿ ವಿಶಾಲವಾದ ಸಮಾಜದಲ್ಲಿ ಸಮೀಕರಣಗೊಳ್ಳುತ್ತಿದ್ದಾರೆ. ಅವರು ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಸಂಸ್ಥೆಗಳು ಮತ್ತು ಮೌಲ್ಯಗಳೊಂದಿಗೆ ಗುರುತಿಸಿಕೊಳ್ಳುವ ಬಗ್ಗೆ ಅರಿವುಳ್ಳವರಾಗಿದ್ದಾರೆ; ಹಾಗೆಯೇ ಬುಡಕಟ್ಟುಗಳ ಆರ್ಥಿಕ ಅಂಶಗಳನ್ನು ಬುಡಕಟ್ಟೇತರರು ಗಣನೆಗೆ ತೆಗೆದುಕೊಳ್ಳದಿರುವುದನ್ನೂ ಅಧ್ಯಯನದಲ್ಲಿ ಗುರುತಿಸಿದ್ದಾರೆ. ಎಸ್.ಎಲ್. ಜೋಶಿ ಅವರು ಹೇಳಿರುವ ಅಂಶಗಳು ಈ ಅಧ್ಯಯನದ ಸಿದ್ದಿ ಜನರಿಗೂ ಅನ್ವಯಿಸುತ್ತದೆ. ಏಕೆಂದರೆ ಈ ಜನಾಂಗವನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದ ಮೇಲ ಇವರಲ್ಲಿಯೂ ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇವರ ಈ ಪ್ರಯತ್ನವನ್ನು ಸ್ಥಳೀಯ ಬುಡಕಟ್ಟೇತರ ಜನಸಮೂಗಳಾದ ಹವ್ಯಕ ಬ್ರಾಹ್ಮಣರು, ಮರಾಠರು, ಗೌಳಿಗಳು, ಹಾಲಕ್ಕಿಗಳು ಗಣನೆಗೆ ತೆಗೆದುಕೊಂಡಿಲ್ಲದೇ ಇರುವುದು ಕಂಡುಬರುತ್ತದೆ. ಏನೇ ಬದಲಾವಣೆಯಾದರೂ ಸಾಮಾಜಿಕವಾಗಿ, ಆರ್ಥಿಕವಾಗಿ ಸ್ಥಳೀಯ ಪ್ರಬಲ ಸಮೂಹಗಳ ಮೇಲೆ ಅವಲಂಬಿಸಿರುವ ಸಿದ್ದಿಯರು ರಾಜಕೀಯವಾಗಿಯೂ ಅವರಿಗೆ ವಿರುದ್ಧವಾಗಿರಲಾರರು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸಾರಾಂಶ

ಗೋವಾದಿಂದ ತಮ್ಮ ಯಾತನಾಮಯ ಬದುಕಿನಿಂದ ತಪ್ಪಿಸಿಕೊಂಡು ಬಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆ, ದಾರವಾಡಜಿಲ್ಲೆಯ ಕಲಗಟಗಿ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲುಕುಗಳಿಗೆ ಬಂದು ಪ್ರಾರಂಭದಲ್ಲಿ ಅಲೆಮಾರಿಗಳಾಗಿ ಕಾಡಿನಲ್ಲಿ ಬದುಕುತ್ತಿದ್ದರು, ಬೇಟೆಯಾಡುತ್ತ, ಹಣ್ಣು-ಹಂಪಲು, ಗೆಡ್ಡೆ-ಗಡಣಸುಗಳನ್ನೇ ಆಹಾರವನ್ನಾಗಿಸಿಕೊಂಡು ಬದುಕು ನೂಕುತ್ತಿದ್ದರು. ಕ್ರಮೇಣ ಅಡಿಕೆ ತೋಟಗಳಲ್ಲಿ ಭೂಮಾಲಿಕರ ಮನೆಯಲ್ಲಿ ಕೃಷಿಕಾರ್ಮಿಕರಾಗಿ ಕೃಷಿ ಕೌಶಲ್ಯವನ್ನೂ ಕಲಿತ್ತಿದ್ದಾರೆ, ಸ್ವಂತ ಕೃಷಿಕರೂ ಆಗಿದ್ದಾರೆ, ಇತ್ತೀಚಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಾ ಶಿಕ್ಷಣ ಆರೋಗ್ಯದ ವಿಚಾರಗಳಲ್ಲಿ ಸಕಾರಾತರ್ಮಕವಾಗಿ ಜೀವನವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ವಿದ್ಯಾವಂತರಾಗಿ ಪದವಿದರರಾಗಿ ಶಿಕ್ಷಕರು, ವಕೀಲರು, ಸಮಾಜಸೇವಕರು ಧಾರ್ಮಿಕ ಮುಕಂಡರು ಆಗಿದ್ದಾರೆ. ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಇತರರಂತೆ ಸಮಾಜದ ಮುಖ್ಯವಾಹಿನಿಗೆ ಸೇರಲು ಅವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿರುವುದು ಅನುಕೂಲವಾಗಿದೆ. ಜನಾಂಗೀಯ ಸಮುದಾಯವಾಗಿರುವ ಸಿದ್ದಿ ಜನರು ಈಗ ಜೀವನ ಶೈಲಿಯನ್ನು ಸಮಾಜದ ಇತರರಂತೆ ಸುಧಾರಿಸಿಕೊಳ್ಳುತ್ತಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಅವರ ಜೀವನದಲ್ಲಾಗಿರುವ ಬಧಲಾವಣೆಗಳು ಸಕಾರಾತ್ಮಕವೇ ಆಗಿವೆ, ಅವರಿಗೆ ಸ್ವಂತ ಅಸ್ತಿತ್ವವೇ ಇಲ್ಲದ ಅವರ ಹಿಂದಿನ ಬದುಕಿಗಿಂತ ಇಂದಿನ ಬದುಕೇ ಸಾವಿರಪಟ್ಟು ಉತ್ತಮವಾದುದಾಗಿದೆ,

ಮೇಲಿನ ಚರ್ಚೆ ಮತ್ತು ಅಧ್ಯಯನದ ಆದಾರದ ಮೇಲೆ ಮತ್ತು ಈ ಅಧ್ಯಯನದ ಮೂಲ ಉದ್ದೇಶಗಳಿಗನುಗುಣವಾಗಿ ಈ ಅಧ್ಯಯನದ ಫಲಿತಗಳು ಈ ಮುಂದಿನಂತಿವೆ. ಅಧ್ಯಯನದ ಉದ್ದೇಶಧ ಪ್ರಕಾರ ಕುಟುಂಬದ ರಚನೆ ಕಾರ್ಯ, ಸ್ಥಳೀಯ ಸಾಮಜಿಕ ವ್ಯವಸ್ಥೆಯಲ್ಲಿ ಸಿದ್ದಿಯರ ಸ್ಥಾನಮಾನ, ಅವರ ಶಿಕ್ಷಣ, ಆರೋಗ್ಯ ಮತ್ತು ಮಹಿಳೆಯರ ಸ್ಥಾಮಾನಗಳ ಆದಾರದ ಮೇಲಿನ ಅಂಕಿಅಂಶಗಳ ಆದಾರದ ಮೇಲೆ ಸಿದ್ದಿ ಜನಾಂಗೀಯ ಸಮುದಾಯದಲ್ಲಾಗುತ್ತಿರುವ ಸಾಮಾಜಿಕ ಬದಲಾವಣೆಯ ಅಂಶಗಳನ್ನು ವಿವರಿಸಲಾಗಿದೆ. ಹಾಗೆಯೇ, ವೃತ್ತಿ, ಆಸ್ತಿಯ ಒಡೆತನ, ವ್ಯವಸಾಯ ಮತ್ತು ಇತರ ಆದಾಯದ ಮೂಲಗಳ ಆಧಾರದ ಮೇಲೆ ಸಿದ್ದಿಯರ ಆರ್ಥಿಕ ಜೀವನದಲ್ಲಾಗುತ್ತಿರುವ ಬದಲಾವಣೆಗಳನ್ನು ವಿವರಿಸಲಾಗಿದೆ.

ಸಿದ್ದಿ ಸಮುದಾಯದ ಕುಟುಂಬದ ಸ್ಥಿತಿಗತಿಗಳು ಸಾಮಾಜಿಕ ಮೌಲ್ಯದ ಭದ್ರ ಬುನಾದಿ ಎಂದರೆ ತಪ್ಪಾಗಲಾರದು. ಈ ಕುಟುಂಬದಲ್ಲಿ ಸಾಮುದಾಯಿಕವಾಗಿ ಬದುಕು ಸವೆಸುವ ಚಿಂತನೆಯೊಂದಿಗೆ ಕೂಡುಕುಟುಂಬದ ಮೌಲ್ಯಗಳನ್ನು ಪಾಲಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಗಂಡ–ಹೆಂಡತಿ, ಮಕ್ಕಳನ್ನು ಹೊಂದಿರುವ ಸಣ್ಣ ಕುಟುಂಬವಾಗಿ ಮೇಲ್ನೋಟಕ್ಕೆ ಗೋಚರಿಸಿದರೂ ಆಂತರಿಕವಾಗಿ ಹಲವು ಮೌಲ್ಯಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿವೆ.

ಕುಟುಂಬಗಳು ತಮ್ಮ ಕೌಟುಂಬಿಕ ಮೌಲ್ಯಗಳನ್ನು, ಆರ್ಥಿಕ ಸದೃಢತೆಯನ್ನು, ಮಹಿಳಾ ಸಬಲಿಕರಣವನ್ನು, ನಿರ್ಣಯ ಕೈಗೊಳ್ಳುವಿಕೆಯನ್ನು ಉಳಿಸಿಕೊಂಡು ಬಂದಿವೆ ಎನ್ನುವುದನ್ನು ಅಂಕಿ–ಅಂಶಗಳು ಹೇಳುತ್ತವೆ. ಆಧುನಿಕ ಜಗತ್ತಿನ ಪ್ರಭಾವಗಳಿಗೆ ಈ ಸಮುದಾಯಗಳು ಒಳಗಾಗಿದ್ದರೂ, ಇನ್ನೂ ತಮ್ಮ ಮೂಲ ಕಸುಬುಗಳಾದ ಜೇನು ಸಾಕಾಣಿಕೆ, ಕೃಷಿ ಕಾರ್ಯ, ಸಾಗುವಳಿ ಇತ್ಯಾದಿಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಸಿದಿ ಜನಾಂಗದ ಕೌಟುಂಬಿಕ ವ್ಯವಸ್ಥೆಯು ಪಿತೃಪ್ರಧಾನ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡರಲ್ಲೂ ನಂಬಿಕೆಯಲ್ಲಿರಿಸಿಕೊಂಡು ಮುನ್ನಡೆಯುತ್ತಿದೆ, ಕುಟುಂಬದ ನಿರ್ವಹಣೆಯಲ್ಲಿ ಹೆಣ್ಣುಮಕ್ಕಳು ತೆಗೆದುಕೊಳ್ಳಬಹುದಾದ ನಿರ್ಣಯ ಮಹತ್ವದ್ದಾಗಿರುತ್ತದೆ. ಇದರಿಂದ ಸಿದ್ದಿ ಜನಾಂಗದಲ್ಲಿ ಮಹಿಳೆಯರ ಪಾತ್ರದ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಆಧುನಿಕ ಕುಟುಂಬ ವ್ಯವಸ್ಥೆಯಲ್ಲಿ ಹಲವು ಏರಿಳಿತಗಳು ಕಂಡುಬಂದರೂ ಅದರ ಬುನಾದಿ ಆ ಜನಾಂಗದ ಸದಸ್ಯರ ಪರಸ್ಪರ ನಂಬಿಕೆಗಳಲ್ಲಿ, ಆಚರಣೆಗಳಲ್ಲಿ, ಸಂಪ್ರದಾಯಗಳಲ್ಲಿ ಕಂಡುಬರುತ್ತಿರುವುದು ಕೌಟುಂಬಿಕ ಬಗೆಗಿನ ಹೆಚ್ಚಿನ ಆಸ್ಥೆಯನ್ನು ತೋರಿಸಿ ಕೊಡುತ್ತಿದೆ.

ಸಿದ್ದಿ ಜನಾಂಗೀಯ ಸಮುದಾಯವು ಇನ್ನೂ ಗುಂಪು ಗುಂಪಾಗಿ ವಾಸಿಸುತ್ತಿದ್ದಾರೆ. ಇದಕ್ಕೆ ನಿದರ್ಶನ ಅವರು ಬದುಕು ಕಟ್ಟಿಕೊಂಡಿರುವ ಹಾಡಿಗಳು. ಕುಟುಂಬಗಳು ಇನ್ನೂ ಅವಿಭಕ್ತ ಕುಟುಂಬಗಳಾಗಿ ಸಮೂಹ ಜೀವನವನ್ನೇ ನೆಚ್ಚಿಕೊಂಡಿವೆ. ಇದು ಅವರ ಕುಟುಂಬದ ವೈಶಿಷ್ಟತೆಗಳಲ್ಲಿ ಒಂದು. ಆದರೆ ಸುತ್ತಲಿನ ಪರಿಸರ, ಹೊರಜಗತ್ತಿನ ಪ್ರಭಾವ, ಆಧುನಿಕತೆಯ ಏರಿಳಿತಗಳು, ಶಿಕ್ಷಣದ ಪ್ರಭಾವ ಇತ್ಯಾದಿಗಳಿಂದ ಕುಟುಂಬಗಳು ವಿಭಕ್ತ ಮಾದರಿಯ ಜೀವನಕ್ಕೂ ಒಳಗಾಗುತ್ತಿದೆ.

ಸಿದ್ದಿ ಸಮುದಾಯದ ಕುಟುಂಬಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪುರುಷ ಮತ್ತು ಮಹಿಳಾ ಸದಸ್ಯರುಗಳಿಬ್ಬರೂ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರೆ, ಇನ್ನು ಕೆಲವು ಕುಟುಂಬಗಳಲ್ಲಿ ಪುರುಷ ಮಹಿಳೆ ಇಬ್ಬರೂ ಈ ಕಾರ್ಯದಲ್ಲಿ ತೊಡಗಿಕೊಂಡಿರುವುದು ಕಾಣಸಿಗುತ್ತದೆ. ಇಲ್ಲಿ ಸ್ವತಂತ್ರವಾಗಿ ಮಹಿಳೆಯರು ತಮ್ಮ ಕುಟುಂಬದ ಆಗುಹೋಗುಗಳನ್ನು, ದಿನನಿತ್ಯದ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮುಂದುವರೆಸಿಕೊಂಡು ಬರುತ್ತಿರುವುದು ಸಮಾಜದಲ್ಲಿ ಅವರ ಪಾತ್ರವನ್ನು ವಿಸ್ತರಿಸುತ್ತಿದೆ.

ಸಾಂಪ್ರದಾಯಿಕ ಬುಡಕಟ್ಟು ಸಮುದಾಯಗಳು ಮೊದಲಿನಿದಲೂ ಕೂಡು ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದು, ರಕ್ತ ಸಂಬಂಧಿಕರನ್ನು ಒಳಗೊಂಡಂತಹ ಕುಟುಂಬ ವ್ಯವಸ್ಥೆ ಜಾರಿಯಲ್ಲಿರುವುದು ಕಂಡುಬರುತ್ತದೆ. ಮಾಹಿತಿದಾರರು ನೀಡಿರುವ ಮಾಹಿತಿಗಳ ಪ್ರಕಾರ ಮತ್ತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡ ಅನುಭವಗಳ ಪ್ರಕಾರ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಕಂಡು ಬರುತ್ತದೆ. "ಮಕ್ಕಳೇ ಮನೆ ಸಂಪತ್ತು ಕುಟುಂಬಕ್ಕೆ ಭವಿಷ್ಯದ ಆಧಾರ" ಎಂಬ ನಂಬಿಕೆಯಂತೆಯು ಮತ್ತು ಕುಟುಂಬ ಕಲ್ಯಾಣ ಯೋಜನೆಯಿಂದ ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟಪರಿಣಾಮ ಬೀರುತ್ತದೆ ಎಂಬ ತಪ್ಪು ಕಲ್ಪನೆಯಿಂದಲೂ ಬುಡಕಟ್ಟು ಸಮುದಾಯದ ಸ್ತ್ರೀಯರು ಹೆಚ್ಚು ಹೆಚ್ಚು ಮಕ್ಕಳನ್ನು ಹೊಂದುವ ಪ್ರವೃತ್ತಿ ಇದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗೀಯ ಸಮುದಾಯದಲ್ಲಿ ಪ್ರಪಂಚದ ಪ್ರಮುಖ ಧರ್ಮಗಳಾಗಿರುವ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮೂರು ಧರ್ಮಗಳನ್ನು ಅನುಸರಿಸುವವರಿದ್ದಾರೆ. ಪ್ರತಿಯೊಂದೂ ಧಾರ್ಮಿಕ ಸಮೂಹದವರೂ ಭೌಗೋಳಿಕವಾಗಿ ಪರಸ್ಪರ ಪ್ರತ್ಯೇಕವಾಗಿಯೇ ವಾಸಿಸುತ್ತಾರೆ. ಹಳಿಯಾಳ ಪ್ರದೇಶದ ಸಿದ್ದಿ ಜನರು ಹೆಚ್ಚಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಗಳ ಅನುಯಾಯಿಗಳಾಗಿದ್ದಾರೆ. ಯಲ್ಲಾಪುರ ಮತ್ತು ಅಂಕೋಲ ತಾಲೂಕುಗಳಲ್ಲಿನ ಸಿದ್ದಿ ಜನರು ಹೆಚ್ಚಾಗಿ ಹಿಂದೂ ಧರ್ಮದ ಅನುಯಾಯಿಗಳಾಗಿದ್ದಾರೆ. ಹಳಿಯಾಳದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ಒಂದೇ ಹಳ್ಳಿಯಲ್ಲಿ ವಾಸವಾಗಿದ್ದರೂ ಪರಸ್ಪರ ಪ್ರತ್ಯೇಕ ಕೇರಿಗಳಲ್ಲಿ ನೆಲೆಸಿದ್ದಾರೆ. ಹಿಂದೂ ಸಿದ್ದಿಗಳು ಸ್ಥಳೀಯವಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳಿಂದ ಅಂತರವನ್ನು ಕಾಯ್ದುಕೊಂಡಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ಪರಸ್ಪರ ದೂರದಲ್ಲಿ ಪ್ರತ್ಯೇಕ ನೆಲೆಗಳಲ್ಲಿಯೇ ವಾಸಿಸುತ್ತಿದ್ದಾರೆ. ಸ್ಥಳೀಯವಾಗಿ ಹಿಂದು ಸಿದ್ದಿಗಳು ಇತರ ಹಿಂದು ಜಾತಿಗಳ ನಡುವೆ ಜೀವನ ಶೈಲಿ ಮತ್ತು ಆಚರಣೆಗಳನ್ನು ಹಂಚಿಕೊಂಡು ಬದುಕುತ್ತಿದ್ದಾರೆ. ಹಾಗೆಯೇ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಿದ್ದಿಗಳು ತಮ್ಮ ತಮ್ಮ ಧರ್ಮಗಳ ಸ್ಥಳೀಯ ಸಮೂಹಗಳ ನಡುವೆ ಬದುಕುತ್ತಿದ್ದಾರೆ. ಸ್ಥಳೀಯ ಇತರ ಧಾರ್ಮಿಕ ಸಮುದಾಯಗಳಿಗೆ ಹೊಂದಿಕೊಂಡು ಮತ್ತು ಮೂರು ಧರ್ಮಗಳಿಗೆ ಇಡೀ ಸಿದ್ದಿ ಜನಾಂಗದವರು ವರ್ಗೀಕರಣ ಗೊಂಡಿರುವ ಪ್ರಯುಕ್ತ, ಸಿದ್ದಿಗಳ ನಿಜವಾದ ಸ್ವಂತಿಕೆಯ ಭಾವನೆ ಯಾವುದೇ ರೀತಿಯಲ್ಲೂ ಅಭಿವೃದ್ಧಿಯಾಗಿಲ್ಲ. ಸಿದ್ದಿಗಳು ತಾವು ಸಿದ್ದಿಗಳಾಗಿ ಗುರುತಿಸಿಕೊಳ್ಳುವುದಕ್ಕಿಂತ ಮುಸಲ್ಮಾನರಾಗಿ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ.

ಆದ್ದರಿಂದ ಅವರನ್ನು ಮುಸಲ್ಮಾನ ಸಿದ್ದಿ ಎಂದೇ ಕರೆಯಬೇಕು. ಈ ಅಂಶವು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದ ಅನುಭವವಾಗಿದೆ. ಅವರು ನಾವು ಮೊದಲು ಮುಸಲ್ಮಾನರು ನಂತರ ಸಿದ್ದಿಗಳು ಎಂದು ಭಾವಿಸುತ್ತಾರೆ. ಇದೇ ರೀತಿಯ ಭಾವನೆಗಳು ಇತರ ಧರ್ಮದ ಸಿದ್ದಿ ಜನರಲ್ಲಿಯೂ ಇರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನನ್ನ ಅನುಭವಕ್ಕೆ ಬಂದಿದೆ.

ಸಿದ್ದಿ ಮುಸಲ್ಮಾನರು ಇತರ ಸ್ಥಳೀಯ ಮುಸಲ್ಮಾನರ ಹಾಗೆಯೇ ಇಸ್ಲಾಂ ಧರ್ಮವನ್ನು ಆಚರಿಸುತ್ತಾರೆ, ಆದಾಗ್ಯೂ, ಇವರೊಂದಿಗೆ ಸ್ಥಳೀಯ ಮುಸಲ್ಮಾನರು ವೈವಾಹಿಕ ಸಂಬಂಧವನ್ನು ಬೆಳೆಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ದೈಹಿಕವಾಗಿ ಅವರ ನೀಗ್ರೋ ಜನಾಂಗೀಯ ಲಕ್ಷಣಗಳು ಮತ್ತು ಸಿದ್ದಿ ಮುಸಲ್ಮಾನರು ಆಚರಿಸುವ ಹಿರಿಯರ ಪೂಜೆ ಈ ಅಂಶಗಳನ್ನು ಹೊರತುಪಡಿಸಿದರೆ ಇಸ್ಲಾಂ ಧರ್ಮ ಇತರ ಎಲ್ಲಾ ಆಚರಣೆಗಳನ್ನು ಸಿದ್ದಿ ಮುಸಲ್ಮಾನರೂ ಆಚರಿಸುತ್ತಾರೆ. ಹಿಂದೂ ಮತ್ತು ಕ್ರಿಶ್ಚಿಯನ್ ಸಿದ್ದಿಗಳಂತಲ್ಲದೇ ಮುಸ್ಲಿಂ ಸಿದ್ದಿಗಳು ತಮ್ಮ ಹೆಸರಿನ ನಂತರ ಮನೆತನದ ಹೆಸರನ್ನು ಸೂಚಿಸುವಾಗ ಸಿದ್ದಿ ಸಮುದಾಯಕ್ಕಿಂತ ಹೆಚ್ಚಾಗಿ ಮುಸ್ಲೀಂ ಸಮುದಾಯಕ್ಕೆ ಪ್ರಾಶಸ್ತ್ಯ ನೀಡುತ್ತಾರೆ.

ಸಿದ್ದಿ ಕ್ರಿಶ್ಚಿಯನ್ನರು ಕ್ಯಾಥೋಲಿಕ್ ಪಂಗಡಕ್ಕೆ ಸೇರಿದವರಾಗಿದ್ದಾರೆ. ಇವರು ಹೆಚ್ಚಾಗಿ ಹಳಿಯಾಳ ಚರ್ಚಿಗೆ ಮತ್ತು ಕೆಲವರು ಯಲ್ಲಾಪುರ ಚರ್ಚುಗಳಿಗೆ ಸೇರಿದವರಾಗಿದ್ದಾರೆ. ಈ ಚರ್ಚುಗಳು ಗೋವಾದ ಕ್ಯಾಥೋಲಿಕ್ ಚರ್ಚಿನಿಂದ ನಿಯಂತ್ರಿಸಲ್ಪಡುತ್ತವೆ. ಸಿದ್ದಿ ಮುಸಲ್ಮಾನರಂತಲ್ಲದೆ, ಕ್ರಿಶ್ಚಿಯನ್ ಸಿದ್ದಿಗಳು ಸ್ಥಳೀಯ ಸಿದ್ದಿಯೇತರ ಕ್ರಿಶ್ಚಿಯನ್ನರೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿಲ್ಲ. ಆದರೆ ಇಲ್ಲಿಯ ಸಿದ್ದಿ ಕ್ರಿಶ್ಚಿಯನ್ನರು ಸ್ಥಳೀಯ ಹಿಂದೂ ಕೆಳಜಾತಿಯ ಹುಡುಗಿಯರನ್ನು ವಿವಾಹವಾಗಿ ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಿಕೊಂಡ ನಿದರ್ಶನಗಳಿವೆ. ಕ್ರಿಶ್ಚಿಯನ್ ನಂಬಿಕೆಗೆ ವಿರುದ್ಧವಾಗಿ ಇವರೂ ಕೂಡ ಹಿರಿಯರ ಪೂಜೆ ಮಾಡುತ್ತಾರೆ. ಇದರಿಂದಾಗಿ ಸ್ಥಳೀಯ ಸಿದ್ದಿಯೇತರ ಕ್ರಿಶ್ಚಿಯನ್ನರು ಇವರ ಕ್ರೈಸ್ತಾಚರಣೆಯ ಬಗ್ಗೆ ಅಪನಂಬಿಕೆ ಹೊಂದಿದ್ದಾರೆ. ಸಿದ್ದಿ ಕ್ರಿಶ್ಚಿಯನ್ನರು ಹಿಂದೂ ಕೆಳಜಾತಿಗಳೊಂದಿಗೆ ಚರ್ಚುಗಳಲ್ಲಿ ವೈವಾಹಿಕ ಸಂಬಂಧವನ್ನೇರ್ಪಡಿಸಿ ಕೊಂಡು ಮನೆಗೆ ಹೋದ ನಂತರ ಮನೆಯಲ್ಲಿ ಹಿಂದೂ ಧರ್ಮದಂತೆ ಪುರೋಹಿತ್ಯವಿಲ್ಲದಿದ್ದರೂ ಹಿಂದೂ ಧರ್ಮದ ಆಚರಣೆಗಳನ್ನೂ ಮಾಡುತ್ತಾರೆ.

ಯಲ್ಲಾಪುರ ಮತ್ತು ಅಂಕೋಲ ತಾಲೂಕುಗಳ ಘಟ್ಟ ಪ್ರದೇಶಗಳಲ್ಲಿ ಇತರ ಹಿಂದೂ ಜಾತಿ ಸಮುದಾಯಗಳ ನಡುವೆ ಹಿಂದೂ ಸಿದ್ದಿಗಳು ಬದುಕುತ್ತಿದ್ದಾರೆ. ಇಲ್ಲಿನ ಸಿದ್ದಿಗಳು ಹಿಂದು ಧರ್ಮಕ್ಕೆ ಔಪಚಾರಿಕವಾಗಿ ಮತಾಂತರಗೊಂಡವರಲ್ಲ ಎನಿಸುತ್ತದೆ. ಹಿಂದೂಗಳು ಪ್ರಬಲರಾಗಿರುವ ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಅವರು ಹಿಂದೂಗಳ ಸಂಸ್ಕಾರಗಳು, ಕ್ರಿಯಾವಿಧಿಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ತಮ್ಮದನ್ನಾಗಿಸಿಕೊಂಡಿದ್ದಾರೆ. ಈ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿಲ್ಲ, ಈಗಲೂ ನಡೆಯುತ್ತಲೇ ಇದೆ. ಅವರಲ್ಲಿ ಕೆಲವರು ಮೃತ ದೇಹಗಳನ್ನು ಸುಡುತ್ತಾರೆ, ಮತ್ತೆ ಕೆಲವರು ಮಣ್ಣಿನಲ್ಲಿ ಹೂಳುತ್ತಾರೆ. ಮೃತದೇಹಗಳನ್ನು ಹೂಳುವುದರ ಬದಲು

ಸುಡುವ ಪದ್ಧತಿ ಇತ್ತೀಚಿನದಾಗಿದೆ. ಪ್ರಾಯಶಃ ಹವ್ಯಕ ಬ್ರಾಹ್ಮಣ ಪುರೋಹಿತರ ಸಲಹೆಗಳಿಂದ ಇದನ್ನು ಆಚರಿಸುತ್ತಿರಬಹುದು. ಹವ್ಯಕ ಬ್ರಾಹ್ಮಣರು ಸಿದ್ದಿಗಳಿಗೆ ಹೇಳಿರುವ ಪ್ರಕಾರ ಸತ್ತ ವ್ಯಕ್ತಿಗಳ ಮೃತ ದೇಹಗಳನ್ನು ಸುಟ್ಟು ಅದರ ಭಸ್ಮವನ್ನು ಈ ಭಾಗದ ಯಾತ್ರ ಸ್ಥಳವಾಗಿರುವ ಗೋಕರ್ಣ ತಲುಪುವ ಬೇಡ್ತಿ ನದಿಗೆ ಬಿಟ್ಟರೆ ಅವರು ಸ್ವರ್ಗಕ್ಕೆ ಹೋಗುತ್ತಾರೆ. ಹಿಂದೂ ಸಿದ್ದಿಗಳು ಉಪಕಾರ ಬದ್ಧತೆಯಿಂದ ಸಾಧು ಮಠಕ್ಕೆ ಅವರು ನಿಷ್ಠರಾಗಿ ನಡೆದುಕೊಂಡು ಕಾಣಿಕೆಯನ್ನು ಕೊಡುತ್ತಿದ್ದರು. ಕೆಲವು ವರ್ಷಗಳ ಹಿಂದೆ ಸ್ವಾಮಿಜಿಗಳ ಶಿಷ್ಯರು ಸಿದ್ದಿಗಳನ್ನು ಮಠಕ್ಕೆ ಕರೆದುಕೊಂಡು ಹೋಗಿ ಪ್ರತಿ ವರ್ಷ ಹಬ್ಬದ ಆಚರಣೆ ಮಾಡಿಸುತ್ತಿದ್ದರು. ಮಠದೊಂದಿಗಿನ ವಿವಾದದಿಂದಾಗಿ ಈ ಆಚರಣೆ ಈಗ ನಡೆಯುತ್ತಿಲ್ಲ ಎಂದು ಸಿದ್ದಿ ಸಮುದಾಯದ ಹಿರಿಯ ವ್ಯಕ್ತಿಗಳು ಹೇಳುತ್ತಾರೆ.

ಹಿಂದೂ ಸಿದ್ದಿಗಳಲ್ಲಿ ಕೆಲವರು ಹಂದಿ ಮಾಂಸವನ್ನು ತಿನ್ನುತ್ತಾರೆ, ಸಂಪ್ರದಾಯಸ್ಥರಾಗಿರುವ ಕೆಲವು ಹಿಂದಿನ ತಲೆಮಾರಿನವರು ಹಂದಿ ಮಾಂಸವನ್ನು ಸೇವಿಸುವುದಿಲ್ಲ. ಆದ್ದರಿಂದ ಯಾರು ಹಂದಿ ಮಾಂಸವನ್ನು ಸೇವಿಸುವುದಿಲ್ಲವೋ ಅವರು ಮೂಲತಃ ಹಿಂದುಗಳು, ಅದನ್ನು ಸೇವಿಸುವವರು ಮೂಲತಃ ಮುಸಲ್ಮಾನರಾಗಿದ್ದು, ನಂತರ ಹಿಂದೂ ಧರ್ಮವನ್ನು ಇತ್ತೀಚಿಗೆ ಒಪ್ಪಿಕೊಂಡು ಆಚರಿಸುತ್ತಿರಬಹುದು. ಇದಕ್ಕೆ ಪುಷ್ಠಿ ನೀಡುವಂತೆ ಇವರಲ್ಲಿ ಕೆಲವರ ಹೆಸರುಗಳು ಜುಮ್ಮ, ಫಕೀರ ಇಸ್ಮಾಯಿಲ್‌ನಂತಹ ಮುಸ್ಲಿಂ ಹೆಸರುಗಳಿವೆ. ಸಿದ್ದಿ ಸಂಪ್ರದಾಯದ ಪ್ರಕಾರ ಅಜ್ಜನ ಹೆಸರನ್ನು ಅವನು ಸತ್ತ ನಂತರ ಅವರ ಜ್ಞಾಪಕಾರ್ಥವಾಗಿ ಅವನ ಮೊಮ್ಮಕ್ಕಳಿಗೆ ಇಡುತ್ತಾರೆ. ಈಗಲೂ ಅವರು ಪುನರ್ಜನ್ಮ ನಂಬಿಕೆ ಇಟ್ಟಿರುವುದರಿಂದ ಸತ್ತವರು ಪುನಃ ಅದೇ ಕುಟುಂಬದಲ್ಲಿ ಹುಟ್ಟುತ್ತಾರೆ ಎಂಬ ನಂಬುಕೆ ಈ ಜನಾಂಗೀಯ ಸಮುದಾಯದಲ್ಲಿದೆ. ಸ್ಥಳೀಯ ಮೂರು ಧರ್ಮಗಳ ಜನರು ಅವರ ದೈಹಿಕ ಲಕ್ಷಣಗಳು ಮತ್ತು ಜನಾಂಗೀಯ ಭಿನ್ನತೆಯಿಂದಾಗಿ ಸಿದ್ದಿ ಜನಾಂಗದವರೋದಿಗೆ ವೈವಾಹಿಕ ಸಂಬಂಧ ಬೆಳೆಸುವುದಿಲ್ಲ. ಆದ್ದರಿಂದ, ಸಿದಿಯರು ಅಂತರ್ ಧರ್ಮೀಯ ವಿವಾಹಗರನ್ನು ಒಪ್ಪಿ ಆಚರಿಸುತ್ತಾರೆ.

ಸಿದ್ದಿ ಸಮುದಾಯವು ಸಾಮಾಜಿಕವಾಗಿ ಸದೃಢವಾಗಿದ್ದರೂ, ಬೇರೆ ಸಮುದಾಯಗಳೊಂದಿಗೆ ಹೋಲಿಸಿ ನೋಡಿದಾಗ ಬುಡಕಟ್ಟು ಸಮಾಜ ಅಥವಾ ಸಮುದಾಯ ಮತ್ತು ದೈಹಿಕವಾಗಿ ಭಿನ್ನವಾದ ಜನಾಂಗ ಎನ್ನುವ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳುತ್ತದೆ. ಈ ರೀತಿಯಾಗಿ ಅವಲೋಕಿಸಿದಾಗ ಅವರ ಸಾಮಾಜಿಕ ಸ್ಥಾನಮಾನಗಳು ಏರಿಳಿತಗಳನ್ನು ಹುಟ್ಟುಹಾಕುತ್ತವೆ. ಆದಾಗ್ಯೂ ಅಧಿಕ ಸಂಖ್ಯೆಯ ಮಾಹಿತಿದಾರರು, ತಮ್ಮ ಕುಟುಂಬಗಳು ಸಾಮಾಜಿಕವಾಗಿ ಉತ್ತಮವಾಗಿಯೇ ಗುರುತಿಸಿಕೊಳ್ಳುತ್ತಿದ್ದಾರೆ ಎನ್ನುವ ಅಭಿಪ್ರಾಯವನ್ನು ಹೊರಹಾಕುತ್ತಾರೆ. ಇದು ಅವರು ತಮನ್ನು ತಾವು ಹೇಗೆ ಪ್ರಚಲಿತ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ ಎನ್ನುವ ಪ್ರತಿಬಿಂಬವನ್ನು ವಿವರಿಸುತ್ತದೆ. ಅಂತೆಯೇ ಸಿದ್ದಿ ಸಮಾಜದವರೂ ಬುಡಕಟ್ಟು ಸಮುದಾಯದ ಭಾಗವಾಗಿ ಹಲವು ಲಕ್ಷಣಗಳನ್ನು ಹೊಂದಿದ್ದರೂ ಅದನ್ನು ಕಾರ್ಯಗತಗೊಳಿಸಿಕೊಂಡೇ ಹೊರ ಸಮಾಜದೊಂದಿಗೆ ಸಮ್ಮಿಳಿತಗೊಂಡಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು.

ಬುಡಕಟ್ಟು ಸಂಪ್ರದಾಯದಂತೆ ಸಿದ್ದಿ ಜನಾಂಗವು ಪ್ರಕೃತಿದತ್ತವಾದ ಹಲವು ಆಧ್ಯಾತ್ಮಿಕ ಶಕ್ತಿಗಳನ್ನು ತಮ್ಮ ಕುಟುಂಬ/ಸಮುದಾಯದ ಅಭ್ಯುದಯಕ್ಕಾಗಿ ಪೂಜಿಸಿಕೊಂಡು ಬಂದಿದ್ದಾರೆ. ಆದರೆ ಈ ಪೂಜನೀಯ ಭಾವನೆಗಳನ್ನು ಸಮಾಜದ ಇತರ ಸಮುದಾಯಗಳ ಆರಾಧ್ಯ ಶಕ್ತಿಗಳ ಮೇಲೆಯೂ ಇರಿಸಿಕೊಂಡಿದ್ದು ಕಂಡುಬಂದಿದೆ. ಅಂತೆಯೇ ಬೇರೆ ಸಮುದಾಯಗಳಿಂದ ಪ್ರವರ್ತಿತ ವಾದ ದೇವಸ್ಥಾನಗಳು, ಗುಡಿಗಳಿಗೆ ತೆರಳುವ ಇವರ ಸಂಖ್ಯೆ ತುಂಬಾ ಕಡಿಮೆ ಎನ್ನುವುದೂ ಗಮನಾರ್ಹ. ಇದಕ್ಕೆ ಸಾಮಾಜಿಕವಾಗಿ ಹಿಂದುಳಿದಿರುವಿಕೆ, ಆಸಕ್ತಿದಾಯಕವಲ್ಲದ ವಾತಾವರಣದ ಕಲ್ಪನೆ, ಮಾನಸಿಕ ವಾದ ಅಂಜಿಕೆ, ಪ್ರಯೋಜನಗಳ ಕೊರತೆ ಮೊದಲಾದ ಕಾರಣಗಳಾಗಿವೆ.

ಸಿದ್ದಿಗಳು ತಮ್ಮ ಕೌಟುಂಬಿಕ ಸಂಬಂಧಿಗಳ ನಡುವೆ ಮತ್ತು ಸಮೂಹದೊಳಗಿನ ಸಹಕಾರದ ಮೂಲಕ ಉಳ್ಳವರು ಮತ್ತು ಇಲ್ಲದವರು ಅದರ ಪ್ರತಿಫಲವನ್ನು ಹಂಚಿಕೊಳ್ಳುತ್ತಿದ್ದರು. ಒಬ್ಬ ಸಿದ್ದಿಯು ಆತನಲ್ಲಿರುವ ವಸ್ತುಗಳನ್ನು ಇತರರೊಂದಿಗೆ ಹಂಚಿಕೊಳ್ಳದಿದ್ದರೆ, ನೆಮ್ಮದಿಯಿರುತ್ತಿರಲಿಲ್ಲ ಎಂದು ಜನಾಂಗದ ಹಿರಿಯರಾದ ಶಿವಾ ಸಿದ್ದಿ ಹೇಳುತ್ತಾರೆ. ಸಿದ್ದಿಗಳಲ್ಲಿ ಯಾರಾದರೊಬ್ಬರು ಇಂತಹ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡರೆ ಅಂತಹ ವ್ಯಕ್ತಿಯನ್ನು ಇತರರು ಟೀಕಿಸುವರಲ್ಲದೇ, ಸಾಮಾಜಿಕ ಅವಕೃಪೆಗೂ ಒಳಗಾಗಬೇಕಾಗುತ್ತದೆ. ಸೋಮಾರಿತನವನ್ನು ಬಿಟ್ಟು ಬೇರೆ ಯಾವುದೇ ಕಾರಣದಿಂದ ಸಹೋದರರಲ್ಲಿ ಯಾರಾದರೊಬ್ಬರದು ಬೆಳೆ ನಾಶವಾಗಿದ್ದರೆ, ಸಿದ್ದಿ ಜನರ ನೀತಿಸಂಹಿತೆಯಂತೆ ಉತ್ತಮ ಫಸಲು ಪಡೆದ ಸಹೋದರ ನಷ್ಟ ಅನುಭವಿಸಿದ ಸಹೋದರನಿಗೆ ಸುಗ್ಗಿಯ ಕಾಲದಲ್ಲಿ ಪಾಲು ಕೊಡುತ್ತಾನೆ. ಈ ರೀತಿ ಮಾಡದೇ ಇದ್ದರೆ ಅವನು ಸ್ವಾರ್ಥವನ್ನು ಪ್ರದರ್ಶಿಸಿದಂತಾಗುತ್ತದೆ. ಅಗೌರವದ ರೀತಿಯಲ್ಲಿ ಜನರು ಅವನ ಮೇಲೆ ಆಪಾದನೆ ಮಾಡುತ್ತಾರೆ. ಆದ್ದರಿಂದ ಸಿದ್ದಿ ಜನಾಂಗದಲ್ಲಿನ ಆರ್ಥಿಕತೆಯು, ಆಧುನಿಕ ಕೈಗಾರಿಕಾ ಆರ್ಥಿಕತೆಯಂತೆ ಸಂಪತ್ತನ್ನು ಒಬ್ಬನೇ ಕ್ರೋಡಿಕರಿಸಿಕೊಳ್ಳುವಂತಹದ್ದಾಗಿರದೆ, ಸಂಪತ್ತನ್ನು ಹಂಚಿಕೊಂಡು ಅನುಭವಿಸುವುದಾಗಿದೆ. ಅದರಲ್ಲೂ, ವಿಶೇಷವಾಗಿ ರಕ್ತಸಂಬಂಧಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಕೃಷಿ ಉತ್ಪನ್ನಗಳು ಮತ್ತು ಇತರ ಉತ್ಪನ್ನಗಳನ್ನು ಹಂಚಿಕೊಳ್ಳುವುದೇ ಅವರ ಆರ್ಥಿಕತೆಯ ಆಧಾರವಾಗಿದೆ. ಹೀಗೆ ಅವರ ಆರ್ಥಿಕ ವ್ಯವಸ್ಥೆಯೇ ಸಮಾಜದಲ್ಲಿನ ಸಂಬಂಧಗಳನ್ನು ಗಟ್ಟಿಗೊಳಿಸಿದೆ, ಶಾಶ್ವತಗೊಳಿಸಿದೆ.

ಜನಾಂಗೀಯ ಧೃಡಪೂರ್ವ ಶೃತ ಮನೋಭಾವನೆಯು ಬಿಳಿಯರು ಮತ್ತು ಕರಿಯರ ನಡುವಿನ ಗುಣಲಕ್ಷಣವಾದರೆ, ಪ್ರಸ್ತುತ ಭಾರತೀಯರಲ್ಲಿ ಜನಾಂಗೀಯ ಸಂಬಂದಗಳಿವೆಯೇ? ಭಾರತದಲ್ಲಿ ಹಲವಾರು ಜನಾಂಗೀಯ ಅಂಶಗಳಿವೆ. ಐತಿಹಾಸಿಕ ಕಾಲಘಟ್ಟಗಳಲ್ಲಿ ಬೇರೆ ಬೇರೆ ಜನಾಂಗೀಯ ಸಮುದಾಯಗಳು ಭಾರತಕ್ಕೆ ಬಂದು ಇಲ್ಲಿ ಶಾಶ್ವತವಾಗಿ ನೆಲೆಸಿ ಸ್ಥಳೀಯರೊಂದಿಗೆ ಮತ್ತು ಇತರ ರೊಂದಿಗೆ ಸಹಬಾಳ್ವೆ ನಡೆಸುತ್ತಿದ್ದಾರೆ. ಇದೇ ಅಂಶಗಳಿಗೆ ಹಿಂದೆ ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆ ಎಂದು ಹೆಸರು ನೀಡಲಾಗಿತ್ತು. ಆರ್ಯರಲ್ಲಿದ್ದ ವರ್ಣದ ಬಗೆಗಿನ ಧೃಡಪೂರ್ವಶೃತ ಮನೋಭಾವನೆ ಯಿಂದ ಆರ್ಥಿಕ ಶೋಷಣೆಗಾಗಿ, ಭಾರತದ ಸ್ಥಳೀಯ ಕಪ್ಪು ವರ್ಣದ ಜನರನ್ನು ತುಳಿತಕ್ಕೊಳ ಪಡಿಸಿದ್ದಾರೆ, ಇಂದಿಗೂ ಭಾರತೀಯರಲ್ಲಿ ವರ್ಣದ ಬಗ್ಗೆ ಪ್ರಭಲವಾದ ದೃಡಪೂರ್ವಶೃತ ಮನೋ ಭಾವನೆಯಿದೆ. ಆಕರ್ಷಕ ಮೈಬಣ್ಣ ಹೊಂದಿರುವವರು ಈಗಲೂ ಹೆಚ್ಚುಗಾರಿಕೆಯಿಂದ ಮೆರೆಯುತ್ತಿದ್ದಾರೆ.

ಆದ್ದರಿಂದಲೇ ಸಿದ್ದಿ ಬುಡಕಟ್ಟು ಜನರು ಕಪ್ಪು ಮೈಬಣ್ಣ ಉಳ್ಳವರಾಗಿರುವುದರಿಂದ ಅವರನ್ನು ಇತರರು ಕೀಳಾಗಿ ಕಾಣುತ್ತಿದ್ದಾರೆ, ಇದರ ಜೊತೆಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವರ ಹಿಂದಿಳಿದಿರುವಿಕೆಯು ಅದರ ಅನಾನೂಕೂಲತೆಗಳನ್ನು ಹೆಚ್ಚಿಸಿವೆ. ಆದರೆ ಜಾತಿ ಪದ್ಧತಿಯ ಅತಿಯಾದ ಏಣಿ-ಶ್ರೇಣಿ ಅಥವಾ ಸ್ತರೀಕರಣದಿಂದಾಗಿ, ಜನಾಂಗೀಯ ಮತ್ತು ವರ್ಗ ತಾರತಮ್ಯದ ಆಂಶಗಳು ಇವರನ್ನು ಕಾಡುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ, ಭಾರತ ಮತ್ತು ಕರ್ನಾಟಕ ಸರ್ಕಾರಗಳು ಸಿದ್ದಿ ಬುಡಕಟ್ಟು ಜನರ ಗುಲಾಮಿತನವನ್ನು ಹೋಗಲಾಡಿಸಿ, ಅವರ ಪ್ರತ್ಯೇಕತೆಯ ಬದುಕಿನಿಂದ ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಲ್ಲಿ ತರಲು ಹಲವಾರು ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿವೆ. ಈ ಸಿದ್ದಿಯರ ಮಕ್ಕಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಹೋಗುತ್ತಿರುವುದಲ್ಲದೇ, ಕೆಲವು ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನೂ ಪಡೆಯುತ್ತಿದ್ದಾರೆ. ಕ್ರೀಡಾ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದಾರೆ. ಸಿದ್ದಿಯರಲ್ಲಿ ಹಿಂದೂ ಮುಸ್ಲಿಂ, ಮತ್ತು ಕ್ರೈಸ್ತ ಧರ್ಮವನ್ನು ಅನುಸರಿಸುವರಿದ್ದಾರೆ. ೨೦೦೩ರಲ್ಲಿ ಸಂವಿಧಾನದ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಲ್ಪಟ್ಟ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರ ಸಾಮಾಜಿಕ ಮತ್ತು ಆರ್ಥಿಕ ಬದುಕು ಪರಿವರ್ತನೆಯ ಹಾದಿಯಲ್ಲಿ ಸಾಗುತ್ತಿದೆಯೇ? ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಈ ಅಧ್ಯಯನದ ಮುಂದಿನ ಭಾಗವು ಸಿದ್ದಿ ಮಹಿಳೆಯರು ಹೊಂದಿರುವ ಸ್ಥಿತಿಗತಿಗಳನ್ನು ಕುರಿತು ವಿವರಣೆಯನ್ನು ನೀಡುತ್ತದೆ. ಪುರುಷ ಪ್ರಧಾನವಾಗಿರುವ ಆದಿವಾಸಿ ಸಮುದಾಯಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಲ್ಲದ ಸಾಧಾರಣವಾದ ಅಂತಸ್ತು ಹೊಂದಿರುವುದು ಕಂಡುಬರುತ್ತದೆ. ಹಾಗೆಯೇ, ಮಹಿಳೆಯರು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಾತಿನಿಧ್ಯ ಹೊಂದಿರುವುದು ಕಂಡುಬರುತ್ತದೆ. ಇಪ್ಪತ್ತು ಇಪ್ಪತ್ತೈದು ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನ ಮಹಿಳೆಯರು ಶಿಕ್ಷಣ ಪಡೆಯದೇ ಇರುವುದು. ಕಲಿತವರೂ ಕೂಡ ಪ್ರಾಥಮಿಕ ಹಂತದಲ್ಲಿಯೇ ತಮ್ಮ ಶಿಕ್ಷಣವನ್ನು ಮೊಟಕುಗೊಳಿಸಿರುವುದು ಕಂಡು ಬಂದಿದೆ. ಆದರೆ, ಇತ್ತೀಚಿಗೆ ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳೇ ಉನ್ನತ ಶಿಕ್ಷಣಕ್ಕೆ ಹೋಗುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣವೇನೆಂದರೆ ಗಂಡು ಮಕ್ಕಳು ೭, ೮ ಅಥವಾ ೧೦ನೇ ತರಗತಿಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗಿ ಯಾವುದಾದರೂ ದುಡಿಮೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಸಿದ್ದಿ ಬುಡಕಟ್ಟು ಜನಾಂಗೀಯ ಸಮುದಾಯದ ಅನಕ್ಷರಸ್ಥ ಮಹಿಳೆಯರಲ್ಲಿ ಸಾಂಪ್ರದಾಯಿಕ ಹೆರಿಗೆ ಪದ್ಧತಿಯು ಆಚರಣೆಯಲ್ಲಿದ್ದು ಮನೆಯಲ್ಲಿಯೇ ಅನುಭವಸ್ತ ಹಿರಿಯ ಮಹಿಳೆಯರ ಮೂಲಕ ಹೆರಿಗೆ ಮಾಡಿಸಿಕೊಳ್ಳುವುದು ಜನಾಂಗದ ನಾಟಿವೈದ್ಯರ ಮೂಲಕ ಸಾಂಪ್ರದಾಯಿಕ ಪದ್ಧತಿಯ ಚಿಕಿತ್ಸಾ ವಿಧಾನಗಳನ್ನು ರೂಡಿಯಲ್ಲಿರಿಸಿಕೊಂಡಿರುವುದು ಕಂಡುಬರುತ್ತದೆ.

ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳಿಂದ ಪಡೆಯುತ್ತೇವೆ ಎಂದು ಕೆಲವು ಮಾಹಿತಿದಾರರು ಹೇಳಿದ್ದರೆ, ಮತ್ತೆ ಕೆಲವರು ಅಂಗನವಾಡಿಯಿಂದ ಪಡೆದ ಆಹಾರಧಾನ್ಯಗಳನ್ನು ನಾವು ಉಪಯೋಗಿಸುವುದಿಲ್ಲ ಎಂಬಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಿದ್ದಿ ಜನಾಂಗದವರು

ನೆಲೆಸಿರುವ ನೆಲೆಗಳಲ್ಲಿ ಅಂಗನವಾಡಿ ಕೇಂದ್ರಗಳ ಉಪಯೋಗದ ಕುರಿತು ವಿಚಾರಿಸುತ್ತಿರುವಾಗ ಮಾಹಿತಿದಾರರು ತಮ್ಮ ಸಮುದಾಯದಲ್ಲಿ ಅಂಗನವಾಡಿ ಕೇಂದ್ರಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಪ್ರತಿಶತ ತಮ್ಮ ಮಕ್ಕಳ ಆರೋಗ್ಯ ತಪಾಸಣೆಯನ್ನು ಅಂಗನವಾಡಿ ಕೇಂದ್ರಗಳ ಮೂಲಕವೇ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಕಾಡುಗಳಲ್ಲಿ ನೆಲೆಯಿಲ್ಲದೆ ಅಲೆಯುತ್ತಿದ್ದ ಸಿದ್ದಿ ಜನರು ಈಗ ಅಧಿಕ ಪ್ರಮಾಣದಲ್ಲಿ ಅಂಗನವಾಡಿ ಯೋಜನೆಯ ಉಪಯೋಗವನ್ನು ಪಡೆಯುತ್ತ ತಮ್ಮ ಮಕ್ಕಳ ಆರೋಗ್ಯದ ಮತ್ತು ಶಿಕ್ಷಣದ ಬಗ್ಗೆ ಗಮನ ಹರಿಸುತ್ತಿರುವುದರಲ್ಲಿ ಮಹಿಳೆಯರ ಪಾತ್ರ ಗಣನೀಯವಾಗಿರುವುದು ಕಂಡುಬಂದಿದೆ.

ಕುಟುಂಬದ ಮಹಿಳಾ ಸದಸ್ಯರ ಶಿಕ್ಷಣ ಸಮುದಾಯದ ಸಮಗ್ರ ಅಭಿವೃದ್ಧಿಯನ್ನು ವಿವರಿಸುತ್ತದೆ. ಕಡಿಮೆ ಸಂಖ್ಯೆಯ ಮಹಿಳಾ ಸದಸ್ಯರು ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಆದರೆ ಮಹಿಳೆಯರ ಅನುಭವಗಳು ಮತ್ತು ಅವು ಕಟ್ಟಿಕೊಡುವಂತಹ ನಿಲುವುಗಳನ್ನು ಗಮನಿಸಿದಾಗ ಸಿದ್ದಿ ಸಮುದಾಯವು ತನ್ನ ಮಹಿಳಾ ಸದಸ್ಯರನ್ನು ಕುಟುಂಬ ನಿರ್ವಹಣೆಯ ಮುಖ್ಯ ಭಾಗವೆಂದೇ ಪರಿಗಣಿಸಿದೆ. ಕುಟುಂಬದಲ್ಲಿ ಮಹಿಳೆಯರು ಶಿಕ್ಷಿತರಾದರೆ ಅವರ ಮಕ್ಕಳು ಮತ್ತು ಮಹಿಳೆಯರು ಹೊರ ಜಗತ್ತಿನೊಂದಿಗೆ ವ್ಯವಹರಿಸುವ ವಿಧಾನಗಳು ಬಹಳ ಪರಿಣಾಮಕಾರಿಯಾಗಿರುತ್ತದೆ. ಅದರಲ್ಲೂ ಪ್ರಾಥಮಿಕ ಶಿಕ್ಷಣವನ್ನು ಅವರು ಪಡೆದುಕೊಂಡಿರುವುದು ಮತ್ತು ಶಾಲಾ ಶಿಕ್ಷಣಕ್ಕೆ ಅವರ ಹಾಡಿಗಳು ತೆರೆದುಕೊಂಡಿರುವುದು ಆಸಕ್ತಿಯ ವಿಷಯ.

ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಈ ಸಮುದಾಯದ ಹುಡುಗರು ಶಿಕ್ಷಣವನ್ನು ಹೆಚ್ಚಾಗಿ ಪಡೆದುಕೊಂಡಿಲ್ಲ; ಹೆಣ್ಣುಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಟ್ಟ ಉದಾಹರಣೆಗಳಿವೆ. ಆದರೆ ಈಗ ಈ ಸಮುದಾಯ ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದೆ ಮತ್ತು ಪದವಿ ಮತ್ತು ಉನ್ನತ ಪದವಿಗಳನ್ನು ಪಡೆದುಕೊಂಡಿರುವವರು ಈ ಸಮುದಾಯದಲ್ಲಿ ಕಾಣಸಿಗುತ್ತಾರೆ. ಕೆಲವು ಸಿದ್ದಿ ಹುಡುಗರು ಪಟ್ಟಣಗಳಿಗೆ ವ್ಯಾಪಾರ, ಕೂಲಿ ಕೆಲಸಗಳಿಗಾಗಿ ವಲಸೆ ಬಂದಿದ್ದಾರೆ. ಇನು ಕೆಲವರು ಸಿನಿಮಾ, ಜಾಹಿರಾತು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರಿದ್ದಾರೆ.

ಸಿದ್ದಿ ಸಮುದಾಯದ ಸದಸ್ಯರು ಔಪಚಾರಿಕ ಶಿಕ್ಷಣವನ್ನು ಹೆಚ್ಚಾಗಿ ಪಡೆದುಕೊಂಡಿರದೇ ಇರುವುದು ಕ್ಷೇತ್ರ ಭೇಟಿಯ ವೇಳೆ ಕಂಡುಬಂದಿದೆ. ಮಾಹಿತಿದಾರರ ಅಧಿಕ ಕುಟುಂಬಗಳಿಗೆ ಅಕ್ಷರ ಜ್ಞಾನವೇ ಇಲ್ಲದಿರುವುದು ಕಂಡುಬಂದಿದೆ. ಆದರೆ ಪರಿಸರದ ಬಗ್ಗೆ, ಸುತ್ತಮುತ್ತಲಿನ ಆಗುಹೋಗುಗಳ ಬಗ್ಗೆ, ಪ್ರಾಪಂಚಿಕ ಜ್ಞಾನದ ನೆಲೆಗಟ್ಟಿನಲ್ಲಿ ಹತ್ತು ಹಲವು ಬಗೆಯ ಅನುಭವಗಳನ್ನು ಅವರು ಕಟ್ಟಿಕೊಂಡಿದ್ದಾರೆ. ಆದರೆ ಈ ಸಮುದಾಯದಿಂದ ಕಾಲೇಜು, ವಿಶ್ವವಿದ್ಯಾಲಯದ ಮೆಟ್ಟಿಲನ್ನು ಹತ್ತಿ ಶಿಕ್ಷಣವನ್ನು ತನ್ನದಾಗಿಸಿಕೊಂಡ ಕುಟುಂಬಗಳೂ ಇವೆ ಎನ್ನುವುದು ಗಮನಾರ್ಹ. ಈ ಕುಟುಂಬಗಳ ಮಕ್ಕಳು ಸರಕಾರಿ ಪ್ರವರ್ತಿತ ಅಂಗನವಾಡಿಗಳಿಗೆ ಹೋಗುತ್ತಿರುವುದು ಶಾಲಾ ಪೂರ್ವ ತರಗತಿಗಳ ಬಗೆಗಿನ ಸಮುದಾಯದ ಅರಿವು ಆಸಕ್ತಿದಾಯಕವಾಗಿದೆ. ಮನುಷ್ಯನ ಶಿಕ್ಷಣದ ಬುನಾದಿಯು ಮೂಲದಲ್ಲಿಯೇ ಪ್ರಕೃತಿದತ್ತವಾಗಿ ಕಟ್ಟಿಕೊಳ್ಳುವ ಸಂದರ್ಭದಲ್ಲಿ ಶಾಲಾ

ಪೂರ್ವ ತರಗತಿಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವ ಸಿದ್ದಿ ಜನಾಂಗದ ನಡೆ ಆಧುನಿಕ ಜಗತ್ತಿನ ಪ್ರಭಾವದೆಡೆಗೆ ಅವರನ್ನು ಸೆಳೆಯುವ ಮತ್ತು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಕೊಳ್ಳುತ್ತಿರುವ ಸಂಕೇತವನ್ನು ಈ ಸಮುದಾಯವು ನೀಡುತ್ತಿದೆ.

ಕುಟುಂಬದ ಮಹಿಳಾ ಸದಸ್ಯರ ಶಿಕ್ಷಣ ಸಮುದಾಯದ ಸಮಗ್ರ ಅಭಿವೃದ್ಧಿಯನ್ನು ವಿವರಿಸುತ್ತದೆ. ಕಡಿಮೆ ಸಂಖ್ಯೆಯ ಮಹಿಳಾ ಸದಸ್ಯರು ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಆದರೆ ಮಹಿಳೆಯರ ಅನುಭವಗಳು ಮತ್ತು ಅವು ಕಟ್ಟಿಕೊಡುವಂತಹ ನಿಲುವುಗಳನ್ನು ಗಮನಿಸಿದಾಗ ಸಿದ್ದಿ ಸಮುದಾಯವು ತನ್ನ ಮಹಿಳಾ ಸದಸ್ಯರನ್ನು ಕುಟುಂಬ ನಿರ್ವಹಣೆಯ ಮುಖ್ಯ ಭಾಗವೆಂದೇ ಪರಿಗಣಿಸಿದೆ. ಕುಟುಂಬದಲ್ಲಿ ಮಹಿಳೆಯರು ಶಿಕ್ಷಿತರಾದರೆ ಅವರ ಮಕ್ಕಳು ಮತ್ತು ಮಹಿಳೆಯರು ಹೊರಜಗತ್ತಿನೊಂದಿಗೆ ವ್ಯವಹರಿಸುವ ವಿಧಾನಗಳು ಬಹಳ ಪರಿಣಾಮಕಾರಿಯಾಗಿರುತ್ತದೆ. ಅದರಲ್ಲೂ ಪ್ರಾಥಮಿಕ ಶಿಕ್ಷಣವನ್ನು ಅವರು ಪಡೆದುಕೊಂಡಿರುವುದು ಮತ್ತು ಶಾಲಾ ಶಿಕ್ಷಣಕ್ಕೆ ಅವರ ಹಾದಿಗಳು ತೆರೆದು ಕೊಂಡಿರುವುದು ಆಸಕ್ತಿಯ ವಿಷಯ. ಈ ದೃಷ್ಟಿಕೋನದಿಂದ ಮಹಿಳಾ ಶಿಕ್ಷಣವನ್ನು ಅವಲೋಕಿಸಿದಾಗ ಸರಕಾರದ ಸೌಲಭ್ಯಗಳು ಹಳ್ಳಿಗಳ ಮೂಲೆಗೂ ದೊರಕುತ್ತಿವೆ ಎನ್ನುವುದೂ ಗಮನಿಸಬೇಕಾದ ಅಂಶ.

ಬುಡಕಟ್ಟು ಜನರ ಶಿಕ್ಷಣದ ಪರಿವಿಡಿಯಲ್ಲಿ ಬುಡಕಟ್ಟು ಸಂಸ್ಕೃತಿಯ ಅನನ್ಯತೆ ಮತ್ತು ಮುಖ್ಯ ವಾಹಿನಿಯ ಆರ್ಥಿಕ ಅಭ್ಯುದಯ ಸಾಧನಗಳ ನಿರ್ಮಾಣದ ನಡುವೆ ಅಸಮತೋಲನ ಕಂಡುಬರುತ್ತಿದೆ, ಶೈಕ್ಷಣಿಕ ಕಾರ್ಯಕ್ರಮಗಳು ಬುಡಕಟ್ಟು ಮಕ್ಕಳನ್ನು ಮುಖ್ಯವಾಹಿನಿಯಾದ ಶಾಲೆಯಲ್ಲಿ ಯಶಸ್ಸುಗಳಿಸುವಂತೆ ತರಬೇತುಗೊಳಿಸಬೇಕು. ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯು ಪ್ರಬಲ ಸಮುದಾಯ ಗಳಿಗಾಗಿ ವಿನ್ಯಾಸಗೊಳಿಸಿದಂತಿದೆ. ಬುಡಕಟ್ಟು ಮಕ್ಕಳ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರತೆಯಿಂದ ಶಿಕ್ಷಣದ ಬೆಂಬಲದಿಂದ ಸಮಾಜದ ಮುಖ್ಯವಾಹಿನಿಗೆ ಸ್ಪಂದಿಸುವಂತೆ ಮಾಡುವ ಕಾರ್ಯಕ್ರಮಗಳ ಅವಶ್ಯಕತೆ ಇದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ೬೭ ವರ್ಷಗಳಾದರೂ ಈಶಾನ್ಯ ಭಾರತ ಇಂದಿಗೂ ದೇಶದಿಂದ ಪ್ರತ್ಯೇಕಗೊಂಡ ಒಂದು ತುಂಡು ನೆಲದಂತೆ ಭೌಗೋಳಿಕವಾಗಿ ಮತ್ತು ಭಾವನಾತ್ಮಕವಾಗಿ ಪರಕೀಯ ವಾಗಿಯೇ ನರಳುತ್ತಿದೆ. ಈ ವಲಯದಲ್ಲಿ ಸುಮಾರು ೨೨೦ ಬುಡಕಟ್ಟು ಮತ್ತು ಉಪ ಬುಡಕಟ್ಟು ಜನಾಂಗಗಳಿದ್ದು ಎಲ್ಲವೂ ತಮ್ಮದೇ ಬುಡಕಟ್ಟು ಭಾಷೆಗಳನ್ನು ಹೊಂದಿವೆ. ಈಶಾನ್ಯ ಭಾರತ ಭೌಗೋಳಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕವಾಗಿ ಬಹಳ ವೈವಿಧ್ಯತೆ ಹೊಂದಿದ್ದು ಇಂಡೋ ಮಂಗೋಲಾಯ್ಡ್ ಜನಾಂಗಗಳು ನೂರಾರು ವರ್ಷಗಳಿಂದ ಸಂಕರಗೊಂಡಿವೆ. ನೈಸರ್ಗಿಕವಾಗಿ ರಮಣೀಯವಾದ ಈ ಪ್ರದೇಶ ಹಿಮಾಲಯ ಪರ್ವತ ಶ್ರೇಣಿಗಳು ಮತ್ತು ದಟ್ಟ ಹರಿದ್ವರ್ಣದ ಕಾಡುಗಳಿಂದ ಕಂಗೊಳಿಸುತ್ತಿದ್ದು, ಮಧ್ಯಭಾಗದಲ್ಲಿ ಗಂಡು ನದಿ ಬ್ರಹ್ಮಪುತ್ರಾ ಈಶಾನ್ಯ ಭಾರತವನ್ನು ಸೀಳಿಕೊಂಡು ಹರಿಯುತ್ತಿದೆ. ಆದಾಗ್ಯೂ ಭೌಗೋಳಿಕವಾಗಿ ಈ ಪ್ರದೇಶದ ಬುಡಕಟ್ಟು ಜನರು ಪರಕೀಯರಂತರಯೇ ಬದುಕುತ್ತಿದ್ದಾರೆ.

ಅಂತೆಯೇ, ಈಶಾನ್ಯ ಭಾರತದ ಬುಡಕಟ್ಟು ಜನರಂತೆಯೇ, ನಾನು ಅಧ್ಯಯನ ಮಾಡುತ್ತಿರುವ ಸಿದ್ದಿ ಬುಡಕಟ್ಟು ಸಮೂಹವು ಸುಮಾರು ೪೦೦ ವರ್ಷಗಳಿಂದಲೂ ಭಾರತದ ಭೂಮಿಯ ಮೇಲೆ ಇಲ್ಲಿನ ಮುಖ್ಯವಾಹಿನಿಯ ಜನರ ಸೇವೆ ಮಾಡುತ್ತ, ಹತ್ತಾರು ಬುಡಕಟ್ಟು ಸಮೂಹಗಳು ವಾಸಿಸುತ್ತಿರುವ, ವೈವಿಧ್ಯತೆಯನ್ನು ಹೊಂದಿರುವ, ಕರಾವಳಿ ಸಮುದ್ರ ತೀರವನ್ನೂ ಒಳಗೊಂಡ ರಮಣೀಯವಾದ ನೈಸರ್ಗಿಕ ಪರಿಸರವನ್ನು ಹೊಂದಿರುವ ಕಾಳಿ, ಅಘನಾಶಿನಿ, ವಾರಾಹಿ ಮುಂತಾದ ನದಿಗಳ ದಡದಲ್ಲಿ ದಟ್ಟ ಹರಿದ್ವರ್ಣದ ಕಾಡುಗಳಿಂದ ಸುತ್ತುವರಿಯಲ್ಪಟ್ಟ ಪಕೃತಿಯ ಮಡಿಲಿನಲ್ಲಿ ಭೌಗೋಳಿಕವಾಗಿ ಸ್ಥಳೀಯ ಜನರೊಂದಿಗೆ ಬದುಕನ್ನು ನೂಕುತ್ತಿದ್ದರೂ, ಸರಕಾರದಿಂದ ದೊರೆಯುತ್ತಿರುವ ಸೌಲಭ್ಯಗಳನ್ನು ಸ್ವಲ್ಪಮಟ್ಟಿಗೆ ಪಡೆಯುತ್ತಿದ್ದರೂ, ಭಾವನಾತ್ಮಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ಜನಾಂಗೀಯವಾಗಿ ಹೊರಗಿನವರಾಗಿ ಉಳಿದಿದ್ದಾರೆಂದರೆ ಇವರೂ ಕೂಡ ಈಗಲೂ ಪರಕೀಯರಂತೆಯೆ ಇದ್ದಾರೆ ಎಂಬುದು ನನ್ನ ಅಧ್ಯಯನದಿಂದ ತಿಳಿದುಬರುತ್ತದೆ.

ಶಿಕ್ಷಣದ ಸೌಲಭ್ಯಗಳು ಸಮರ್ಪಕವಾಗಿ ದೊರೆಯದೇ ಇರುವುದರಿಂದ ಪ್ರತಿಶತ ೫೫ರಷ್ಟು ಮಾಹಿತಿದಾರರು ಇನ್ನೂ ಅನಕ್ಷರಸ್ಥರಾಗಿರುವುದು ಕಂಡುಬರುತ್ತದೆ. ಮುಂದಿನ ಪೀಳಿಗೆಯ ಜನರು ಶಿಕ್ಷಣವನ್ನು ಪಡೆಯಬೇಕೆಂಬ ಅಭಿಲಾಷೆಯನ್ನು ಇಡೀ ಸಮುದಾಯದ ಜನರು ವ್ಯಕ್ತಪಡಿಸುತ್ತಿರುವುದು ಸಿದ್ದಿ ಜನಾಂಗದ ಜನರು ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಆಸಕ್ತಿಯನ್ನು ಹೊಂದಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

ಸಿದ್ದಿ ಜನಾಂಗೀಯ ಸಮುದಾಯದಲ್ಲಿ ಬದಲಾವಣೆಯಾಗುತ್ತಿರುವುದಕ್ಕೆ ಸಾಕ್ಷಿ ಎಂಬಂತೆ ಆ ಮಾಹಿತಿದಾರರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಅದರಲ್ಲೂ ಕೆಲವರು ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಕಳುಹಿಸಲು ಒಲವು ತೋರುತ್ತಿರುವುದು, ಇದಕ್ಕೆ ಪ್ರೋತ್ಸಾಹಕವೆಂಬಂತೆ ಕ್ರೈಸ್ತ ಮಿಶನರಿಗಳೂ ಈ ಪ್ರಾಂತ್ಯದಲ್ಲಿ ಬುಡಕಟ್ಟು ಮಕ್ಕಳಿಗೆ ಉಚಿತ ವಸತಿ ಸಹಿತ ಶಾಲೆಗಳನ್ನು ತೆರೆದು ಈ ಜನಾಂಗದ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದಾರೆ. ಈ ಶಿಕ್ಷಣ ಮತ್ತು ಕೆಲವು ಸ್ವಯಂ ಸೇವಾ ಸಂಸ್ಥೆಗಳು ನೀಡುತ್ತಿರುವ ಸೇವೆಗಳಿಂದ ಸಿದ್ದಿ ಜನರು ಆಧುನಿಕ ನಾಗರಿಕ ಜೀವನದ ಕಡೆಗೆ ತಮ್ಮ ಬದುಕನ್ನು ಬದಲಾಯಿಸಿಕೊಳ್ಳತ್ತಿದ್ದಾರೆ. ಕೆಲವರು ಕ್ಲಬ್ಬುಗಳಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುವುದರ ಮೂಲಕ ತಮ್ಮ ಜೀವನದ ರೀತಿ-ನೀತಿಗಳು ಮತ್ತು ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತಿರುವುದು ಕಂಡುಬರುತ್ತದೆ. ಮಾಹಿತಿದಾರರು ತಮ್ಮ ಸ್ಥಳೀಯ ಸಮೂಹಗಳಲ್ಲಿ ಕಂಡುಬರುವಂತಹ ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವುದು ಕಂಡು ಬರುತ್ತದೆ. ಆದರೆ ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ತಮ್ಮ ದಿನನಿತ್ಯದ ಉದ್ಯೋಗದಲ್ಲಿ ನಿರತರಾಗಿದ್ದು ಸಮಯವಿಲ್ಲದೇ ಇರುವುದರಿಂದ ರಾಜಕೀಯದಲ್ಲಿ ಅಷ್ಟೊಂದು ಆಸಕ್ತಿ ಹೊಂದದೆ ಇರುವುದು ಕಂಡುಬರುತ್ತದೆ. ಕೇವಲ ಬೆರಳೆಣಿಕೆಯಷ್ಟು ಜನರು ಮಾತ್ರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗಿರುತ್ತಾರೆ.

ಪ್ರಸ್ತುತ ಅಧ್ಯಯನದಲ್ಲಿ ಸಿದ್ದಿ ಬುಡಕಟ್ಟು ಜನರು ಎದುರಿಸುತ್ತಿರುವ ಕೆಲವೊಂದು ಕಾಯಿಲೆಗಳ ಬಗ್ಗೆಯೂ ಮಾಹಿತಿಗಳನ್ನು ಸಂಗ್ರಹಿಸಿದ್ದು ಅಧಿಕ ಪ್ರಮಾಣದಲ್ಲಿ ಈ ಜನಾಂಗದವರು ಮಲೇರಿಯಾದಂತಹ ಸಾಂಕ್ರಾಮಿಕ ಕಾಯಿಲೆಯನ್ನು ಮೇಲಿಂದ ಮೇಲೆ ಎದುರಿಸುತ್ತಿರುವುದು ಕಂಡು ಬರುತ್ತದೆ. ಇನ್ನೂ ಕೆಲವರು ಅಲರ್ಜಿ ಮತ್ತು ಚರ್ಮದ ಕಾಯಿಲೆಗಳಿಂದಲೂ ನರಳುತ್ತಿರುವುದು ಕಂಡುಬಂದಿದೆ. ಗರ್ಭಿಣಿಯರು ಹೆರಿಗೆಯ ಪೂರ್ವದಲ್ಲಿ ಮತ್ತು ಹೆರಿಗೆಯ ನಂತರ ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಅದೇ ಜನಾಂಗದ ನಾಟಿ ವೈದ್ಯರನ್ನೂ ಅವಲಂಬಿಸಿರುವುದು ಕಂಡುಬಂದಿದೆ. ಹಾಗೆಯೇ, ಈ ಜನಾಂಗದವರು ವಾಸಿಸುವ ಪ್ರದೇಶಗಳಿಗೆ ಆಧುನಿಕ ವೈದ್ಯಕೀಯ ಸೇವೆಗಳು ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಮಾರಾಣಾಂತಿಕ ಕಾಯಿಲೆಗಳನ್ನು ಬೇಗ ಗುರುತಿಸಲಾಗದೆ ಸಾವುಗಳೂ ಸಂಭವಿಸುತ್ತಿರುವುದು ಕಂಡುಬಂದಿದೆ. ಇದರಿಂದ ತಿಳಿದುಬಂದಿರುವುದೇನೆಂದರೆ ಬುಡಕಟ್ಟು ಸಮುದಾಯಗಳು ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳಿಲ್ಲದ ಕಾರಣಗಳಿಂದ ಆರೋಗ್ಯಕ್ಕೆ ಸಂಬಂಧಿಸಿದಂತೆ ಒಂದಲ್ಲಾ ಒಂದು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಕಾಡುಗಳಲ್ಲಿ ವಾಸಿಸುತ್ತಿರುವ ಮುಗ್ದರು ಮತ್ತು ಅನಕ್ಷರಸ್ಥರೂ ಆಗಿರುವ ಸಿದ್ದಿ ಜನಾಂಗದ ಬಹು ಸಂಖ್ಯೆಯ ಜನರು ತಮ್ಮ ಮೂಢನಂಬಿಕೆಗಳು, ನಾಗರಿಕ ಜನರ ಮೇಲೆ ವಿಶ್ವಾಸವಿಲ್ಲದಿರುವಿಕೆಯಿಂದ ಮತ್ತು ಅಜ್ಞಾನದಿಂದ ಕೆಲವೊಂದು ಅಂಟುರೋಗಗಳಿಗೆ ತುತ್ತಾಗುತ್ತಿರುವುದು ಕಂಡುಬಂದಿದೆ.

ಪ್ರಸ್ತುತ ಈ ಅಧ್ಯಯನದಲ್ಲಿ ಸಿದ್ದಿ ಜನಾಂಗದ ಮಾಹಿತಿದಾರರು ಹೊಂದಿರುವ ಆರೋಗ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಭದ್ರತೆಯ ವಿಚಾರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿ ವಿವರಣೆಯನ್ನು ನೀಡಲಾಗಿದೆ. ಕೆಲವೊಂದು ಅನಾರೋಗ್ಯ ಸಮಸ್ಯೆಗಳು ಮತ್ತು ಅಂಟು ರೋಗಗಳು ಜನಾಂಗದವರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ತಮ್ಮ ಸಾಂಪ್ರದಾಯಿಕ ಮಾದರಿಯ ಚಿಕಿತ್ಸೆಯನ್ನು ಪಡೆಯುತ್ತಿರುವುದು ಕಂಡುಬರುತ್ತದೆ. ಅವರಿಗೆ ಹಲವಾರು ಔಷದೀಯ ಸಸ್ಯಗಳ ಕುರಿತು ಜ್ಞಾನವನ್ನು ಹೊಂದಿದ್ದು ಅದರ ಮೂಲಕ ಚಿಕಿತ್ಸೆಯನ್ನು ಪಡೆಯುತ್ತಿರುವುದು ಕಂಡುಬಂದಿದೆ. ಔಪಚಾರಿಕವಾಗಿ ಶಿಕ್ಷಣವನ್ನು ಪಡೆಯದೇ ಇದ್ದರೂ ಅನೌಪಚಾರಿಕ ಮತ್ತು ಪ್ರಯೋಗಿಕ ಅನುಭವಗಳ ಮೂಲಕ ತಮ್ಮದೇ ಆದ ವೈದ್ಯಕೀಯ ವಿಧಾನಗಳನ್ನು ಜನಾಂಗದ ಕೆಲವು ಹಿರಿಯರು ಪಡೆದುಕೊಂಡಿದ್ದಾರೆ. ಇದರಿಂದಾಗಿ ಸಾಂಪ್ರದಾಯಿಕ ಮಾದರಿಯ ವೈದ್ಯ ಪದ್ಧತಿ ಮತ್ತು ಚಿಕಿತ್ಸಾ ಪದ್ಧತಿಗಳ ಕುರಿತು ಅವರಲ್ಲಿ ನಂಬಿಕೆ ಹೆಚ್ಚಾಗಿದ್ದು, ಕೆಲವು ಸಾಮಾನ್ಯ ಕಾಯಿಲೆಗಳಿಗೆ ಸಾಂಪ್ರದಾಯಿಕ ಮಾದರಿಯ ವೈದ್ಯ ಪದ್ಧತಿಯ ಮೂಲಕವೇ ಚಿಕಿತ್ಸೆಯನ್ನು ಪಡೆಯುತ್ತಾರೆ. ಹಾಗೆಯೇ, ಸ್ಥಳೀಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸೌಲಭ್ಯಗಳು ಉಪಯೋಗವನ್ನೂ ಈ ಜನಾಂಗದವರು ಪಡೆದುಕೊಳ್ಳುತ್ತಿದ್ದು ಮಾಹಿತಿದಾರರು ತಾವು ಉಪಯೋಗ ಪಡೆದುಕೊಳ್ಳುತ್ತಿರುವ ಆಸ್ಪತ್ರೆಗಳ ಕುರಿತು ತೃಪ್ತಿಕರವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸ್ಥಳೀಯ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ತೃಪ್ತಿಕರವಾದ ಅಭಿಪ್ರಾಯವನ್ನು ಹೊಂದಿಲ್ಲದೇ ಇರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಇತ್ತೀಚಿಗೆ ಸರಕಾರ ಅವಶ್ಯಕವಾದಂತಹ ಸೌಲಭ್ಯಗಳನ್ನು ಒದಗಿಸುತ್ತಿದ್ದರೂ ಸಹ

ಮಾಹಿತಿದಾರರು ತಮ್ಮ ಸಾಂಪ್ರದಾಯಿಕ ನಾಟಿ ವೈದ್ಯಕೀಯ ಚಿಕಿತ್ಸೆಯ ಮೇಲಿನ ವ್ಯಾಮೋಹದಿಂದಾಗಿ ಅವುಗಳಿಂದ ಹೊರಬರದೆ ಇರುವುದು ತಿಳಿದುಬರುತ್ತದೆ. ಇತೀಚಿಗೆ ಸಕಾರದ ೧೦೮ ವ್ಯಾನಿನ ಸೇವೆಯನ್ನೂ ಕೂಡ ಅಪಘಾತ ಮತ್ತು ತುರ್ತು ಸಂದರ್ಭಗಳಲ್ಲಿ ಸಿದ್ದಿ ಜನರೂ ಉಪಯೋಗಿಸಿ ಕೊಳ್ಳುತ್ತಿದ್ದಾರೆ.

ಆರೋಗ್ಯ, ನೈರ್ಮಲ್ಯ ಮತ್ತು ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಯಶಸ್ವಿನಿ ಆರೋಗ್ಯ ವಿಮಾಯೋಜನೆ, ಉಚಿತ ಶೌಚಾಲಯ ನಿರ್ಮಾಣ, ಪೌಷ್ಟಿಕ ಆಹಾರ ವಿತರಣೆ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಿ.ಪಿ.ಎಲ್. ಕಾರ್ಡುದಾರಿಗೆ ಪಡಿತರ ಧಾನ್ಯಗಳ ವಿತರಣೆ ಮುಂತಾದ ಎಲ್ಲಾ ಸೌಲಭ್ಯಗಳನ್ನು ಸಿದ್ದಿ ಜನಾಂಗದ ಕುಟುಂಬಗಳಿಗೆ ತಲುಪಿಸುತ್ತಿರುವುದರಿಂದ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಿದ್ದಿ ಜನಾಂಗದವರೂ ಕೂಡ ಸೇರಿಕೊಂಡು ಸ್ಥಳೀಯ ಸಾಮಾಜಿಕ ಜೀವನದ ಮುಖ್ಯವಾಹಿನಿಯಲ್ಲಿ ತಮ್ಮನ್ನು ತಾವು ಒಂದು ಸ್ವತಂತ್ರ ಸಮುದಾಯ ಎಂದು ಗುರುತಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಶೌಚಾಲಯ ವ್ಯವಸ್ಥೆಯನ್ನು ಉಚಿತವಾಗಿ ಒದಗಿಸಿಕೊಡುವ ವ್ಯವಸ್ಥೆ ಇದ್ದರೂ ಮಾಹಿತಿದಾರಲ್ಲಿ ಬಹುಸಂಖ್ಯಾತರು ಶೌಚಾಲಯ ವ್ಯವಸ್ಥೆಯನ್ನು ಹೊಂದದೇ ಇರುವುದು ಅವರು ನೀಡಿರುವ ಮಾಹಿತಿಗಳಿಂದ ತಿಳಿದುಬರುತ್ತದೆ. ಕೆಲವರಷ್ಟೇ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದು, ಅದರಲ್ಲಿ ಇನ್ನೂ ಕೆಲವರು ಶೌಚಾಲಯದ ಸೌಲಭ್ಯ ಇದ್ದರೂ ಅದನ್ನು ಉಪಯೋಗಿಸದೇ ಇರುವುದು ಕಂಡುಬರುತ್ತದೆ. ಶೌಚಾಲಯ ನಿರ್ಮಾಣಕ್ಕಾಗಿ ಸರ್ಕಾರ ಸಹಾಯಧನವನ್ನು ನೀಡಿದರೂ ಸಹ ಕೆಲವೇ ಮಾಹಿತಿದಾರರು ಮಾತ್ರ ಅದರ ಉಪಯೋಗವನ್ನು ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ.

ಸಿದ್ದಿಯರ ಆರ್ಥಿಕ ಪರಿಸ್ಥಿತಿ ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಕಂಡುಬರುತ್ತದೆ. ಇವರು ಅರಣ್ಯ ಮತ್ತು ಅರಣ್ಯೇತರ ಪ್ರದೇಶಗಳೆರಡರಲ್ಲೂ ವಾಸಿಸುತ್ತಿದ್ದಾರೆ. ಇವರಲ್ಲಿ ಅತಿಹೆಚ್ಚು ಜನರು ಸ್ತ್ರೀ–ಪುರುಷರಿಬ್ಬರೂ ಬದುಕಲು ಅರಣ್ಯ ಉಪ ಉತ್ಪನ್ನಗಳ ಸಂಗ್ರಹ ಮಾಡುವ ಬುಟ್ಟಿ ತಯಾರಿಸುವ ಬಿದಿರಿನ ಪೀಟೋಪಕರಣಗಳ ತಯಾರಿಕೆಯಂತಹ ಸಾಂಪ್ರದಾಯಿಕ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ. ಅವರು ಸಂಗ್ರಹಿಸಿದ ಈ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಸೌಲಭ್ಯವಿಲ್ಲದೇ ಸ್ಥಳೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಈ ಕೆಲಸಗಳನ್ನು ಬಿಟ್ಟರೆ ಅವರಿಗೆ ಇರುವುದು ಮತ್ತು ಕೃಷಿ ಮಾಡುವುದು ಮತ್ತು ದಿನಗೂಲಿ ಕೃಷಿ ಕೆಲಸ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕೂಲಿ, ಈ ಎಲ್ಲಾ ಉದ್ಯೋಗದ ಮೂಲಗಳು ಸಾಂಧರ್ಬಿಕವಾಗಿರುತ್ತವೆ ಮತ್ತು ಸುಸ್ಥಿರ ಆದಾಯವನ್ನು ತಂದುಕೊಡುವುದಿಲ್ಲ. ಈ ಎಲ್ಲಾ ಮೂಲಗಳಿಂದ ಬರುವ ಆದಾಯ ಅವರ ದಿನ ನಿತ್ಯದ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಪರಿಣಾಮವಾಗಿ ಖಾಸಗಿಯವರಿಂದ ಸಾಲ ಪಡೆದು ಅವರ ಮನೆಯಲ್ಲಿ ಕಡಿಮೆ ಕೂಲಿಗೆ ಕೆಲಸ ಮಾಡುತ್ತಾರೆ. ಕೆಲವು ಪುರುಷರು ಮತ್ತು ಯುವಕರು ಕಾರು ಮತ್ತು ಟ್ರಕ್ಕುಗಳ ಚಾಲಕರಾಗಿ ಮತ್ತು ಮಹಿಳೆಯರು ಬೇರೆಯವರ ಮನೆಯಲ್ಲಿ ಮನೆಕೆಲಸಗಳನ್ನು ಮಾಡುತ್ತಾರೆ. ಇವೆಲ್ಲವೂ ಸಾಂಧರ್ಬಿಕ ಉದ್ಯೋಗ ಗಳಾಗಿರುವುದರಿಂದ

ಕೆಲವರು ಗೋವಾ, ಮಹಾರಾಷ್ಟ್ರ, ಉಡುಪಿ, ಮಂಗಳೂರು ಮತ್ತು ಬೆಂಗಳೂರುಗಳಿಗೆ ವಲಸೆ ಹೋಗಿ, ಕಟ್ಟಡ ನಿರ್ಮಾಣದಲ್ಲಿ, ಮಟ್ಟನ್ ಸ್ಟಾಲ್‌ಗಳಲ್ಲಿ ಮತ್ತು ಮಹಿಳೆಯರು ಗಾರ್ಮೆಂಟ್‌ಗಳಲ್ಲಿ ಮತ್ತು ಮನೆಕೆಲಸದವರಾಗಿ ಕೆಲಸ ಮಾಡುತ್ತಾರೆ.

ಕೃಷಿಯು ಒಂದು ಸಾಂಪ್ರದಾಯಿಕ ವೃತ್ತಿಯಾಗಿ ಸಿದ್ದಿ ಜನರ ಜೀವನಾಧಾರದ ಮೂಲವಾಗಿದೆ. ಅವರು ಬೇರೆ ಉದ್ಯೋಗಗಳ ಬಗ್ಗೆ ಚಿಂತೆ ಮಾಡದೇ ಇರುವುದು ಕಂಡುಬಂದಿದೆ. ಭೂಮಿಯ ಮೇಲಿನ ಅಕ್ಕರೆ ಮತ್ತು ವ್ಯವಸಾಯದ ಮೇಲಿನ ಆಸಕ್ತಿಯು ಅವರನ್ನು ಆರ್ಥಿಕವಲ್ಲದ ಹಿಡುವಳಿಗಳಲ್ಲಿ ಕೃಷಿಯನ್ನೇ ಅವಲಂಬಿಸುವಂತೆ ಮಾಡಿದೆ.

ಹೀಗಾಗಿ, ವೈಯಕ್ತಿಕವಾಗಿ ತೊಂದರೆಯನ್ನು ತೆಗೆದುಕೊಂಡು ಅರಣ್ಯವನ್ನು ಕಡಿದು ವ್ಯಸಾಯಕ್ಕೆ ಆ ಭೂಮಿಯನ್ನು ಸಜ್ಜುಗೊಳಿಸಿಕೊಂಡಿದ್ದಾರೆ. ಪರಿಣಾಮಕಾರಿ ಕೃಷಿಕರಾಗಿರುವ ಅವರು ಕೃಷಿ ಉಪಕರಣಗಳನ್ನು ಮತ್ತು ರಸಗೊಬ್ಬರವನ್ನು ಉಪಯೋಗಿಸುವುದನ್ನು ತಿಳಿದುಕೊಂಡಿದ್ದಾರೆ. ಸಿದ್ದಿ ಜನಾಂಗದವರ ಕೃಷಿ ಮಳೆಯನ್ನೇ ಆಶ್ರಯಿಸಿರುವುದರಿಂದ ವರ್ಷಕ್ಕೆ ಒಂದೇ ಬೆಳೆ ಬೆಳೆಯುವುದು ಸಾಮಾನ್ಯವಾಗಿದೆ. ಬೀಜಗಳನ್ನು ನೇರವಾಗಿ ಕೂರಿಗೆಯ ಮೂಲಕ ಬೆತ್ತನೆ ಮಾಡಿ ಬೆಳೆಯುವುದು ಇವರಲ್ಲಿ ಕಂಡುಬರುತ್ತದೆ. ನಾಟಿ ಮಾಡಿ ಸಸಿಗಳನ್ನು ಹಾಕಿ ವ್ಯವಸಾಯ ಮಾಡುವ ವಿಧಾನ ಇವರಲ್ಲಿ ಕಂಡು ಬರುತ್ತಿಲ್ಲ. ಇತ್ತೀಚಿನ ಯುವ ವ್ಯವಸಾಯಗಾರರು ನಾಟಿ ಕೃಷಿ ವಿಧಾನವನ್ನು ಕಲಿತು ಅನುಸರಿಸುತ್ತಿರುವುದು ಕಂಡುಬರುತ್ತಿದೆ. ಅವರಲ್ಲಿರುವ ಬಡತನ, ನಾಟಿ ಪದ್ಧತಿಗೆ ಹೆಚ್ಚು ನೀರಿನ ಅವಶ್ಯಕತೆಯಿರುವುದು, ನೀರಿನ ಕೊರತೆ ಇವುಗಳಿಂದಾಗಿ ಅವರು ಈ ವಿಧಾನವನ್ನು ಅಳವಡಿಸಿಕೊಳ್ಳಲು ಅಸಹಾಯಕರಾಗಿದ್ದಾರೆ. ಅವರ ಶೋಚನೀಯ ಆರ್ಥಿಕ ಪರಿಸ್ಥಿತಿಯಿಂದಾಗಿ, ಅವರು ಕಡಿಮೆ ಇಳುವರಿ ಕೊಡುವ ಒಂದು ಬೆಳೆಯನ್ನೆ ಬೆಳೆಯುತ್ತಾರೆ. ಕೊಟ್ಟಿಗೆ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರಗಳನ್ನು ಸುಲಭವಾಗಿ ಉಪಯೋಗಿಸುತ್ತಾರೆ ಮತ್ತು ಇತ್ತೀಚೆಗೆ ರಸಗೊಬ್ಬರವನ್ನು ಬಳಸುತಿದ್ದಾರೆ.

ಸಿದ್ದಿ ಜನರು, ಭೂಮಿಯ ಕೆಲಸ ಮತ್ತು ಎಲ್ಲ ರೀತಿಯ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಾರೆ. ಇದನ್ನೇ ಅವರು ಜೀವನ ವಿಧಾನವೆಂದು ಭಾವಿಸಿದ್ದಾರೆ. ಭೂಮಿಯಲ್ಲಿ ಉಳುಮೆ ಮಾಡುವುದು, ಬಿತ್ತನೆ ಮತ್ತು ಕಟಾವು ಮಾಡುವ ಕೆಲಸಗಳಲ್ಲಿ ಸಂತೋಷವನ್ನು ಕಾಣುತ್ತಾರೆ. ಇದೇ ರೀತಿಯ ಭಾವನೆಯನ್ನು ಅಡಿಕೆ ತೋಟಗಳಲ್ಲಿ ಕೆಲಸ ಮಾಡುವುದಕ್ಕೂ ಅನ್ವಯಿಸುತ್ತಾರೆ. ಈ ರೀತಿಯ ಎಲ್ಲಾ ಕೆಲಸಗಳನ್ನು ಆಸಕ್ತಿ ಮತ್ತು ಉತ್ಸಾಹದಿಂದ ಮಾಡುತ್ತಾರೆ.

ಸಿದ್ದಿ ಜನಾಂಗವು ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಮತ್ತು ಅರಣ್ಯ ಪ್ರದೇಶದಲ್ಲಿ ಕೃಷಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅಲ್ಲಿಯ ಉತ್ಪನ್ನಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಬದುಕನ್ನು ಕಟ್ಟಿಕೊಂಡಿದ್ದಾರೆ. ಸ್ವಲ್ಪಮಟ್ಟಿಗೆ ಕೃಷಿಯೇತರ ಚಟುವಟಿಕೆಗಳಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವರ್ಷವಿಡೀ ಅವರ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿಯೇ ಇರುವುದು ಕಂಡುಬರುತ್ತದೆ.

ಈ ಸಮುದಾಯದ ಸದಸ್ಯರು ಹಲವು ಸಂಘ-ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದು ಕೊಂಡಿರುವುದು ಅವರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲತೆಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಪರಿಣಾಮಕಾರಿಯಾದ ಪ್ರಭಾವವನ್ನು ಬೀರುತ್ತಿವೆ.

ಭೂರಹಿತ ಕೃಷಿ ಕಾರ್ಮಿಕರೂ ಕೂಡ, ಗೇಣಿ ಅಥವಾ ಬಾಡಿಗೆಗೆ ಬೇರೆಯವರ ಭೂಮಿಯನ್ನು ಪಡೆದು ಉಳುಮೆ ಮಾಡುತ್ತಾರೆ, ಅಥವಾ ಸ್ವತಃ ಕೃಷಿ ಮಾಡುವ ರೈತರ ಹೊಲದಲ್ಲಿ ಕೆಲಸ ಮಾಡುವ ಮೂಲಕ ಕೂಲಿ ಆಳುಗಳಾಗಿ ದುಡಿಯುತ್ತಾರೆ. ಹೆಚ್ಚಾಗಿ ಇವರು ಹವ್ಯಕ ಬ್ರಾಹ್ಮಣರು ಅಥವಾ ಸ್ಥಳೀಯ ಇತರ ಜಾತಿಯ ಜಮೀನುದಾರರೊಂದಿಗೆ ನಿರಂತರ ಸೇವಾ ಸಂಬಂಧಗಳನ್ನಿಟ್ಟು ಕೊಂಡಿದ್ದಾರೆ.

ಸಿದ್ದಿ ಜನಾಂಗದ ಬಹುಸಂಖ್ಯಾತರು ಅತಿ ಸಣ್ಣ ರೈತರಾಗಿದ್ದಾರೆ. ಈ ಪ್ರದೇಶದಲ್ಲಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿರುವಂತೆ, ೬ರಿಂದ ೧೧ ಎಕರೆ ಭೂಹಿಡುವಳಿಯು ಅವರಿಗೆ ಆರ್ಥಿಕ ಸಂತೃಪ್ತಿಯನ್ನುಂಟು ಮಾಡುತ್ತಿಲ್ಲ. ಈ ಭೂಮಿಯಲ್ಲಿ ಚೆನ್ನಾಗಿ ಮಳೆ ಬಂದರೆ ಎಂಟರಿಂದ ಹತ್ತು ಚೀಲ ಭತ್ತ ಸಿಗುತ್ತದೆ, ಕಾಡುಹಂದಿಯಂತಹ ಇತರ ಕಾಡು ಪ್ರಾಣಿಗಳಿಂದ ಬೆಳೆಗಳಿಗೆ ಯಾವಾಗಲೂ ಅಪಾಯವಿರುತ್ತದೆ. ಈ ಭಾಗದಲ್ಲಿ ಬೆಳೆಗಳಿಗೆ ಕಾಯಿಲೆ ಮತ್ತು ಕೀಟಗಳ ಹಾವಳಿಯೂ ಹೆಚ್ಚಾಗಿರುತ್ತದೆ. ಇದರಿಂದ ಬಡ ಸಿದ್ದಿ ರೈತರಿಗೆ ಅವುಗಳನ್ನು ನಿಯಂತ್ರಿಸುವ ಸಾಮರ್ಥ್ಯ ಮತ್ತು ಕೌಶಲ್ಯಗಳೆರಡೂ ಇರುವುದಿಲ್ಲವಾದ್ದರಿಂದ ಸಾಕಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ.

ಸಿದ್ದಿ ಜನಾಂಗೀಯ ಬುಡಕಟ್ಟು ಜನರು ಯಾವುದೇ ಪ್ರಕಾರದ ಭೂಹಿಡುವಳಿಯಿಂದ ವ್ಯವಸಾಯ ಮಾಡುತ್ತಿರಲಿ, ಅವರ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದಾಗ ಹೆಚ್ಚು ಕಡಿಮೆ ಎಲ್ಲರ ಆರ್ಥಿಕ ಸ್ಥಿತಿಯು ಒಂದೆ ಸಮನಾಗಿರುತ್ತದೆ. ಸ್ವಂತ ಭೂಮಿಯನ್ನು ಹೊಂದಿರುವವರ ಆರ್ಥಿಕ ಪರಿಸ್ಥಿತಿ ಲಾಭದಾಯಕ ಎಂದು ಭಾವಿಸಿಕೊಂಡಿದ್ದರೂ, ಬೆಳೆಯ ಪ್ರಮಾಣದಲ್ಲಿ ವ್ಯತ್ಯಾಸ ವಿರುತ್ತದೆಯೇ ಹೊರತು, ಆರ್ಥಿಕ ಅಂತಸ್ಥಿನಲಲ್ಲ.

ಈ ಭಾಗದಲ್ಲಿ ಸ್ವಂತ ಭೂ ಹಿಡುವಳಿ ಹೊಂದಿರುವವರ ಆದಾಯ ಮತ್ತು ಕಷ್ಟಗಳನ್ನು ಗುರುತಿಸುವುದು ಕಷ್ಟ. ಮಳೆಯ ಅಭಾವದಿಂದ, ನದಿಗಳ ಪ್ರವಾಹದಿಂದ ಅಥವಾ ಕಾಡು ಪ್ರಾಣಿಗಳ ದಾಳಿಯಿಂದ ಬೆಳೆ ನಾಶವಾಗುವುದರಿಂದ ಉಂಟಾಗುವ ನಷ್ಟಕ್ಕೆ ಅವರ ರಕ್ತ ಸಂಬಂಧಿಗಳನ್ನು ಬಿಟ್ಟರೆ ಬೇರೆ ಯಾರೂ ನೆರವಿಗೆ ಬರುವುದಿಲ್ಲ. ಗೇಣಿದಾರರು ಅಥವಾ ಭೂ ಬಾಡಿಗೆ ಉಳುಮೆದಾರರು, ಭೂಮಾಲಿಕರಿಂದ ಇಂತಹ ಸಂದರ್ಭಗಳಲ್ಲಿ ಸಹಾಯ ಪಡೆದುಕೊಳ್ಳುವ ನಿರೀಕ್ಷೆಯಿರುತ್ತದೆ.

ಈ ಎಲ್ಲ ಸಂಗತಿಗಳನ್ನು ನೋಡಿದಾಗ, ಬೇರೆಯವರ ಭೂಮಿಯನ್ನು ಗೇಣಿಗೆ ಪಡೆದು ಉಳುಮೆ ಮಾಡುತ್ತಿರುವವರ ಸ್ಥಿತಿಯೇ ಚೆನ್ನಾಗಿರುತ್ತದೆ. ಗೇಣಿದಾರನು ಭೂಮಾಲಿಕನ ಆಶ್ರಯ ಮತ್ತು ಸಹಾಯವನ್ನು ನಂಬಿಕೊಂಡಿರುತ್ತಾರೆ. ಕೃಷಿ ಕಾರ್ಮಿಕರ ಕೊರತೆ ಅಧಿಕವಾಗಿರುವುದರಿಂದ,

ಭೂಮಾಲಿಕರು ಒಳ್ಳೆಯ ಗೇಣಿದಾರರಿಗಾಗಿ ಹುಡುಕುತ್ತಿರುತ್ತಾರೆ. ಕೃಷಿಯು ಒಂದು ಅನಿಶ್ಚಿತವಾದ ಕೆಲಸವಾಗಿದೆ ಎಂದು ತಿಳಿದಿರುವಾಗ, ಅಂತಹ ಭೂಮಾಲೀಕರು ಇಂತಹ ಗೇಣಿದಾರರಿಗಾಗಿ ಕಾಯುತ್ತಿರುತ್ತಾರೆ. ಈ ಸಂದರ್ಭದಲ್ಲಿ ಭೂಮಾಲೀಕರನ್ನು ಯಜಮಾನ ಎಂದು ಪರಿಗಣಿಸುವುದಿಲ್ಲ, ಆಪತ್ಕಾಲದಲ್ಲಿ ಗೇಣಿದಾರರನ್ನು ರಕ್ಷಿಸಲು ಬರುವ ಆಶ್ರಯದಾತ ಎಂದು ತಿಳಿದುಕೊಂಡಿದ್ದಾರೆ.

ಗೇಣೀದಾರರು ಮತ್ತು ಚಿಕ್ಕ ಭೂಹಿಡುವಳಿದಾರರಾಗಿರುವವರು ಒಂದೇ ರೀತಿಯ ಆರ್ಥಿಕ ಸ್ಥಾನಮಾನಗಳುಳ್ಳವರಾಗಿದ್ದಾರೆ. ಈ ಎರಡೂ ರೀತಿಯ ಕುಟುಂಬಗಳ ಸದಸ್ಯರುಗಳು ತಮ್ಮ ಜಮೀನಿನಲ್ಲಿ ಕೆಲಸವಿಲ್ಲದೇ ಇದ್ದಾಗ, ತಮ್ಮ ಆದಾಯದ ಮುಖ್ಯ ಮೂಲವೆಂದು ತಾವಾಗಿಯೇ ಬೇರೆಯವರ ಜಮೀನಿನಲ್ಲಿ ಕೃಷಿಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.

ಸರ್ಕಾರ ಬುಡಕಟ್ಟು ಅಭಿವೃದ್ಧಿಗೆ ಪೂರಕವಾಗುವಂತೆ ತನ್ನದೇ ಆದ ಭೂ ನೀತಿಯನ್ನು ಹೊಂದಿದ್ದು ಅದರ ಉಪಯುಕ್ತತೆಗೆ ಬುಡಕಟ್ಟು ಜನರನ್ನು ಪ್ರೇರೇಪಿಸುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನದ ಫಲಿತಗಳ ಪ್ರಕಾರ ಸರಕಾರದ ಕಾಯಿದೆಗಳು ಜನರ ಪರವಾಗಿದ್ದರೂ ಅದನ್ನು ಅನುಷ್ಠಾನಗೊಳಿಸುವ ಆಡಳಿತವರ್ಗದ ಧೋರಣೆಯಿಂದ ಮತ್ತು ಕಾಯಿದೆಯಲ್ಲಿ ಅರಣ್ಯ ವಾಸಿಗಳ ಭಾವನೆಗಳಿಗೆ ಸರಿಯಾದ ಪ್ರಾತಿನಿಧ್ಯವಿಲ್ಲದೇ ಇರುವುದರಿಂದ ಸರ್ಕಾರ ಕೈಗೊಂಡಿರುವ ಭೂನೀತಿಯು ಸಮರ್ಪಕವಾಗಿ ಬುಡಕಟ್ಟು ಜನರಿಗೆ ಅನುಕೂಲವಾಗುತ್ತಿಲ್ಲ.

ಸಿದ್ದಿ ಬುಡಕಟ್ಟು ಜನಾಂಗದವರು ಕೃಷಿ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಅಧಿಕ ಪ್ರಮಾಣದಲ್ಲಿ ಮಾಹಿತಿದಾರರು ಒಣ ಭೂಮಿಯನ್ನು (ನೀರಾವರಿ ಸೌಲಭ್ಯವಿಲ್ಲದಿರುವಿಕೆ) ಅತೀ ಕಡಿಮೆ ಸಂಖ್ಯೆಯ ಜನರು ನೀರಾವರಿ ಭೂಮಿಯನ್ನು ಹೊಂದಿರುವವರು ಕಂಡುಬರುತ್ತಾರೆ ಒಣ ಭೂಮಿಯಲ್ಲಿಯೇ ಕೃಷಿಯನ್ನು ಮಾಡಿ ಅದರಲ್ಲಿಯೇ ಜೀವನ ನಡೆಸುತ್ತಿದ್ದಾರೆ.

ಶಿಕ್ಷಣ: ಶಿಕ್ಷಣವು ಸಾಮಜಿಕ ಬದಲಾವಣೆಯ ಸಾಧನ. ಸಿದ್ದಿ ಜನರು ಶಿಕ್ಷಣ ಸಿಕ್ಕಿದ್ದರಿಂದ ತಮ್ಮ ದಾಸ್ಯದ ಬದುಕಿನಿಂದ ಮುಕ್ತಿ ಪಡೆದು ಸ್ವತಂತ್ರ ಜೀವನ ಸಗಿಸುತ್ತಿದ್ದಾರೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಶಿಕ್ಷಣ ಪಡೆದ ಸಿದ್ದಿ ಯುವಕ-ಯುವತಿಯರು ಕೂಲಿಯಾಳುಗಳಾಗಿ ದುಡಿಯಲು ಹಿಂಜರಿಯುತ್ತ ಅನ್ಯಾಯವನ್ನು ಪ್ರತಿಭಟಿಸುವ ಮನೋಭಾವನೆ ಬೆಳೆಸಿಕೊಳ್ಳುತ್ತಿದ್ದಾರೆ.

ಸ್ವತಂತ್ರವಾದ ಮನುಷ್ಯನಾಗಿ ಹುಟ್ಟಿದ ಸಿದ್ದಿ ಜನರು ಮಾರಾಟದ ಸರಕುಗಳಾಗಿ ಮಾನವ ಸಮಾಜದಲ್ಲಿನ ಸ್ತರವ್ಯವಸ್ಥೆ ಅಥವಾ ಏಣಿ-ಶ್ರೇಣಿ ಉಂಟುಮಾಡುವ ಅಂಶಗಳಲ್ಲಿ ಲಿಂಗ, ವರ್ಗ, ಜನಾಂಗ, ಮತ್ತು ಜಾತಿ ಪ್ರಮುಖ ಆದಾರಾಂಶಗಳಾಗಿವೆ. ಪ್ರಸ್ತುತ ಅಧ್ಯಯನದ ಫಲಿತಗಳ ಪ್ರಕಾರ, ಸಿದ್ದಿ ಬುಡಕಟ್ಟು ಜನಾಂಗದವರು ಶಿಕ್ಷಣ ಪಡೆದು ಸ್ವತಂತ್ರ ಜೀವನ ನಡೆಸಲು ಹವಣಿಸುತ್ತಿರುವುದು ಕಂಡುಬಂದಿದೆ. ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪ್ರತಿಪಾದಿಸುವ ಭಾರತೀಯ ಸಂವಿಧಾನದ ಪರಿಮಿತಿಯಲ್ಲಿ ಈ ಅಂಶಗಳು ಸಿದ್ದಿ ಸಮುದಾಯಕ್ಕೆ ಎಷ್ಟು ಮಹತ್ವದವುಗಳಾಗಿವೆ ಎನ್ನುವುದನ್ನು ಸ್ವತಂತ್ರ ಭಾರತದಲ್ಲಿ ದೊರೆತ ಶೈಕ್ಷಣಿಕ ಅವಕಾಶಗಳಿಂದ ಬದಲಾಗುತ್ತಿರುವ ಸಿದ್ದಿಯರ ಜೀವನದಿಂದ ಅರ್ಥ ಮಾಡಿಕೊಳ್ಳಬಹುದು.

ವಸ್ತು ಸ್ಥಿತಿಯ ಪ್ರಕಾರ ಸಿದ್ದಿ ಬುಡಕಟ್ಟು ಜನರು ಭಾರತೀಯ ಸಮಾಜದಲ್ಲಿ ವಿಶಿಷ್ಟವಾಗಿರುವ ಜನಾಂಗೀಯ ಸಮುದಾಯ ಮತ್ತು ಅವರ ಸ್ಥಳೀಯ ಇತರ ಸಮೂಹಗಳಿಂದ ದೂರವಿದ್ದು ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ದೈಹಿಕ ಶ್ರಮ ಮತ್ತು ಅರಣ್ಯ ಉತ್ಪನ್ನಗಳೇ ಅವರ ಜೀವನಾದಾರವಾಗಿದ್ದವು. ಶಿಕ್ಷಣವು ಈಗ ಇವರಿಗೆ ವ್ಯವಸಾಯೇತರ ಮತ್ತು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಕೆಲಸಗಳ ಹೊರತಾದ ಆಧುನಿಕ ವೃತ್ತಿಗಳನ್ನು ಮಾಡುವಂತಾಗಿದೆ.

ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸಿದ್ದಿ ಸಮುದಾಯವನ್ನು ಸೇರಿಸಲು ಅಥವಾ ಪರಿಶಿಷ್ಟ ಬುಡಕಟ್ಟುಗಳ ಅಂತಸ್ತು ಪಡೆದು ಅದಕ್ಕೆ ಮನ್ನಣೆ ದೊರಕಿಸಿಕೊಳ್ಳುವ ಈ ಜನಾಂಗದ ಹೋರಾಟ ಮತ್ತು ಸಂಘರ್ಷವು ಅವರೇ ಸ್ವಯಿಚ್ಚೆಯಿಂದ ನಾವೆಲ್ಲರೂ ಒಂದೇ ಎಂಬ ಏಕತೆಯ ಮನೋಭಾವನೆ ಆ ಸಮುದಾಯದಲ್ಲಿ ಮೂಡುವಂತೆ ಮಾಡಿದೆ. ಈ ಏಕತೆಯ ಸ್ವರೂಪ ಎಷ್ಟಿದೆ ಎಂದರೆ, ಅತಿ ಮುಖ್ಯವಾಗಿ ಈ ಸಮುದಾಯದವರು ಒಪ್ಪಿ ಅನುಸರಿಸುತ್ತಿರುವ ಮೂರು ಧರ್ಮಗಳ ಸಂಕುಚಿತ ಎಲ್ಲೆಗಳನ್ನು ಮೀರಿದುದಾಗಿದೆ. ಇದುವರೆಗೆ ಅವರ ವಿಭಿನ್ನವಾದ ಬೇರೆ ಬೇರೆ ಧರ್ಮಗಳೊಂದಿಗಿನ ಸಂಯೋಜನೆಯು ಅವರನ್ನು ತುಂಬಾ ಪ್ರತ್ಯೇಕವಾಗಿರಿಸಿತ್ತು. ಈಗಲೂ ಅವರದೇ ಆದ ಧಾರ್ಮಿಕ ಸಮುದಾಯಗಳಿಂದಲೂ ಪ್ರತ್ಯೇಕವಾಗಿದ್ದಾರೆ. ಈಗ ಈ ಸಮುದಾಯವು ಒಂದು ಪರಿಶಿಷ್ಟ ಬುಡಕಟ್ಟು ಸಮುದಾಯವಾಗಿ ತಮ್ಮ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮುಂದುವರಿಕೆಗಾಗಿ ಹಲವಾರು ಲಾಭಗಳನ್ನು ಪಡೆದುಕೊಳ್ಳಲು ಸಾಕಷ್ಟು ಅವಕಾಶಗಳನ್ನು ಪಡೆದುಕೊಂಡಿದ್ದಾರೆ. ಈ ಪ್ರಕ್ರೀಯೆಯಿಂದ ಸಿದ್ದಿ ಬುಡಕಟ್ಟು ಜನರು ಅವರ ಚಹರೆಯನ್ನು ಬಲಪಡಿಸಿಕೊಳ್ಳಲು ಮತ್ತು ಸ್ಥಳೀಯ ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ ಮತ್ತು ರಾಷ್ಟ್ರದ ಜನರೊಂದಿಗೆ ಸಮಾನತೆ ಮತ್ತು ಗೌರವವನ್ನು ಗಳಿಸಲು ಸಹಾಯಕವಾಗುತ್ತಿದೆ. ಹಾಗೆಯೇ, ಇಡೀ ಸಮುದಾಯದ ಮೇಲೆ ಸಾಮಾನ್ಯವಾಗಿ ಉಂಟಾಗುತ್ತಿದ್ದ ಶೋಷಣಾತ್ಮಕ ಅಂಶಗಳ ವಿರುದ್ಧ ಸೆಣೆಸಲು ಮತ್ತು ಸಮಗ್ರವಾಗಿ ಸಂಘಟಿತರಾಗಲು ಪ್ರೇರೇಪಿತರಾಗುತ್ತಿದ್ದಾರೆ. ಇದರಿಂದ ಪ್ರಮುಖವಾಗಿ ಅವರಿಗೆ ಆಗುತ್ತಿರುವ ಪ್ರಯೋಜನಗಳೆನೆಂದರೆ, ಗ್ರಾಮೀಣ ಮಟ್ಟದ ಸಂಘಟನೆ ಮತ್ತು ಇಡೀ ಸಮುದಾಯವನ್ನೊಳಗೊಂಡ ಸಹಕಾರ ಮಂಡಳಿಗಳು; ಕ್ರೀಡಾ ಕ್ಷೇತ್ರದಲ್ಲಿ ಸಮುದಾಯದ ಪ್ರತಿಭೆಗಳನ್ನು ಗುರುತಿಸುವುದು; ಇವುಗಳಿಂದ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿನ ವಿವಿಧ ನಗರಗಳಲ್ಲಿ ಈ ಸಮುದಾಯದ ಯುವಕರಿಗೆ ಹೊಸ ಹೊಸ ಅವಕಾಶಗಳು ಲಭಿಸುವಂತಾಗಿದೆ. ನೃತ್ಯ ಮತ್ತು ಸಂಗೀತ ಕ್ಷೇತ್ರಗಳಲ್ಲೂ ಸಿದ್ದಿ ಬುಡಕಟ್ಟು ಜನರ ಪ್ರತಿಭೆಗೆ ಮನ್ನಣೆ ದೊರೆತಂತಾಗಿದೆ. ಈ ಬುಡಕಟ್ಟು ಸಮುದಾಯದ ಸಕಾರಾತ್ಮಕ ಪರಿವರ್ತನೆಗೆ ಮತ್ತು ಅಭಿವೃದ್ಧಿ ಪ್ರಕ್ರೀಯೆಯಲ್ಲಿ ಹೊರಗಿನ ಇತರ ನಿಯೋಗಗಳು ಕೈಜೋಡಿಸುತ್ತಿವೆ. ಇದರ ಪರಿಣಾಮವಾಗಿ, ಸಿದ್ದಿ ಬುಡಕಟ್ಟಿನ ಅನೇಕ ಮಕ್ಕಳು ವಿದ್ಯಾವಂತ ರಾಗುತ್ತಿದ್ದಾರೆ ಮತ್ತು ಸಮುದಾಯದ ಇತರ ಸದಸ್ಯರು ವಿವಿದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಉತ್ತರ ಕನ್ನಡ ಜಿಲ್ಲೆಯ ಕೆಲವು ಹಳ್ಳಿಗಳ ಮಹಿಳೆಯರು ಸಂಘಟಿತರಾಗಲು ಅನುಕೂಲವಾಗುತ್ತಿದೆ.

ಈ ಸಮುದಾಯದ ಮೇಲಿನ ಅವಶ್ಯಕತೆಗಳನ್ನು ಹೀಡೆರಿಸಲು ನೆರವಾಗುವುದರೊಂದಿಗೆ ಸಮುದಾಯದ ಎಲ್ಲಾ ಮಕ್ಕಳು ಮತ್ತು ಯುವಕರಿಗೆ ವಿಶೇಷ ಶೈಕ್ಷಣಿಕ ಸೌಲಭ್ಯಗಳು ದೊರೆಯಲು ಕಾರಣವಾಗಿದೆ. ಅರಣ್ಯ ಪ್ರದೇಶದಲ್ಲಿ ಅವರು ನೆಲೆಸಿರುವ ಭೂಮಿ ಮತ್ತು ಅರಣ್ಯ ಉಪ ಉತ್ಪನ್ನಗಳ ಮೇಲಿನ ತಮ್ಮ ಹಕ್ಕುಗಳನ್ನು ಚಲಾಯಿಸುವಂತಾಗಿದ್ದಾರೆ ಮತ್ತು ತಮ್ಮ ಸಾಂಸ್ಕೃತಿಕ ಚಟುವಟುಕೆಗಳನ್ನು ಚೇತನಗೊಳಿಸಿಕೊಳ್ಳುತ್ತಿದ್ದಾರೆ.

ಸಿದ್ದಿ ಬುಡಕಟ್ಟು ಸಮುದಾಯದಲ್ಲಿ ಉಂಟಾಗುತ್ತಿರುವ ಇಂತಹ ಬಧಲಾವಣೆಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಸ್ತರೀಕರಣ ಮತ್ತು ಅಸಮಾನತೆಗೆ ಸಂಬಂದಿಸಿದಂತೆ ಸಿದ್ದಿಗಳ ಅನುಭವ ಮತ್ತು ಸ್ಥಳೀಯ ಜನರೊಂದಿಗೆ ಅವರ ಒಡನಾಟವನ್ನು ಅರ್ಥಮಾಡಿಕೊಳ್ಳಬಹುದು. ಇಡೀ ಪ್ರಪಂಚದಲ್ಲಿ ಮತ್ತು ಭಾರತದಲ್ಲಿ ಜಾಗತೀಕರಣದ ಸಂದರ್ಭ ಮತ್ತು ಬಂಡವಾಳಶಾಹಿಯ ಪ್ರಾಬಲ್ಯತೆಯಲ್ಲಿ ವರ್ಗ ವ್ಯವಸ್ಥೆಯ ಅಂಶಗಳು ಸಿದ್ದಿ ಬುಡಕಟ್ಟು ಜನರನ್ನು ಪರಿವರ್ತನೆಯ ದಾರಿಗೆ ತರಲು ನೆರವಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಬಂದಿರುವ ವಿಚಾರವೆಂದರೆ ಓಸ್ವಾಲ್ಡ್ ಸ್ಪೆಂಗ್ಲರ್ ಅವರ ವಿವರಣೆಯಂತೆ ಸಿದ್ದಿ ಜನಾಂಗವು ಹುಟ್ಟು ಬೆಳವಣಿಗೆ. ಅಂತ್ಯ ಎಂಬ ಚಕ್ರೀಯ ಸಿದ್ಧಾಂತಕ್ಕೆ ಒಳಗಾಗಿ ಕಣ್ಮರೆಯಾಗದೆ, ಆಫ್ರಿಕಾದಿಂದ ಅವರ ಅರಿವಿಗೆ ಇಲ್ಲದಂತೆ ಭಾರತಕ್ಕೆ ಬಂದು, ಉತ್ತರ ಕನ್ನಡ ಜಿಲ್ಲೆಯ ಗ್ರೇಟ್ ಟ್ರೈಪಿಷಿನ್ನಿನ ಸಾಮಾಜಿಕ ರಚನೆಯ ಸಂಪರ್ಕ ಪಡೆದು. ಈ ಜಿಲ್ಲೆಯ ಇತರ ಸ್ಥಳೀಯ ಲಿಟಲ್ ಟ್ರೈಪಿಷನ್ ಸಮೂಹಗಳ ಕಾರ್ಯಾತ್ಮಕ ಚಟುವಟಿಕೆಗಳೊಂದಿಗೆ ಈ ಭಾಗದ ಸಾಮಾಜಿಕ ರಚನೆಯ ಭಾಗವಾಗಿ ಬದುಕುತ್ತಿದ್ದಾರೆ. ಅಂತೆಯೇ ಅರ್ನಾಲ್ಡ ಟಯ್ನಾಬಿಯವ ಸಾಮಾಜಿಕ ಬದಲಾವಣೆಯ ಚಕ್ರೀಯ ಸಿದ್ಧಾಂತದ ಪ್ರಕಾರ ವಿವಿಧ ಕಾಲಘಟ್ಟದಲ್ಲಿ ಪರಿಸರ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದಲ್ಲಿ ಎದುರಾದ ಅಂತರಿಕ ಮತ್ತು ಬಾಹ್ಯ ವೈರಿಗಳಿಂದ ಎದುರಾದ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ ತನ್ನ ಬದುಕನ್ನು ಕಟ್ಟಿಕೊಂಡು, ಕಟ್ಟಿಕೊಳ್ಳುತ್ತಾ ಸಾಮಾಜಿಕಾವಿಗ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸೇರಿಕೊಳ್ಳುತ್ತಿರುವುದು ಕಂಡುಬಂದಿದೆ.

ಎಂ.ಎನ್. ಶ್ರೀನಿವಾಸ ಅವರ ಸಂಸ್ಕೃತಿಕ ಪ್ರಕ್ರಿಯೆನ್ನು ಸಿದ್ದಿ ಸಮೂಹದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಗಮನಿಸಿದಾಗ ಈ ಜನಾಂಗದ ಮೂರು ಧರ್ಮದ ಅನುಯಾಯಿಗಳು ತಮಗೆ ಭೌತಿಕವಾಗಿ ಮತ್ತು ಸಾಮಾಜಿಕವಾಗಿ ನಿರಂತರ ಸಂಪರ್ಕ ಮತ್ತು ಸಂಬಂಧ ಏರ್ಪಡಿಸಿ ಕೊಂಡಿರುವ ಹವ್ಯಕ, ಬ್ರಾಹ್ಮಣರು, ಮರಾಠರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್‌ರನ್ನು ಪ್ರಬಲ ಸಮೂಹಗಳೆಂದು ಪರಿಗಣಿಸಿಕೊಂಡು ಅವರ ಸಿದ್ದಿ ಜನಾಂಗೀ ಸಮೂಹದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದು ಈ ಅಧ್ಯಯನದಲ್ಲಿ ವಿವಿಧ ದೃಷ್ಟಿಕೋನಗಳಿಂದ ನೋಡಲಾಗಿದೆ. ಚಕ್ರೀಯ ಸಿದ್ಧಾಂತದ ಪ್ರಕಾರ ಸಮಾಜಗಳು ವಿವಿಧ ಹಂತಗಳನ್ನು ದಾಟಿ ಹೋಗುತ್ತವೆ. ಆದರೆ ಅವುಗಳು ಬದಲಾವಣೆಯ ಪರಿಪೂರ್ಣತೆಯ ಕೊನೆಯ ಹಂತ ತಲುಪುವುದರೊಳಗೆ ಕೊನೆಗೊಳ್ಳದೆ ಮತ್ತು ಮೊದಲಿನ ಹಂತಕ್ಕೆ ಬರುತ್ತವೆ. ಅಂದರೆ ಪ್ರಾರಂಭಿಕ ಹಂತದಿಂದ ಮತ್ತೆ ಬದಲಾವಣೆಯ ಪ್ರಕ್ರಿಯೆ ನಡೆಯುತ್ತದೆ.

ಜರ್ಮನಿಯ ಚಿಂತಕ ಓಸ್ವಾಲ್ಡ್ ಸ್ಪೆಂಗ್ಲರ್ ಅವರು ಹೇಳಿರುವಂತೆ ಪ್ರತಿಯೊಂದು ಸಮಾಜವು ಜೀವಿಗಳಂತೆ ಹುಟ್ಟು ಪ್ರೌಢಿಮೆ, ವೃದ್ಧಾಪ್ಯ ಮತ್ತು ಸಾವು ಎಂಬ ಜೀವನ ಚಕ್ರವನ್ನು ದಾಟಿ ಹೋಗುತ್ತವೆ ಎಂದಿರುವುದ ಸಿದ್ದಿ ಜನಾಂಗಕ್ಕೆ ಅಧ್ಯಯನದ ಪ್ರಕಾರ ಅನ್ವಯವಾಗುವುದಿಲ್ಲ. ಎಕೆಂದರೆ ಗುಲಾಮಗಿರಿಯ ನಿಕೃಷ್ಟ ಸ್ಥಿತಿಯಿಂದ ಸಾವಿನೊಂದಿಗೆ ಭಾರತದಲ್ಲಿ ನಾಶಹೊಂದಿರೋ ತನ್ನ ಅಸ್ತಿತ್ವವನ್ನು ಮುಂದುವರಿಸಿಕೊಂಡು ಬಂದಿದೆ. ಅಂದರೆ, ಇದೇ ಸಾಮಾಜಿಕ ಬದಲಾವಣೆಯ ಚಕ್ರಿಯ ಸಿದ್ಧಾಂತದ ಮತ್ತೊಬ್ಬ ಪ್ರತಿಪಾದಕರಾದ ಅರ್ನಾಲ್ಡ್ ಟೆಯ್ನಬಿ ಅವರ ವಾದದಂತೆ ಸಿದ್ದಿ ಜನಾಂಗಿಯ ಸಮೂಹವು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಾಹ್ಯ ಮತ್ತು ಆಂತರಿಕ ಸಾವಾಲುಗಳನ್ನು ಸಮರ್ಥವಾಗಿ ಎದುರಿಸಿ ತನ್ನ ಚಹರೆಯನ್ನು ಉಳಿಸಿಕೊಂಡು ಸಕಾರಾತ್ಮಕವಾಗಿ ಅಭಿವೃದ್ಧಿ ಹೊಂದುತ್ತಾ ಈ ಭಾಗದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಉತ್ಕೃಷ್ಟತೆಯನ್ನು ಹೊಂದುತ್ತಿರುವುದು ಕಂಡುಬಂದಿದೆ. ಜೀವನ ವಿಧಾನಗಳನ್ನು, ಜೀವನ ಶೈಲಿಯನ್ನು ರೂಪಿಸಿಕೊಂಡು ಮುನ್ನಡೆಯುತ್ತಿರುವುದು ಕಂಡುಬಂದಿದೆ. ಕ್ರೈಸ್ತ ಮಿಷನರಿಗಳು ಮತ್ತು ಪೋರ್ಚುಗೀಸರ ಸಂಪರ್ಕದಿಂದ ಬಂದವರು ಪಾಶ್ಚಮಾತ್ಯ ಮಾದರಿಯ ಚಿಂತನೆಗೆ ಒಳಗಾಗದೆ ತಮ್ಮ ಜೀವನ ಮತ್ತು ಬದುಕನ್ನು ಕಟ್ಟಿಕೊಳ್ಳಲು ಸ್ಥಳದಿಂದಾಗಿ ಲಭ್ಯವಿರುವ ಶಿಕ್ಷಣ, ಉದ್ಯೋಗ ಮುಂತಾದ ಅವಕಾಶಗಳಿಗಾಗಿ ಹಾತೋರೆಯುತ್ತಿರುವುದು ಕಂಡುಬಂದಿದೆ.

ಆಹಾರ, ಸಂಸ್ಕೃತಿಕ ದೈಹಿಕ ರಚನೆ ಮುಂತಾದ ಪರಿಸರದ ಅಂಶಗಳಿಂದಲೂ ಎದುರಾದ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಿದೆ. ದೇಹರಚನೆ ಮತ್ತು ಮೈಬಣ್ಣದ ಬಗ್ಗೆ ಕೀಳರಿಮೆ ಭಾವನೆ ಇದ್ದರೂ ಅದನ್ನು ಮೆಟ್ಟಿನಿಲ್ಲುವ ಮನೋಭಾವನೆ ಬೆಳೆಸಿಕೊಳ್ಳುತ್ತಿರುವುದು ಕಂಡುಬಂದಿದೆ.

ಸಂಶೋಧಕರ ಮತ್ತು ಚಿಂತಕರ ಅಭಿಪ್ರಾಯಗಳು ಏನೇ ಇದ್ದರೂ ಬುಡಕಟ್ಟು ಸಮುದಾಯಗಳು ಸಾಮಾಜಿಕ ಆರ್ಥಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಾಗುತ್ತಿರುವುದು ಸತ್ಯ ಸಂಗತಿ. ಇದರ ವೇಗವನ್ನು ಹೆಚ್ಚಿಸಲು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯನ್ನು ತೀವ್ರಗೊಳಿಸಲು, ವನವಾಸಿ, ಹಾಗೂ ಬುಡಕಟ್ಟು ಅಭಿವೃದ್ಧಿಗೆ ಕಾಲಬದ್ಧ ಯೋಜನೆಯನ್ನು ರೂಪಿಸಲಾಗಿದೆ.

ಫಲಿತಗಳು

- ಸಿದ್ದಿ ಜನಾಂಗದವರು ಆಫ್ರಿಕಾದಿಂದ ವಲಸೆ ಬಂದು ಕನಾಟಕದಲ್ಲಿ ನೆಲೆಸಿದ್ದಾರೆ. ಇವರ ಸಂಖ್ಯೆ ಒಂದು ಜನಗಣತಿಯಿಂದ ಮತ್ತೊಂದು ಜನಗಣತಿಯ ಅವಧಿಯಲ್ಲಿ ನಿರಂತರವಾಗಿ ಹೆಚ್ಚಾಗುತ್ತಿದೆ. ೨೦೦೧ರಲ್ಲಿ ಸಿದ್ದಿಯರ ಒಟ್ಟು ಜನಸಂಖ್ಯೆ ೫೩೬೧ ಇತ್ತು ಅದು ೨೦೧೧ನೇ ಜನಗಣತಿಯ ಒತ್ತಿಗೆ ಅಂದರೆ ಹತ್ತು ವರ್ಷಗಳಲ್ಲಿ ಇವರ ಜನಸಂಖ್ಯೆ ೧೫೨೩೨ ಆಗಿದೆ. ಈ ಸಮೂಹದ ಜನಸಂಖ್ಯೆ ಹೆಚ್ಚಳಕ್ಕೆ ಪ್ರಮುಖ ಕಾರಣ ಇವರು ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳದಿರುವುದು. ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಕೊಂಡರೆ ಪುರುಷರು ಮತ್ತು ಮಹಿಳೆಯರು ದೈಹಿಕ ಶ್ರಮದ ಕೆಲಸ ಮಾಡಲಾಗುವುದಿಲ್ಲ ಎಂಬ ತಪ್ಪು ತಿಳುವಳಿಕೆ ಇವರಲ್ಲಿದೆ. ಅದ್ದರಿಂದ ಈ ಜನಾಂಗದ ಜನಸಂಖ್ಯೆಯ ಗಾತ್ರದಲ್ಲಿ ಪರಿವರ್ತನೆ ಆಗುತ್ತಿದೆ.

- ಸಿದ್ದಿಯರು ಮೂಲತಃ ಅವಿಭಕ್ತ ಕುಟುಂಬದ ಸಂಬಂಧಗಳ ಬಲೆಯನ್ನು ಹೊಂದಿದೆ. ಈಗಲೂ ಇವರ ಕುಟುಂಬದ ರಚನೆಯಲ್ಲಿ ಬದಲಾಣೆಗಳಾಗಿಲ್ಲ. ವಿವಾಹದ ನಂತರ ಗಂಡುಮಕ್ಕಳು ಬೇರೆ ಮನೆಯಲ್ಲಿ ನೆಲೆಸಿದರೂ, ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಕುಟುಂಬದ ಹಿರಿಯಣ್ಣನ ಮನೆಯಲ್ಲಿಯೇ ಆಚರಿಸುತ್ತಾರೆ. ಸಿದ್ದಿಯರ ಕುಟುಂಬವು ಅವಿಭಕ್ತ ಕುಟುಂಬವು ಹೌದು ಮತ್ತು ವಿಭಕ್ತ ಕುಟುಂಬವೂ ಹೌದು. ಸ್ತ್ರೀಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಹೆಚ್ಚಾಗಿದ್ದರೂ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದಾರೆ. ಇತ್ತೀಚೆಗೆ ಸಿದ್ದಿಯರ ಕುಟುಂಬದ ಮೇಲೆ ಆಧುನಿಕರಣದ ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳ ಪ್ರಭಾವ ಹೆಚ್ಚಾಗಿದೆ. ಅದ್ದರಿಂದ ಕುಟುಂಬದಲ್ಲಿ ಸಾಕಷ್ಟು ಪರಿವರ್ತನೆಗಳಾಗುತ್ತಿವೆ.
- ಸಿದ್ದಿ ಜನಾಂಗದವರು ಮೊದಲು ಅಲೆಮಾರಿಗಳಾಗಿ ಕಾಡುಗಳಲ್ಲಿ ನೆಲೆಯಿಲ್ಲದೆ, ಗುಡಿಸಲುಗಳಲ್ಲಿ ಬದುಕುತ್ತಿದ್ದರು. ಈಗ ಸರ್ಕಾರದ ವಸತಿ ಯೋಜನೆಗಳು ಮತ್ತು ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳಿಂದಾಗಿ, ಸ್ವಂತ ಹಂಚಿನ ಮತ್ತು ಕಾಂಕ್ರೀಟ್ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇವರು ವಾಸಿಸುವ ಸ್ಥಳಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ. ಶೌಚಾಲಯ ಕಾಂಕ್ರೀಟ್ ರಸ್ತೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇವರ ಮನೆಗಳಲ್ಲಿ ಟಿ.ವಿ. ರೇಡಿಯೋ, ದ್ವಿಚಕ್ರ ವಾಹನಗಳು ಮತ್ತು ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳೂ ಇವೆ. ಒಟ್ಟಾರೆ ವಾಸಿಸಲು ಯೋಗ್ಯವಲ್ಲದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಈ ಜನಾಂಗದವರ ವಸತಿ ಸೌಲಭ್ಯ ಮತ್ತು ವಾಸಿಸುವ ನೆಲೆಗಳಲ್ಲಿ ಸಕಾರಾತ್ಮಕ ಬದಲಾವಣೆಗಳಾಗಿವೆ. ಹಾಗೆಯೇ ಅನ್ನ, ವಸ್ತ್ರ ಮತ್ತು ವಸತಿಗಳಿಗೆ ಸಿಮೀತವಾಗಿದ್ದ ಇವರ ಬದುಕು ಆಧುನಿಕ ಗೃಹೋಪಯೋಗಿ ಯಂತ್ರಗಳಿಗೂ ತೆರೆದುಕೊಂಡಿದೆ.
- ಸಿದ್ದಿ ಜನಾಂಗದವರಲ್ಲಿ ಜಾತಿ ಪದ್ಧತಿಯ ಆಚರಣೆಯಿಲ್ಲ. ಅವರಿಗೆ ಆಶ್ರಯ ಕೊಟ್ಟ ಸಮುದಾಯಗಳ ಧರ್ಮವನ್ನು ಅನುಕರಿಸಿಕೊಂಡು ತಮ್ಮದನ್ನಾಗಿಸಿಕೊಂಡಿದ್ದಾರೆ. ಸಿದ್ದಿಯರಲ್ಲಿ ಹಿಂದು ಸಿದ್ದಿಯರು, ಮುಸ್ಲೀಂ ಸಿದ್ದಿಯರು, ಮತ್ತು ಕ್ರೈಸ್ತ ಸಿದ್ದಿಯರು ಇದ್ದಾರೆ. ಇಲ್ಲಿನ ಸ್ಥಳೀಯ ಮೂಲ ಹಿಂದುಗಳಾಗಲೀ, ಮುಸಲ್ಮಾನರಾಗಲಿ ಅಥವಾ ಕ್ರೈಸ್ತರಾಗಲಿ ಇವರನ್ನು ಸಮಾನವಾಗಿ ಕಾಣುತ್ತಿಲ್ಲ ಮತ್ತು ಕೆಳಸ್ತರದಲ್ಲಿ ಕಾಣುತ್ತಾರೆ. ಭಾರತದಲ್ಲಿರುವ ಮೂರು ಪ್ರಮುಖ ಧರ್ಮಗಳನ್ನು ಅನುಸರಿಸುತ್ತಿರುವವರು ಸಿದ್ದಿ ಜನಾಂಗದಲ್ಲಿದ್ದಾರೆ. ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಪರಿಶಿಷ್ಟ ಬುಡುಕಟ್ಟುಗಳ ಸೌಲಭ್ಯಗಳನ್ನು ಪಡೆಯಲು ಈ ಜನಾಂಗದವರು ಧರ್ಮಗಳ ಎಲ್ಲೆಯನ್ನು ಮೀರಿ ಸಿದ್ದಿಯರೆಲ್ಲರೂ ಒಂದೇ ಎಂಬ ಬದಲಾವಣೆಯ ಗಾಳಿ ಬಿಸುತ್ತಿದೆ.
- ಸ್ಥಳೀಯ ಮೂಲ ಹಿಂದುಗಳಾಗಲೀ, ಮುಸಲ್ಮಾನರಾಗಲಿ ಅಥವಾ ಕ್ರೈಸ್ತರಾಗಲಿ ಹಿಂದು ಸಿದ್ದಿಯರು, ಮುಸ್ಲೀಂ ಸಿದ್ದಿಯರು, ಮತ್ತು ಕ್ರೈಸ್ತ ಸಿದ್ದಿಯರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿಲ್ಲ. ಇದಕ್ಕೆ ಇವರ ದೈಹಿಕ ಲಕ್ಷಣಗಳೇ ಪ್ರಮುಖ ಕಾರಣಗಳಾಗಿವೆ. ಆದ್ದರಿಂದ

ಸಿದ್ದಿಯರು ತಮ್ಮ ತಮ್ಮಲ್ಲಿ ಅಂತರ್ ಧರ್ಮೀಯ ವಿವಾಹಗಳನ್ನು ಸಾಮಾನ್ಯವಾಗಿ ಆಚರಿಸುತ್ತಾರೆ. ಸಿದ್ದಿ ಜನಾಂಗದಲ್ಲಿಯೇ ಅಂತರ್ ಧರ್ಮೀಯ ವಿವಾಹಗಳಾಗುತ್ತಿವೆ. ಶಿಕ್ಷಣ ಮತ್ತು ವಿವಾಹವಾಗುವ ಯುವಕ ಮತ್ತು ಅವರ ಮನೆಯ ಆದಾಯದ ಮೂಲಗಳನ್ನು ಪರಿಗಣಿಸಿ ಸಿದ್ದಿಯೇತರ ಇತರ ಬುಡಕಟ್ಟುಗಳ ಜನರು ಮತ್ತು ಭಾರತದ ಜಾತಿವ್ಯವಸ್ಥೆ ಕೆಳಸ್ತರದ ಯುವ ಸಮೂಹದಲ್ಲಿ ಸಿದ್ದಿ ಯುವಕರು ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವಷ್ಟರ ಮಟ್ಟಿಗೆ ವೈವಾಹಿಕ ಸಂಬಂಧಗಳಲ್ಲಿ ಪರಿವರ್ತನೆಯಾಗುತ್ತಿದೆ.

- ಸಿದ್ದಿ ಜನರಿಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಸ್ಥಾನಮಾನ ಗಳಿರಲಿಲ್ಲ. ಇಲ್ಲಿ ನೆಲೆನಿಂತ ಮೇಲೆ ಹವ್ಯಕ ಬ್ರಾಹ್ಮಣರು ಮತ್ತು ಇತರ ಮೇಲ್ಜಾತಿಯವರು ಸಿದ್ದಿಯರನ್ನು ಮನೆಕೆಲಸಕ್ಕೆ ಮನೆಯ ಒಳಗಡೆ ಬಿಡುತ್ತಿದ್ದರು. ಸ್ಥಳೀಯ ಪರಿಶಿಷ್ಟ ಜಾತಿಯ ಜನರನ್ನು ಮನೆಯ ಒಳಗೆ ಸೇರಿಸುವುದಿಲ್ಲ. ಹಾಗಾಗಿ, ಸಿದ್ದಿ ಜನಾಂಗದವರು ತಮ್ಮಷ್ಟಕ್ಕೆ ತಾವೆ ಪರಿಶಿಷ್ಟ ಜಾತಿಯ ಜನರಿಗಿಂತ ಶ್ರೇಷ್ಠರೆಂದು ಭಾವಿಸುತ್ತಾರೆ. ಆದರೆ ಪರಿಶಿಷ್ಟ ಜಾತಿಯವರು ಮತ್ತು ಸ್ಥಳೀಯ ಮೂಲ ಬುಡಕಟ್ಟು ಜನರು ಸಿದ್ದಿಯರನ್ನು ಕೆಳಸ್ತರದಲ್ಲಿ ಗುರುತಿಸುತ್ತಾರೆ. ಒಟ್ಟಾರೆ ಸಿದ್ದಿಯರ ಚರ್ಮದ ಬಣ್ಣ ಮತ್ತು ದೈಹಿಕ ಲಕ್ಷಣಗಳಿಂದಾಗಿ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಕೆಳಗಿನ ಸ್ಥಾನವನ್ನು ಹೊಂದಿದ್ದಾರೆ. ಕೆಳಸ್ತರದ ಅಂತಸ್ತನ್ನು ಹೊಂದಿರುವ ಈ ಜನಾಂಗದವರು ಶಿಕ್ಷಣ, ಆಧುನೀಕರಣ ಮತ್ತು ಜಾಗತೀಕರಣಗಳಿಂದ ಲಭ್ಯವಾದ ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಸಾಮಾಜಿಕ ಸ್ಥಾನವನ್ನು ಲೆಕ್ಕಿಸದೆ ಆರ್ಥಿಕವಾಗಿ ಉನ್ನತಿ ಹೊಂದುವತ್ತ ತಮ್ಮ ಗಮನವನ್ನು ಹರಿಸುತ್ತಿದ್ದಾರೆ. ಇದರಿಂದ ಅವರ ಜೀವನಶೈಲಿ ಮತ್ತು ಜೀವನಮಟ್ಟದಲ್ಲಿ ಪರಿವರ್ತನೆಯಾಗುತ್ತಿವೆ. ಇದು ಜಾತಿ ಏಣಿಶ್ರೇಣಿಗಿಂತ ಮೀಗಿಲಾಗಿ ಸಿದ್ದಿ ಜನಾಂಗದವರನ್ನು ವರ್ಗವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಳ್ಳುವ ಪ್ರಯತ್ನದಲ್ಲಿರುವುದು ಕಂಡುಬಂದಿದೆ.

- ಬದುಕಿನಲ್ಲಿ ಭರವಸೆಯೇ ಇಲ್ಲದೆ, ಇಲ್ಲಿಗೆ ಬಂದ ಸಿದ್ದಿಯರಿಗೆ ಶಿಕ್ಷಣ ಮಹತ್ವವಾಗಲಿ ಅದರ ಸೌಲಭ್ಯಗಳ ಬಗ್ಗೆಯಾಗಲಿ ತಿಳುವಳಿಕೆ ಇರಲಿಲ್ಲ. ಇತ್ತೀಚೆಗೆ ಈ ಜನಾಂಗದವರು ಶಿಕ್ಷಣದ ಬಗ್ಗೆ ಅರಿವನ್ನು ಹೊಂದಿ ತಮ್ಮ ಮಕ್ಕಳನ್ನು ಅಂಗನವಾಡಿಗಳಿಗೆ ಮತ್ತು ಶಾಲಾಕಾಲೇಜುಗಳಿಗೆ ಕಳುಹಿಸುತ್ತಿದ್ದಾರೆ. ಮತ್ತು ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಬಿ.ಎ., ಎಂ.ಎ., ಬಿ.ಸಿ.ಎ., ಬಿ.ಬಿ.ಎ., ಡಿಪ್ಲೊಮಾ ಮತ್ತು ಎಲ್.ಎಲ್.ಬಿ. ಯಂತಹ ಕೋರ್ಸುಗಳಿಗೂ ಪ್ರವೇಶ ಪಡೆದುಕೊಂಡು ಕಲಿಯುತ್ತಿದ್ದಾರೆ. ಸರ್ಕಾರ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿರುವುದು, ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮುಂತಾದ ಇಲಾಖೆಗಳು ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಪ್ರಯತ್ನದಿಂದಾಗಿ ಈ ಜನಾಂಗದ ಜನರಲ್ಲಿ ಶಿಕ್ಷಣದ ಬಗೆಗಿನ ಮನೋಭಾವನೆಯಲ್ಲಿ ಸಕಾರಾತ್ಮಕ ಪರಿವರ್ತನೆಗಳು ಉಂಟಾಗುತ್ತಿವೆ.

- ಆರೋಗ್ಯದ ವಿಚಾರದಲ್ಲಿ ಸಿದ್ದಿಯರು ಹೆಚ್ಚು ಎಚ್ಚರಿಕೆಯನ್ನು ಹೊಂದಿಲ್ಲ. ಸಣ್ಣಪುಟ್ಟ ಕಾಯಿಲೆಗಳಿಗೆ ಸ್ಥಳೀಯ ಸಾಂಪ್ರದಾಯಿಕ ವೈದ್ಯ ಪದ್ಧತಿಯನ್ನು ಅವಲಂಬಿಸಿದ್ದರೂ ಆಧುನಿಕ ಇಂಗ್ಲೀಷ್ ವೈದ್ಯಕೀಯ ಸೌಲಭ್ಯಗಳೂ ಇವರಿಗೆ ಸಿಗುತ್ತಿವೆ. ಇತ್ತೀಚಿಗೆ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಹಜವಾಗಿಯೇ ಅರಣ್ಯ ಪರಿಸದಲ್ಲಿ ಬದುಕನ್ನು ಕಟ್ಟಿಕೊಂಡ ಈ ಜನಾಂಗದವರು ಸಾಂಪ್ರದಾಯಿಕ ವೈದ್ಯಪದ್ಧತಿಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿತ್ತು. ಹೊರಗಿನ ಜಗತ್ತಿಗೆ ಇವರ ಬದುಕು ಈಗ ತೆರೆದುಕೊಂಡಿದೆ. ಇದರಿಂದ ಆಧುನಿಕ ವೈದ್ಯಕೀಯ ಸೌಲಭ್ಯಗಳಿಂದ ತಮ್ಮ ಆರೋಗ್ಯದ ವಿಚಾರಗಳನ್ನು ಅರಿತುಕೊಂಡು ಉಪಯೋಗಿಸಿಕೊಳ್ಳುತ್ತಿದ್ದಾರೆ.
- ಮಹಿಳೆಯರು ಪುರುಷರಿಗಿಂತ ಹೆಚ್ಚಾಗಿದ್ದು, ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. ಕೌಟುಂಬಿಕ ವಿಚಾರಗಳಲ್ಲಿ, ಮಕ್ಕಳ ಶಿಕ್ಷಣ ಮತ್ತು ವಿವಾಹಗಳಂತಹ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳುವಲ್ಲಿ ಸಿದ್ದಿ ಮಹಿಳೆಯರು ಮಹತ್ವದ ಪಾತ್ರವಹಿಸುತ್ತಿದ್ದಾರೆ. ಹಾಗೆಯೇ, ಕುಟುಂಬದ ಆಸ್ತಿಯನ್ನು ಪರಭಾರೆ ಮಾಡುವಾಗಲೂ ಕುಟುಂಬದಲ್ಲಿ ಮಹಿಳೆಯರ ಅಭಿಪ್ರಾಯಗಳಿಗೆ ಮನ್ನಣೆ ಸಿಗುತ್ತಿದೆ. ಒಟ್ಟಾರೆ ಸಿದ್ದಿ ಜನಾಂಗದ ಮಹಿಳೆಯರ ಸ್ಥಿತಿಗತಿ ಪ್ರಸ್ತುತ ಈ ಸಮಾಜದ ಪುರುಷರಿಗೆ ಸಮಾನವಾಗಿಲ್ಲ. ಅದರೂ ಸ್ತ್ರೀ ಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳ ಕಾರ್ಯ ಚಟುವಟಿಕೆಗಳಲ್ಲಿ ಸ್ತ್ರೀಯರು ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ತನ್ಮೂಲಕ ಆರ್ಥಿಕವಾಗಿ ಅವರ ಕುಟುಂಬವನ್ನು ಸಬಲಗೊಳಿಸಿಕೊಳ್ಳುತ್ತಿದ್ದಾರೆ. ತನ್ಮೂಲಕ ಶೋಷಣೆಯನ್ನು ಪ್ರಶ್ನಿಸುವ ಶಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಈ ಅಂಶಗಳು ಸಿದ್ದಿ ಮಹಿಳೆಯರ ಸ್ಥಿತಿಗತಿಗಳು ಸಕಾರಾತ್ಮಕವಾಗಿ ಪರಿವರ್ತನೆಯಾಗುತ್ತಿರುವುದನ್ನು ಬಿಂಬಿಸುತ್ತದೆ.
- ಗುಲಾಮರಾಗಿ ಬಂದ ಸಿದ್ದಿಯರು ಪ್ರಾರಂಭದಲ್ಲಿ ಭೂರಹಿತ ಕೃಷಿ ಕಾರ್ಮಿಕರಾಗಿದ್ದರು, ನಂತರದಲ್ಲಿ ಕೃಷಿ ಭೂಮಿಯನ್ನು ಹೊಂದಿ ಭೂಹಿಡುವಳಿದಾರರಾಗಿ ಸ್ವಂತ ಕೃಷಿಕರೂ ಆಗಿದ್ದಾರೆ. ಅರಣ್ಯದ ಉತ್ಪನ್ನಗಳನ್ನು ಲಾಭದಾಯಕವಲ್ಲದ ರೀತಿಯಲ್ಲಿ ಮಾರಾಟ ಮಾಡುತ್ತಿದ್ದ ಇವರಿಗೆ ಈಗ ಲ್ಯಾಂಪ್ಸ್ ಸಂಸ್ಥೆಯು ನೆರವಿಗೆ ಬಂದಿದೆ. ವೃತ್ತಿಯಲ್ಲಿ ಇವರು ಕೃಷಿಕರಾದರೂ, ತಮ್ಮ ಜಮೀನಿನ ಕೆಲಸ ಮುಗಿದ ಮೇಲೆ ಬೇರೆಯವರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿಯೂ ದುಡಿಯುತ್ತಾರೆ. ಹಸು ಮತ್ತು ಎಮ್ಮೆಗಳನ್ನು ಸಾಕಿ ಹೈನುಗಾರಿಕೆಯಲ್ಲೂ ಕೆಲವು ಸಿದ್ದಿ ಕುಟುಂಬಗಳು ನಿರತವಾಗಿವೆ. ಶಿಕ್ಷಣದ ಉಪಯೋಗ ಪಡೆದುಕೊಂಡಿರುವ ಈ ಜನಾಂಗದವರು ವಕೀಲರಾಗಿ ಶಿಕ್ಷಕರಾಗಿ ಸಕಾರದ ವಿವಿಧ ಇಲಾಖೆಗಳಲ್ಲಿ ನೌಕರರಾಗಿ ಟ್ರಕ್ ಆಪರೇಟರ್‌ಗಳಾಗಿ ವಾಹನ ಚಾಲಕರಾಗಿ ವೃತ್ತಿಗಳನ್ನು ಮಾಡುತ್ತಿದ್ದಾರೆ. ಸಾಂಧರ್ಬಿಕವಾಗಿ ಪಟ್ಟಣ ಪ್ರದೇಶಗಳಿಗೆ ವಲಸೆಹೋಗಿ ಕಟ್ಟಡ ನಿಮಾಣ ಕೆಲಸಗಳಲ್ಲಿ ಕೋಲಿಕಾರರಾಗಿಯೂ ಕೆಲಸ ಮಾಡುತ್ತಾರೆ. ಅರಣ್ಯಗಳಲ್ಲಿ ಅಲೆಮಾರಿಗಳಾಗಿ ಪ್ರಾಣಿಗಳ ಬೇಟೆ ಮತ್ತು ಗಡ್ಡೆಗೆಣಸುಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಸ್ಥಳೀಯ ಭೂಮಾಲೀಕರ ಸಂಪರ್ಕದಿಂದ ಕೃಷಿ ಕೌಶಲ್ಯಗಳನ್ನು

ಕಲಿತು ಕೃಷಿಕರಾಗಿದ್ದಾರೆ. ಕೆಲವರು ಭೂ ಹಿಡುವಳಿದಾರರಾಗಿದ್ದಾರೆ, ಕೃಷಿ ಆಧಾರಿತ ಉಪ ಕಸುಬುಗಳನ್ನು ಮಾಡುತ್ತಿದ್ದಾರೆ. ಜಾಗತೀಕರಣದ ಸಂದರ್ಭದಲ್ಲಿ ಆಸ್ತಿಯ ಒಡೆತನ ಮತ್ತು ಉದ್ಯೋಗ ಅವಕಾಶಗಳು ಈ ಜನಾಂಗದವರ ಆರ್ಥಿಕ ಜೀವನವನ್ನು ಪರಿವರ್ತನೆಯ ದಿಕ್ಕಿನತ್ತ ಕೊಂಡೊಯ್ಯುತ್ತಿವೆ.

ಸಲಹೆಗಳು

ಪ್ರಸ್ತುತ ಅಧ್ಯಯನದ ಫಲಿತಗಳು ಮತ್ತು ಕ್ಷೇತ್ರಕಾರ್ಯದ ಅನುಭವಗಳ ಆಧಾರದ ಮೇಲೆ ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರ ಸಮಾಜ ಸೇವಾ ಕಾರ್ಯಕರ್ತರು ಮತ್ತು ಸಿದ್ದಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿರುವವರು ಪರಿಣಾಮಕಾರಿಯಾಗಿ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಸಿದ್ದಿ ಬುಡಕಟ್ಟು ಜನರ ಜೀವನದ ಉನ್ನತೀಕರಣಕ್ಕಾಗಿ ಅನುಷ್ಠಾನಗೊಳಿಸುದಕ್ಕೋಸ್ಕರ ಈ ಕೆಳಗಿನ ಶಿಪಾರಸ್ಸುಗಳನ್ನು ನೀಡಲಾಗಿದೆ.

೧. ೨೦೦೬ರ ಸಾಂಪ್ರದಾಯಿಕ ಅರಣ್ಯ ವಾಸಿಗಳು ಮತ್ತು ಬುಡಕಟ್ಟುಗಳ ಅರಣ್ಯ ಹಕ್ಕುಗಳ ಸಂರಕ್ಷಣಾ ಕಾಯಿದೆಯ ಪ್ರಕಾರ ಸಿದ್ದಿ ಜನರು ಉಳುಮೆ ಮಾಡುತ್ತಿರುವ ಕೃಷಿ ಭೂಮಿಯ ಹಕ್ಕು ಪತ್ರಗಳನ್ನು ನೀಡುವುದರ ಮೂಲಕ ಅವರು ಭೂಮಿಯ ಮೇಲೆ ಹೊಂದಿರುವ ಹಕ್ಕಿನ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಬೇಕು.

೨. ಅನೇಕ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಸಿದ್ದಿ ಜನರ ಸಂಸ್ಕೃತಿ, ನಂಬಿಕೆ ಮತ್ತು ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳದೇ ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಅಭಿವೃದ್ಧಿ ಯೋಜನೆಗಳು, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುದೀಕರಣ, ಸೋಲಾರ್ ಶಕ್ತಿಯ ಉಪಯೋಗ ಮುಂತಾದವುಗಳ ಬಗೆಗೆ ಈ ಜನಾಂಗದವರಿಗೆ ಪ್ರಾತ್ಯಕ್ಷಿಕೆಗಳನ್ನು ಸಂಘಟಿಸುವುದರ ಮೂಲಕ ಅರಿವು ಮೂಡಿಸಬೇಕಾಗಿದೆ.

೩. ಸಿದ್ದಿ ಜನಾಂಗೀಯದವರಲ್ಲಿ ಶಿಕ್ಷಣ, ಆರೋಗ್ಯ, ಶುಚಿತ್ವ ಮತ್ತು ಪೌಷ್ಟಿಕ ಆಹಾರದ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ವಿಶೇಷವಾಗಿ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು.

೪. ಸಿದ್ದಿ ಜನರು ಬಳಸುತ್ತಿರುವ ಔಷಧೀಯ ಸಸ್ಯಗಳು ಮತ್ತು ಹರ್ಬಲ್ ಡ್ರಗ್ಸ್‌ಗಳನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಲು ಎತ್ನೋಬಾಟ್ನಿಸ್ಟ್, ವೈದ್ಯಕೀಯ ಸಮಾಜಶಾಸ್ತ್ರಜ್ಞರು ಆಯುರ್ವೇದಿಕ್ ತಜ್ಞರು ಮತ್ತು ಸಂಶೋಧಕರ ನೆರವನ್ನು ಪಡೆಯಬಹುದು.

೫. ನಿಸರ್ಗದ ಬಗೆಗಿನ ಪ್ರಾಯೋಗಿಕ ಜ್ಞಾನ ಹೊಂದಿರುವ ಸಮರ್ಪಣಾ ಮನೋಭಾವ ಹೊಂದಿರುವ ಶಿಕ್ಷಕರನ್ನು ಬುಡಕಟ್ಟು ಪ್ರದೇಶದಲ್ಲಿರುವ ಶಾಲೆಗಳಿಗೆ ನೇಮಕ ಮಾಡಬೇಕು.

೬. ಬುಡಕಟ್ಟು ಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಟಿಂಬರ್ ಮರ್ಚೆಂಟ್ಸ್, ಡ್ರಾಗ್ ಮಾಫಿಯಾಗಳು, ಅರಣ್ಯೋತ್ಪಾನಗಳ ಕಾಳಸಂತೆ ಮಾರಾಟಗಾರರು, ಬುಡಕಟ್ಟು ಯುವಕರನ್ನು ದುರಪಯೋಗ

ಪಡಿಸಿಕೊಂಡು ಅಪರಾಧಿ ಕೃತ್ಯಗಳಲ್ಲಿ ತೊಡಗಿಸುತ್ತಿದ್ದಾರೆ. ಇದನ್ನು ತಪ್ಪಿಸಲು ಬುಡಕಟ್ಟು ಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಬುಡಕಟ್ಟೇತರ ಜನರ ವಲಸೆಯನ್ನು ನಿಷೇಧಿಸಬೇಕು. ಇದರಿಂದ ಬುಡಕಟ್ಟು ಜನರು ಬೇರೆಕಡೆ ವಲಸೆ ಹೋಗುವುದನ್ನು ತಡೆಯಬಹುದು.

೭. ಮಹಿಳಾ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಕ್ರೀಯವಾಗಿರುವ ಕಾರವಾರ ಜಿಲ್ಲಾ ಧರ್ಮ ಪ್ರಾಂತ್ಯ ಪರಿಷತ್ ಮತ್ತು ಗ್ರೀನ್ ಇಂಪಿಲರೂ ಟ್ರಸ್ಟ್‌ಗಳಂತಹ ಸ್ವಯಂ ಸೇವಾ ಸಂಸ್ಥೆಗಳ ಮಾದರಿಯಲ್ಲಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ಸ್ಥಾಪಿಸಲಾಗಿರುವ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳನ್ನು ಸದೃಢಗೊಳಿಸಬೇಕಾದ ಅವಶ್ಯಕತೆ ಇದೆ.

೮. ಸಿದ್ದಿಯರ ನೃತ್ಯ ಪ್ರಕಾರ ಮತ್ತು ಜಾನಪದ ಕಲೆಗಳಾದಂತಹ ಡಮಾಮಿ ಮತ್ತು ಪುಗಡಿ ನೃತ್ಯಗಳನ್ನು ಮಾನವಶಾಸ್ತ್ರ ಮತ್ತು ಜನಪದ ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲಿ ಅಳವಡಿಸಿ ಕೊಳ್ಳಬೇಕು.

೯. ಸಿದ್ದಿ ಜನಾಂಗದವರು ವಾಸವಾಗಿರುವ ಗೋವಾ, ಮಹಾರಾಷ್ಟ್ರ ಗುಜರಾತ ಮತ್ತು ಹೈದರಾಬಾದ್ ಭಾಗಗಳಲ್ಲಿ ಈ ಜನಾಂಗದ ಜನರ ಬಗೆಗೆ ಸಮಗ್ರವಾದ ತೌಲನಿಕ ಸಂಶೋಧನೆಗೆ ಉತ್ತೇಜನ ನೀಡುವುದು ಅಗತ್ಯವಾಗಿದೆ.

ಪರಿಶಿಷ್ಟ ಬುಡಕಟ್ಟುಗಳ ಜೀವನದ ಸುಧಾರಣೆಗಾಗಿ ಹಲವಾರು ಕಲ್ಯಾಣ ಯೋಜನೆಗಳಿವೆ. ಈ ಯೋಜನೆಗಳು ಕರ್ನಾಟಕದ ಎಲ್ಲಾ ಬುಕಟ್ಟುಗಳಂತೆಯೇ ಸಿದ್ದಿ ಜನಾಂಗೀಯ ಪರಿಶಿಷ್ಟ ಬುಡಕಟ್ಟು ಜನರಿಗೂ ಅನ್ವಯವಾಗುತ್ತವೆ. ನಾವು ಇಲ್ಲಿ ಸಿದ್ದಿ ಜನರ ಅಭಿವೃದ್ಧಿಗೆ ಮಾಡಬೇಕಾಗಿರುವುದು. ಹೊಸ ಯೋಜನೆಗಳನ್ನು ರೂಪಿಸುವುದಲ್ಲ. ಪ್ರಸ್ತುತ ಇರುವ ಬುಡಕಟ್ಟು ಕಲ್ಯಾಣ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಾಗಿದೆ.

ಇಂತಹ ಸಲಹೆ, ಸೂಚನೆ ಶಿಫಾರಸುಗಳು ಕೇವಲ ಕಾಗದದ ಮೇಲೆ ಉಳಿಯದೇ ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಬೇಕಾದರೆ, ಅಭಿವೃದ್ಧಿ ಎಂಬುದನ್ನು ಸಂಸ್ಥೆಯೊಂದು ಹೇಗೆ ಗ್ರಹಿಸುತ್ತದೆ ಮತ್ತು ಯಾವ ರೀತಿ ಅದರ ಮೌಲ್ಯ ನಿರ್ಧರಿಸುತ್ತದೆ ಎಂದು ನೋಡದೇ, ನಾವು ಕೆಲಸ ಮಾಡುವ ಸಮುದಾಯದ ಜನರ ದೃಷ್ಟಿಕೋನದಿಂದ ಅದನ್ನು ನೋಡಬೇಕಾಗುತ್ತದೆ. ಬುಡಕಟ್ಟು ಸಮುದಾಯಗಳ ಮೇಲೆ ಏನನ್ನೂ ಬಲವಂತವಾಗಿ ಹೇರದಂತೆ ನಿರ್ಬಂಧವಿರಬೇಕು. ಅವರಲ್ಲಿ ಇರುವ ಜ್ಞಾನವನ್ನು ಗೌರವಿಸಿ ಅವರನ್ನು ಸಮಭಾಗಿಗಳು ಎಂದು ಪರಿಗಣಿಸಿ, ಅವರ ಸಮಸ್ಯೆಗಳನ್ನು ಅವರೇ ಬಗೆಹರಿಸಿಕೊಳ್ಳುವ ರೀತಿಯಲ್ಲಿ ಅವರನ್ನು ಸಬಲರನ್ನಾಗಿ ಮಾಡಿದಾಗ ಮಾತ್ರ ಪ್ರಜಾಸತ್ತಾತ್ಮಕವಾದ ಹಾಗೂ ಅರ್ಥಪೂರ್ಣವಾದ ಅಭಿವೃದ್ಧಿಯನ್ನು ಸಾದಿಸಿದಂತೆ ಆಗುತ್ತದೆ.

ಅನುಬಂಧಗಳು

* ಪರಾಮರ್ಶನ ಗ್ರಂಥಗಳು
* ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಅನಂತ ಕೃಷ್ಣ ಅಯ್ಯರ್ಸ್ ಎಲ್.ಕೆ., ೧೯೦೯, "ಟ್ರೈಬ್ಸ್ ಆಂಡ್ ಕಾಸ್ಟ್ ಆಫ್ ಕೊಚ್ಚಿನ್", ಹಿಗ್ಗಿಗ್ ಆಂಡ್ ಭೂಥಾನ್, ಮದ್ರಾಸ್.

ಅಜಿತ್‌ಸಿಂಗ್ ಕೆ., ೧೯೮೪, "ಟ್ರೈಬಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ", ಅಮರ ಪ್ರಕಾಶನ, ನ್ಯೂಡೆಲಿ.

ಅಯ್ಯಪ್ಪನ್ ಎ., ೧೯೬೫, "ಸೋಶಿಯಲ್ ರೆವಲ್ಯೂಸನ್ ಇನ್ ಕೇರಳ ವಿಲೇಜಸ್", ಏಷಿಯಾ ಪಬ್ಲೀಶಿಂಗ್ ಹೌಸ್, ಬಾಂಬೆ.

ಎಲ್ವಿನ್ ಮೇರಿಯರ್, ೧೯೬೩, "ಎ ನ್ಯೂ ಡೀಲ್ ಫಾರ್ ಟ್ರೈಬಲ್ ಇಂಡಿಯಾ", ಮಿನಿಸ್ಟ್ರೀ ಆಫ್ ಹೋಂ ಅಫೈರ್ಸ್, ಪಬ್ಲೀಕೇಷನ್ ಡಿವಿಜನ್, ನ್ಯುಡೆಲ್ಲಿ.

ಎಡ್ವರ್ಡ ಸಿಲ್ಸ್, ರಾಬರ್ಟ ರೆಡ್‌ಫೀಲ್ಡ್(ಎಡಿಟೆಡ್), ೧೯೯೧, "ರಿಮೆಂಬರಿಂಗ್ ದಿ ಯುನಿವರ್ಸಿಟಿ ಆಫ್ ಚಿಕ್ಯಾಗೋ–ಟೀಚರ್ಸ್ ಸೈಂಟಿಸ್ಟ್ ಅಂಡ್ ಸ್ಕಾಲರ್ಸ್", ಯೂನಿವರ್ಸಿಟಿ ಆಫ್ ಚಿಕ್ಯಾಗೋ ಪ್ರೆಸ್(ಲಿ).

ಓಬಳೇಶ್ ಕೆ.ಎಚ್., ೨೦೧೧, "ಅಕ್ಷರ ದೀಪ ಆರಸುತ್ತ", ಸೋಲಿಗ ಮಕ್ಕಳ ಕಲಿಕೆ ವ್ಯಥೆ–ಕಥೆ, ಪ್ರಜಾವಾಣಿ.

ಕಡೆತೋಟದ್ ಎನ್.ಈ., "ಸಿದ್ದಿ ಪ್ಯೂಪಲ್ ಆಫ್ ಇಂಡಿಯಾ, ಕರ್ನಾಟಕ", ಜನರಲ್ ಎಡಿಷನ್, ಕೆ.ಎಸ್. ಸಿಂಗ್, ವಾಲ್ಯುಮ್–೩೫, ಪಾರ್ಟ್–೩, ಆಂತ್ರೋಪಾಲಾಜಿಕಿಲ್ ಸರ್ವೆ ಆಫ್ ಇಂಡಿಯಾ.

ಕರ್ಮಾಕರ ಕೆ.ಈ., ೨೦೦೨, "ದಿ ಸೈಲೆನ್ಸ್ಡ್ ಡ್ರಮ್ಸ್ – ಎ ರಿವ್ಯೂ ಆಫ್ ಟ್ರೈಬಲ್ ಎಕನಾಮಿಕ್ ಡೆವಲಫ್‌ಮೆಂಟ್", ನಾರ್ದಾನ್ ಬುಕ್ ಸೆಂಟರ್, ನ್ಯೂಡೆಲ್ಲಿ.

ಕಮಲಾದೇವಿ ಚಟ್ಟೋಪದ್ಯಾಯ, ೧೯೭೮, "ಟ್ರೈಬಲಿಸಂ ಇನ್ ಇಂಡಿಯಾ", ವಿಕಾಸ್ ಪಬ್ಲೀಶಿಂಗ್ ಹೌಸ್, ನ್ಯೂಡೆಲ್ಲಿ.

ಕಿರಣ್ ಕಮಲ್ ಪ್ರಸಾದ್, ೨೦೦೫, "ಇನ್ ಸರ್ಚ ಆಫ್ ಎನ್ ಐಡೆಂಟಿಟಿ– ಆನ್ ಎತ್ನೋಗ್ರಾಫಿಕ್ಸ್ ಸ್ಟಡಿ ಆಫ್ ದಿ ಸಿದ್ದಿಸ್ ಆಫ್ ಕರ್ನಾಟಕ", ಜನ ಜಾಗೃತಿ ಪ್ರಕಾಶನ, ಬೆಂಗಳೂರು.

ಕಿರಣ್ ಕಮಲ್ ಪ್ರಸಾದ್, ಜಾನ್ ಪೆರಿ ಆಗ್ನೇಟ್, ೨೦೦೮, "ದಿ ಆಫ್ರೀಕನ್ ಡಿಯೋಸ್ಪೇರ ಇನ್ ಏಶಿಯಾ–ಎಕ್ಸಪ್ಲೋರೇಷನ್ ಆಫ್ ಲೆಸ್ಸ್ ನೋನ್ ಫ್ಯಾಟ್ಕ್", ಜನ ಜಾಗೃತಿ ಪ್ರಕಾಶನ, ಬೆಂಗಳೂರು.

ಕಿರಣ್ ಕಮಲ್ ಪ್ರಸಾದ್, ಆಗ್ನೇಟ್ ಜೆ.ಪಿ., (ಎಡಿಟೆಡ್), ೨೦೦೮, "ಟಾಡಿಯಾ – ದಿ ಆಫ್ರೀಕನ್ ಡಿಯೋಸ್ಪೆರಾ ಇನ್ ಇಂಡಿಯಾ" – ಎಕ್ಸ್ ಪ್ಲೋರೇಷನ್ ಆಫ್ ಎ ಲೇಸ್ಸ್ ನೋನ್ ಫ್ಯಾಕ್ಟ್, ಜನ ಜಾಗೃತ ಪ್ರಕಾಶನ, ಬೆಂಗಳೂರು

ಕುಮಾರ ಎಸ್., ೨೦೦೬, "ಸರ್ವಿಸಸ್, ಸ್ಟೇಟಸ್ ಅಂಡ್ ಮಿಲಿಟರಿ ಇನ್ ಡೆಲ್ಲಿ ಸುಲ್ತಾನ ೪೩ ಆ್ಯಂಡ್ ೧೪ "ಸೆಂಚ್ಯುರಿಸ್ ಸ್ಲೇವರಿ ಇನ್ ಸೌತ್ ಏಶಿಯ", (ಎಡಿಟೆಟ್); ಚಟರ್ಜಿ ಇನ್ ಇಂಡಿಯನ್ ಯೂನಿವರ್ಸಿಟಿ ಪ್ರೆಸ್

ಕೋಮಲ್ ಸಿಂಗ್, ೨೦೧೧, "ಎಕಾನಮಿ ಆಫ್ ಟ್ರೈಬಲ್ ವಿಲ್ಲೇಜ್ ಇನ್ ಮಣಿಪುರ", ಕಾನ್ಸೆಫ್ಟ್ ಪಬ್ಲಿಷಿಂಗ್ ಕಂಪನಿ (ಪ್ರೈ)ಲಿಮಿಟೆಡ್, ನ್ಯೂಡೆಲ್ಲಿ

ಗಾರ್ಡನ್ ಮಾರ್ಷಲ್, ೧೯೯೮, "ಸ್ಪೀಕೋ; ಫಾರ್ಮೇಷನ್", ಎ ಡಿಕ್ಸ್‌ನರಿ ಆಫ್ ಸೋಶಿಯಾಲಜಿ.

ಗೋಪಾಲ್ ಭಾರದ್ವಾಜ, ೧೯೭೭, "ಸೋಶಿಯಲ್ ಮೂವಮೆಂಟ್ಸ್ ಅಮಾಂಗ್ ದಿ ಟ್ರೈಬಲ್ಸ್ ಆಫ್ ಇಂಡಿಯ", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ(ಸಂ), ಎಸ್.ಸಿ. ದುಬೆ, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

ಘುರ್ಯೆ ಜಿ.ಎಸ್., ೧೯೪೩, "ದಿ ಶೆಡ್ಯೂಲ್ಡ ಟ್ರೈಬ್ಸ್", ಪಾಪ್ಯೂಲರ್ ಬುಕ್ ಡಿಪೋ, ಬಾಂಬೆ.

ಘುರ್ಯೆ ಜಿ.ಎಸ್., ೧೯೬೩, "ದಿ ಟ್ರೈಬಲ್ಸ್ ಅಂಡ್ ದೇರ್ ಕಲ್ಚರ್", ಗೋಖಲೆ ಇನ್ಸ್ಟಿಟ್ಯುಟ್ ಆಫ್ ಪೊಲಿಟಿಕ್ಸ ಅಂಡ್ ಎಕಾನಮಿಕ್ಸ, ಪೂನಾ.

ಚಂದ್ರ ಪೂಜಾರಿ ಎಂ., ೨೦೦೬, "ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ", ಅಭಿವೃದ್ಧಿ ವ್ಯಾಖ್ಯಾನ (ಸಂ) ಡಾ. ಎ.ಎಸ್. ಪ್ರಭಾಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

ಚಂದ್ರ ಪೂಜಾರಿ ಎಂ., ೨೦೦೯, "ಸಂಶೋಧನೆ ಏನು? ಏಕೆ? ಹೇಗೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಟಿ.ಆರ್., ೧೯೯೩,"ಅಭಿವೃದ್ಧಿ ಮೀಮಾಂಸೆ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ೨೦೦೬, "ಬುಡಕಟ್ಟು ಅಭಿವೃದ್ದಿ ಕೆಲವು ಟಿಪ್ಪಣಿಗಳು ಆದಿವಾಸಿ ಆಖ್ಯಾನ" (ಸಂ) ಎ.ಎಸ್. ಪ್ರಭಾಕರ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ

ಚಕ್ರವರ್ತಿ ಎನ್., ಮುಖರ್ಜಿ ಪಿ., ೧೯೭೧, "ಇಂಡಿಯನ್ ಟ್ರೈಬ್ಸ್", ಸರಸ್ವತಿ ಲೈಬ್ರೇರಿ, ಕಲ್ಕತ್ತಾ.

ಚನ್ನಪ್ಪ ಥಾಮಸ್, ೨೦೦೯, "ಕರ್ನಾಟಕದ ಕನ್ನಡ ಮತ್ತು ಕ್ರೈಸ್ತ ಬುಡಕಟ್ಟುಗಳ ಸಂಸ್ಕೃತಿ ಅಧ್ಯಯನ", ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚೌವ್ಹಾನ್ ಆರ್.ಎಸ್., ೧೯೯೫, "ಆಫ್ರಿಕನ್ಸ್ ಇನ್ ಇಂಡಿಯ ಫ್ರಮ್ ಸ್ಲೇವರಿ ಟಿ ರಾಯಲ್ಟಿ", ಏಶಿಯನ್ ಪಬ್ಲೀಶಿಂಗ್ ಸರ್ವಿಸ್, ನ್ಯೂಡೆಲ್ಲಿ.

ಜಾಚಾರಿಯಸ್ ಸಿ.ಬಿ., ೨೦೦೩, "ದಿ ಮೈಕ್ರೋ ಲೇವೆಲ್ ಇಂಪ್ಯಾಕ್ಟ್ ಆಫ್ ಟ್ರೈಬಲ್ ಡೆವಲಪಮೆಂಟ್ ಪ್ರೋಗ್ರಾಮ್ಸ್ ಅಮಾಂಗ್ ದಿ ಕೇದಾರ್ ಟ್ರೈಬ್ಸ್", ಸೆಂಟರ್ ಪಾರ್ ಡೆವಲಪ್‌ಮೆಂಟಲ್ ಸ್ಟಡೀಸ್, ತಿರುವನಂತಪುರ, ಕೇರಳ .

ಜಾರ್ಜ್ ಫಿಟರ್ ಮರ್ಡಕ್, ೧೯೬೦, "ಸೋಶಿಯಲ್ ಸ್ಟ್ರಕ್ಚರ್", ದಿ ಮ್ಯಕ್‌ಮಿಲನ್ ಕಂಪನಿ, ನ್ಯೂಯಾರ್ಕ್.

ಜೋನಾಥನ್ ಠಾಕೂರ ಹೆಚ್., ೧೯೮೭, "ಸ್ಟ್ರಕ್ಚರ್ ಆಫ್ ಸೋಶೀಯೊಜಿಕಲ್ ಥಿಯೆರಿ", ರಾವತ್ ಪಬ್ಲೀಕೇಷನ್, ಜೈಪುರ.

ಡೇವಿಡ್ ಎಲ್ ಸಿಲ್ಸ್, ೧೯೬೮, "ಇಂಟರ್ ನ್ಯಾಷನಲ್ ಎನ್‌ಸೈಕ್ಲೋಪಿಡಿಯಾ ಆಫ್ ದಿ ಸೋಶಿಯಲ್ ಸೈನ್ಸ್" ಸಂ:೧೪, ದಿ ಮೆಕ್‌ಮಿಲನ್ ಕಂಪನಿ ಅಂಡ್ ಫ್ರೀ ಪ್ರೆಸ್.

ದಂಡಾ ವಿ.ಕೆ., ೧೯೭೩, "ಟ್ರೈಬಲ್ ಎಕನಾಮಿಕ್ಸ್ ಅಂಡ್ ದೇರ್ ಟ್ರಾನ್ಸ್‌ಪಾರ್ಮೇಷನ್", ಐ.ಸಿ.ಎಸ್.ಎಎಸ್.ಆರ್.

ದಶ ಕೆ.ಎಸ್., ೨೦೦೪, "ಇನ್‌ವೈಟೇಷನ್ ಟು ಸೋಶಿಯಲ್ ಅಂಡ್ ಕಲ್ಚರಲ್ ಆಂತ್ರೋಪಾಲಜಿ", ಅಟ್ಲಾಂಟಿಕ್ ಪಬ್ಲೀಷರ್ಸ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ.

ದಾಸ್ ಟಿ.ಸಿ., ೧೯೬೮, "ಎಸ್ಕಿಮ್ ಫಾಕ್ ಟ್ರೈಬಲ್ ವೆಲ್‌ಪೇರ್ ಇನ್ ಅಪ್ಲೈಡ್ ಅಂತ್ರೋಪಾಲಜಿ ಇನ್ ಇಂಡಿಯಾ", (ಎಡಿಟಡ್) ಎಲ್.ಪಿ. ವಿದ್ಯಾರ್ಥಿ, ಅಲಹಾಬಾದ್, ಕಿರಣ ಮಹಲ್.

ದಿಯೋಗಾಂವಕರ್ ಎಸ್.ಜಿ, ೧೯೯೨, "ಟ್ರೈಬಲ್ ಡೆವಲಪ್‌ಮೆಂಟ್ ಪ್ಲಾನ್ಸ್, ಇಂಪ್ಲಿಮೆಂಟೇಷನ್ ಅಂಡ್ ಇವ್ಯಾಲ್ಯೂಷನ್" ಕಾನ್ಸೆಪ್ಟ್ ಪಬ್ಲೀಶಿಂಗ್ ಕಂಪನಿ.

ದುಬೆ ಎಸ್.ಸಿ., ೧೯೬೦, "ಅಪ್ರೋಚಸ್ ಟು ದಿ ಟ್ರೈಬಲ್ ಪ್ರಾಬ್ಲಮ್ಸ್ ಇನ್ ಇಂಡಿಯಾ", ಎಲ್.ಪಿ. ವಿದ್ಯಾರ್ಥಿ (ಎಡಿಟೆಡ್) "ಇಂಡಿಯನ್ ಅಂತ್ರೋಪಾಲಜಿ ಇನ್ ಆಕ್ಷನ್" ರಾಂಚಿ.

ದೇವೇಂದ್ರ ಠಾಕೂರ್, ಠಾಕಾರ್ ಡಿ.ಎನ್., (ಎಡಿಟೆಡ್), ೧೯೯೪, "ಟ್ರೈಬಲ್ ಲೈಫ್ ಇನ್ ಇಂಡಿಯಾ" ಸಂ–೩, ಟ್ರೈಬಲ್ ಲೈಫ್ ಅಂಡ್ ಟ್ರೈಬಲ್ ಪಾರೇಸ್ಟ್, ದೀಪ್ ಅಂಡ್ ದೀಪ್ ಪಬ್ಲೀಕೇಷನ್, ನ್ಯೂಡೆಲ್ಲಿ.

ದೇವೇಂದ್ರ ಠಾಕೂರ್, ೧೯೮೬, "ಸೋಶಿಯೋ–ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಟ್ರೈಬ್ಸ್ ಇನ್ ಇಂಡಿಯಾ", ದೀಪ್ ಅಂಡ್ ದೀಪ್ ಪಬ್ಲೀಕೇಷನ್ಸ್, ನ್ಯೂಡೆಲ್ಲಿ .

ದೇಸಾಯಿ ಎ.ಆರ್., ೧೯೬೧, "ರೂರಲ್ ಇಂಡಿಯಾ ಇನ್ ಟ್ರಾನ್ಸಿಷನ್", ಪಾಪ್ಯೂಲರ್ ಬುಕ್ ಡಿಪೋ, ಬಾಂಬೆ.

ದೊಡ್ಡ ಹುಲ್ಲೂರು, "ರುಕ್ಮೋಜಿ ಸದನದಲ್ಲಿ ಸಿದ್ದಲಿಂಗಯ್ಯ", ೫೩.

ದೊಶಿ ಎಸ್.ಸಿ., ೧೯೯೭, "ಎಮರ್ಜಿಂಗ್ ಟ್ರೈಬಲ್ ಇಮೇಜ್", ರಾವತ್ ಪಬ್ಲೇಕೇಷನ್ಸ್, ಜೈಪುರ

ನದೀಮ್ ಹುಸೇನ್, ೧೯೯೧, "ಟ್ರೈಬಲ್ ಇಂಡಿಯಾ ಟುಡೆ", ಮನ್ ಮನ್ ಪಬ್ಲೀಕೇಷನ್ಸ್, ನ್ಯೂಡೆಲ್ಲಿ.

ಪಿಂಟೂ ಜನಿಟ್, ೧೯೯೨, "ಸ್ಲೇವರಿ ಇನ್ ಪೊರ್ಚುಗಿಸ್ ಇಂಡಿಯಾ", ಹಿಮಾಲಯ ಪಬ್ಲೀಷರ್ಸ್ ಹೌಸ್, ಬಾಂಬೆ.

ಪಾಲಾಕ್ಷಪ್ಪ ಟಿ.ಸಿ., ೧೯೭೬, "ಸಿದ್ದಿನ್ ಆಫ್ ನಾರ್ಥ್ ಕೆನರ", ಸ್ಟೆರ್ಲಿಂಗ್ ಪಬ್ಲಿಷರ್ಸ್ ಪ್ರೈವೆಟ್(ಲಿ).

ಪ್ರಕಾಶ ವಿ. ಪಾಟೀಲ, ೧೯೯೮, "ಎ ಬಯೋ ಮೆಡಿಕಲ್ ಸ್ಟಡಿ ಆಫ್, ಸಿದ್ದಿಸ್ ಆಫ್ ಕರ್ನಾಟಕ", ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಕಾಶ ಚಂದ್ರ ಮೆಹ್ತ, ೨೦೦೦, "ಟ್ರೈಬಲ್ ಡೆವಲಪಮೆಂಟ್ ಇನ್ ಟ್ವೆಂಟಿಯತ್ ಸೆಂಚುರಿ", ಶಿವಾ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್, ಉದಯಪುರ.

ಪ್ರಭಾಕರ ಎ.ಎಸ್., (ಸಂ), ೨೦೦೬, "ಆದಿವಾಸಿ ಆಖ್ಯಾನ-ಸಮುದಾಯಗಳ ಅಧ್ಯಯನಕ್ಕೊಂದು ಆಕರ",ಸಿದ್ದಾರ್ಥ ಪ್ರಕಾಶನ, ಹೊಸಪೇಟೆ.

ಪ್ರಭಾಕರ ಎ.ಎಸ್., ೨೦೦೦, "ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ.ಎಸ್., ೨೦೦೬, "ಸರಕಾರ ಮತ್ತು ಬುಡಕಟ್ಟುಗಳು", ಆದಿವಾಸಿ ಆಖ್ಯಾನ, (ಸಂ), ಸಿದ್ಧಾರ್ಥ ಪ್ರಕಾಶನ ಹೊಸಪೇಟೆ.

ಪ್ರಭಾರಾಜ್ ಡಿ.ಎಮ್., ೧೯೮೮, "ಟ್ರೈಬಲ್ ಮೂವ್‌ಮೆಂಟ್ ಅಂಡ್ ಪೋಲಿಟಿಕಲ್ ಹಿಸ್ಟರಿ ಇನ್ ಇಂಡಿಯಾ", ಎ ಕೇಸ್ ಸ್ಟಡಿ ಆಫ್ ಓರಿಸ್ಸಾ, ಇಂಟರ್ ಇಂಡಿಯಾ ಪಬ್ಲೀಕೇಷನ್, ನ್ಯೂಡೆಲ್ಲಿ.

ಪ್ರಶಾಂತ ಹೆಚ್.ಡಿ., ೨೦೦೬, "ಬುಡಕಟ್ಟು ಪರಿಕಲ್ಪನೆ: ಕೆಲವು ಟಿಪ್ಪಣಿಗಳು", ಆದಿವಾಸಿ ಆಖ್ಯಾನ, ಸಂ: ಡಾ. ಎ.ಎಸ್. ಪ್ರಭಾಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಬಾಲಸುಬ್ರಮ್ಮಣ್ಯಂ, ೨೦೧೩, "ಅವರು ಯಾವುದು ಸಮಸ್ಯೆ? ಎಲ್ಲಿದೆ ಪರಿಹಾರ"? (೧೦೧೩), ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ ದಿನಾಂಕ:-೦೧-೦೧-೨೦೧೩.

ಬಿಂದೊ ಸಿ. ಅಗರ್‌ವಾಲ್, ೧೯೭೭,"ಇಂಟರ‍್ಯಾಕ್ಷನ್ ಬಿಟ್ವೀನ್ ಟ್ರೈಬ್ಸ್ ಅಂಡ್ ನಾನ್ ಟ್ರೈಬ್ಸ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

ಬೆನ್ನೆಟ್ ಜೆ.ಡಬ್ಲ್ಯೂ., ೧೯೭೫, "ದಿ ನ್ಯೂ ಎತ್ನಿಸಿಟಿ: ಪರ್ಸ್‌ಪೇಕ್ಟಿವ್ ಫ್ರಮ್ ಎತ್ನಾಲಜಿ", ವೆಸ್ಟ್ ಪಬ್ಲೀಕೇಷನ್ಸ್, ನ್ಯೂಯಾರ್ಕ್.

ಬೋಸ್ ನಿರ್ಮಲ್ ಕುಮಾರ, ೧೯೯೭, "ಸಮ್ ಇಂಡಿಯನ್ ಟ್ರೈಬ್ಸ್", ನ್ಯಾಷನಲ್ ಬುಕ್ ಟ್ರಸ್ಟ್, ನ್ಯೂಡೆಲ್ಲಿ.

ಬೋಸ್ ಪ್ರದೀಪ್ ಕುಮಾರ್, ೧೯೮೯, "ದಿ ಪೊಲಿಟಿಕಲ್ ಎಕನಾಮಿ ಆಫ್ ಡೆವಲಪ್‌ಮೆಂಟ್ ಇನ್ ಇಂಡಿಯಾ," ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

ಬೋಸ್ ಎನ್.ಕೆ., ೧೯೭೧, "ಟ್ರೈಬಲ್ ಲೈಫ್ ಇನ್ ಇಂಡಿಯಾ", ನ್ಯಾಷನಲ್ ಬುಕ್ ಟ್ರಸ್ಟ್, ನ್ಯೂಡೆಲ್ಲಿ.

ಬೋರಲಿಂಗಯ್ಯ ಹಿ.ಚಿ., ೧೯೯೩, "ಸಿದ್ದಿಯರ ಸಂಸ್ಕೃತಿ", ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ೧೯೯೫, "ಕಾಡು ಕಾಂಕ್ರೀಟ್ ಮತ್ತು ಜನಪದ", ಅಕ್ಷರ ಪ್ರಕಾಶನ, ನೀನಾಸಂ, ಹೆಗ್ಗೋಡು.

ಬೋರಲಿಂಗಯ್ಯ ಹಿ.ಚಿ., ೧೯೯೬"ಕರ್ನಾಟಕ ಜಾನಪದ ಕಲೆಗಳ ಕೋಶ" ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಂಡಾರ್ ವಿಂಜ್, ಚಂದ್ರಶೇಖರ ಕೆ.ಆರ್., ಕಾವೇರಿಯಪ್ಪ ಕೆ.ಆರ್., ೧೯೯೭, "ಮೆಡಿಕಲ್ ಎತ್ನೋಬಾಟನಿ ಆಫ್ ದಿ ಸಿದ್ದಿಸ್ ಆಫ್ ಉತ್ತರ ಕನ್ನಡ ಡಿಸ್ಟ್ರಿಕ್ಟ್", ಕರ್ನಾಟಕ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ

ಭಟ್ ಎಸ್.ಸಿ., ಗೋಪಾಲ ಜಿ. ಭಾರ್ಗವ್, ೧೯೯೭, "ಲ್ಯಾಂಡ್ ಆಂಡ್ ಪೀಪಲ್ಸ್ ಆಫ್ ಇಂಡಿಯನ್ ಸ್ಟೇಟ್ಸ ಆಂಡ್ ಯೂನಿಯನ್ ಟೆರಿಟರೀಸ್", ಕರ್ನಾಟಕ, ವಾಲ್ಯುಮ್, ೧೩, ಕಲ್ಪಾಸ್ ಪಬ್ಲಿಕೇಷನ್, ಡೆಲ್ಲಿ.

ಭಟ್. ಪಿ.ಎನ್., ಮೇರಿ ರಂಜನ್ ಎಸ್. ಇರೋದಯ, ೧೯೫೭, "ಡೆಮೊಗ್ರಾಫಿಕ್ ಟ್ರಾನ್ಸಿಷನ್ ಇನ್ ಕೇರಳಾ ರೀ ವಿಸಿಟೆಡ್", ಎಕನಾಮಿಕ್ ಅಂಡ್ ಪೋಲಿಟಿಕಲ್ ವೀಕ್ಸ್.

ಭಕ್ಷಿ ಎಸ್.ಆರ್., ಕಿರಣ ಬಾಲು, ೨೦೦೦, "ಸೋಶೀಯಲ್ ಅಂಡ್ ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಶೆಡ್ಯೂಲ್ಡ್ ಟ್ರೈಬ್ಸ್" ದೀಪ್ ಅಂಡ್ ದೀಪ್ ಪಬ್ಲೀಕೇಸನ್ಸ್ ಪ್ರೈ(ಲಿ), ನ್ಯೂಡೆಲ್ಲಿ.

ಭಾಂಗೆ ಎನ್.ಪಿ., ೧೯೯೩, "ಟ್ರೈಬಲ್ ಕಮೀಷನ್ಸ್ ಅಂಡ್ ಕಮಿಟೀಸ್ ಇನ್ ಇಂಡಿಯಾ", ಹಿಮಾಲಯ ಪಬ್ಲೀಶಿಂಗ್ ಹೌಸ್, ಬಾಂಬೆ.

ಭಾಗ್ಯಲಕ್ಷ್ಮೀ ಮಹಾಪಾತ್ರ, ೨೦೧೧, "ಡೆವಲಪ್‌ಮೆಂಟ್ ಆಫ್ ಏ ಪ್ರಿಮಿಟೀವ್ ಟ್ರೈಬ್- ಎ ಸ್ಟಡಿ ಆಫ್ ಡಿಡಾಯ್ಸ್", ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ (ಪ್ರೈ) ಲಿಮಿಟೆಡ್, ನ್ಯೂಡೆಲ್ಲಿ.

ಭಾಟ್ನಗಾರ್ ವಿ.ಎಸ್., ೧೯೮೨, "ಸೋಶೀಯಲ್ ಅಂಡ್ ಪೊಲಿಟಿಕಲ್ ಆವೇಕನಿಂಗ್ ಅಮಾಂಗ್ ದಿ ಮೀನಾಸ್"- ಸೋಶೀಯಲ್ ಅಂಡ್ ಪೊಲಿಟಿಕಲ್ ಅವೇಕನಿಂಗ್ ಅಮಾಂಗ್ ದಿ ಟ್ರೈಬ್ಸ್ ಆಫ್ ರಾಜಾಸ್ಥಾನ್, ಜಿ.ಎನ್. ಶರ್ಮ,(ಎಡಿಟೆಡ್), ಸೆಂಟರ್ ಫಾರ್ ರಾಜಸ್ಥಾನ್ ಸ್ಟಡೀಸ್, ಯುನಿವರ್ಸಿಟಿ ಆಫ್ ರಾಜಸ್ಥಾನ್, ಜೈಪುರ.

ಭಾರದ್ವಾಜ್ ಎ.ಎನ್., ೧೯೮೫, "ಪ್ರಾಬ್ಲಮ್ಸ್ ಆಫ್ ಶೆಡ್ಯೂಲ್ಡ್ ಕಾಸ್ಟ್ ಅಂಡ್ ಶೆಡ್ಯೂಲ್ಡ ಟ್ರೈಬ್ಸ್ ಇನ್ ಇಂಡಿಯಾ", ಲೈಟ್ ಅಂಡ್ ಲೈಪ್ ಪಬ್ಲೀಕೇಶನ್ಸ್, ನ್ಯೂಡೆಲ್ಲಿ.

ಮದನ್ ಎಸ್.ಎನ್.,"ಡಿಕ್ಷನರಿ ಆಫ್ ಆಂತ್ರೋಪಾಲಜಿ", ಅನ್‌ಮೋಲ್ ಪಬ್ಲೀಕೆಷನ್, ನ್ಯೂಡೆಲ್ಲಿ.

ಮಮತಾ ಚೌದರಿ, ೧೯೭೭,"ಟ್ರೈಬ್ಸ್ ಆಫ್ ಏನ್ಸಿಯಂಟ್ ಇಂಡಿಯಾ", ಕೋಲ್ಕತ್ತಾ.

ಮಜುಂದಾರ್ ಡಿ.ಎನ್., ೧೯೫೩, "ಅಫ್ಟೈರ್ಸ್ ಆಫ್ ಟ್ರೈಬ್ಸ್", ಯೂನಿವರ್ಸಲ್ ಪಬ್ಲೀಕೇಷನ್, ಲಕ್ನೋ.

ಮಾದವ ಕೆ.ಜಿ. ವಸಂತ ೧೯೮೫, "ದಿ ರಿಲಿಜಿಯನ್ ಇನ್ ಕೊಸ್ಟಲ್ ಕರ್ನಾಟಕ" ಇಂಟರ್ ಇಂಡಿಯಾ ಪಬ್ಲೀಕೇಷನ್, ನ್ಯೂಡೆಲ್ಲಿ.

ಮುನಿರಾಜು ಎಸ್.ಬಿ, ೨೦೦೬, "ಬುಡಕಟ್ಟು ಅಭಿವೃದ್ಧಿ", ಒಂದು ವಿಮರ್ಶಾತ್ಮಕ ಅಧ್ಯಯನ ಜೇನುಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೇತ್ರಿ ಕೆ.ಎಂ., ೨೦೧೧, "ಡುಂಗ್ರಿ ಗರಾಸಿಯಾ ಬುಡಕಟ್ಟು", ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು (ಸಂ), ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೇಹ್ರ ಜೆ.ಡಿ., ೧೯೭೭, "ದಿ ವರ್ಲ್ಡ ವ್ಯೂ ಆಫ್ ಇಂಡಿಯನ್ ಟ್ರೈಬ್ಸ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ, ವಿಕಾಸ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ

ಮೊಗಳ್ಳಿ ಗಣೇಶ, ೨೦೦೫, "ದಲಿತರು ಮತ್ತು ಜಾಗತೀಕರಣ", ಪುಟ-೩, ಎ.ಎಸ್. ಪ್ರಭಾಕರ, "ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋರೀಸ್ ಗಿನ್ಸ್‌ಬರ್ಗ್, ೧೯೪೭, "ಸೋಶಿಯಲ್ ಚೇಂಜ್" ಬ್ರಿಟೀಷ್ ಜರ್ನಲ್ ಆಫ್ ಸೋಶಿಯಾಲಜಿ, ವಾಲ್ಯುಮ್ ೯.

ಯೋಗೇಂದ್ರ ಸಿಂಗ್, ೧೯೭೮, "ಎಸ್ಸೇಸ್ ಆನ್ ಮಾರ್ಡನೈಜೆಷನ್ ಇನ್ ಇಂಡಿಯಾ", ಮನೋಹರ ಪಬ್ಲೀಕೇಷನ್, ನ್ಯೂಡೆಲ್ಲಿ.

ರಮಣಿ ವಿ.ಎಸ್., ೧೯೮೮, "ಟ್ರೈಬಲ್ ಎಕಾನಮಿ ಪ್ರಾಬ್ಲಮ್ಸ್ ಅಂಡ್ ಪ್ರಾಸ್ಪೆಕ್ಟಸ್", ಕಾಫ್ ಪಬ್ಲೀಕೇಷನ್, ಅಲಹಾಬಾದ್.

ರಾಘವೇಂದ್ರ ರಾವ್, ೧೯೯೫, "ಟ್ರೈಬಲ್ ಟ್ರೆಡಿಷನ್ ಅಂಡ್ ಚೇಂಜ್", ಎ ಸ್ಟಡೀ ಆಫ್ ಕುಣಬೀಸ್ ಆಫ್ ಸೌಥ್ ಇಂಡಿಯಾ, ಮಂಗಳಾ ಪಬ್ಲೀಕೇಷನ್, ಮಂಗಳೂರು ಆಂಡ್ ಬೆಂಗಳೂರು.

ರಾಮಚಂದ್ರಗೌಡ ಹಿ.ಶಿ., "ಬುಡಕಟ್ಟು ಚಿಂತನೆ ತಿರುವಿನಲ್ಲಿ".

ರಾಯ್ ಭರ್ಮನ್ ಬಿ.ಕೆ., ಮಾಥೂರ್ ಕೆ.ಎಸ್., (ಎಡಿಟೆಡ್), ೧೯೭೩,"ಮಾಡ್ರನೈಸೇಷನ ಆಫ್ ಟ್ರೈಬಲ್ ಪಿಪಲ್ ಆನ್ ಇಂಡಿಯನ್ ಬಾರ್ಡರ್ ಸ್ಟಡೀಸ್ ಇನ್ ಸೋಸಿಯಲ್ ಚೇಂಜ್", ಎತ್ನೋಗ್ರಾಫಿಕ್ ಅಂಡ್ ಫೋಕ್‌ಕಲ್ಚರ್ ಸೊಸೈಟಿಸಿ.

ರ್‍ಯಾಡ್‌ಕ್ಲೀಪ್ ಬ್ರೌನ್, ಎ.ಆರ್., ೧೯೬೪, "ಸ್ಟ್ರಕ್ಚರ್ ಅಂಡ್ ಫಂಕ್ಸನ್ ಇನ್ ಪ್ರಿಮಿಟೀವ್ ಸೊಸೈಯಿಟಿ" ಇಂಗ್ಲೀಷ್ ಲಾಂಗ್ವೇಜ್ ಬುಕ್ ಸೂಸೈಟಿ, ಕೊಯೆನ್ ಅಂಡ್ ವೆಸ್ಟ್ (ಲಿ).

ರಿಚರ್ಡ್ ಪಾಯಾಸ್, ೨೦೦೪, "ಶೆಡ್ಯೂಲ್ ಕಾಸ್ಟ್-ಎ ಸ್ಟಡಿ ಇನ್ ಎಂಪ್ಲಾಯಮೆಂಟ್ ಅಂಡ್ ಸೋಶಿಯಲ್ ಮೊಬಿಲಿಟಿ", ಮಂಗಳಾ ಪಬ್ಲಿಕೇಷನ್ಸ್, ಮ್ಯೂಸಿಯಂ ರೋಡ್, ಮಂಗಳೂರು.

ಲಕ್ಷ್ಮಣ್ ಸಿ.ಎಂ., ೨೦೧೦, "ಭಾರತದ ಬುಡಕಟ್ಟು ಸಮುದಾಯ ಮತ್ತು ಸಾಮಾಜಿಕ ಬದಲಾವಣೆ: ಒಂದು ವಿಶ್ಲೇಷಣೆ", ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು (ಸಂ), ಡಾ. ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಾರ್ರ್‍ನಸ್ ಕಿರಣ್, ೧೯೮೮, "ಫೇಸಸ್ ಆಫ್ ಗೋವಾ", ಗ್ಯಾನ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ.

ವೆಂಕಟರಾವ್ ಎ., ೧೯೭೬, "ಎ ಸೆಂಚ್ಯುರಿ ಆಫ್ ಟ್ರೈಬಲ್ ಪಾಲಿಸೀಸ್", ಎಸ್ ಚಾಂದ್ ಪಬ್ಲೀಕೇಷನ್, ನ್ಯೂಡೆಲ್ಲಿ.

ವಾಶಿಂಗ್ಟನ್ ಓಬೆಂಗ್, ೨೦೦೭, "ಶೇಪಿಂಗ್ ಮೆಂಬರ್ಸ್ ಡಿಫೈನಿಂಗ್ ನೇಷನ್ಸ್", ವಾಷಿಂಗ್ಟನ್ ಬುಕ್ಸ್, ಕಾಮನ್ ಅಂಡ್ ಫೀಲ್ಡ್ ಪಬ್ಲೀಷರ್ಸ್, ನ್ಯೂಯಾರ್ಕ್.

ವಿದ್ಯಾರ್ಥಿ ಎಲ್.ಪಿ., ೧೯೭೦,"ಸೋಶಿಯೋ-ಕಲ್ಚರಲ್ ಇಂಪ್ಲಿಕೇಷನ್ ಆಫ್ ಇಂಢಸ್ಟ್ರಿಯಲೈಸೆಷನ್ ಇನ್ ಇಂಡಿಯ", ಪ್ಲ್ಯಾನಿಂಗ್ ಕಮೀಷನ್, ನ್ಯೂಡೆಲ್ಲಿ.

ವಿದ್ಯಾವತಿ ಎಲ್.ಪಿ., ರಾಯ್ ಬಿ.ಕೆ., ೧೯೭೭, ದಿ ಟ್ರೈಬಲ್ ಕಲ್ಚರ್ ಆಫ್ ಇಂಡಿಯಾ", ಕಾನ್ಸೆಪ್ಟ್ ಪಬ್ಲಿಶಿಂಗ್ ಕಂಪನಿ, ಡೆಲ್ಲಿ.

ವೇರಿಯರ್ ಎಲ್ವಿನ್, ೧೯೪೩, "ದಿ ಅಬೊರಿಜಿನಲ್ಸ್", ಆಕ್ಸ್‌ಫರ್ಡ್ ಯೂನಿವರ್ಸಿಟಿ, ನ್ಯೂಡೆಲ್ಲಿ.

ಶಾಂತಿ ಸಿದ್ದಿಖ್ ಆಲಿ, ೧೯೯೫, "ದಿ ಆಫ್ರೀಕನ್ ಡಿಸ್‌ಪರ್ಸಲ್ ಇನ್ ಡೆಕ್ಕನ್ ಪ್ರಮ್ ಮಿಡಿವಲ್ ಟು ಮಾರ್ಡನ್ ಟೈಂ", ಓರಿಯಂಟ್ ಲಾಂಗ್‌ಮೆನ್.

ಶರ್ಮ ಆರ್.ಎನ್., ಶರ್ಮ ಆರ್.ಕೆ., ೧೯೯೯, "ಸೋಶಿಯಲ್ ಆಂತ್ರೋಪಾಲಜಿ ಆಫ್ ಇಂಡಿಯನ್ ಟ್ರೈಬ್ಸ್", ಅನ್‌ಮೋಲ್ ಪಬ್ಲೀಷರ್ಸ್, ನ್ಯೂಡೆಲ್ಲಿ.

ಶೀಲಾ ಎಸ್. ವಾಕರ್, ೨೦೦೧, "ಆಫ್ರೀಕನ್ ರೋಟ್ಸ್/ಅಮೇರಿಕನ್ ಕಲ್ಚರ್ಸ್, ಆಫ್ರಿಕನ್ಸ್ ಇನ್ ಕ್ರಿಯೇಷನ್ ಆಫ್ ಅಮಿರಿಕನ್ಸ್", ರೋಮನ್ ಅಂಡ್ ಲಿಟಲ್ ಫೀಲ್ಡ ಪಬ್ಲಿಷರ್ಸ್, ಇಂಕ್, ನ್ಯೂಯಾರ್ಕ್.

ಶ್ರೀನಿವಾಸ್ ಎಲ್., ೨೦೧೧, "ಬುಂಡೇಬೆಸ್ತ ಸಮುದಾಯ: ಒಂದು ಅಲೆಮಾರಿ ಜನಾಂಗ", ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು (ಸಂ) ಡಾ. ಎಲ್. ಶ್ರೀನಿವಾಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ್ ಎಂ.ಎನ್., ೧೯೯೩, "ಡಾಮಿನೆಂಟ್ ಕಾಸ್ಟ್ ಇನ್ ರಾಂಪುರ", ಗುಪ್ತಾ ದೀಪಾಂಕರ (ಎಡಿಟೆಡ್) ಸೋಶಿಯಲ್ ಸ್ಟ್ರಾಟಿಫಿಕೇಷನ್, ಆಕ್ಸ ಫರ್ಡ್ ಯೂನಿವರ್ಸಿಸ್ ಪ್ರೆಸ್, ನ್ಯೂಡೆಲ್ಲಿ.

ಶ್ರೀನಿವಾಸ್ ಎಂ.ಎನ್., ೨೦೧೦, "ಸೋಶಿಯಲ್ ಚೇಂಜ್ ಇನ್ ಮಾರ್ಡನ್ ಇಂಡಿಯಾ", ಓರಿಯಂಟ್ ಬ್ಲಾಕ್ ಸ್ವಾನ್ ಪ್ರೈ (ಲಿ), ೧/೨೪, ಅನಫ ಲಿಲಿ ರೋಡ್, ನ್ಯೂಡೆಲ್ಲಿ.

ಸಂಜಯ್ ಕೆ.ಎನ್., ೧೯೭೭, "ಟ್ರೈಬಲ್ ಸೆಲ್ಫ ಇಮೇಜ್ ಅಂಡ್ ಐಡೆಂಟಿಫಿಕೇಷನ್", ಟ್ರೈಬಲ್ ಹೆರಿಟೇಜ್ ಆಫ್ ಇಂಡಿಯ, (ಎಡಿಟೆಡ್) ಎಸ್.ಸಿ ದುಬೆ, ವಿಕಾಸ್ ಪಬ್ಲಿಶಿಂಗ್ ಹೌಸ್, ಡೆಲ್ಲಿ.

ಸಕ್ಸೇನ್ ಎಸ್.ಸಿ., (ಅನು), ಲಾಸ್ಸ್ ಬಿ., ೨೦೧೧, "ಬುಡಕಟು ಜನರ ಹಕ್ಕುಗಳು", ಯೋಜನ ನಿಯತಕಾಲಿಕೆ, ಯೋಜನಾ ಕನ್ನಡ ಪ್ರಕಾಶನ ವಿಭಾಗ, ಕೋರಮಂಗಲ, ಬೆಂಗಳೂರು.

ಸಚ್ಚಿದಾನಂದ, ಪ್ರಸಾದ್ ಆರ್.ಆರ್., ೧೯೯೬, "ಎನ್‌ಸೈಕ್ಲೋಪಿಡಿಯಕ್ ಪ್ರೋಪೈಲ್ ಆಫ್ ಇಂಡಿಯನ್ ಟ್ರೈಬ್ಸ್", ಡಿಸ್ಕವರಿ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.

ಸತ್ಯನಾರಾಯಣ ಎಂ., ೧೯೯೦, "ಟ್ರೈಬಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ –ಎ ಟ್ರೆಂಡ್ ರಿಪೋರ್ಟ್", ಇಂಟರ್ ಇಂಡಿಯಾ ಪಬ್ಲೀಕೇಷನ್, ನ್ಯುಡೆಲ್ಲಿ.

ಸಿನ್ಹಾ ಎನ್.ಕೆ., ೧೯೯೪, "ಸಿದ್ದಿ ಪ್ರೋಪೈಲ್ ಆಫ್ ಇಂಡಿಯಾ", ಸಿ ೧೫, (ಇಡಿ), ಸೋಲಂಕಿ ಆಂಡ್ ಎನ್. ಕೆ. ಸಿನ್ಹಾ, ಆಂಥ್ರೋಪಾಲಜಿಕಲ್ ಸರ್ವೆ ಆಫ್ ಇಂಡಿಯಾ, ಪಾಪ್ಯೂಲರ್ ಪ್ರಕಾಶನ ಪ್ರೈ(ಲಿ), ಬಾಂಬೆ.

ಸುನೀಲ್ ಜನತ್, ೧೯೭೩, "ಟ್ರೈಬಲ್ಸ್ ಆಫ್ ಇಂಡಿಯಾ", ನ್ಯೂ ಎಡಿಷನ್, ಆಕ್ಸ್‌ಫರ್ಡ್, ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

ಸುರೇಶ ಸಿಂಗ್ ಕೆ., ೧೯೭೨, "ಟ್ರೈಬಲ್ ಸಿಚ್ಯುಯೇಷನ್ ಇನ್ ಇಂಡಿಯಾ", ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಆಂತ್ರೋಪಾಲಜಿ, ಸಿಮ್ಲಾ.

ಸೆನ್ ಎ., ೧೯೯೯, "ಡೆವಲಫ್‌ಮೆಂಟ್ ಆಫ್ ಪ್ರೀಡಂ", ಆಕ್ಸಪರ್ಡ್ ಯೂನಿವರ್ಸಿಟಿ ಪ್ರೆಸ್

ಸೆನ್ಸೆಸ್ ಆಫ್ ಇಂಡಿಯಾ, ೧೯೬೧, ವಾಲ್ಯುಮ್-೨ಎ, "ಸಿದ್ದಿ ಎ ನೀಗ್ರೋಯಡ್ಡ್ ಟ್ರೈಬ್ ಆಫ್ ಗುಜರಾತ".

ಸೆನ್ಸ್‌ಸ್ ಆಫ್ ಇಂಡಿಯಾ, ೨೦೦೧, ಕರ್ನಾಟಕ, ಡಿಸ್ಕ್ರಿಕ್ ಪಾಪುಲೇಷನ್ ಬುಕ್‌ಲೆಟ್ ನಾರ್ಥ ಕೆನರಾ, ಸೀರೀಸ್-೩, ಡೈರೆಕ್ಟೋರೇಟ್ ಆಫ್ ಸೆನ್ಸ್‌ಸ್ ಆಪರೇಷನ್, ಕರ್ನಾಟಕ-೨೦೦೫.

ಹಟ್ಟಿ ಪಿ.ಕೆ., ೨೦೦೨, "ಹಿಸ್ಟರಿ ಆಫ್ ಅರಬ್ಸ್", ಮ್ಯಾಕ್ ಮಿಲನ್ ಪಬ್ಲಿಕೆಷನ್ಸ್, ಪಾಲ್ ಗ್ರಾವ್, ನ್ಯೂಯಾರ್ಕ್.

ಹಸ್ಸನ್ ವಿ., ೧೯೮೮, "ಟ್ರೈಬಲ್ ಅಡ್ಮಿನಿಸ್ಟ್ರೇಷನ್ ಇನ್ ಇಂಡಿಯಾ", ಬಿ ಆರ್ ಪಬ್ಲೀಶಿಂಗ್ ಕಾರ್ಪೋರೇಷನ್, ನ್ಯೂಡೆಲ್ಲಿ.

ಹಿಮಾಂಶು ಶೇಖರ್ ಕಾತ್, ಎಸ್. ಬೈರವ ಮೂರ್ತಿ, ೨೦೦೨, "ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯಾ", ಚಾಲೆಂಜಸ್ ಅಂಡ್ ಪಾಲಿಸೀಸ್", ನ್ಯೂ ಸೆಂಚ್ಯುರಿ ಪಬ್ಲೀಕೇಷನ್, ನ್ಯೂಡೆಲ್ಲಿ.

ಹಿರೇಮಠ ಆರ್.ಎಸ್, ೧೯೯೩, "ಲೈಫ್ ಲಿವಿಂಗ್ ಅಂಡ್ ಲಾಂಗ್ವೇಜಸ್ ಅಮಾಂಗ್ ಸಿದ್ದೀಸ್ ಆಫ್ ನಾರ್ಥ್ ಕೆನರಾ ಡಿಸ್ಟ್ರಿಕ್ಟ್", ಕರ್ನಾಟಕ ಯೂನಿವರ್ಸಿಟಿ, ಧಾರವಾಡ.

ಹೆನ್ರೀ ಜೆ. ಡ್ರೇವಾಲ್, ೨೦೦೪, "ಅಲಾಯನ್ಸ್ ಅಂಡ್ ಹೋಂಲ್ಯಾಡ್ಸ್", ಎಡ್ವರ್ಡ್ ಆಲ್ಫೆನ್ಸ್ (ಎಡಿಟೆಡ್), ಸಿದ್ದೀಸ್ ಅಂಡ್ ಸ್ಕಾಲರ್ಸ್; ಎಸ್ಸೇಸ್ ಆನ್ ಆಫ್ರೀಕನ್ ಇಂಡಿಯನ್ಸ್, ನೋಯ್ಡಾ ರೈನ್‌ಬೋ ಪಬ್ಲಿಕೆಷನ್ಸ್ (ಲಿ).

ಹೆನ್ರೀ ಜೆ. ಡ್ರೇವಾಲ್, ೨೦೦೪, "ಅಲೈಯನ್ಸ್ ಅಂಡ್‌ಹೋಮ್ ಲ್ಯಾಡ್ಸ್", ಎಡ್ವರ್ಡ್ ಆಲ್ಫೆನ್ಸ್ (ಸಂ), ಸಿದ್ಧೀಸ್ ಅಂಡ್ ಸ್ಕಾಲರ್ಸ್; ಎಸ್ಸೆ ಆನ್ ಆಫ್ರಿಕನ್ ಇಂಡಿಯನ್ಸ್, ರೈನ್‌ಬೋ ಪಬ್ಲಿಷರ್ಸ್ ಲಿಮಿಟೆಡ್, ನೋಯ್ಡಾ.

ಸಂಶೋಧನಾ ಪ್ರೌಢ ಪ್ರಬಂಧಗಳು

ಬಸವರಾಜು ಬೆಳವಟಗಿ, ೨೦೧೫, "ಸಿದ್ದಿಯರ ಆರ್ಥಿಕ ಸ್ಥಿತಿಗತಿಗಳು", ಅಪ್ರಕಟಿತ ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲು ಹಂಪಿ.

ಮುನಿರಾಜು ಎಸ್.ಬಿ., ೨೦೦೬, "ಬುಡಕಟ್ಟು ಅಭಿವೃದ್ದಿ: ಒಂದು ವಿಮರ್ಶಾತ್ಮಕ ಅಧ್ಯಯನ" (ಜೇನುಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ) ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸರಕಾರದ ನೀತಿ ಮತ್ತು ವರದಿಗಳು

ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೫.

ಗೇಜಿಟೆಯರ್ ಆಫ್ ಇಂಡಿಯಾ, ಉತ್ತರ ಕನ್ನಡ, ೧೯೯೫.

ದಿ ಗೇಜೆಟಿಯರ್ ಆಫ್ ಇಂಡಿಯಾ, ೨೦೦೭, "ಎಕ್ಸ್ಟ್ರಾರ್ಡಿನರಿ ಪಾರ್ಟ್", ಸೆಕ್ಷನ್-೧, ಮಿನಿಸ್ಟ್ರಿ ಆಫ್ ಲಾ ಅಂಡ್ ಜಸ್ಟೀಸ್, ನ್ಯುಡೆಲ್ಲಿ, ಜನವರಿ ೨.

ಪ್ರಥಮ ಪಂಚವಾರ್ಷಿಕ ಯೋಜನೆ (೧೯೭೧-೫೬), ಭಾರತದ ಯೋಜನಾ ಆಯೋಗ ಪ್ರಕಟಿಸಿರುವ ವರದಿ, ನವದೆಹಲಿ.

ಲೇಖನಗಳು ಮತ್ತು ನಿಯತಕಾಲಿಕೆಗಳು

ಅನುಪಮ ಹಜ್ರಾ, ೨೦೧೦, "ಸ್ಟೇಟಸ್ ಆಫ್ ಟ್ರಥಬಲ್ಸ್ ಇನ್ ಇಂಡಿಯ", ಕುರುಕ್ಷೇತ್ರ, ನವೆಂಬರ್.

ಕುಮಾರ್ ಆರ್.ಬಿ., ೨೦೦೬, "ಬುಡಕಟ್ಟು ಸಮುದಾಯಗಳ ಸಮಸ್ಯೆಗಳು ಕೆಲವು ವಿಚಾರಗಳು", ಅಭಿವೃದ್ಧಿ ಅಧ್ಯಯನ ಜರ್ನಲ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜನವರಿ-ಜೂನ್, ೨೦೦೬.

ಗುರುಲಿಂಗಯ್ಯ ಎಂ., ೨೦೦೬, "ಬುಡಕಟ್ಟು ಸಮಸ್ಯೆ ಮತ್ತುಅಭಿವೃದ್ಧಿ ಸಮಾಜಶಾಸ್ತ್ರೀಯ ದೃಷ್ಟಿಕೋನ", ಅಭಿವೃದ್ಧಿ ಅಧ್ಯಯನ ಜರ್ನಲ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜನವರಿ-ಜೂನ್.

ಚಂದ್ರ ಪೂಜಾರಿ ಎಂ., ೨೦೧೧, "ನೂರು ಕವಲು ನೂರಾರು ಒಲವು" ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, ನವೆಂಬರ್.

ತರುಣ್ ಭಿಕಶ್ ಸುಕಾಯ್೨೦೧೦, "ಟ್ರೈಬಲ್ ಡೆವಲಪಮೆಂಟ್ ಇನ್ ಇಂಡಿಯ-ವನ್ ಓವರ್ ವ್ಯೂ", ಕುರುಕ್ಷೇತ್ರ, ನವೆಂಬರ್.

ದತ್ತಾತ್ರಿ ಎಂ.ಆರ್., ೨೦೧೪, "ಹಾಲಹಲದ ಮೇಲಮೃತ ಬುರುಗು: ಅಭಿವೃದ್ಧಿ ನಾಗರೀಕತೆಯ ತವಕ ತಲ್ಲಣಗಳು", ಪ್ರಜಾವಾಣಿ, ದಿನ ಪತ್ರಿಕೆಯ ಸಾಪ್ತಾಹಿಕ ಪುರವಣಿ, ದಿನಾಂಕ: ೧೫-೦೬-೨೦೧೪.

ಧೂರ್ಜತಿ ಮುಖರ್ಜಿ, ೨೦೧೦, "ಟ್ರೈಬಲ್ ಡಿಸ್ಪ್ಲೇಸಮೆಂಟ್, ದೇರ್ ರೈಟ್ಸ್ ಟು ಲೈವ್ಲೀವುಡ್ ಕೆನ್ ನಾಟ್ ಬಿ ಡೀನೇಯ್ಡ್", ಕುರುಕ್ಷೇತ್ರ, ನವೆಂಬರ್.

ಪ್ರತಿಮಾ ನಾಗವಂಶಿ, ೨೦೧೦, "ಡೋರ್ ಕ್ಲೋಸಿಂಗ್ ಫಾರ್ ಆದಿವಾಸಿ ಫಾರ್ಮರ್ಸ್", ಕುರುಕ್ಷೇತ್ರ, ನವೆಂಬರ್.

ಪಾರ್ವತಮ್ಮ ಸಿ., "ಆದಿವಾಸಿ ಸಮುದಾಯಗಳ ಅಭಿವೃದ್ಧಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಾಲಸುಬ್ರಮಣ್ಯಂ ಆರ್., ೨೦೧೧, "ನನಗೆ ಬೇಕಾದ ಒಣ ಕಟ್ಟಿಗೆ ಸಿಗುವುದೇ", ಪ್ರಜಾವಾಣಿ, ದಿನಾಂಕ: ೨೧-೫-೨೦೧೧.

ಬಾಲಸುಬ್ರಮಣ್ಯಂ ಆರ್., ೨೦೧೧, "ಅಹಂ ಇಲ್ಲದೆ ಸೇವೆ-ಜಡಿಯ ಕಲಿಸಿದ ಪಾಠ", ಪ್ರಜಾವಾಣಿ ದಿನಪತ್ರಿಕೆ, ದಿನಾಂಕ: ೧೮-೧೦-೨೦೧೧.

ಬಾಲಸುಬ್ರಮಣ್ಯಂ ಆರ್., ೨೦೧೧, "ಜ್ಞಾನವೆಂಬ ಬೆಣ್ಣೆಯ ಹಿಡಿದು ಕಲಿಯೆಂಬ ತುಪ್ಪ ಅರಸುತ್ತ", ಪ್ರಜಾವಾಣಿ ದಿನಪತ್ರಿಕೆ, ದಿ: ೧-೧೧-೨೦೧೧.

ರಾಜು ನಾರಾಯಣಸ್ವಾಮಿ, ೨೦೧೦, "ಟ್ರೈಬಲ್ ಎಜುಕೇಷನ್ ಆಸ್ ಎ ಟೂಲ್ ಫಾರ್ ರೂರಲ್ ಟ್ರಾನ್ಸಫಾರ್ಮೇಷನ್- ಎ ಕೇಸ್ ಸ್ಟಡಿ ಆಫ್ ಪನಿಯಾಸ್ ಇನ್ ವಯಾನಾಡ್", ಕುರುಕ್ಷೇತ್ರ, ನವೆಂಬರ್.

ಶ್ರೀಕಾಂತ್ ಎಸ್., ೨೦೧೧, "ಮೂಲನಿವಾಸಿಗಳ ಹಕ್ಕು ಪತ", ಯೋಜನಾ ನಿಯತಕಾಲಿಕೆ, ಕನ್ನಡ ಪ್ರಕಾಶನ ವಿಭಾಗ, ಕೋರಮಂಗಲ, ಬೆಂಗಳೂರು, ಎಪ್ರಿಲ್.

ಸಕ್ಸೇನ್ ಎಸ್.ಸಿ., (ಅನು); ಲಾಸ್ಸ್ ಬಿ., ೨೦೧೧, "ಬುಡಕಟು ಜನರ ಹಕ್ಕುಗಳು", ಯೋಜನ ನಿಯತಕಾಲಿಕೆ, ಯೋಜನಾ ಕನ್ನಡ ಪ್ರಕಾಶನ ವಿಭಾಗ, ಕೋರಮಂಗಲ, ಬೆಂಗಳೂರು, ಎಪ್ರಿಲ್.

ಅಂತರ್ಜಾಲ ಮಾಹಿತಿಗಳು

ಆಂಡ್ರೇ ಬೆಟೆಲ್ಲೆ, "ದಿ ಕಾನ್ಸೆಪ್ಟ್ ಆಫ್ ಟ್ರೈಬ್ಸ್", ಇಂಟರ್‌ನೆಟ್.

ರಾಬರ್ಟ್ ಜೆ. ಗ್ರಿಗೋರಿ, "ಟ್ರೈಬ್ಸ್ ಅಂಡ್ ಟ್ರೈಬಲ್: ಆರಿಜಿನ್, ಯೂಸ್ ಅಂಡ್ ಫ್ಯೂಚರ್ ಆಫ್ ದಿ ಕಾನ್ಸೆಪ್ಟ್", ಇಂಟರ್‌ನೆಟ್.

ಶಿವಕುಮಾರ ಎ.ಕೆ., ೨೦೧೩, "ಪಾವರ್ಟಿ ಇನ್ ಹ್ಯೂಮನ್ ಡೆವಲಪ್ಮೆಂಟ್ ಇನ್ ಇಂಡಿಯಾ", ಗೇಟಿಂಗ್ ಪ್ರಿಯಾರಿಟಿ ರೈಟ್, http://hdr.undp.org/docs.



ಸಂದರ್ಶನದಲ್ಲಿ ಸಿದ್ದಿ ವೃದ್ಧ ಮಹಿಳೆಯೊಂದಿಗೆ



ಸಂದರ್ಶನದಲ್ಲಿ ಸಿದ್ದಿ ವೃದ್ಧ ಪುರುಷನೊಂದಿಗೆ



ಅಡಿಕೆ ಮರದಿಂದ ಅಡಿಕೆ ಇಳಿಸುತ್ತಿರುವುದು



ಅಡಿಕೆ ತೋಟದ ಕೃಷಿ ಕಾರ್ಮಿಕರೊಂದಿಗೆ



ಮೂರು ತಲೆಮಾರಿನ ಸಿದ್ದಿ ಮಹಿಳೆಯರು



ಪರಿವರ್ತನ ಹಾದಿಯಲ್ಲಿ ಮಹಿಳಾ ನಾಯಕತ್ವ



ಶಾಲೆಯಿಂದ ಮನೆಗೆ ಬಂದು ಪೋಷಕರಿಗಾಗಿ ಕಾಯುತ್ತಿರುವ ಮಕ್ಕಳು



ಸಂದರ್ಶನದಲ್ಲಿ ಸಿದ್ದಿಯ ತಂದೆ-ಮಕ್ಕಳೊಂದಿಗೆ
ಸಂಶೋಧಕರು



ಕಾಲೇಜಿಗೆ ಹೋಗಲು ಬಸ್ಸಿಗಾಗಿ ಕಾಯುತ್ತಿರುವ ವಿದ್ಯಾರ್ಥಿನಿಯರು



ಮದರ್ ಥೇರಾಸ್ ವಸತಿ ಶಾಲೆಯ ಸಿದ್ದಿ ಬಾಲಕರು

ಅಭಿವೃದ್ಧಿ ಅಧ್ಯಯನ ವಿಭಾಗ